ಪ್ರಭಾತ



intelligence test

If inflation be increased by too much money bidding for too few goods, how would you answer these Questions?

1 A consumer who borrows to buy more goods adds to inflation?

2 A business that borrows to produce more goods helps to combat inflation?

SYNDICATE BANK RUPEES WILL CONTINUE TO BE AVAILABLE TO BUSINESS FOR PRODUCTIVE PURPOSES.

The Canara Industrial & Banking Syndicate, Ltd.,

UDIPI.

BANKING AT ITS BEST

Rs. 1/8

PRABHAT ANNUAL 1950



GLORIOUSLY
MODERN
DESIGNS
AND EXCLUSIVE
MANUFACTURE
IN
GEORGETTE, NINONS, CREPES,
BLOUSE PIECES
SWARNAPURI,
SWARGAPURI &
DAHEJ SAREES
For Graceful appearance
Orders wholesale or retail
promptly executed.
The Fashion Creators of To-day!
SEETHALAKSHMI HALL
333 CHICKPET
BANGALORE CITY

DR. V. R. BHAT,
M.B., B.S., T.D.D.
HAMPANKATTA
MANGALORE.

ಅನುಕ್ರಮಣಿಕೆ:

೧. ನಿನ್ನ ಮರೆವೊಗುವ ಬಳಿದೋರಿಸೆನಗೆರೆಯಾ (ಕವಿತೆ)	ಗೋವಿಂದಪೈ, ಆಸ್ಥಾನಕವಿ	೧೯
೨. ಶೋಜೊ (ಜಪಾನಿನ 'ನೋ' ನಾಟಕ)	,, ,,	೨೦
೩. ಭಾರತೀಯ ನೌಕಾ ನಿರ್ಮಾಣ ಕಲೆ	ವೈದ್ಯಗುರು ಎಮ್. ಆರ್. ಭಟ್	೨೧
೪. ಸ್ಥಾನ—ಸ್ತಾನ	ಮಧುಗಿರಿ ವಾಸುದೇವ ಮೂರ್ತಿ	೨೬
೫. ನಗರದ ರಾಮರು	ಎಮ್. ವಾಸುದೇವ ಪ್ರಭು, ಎಮ್. ಎ., ಎಲ್. ಟಿ.	೨೮
೬. ಯತಿಪಂಥದ ಪೂರ್ವೋತ್ತರ	ಶಂ. ಭಾ. ಜೋಶಿ	೩೦
೭. ಗಯಟೆ ಕವಿಯ ಜೀವನೋದ್ದೇಶ	ಎನ್. ಪ್ರಹ್ಲಾದ ರಾವ್, ಎಮ್. ಎ.	೩೪
೮. ಭಿಕ್ಷಾನ್ನದ ಭಾಗೀರಥಮ್ಮ (ಕಥೆ)	ಎಂ. ವಿ. ಸೀತಾರಾಮಯ್ಯ, ಎಮ್. ಎ.	೩೬
೯. ಕನ್ನಡ ನುಡಿಯು ಶುದ್ಧವಾಗಿರಬೇಡವೇ? ...	ಬಿ. ರಾಮಕೃಷ್ಣಾಚಾರ್. ಬಿ. ಎ , ವಿದ್ವಾನ್	೪೪
೧೦. ಶರಚ್ಚಂದ್ರ ...	ಸಿ. ಕೆ. ನಾಗರಾಜರಾವ್	೪೭
೧೧. ಸರ್ವೋದಯ ಸಮಾಜ ಅಥವಾ ಗಾಂಧೀಜಾತಿ ...	ಗಣಪತಿರಾವ್ ಪಾಂಡೇಶ್ವರ್	೫೨
೧೨. ಆರ್ಯ ಸಂಸ್ಕೃತಿಗೆ ಮೊದಲಿದ್ದ ಕನ್ನಡಿಗರ ನಾಗರೀಕತೆ....	ಶ್ರೀಮತಿ ಎಸ್. ರತ್ನಮ್ಮ, ಎಮ್. ಎ.	೫೫
೧೩. ಕಥಕ್ಕಳಿ ...		೫೮
೧೪. ಭಾರತ–ಜಗತ್ತಿನ ಮೂವರು ಮಹಾ ವ್ಯಕ್ತಿಗಳ ದೃಷ್ಟಿಯಲ್ಲಿ	ಬೈಕಾಡಿ ವೆಂಕಟ ಕೃಷ್ಣರಾವ್	೬೦
೧೫. ಭಾರತದ ಖನಿಜ ಸಂಪತ್ತು	ಬಿ. ಎ. ದಯಾನಾಥ	೬೪
೧೬. ವರದಕ್ಷಿಣೆ (ನಾಟಕ) ...	ಕೆ. ಗುಂಡಣ್ಣ	೬೭
೧೭. ಜೀವನ ಯಜ್ಞ	ಡಾ। ದ. ಕೃ. ಭಾರದ್ವಾಜ	೭೪
೧೮. ಆಕೆಯ ಸ್ಮಾರಕ (ಕಥೆ) ...	ಶ್ರೀಮತಿ ಲೀಲಾಬಾಯಿ ಕಾಮತ್	೮೦
೧೯. ನಾಟಕ ಕಲೆ ...	ಶ್ರೀನಿಧ	೮೪
೨೦. ಅವಮೌಲ್ಯನ ಮತ್ತು ವಿದೇಶ ವ್ಯಾಪಾರ	ಎಚ್. ಎಸ್. ಪಾಟೀಲ	೮೭
೨೧. ಅವಳ್ಯಾರ ಹೆಂಡತಿ (ಕಥೆ) ...	ಬೋಳಂತೂರು ಕೃಷ್ಣಪ್ರಭು	೯೦
೨೨. ಹೆಣ್ಣಿನ ರಹಸ್ಯ (ಒಂದು ದೃಶ್ಯ)	ಕೈವಾರ ರಾಜಾರಾವ್, ಬಿ. ಎ.	೯೫
೨೩. ವಾಲ್ಮೀಕಿಯ ಘನತೆಯನ್ನು ತೋರುವ ಲಕ್ಷ್ಮೀಶ	ಎಮ್ ಸುಬ್ರಾಯನ್, ವಿದ್ವಾನ್	೯೯
೨೪. ನಾಕ-ನರಕ (ಕವಿತೆ) ...	ಜಿ. ಆರ್. ಪಾಂಡೇಶ್ವರ್	೧೦೩
೨೫. ಸಾಹಿತ್ಯದಲ್ಲಿ ವಾಸ್ತವಿಕತೆ	ಎಲ್. ಎಸ್. ಶೇಷಗಿರಿ ರಾವ್, ಎಮ್. ಎ.	೧೦೪
೨೬. ಅಂತರರಾಷ್ಟ್ರೀಯ ಶಾಂತಿಯ ಸಂಘಟನೆ	ಕೋ. ಶ. ಕಾರಂತ, ಬಿ. ಎ., ಬಿ. ಎಲ್.	೧೦೭
೨೭. ಸ್ಟಂಟ್ ಚಿತ್ರಗಳು (ವಿನೋದ ಲೇಖನ) ...	ನಾಡಿಗೇರ ಕೃಷ್ಣರಾಯ	೧೧೨
೨೮. ಕವಿಯ ಕನಸು (ಕವಿತೆ) ...	ಸದಾನಂದ ನಾಯಕ	೧೧೫
೨೯. ಪುಣ್ಯಪುರುಷರ ಪುಣ್ಯಸ್ವರೂಪ ...	ಜಿ. ವರದರಾಜರಾವ್, ಎಮ್. ಎ.	೧೧೬
೩೦. ಭಾರತದಲ್ಲಿ ಧರ್ಮವಿದ್ಯೆ ...	ವಿ. ಪುಟ್ಟಮಾದಪ್ಪ	೧೨೨
೩೧. ಸಾಹಿತ್ಯದ ಮನೋಧರ್ಮ ...	ಆರ್. ಎಸ್. ರಾಮರಾವ್	೧೨೪
೩೨. ಪರಿಗ್ರಹ ಪರಿಮಾಣವೇ ವಿಶ್ವಶಾಂತಿಯ ದಿವ್ಯ ಔಷಧ	ವಿದ್ಯಾಭೂಷಣ ಕೆ. ಭುಜಬಲಿ ಶಾಸ್ತ್ರಿ	೧೨೭
೩೩. ಸಾಹಿತ್ಯದಲ್ಲಿ ಅನ್ಯೋಕ್ತಿ ...	ಆಸ್ಥಾನ ವಿದ್ವಾನ್ ಸುಬ್ರಹ್ಮಣ್ಯ ಶಾಸ್ತ್ರಿ	೧೩೦
೩೪. ಮಹಾಜನರ ಮಹಾವಿಚಾರಗಳು	ಪ್ರೊ। ಕೆ. ಎಸ್. ಸವಣೂರ, ಎಮ್. ಎಸ್.ಸಿ.	೧೩೩
೩೫. ಗಾಂಡೀವದ ಮಹತ್ವ	ಶ್ರೀನಿವಾಸರಾವ್, ಕದಿರೆ	೧೩೭
೩೬. ಅ. (ವಿನೋದ ಲೇಖ) ...		೧೪೧
೩೭. ಶತಮಾನ ಬಾಳೋಣ	ಡಾ। ತ್ರಿವಿಕ್ರಮ ಪುರುಷೋತ್ತಮ ಭಟ್	೧೪೫
೩೮. ಬಾಳಿನ ಸಿಹಿ-ಕಹಿ (ಕಥೆ) ...	✓ ಡಾ। ವಿ. ಆರ್. ಭಟ್, ಎಮ್. ಬಿ. ಬಿ. ಎಸ್.	೧೪೬
೩೯. ಸಿಗರೇಟು (ಹರಟೆ)	ರಾ. ಮೊ. ವಿಶ್ವಾಮಿತ್ರ	೧೫೧
೪೦. ಅಪರಾಧ ಮತ್ತು ಅಪರಾಧಿ	ಶ್ರೀಮತಿ ವಾರಿಜಾದೇವಿ.	೧೫೫
೪೧. ಭಾರತದ ಪ್ರಾಚೀನ ಅಂಗರಾಗ ...	ಶ್ರೀಮತಿ ಬಿ. ಮೋಹಿನಿದೇವಿ	೧೬೦
೪೨. ಶ್ರೀ ತುಳಸೀ ವಿವಾಹ ...	ಶ್ರೀಮತಿ ವಸಂತಾದೇವಿ ಜಂತಲಿ.	೧೬೪
೪೩. ಧಾತ್ರೀಪೂಜನ-ಭೋಜನ	ಶ್ರೀಮತಿ ಕೆ. ಎಸ್. ಶಾಂತಾದೇವಿ	೧೬೬
೪೪. ವರ್ಷಭವಿಷ್ಯ ...	ಎಮ್. ಸುಬ್ರಾಯನ್, ವಿದ್ವಾನ್	೧೬೮
೪೫. ತಾಜ ಮಹಾಲಿನ ರಜತೋತ್ಸವ		೧೮೦–೧೮೧
೪೬. ಬೇಲಾ (ಕಥೆ)	ಬಿ. ವಿ. ಬಾಳಿಗ	೧೮೫
೪೭. ಸಿಂಡಿಕೇಟಿನ ಇಪ್ಪತ್ತೈದು ವರ್ಷಗಳ ಪ್ರಗತಿ	ಡಾ। ಟಿ. ಮಾಧವ ಪೈ,	೧೮೯
೪೮. ಸೇವಾ ಭಾವನೆಯಿಂದ ಬೇಂಕುಗಳು ಮುಂದೆ ಸಾಗಬೇಕು....	ಸಿ. ಆರ್. ಶ್ರೀನಿವಾಸನ್ ಮದರಾಸು	೧೯೫
೪೯. ಪ್ರತಿಯೊಬ್ಬನಿಗೂ ಬೇಂಕಿಂಗ್ ಖಾತೆ	ಟಿ. ಎ. ಪೈ, B.com.(Bom)A.I.I.B.F.R.C.S.(Lond)	೧೯೮
೫೦. ಭಾರತದ ಸರದಾರ ವಲ್ಲಭಭಾಯಿ ಪಟೇಲರು		೨೦೦

DR. V. R. BHAT,
M.B., B.S., T.D.D.
HAMPANKATTA
MANGALORE.

SAVE MONEY & TIME

By Possessing

These Three GEMS



ರೋಯಲ್ ಟೈಗರ್
ಬಾರ್ ಸೋಪು

Gems that can be
bought by all

Gems that Bring joy to your heart!



ಸೋಲ್ಜರ್ಸ್ ಸೋಪು

- ROYAL TIGER BAR SOAP
- SOLDIER'S SOAP &
- MAJESTIC LION Bar Soap

Manufacturers:

HINDUSTAN SOAP WORKS

POST BOX NO. 22,

MANGALORE. S. K.

PROP: DADA HAJI EBRAHIM HALARI.

"ANYBODY CAN WISH FOR RICHES, and most people do, but only a few know that a DEFINITE PLAN, plus a Burning Desire are the only dependable means of accumulating Wealth"

—NAPOLEON HILL

Remember, then,
Your DEFINITE PLAN, coupled with a Will
to Win, must necessarily include
SYSTEMATIC SAVINGS.

The Canara Banking Corporation Limited.

Estd: 1906. H. O. **UDIPI.** (S. I.)


WITH

Branches in Madras, Mysore, Bombay, & Coorg States and U. S. T. C.

INDIA JEWELLERY MART

ESTD: 1947.

Car Street — MANGALORE.



Proprietor: **N. Narasimha Shet.**

We undertake munufacture of all kinds of Jewellery and Diamond Settings

Dealers in:—BANGLES, BROACHES, RINGS, EAR-RINGS PENDANTS ETC. & PRECIOUS STONES.

●

ನಿಮಗೆ ಬೇಕಾಗುವ ಯಾವತ್ತೂ ಚಿನ್ನಾಭರಣಗಳ ಕೆಲಸವನ್ನು
ಮತ್ತು ವಜ್ರದ ಸೆಟ್ಟಿಂಗ್ ಕೆಲಸವನ್ನು
ನಾಜೂಕು ರೀತಿಯಲ್ಲಿ ಮಾಡಿಕೊಡುವೆವು.

ವಿಚಾರಿಸಿರಿ:

ಎನ್. ನರಸಿಂಹ ಶೇಟ್

ಇಂಡಿಯಾ ಜುವೆಲರಿ ಮಾರ್ಟ್

ರಥಬೀದಿ, — ಮಂಗಳೂರು. (ದ. ಕನ್ನಡ.)

DR. V. R. BHAT,
M.B., B.S., T.D.D.
HAMPANKATTA
MANGALORE.

ಮಹಾಜನರಿಗೆ ಶುಭವಾರ್ತೆ

ಮಂಗಳೂರು ನಗರದಲ್ಲಿ—ಅತ್ಯಾಧುನಿಕ ಯಂತ್ರಗಳಲ್ಲಿ ಹುರಿದು ಸಿದ್ಧವಾಗುವ
ಉತ್ಕೃಷ್ಟ ತರಗತಿಯ ಕಾಫಿ ಹುಡಿಯನ್ನೊದಗಿಸಲು

ಮೈಸೂರು ಲಚ್ಚಯ್ಯ ಶೆಟ್ಟಿ ಎಂಡ್ ಸನ್ಸ್ ಲಿಮಿಟೆಡ್, ಮಂಗಳೂರು

ಇವರು ಮಾಲೀಕರಾಗಿರುವ

"ಗಿರಿಜಾ ಕಾಫೀ ವರ್ಕ್ಸ್"

ತಾ. ***23—10—1950***ರಿಂದ ತೆರೆಯಲ್ಪಟ್ಟಿದೆ. ಕಾಫಿಯು ಪರಿಮಳದಲ್ಲಿಯೂ, ಗುಣದಲ್ಲಿಯೂ ಅಧಿಕಾಂಶವನ್ನು ದೀರ್ಘಕಾಲದ ವರೆಗೆ ಇರಿಸಿಕೊಳ್ಳುವಂತೆ **"ಥರ್ಮಾಲೊ"** ವಿಧಾನದಿಂದ ಹುರಿದು **ರವೆರವೆ**ಯಾಗಿ ತಯಾರಿಸಲ್ಪಟ್ಟು ಜನರಿಗೆ ಒದಗಿಸಲ್ಪಡುವುದು.

ಮನಸ್ಸಿಗೆ ಉಲ್ಲಾಸವೂ, ಮೆದುಳಿಗೆ ಶಾಂತಿಯೂ
ಬೇಕಾದರೆ ಸದಾ **'ಗಿರಿಜಾ ಕಾಫಿ'**ಯನ್ನೇ
ಸೇವಿಸಿ ಅತ್ಯಾನಂದವನ್ನು ಪಡೆಯಿರಿ.
ರಖಂ ಯಾ ಚಿಲ್ಲರೆ ದರಗಳಿಗೆ ವಿಚಾರಿಸಿರಿ.

★



Manufactured by:

Girija Coffee Works

PROPRIETORS:

Mysore Lachia Shetty & Sons Limited, Mangalore.

Have pleasure to announce that they have started the Production
— and Sales of their —

"GIRIJA COFFEE"

Roasted by 'THERMALO' Process and 'GRANULISED', from the 23rd Oct. 1950

THERMALO process of roasting guarantees uniformity of shade and fullest development of bean giving **delicious & finest flavour** in the cup.

Our new plant is also equipped with latest granulisers to grind coffee of uniform granules to required specifications.

PLEASE GIVE A TRIAL

ನಿಮ್ಮೆಲ್ಲರ ದಿನ ನಿತ್ಯದ ಪಾನೀಯ ....

ಚಹಾ ಮತ್ತು ಕಾಫಿ

ಇದುವೇ ಹೃದಯಕ್ಕೆ ಪ್ರಕಾಶ — ಹೊಸ ಹುರುಪು — ನವ ಚೈತನ್ಯಕ್ಕೆ ಸಾಧನ.

"ಪ್ರಕಾಶ ಚಹಾ"

ಇದು ಅದರ ಸುವಾಸನೆಯು ಮತ್ತು ಗುಣಗಳಿಂದಲೇ ಸರ್ವ ಶ್ರೇಷ್ಟ ಪಾನೀಯವಾಗಿದೆ



ಬೆರಿಕೆಯಿಲ್ಲದೆ ತಯಾರಿಸಲ್ಪಡುವ

"ಶ್ರೀ ದತ್ತ ಕಾಫಿ ಹುಡಿ"

ಯು ಜನಮನ್ನಣೆ ಪಡೆದಿರುತ್ತದೆ.

ತಾಜಾ ತುಪ್ಪದ ತಿಂಡಿ ತಿನಸುಗಳು ಮತ್ತು ಆರೋಗ್ಯಕರ ಪಾನೀಯಗಳ ತವರುಮನೆ

ನಿಯೋ ರಾಜ ಕೆಫೆ ಕೊಡಿಯಾಲಬೈಲು, ಮಂಗಳೂರು

ಟೀಪಾರ್ಟಿ ಸಮಾರಂಭಗಳಿಗೆ ಯೋಗ್ಯ ವ್ಯವಸ್ಥೆ ಮಾಡಲಾಗುವುದು

Proprietor: **P. D. SHENOY**, BUNDER, MANGALORE.

ದಿ ಬೇಂಕ್ ಒಫ್ ಮಂಗಳೂರು

ಲಿಮಿಟೆಡ್.

ಹೆಡ್ ಆಫೀಸು: **ರಥಬೀದಿ, ಮಂಗಳೂರು.**

ದಿನ ಉಳಿತದ ಧನ ಸೇರಿಸಿಡುವ	ಸೇವಿಂಗ್ಸ್ ಖಾತೆ.
ಚತುರತೆಯ ವ್ಯಾಪಾರವು ಚಂದವಾಗಿರಿಸುವ	ಚಾಲ್ತೀ ಖಾತೆ.
ಮಕ್ಕಳ ವಿವಾಹದಲ್ಲಿ ಥಕ್ಕನೆ ಒದಗುವ- ಕಷ್ಟದಲ್ಲಿ ಇಷ್ಟ ನೀಡುವ	ರಿಕರಿಂಗ್ ಖಾತೆ.
ಮತ್ತು ರೂ. 90-0-0ಕ್ಕೆ ರೂ. 100-0-0 ತರುವ	ಜಯಾಕೇಶ್ ಸರ್ಟಿಫಿಕೇಟು
ದಿನದ ಅಲ್ಪ ಉಳಿತಾಯವನ್ನು ದೊಡ್ಡ ಮೊತ್ತವಾಗಿ ಕೂಡಿಸಿ ಕೊಡುವ	ಕ್ಯೂಮ್ಯುಲೇಟಿವ್ ಖಾತೆ.

ಎಲ್ಲಾ ತರದ ಬೇಂಕಿಂಗ್ ವಹಿವಾಟುಗಳು ನಡೆಸಲ್ಪಡುವುವು.

THE BANK OF MANGALORE LTD.

Phone No. 158. H. O. **MANGALORE.** (S. India.)

TELEGRAMS: "PARCHMENT"
MADRAS & COIMBATORE.

MADRAS PHONE: OFFICE: 2271
RESDN: 88317
COIMBATORE OFFICE: 570

To All Printers and Stationers ....

SAYEE COMPANY

Wholesale Paper & Straw Board Merchants

HEAD OFFICE:
55, BUNDER STREET
MADRAS.

BRANCH:
22/260 RAJA STREET,
COIMBATORE.

DIRECT IMPORTERS OF

PAPERS,-STRAW BOARDS, MILL BOARDS,
PRINTING REQUISITES, & STATIONERY

MANUFACTURERS OF:—
ACCOUNT BOOKS AND EXCERCISE BOOKS etc. etc.

MANY YEARS OF SERVICE IN SOUTH INDIA

Write to or call on us for your
REQUIREMENTS

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ,
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)

8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp: His Master's Voice,

ಸರ್ ಫಿರೋಜ್ ಶಾ ಮೇಥಾ ರೋಡು, ಫೋರ್ಟು, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ರಖಂ ಆಗಿ ತರಿಸಿ ಆಕರ್ಷಕ ಬೆಲೆಗೆ ವಿತರಣೆ ಮಾಡಲಾಗುತ್ತದೆ.

ಅನುನಿತ್ಯದ ಉಪಯೋಗಕ್ಕೆ ಅಗತ್ಯವಾದ ಸಾಹಿತ್ಯಗಳೂ ಖಾತ್ರಿ ಟಾನಿಕುಗಳೂ ವಿಟಮಿನ್ ಆಹಾರ ವಸ್ತುಗಳೂ, ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ. ಸೂ: ಪರಸ್ಥಳಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು. ಹೆಚ್ಚಿನ ಮಾಹಿತಿಗಳಿಗೆ ಇಂದೇ ಬರೆಯಿರಿ.

ಎಂ. ಮೆಂಡೋಸ,
ವ್ಯಾಲಕ.

M. Mendosa,
Proprietor.

The National General Stores

Importers. Exporters, Dispensing Chemists & Druggists,

General Merchants & Commission Agents,

8A Mherwan Buildings, Opp: His Master's Voice,

Sir Phirozshah Mehta Road, FORT, BOMBAY.

“ಕನ್ನಡ ಕಸ್ತೂರಿ” — ಎಂದಿದ್ದನು ಮುದ್ದಣ್ಣ ಕವಿ!

— ಇಂದು —

ಕನ್ನಡ ನಾಡಿನ ವಸ್ತುಗಳೂ ‘‘ಕಸ್ತೂರಿ” ಎನಿಸಿ ಮೆರೆಯುತ್ತಿವೆ!
ಕನ್ನಡ ನಾಡಿನ ಜನರೆಲ್ಲರ ಮನೆಗಳಲ್ಲಿ ‘ಕಸ್ತೂರಿ’

ಕಸ್ತೂರಿ ಸಾಬೂನುಗಳಿಂದೊಗೆದ ಬಟ್ಟೆಗಳು ಕಸ್ತೂರಿ.
ಕಸ್ತೂರಿ ‘ನಿರ್ಮಲ’ ಸಾಬೂನಿನಿಂದ ತೊಳೆದ ಮೈ ಕಸ್ತೂರಿ.
ಕಸ್ತೂರಿ ವಸ್ತುಗಳಿಂದು ಮನೆ ಮನೆ ಕಸ್ತೂರಿಯಾಗಿವೆ.

ನಿಮ್ಮ ಅವಶ್ಯಕತೆಗೆ ಬೇಕಾದಷ್ಟೆ--ಈ ಮೂರು:

ಕಸ್ತೂರಿ ಬಾರ್ ಸೋಪು

ಕಸ್ತೂರಿ ವಾಶಿಂಗ್ ಸೋಪು

ನಿರ್ಮಲ ವಿಂಡ್ಸರ್



ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಕಡೆಗಳಲ್ಲೂ ಜಿಲ್ಲೆಯ ಹೊರಗೆ ಕೇಂದ್ರ ಗಳಲ್ಲೂ ಸ್ಟಾಕಿಸ್ಟರು ಇರುವರು. ಎಲ್ಲ ಕಡೆಗಳಲ್ಲಿ ದೊರೆವುವು.

ತಯಾರಿಸುವವರು:

ಶ್ರೀ ರಾಮಕೃಷ್ಣ ಓಯಿಲ್ ಮಿಲ್ಸ್,

ಬೋಳೂರು — ಮಂಗಳೂರು.

Kasturi Bar Soap! **Kasturi Washing Soap!**

Nirmala Windsor!!

Manufacturers:

Sri Ramakrishna Oil Mills, Boloor, Mangalore.

Props: **Kastoori Sheshagiri Pai & Co., Bunder - Mangalore.**

'IT'S JUST THE AROMA THAT MAKES THE DIFFERENCE!'

Year in and Year out,—in all seasons and all climes,

Mangalore Great Darbar Beedies

Are recognised as the best enjoyable--by all smokers.

THEY ARE TRULY CALLED

"A NATION'S DELIGHT"

UNPARALALLED — UNEQUALLED

IT'S JUST THE AROMA THAT MAKES THE DIFFERENCE!
AND-THAT SECRET, THE SECRET OF BLENDING
CHOICEST TOBACCOS, IS KNOWN ONLY TO

REGISTERED



TRADE MARK

THE GREAT DARBAR BEEDI WORKS * CAR STREET, MANGALORE *

The Great Darbar Beedi Works, Mangalore

Sole Agents:- **M/s. P. CUNNIAH NAIDU & SONS,**

Cigars, Cigarettes, Beedies & General Merchants,

No. 2, Varadamuthiappan Street, G. T. Madras

"PEACOCK BRAND"

TRADE MARK



CARDOL PRODUCTS

(PRODUCTS OF FREE INDIA)

THE CHEAPEST AND EFFICIENT IN THE MARKET
MANUFACTURERS & EXPORTERS OF CASHEW KERNALS

- **CASHEW KERNALS**
  are delicious, nourishing containing vitamins.
  Eat them for health, strength & vitality.

  (Await small tins and packings-handy in travels, marketting shortly.)

- **SUPERFINE FRENCH POLISH**
  Transparent (I. S. D. Quality)

- **FINE COPAL VARNISH**
  Giving fine gloss.

- **CARDOL WATERPROOFING COMPOUND**
  Protect your Cement terraces, from breakage & leakage.

- **OIL SOLUBLE DYE-STUFFS**

- **BEST BLACK JAPAN**
  Jet black, quite lasting

- **COLOURED LAQUERS**
- **CASHEW SHELL OIL**

Apply for free samples & Quotations:

THE CARDOL CORPORATION

REASERCH LABORATORIES

MANGALORE. (S. India.)

Use always

The Famous **P. V. S. BEEDIES**



Phone No. 83 Post Box No. 7

P. V. S. BEEDIES LTD.,

KODIYALBAIL, S. K.

The Mangalore City Bank

PENTLANDPET, MANGALORE.

ESTD: 1939

CURRENT & SAVINGS BANK account deposits accepted and withdrawal allowed by cheques.

FIXED & SHORT TERM deposits accepted at favourable rates.

Advances granted against approved securities at low rates of interest.

Usual Banking Business Undertaken.

For particulars please apply to the office:-

R. M. KINI, B. A.,
Proprietor.

ಹೊಸ ಆದರ್ಶ!] **ಹಿಂದೀ ಪ್ರೇಮಿಗಳಿಗೆ ದೀಪಾವಳಿ ಕಾಣಿಕೆ!** [ಹೊಸ ಮಾದರಿ!

ಹಿಂದೀ - ಹಿಂದೀ - ಕನ್ನಡ ರತ್ನಕೋಷ

ಸಂಪಾದಕ: **ಶ್ರೀ. ಜಿ. ಡಿ. ವೈಸಾಳಿ** ರಾಷ್ಟ್ರಭಾಷಾ ಕೋವಿದ, ಶಿಕ್ಷಕ ಸನದ.

ಸುಮಾರು ೧೨೦೦ ಪುಟಗಳು—೩೫೦೦೦ ಶಬ್ದ ಸಂಗ್ರಹ—೩ ಲಕ್ಷ ಹಿಂದೀ ಹಾಗೂ ಕನ್ನಡ ಅರ್ಥ ವಿವರಣೆಗಳು—ಪಡೆನುಡಿಗಳು—ಗಾದೆಯು ಮಾತುಗಳು—ರಾಜಕೀಯ, ನ್ಯಾಯ ವಿಧಾಯಕ, ತಾರ, ರೇಡಿಯೋ ಹಾಗೂ ಭಾರತ ಶಾಸನ ಶಬ್ದಾವಲೀ ಅಲ್ಲದೆ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಲೇಖಕರಿಗೆ, ಸಂಪಾದಕರಿಗೆ ಉಪಯುಕ್ತವಾದ ಅನೇಕಾನೇಕ ನೂತನ ವಿಷಯುಗಳ ಶಬ್ದ ಸಂಗ್ರಹವನ್ನು ಕೊನೆಯಲ್ಲಿ ಸೇರಿಸಲಾಗಿದೆ.

ಪ್ರತಿಯೊಂದು ಹಿಂದೀ ಶಬ್ದದ ಕೇವಲ ಕನ್ನಡ ಅರ್ಥವಲ್ಲದೇ ಹಿಂದೀ ಅರ್ಥವನ್ನೂ ಜೋಡಿಸಿರುವುದೇ ಈ "ರತ್ನಕೋಷ"ದ ಹೆಚ್ಚಿನ ಆದರ್ಶ! ಎರಡೂ ಭಾಷೆಗಳ ಶಬ್ದ ಸಂಪತ್ತಿಯನ್ನು ಬೆಳೆಸಲು ಇದೊಂದೇ ತಕ್ಕ ಸಾಧನ!!

ಪ್ರತಿಯೊಬ್ಬ ಹಿಂದೀ ಪ್ರೇಮಿಯು ಅತ್ಯವಶ್ಯವಾಗಿ ಸಂಗ್ರಹಿಸಲೇಬೇಕಾದ ಪುಸ್ತಕ.
ದೀಪಾವಳಿ ಶುಭ ಮುಹೂರ್ತದಲ್ಲಿ ಪ್ರಕಟವಾಗುವದು. ಬೆಲೆ: ೮—೧೨—೦. ಅಂಚೆ ವೆಚ್ಚ ಬೇರೆ.

ಪ್ರಕಾಶಕರು:

ರಾಮಾಶ್ರಯ ಬುಕ್ ಡಿಪೊ, ಧಾರವಾಡ.

SERVICE TO MOTORISTS!

For all your Automobile Repairs............


★

Please Contact:-

Jaya Motor Works,

GOLLERKERY STREET,

MANGALORE. S. K.



Best by Test

Waiter Brand

Pure Coffee Powder

●

ವೈಟರ್ ಬ್ರೆಂಡ್
ಉತ್ತಮವಾದ
ಕಾಫಿ ಹುಡಿ

Manufacturers:

Orient Coffees & Industries

Bunder - Mangalore.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೆಯ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

ದುಡಿಮೆಯಿಂದ ಸಂಪಾದಿಸಿದ ಹಣವನ್ನು ಮಿತವ್ಯಯದಿಂದ ಉಳಿಸುವುದು ತನಗೂ ತನ್ನವರಿಗೂ ತನ್ನ ದೇಶಕ್ಕೂ ಹಿತಕರ.

ಅಂತಹ ಉಳಿತಾಯವನ್ನು ನಮ್ಮಲ್ಲಿ ವಾಡಿಕೆಯಾಗಿರುವ ಸೇವಿಂಗ್ಸ್ ಬೇಂಕ್, ತಿಂಗಳು ಗಟ್ಲಿ ಠೇವಣಾತಿ, ಮುಸುಂ ಠೇವಣಾತಿ ಅಥವಾ ಕೇಶ್ ಸರ್ಟಿಫಿಕೇಟು ಇವುಗಳಲ್ಲಿ ಇಟ್ಟು ಪ್ರಯೋಜನವನ್ನು ಆರ್ಜಿಸಿರಿ.

ಇಂದು ನೆರವೇರಿಸಲು ಅನುಕೂಲವಾದುದನ್ನು ಇನ್ನು ಮುಂದೆ ಗಮನಿಸಲು ಬಾಕಿ ಇಟ್ಟು ಭರವಸೆ ಪಡುವುದು ವಿಹಿತವಾಗಲಾರದು.

ಮೂವತ್ತು ವರ್ಷಗಳಿಗೂ ಮಿಕ್ಕಿರುವ ಸೇವೆಯನ್ನು ಗೈದ ಈ ಸಂಸ್ಥೆಯ ಸಹಕಾರವನ್ನು ಹೊಂದಿರಿ.

ಅಗತ್ಯವುಳ್ಳ ಅನುಭವಕ್ಕೆ ಉಡುಪಿ ಕೋರ್ಟು ರಸ್ತೆಯಲ್ಲಿರುವ ನಮ್ಮ ಮುಖ್ಯ ಕಾರ್ಯಾಲಯ ಅಥವಾ ನಮ್ಮ ಮಂಗಳೂರು, ಕಟಪಾಡಿ, ಕಾಂಞಂಗಾಡು, ಕಿನ್ನಿಗೋಳಿ, ನೀಲೇಶ್ವರ, ಸುರತ್ಕಲ್, ಕಾಸರಗೋಡು ವ ಕಲ್ಯಂಕ—ಉಡುಪಿ ಶಾಖೆಗಳಲ್ಲಿ ದಯವಿಟ್ಟು ವಿಚಾರಿಸಿರಿ.

ತಾ. 30—10—1950

"THE HOUSE OF HAREKALKARS."

DISTINGUISHED SERVICE

Service of the people-Service untiredly and entirely-
That has Distinguished **The House of Harekalkars**
Since decades. It is almost a Pledge—Pledge to serve
ever efficiently—and this pledge will be kept always—
through sunny days or stormy times.

HAREKAL RAGHAVENDRA PAI & SONS

P. B. NO. 123, **MANGALORE.**

Announce with pleasure that they have opened a branch at Mangalore
under the name and style of

JAYANTHI STORES

Jayant Bldgs., Maidan Cross Road, Mangalore.

Where the public is assured of best of the Goods at Fair Prices

VARIETY HALL

MERCARA

—SERVES THE PROVINCE OF COORG.

WE INVITE YOU TO OUR SHOW ROOMS.

Presentation Articles-Sets ❖ Toiletry ❖ Confectionery ❖ Stationery
Lampware ❖ Glassware ❖ Oilman-Stores etc., etc.

Bhuvanendra Products Ltd., Katapadi. S.K.

MANUFACTURERS OF SHAɩTRIC AYURVEDIC & PEOPRIETORY PREPARATIONS.

Head Office & Factory:
KATAPADI. S. Kanara.

★

Depots: **Hubli, Kumta, Udipi, Hale-Angadi & Coimbatore.**

Our sincere thanks and appreciation to all our customers, friends and patrons for their kind support and patronage all these days.

We have also started a new line of "INK MANUFACTURE" quite recently. The quality has commanded a very good popularity. For trade terms apply to us.

●

ನಮ್ಮ ಔಷಧಿಗಳಿಗೆ ತೋರಿಸಿದ ವಿಶ್ವಾಸ, ಪ್ರೋತ್ಸಾಹಗಳಿಗಾಗಿ ನಮ್ಮ ಎಲ್ಲಾ ಗಿರಾಕಿ ವ ಹಿತಚಿಂತಕರಿಗೆ ನಾವು ಚಿರಋಣಿಗಳು—.

ಇತ್ತೀಚೆಗೆ ಬರವಣಿಗೆಯ ಎಲ್ಲಾ ಕೆಲಸಗಳಿಗೆ ಉಪಯುಕ್ತವಾದ ಶಾಯಿ ತಯಾರಿಕೆಯನ್ನು ಪ್ರಾರಂಭಿಸಿರುತ್ತೇವೆ. ಅತ್ಯಲ್ಪ ಅವಧಿಯಲ್ಲಿ ಜನರ ವಿಶ್ವಾಸ ಪಡೆದಿರುವುದೇ ಈ ಶಾಯಿಯ ವೈಶಿಷ್ಟ್ಯವಾಗಿರುತ್ತದೆ.

●

ವ್ಯವಹಾರ ನಿಯಮಗಳಿಗೆ ಕೂಡಲೇ ಬರೆಯಿರಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, [ದ. ಕ.]

ಕೆನರಾ ಬ್ಯಾಂಕ್ ಲಿಮಿಟೆಡ್

ಹೆಡ್ ಆಫೀಸು: **ಲ್ಯಾಟ್ ಹೌಸ್ ಹಿಲ್, ಮಂಗಳೂರು. (ಇಂಡಿಯಾ)**

ಜನರಲ್ ಮೆನೇಜರರ ಆಫೀಸು:

ವಾರ್ಡನ್ ಹೌಸ್, ಸರ್ ಫಿರೋಜ ಷಾ ಮೇಥಾ ರೋಡ್, ಫೋರ್ಟ್-ಬೊಂಬ್ಯಾ-1 (ಇಂಡಿಯಾ)

ಶಾಖೆಗಳು

ಬೊಂಬ್ಯಾ
ಬೆಳಗಾವ್
ಧಾರವಾಡ
ಬೊಂಬ್ಯಾ-ಫೋರ್ಟ್
,, —ಗಿರಗಾವ್
,, —ಕಾಲ್‌ಬಾದೇವಿ
,, —ಮಾಂಡ್ವಿ
ಕಲ್ಯಾಣ
ಹುಬ್ಬಳ್ಳಿ
ಶೋಲಾಪುರ

ಮಧ್ಯ ಪ್ರದೇಶ
ನಾಗಪುರ ಸಿಟಿ

ಹೈದರಾಬಾದು
ಹೈದರಾಬಾದು
ಸಿಕುಂದರಾಬಾದು

ಮದ್ರಾಸು
ಬಂಟವಾಳ
ಕಲ್ಲಿಕೋಟೆ
ಕೊಯಮುತ್ತೂರು
ಕುಂದಾಪುರ
ಈರೋಡು
ಗಂಗೊಳ್ಳಿ
ಕಾರ್ಕಳ
ಕಾಸರಗೋಡು
ಮದ್ರಾಸು
ಮಧುರಾ
ಮಂಗಳೂರು
೧ ಬಂದರ
೨ ಸಿಟಿ
ಮೂಲ್ಕಿ
ಪಯ್ಯನೂರು
ಪುತ್ತೂರು
ಸೇಲಂ
ಟುಟಿಕೋರಿನ್
ಉಡುಪಿ

ಮೈಸೂರು
ಬೆಂಗಳೂರು
೧ ಎವೆನ್ಯೂರೋಡು
೨ ನರಸಿಂಹ ರಾಜಾ ರೋಡು
೩ ಮಲ್ಲೇಶ್ವರಮ್
ಚಿಕ್ಕಮಗಳೂರು
ದಾವಣಗೆರೆ
ಮೈಸೂರು
ಶಿಮೊಗಾ

ಪಾಕಿಸ್ಥಾನ
ಕರಾಚಿ

ತಿರುವಾಂಕೂರು ಮತ್ತು ಕೊಚ್ಚಿ (ಸಂಯುಕ್ತ ಸಂಸ್ಥಾನ)
ಅಲಪ್ಪೆ
ಕೊಚ್ಚಿ
ಕ್ವಿಲೊನ್



Regd. Trade Mark.

ತಲೆಯೊಳಗಿನ ತರತರದ ಆಲೋಚನೆಗಳು ತರಂಗ ತರಂಗವಾಗಿ ಹೊರಬರಬೇಕೇ-?
ಹಾಗಾದರೆ ಯಾವಾಗಲೂ

ಸದಾನಂದ ನಶ್ಯವನ್ನೇ ಉಪಯೋಗಿಸಿರಿ

ಅನೇಕ ವರ್ಷಗಳ ಪರಿಪಕ್ವ ಅನುಭವವುಳ್ಳ ನುರಿತ ಕೆಲಸಗಾರರು ಉತ್ತಮ ತಂಬಾಕಿನಿಂದ ಶಾಸ್ತ್ರೋಕ್ತ ರೀತಿಯಲ್ಲಿ ತಯಾರಿಸಿದ ಶ್ರೇಷ್ಠ ತರಗತಿಯ ನಶ್ಯ.

ನಮ್ಮಲ್ಲಿ ಪಾರ್ಸೆಲ್ ನಶ್ಯ ಸಹ ತಯಾರಿದೆ.

ಪ್ರೊ. **ಕೆ. ಮುಂಡಪ್ಪ.**

ಸದಾನಂದ ಸ್ನಫ್ ವರ್ಕ್ಸ್, ಭವಂತಿ ಸ್ಟ್ರೀಟ್, ಮಂಗಳೂರು.

SERVICE

"KUDVA'S" is recognised for service. Many years of experience in the line of stationery, cutlery, toiletry enamalware, glassware, toffies, presentation articles etc.— have earned for them an appreciation—unequalled. It is this experience that has made them know just the needs of the people—and this service which has endeared them to the vast public. A visit to **KUDVA'S** is an experience for you; and you too will be doing you & yours a service by

buying at **KUDVA'S.**

KUDVA & CO.,

C. P. C. BUILDINGS,

Hampankatta, Mangalore.

The Prabhakara Bank Limited.

ದಿ ಪ್ರಭಾಕರ ಬೇಂಕ್ ಲಿಮಿಟೆಡ್.

ಪ್ರಧಾನ ಕಚೇರಿ: **ಮೂಡಬಿದ್ರಿ**, ದಕ್ಷಿಣ ಹಿಂದುಸ್ಥಾನ

ಬೇಂಕು ಎಲ್ಲಾ ಬಗೆಯ ಬೇಂಕಿನ ವ್ಯವಹಾರಗಳನ್ನು ನಡೆಸುತ್ತದೆ.


ಸೇವಿಂಗ್ಸ್ ಬೇಂಕ್ ಖಾತೆಗಳು ವಾರಕ್ಕೆ ಎರಡಾವರ್ತಿ ಚೆಕ್ ಮುಖಾಂತರ ಹಣ ತೆಗೆಯಲ್ಪಡುವದಾಗಿದ್ದು, ಶೇಕಡಾ 2ರ ಬಡ್ಡಿಯನ್ನು ಗಳಿಸಿಕೊಡುವವು. ನಿರಖು ಠೇವಣಾತಿಗಳನ್ನು ಶೇಕಡಾ 3—4—0ರ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುದು.

ನಮ್ಮ 3 ಮತ್ತು 5 ವರ್ಷಗಳ ಕ್ಯೇಶ್ ಸರ್ಟಿಫಿಕೇಟ್‌ಗಳು ಬಂಡವಾಳ ಹಾಕೋಣಕ್ಕೆ ಉತ್ತಮವಾದವುಗಳಾಗಿದ್ದು, ಶೇಕಡಾ 4ರ ವರೇಗಿನ ಬಡ್ಡಿಯನ್ನು ಗಳಿಸಿ ಕೊಡುವುವುಗಳಾಗಿವೆ.

ಶಾಖೆಗಳು:

ಮುಂಬಾಯಿ-ಮಾಂಡ್ವಿ, ಮುಂಬಾಯಿ-ಪರೇಲ, ಮಂಗಳೂರು, ಮೂಡಬಿದ್ರಿ ಮತ್ತು ಮೂಲ್ಕಿ.

YOU CAN ALWAYS COUNT ON



BEDFORD

Behind the design of the Bedford range is the experience of knowing what truck and bus users want, and giving it to them year after year.

Some of the outstanding features of the Bedford range include 28 h.p. six-cylinder overhead valve engine developing high torque at low engine speeds, improved rear axle of stronger construction, triple-safety hydraulic brakes, six-phase carburation for power and economy, and a host of refinements you can always count on.


DEALERS FOR S. KANARA:

The Canara Sales Corporation, Ltd.,

P. O. B. 85, KODIYALBAIL, (MANGALORE)

A PRODUCT OF GENERAL MOTORS

NKATTA
ANGALORE



ಮುಂಬಯಿಯಲ್ಲಿ ನಡೆಯುವ ಮುವ್ವತ್ತನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ
ಆಯ್ಕೆಯಾಗಿರುವ

ರಾಷ್ಟ್ರಕವಿ ಶ್ರೀ. ಮ. ಗೋವಿಂದ ಪೈಗಳವರು.

ಜನಕೆ ಜಾಗೃತಿಯುದಯ
ವಿದುವೆ ತಾಮಸ ಜಡತೆ
ಗೆಳೆವ ವಿಜಯುವ ಸಾರ್ವ
ಮೊದಲ ತೂರ್ಯಂ

ಪ್ರಭಾತ

ಬಗೆಗೆ ಬಾಹ್ಯಜ್ಞಾನ-
ವೀವಾದ್ಯ ಶಕ್ತಿಯಿದು,
ಸದಮಲಾಂತಃಕರಣ
ತರುಣ ಪ್ರಭಾತಂ

ವಿಶೇಷಾಂಕ ೧೯೫೦. PRABHAT ANNUAL 1950.

ನಿನ್ನ ಮರೆವೊಗುವ ಬಳಿದೋರಿಸೆನಗೆರೆಯಾ!

'ಸರ್ವ ಧರ್ಮವ ನೀಗಿ ಮರೆಯ ಸೇರೆನ್ನ
ಸರ್ವ ಪಾಪದಿ ವಿಮೋಚಿಸುವೆ ನಾ ನಿನ್ನ!'[1]

ಸಿಡಿಲ ರಭಸದಿ ಮಿಂಚಲೀ ಭವದ್ಗೀತಂ
    ವಿಶ್ವತೋಮುಖಮಾಗಿ ಜಗದೆದೆಗೆ ಸೇರಿ,
    ಜೀವನ ರಣಾಂಗಣದ ಪ್ರಸ್ಥಾನಭೇರಿ[2]
ಯಿದನಾಲಿಸಿನ್ನಹೆನೆ ಬಾಳ್ವೆಗಾಂ ಭೀತಂ?

ಜ್ಞಾತಮಜ್ಞಾತಕೃತ ಪಾತಕದೊಳೆಲ್ಲ
    ಸುತ್ತುವಂದೆತ್ತೆತ್ತಲೊತ್ತಿ ಮನಮೆನ್ನ,
    ಧ್ರುವತಾರೆಗಭಿಮುಖಮಯಸ್ಕಾಂತದನ್ನ[3]
ನಿನ್ನಡಿಯ ನೆನವನ್ನೆ ಹಂಬಲಿಪುದಲ್ಲ!

ಆದುದರಿನಘದ "[4]ನಿಷ್ಕೃತಿಯನೀವರೆಯಾ[5]"
    ಒಲ್ಲೆನಂತೆಯೆ ನಿವೃತ್ತಿಯನಘದಿ ಮುಂದೆ;
    ಪಾಪಾತ್ಮನೆನ್ನ ಪಾಪದ ಮೊರೆಯಿದೊಂದೆ—
'ನಿನ್ನ ಮರೆವೊಗುವ ಬಳಿದೋರಿಸೆನಗೆರೆಯಾ[6]!'

ಗೋವಿಂದ ಪೈ

---

೧. ಗೀತೆ, ೧೮_೬೬. ೨. ಯುದ್ಧಕ್ಕೆ ಹೊರಡುವಾಗ ಮೊಳಗುವ ಭೇರಿ. ೩. ಅಯಸ್ಕಾಂತ=ಸೂಜಿಕಲ್ಲು (magnet). ೪. ನಿಷ್ಕೃತಿ=ಪರಿಹಾರ. ೫. ಈವರೆಯಾ=ಈವರೆಗಿನ. ೬. ಎರೆಯಾ=ಒಡೆಯ.

ಶೋಜೊ ★ ಜಪಾನಿನ 'ನೋ' [Noh] ನಾಟಕ

ಪಾತ್ರಗಳು

ವಾಕಿ (Waki) —ಒಂದು ಉಪಪಾತ್ರ. ಆತನು ಹೆಚ್ಚಾಗಿ ಒಬ್ಬ ಯಾಜಕ.

ಶೋಜೊ —ನಾಯಕ.

ಗೊಂದಳ (Chorus)

ಈ ಚಿಕ್ಕ ನಾಟಕ ಮದಿರೆಯ ಪ್ರಭಾವವನ್ನು ಕುರಿತಾಗಿದೆ.

ವಾಕಿ

ನನ್ನ ಹೆಸರು ಕೋಫು (Kofu). ನಾನು ಇರುವುದು ಚೀನ ದೇಶದ ಕಾನೆ ಕಿಂಜಾನ್ (Kane Kinzan) ಎಂಬ ಬೆಟ್ಟದ ಬುಡದಲ್ಲಿ, ಯಂಗ ತ್ಸೆ (Yang-tse)[೧] ನದಿಯ ದಂಡೆಗುಂಟವಾದ ಒಂದು ಹಳ್ಳಿಯಲ್ಲಿ. ನನ್ನ ಪಿತೃಭಕ್ತಿಯ ದೆಸೆಯಿಂದ ನಾನೊಂದು ಸೋಜಿಗವಾದ ಕನಸನ್ನು ಕಂಡೆ. ಆ ಕನಸಾದರೊ, ನಾನು ಯಂಗತ್ಸೆಯ ಬಳಿಯ ಬೀದಿಯಲ್ಲಿ ಕಳ್ಳನ್ನು (Sake)[೨] ಮಾರಿದರೆ ಹಣವಂತನಾದೇನು ಎಂದು. ನಾನದಕ್ಕೆ ಮಣಿದೆ. ಹಾಗೆಯೇ ಹೊತ್ತು ಸಾಗಿತು. ನಾನೀಗ ಹಣವಂತನಾಗಿದ್ದೇನೆ. ಇದರಲ್ಲಿ ಚೋದ್ಯವೇನೆಂದರೆ, ನಾನು ಎಂದೆಂದು ಅಂಗಡಿಗೆ ಹೋಗುತ್ತೇನೊ ಅಂದಂದು ಅದೊಬ್ಬನೇ ಮನುಷ್ಯ ಅಲ್ಲಿ ಕಳ್ಳನ್ನು ಕುಡಿಯಲಿಕ್ಕೆ ಬರುತ್ತಾನೆ. ಅವನು ಎಷ್ಟೂ ಕುಡಿಯಲಿ, ಅವನ ಮೋರೆ ಮಾರ್ಪಡದು. ಅದೊಂದು ಕೌತುಕ. ನಾನು ಅವನ ಹೆಸರನ್ನು ಕೇಳಿದೆ. ಶೋಜೊ ಎಂದ. ಶೋಜೊ ಅಂದರೆ ಮಂಗ. ಸೇವಂತಿಗೆಯ ಎಸಳುಗಳನ್ನು ಕಳ್ಳಿನಲ್ಲಿ ಸವರುತ್ತ ಜಿನ್ಯೊದ (Jinyo)[೩] ಬಳಿ ಹೊಳೆ ಕೊನೆವರಿಯುವಲ್ಲಿ ನಾನು ಅವನನ್ನು ಕಾದೆ. ತಿಂಗಳು ಮೂಡುವುದಕ್ಕೆ ಮುಂಚೆ ಕಾದೆ.

ಗೊಂದಳ

ಇದು ಸೇವಂತಿಗೆಯ ನೀರು. ಬಟ್ಟಲನ್ನು ಇತ್ತ ತಾ. ನಾನು ಎತ್ತಿಕೊಳ್ಳುವೆ. ಗೆಳೆಯನ ಕಡೆಗೆ ನೋಡುತ್ತಿರುವೆ.

ನಾಯಕ

ಎಲೆಗೆ ಕಳ್ಳೇ!

ಗೊಂದಳ

ಕಳ್ಳು ಎಂಬುದು ಹೊತ್ತಿಗೆ ತಕ್ಕ ಲೇಸಾದ ಮಾತು. ಶರತ್ಕಾಲದಲ್ಲಿ ಕಳ್ಳೇ ಮೇಲು.

ನಾಯಕ

ಶರದೃತುವಿನ ಗಾಳಿ ಬೀಸುತ್ತಲಿದ್ದರೂ—

ಗೊಂದಳ

—ನಾನು ಸರ್ವಥಾ ಚಳಿಯಾಗಿಲ್ಲ.

ನಾಯಕ

ನಾನು ಅರಳೆಯನ್ನು ಇಕ್ಕುವೆ—

ಗೊಂದಳ

—ಬಿಳೇ ಸೇವಂತಿಗೆಯ ಹೂವುಗಳ ಮೇಲೆ ಅವುಗಳ ಕಂಪನ್ನು ಉಳಿಸಿಕೊಳುವಂತೆ. ಈಗಲಾದರೆ ನಾವು ಕಳ್ಳನ್ನು ತಗೊಳ್ಳೋಣ.

ನಾಯಕ

ಅತಿಥಿಗಳೂ ಕಂಡಾರು

ಗೊಂದಳ

—ತಿಂಗಳೂ ತಾರೆಗಳೂ ತೂಗಾಡುವುದನ್ನು.

ನಾಯಕ

ಈ ಸ್ಥಳ ಜಿನ್ಯೊದ ಬಳಿಯಲ್ಲಿದೆ.

ಗೊಂದಳ

ಅಪುತಣ ನದಿಯ ತೀರದಲ್ಲಿದೆ.

ನಾಯಕ

(ಅಂದರೆ ನಿಜವಾಗಿ ಶೋಜೋ ತಾನೆ)

ಈಗ ಶೋಜೊ ಕುಣಿದಾಡುವನು.

ಗೊಂದಳ

ಅಶಿಯ (Ashi)[೪] ತೆಳ್ಳೆಲೆಗಳೂ ಹೊಳೆಯ ಜೊಂಡಿನ ಎಲೆಗಳೂ ಕೊಳಲಿನ ಸ್ವರಗಳಂತಿವೆ. ತೆರೆಗಳು ಚಿಕ್ಕ ಡವಡೆಗಳಂತಿವೆ.

ನಾಯಕ

ಕರೆಗಾಳಿಯಲ್ಲಿ ಕಂಠಸ್ವರ ತಿಳಿಯಾಗಿ ಧ್ವನಿಸುತ್ತದೆ.

ಗೊಂದಳ

ಅದು ಶರತ್ಕಾಲದ ಧ್ವನಿ

ನಾಯಕ

ನಿನಗೆ ಸ್ವಾಗತ. ಈ ಜಾಡಿಯನ್ನು ಕಳ್ಳಿನಿಂದ ತುಂಬಿಸಿರುವೆ. ತಗೋ ಅದನ್ನು. ಅದು ಎಂದಿಗೂ ಬತ್ತದು.

ಗೊಂದಳ

ಇಲ್ಲ. ಅದೆಂದಿಗೂ ಬರಿದಾಗದು. ಬಿದುರೆಲೆಗಳ ಕಳ್ಳು ಎಂದಿಗೂ ಬರಿದಾಗದು. ನೀನು ಶರದೃತುವಿನ ಅಕ್ಷಯ ಪಾತ್ರದಿಂದ ಕುಡಿದರೂ, ಶರತ್ಕಾಲದ ಬಯ್ಸಾರಿ ಎಂದಿನಂತೆ ಒಂದೇ ಬಗೆಯಾಗಿ ಬಾಳುವುದು. ತಿಂಗಳು ಹೊಳೆಯತ್ತಣಿಂದ ತಗ್ಗುತ್ತಿದೆ, ಕಳ್ಳು ನನ್ನ ನೇತ್ರರನ್ನು ಜಗ್ಗಿಸುತ್ತಿದೆ. ನಾನಾದರೊ ನಡುಗುತ್ತಿರುವೆ, ಕೆಡೆಯುತ್ತಿರುವೆ; ಕಳ್ಳಿಂದ ತೀವಿ ಒರಗುತ್ತಿರುವೆ; ಕನವರಿಯುತ್ತಿರುವೆ; ಮತ್ತೆ ಎಚ್ಚತ್ತು, ಶೋಜೋನ ಜಾಡಿಯಿಂದ ಆ ಮೋಡಿಯ ಬುಗ್ಗೆಯಿಂದ ಕಳ್ಳು ಇನ್ನೂ ಹರಿಯುತ್ತಿರುವುದನ್ನು ಕಾಣುತ್ತಿರುವೆ.

ಗೋವಿಂದ ಪೈ.

---

೧. ಚೀನದಲ್ಲಿ ಬಲು ದೊಡ್ಡದಾದ ಹೊಳೆ. ೨. ಸಾಕೆ (Sake) ಅಂದರೆ ಜಪಾನಿನಲ್ಲಿ ಅಕ್ಕಿಯಿಂದ ಮಾಡುವ ಹೆಂಡ. ೩. ಚೀನದಲ್ಲಿ ಯಂಗತ್ಸೆಯ ದಂಡೆಯಲ್ಲಿಯ ಯಾವೊಂದು ಊರು. ೪. ಆಶಿ(Ashi) ಎಂದರೆ ಯಾವೊಂದು ಬಗೆಯ ಗಿಡವೊ ಬಳ್ಳಿಯೊ ಆಗಿರಬೇಕು.

ಭಾರತೀಯ ನೌಕಾ ನಿರ್ಮಾಣ ಕಲೆ

(ಲೇಖಕರು: ವೈದ್ಯಗುರು ಎಮ್. ಆರ್. ಭಟ್.)

ಇತಿಹಾಸ, ಪುರಾಣ ಹಾಗೂ ನಮ್ಮಲ್ಲಿನ ಅನ್ಯ ಪ್ರಾಚೀನ ಸಾಹಿತ್ಯದಲ್ಲಿ ದೊಡ್ಡ-ದೊಡ್ಡ ಹಡಗುಗಳ ವಿಷಯ ಚರ್ಚೆಯು ಕಂಡುಬರುತ್ತದೆ. ರಾಮಾಯಣದ 'ಅಯೋಧ್ಯಾ ಕಾಂಡ'ದಲ್ಲಿ ನೂರಾರು ಕೈವರ್ತಯೋದ್ಧರು ಸನ್ನದ್ಧರಾಗಿರುವ ದೊಡ್ಡ ದೊಡ್ಡ ನೌಕೆಗಳ ಉಲ್ಲೇಖವಿದೆ:—

ನಾವಾಂ ಶತಾನಾಂ ಪಂಚಾನಾಂ
ಕೈವರ್ತಾನಾಂ ಶತಂ ಶತಮ್ ‖
ಸನ್ನದ್ಧಾನಾಂ ತಥಾ ಯೂನಾನ್
ತಿಷ್ಠಂತ್ವಿತ್ಯಭ್ಯಚೋದಯತ್ ‖

'ಮಹಾಭಾರತ'ದಲ್ಲಿ ಸಹಾ ಯಂತ್ರಸಂಚಾಲಿತ ನೌಕೆಗಳ ವರ್ಣನೆಯಿದೆ:—

ಸರ್ವವಾತಸಹಾಂ ನಾವಂ
ಯಂತ್ರಯುಕ್ತಾಂ ಪತಾಕಿನೀಮ್ ‖

ಸಮುದ್ರಮಾರ್ಗದಿಂದ ದೂರದೂರದ ದೇಶಗಳೊಡನೆ, ಅತ್ಯುಚ್ಚ ತರದ ವ್ಯಾಪಾರವು ನಡೆದಿತ್ತು. 'ವರಾಹ ಪುರಾಣ'ದಲ್ಲಿ ಗೋಕರ್ಣ ವೈಶ್ಯನ ಕಥೆಯಿದೆ. ಅವನು ವಿದೇಶಗಳಲ್ಲಿ ರತ್ನಗಳ ವ್ಯಾಪಾರವನ್ನು ಮಾಡುತ್ತಿದ್ದನು:—

ಪುನಸ್ತತ್ರೈವಗಮನೇ ವಣಿಗ್ಭಾವೇ ಮತಿರ್ಗತಾ ‖
ಸಮುದ್ರಯಾನೆ ರತ್ನಾನಿ ಮಹಾಸ್ಥೌಲ್ಯಾಣಿ ಸಾಧುಭಿಃ‖

ದಂಡಿಯು 'ದಶಕುಮಾರ ಚರಿತ'ದಲ್ಲಿ ರತ್ನೋದ್ಭವ ವ್ಯಾಪಾರಿಯ ಕಥೆಯಿದೆ. ಅವನ ಹಡಗು ಪಟ್ನಾಕ್ಕೆ ಹೋಗುತಿದ್ದಾಗ ಮುಳುಗಿದುದು:—

ತತಃ ಸೋದರ ವಿಲೋಕನ ಕುತೂಹಲೇನ ರತ್ನೋದ್ಭವಃ ಕಥಂಚಿಚ್ಛ್ವರಮನುನೀಯ ಚಪಲಲೋಚನ ಯಾನಯಾ ಸಹ ಪ್ರವಹಣಮಾರುಹ್ಯ ಪುರುಷಪುರಮಭಿಪ್ರತಸ್ಥೆ ‖ ಕಲ್ಲೋಲ ಮಾಲಿಕಾಭಿಹತಃ ಪೋತಃ ಸಮುದ್ರಾಂಭಸ್ಯ ಮಜ್ಜತ ‖

ಅನ್ಯ ವ್ಯಾಪಾರಿಯಾದ ಮಿತ್ರಗುಪ್ತನು ಯಾವುದೋ ಒಂದು ದ್ವೀಪವನ್ನು ಸೇರಿದನು; ಆಗ ಅಲ್ಲಿಯ ಯವನ ನೌಕೆಗಳು ಭಾರತೀಯ ನೌಕೆಯಾದ ವರಾಹವನ್ನು ಬೇಟಿ ನಾಯಿಗಳಂತೆ ತಮ್ಮ ಸ್ವಾಧೀನಮಾಡಿ ತಮ್ಮಲ್ಲಿಗೆ ಒಯ್ದರು.

ಭರ್ತೃಹರಿಯು ದುಸ್ತರಸಮುದ್ರವನ್ನು ದಾಟುವುದರಲ್ಲಿ ಹಡಗವು ಕೆಲಸಮಾಡುತ್ತದೆಂದು ಉಲ್ಲೇಖಿಸಿದ್ದಾನೆ:—

ಪೋತೋ ದುಸ್ತರ ವಾರಿರಾಶಿ ತರಣೇ ‖

ಕೌಟಲೀಯ 'ಅರ್ಥಶಾಸ್ತ್ರ'ದಲ್ಲಿನ 'ನಾವಧ್ಯಕ್ಷ' ಪ್ರಕರಣದಲ್ಲಿ ನೌಕಾ ಸೇನೆಯ ಮತ್ತು ರಾಜ್ಯದ ಕಡೆಯಿಂದ ನೌಕೆಗಳ ಪ್ರಬಂಧದ ಪೂರ್ಣ ವಿವರವು ಕಂಡುಬರುತ್ತದೆ.

ಈ ನೌಕೆಗಳ ಮತ್ತು ಹಡಗಗಳ ನಿರ್ಮಾಣ—ಕಲೆಯ ಮೇಲೆ ಜ್ಯೋತಿಷಾಚಾರ್ಯ ವರಾಹಮಿಹಿರಕೃತ "ಬೃಹತ್ಸಂಹಿತಾ" ಹಾಗೂ ಭೋಜಕೃತ "ಯುಕ್ತಿಕಲ್ಪತರು"ಗಳಲ್ಲಿ ಪ್ರಕಾಶಯುಕ್ತ ಉಲ್ಲೇಖವು ಕಂಡುಬರುತ್ತದೆ. 'ವೃಕ್ಷ-ಆಯುರ್ವೇದ'ದ ಅನುಸಾರ ವೃಕ್ಷಗಳಲ್ಲಿ ಸಹಾ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ—ಎಂಬ ನಾಲ್ಕು ಜಾತಿಗಳುಂಟು. ಸಹಜವಾಗಿ ಜೋಡಿಸಬಹುದಾದ ಲಘು ಮತ್ತು ಕೋಮಲ ಮರವು ಬ್ರಾಹ್ಮಣ ಜಾತಿದ್ದು ಎಂದು ಹೇಳಲ್ಪಟ್ಟದೆ. ಲಘು ಮತ್ತು ದೃಢವಾದ ಮರವು ಕ್ಷತ್ರಿಯ ಜಾತಿದ್ದು. ಆದರೆ ಅನ್ಯ ಪ್ರಕಾರದ ಮರಗಳೊಡನೆ ಜೋಡಿಸಲ್ಪಡಲಾರದು. ವೈಶ್ಯಜಾತಿಯ ಮರವು ಕೋಮಲ ಮತ್ತು ಭಾರವುಳ್ಳದ್ದು. ಶೂದ್ರಜಾತಿಯ ಮರವು ದೃಢ ಮತ್ತು ಭಾರವುಳ್ಳದ್ದು. ಎರಡು ಜಾತಿಗಳ ಗುಣವಿದ್ದಲ್ಲಿ 'ದ್ವಿಜಾತಿ' ಮರವೆಂದು ಹೇಳತಕ್ಕದ್ದು:—

"ಲಘುಯತ್ಕೋಮಲಂ ಕಾಷ್ಠಂ ಸುಘಟಂಬ್ರಹ್ಮಜಾತಿತತ್‖"
"ದೃಢಾಂಗಂ ಲಘು ಯತ್ಕಾಷ್ಠಮಘಟಂ ಕ್ಷತ್ರಜಾತಿತತ್‖"
"ಕೋಮಲಂ ಗುರುಯತ್ಕಾಷ್ಠಂ ವೈಶ್ಯಜಾತಿ ತದುಚ್ಯತೆ‖"
"ದೃಢಾಂಗಂ ಗುರುಯತ್ಕಾಷ್ಠಂ ಶೂದ್ರಜಾತಿ ತದುಚ್ಯತೆ‖"
"ಲಕ್ಷಣದ್ವಯಯೋಗೇನ ದ್ವಿಜಾತಿಃ ಕಾಷ್ಠಸಂಗ್ರಹಃ‖"

ಕ್ಷತ್ರಿಯ ಕಾಷ್ಠಕೃತ ನೌಕೆಯು ಸುಖಸಂಪತ್ಪ್ರದವಾಗಿದೆಯೆಂಬುದು ಭೋಜನ ಮತವು; ಇಂತಹ ನೌಕೆಯು ವಿಕಟ ಜಲಮಾರ್ಗಗಳಲ್ಲಿ ಕೆಲಸಮಾಡಬಲ್ಲುದು.

ಕ್ಷತ್ರಿಯಕಾಷ್ಠೈರ್ಘಟಿತಾ ಭೋಜಮತೇ
ಸುಖಸಂಪದಂ ನೌಕಾ ||
ಅನ್ಯೈರ್ಲಘುಭಿಃ ಸುದೃಢೈರ್ವಿದಧತಿ
ಜಲದುಷ್ಪದೇ ನೌಕಾಮ್ ||

ಬೇರೆ ಮರಗಳಿಂದ ತಯಾರಿಸಿದ ನೌಕೆಗಳು ಹೀನ ಗುಣಗಳದ್ದು; ಅವುಗಳಲ್ಲಿ ಆರಾಮವಿರುವುದಿಲ್ಲ; ಹೆಚ್ಚು ಸಮಯ ಬಾಳಲಾರವು; ನೀರಿನಲ್ಲಿ ಅವುಗಳ ಮರವು ಬೇಗನೆ ಸಡಿಲಾಗುವುವು; ಪೆಟ್ಟುತಿಂದ ಕೂಡಲೇ ತುಂಡಾಗುವುವು; ಮತ್ತು ಮುಳುಗುವುದೂ ಉಂಟು.

ವಿಭಿನ್ನಜಾತಿದ್ವಯಕಾಷ್ಠಜಾತಾ
ನಶ್ರೇಯಸೇ ನಾಪಿ ಸುಖಾಯ ನೌಕಾ ||
ನೈಷಾಚಿರಂ ತಿಷ್ಠತಿ ಪಚ್ಯತೇ ಚ
ವಿಭಿದ್ಯತೇ ಸರಿತಿ ಮಜ್ಜತೀಚ ||

ಹಡಗದ ಮರದ ಹಲಗೆಗಳನ್ನು ಜೋಡಿಸಲು ಕಬ್ಬಿಣದ ವಸ್ತುಗಳನ್ನು ಉಪಯೋಗಿಸಬಾರದು; ಯಾಕಂದರೆ ಸಮುದ್ರದ ಅಡಿಯಲ್ಲಿ ಚುಂಬಕವಿದ್ದು ಆ ಚುಂಬಕವು ಹಡಗವನ್ನು ಆಕರ್ಷಿಸಿ, ಕೆಳಗೆ ಮುಳುಗಿಸಿಕೊಂಡು ಹೋಗುವ ಸಂಭವವಿದೆಯೆಂದು ಸ್ಪಷ್ಟವಾಗಿ ಭೋಜನು ಉಲ್ಲೇಖಿಸಿದ್ದಾನೆ:—

ನ ಸಿಂಧು ಗಾಂದ್ಯಾರ್ಹತಿ ಲೌಹ ಬಂಧಂ
ತಲ್ಲೋಹ ಕಾಂತೈರ್ಹ್ರಿಯತೇಚಲೌಹಮ್ ||
ವಿಪದ್ಯತೇ ತೇನ ಜಲೇಷು ನೌಕಾ ಗುಣೇನ
ಬಂಧಂ ನಿಜಗಾದ ಭೋಜಃ ||

"ಯುಕ್ತಿಕಲ್ಪತರು"ದಲ್ಲಿ ಆಕಾರ-ಪ್ರಕಾರ, ಉದ್ದ-ಅಗಲ ದೃಷ್ಟಿಯಿಂದ ನೌಕೆಗಳ ಅನೇಕ ಪ್ರಕಾರಗಳು ಹೇಳಲ್ಪಟ್ಟಿವೆ; ಒಂದು 'ಸಾಮಾನ್ಯ', ನದಿಯಲ್ಲಿ ಚಲಿಸುವ ಸಣ್ಣ ಹಡಗುದೋಣಿಗಳು; ಇನ್ನೊಂದು 'ವಿಶೇಷ' ಸಮುದ್ರಯಾತ್ರೆಯನ್ನು ಮಾಡುವವುಗಳು.

ಸಾಮಾನ್ಯಶ್ಚ ವಿಶೇಷಶ್ಚ ನೌಕಾಯಾಲಕ್ಷಣದ್ವಯಮ್ ||

ಉದ್ದ-ಅಗಲ ಮತ್ತು ಎತ್ತರಗಳನ್ನು ಧ್ಯಾನದಲ್ಲಿಟ್ಟು, ಕ್ಷುದ್ರಾ, ಮಧ್ಯಮಾ, ಭೀಮಾ, ಚಪಲಾ, ಪಟಲಾ, ಭಯಾ, ದೀರ್ಘಾ, ಪತ್ರಪುಟಾ, ಗರ್ಭರಾ, ಮಂಥರಾ— ಈ ಹತ್ತು ಪ್ರಕಾರದ 'ಸಾಮಾನ್ಯ' ಹಡಗಗಳು ಹೇಳಲ್ಪಟ್ಟಿವೆ. ಕ್ಷುದ್ರಾ ನೌಕೆಯು ಉದ್ದ ೨೪ ಫೀಟ್, ಅಗಲ ೬ ಫೀಟ್ ಮತ್ತು ಎತ್ತರ ೬ ಫೀಟ್ ಆಗಿವೆ. ಹೀಗೆ ಎಲ್ಲವುಗಳ ಉದ್ದ, ಅಗಲ, ಎತ್ತರಗಳು ಹೇಳಲ್ಪಟ್ಟಿವೆ. 'ಮಂಥರೆ'ಯ ಉದ್ದ ೧೯೦ ಫೀಟ್ ಅಗಲ ೯೦ ಫೀಟ್, ಎತ್ತರ ೯೦ ಫೀಟ್ ಎಂದು ಹೇಳಲ್ಪಟ್ಟಿದೆ. ಎಲ್ಲವುಗಳಲ್ಲಿ ಅಗಲದಷ್ಟೇ ಎತ್ತರವಿದೆ.

ರಾಜಹಸ್ತಮಿತಾಯಾಮಾ ತತ್ಪಾದಪರಿಣಾಹಿನೀ ||
ತಾವದೇವೋನ್ನತಾ ನೌಕಾ ಕ್ಷುದ್ರೇತಿಗದಿತಾಬುಧೈಃ ||
ಅತಃಸಾರ್ಧಮಿತಾಯಾಮಾ ತದರ್ಧಪರಿಣಾಹಿನೀ ||
ತ್ರಿಭಾಗೇನೋತ್ಥಿತಾ ನೌಕಾ ಮಧ್ಯಮೇತಿಪ್ರಚಕ್ಷತೇ ||
ಕ್ಷುದ್ರಾಥ ಮಧ್ಯಮಾ ಭೀಮಾ ಚಪಲಾ ಪಟಲಾ ಭಯಾ||
ದೀರ್ಘಾಪತ್ರಪುಟಾಚೈವ ಗರ್ಭರಾ ಮಂಥರಾ ತಥಾ ||
ನೌಕಾದಶಕಮಿತ್ಯುಕ್ತಂ ರಾಜಹಸ್ತೈರನುಕ್ರಮಾತ್ ||
ಏಕೈಕವೃದ್ಧೈಃ ಸಾರ್ದ್ಧೈರ್ಶ್ಚ ವಿಜಾನೀಯಾ-
ದ್ದ್ವಯಂದ್ವಯಮ್ ||
ಉನ್ನತಿಶ್ಚ ಪ್ರವೀಣಾಚ ಹಸ್ತಾದರ್ಧಾಂಶಲಕ್ಷಿತಾ ||

'ವಿಶೇಷ' ಹಡಗಗಳು ಎರಡು ವಿಭಾಗಗಳಾಗಿ ವಿಭಜಿಸಲ್ಪಟ್ಟಿವೆ—ದೀರ್ಘಾ ಮತ್ತು ಉನ್ನತಾ—ಎಂದು. ದೀರ್ಘಾ ನೌಕೆಗಳು ಪುನಃ ಹತ್ತು ವಿಭಾಗಗಳಾಗಿ ಮಾಡಿದ್ದಾಗಿವೆ— ದೀರ್ಘಿಕಾ, ತರಣಿ, ಲೋಲಾ, ಗತ್ವರಾ, ಗಾಮಿನೀ, ತರೀ, ಜಂಘಾಲಾ, ಪ್ಲಾವಿನೀ, ಧಾರಿಣೀ ಮತ್ತು ವೇಗಿನೀ. ಇವುಗಳಲ್ಲಿ ಉದ್ದವು ಅಧಿಕವಾಗಿದೆ; ಅಗಲವು ಕಮ್ಮಿ; ಉನ್ನತವು ಅದಕ್ಕಿಂತಲೂ ಕಮ್ಮಿ. ವೇಗಿನಿಯು ಉದ್ದವು ೨೬೪ ಫೀಟ್; ಅಗಲ ೩೩ ಫೀಟ್ ಮತ್ತು ಉನ್ನತ ೨೬೧/೪ ಫೀಟ್ ಎಂದು ಹೇಳಲ್ಪಟ್ಟಿದೆ:—

ರಾಜಹಸ್ತದ್ವಯಾಯಾಮಾ ಅಷ್ಟಾಂಶಪರಿಣಾಹಿನೀ ||
ನೌಕೇಯಂದೀರ್ಘಿಕಾನಾಮ ದಶಾಂಗೇನೋನ್ನತಾಪಿಚ ||
ದೀರ್ಘಿಕಾ ತರಣಿರ್ಲೋಲಾ ಗತ್ವರಾಗಾಮಿನೀ ತರಿಃ ||
ಜಂಘಾಲಾಪ್ಲಾವಿನೀ ಚೈವಧಾರಿಣೀ ವೇಗಿನೀ ತಥಾ ||
ರಾಜಹಸ್ತೈಕೈಕವೃದ್ಧ್ಯಾ ನೌಕಾ ನಾಮಾನಿ ವೈದಶ ||
ಉನ್ನತಿಃ ಪರಿಣಾಹಶ್ಚದಶಾಷ್ಟಾಂಶಮಿತೌ ಕ್ರಮಾತ್ ||

ಉನ್ನತಾ ನೌಕೆಗಳು ೫ ವಿಭಾಗವಾಗಿ ಪರಿಗಣಿತವಾಗಿವೆ. ಊರ್ಧ್ವಾ, ಅನೂರ್ಧ್ವಾ, ಸ್ವರ್ಣಮುಖೀ, ಗರ್ಭಿಣೀ, ಮಂಥರಾ; ಇವುಗಳಲ್ಲಿ ಮಂಥರಾ ನೌಕೆಯು ಉನ್ನತವು ೭೨ ಫೀಟು ಇಡಲ್ಪಟ್ಟಿದೆ.

ರಾಜಹಸ್ತದ್ವಯಮಿತಾ ತಾವತ್ರಸರಣೋನ್ನತಾ ||
ಇಯಮೂರ್ಧ್ವಾಭಿಧಾ ನೌಕಾ ಕ್ಷೇಮಾಯ
ಪೃಥಿವೀಭುಜಾಮ್ ||
ಊರ್ಧ್ವಾನೂರ್ಧ್ವಾಸ್ವರ್ಣಮುಖೀ ಗರ್ಭಿಣೀ
ಮಂಥರಾತಥಾ ||
ರಾಜಹಸ್ತೈಕೈಕ ವೃದ್ಧ್ಯಾ ನಾಮಪಂಚತ್ರಯಂಭವೇತ್ ||

ನೌಕೆಗಳ ಅಲಂಕಾರದ ವಿಷಯ ಸಹಾ ಬಹು ಸುಂದರ ವರ್ಣನೆಯಿದೆ. ಅಲಂಕಾರದಲ್ಲಿ ಭಂಗಾರ, ಬೆಳ್ಳಿ, ತಾಮ್ರ ಮತ್ತು ಮೂರನ್ನೂ ಮಿಶ್ರಿಸಿ ಸಹಾ ಉಪಯೋಗಮಾಡುತ್ತಿದ್ದರು. ನಾಲ್ಕು ಕೂಪಕಂಬಗಳು ಹಡಗದಲ್ಲಿದ್ದರೆ, ಬಿಳೀ ವರ್ಣವನ್ನು, ಮೂರು ಕೂಪಕಂಬಗಳು ಇದ್ದಾಗ ಕೆಂಪು ವರ್ಣವನ್ನು, ಎರಡು ಕೂಪಕಂಬಗಳಿದ್ದಾಗ ಹಳದಿ ಬಣ್ಣವನ್ನು, ಒಂದು ಕೂಪಕಂಬವಿದ್ದಾಗ ನೀಲ ಬಣ್ಣವನ್ನು

ಉಪಯೋಗಿಸಬೇಕೆಂದು ಹೇಳಿಯದೆ. ನೌಕೆಗಳ ಮುಖವು ಸಿಂಹ, ಮಹಿಷ, ಸರ್ಪ, ಗಜ, ವ್ಯಾಘ್ರ, ಪಕ್ಷಿ, ಕಪ್ಪೆ ಅಥವಾ ಮನುಷ್ಯನ ಆಕೃತಿದ್ದು ಮಾಡಲ್ಪಡುತ್ತಿತ್ತು; ಹೀಗೆಯೇ ವಿಧಿಸಲ್ಪಟ್ಟಿದೆ: –

ಧಾತ್ವಾದೀನಾಮತೋವಕ್ಷ್ಯೇನಿರ್ಣಯಃಂತರಿ ಸಂಶ್ರಯಮ್॥
ಕನಕಂ ರಜತಂ ತಾಮ್ರಂ ತ್ರಿತಯಂ ವಾಯಥಾಕ್ರಮಮ್ ॥
ಬ್ರಹ್ಮಾದಿಭಿಃ ಪರಿಸ್ಯಸ್ಯ ನೌಕಾಚಿತ್ರಣಕರ್ಮಣಿ ॥
ಚತುಃಶೃಂಗಾ ತ್ರಿಶೃಂಗಾಭಾದ್ವಿಶೃಂಗಾ ಚೈಕಶೃಂಗಿಣೀ ॥
ಸಿತರಕ್ತಾ ಪೀತ ನೀಲವರ್ಣಾನ್ ದದ್ಯಾದ್‌ಯಥಾಕ್ರಮಮ್॥
ಕೇಸರೀ ಮಹಿಷೋನಾ ಗೋದ್ವಿರದೋ ವ್ಯಾಘ್ರ ಏವಚ ॥
ಪಕ್ಷೀ ಭೇಕೋ ಮನುಷ್ಯಶ್ಚ ಏತೇಷಾಂ ವದನಾಷ್ಟಕಮ್ ॥
ನಾವಾಂ ಮುಖೆ ಪರಿನ್ಯಸ್ಯ ಆದಿತ್ಯಾದಿ ದಶಾಭುವಾಮ್ ॥

ನೌಕೆಯ ಮೇಲೆ, ಕೋಣೆ, ಮನೆ ಆದಿಗಳ ರಚನೆಯಿಂದ ನೌಕೆಗಳಲ್ಲಿ ಮೂರು ಭೇದಗಳಿವೆ—(೧) ಸರ್ವ; (೨) ಮಧ್ಯ ಮತ್ತು (೩) ಅಗ್ರಮಂದಿರಾ.

ಸಗೃಹಾ ತ್ರಿವಿಧಾ ಪ್ರೋಕ್ತಾ ಸರ್ವ ಮಧ್ಯಾಗ್ರ ಮಂದಿರಾ ॥

ನೌಕೆಯ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೆ ಮಂದಿರಗಳು ಕಟ್ಟಲ್ಪಟ್ಟಾಗ, ಆ ನೌಕೆಯನ್ನು ಸರ್ವ ಮಂದಿರಾ ಎಂದು ಕರೆಯುತ್ತಿದ್ದರು; ಇದರಲ್ಲಿ ಅರಸನ ಕೋಶ, ಅಶ್ವ, ನಾರೀ ಆದಿಯರನ್ನು ತಕ್ಕೊಂಡು ಹೋಗಲು ಮಾಡಿದುದು ಇದು.

ಸರ್ವತೋ ಮಂದಿರಂ ಯತ್ರ ಸಾಜ್ಞೇಯಾ ಸರ್ವಮಂದಿರಾ॥

ನೌಕೆಯ ಮೇಲ್ಭಾಗದ ಮಧ್ಯದಲ್ಲಿ ಮಂದಿರವಿದ್ದ ನೌಕೆಯು ಮಧ್ಯಮಂದಿರಾ ಎಂದು ಕರೆಯುತ್ತಿದ್ದರು. ರಾಜರ ವಿಲಾಸ, ಯಾತ್ರಾ, ವರ್ಷಋತು ಪ್ರಯಾಣಗಳಿಗೋಸ್ಕರ ಉಪಯೋಗಿಸಲ್ಪಡುತ್ತಿತ್ತು:—

ಮಧ್ಯತೋ ಮಂದಿರಂ ಯತ್ರಸಾಜ್ಞೇಯಾ ಮಧ್ಯಮಂದಿರಾ॥
ರಾಜ್ಞಾಂ ವಿಲಾಸ ಯಾತ್ರಾದಿ ವರ್ಷಾ ಸುಚ ಪ್ರಶಸ್ಯತೇ ॥

ನೌಕೆಯ ಅಗ್ರದಲ್ಲಿ (in front) ಮಂದಿರವಿದ್ದಾಗ, ನೌಕೆಯು ಅಗ್ರಮಂದಿರಾ ಎಂದು ಕರೆಯಲ್ಪಡುತ್ತಿತ್ತು. ಇದು ದೊಡ್ಡ ದೊಡ್ಡ ಸ್ಟೀಮರುಗಳಂತೆ, ದೂರ ಯಾತ್ರೆಗೆ ಮತ್ತು ಯುದ್ಧಕ್ಕೋಸ್ಕರ ಉಪಯೋಗಿಸಲ್ಪಡುತ್ತಿತ್ತು:—

ಅಗ್ರತೋ ಮಂದಿರಂ ಯತ್ರ ಸಾಜ್ಞೇಯಾ ತ್ವಗ್ರ ಮಂದಿರಾ ॥
ಚಿರಪ್ರವಾಸ ಯಾತ್ರಾಯಾಂ ರಣೇಕಾಲೇ ಘನಾತ್ಯಯೇ ॥

ಮುಸಲ್ಮಾನರ ಶಾಸನಕಾಲದಲ್ಲಿ ಸಹಾ ಭಾರತದಲ್ಲಿ ದೊಡ್ಡ ದೊಡ್ಡ ಹಡಗುಗಳು ಕಟ್ಟಲ್ಪಡುತ್ತಿದ್ದುವು. ಮಾರ್ಕೊ ಪೊಲೊ ಎಂಬವನು ೧೩ನೇ ಶತಮಾನದಲ್ಲಿ ಭಾರತಕ್ಕೆ ಬಂದಿದ್ದನು. ಅವನು ಹೀಗೆಂದು ಬರೆದಿದ್ದಾನೆ: "ಭಾರತೀಯ ಹಡಗಗಳಲ್ಲಿ ಸುಂದರವಾದ ಜೋಡುಹಲಗೆಗಳ ಜೋಡಣೆಯು ಮಾಡಲ್ಪಡುತ್ತಿತ್ತು; ಕಬ್ಬಿಣದ ಕೀಲುಗಳಿಂದ ಅವುಗಳನ್ನು ಗಟ್ಟಿಯಾಗಿ ತಯಾರಿಸುತ್ತಿದ್ದರು; ಅವುಗಳ ದ್ವಾರಗಳಲ್ಲಿ ಒಂದು ಪ್ರಕಾರದ ಗೋಂದನ್ನು ತುಂಬಿಸುತ್ತಿದ್ದರು; ೩೦೦ ನಾವಿಕರು ಇರುವ ದೊಡ್ಡ ಹಡಗಗಳು ಅವುಗಳು ಆಗಿದ್ದವು; ಒಂದೊಂದು ಹಡಗಿನಲ್ಲಿ ೬೦೦೦ ಗೋಣಿ ಸಾಮಾನನ್ನು ತುಂಬಿಸುತ್ತಿದ್ದರು. ಇವುಗಳಲ್ಲಿ ಇರುವುದಕ್ಕೋಸ್ಕರ ಮೇಲೆ ಅನೇಕ ಕೋಣೆಗಳಿದ್ದವು; ಅವುಗಳಲ್ಲಿ ಆರಾಮದ ಪ್ರಬಂಧವು ಬಹಳ ಸೊಗಸಾಗಿತ್ತು; ಹಡಗಗಳ ಅಡಿಭಾಗವು ಹಾಳಾದಾಗ, ಮೇಲೆ ಪುನಃ ಮರದ ಹಲಗೆಯನ್ನು ಹಾಕುತ್ತಿದ್ದರು. ಹೀಗೆ ಕೆಲವು ಕಡೆಗಳಲ್ಲಿ ಒಂದರ ಮೇಲೆ ಒಂದು ಹೀಗೆ ೬ ಹಲಗೆಗಳು ಕಾಣುತ್ತಿದ್ದುವು."

೧೫ನೇ ಶತಮಾನದಲ್ಲಿ ನಿಕೊಲೊ ಕೌಂಟೇ ನಾಮಕ ಯಾತ್ರಿಯು ಭಾರತಕ್ಕೆ ಬಂದಿದ್ದನು. ಅವನು ಹೀಗೆಂದು ಉಲ್ಲೇಖಿಸಿದ್ದಾನೆ:—"ಭಾರತೀಯ ಹಡಗಗಳು ನಮ್ಮ ಹಡಗಗಳಿಗಿಂತ ಬಹು ದೊಡ್ಡದಾಗಿವೆ. ಅವುಗಳ ಅಧೋಭಾಗವು ೬ ಹಲಗೆಗಳಿಂದ (ಒಂದರ ಮೇಲೊಂದಾಗಿ) ರಚಿಸಲ್ಪಡುತ್ತಿತ್ತು. ಅದರಿಂದ ಅವುಗಳು ಎಂತಹ ಭಯಾನಕ ತುಫಾನನ್ನಾದರೂ ಎದುರಿಸಿ ಜಯಶೀಲವಾಗುತ್ತಿದ್ದವು. ಕೆಲವು ಹಡಗಗಳು ಬಹು ವಿಚಿತ್ರವಾಗಿದ್ದವು. ಒಂದು ಭಾಗವು ಹಾಳಾದಾಗ, ಮತ್ತೊಂದು ಭಾಗದಿಂದ ಕೆಲಸಮಾಡುತ್ತಿದ್ದವು ಮತ್ತು ಸಮುದ್ರದಲ್ಲಿ ವೈಚಿತ್ರ್ಯದಿಂದ ಚಲಿಸುತ್ತಿದ್ದವು."

ವರ್ಥಮಾ ನಾಮದ ಇನ್ನೊಂದು ಯಾತ್ರಿಯು ಕಲ್ಲಿಕೋಟೆಯಲ್ಲಿ ಹಡಗಗಳನ್ನು ತಯಾರಿಸುವುದನ್ನು ವರ್ಣಿಸಿರುವನು. ಅವನು ಹೀಗೆನ್ನುತ್ತಾನೆ:—"ಮರದ ಹಲಗೆಗಳ ಜೋಡಣೆಯು ಭಾರತದ ಹಡಗಳಲ್ಲಿ ಎಳ್ಳಷ್ಟಾದರೂ ನೀರನ್ನು ಒಳಗೆ ಬರಬಿಡಲಾರದು; ಹಡಗಗಳಲ್ಲಿ ಕೆಲವು ಸಾರಿ ಎರಡೆರಡು, (ವಸ್ತ್ರನಿರ್ಮಿತ) ಹಾಯಿಗಳು ಇರುತ್ತಿದ್ದವು; ಅವುಗಳಿಂದ ಗಾಳಿಯು ಹೆಚ್ಚು ತುಂಬಿ, ಸುಖದಿಂದ ಮತ್ತು ವೇಗದಿಂದ ಚಲಿಸುತ್ತಿದ್ದುವು. ಲಂಗರವು ಕೆಲವು ಸಾರಿ ಕಲ್ಲಿನದೂ ಇತ್ತು; ಈರಾನದಿಂದ ಕನ್ಯಾಕುಮಾರಿಯ ಪರ್ಯಂತ ಬರುವುದಕ್ಕೆ ಎಂಟು ದಿವಸಗಳ ಸಮಯವು ಬೇಕಾಗಿತ್ತು."

ಸಮುದ್ರತಟವರ್ತೀ ರಾಜರೊಡರೊಡನೆ, ಹಡಗಗಳ ದೊಡ್ಡ ದೊಡ್ಡ ಸಮೂಹಗಳೇ ಇದ್ದವು; ದೇಶ-ನದಿಗಳಲ್ಲಿ ಚಲಿಸುವ ಸಾವಿರಾರು ಹೆಸರುಳ್ಳ ಹಡಗುಗಳ ಸಮೂಹಗಳು ಇದ್ದವು; ಅಕ್ಬರನ ನೌಕಾವಿಭಾಗದ ಅಧ್ಯಕ್ಷನು 'ಮಿರ್ ಬಹರ್' ಎನ್ನಲ್ಪಡುತ್ತಿದ್ದನು. ಛತ್ರಪತಿ ಶಿವಾಜಿಗೆ ಸಹಾ ತನ್ನ ಹಡಗುಗಳ ಪಡೆಯು ಇತ್ತು; ಅವರ ಅಧ್ಯಕ್ಷನಿಗೆ

'ದರಿಯಾಸಾರಂಗ' ಎಂದು ಹೇಳುತ್ತಿದ್ದರು. ಡಾಕ್ಟರ ರಾಧಾ ಕುಮುದ ಮುಕರ್ಜೀಯು ತನ್ನ 'ಇಂಡಿಯನ್ ಶಿಪ್ಪಿಂಗ್' ನಾಮಕ ಪುಸ್ತಕದಲ್ಲಿ ಭಾರತೀಯ ಹಡಗುಗಳ ಬಹುರೋಚಕ, ಸಪ್ರಮಾಣ ಇತಿಹಾಸವನ್ನು ಕೊಟ್ಟಿರುತ್ತಾರೆ. ಇಂತಹ ಭಾರತೀಯ ಪ್ರಾಚೀನ ನೌಕಾನಿರ್ಮಾಣ ಕಲೆಯು ಯಾವ ಕಾರಣಗಳಿಂದ ಮತ್ತು ಯಾರಿಂದ ನಷ್ಟವಾಯಿತೆಂದು ನಾವೀಗ ವಿಚಾರಿಸುವಾ.

ಭಾರತದೊಡನೆ ಪಾಶ್ಚಾತ್ಯರ ಸಂಪರ್ಕವಾಯಿತು; ಆಗ ಇಲ್ಲಿಯ ಹಡಗಗಳನ್ನು ನೋಡಿ ಪಾಶ್ಚಾತ್ಯರು ಚಕಿತರಾದರು; ೧೭ನೇ ಶತಮಾನದಲ್ಲಿ ಯುರೋಪಿಯ ಹಡಗವು ಅತಿ ಹೆಚ್ಚೆಂದರೆ ೬೦೦ ಟನ್ನಿನದಾಗಿತ್ತು; ಆದರೆ, ಭಾರತದಲ್ಲಿ ಅವರು 'ಗೋಘಾ' ಎಂಬ ಹಡಗವನ್ನು ನೋಡಿದರು; ೧೫೦೦ ಟನ್ನಿಗಿಂತ ಹೆಚ್ಚಿನದು ಅದಾಗಿತ್ತು. ಯುರೋಪಿಯ ಕಂಪೆನಿಗಳು ಅಂತಹ ಹಡಗಗಳನ್ನು ಪ್ರೋತ್ಸಾಹಿಸಿದರು; ಮತ್ತು ಹಿಂದುಸ್ತಾನೀ ಕಾರೀಗರರ ದ್ವಾರಾ ಹಡಗಗಳನ್ನು ತಯಾರಿಸುವುದಕ್ಕೆ ಅವರು ಅನೇಕ ಕಾರಖಾನೆಗಳನ್ನು ತೆರೆದರು. ಸನ್ ೧೮೧೧ರಲ್ಲಿ ಲೆಫ್ಟಿನೆಂಟ್ ವೊಕರ್‌ನು ಹೀಗೆಂದು ಬರೆದಿದ್ದಾನೆ:—"ಬ್ರಿಟಿಷ್ ಹಡಗಪಡೆಯ ಹಡಗಗಳು ೧೨ ವರ್ಷಕ್ಕೊಮ್ಮೆ ಸರಿಪಡಿಸಲ್ಪಡಬೇಕು ಅಥವಾ ದುರುಸ್ತಿ ಮಾಡಿಸಲ್ಪಡಬೇಕು, ಇಲ್ಲವಾದರೆ ಕೆಲಸಮಾಡಲಾರವು; ಆದರೆ ಸಾಗ್ವಾನೀ ಮರದಿಂದ ಮಾಡಿದ ಭಾರತೀಯ ಹಡಗಗಳು ೫೦ ವರ್ಷಗಳಿಗಿಂತ ಅಧಿಕ ಸಮಯದ ಪರ್ಯಂತ ರಿಪೇರಿ ಮಾಡಲ್ಪಡದೇ ಕೆಲಸಕ್ಕೆ ಬರುತ್ತಿದ್ದವು."

"ಈಸ್ಟ್ ಇಂಡಿಯಾ ಕಂಪೆನಿ"ಯೊಡನೆ 'ದರಿಯಾದೌಲತ್' ನಾಮಕ ಹಡಗವಿತ್ತು; ಅದು ೮೭ ವರ್ಷ ಪರ್ಯಂತ, ಅವಿಶ್ರಾಂತ ಕೆಲಸಮಾಡುತ್ತಿತ್ತು. ಹಡಗಗಳನ್ನು ತಯಾರಿಸುವುದರಲ್ಲಿ ಬೀಟೆ, ಸೀಸಮ, ಸಾಗ್ವಾನಿ, ಈ ಮೂರು ಪ್ರಕಾರದ ಮರವು ಕೆಲಸಕ್ಕೆ ಬೀಳುತ್ತಿತ್ತು. ಸನ್ ೧೮೧೧ರಲ್ಲಿ ಒಬ್ಬ ಫ್ರಾನ್ಸಿನ ಯಾತ್ರಿಕ ವಾಲ್ಟಜಿರ ಸಾಲವಿನ್ಸ್‌ನು ತನ್ನ 'ಲೇ ಹಿಂದೂ' ನಾಮಕ ಪುಸ್ತಕದಲ್ಲಿ ಹೀಗೆಂದು ಬರೆದಿದ್ದಾನೆ: "ಪ್ರಾಚೀನ ಸಮಯದಲ್ಲಿ ನೌಕಾ ನಿರ್ಮಾಣ ಕಲೆಯಲ್ಲಿ ಹಿಂದೂ ಜನರು ಎಲ್ಲರಿಗಿಂತಲೂ ಮುಂದೆ ಹೋದವರು; ಮತ್ತು ಇಂದು ಸಹಾ, ಇದರ ವಿಷಯ ಯುರೋಪಿಗೆ ಪಾಠವನ್ನು ಕಲಿಸಬಲ್ಲರು. ಕಲೆಗಳನ್ನು ಕಲಿಯುವುದರಲ್ಲಿ ಚತುರರಾದ ಆಂಗ್ಲೇಯರು ಹಿಂದುಗಳಿಂದ ಹಡಗಗಳನ್ನು ತಯಾರಿಸುವ ಅನೇಕ ಪಾಠಗಳನ್ನು ಕಲಿತವರಾದರು. ಭಾರತೀಯ ಹಡಗಗಳಲ್ಲಿ ಸುಂದರತೆ ಹಾಗೂ ಉಪಯೋಗಿತೆಗಳ ಬಹು ಉತ್ತಮ ಯೋಗವಿದೆ; ಅವರು ಹಿಂದುಸ್ಥಾನಿಗಳ ಕಾರ್ಯಕೌಶಲ್ಯ ಮತ್ತು ಅವರ ಧೈರ್ಯಗಳನ್ನು ಅನುಸರಿಸುವವರಾದರು."

ಬೊಂಬಾಯಿಯ ಕಾರಖಾನೆಗಳಲ್ಲಿ ಸನ್ ೧೭೩೬ರಿಂದ ೧೮೬೩ರ ತನಕ ೩೦೦ ಹಡಗಗಳು ತಯಾರಿಸಲ್ಪಟ್ಟವು. ಇವುಗಳಲ್ಲಿ ಅನೇಕ ನೌಕೆಗಳು ಇಂಗ್ಲಂಡಿನ "ಬಾದಶಾಹೀ ನೌಕಾಪಡೆ"ಯಲ್ಲಿ ಸೇರ್ಪಡೆಯಾದವು. ಇವುಗಳಲ್ಲಿ 'ಏಶಿಯಾ' ನಾಮಕ ನೌಕೆಯು ೨೨೮೯ ಟನ್ನಿನದಾಗಿತ್ತು ಮತ್ತು ಅದರಲ್ಲಿ ೮೪ ತೋಪುಗಳು ಇಡಲ್ಪಟ್ಟಿದ್ದವು. ಬಂಗಾಲದಲ್ಲಿ ಹುಗಿಲೀ, ಸಿಲಹಟ, ಚಟಗಾಂವ, ಢಾಕಾ ಆದಿಸ್ಥಾನಗಳಲ್ಲಿ ನೌಕೆಗಳನ್ನು ತಯಾರಿಸುವ ಕಾರಖಾನೆಗಳಿದ್ದವು. ಸನ್ ೧೭೮೧ರಿಂದ ೧೮೨೧ರ ತನಕ ೧೨೨೬೯೩ ಟನ್ನುಗಳ ೨೭೨ ನೌಕೆಗಳು ಕೇವಲ ಹುಗಲಿಯಲ್ಲಿ ತಯಾರಾಗಿದ್ದವು.

ಬ್ರಿಟನ್ನಿನ ಹಡಗ ವ್ಯಾಪಾರಿಗಳು ಭಾರತೀಯ ನೌಕಾನಿರ್ಮಾಣಕಲೆಯ ಈ ಉತ್ಕರ್ಷವನ್ನು ಸಹಿಸಲಾರದವರಾದರು ಮತ್ತು ಅವರು, 'ಈಸ್ಟ್ ಇಂಡಿಯಾ ಕಂಪೆನಿ'ಯವರು ಭಾರತೀಯ ನೌಕೆಗಳನ್ನು ಉಪಯೋಗಿಸಬಾರದೆಂದು ಆಂದೋಲನವನ್ನು ಹೂಡಿದರು. ಈ ಸಂಬಂಧದಲ್ಲಿ ಅನೇಕ ಸಾರಿ ಸರಕಾರದೊಡನೆ ವ್ಯವಹರಣೆಯನ್ನು ನಡೆಸಿದರು. ಸನ್ ೧೮೧೧ರಲ್ಲಿ ಕರ್ನಲ್ ವಾಕರನು ಅಂಕೆ ಸಂಖ್ಯೆಗಳನ್ನು ಕೊಟ್ಟು, ಹೀಗೆ ಸಿದ್ಧಪಡಿಸಿದನು:--"ಭಾರತೀಯ ನೌಕೆಗಳಲ್ಲಿ ಬಹು ಕಮ್ಮಿ ಖರ್ಚು ತಾಗುತ್ತದೆ; ಮತ್ತು ಅವುಗಳು ಬಹು ಸಾಮರ್ಥ್ಯಶಕ್ತಿಯುತವಾದವುಗಳು. ಬ್ರಿಟಿಷರ ನೌಕಾಪಡೆಯಲ್ಲಿ ಕೇವಲ ಭಾರತೀಯ ನೌಕೆಗಳು ಇಡಲ್ಪಡುವುದಾದರೆ, ಬಹು ಹೆಚ್ಚು ಆದಾಯವಾಗಬಲ್ಲುದು." ನೌಕೆಗಳನ್ನು ತಯಾರಿಸುವ ಆಂಗ್ಲೇಯ ಕಾರೀಗರರು ಹಾಗೂ ವ್ಯಾಪಾರಿಗಳು ಈ ಲಿಖಿತವನ್ನು ಸಹಿಸಲಿಲ್ಲ; ಮತ್ತು ಅದನ್ನು ಪ್ರತಿಭಟಿಸಿದರು. ಡಾಕ್ಟರ ಟೇಲರ್‌ನು ಹೀಗೆಂದು ಬರೆದಿದ್ದಾನೆ:-- "ಹಿಂದುಸ್ಥಾನೀ ವಸ್ತುಗಳಿಂದ ತುಂಬಿದ ಹಿಂದುಸ್ಥಾನೀ ನೌಕೆಗಳು ಲಂಡನ್ ಬಂದರವನ್ನು ಸೇರಿದಾಗ, ನೌಕೆಗಳ ಆಂಗ್ಲೇಯ ವ್ಯಾಪಾರಿಗಳಲ್ಲಿ ಕ್ಷೋಭ ಕ್ರೋಧಗಳು ಉಂಟಾದವು; ಹೆದರಿಕೆಯು ಸಹಾ ಕಂಡುಬಂತು. ಆಕ್ರಮಣವನ್ನು ಮಾಡುವುದಕ್ಕೋಸ್ಕರ ಬಂದ ಥೇಮ್ಸ್ ನದಿಯಲ್ಲಿ ಶತ್ರುಪಕ್ಷದ ನೌಕೆಗಳ ಸಮೂಹವನ್ನು ನೋಡಿದಾಗ ಪರಿಣಮಿಸುವ ಭಯೋತ್ಪಾತಗಳು ಕಂಡುಬಂದವು." ಲಂಡನ್ ಬಂದರಿನ ಕಾರೀಗರರು ಮೊತ್ತ ಮೊದಲು ಆಂದೋಲನವನ್ನು ಹೂಡಿ, ಹಲ್ಲಾ ಏರಿದರು; ಮತ್ತು ಹೀಗೆಂದರು:—"ನಮ್ಮ ಎಲ್ಲಾ ಕೆಲಸವು ನಾಲ್ಕಷ್ಟು ಆದೀತು ಮತ್ತು ನಮ್ಮ ಕುಟುಂಬಗಳು ಹಸಿವೆಯಿಂದ ಬಳಲಿ, ಸಾಯಬೇಕಾದೀತು."

"ಈಸ್ಟ್ ಇಂಡಿಯಾ ಕಂಪೆನಿ"ಯ "ಕೋರ್ಟ್ ಒಫ್ ಡಿರೆಕ್ಟರ್ಸ" (ನಿರೀಕ್ಷಕ ಮಂಡಲದವ)ರು ಹೀಗನ್ನುತ್ತಾರೆ:— "ಹಿಂದುಸ್ಥಾನೀ ನಾವಿಕರು ಇಲ್ಲಿ ಬಂದ ನಂತರ ನಮ್ಮ ಸಾಮಾಜಿಕ ಜೀವನವನ್ನು ನೋಡುವರು: ಅದರಿಂದ ಭಾರತ

ದಲ್ಲಿ ಯೂರೋಪೀಯ ಆಚರಣದ ಪ್ರತಿ ಇದ್ದ ಆದರ ಭಯಗಳು ನಷ್ಟವಾಗುವವು. ತನ್ನ ದೇಶವನ್ನು ಪುನಃ ಸೇರಿ, ನಮ್ಮ ಸಂಬಂಧವಲ್ಲಿ ಕೆಟ್ಟ ವರ್ತಮಾನಗಳನ್ನು ಹರಡಿಸುವರು; ಅವುಗಳಿಂದ ಏಶಿಯಾ ನಿವಾಸಿಗಳಲ್ಲಿ ನಮ್ಮ ಆಚರಣದ ಪ್ರತಿ, ಆದರವು ನಷ್ಟವಾಗುವುದು; ಆ ಆದರದ ಬಲದ ಮೇಲೆಯೇ ನಾವು ನಮ್ಮ ಪ್ರಭುತ್ವವನ್ನು ಕಟ್ಟಿಕೊಂಡು ಇದ್ದೇವೆ ಮತ್ತು ಮೆರೆಯುತ್ತೇವೆ. ನಮ್ಮಲ್ಲಿ ಬಂದು ಹೋದ ನಾವಿಕರ ಪ್ರಭಾವವು ನಮಗೆ ಹಾನಿಕರವಾಗುವುದು."

ಇದರ ಮೇಲೆ, ಬ್ರಿಟಿಷ ಪಾರ್ಲಿಮೆಂಟು ಸರ್ ರೋಬರ್ಟ್ ಪೀಲನ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನಿಯೋಜಿಸಿತು. ಸದಸ್ಯರಲ್ಲಿ ಪರಸ್ಪರ ಮತಭೇದವು ಕಂಡು ಬಂದುದರಿಂದ, ಈ ಕಮಿಟಿ ರಿಪೋರ್ಟಿನ ಆಧಾರದ ಮೇಲೆ ಸನ್ ೧೮೧೪ರಲ್ಲಿ ಒಂದು ಕಾನೂನು ಪಾಸುಮಾಡಲಾಯಿತು. ಅದರ ಅನುಸಾರ "ಭಾರತೀಯ ನಾವಿಕರು ಬ್ರಿಟಿಷ್ ನಾವಿಕರಾಗುವ ಅಧಿಕಾರವು ಇಲ್ಲದಂತಾಯಿತು. ಬ್ರಿಟಿಷ್ ನೌಕೆಗಳಲ್ಲಿ ಮುಕ್ಕಾಲು ಪಾಲು ಬ್ರಿಟಿಷ ನಾವಿಕರು ಅನಿವಾರ್ಯವಾಗಿ ಇರಬೇಕೆಂದು ನಿರ್ಧರಿಸಲಾಯಿತು. ಲಂಡನ್ ಬಂದರದಲ್ಲಿ ಯಾವುದಾದರೂ ಅನ್ಯ ನೌಕೆಯು ಒಳ ಬರುವ ಅಧಿಕಾರವು ಕಿತ್ತುಗೆಯಲಾಯಿತು. ನೌಕೆಯ ಸ್ವಾಮಿಯು ಬ್ರಿಟಿಷನಾಗಬೇಕು; ಇಂಗ್ಲಂಡದಲ್ಲಿ ಆಂಗ್ಲರ ದ್ವಾರಾ ತಯಾರಿಸಿದ ನೌಕೆಗಳಲ್ಲಿಯೇ ಹೊರಗಿನಿಂದ ಇಂಗ್ಲಂಡಿಗೆ ಸಾಮಾನು ಬರಬಲ್ಲದು." ಅನೇಕ ಕಾರಣಗಳಿಂದ ಈ ಕಾನೂನನ್ನು ಜಾರಿಗೆ ತರುವುದರಲ್ಲಿ ವಿಳಂಬವಾಯಿತು; ಆದರೆ ಸನ್ ೧೮೬೩ರಲ್ಲಿ ಇದನ್ನು ಜಾರಿಗೆ ತಂದರು. ಭಾರತದಲ್ಲಿ ಸಹಾ ಇಂತಹ ಕಾನೂನುಗಳು ಜಾರಿಗೆ ತರಲ್ಪಟ್ಟವು. ಅವುಗಳಿಂದ ಇಲ್ಲಿಯ ಪ್ರಾಚೀನ ನೌಕಾ ನಿರ್ಮಾಣ ಕಲೆಯು ಅಂತ್ಯವಾಯಿತು. ಭಾರತೀಯ ನೌಕೆಗಳಿಂದ ಒಯ್ಯಲ್ಪಟ್ಟ ಸಾಮಾನುಗಳ ಮೇಲೆ ತೆರಿಗೆಯು ಹೆಚ್ಚಿಸಲ್ಪಟ್ಟಿತು. ಮತ್ತು ಈ ರೀತಿಯಿಂದ ಅವರನ್ನು ವ್ಯಾಪಾರದಲ್ಲಿ ಬೇರ್ಪಡಿಸುವ ಪ್ರಯತ್ನಗಳು ಮಾಡಲ್ಪಟ್ಟವು. ಸರ್ ವಿಲ್ಲಿಯಮ್ ಡಿಗ್ಬಿಯು ನಿಜವಾಗಿಯೇ ಉಲ್ಲೇಖಿಸಿದ್ದಾನೆ:—"ಈ ರೀತಿಯಿಂದ ಪಾಶ್ಚಾತ್ಯ ಸಂಸಾರದ ರಾಣಿಯು ಪ್ರಾಚ್ಯ ಸಾಗರದ ರಾಣಿಯ ವಧೆಯನ್ನು ಮಾಡಿದಳು."

(ಸಂಕ್ಷೇಪದಲ್ಲಿ, ಭಾರತೀಯ ನೌಕಾ ನಿರ್ಮಾಣ ಕಲೆಯು ನಷ್ಟ ಮಾಡಲ್ಪಟ್ಟ ಕಥೆಯು ಇದು! ಇದನ್ನು ಪಂಡಿತ ಗಂಗಾಶಂಕರ ಮಿಶ್ರಜೀಯ ಲೇಖನದ ಆಧಾರದಿಂದ ಬರೆದುದಾಗಿದೆ.)



ಸ್ಥಾನ—ಸ್ತಾನ

ಮಧುಗಿರಿ ವಾಸುದೇವ ಮೂರ್ತಿ

ಈ ಲೇಖನದ ವಿಷಯ ಹೊಳೆದ ಸಂಗತಿ ಸ್ವಲ್ಪ ಹೇಳಿದರೆ ತಪ್ಪಾಗದು. ಹಾಫಿಸ್‌ನ ಕವಿತೆಗಳನ್ನು ಕುರಿತು ಬರೆದಿರುವವರು ಇವನ ಪುಸ್ತಕವನ್ನು ಶಕುನ ಕೇಳುವುದಕ್ಕೆ ಕೂಡ ಉಪಯೋಗಿಸುತ್ತಾರೆ ಎಂದು ಹೇಳಿದ್ದಾರೆ. ಅನೇಕ ಭಾವಾರ್ಥಗಳು ತುಂಬಿಕೊಂಡಿರುವುದರಿಂದ ಯಾವ ಪ್ರಶ್ನೆ ಮನಸ್ಸಿನಲ್ಲಿ ಬಂದಾಗಲೂ ಈ ಪುಸ್ತಕವನ್ನು ತೆಗೆದು ಒಂದು ಪದ್ಯದ ಸಾಲಿನ ಮೇಲೆ ಕೈಯಿಟ್ಟರೆ ಆ ಸಾಲನ್ನು ಓದಿ ಒಂದು ಸರಿಯಾದ ಸ್ಫೂರ್ತಿ ಬರುತ್ತದಂತೆ. ಹಾಗೆ ನೋಡಿದಾಗ ಈ ಸಲ ಈ ಲೇಖಕನಿಗೆ ಈ ಸಾಲು ಕಂಡು ಬಂದಿತು.

ಹರ್ ಕುಜಾ ಆಂ ಷಾಖೆ ನರ್‌ಗಿಸ್ ಬಷಗಫದ್
ಗುಲ್‌ರಖಾನಷ್ ದೀದ ನರಗಿಸ್‌ದಾನ್ ಕುನಂದ್

ಅರ್ಥ: ಎಲ್ಲೆಲ್ಲಿ ಆ ಹೂಗಳ ಗೊಂಚಲು ಅರಳುವುದೊ, ಅಲ್ಲಲ್ಲಿ ಪುಷ್ಪವದನೆಯರು ತಮ್ಮ ಕಣ್ಣುಗಳನ್ನೆ ಆ ಹೂವನ್ನಿಡುವ ಪಾತ್ರೆಯನ್ನಾಗಿ ಮಾಡಿಕೊಳ್ಳುತ್ತಾರೆ. ಭಗವಂತನ ಪ್ರೇಮದ ಹೂವು ಅರಳಿದಲ್ಲಿ ಭಕ್ತರು ಅದನ್ನೇ ನೋಡುವ ಕುತೂಹಲ ಉಳ್ಳವರಾಗುತ್ತಾರೆ; ಆ ಪ್ರೇಮ ಪುಷ್ಪದ ಸೊಗಸು ಅವರ ಕಣ್ಣುಗಳಲ್ಲಿ ಪ್ರತಿಬಿಂಬಿಸುತ್ತದೆ. ಹೇಗಾದರೂ ಹೇಳಿ. ಈ ಸಾಲು ಯಾವುದೋ ಊಹೆಗೆ ಸಿಕ್ಕಿ

ಗುಲ್‌ರಖಾನಷ್ ದೀದ ನರಗಿಸ್‌ಸ್ತಾನ್ ಕುನಂದ್

ಆಯಿತು. ದೀದ ಅಂದರೆ ಕಣ್ಣು. ನರಗಿಸ್‌ದಾನ್ ಅಂದರೆ ಪಾನದಾನಿ, ಪನ್ನೀರುದಾನಿ ಎಂಬ ಪದಗಳಲ್ಲಿರುವ, ದಾನಿ, ಪಾತ್ರೆ, ನರಗಿಸ್‌ದಾನ್, ಹೂವಿಡುವ ಪಾತ್ರೆ ಆಗುತ್ತದೆ. ನರ್‌ಗಿಸ್‌ಸ್ತಾನ್ ಅಂದರೆ ಹೂವಿನ ಉದ್ಯಾನವೇ ಆಗುತ್ತದೆ. ಭಗವಂತನ ಪ್ರೇಮ ಎಂಬ ಹೂವಿನ ರಾಶಿ ಅವನ ಭಕ್ತರ ಕಣ್ಣುಗಳಲ್ಲಿ ಏಕೆ ಅರಳಬಾರದು! ಆದ್ದರಿಂದ ದಾನ್ ಎಂದು ಇರುವ ಕಡೆ ಸ್ತಾನ್ ಎಂದು ಏಕೆ ಇರಬಾರದು? ಹೀಗೆ ವಿಚಾರ 'ಸ್ತಾನ್' ಶಬ್ದವನ್ನು ಕುರಿತು ಹೊರಟಿತು.

'ಸ್ತಾನ್' ಶಬ್ದಕ್ಕೆ ಸಂಸ್ಕೃತ ಮೂಲ ಎಂದು ನಿಘಂಟಿನಲ್ಲಿ ವಿವರಣೆ ಇದೆ. 'ಸ್ಥಾನ' ಎಂಬ ಶಬ್ದ ನಮಗೆ ಪರಿಚಯವಾದದ್ದು. ಜನಸ್ಥಾನ, ರಾಜಸ್ಥಾನ, ಇದು ಒಂದು ಸ್ಥಳದ ಹೆಸರು, ಪ್ರಾಂತದ ಹೆಸರು ಎಂದು ಗುರುತಿಸಬಹುದು. ಹಾಗೆಯೇ ಈರಾನಿನ ಸ್ಥಳಗಳ ಹೆಸರಿಗೆ 'ಸ್ತಾನ್' ಎಂಬುದು ಅಂಟಿಕೊಂಡಿದೆ. ಇಲ್ಲಿ ಮಹಾಪ್ರಾಣ, ಸ್ಥಾನ; ಅಲ್ಲಿ ಸ್ವಲ್ಪ ಮೆತುವಾದ ಶಬ್ದ 'ಸ್ತಾನ್'; ಇದು ಪರ್ಷಿಯನ್ ಭಾಷೆಯಲ್ಲಿ ಉಚ್ಚಾರಣೆ ಸ್ವಲ್ಪ ಸರಳವಾದ್ದರಿಂದ ಆಗಿರಬಹುದು.

ಸಂಸ್ಕೃತದಿಂದ ನಾವು ತೆಗೆದುಕೊಂಡು ಬಳಸುತ್ತಿರುವ 'ಸ್ಥಾನ' ಶಬ್ದದ ವ್ಯಾಪ್ತಿ ಸ್ಥಳದ ಹೆಸರುಗಳ ಮುಂದೆ ಇರುವ ಒಂದು ಪ್ರತ್ಯಯ ಎನ್ನಿಸಿಕೊಳ್ಳುವುದಕ್ಕಿಂತ ಬಹಳ ಮಟ್ಟಿಗೆ ಹೆಚ್ಚಾಗಿದೆ ಎಂದು ಹೇಳಬೇಕು. ಸಂಸ್ಥಾನ ಎಂಬಲ್ಲಿ ಒಂದು ರಾಜ್ಯದ ವಿಸ್ತಾರವನ್ನೂ, ಆ ಸ್ಥಾನ ಎಂಬಲ್ಲಿ ಒಂದು ವೈಭವದ ಗಾಂಭೀರ್ಯವನ್ನೂ ಕಾಣಬಹುದು. ಹಾಗೆ ನೋಡಿದರೆ 'ಸ್ಥಾನ' ಎಂಬ ಇಷ್ಟೇ ಪದಕ್ಕೂ ಸ್ವತಂತ್ರವಾದ ಅರ್ಥ ಉಂಟು. ಸ್ಥಳ ಎನ್ನುವುದು ಸಾಧಾರಣವಾದ ಅರ್ಥ. ಅದರೊಂದಿಗೇ 'ಸ್ಥಾನ' ಅಂದರೆ ಗೌರವ ಎಂಬ ಅರ್ಥವೂ ಬೆಳೆದು ಬಂದಿದೆ.

ಪರ್ಷಿಯನ್ ಭಾಷೆಯನ್ನು ನೋಡಿದರೆ ಅಲ್ಲಿ ಹೆಚ್ಚಾಗಿ ಈ ಶಬ್ದ ಸ್ಥಳಗಳನ್ನೂ, ಪ್ರಾಂತಗಳನ್ನೂ ಸೂಚಿಸುವುದಕ್ಕೆ ಉಪಯೋಗವಾಗಿರುವುದು ಕಾಣುತ್ತದೆ. ಕಾಬೂಲೀಸ್ತಾನ್, ಪಾರಸೀಸ್ತಾನ್, ಅಫ್ಘಾನೀಸ್ತಾನ್, ಕುರ್ದೀಸ್ತಾನ್, ಲೂರಿಸ್ತಾನ್, ಅಜ್ಬೇಕಿಸ್ತಾನ್, ತುರ್ಕೀಸ್ತಾನ್ ಎಂಬ ಹೆಸರುಗಳನ್ನು ನೋಡಬಹುದು. ಬಹುಶಃ ಭೌಗೋಳಿಕವಾಗಿ 'ಸ್ತಾನ್' ಶಬ್ದದ ವ್ಯಾಪ್ತಿ ಈರಾನ್ ಪ್ರದೇಶದ ಗಡಿಯನ್ನು ದಾಟಿಹೋಗಿದೆ ಎಂದು ಕಾಣುತ್ತದೆ. ಕಡೆಗೆ ಅರೇಬಿಯಾ ಕೂಡ ಮಾತಿನ ಬಳಿಕೆಯಲ್ಲಿ ಅರಬಸ್ತಾನ್ ಆಗಿದೆ.

ಸ್ಥಳದ ಹೆಸರೇ ಅಲ್ಲ ಯಾವ ನಾಮವಾಚಕ ಹೊಂದಿಕೆಯಾಗುವ ಯಾವ ಭಾವವನ್ನಾದರೂ ಒಟ್ಟುಗೂಡಿಸಿ ಒಂದು 'ಸ್ತಾನ್' ಮಾಡಿಬಿಡಬಹುದು. ಕೋಹಿಸ್ತಾನ್, ಬೆಟ್ಟದ ಸೀಮೆ; ರೇಗಿಸ್ತಾನ್, ಮರಳುಕಾಡು; ಗುಲಿಸ್ತಾನ್, ಹೂಗಳ ತೋಟ; ಬೋಸ್ತಾನ್, ಪರಿಮಳದ ಉದ್ಯಾನ. ಹಿಂದೂಗಳು ಇರುವ ಸ್ಥಳಕ್ಕೆ ಅವರು ಹಿಂದೂಸ್ತಾನ್ ಎಂದರು. ಸೂಫಿಗಳು ಇರುವ ಸ್ಥಳಕ್ಕೆ ನಾವು ಸೂಫೀಸ್ತಾನ್ ಎಂದು ಕರೆಯಬಹುದು. ಪ್ರಖ್ಯಾತ ಉರ್ದು ಕವಿಯಾದ ಹಾಲಿ ಒಂದು ಪದ್ಯದಲ್ಲಿ ಬಹಳ ಹುರುಪಿನಿಂದ

ಹಿಂದ ಕೂ ಕರ್ ದಿಖಾವೊ ಇಂಗ್ಲೀಸ್ತಾನ್

ಎಂದು ಹೇಳಿದ. ಅಂತೂ ಸ್ತಾನ್ ಪದದ ಅರ್ಥ, ಸ್ಥಳ, ಎನ್ನುವುದು.

ದರಯೂಷ್ (ಡೇರಿಯಸ್) ದೊರೆ ಬೆಹಸ್ತೂನ್ ಎಂಬಲ್ಲಿ ತನ್ನ ಶಾಸನವನ್ನು ಕೆತ್ತಿಸಿದನಂತೆ. ಇದು ಸುಮಾರು ಕ್ರಿಸ್ತಪೂರ್ವ ೨೦೦ರ ಹಿಂದಿನ ಮಾತು. ಪರ್ಷಿಯ ದೇಶದಲ್ಲಿ ಈ ದೊರೆಯ ರಾಜಧಾನಿ ಇದ್ದಂತೆ ಭೂಶೋಧನೆ ನಡೆಸಿದ್ದಾರೆ. ಬೆಟ್ಟದ ಮೇಲೆ ಯಾರೂ ಹತ್ತಲಾಗದ ಬಂಡೆಯ ಮೇಲೆ

ಕೆತ್ತಿಸಿದ್ದ ಶಾಸನವನ್ನು ಪರಿಶೀಲಿಸಿದ್ದಾರೆ. ಅದು ಚರಿತ್ರೆ. ಆದರೆ ಈ ಸ್ಥಳದ ಹೆಸರುಗಳನ್ನು ಕೇಳಿದರೆ ಶಬ್ದಗಳು ತಾಳುವ ರೂಪಗಳ ಕೆಲವು ವೈಚಿತ್ರ್ಯಗಳು ಮನಸ್ಸಿನ ಮುಂದೆ ಆಡುತ್ತವೆ. ಪಂಡಿತರು ಹೇಳುವುದು: ಈ ಸ್ಥಳದ ಹೆಸರು ಬಾಗಿಸ್ತಾನ್ ಎಂದು ಇತ್ತಂತೆ. ಬಿಹಿಸ್ತೂನ್ ಆಯಿತು; ಅದು ಬೆಸತೂನ್ ಎಂದು ತಿರುಗಿತು.

ಬಾಗಿಸ್ತಾನ್ ಎಂಬಲ್ಲಿ ಸ್ತಾನ್ ಎಂಬುದು ಎಷ್ಟು ಪುರಾತನ ಕಾಲದಿಂದ ಬಳಕೆಯಲ್ಲಿರುವ ಪದ ಎಂದು ಗೊತ್ತಾಗುತ್ತದೆ. ಬಾಗಿಸ್ತಾನ್ ಎಂಬುದರ ಒಂದು ನೇರವಾದ ಅರ್ಥ, ಬಾಗ್, ತೋಟ, ಬಾಗಿಸ್ತಾನ್ ತೋಟದ ಸ್ಥಳ ಎನ್ನುವುದು. ರಾಜಧಾನಿಯನ್ನು ಕಟ್ಟುವುದರಲ್ಲಿ ನಗರದ ಜೊತೆಗೆ ರಮ್ಯವಾದ ಉದ್ಯಾನ ಸೇರಿತ್ತು ಎಂಬುದನ್ನು ಇದು ಸೂಚಿಸುತ್ತದೆ. ಸಹಜವಾದ ಊಹೆ. ಆದರೆ ಬಾಗ್ ಎಂದರೆ ಒಂದು ಜನಾಂಗದ ಅಧಿದೇವತೆ, ಭಗವಂತ ಎಂಬ ಅರ್ಥವೂ ಉಂಟು. ಬಾಗಿಸ್ತಾನ್ ಎಂದರೆ ಭಗವಂತನ ಸ್ಥಳ ಎಂದುಕೊಂಡೇ ರಾಜಧಾನಿಯ ರಚನೆ, ಶಾಸನ ಲೇಖನದ ಏರ್ಪಾಡೂ ಎಲ್ಲ ನಡೆದಿರಬಹುದು. ಬಾಗ್ ಎನ್ನುವುದಕ್ಕೆ ಭಗವಂತನೆಂಬ ಅರ್ಥವನ್ನು ಬಗ್ದಾದ್ ಎಂಬ ಹೆಸರಿನಲ್ಲಿ ಕಾಣಬಹುದು. ಬಾಗ್, ದೇವರು, ದಾದ್, ಕೊಟ್ಟದ್ದು, ಭಗವಂತ ಕರುಣಿಸಿ ಕೊಟ್ಟ ನಗರ ಎಂದು ಕೆಲವರು ಅರ್ಥಮಾಡುತ್ತಾರೆ. ದಾದ್ ಎಂದರೂ ಒಂದು ಜನಾಂಗದ ದೇವತೆಯಂತೆ. ಹಾಗಾದರೆ ಬಾಗ್ದಾದ್, ಬಾಗೆದಾದ್, ದಾದನ ತೋಟ ಆಗುತ್ತದೆ. ಬಾಗ್ ಎಂಬ ಶಬ್ದಕ್ಕೆ ದೇವರು ಎಂಬ ಅರ್ಥವನ್ನು ಇಟ್ಟುಕೊಂಡರೆ, ಬಾಗಾದಾದ್, ಬಗ್ದಾದ್, ಬಾಗಿಸ್ತಾನ್, ಬಾಗ್‌ಸ್ತಾನ್, ಬಗ್‌ಸ್ತಾನ್ ಎಂಬಲ್ಲಿನ ಮೊದಲ ಅರ್ಥ ಭಗವಾನ್, ಭಗವಂತ ಎಂಬ ಪದಕ್ಕೆ ಎಷ್ಟು ಸಮೀಪವರ್ತಿಯಾಗುತ್ತದೆ ಎಂಬುದನ್ನು ನೋಡಬಹುದು.

ಆ ಮೇಲೆ ಬಾಗಿಸ್ತಾನ್ ಎಂಬುದು ಕ್ರಮೇಣ ಬಿಹಿಸ್ತೂನ್, ಬೆಸತೂನ್ ಆಗಿದೆ. ಬಿಹಿಸ್ತೂನ್ ಎಂಬ ಪದ ಬಿಹಿಷ್ತ್, ಸ್ವರ್ಗ, ಎಂಬ ಪದವನ್ನು ನೆನಪಿಗೆ ತರುತ್ತದೆ. ಬೆಸತೂನ್, ಬೇಸತೂನ್ ಬೇಸುತೂನ್ ಆಗಬಹುದೆ? ಸುತೂನ್ ಎಂದರೆ ಪರ್ಷಿಯನ್ ಭಾಷೆಯಲ್ಲಿ ಪಾಯ, ಕಂಬ, ಊರೆ ಎಂಬ ಅರ್ಥವಾಗುತ್ತದೆ. ದರಯೂಷ್ ಬರೆಸಿದ ಶಾಸನ ನೆಟ್ಟಗೆ ನಿಂತಿರುವ ಬಂಡೆಗಲ್ಲಿನ ಮೇಲೆ ನಾನೂರು ಅಡಿ ಎತ್ತರದಲ್ಲಿ ಹತ್ತಿ ಹೋಗುವುದಕ್ಕೆ ಅಸಾಧ್ಯವಾದ ಸ್ಥಳದಲ್ಲಿ ಇದೆಯಂತೆ. ಕಂಬ, ಊರೆ, ಇಲ್ಲದ ಅಂತರಾಳದಲ್ಲಿ ಇದೆ ಬಂದ ಹಾಗಾಯಿತು. ಅಂದರೆ ಆ ಸ್ಥಳವೂ ಆಕಾಶದಂತೆ ಬೇಸುತೂನ್, ಊರೆ ಇಲ್ಲದ್ದು. ಇದು ಬರೀ ಲೇಖಕನ ಊಹೆ ಎಂದು ಇಟ್ಟುಕೊಳ್ಳಿ. ಆದರೆ ಈ ಸಂದರ್ಭದಲ್ಲಿ ನನ್ನ ಸ್ನೇಹಿತರೊಬ್ಬರು ಕೊಟ್ಟ ಸೂಚನೆ ಜ್ಞಾಪಕಕ್ಕೆ ಬರುತ್ತದೆ. 'ಭಿಷ್ಟಿ' ಎನ್ನುವ ಮಾತಿನ ಮೇಲೆ ನಮ್ಮಲ್ಲಿ ಚರ್ಚೆ ನಡೆಯಿತು. ಬಿಷ್ಟಿ ಎಂದರೆ ಅಡಿಗೆಯವನಂತೆ, ಅವರು ಹೇಳಿದ್ದು. ಇದು ಪರ್ಷಿಯನ್ ಭಾಷೆಯಿಂದ ಬಂದಿರಬಹುದೆ? ಹೌದು. ಆ ಭಾಷೆಯಲ್ಲಿ 'ಬಿಹಿಷ್ತಿ' ಶಬ್ದ ಇದೆ. ನಿಘಂಟಿನಲ್ಲಿ ಬಿಹಿಷ್ತಿಗೆ ಕೊಟ್ಟಿರುವ ಅರ್ಥ ನೀರು ತರುವವನು ಎಂದು ಇದೆ. ಆದರೆ ಬಿಹಿಷ್ತ್, ಸ್ವರ್ಗದಿಂದ ಬಂದಿರುವವನು, ಬಿಹಿಷ್ತಿ ಏಕಾಗಬಾರದು? ಮರಳುಕಾಡಿನಲ್ಲಿ ನೀರು ಕಾಣಿಸುವವನು ಸ್ವರ್ಗದಿಂದ ಬಂದವನೇ ಸರಿ. ಆದುದರಿಂದ ಪದಗಳ ಪರಂಪರೆ ಬಿಹಿಷ್ತ್, ಬಿಹಿಷ್ತಿ, ಭಿಷ್ಟಿ ಎಂದೇ ಇರಬೇಕು. ಹೀಗೆ ತಪ್ಪಿರಬಹುದು, ಸರಿ ಇರಬಹುದು ಶಬ್ದಪರಂಪರೆಯಲ್ಲಿ ಒಂದು ಯಾವುದೇ ಬಗೆಯ ಹೊಂದಾಣಿಕೆ ಕಾಣಿಸುತ್ತದೆ.

ಸ್ಥಾನ ಎನ್ನುವುದಕ್ಕೆ ಸ್ಥಳ, ನೆಲೆ ಎನ್ನುವ ಅರ್ಥವಾಗುವುದನ್ನು ಗ್ರಹಿಸಲಾಯಿತಷ್ಟೆ. ನೆಲೆ, ನಿಲ್ಲುವುದು, ಈ ಭಾವಗಳಿಗೆ ಪರಸ್ಪರ ಸಂಬಂಧವಾಗುವುದು. ಪರ್ಷಿಯನ್ ಭಾಷೆಯಲ್ಲಿ 'ಈಸ್ತಾದನ್' ಎಂದರೆ 'ನಿಲ್ಲುವುದು'. 'ಈಸ್ತಾನ್ದನ್' ಎಂದರೆ 'ನಿಲ್ಲಿಸುವುದು'. 'ಈಸ್ತಾನ್ದನ್' ಎಂಬುದರ ಮೊದಲು ಕೊನೆಗಳನ್ನು ಸವರಿದರೆ 'ಸ್ತಾನ್' ಶಬ್ದ ಉಳಿಯುತ್ತದೆ. ಇವರಿಂದ ನೆಲೆ, ಸ್ಥಳ, ಎನ್ನುವ ಅರ್ಥ ಹೊರಡುವುದು ಅಷ್ಟು ಕಷ್ಟವಾಗಿರುವುದಿಲ್ಲ.

ಇನ್ನು ಸ್ಥಾನ ಎನ್ನುವುದಕ್ಕೆ ಅಂತಸ್ತು ಎಂಬ ಸಾಧಾರಣವಾದ ಭಾವಾರ್ಥವನ್ನು ಇಟ್ಟುಕೊಂಡು ನಿಘಂಟನ್ನು ಹುಡುಕುವಾಗ, ಇಂಗ್ಲಿಷಿನ ಪೊಸಿಷನ್, ಪ್ಲೇಸ್ ಮುಂತಾದ ಇದರ ಸಮಾನಾರ್ಥಗಳಲ್ಲಿ 'ಸ್ಟೇಷನ್' ಎನ್ನುವ ಪದವೂ ಸಿಕ್ಕಿತು. ಸ್ಟೇಶನ್ ಶಬ್ದಕ್ಕೆ ಗೌರವ ಸೂಚಕ ಅರ್ಥವಲ್ಲದೆ ನಿಲ್ಲುವ ಸ್ಥಳ ಎಂಬ ಸ್ಥೂಲವಾದ ಅರ್ಥವೂ ಇದೆಯಷ್ಟೆ. ಉದಾಹರಣೆಗೆ, ರೈಲ್ವೆ ಸ್ಟೇಶನ್. ನಮ್ಮಲ್ಲಿ ಇದನ್ನು ನಿಲ್ದಾಣ ಎನ್ನುವುದಕ್ಕಾರಂಭಿಸಿದ್ದೇವೆ. ತಾಣ, ಠಾಣ, ಇವು 'ಸ್ಥಾನ'ದ ಅವತಾರಗಳು ಎಂದು ಊಹಿಸಲು ಅವಕಾಶವುಂಟು. ಹಾಗೆಯೇ ಪರ್ಷಿಯನ್ನರಿಗೆ ರೈಲ್ವೆ ತಿಳಿಯಬಂದ ಮೇಲೆ 'ಸ್ಟೇಶನ್' ಎಂಬುದಕ್ಕೆ ಒಂದು ಹೊಸ ಪದ ಬಳಕೆಗೆ ತಂದುಕೊಂಡಿದ್ದಾರೆ 'ಇಸ್ತಾಸಿಯೂನ್' ಎಂದು. ಹೀಗೆ ಹೊರಳಿದ್ದು ಆರೂಪ ಎಂದು ಗುರುತುಹತ್ತುತ್ತದೆ. ಆದರೆ 'ಈಸ್ತಾದನ್' ಎಂಬ ಅಪ್ಪಟ ಪರ್ಷಿಯನ್ ಶಬ್ದಕ್ಕೂ, 'ಸ್ಟೇಶನ್' ಎಂಬ ಇಂಗ್ಲೀಷ್ ಶಬ್ದಕ್ಕೂ ಬಾಂಧವ್ಯವಿರಬೇಕಲ್ಲವೇ ಎಂಬ ಊಹೆ ಈ ಹೊರ 'ಈಸ್ತಾಸಿಯೂನ್' ಎಂಬ ರೂಪಾಂತರವನ್ನು ನೋಡಿದ ಕೂಡಲೆ ತಾನಾಗಿ ಹೊಳೆಯುತ್ತದೆ.

ಹೀಗೆ 'ಸ್ಥಾನ'ದ ಬೇರೆ ಬೇರೆ ಅಂಶಗಳನ್ನು ಸ, ತ, ನ ಎಂದು ವಿಂಗಡಿಸಿಕೊಂಡು ನೋಡಿದರೆ ಅದರ ವ್ಯಾಪ್ತಿ ಇಂಡಿಯಾದಿಂದ, ಇಂಗ್ಲೆಂಡಿನ ವರೆಗೂ ಹಬ್ಬಿರುವುದು ಕಾಣುತ್ತದೆ. ಈರಾನಿನ ಸುತ್ತುಮುತ್ತಿನಲ್ಲಿ ಸ್ಥಗಳ ಹೆಸರುಗಳಲ್ಲಿ

'ನಗರದ' ರಾಮರು



ರಾಮನಗರದ ವಿಷಯ ಕೇಳದಿರುವವರು ತೀರ ಕಮ್ಮಿ. ನಾನಿಂದು ನಮ್ಮ ನಗರದಲ್ಲೆ ನಮಗೆ ಸುಲಭವಾಗಿ ಪ್ರತ್ಯಕ್ಷವಾಗಿ ನಮ್ಮೆಲ್ಲರೊಡನೆ ಕಲೆತುಕೊಂಡು ನಮ್ಮೆಲ್ಲರ ಮೇಲೆ ಪೂರ್ಣ ಅನುಗ್ರಹವನ್ನು ತೋರಿಸಿ ನಮ್ಮ ರಕ್ಷಣೆಯ ಕಾರ್ಯವನ್ನು ತೃಪ್ತಿಕರವಾಗಿ ಮುನ್ನಡೆಸುವ ಹಲವು ರಾಮರ ಭಜನೆಯನ್ನು ಮಾಡಿ ಲೇಖಕನ ಜನ್ಮ ಸಾಫಲ್ಯತೆಯನ್ನು ಸಾಧಿಸುತ್ತೇನೆ. ನಿಮ್ಮ ನೆರವೂ ಬೆಂಬಲವೂ ನನ್ನ ಲೇಖಣಿಕೆಗಿದ್ದರೆ ನನ್ನಾಸೆಯು ಕೈಗೂಡಬಹುದು.

ಎಲ್ಲಕ್ಕಿಂತಲೂ ಮುಖ್ಯವಾಗಿರುವ ಹೊಟ್ಟೆಯು ತುಂಬುವಿಕೆಗೆ ರಾಮನ ದಯೆಯು ಅವಶ್ಯ. ಅವನ ತಿಂಡಿತೀರ್ಥದಿಂದಲೆ ಉದರಭರಣವನ್ನು ಮಾಡುವವರು ಎಷ್ಟಿಲ್ಲ! ಮತ್ತು ಅವನ್ನು ಗಳಿಸಲಿಕ್ಕಾಗಿ ಆ ಮಂದಿರದ ಜಗಲಿಯಲ್ಲಿಯೆ ಕೂತುಕೊಂಡು ತಪಸ್ಸನ್ನಾಚರಿಸುವವರು ಎಷ್ಟಿಲ್ಲ! ಇಂದಿನ ದಿನಗಳಲ್ಲಿ ತಪಸ್ವಿಗಳಿಲ್ಲವೆಂದರೆ ತಪ್ಪಾಗದೆ? ಅಲ್ಲಿಯ ಸಮಯ ನಿಯಾಮಕ ಪಟ್ಟಿಯನ್ನು ಬಾಯಿಪಾಠಮಾಡಿ ಯಾವ ವೇಳೆಯಲ್ಲಿ ಯಾವ ತಿಂಡಿಯು ತಯಾರಾಗುವುದೆಂಬುದರ ವಿವರವು ರಾಮಭಜಕರಿಗೆ ಇದ್ದೇ ಇರುವುದು. ಅಲ್ಲಿಯ ರಜಾ ದಿನವೊಂದು ಮಾತ್ರ ಯಾರಿಗೂ ರುಚಿಸದ ದಿನ. ಆ ದಿನ ಪ್ರಸಾದವಿಲ್ಲ.

ಊಟಕ್ಕೂ ರಾಮರ ನೆರವಿದೆ. ದಿವಾರಾತ್ರೆ ಬರುವ ಅತಿಥಿಗಳಿಗೆ ಭೋಜನವು ಇಲ್ಲಿ ಸಿಗುವುದು. ಕೋರ್ಟು ಕಚೇರಿಯ ಸಂದರ್ಶನಕ್ಕಾಗಿ ಆಗಾಗ್ಗೆ ನಮ್ಮ ನಗರಕ್ಕೆ ಬಂದಿಳಿಯುವ ಸದ್ಗೃಹಸ್ಥರಿಗೆ ನೇರಾಗಿ ಇಲ್ಲಿ ಸಾರಣೆಯು ದೊರಕುವುದು. ಇದು ನಮ್ಮ ನಗರದ ಸೌಕರ್ಯಗಳಲ್ಲಿ ಅತಿ ಮುಖ್ಯವಾದುದೆಂದು ಖಂಡಿತವಾಗಿ ಹೇಳಬಹುದು.

ಜನರಿಗೆಲ್ಲ ಬಟ್ಟೆಯ ಬಟವಾಡೆಗಾಗಿ ಶ್ರಮವನ್ನು ವಹಿಸುವ "ರಾಮರು" ಎಷ್ಟು ಮಂದಿಯಿರುವರೆಂಬುದರ ಲೆಕ್ಕ ನನಗೆ ಸರಿಯಾಗಿ ಗೊತ್ತಿರುವುದಿಲ್ಲ. ಆದರೆ ಒಂದೇ ಮಾತಿನಲ್ಲಿ ಹೇಳುವುದಾದರೆ ಇವರು ಅಸಂಖ್ಯಾಕರೆಂದರೆ ಪಂಡಿತರು ಹೇಳುವಂತೆ ಅತಿಶಯೋಕ್ತಿಯಾಗಲಾರದು. ಮೊನ್ನೆ ಮನೆಯ ಬಾಗಿಲ ಮುಂದೆಯೆ ದೊಡ್ಡ ಮೂಟೆಯೊಂದನ್ನು ಹೊತ್ತುಕೊಂಡು ನಮಗೆ ದರುಶನವನ್ನಿತ್ತ ಪುರುಷಪುಂಗವನು ತಾನೂ ಒಬ್ಬ ರಾಮನೆಂದು ಹೇಳಿ ನನ್ನ

ಸರ್ವಸಾಧಾರಣವಾಗಿ ಸೇರಿಕೊಂಡಿದೆ. ನಮ್ಮಲ್ಲಿ ಈ ರೀತಿ ಬಳಕೆ ಅಲ್ಲಲ್ಲಿ ಇರುವುದೂ ಅಲ್ಲದೆ, ಪದಕ್ಕೆ ಒಂದು ಸ್ವತಂತ್ರವಾದ ಅರ್ಥವೂ ಹೆಚ್ಚು ಪ್ರಕಟವಾಗಿ ಬೆಳೆದು ಬಂದಿದೆ. ಸ್ಥಾನ ಎಂದರೆ ಗೌರವ ಎನ್ನುವುದು ಸಮಾನಾರ್ಥವಾಗಿದೆ. ಗೌರವವನ್ನು ಗಳಿಸುವುದು ವ್ಯಕ್ತಿಸಹಜವಾದ್ದರಿಂದ ಸ್ಥಾನವನ್ನು ವ್ಯಕ್ತಿ ಹಿಂಬಾಲಿಸುವ ಚಕ್ರ ಕಣ್ಣಿಗೆ ಕಟ್ಟುತ್ತದೆ. ಇದರ ಪರಂಪರೆ ಎಂದರೆ ಸ್ಥಾನದಿಂದ ವ್ಯಕ್ತಿಗೆ ಮರ್ಯಾದೆ ಬರುವುದು. ಪರ್ಶಿಯನ್ ಭಾಷೆಯ ಬಳಕೆಯಲ್ಲಿ ಯಾವುದಕ್ಕೆ ಸ್ಥಾನ-ಸ್ತಾನ್-ಸೇರಿಕೊಳ್ಳುತ್ತದೋ ಅದರಿಂದ ಆ ಸ್ಥಾನಕ್ಕೆ ಮರ್ಯಾದೆ. ಆದ್ದರಿಂದ 'ಸ್ತಾನ್' ಪವಿತ್ರವಾಗಿರಬೇಕಾದರೆ ಅದಕ್ಕೆ ಹೊಂದಿಕೊಂಡ ವ್ಯಕ್ತಿಗಳು ಪವಿತ್ರವಾಗಿರಬೇಕು. ವ್ಯಕ್ತಿಯಿಂದ ಸ್ಥಾನಕ್ಕೆ ಮರ್ಯಾದೆ.

ಹಾಫಿಸ್ ಕವಿಯ ಒಂದು ಪದ್ಯದ ಸಾಲಿನಿಂದ ಈ ಲೇಖನವನ್ನು ಪ್ರಾರಂಭಿಸಿದ್ದಾಯಿತು. ಇನ್ನೊಂದು ಪದ್ಯದ ಸಾಲಿನಿಂದ ಇದನ್ನು ಮುಗಿಸೋಣ.

ಯೂಸಫ್ ಎ ಗುಮ್ ಗಷ್ತ ಬಾಸ್ ಆಯದ್
ಬ ಕನ್ಆಂ (Canam) ಗಮ್ ಮ ಖುರ್
ಕಲ್ಬ ಎ ಎಹಸಾಂ ಷವದ್ ರೋಸೇ
ಗುಲಿಸ್ತಾಂ ಗಮ್ ಮ ಖುರ್

ಅರ್ಥ: ಮರೆಯಲ್ಲಿ ಅಡಗಿರುವ ಯೂಸೋಫ್ ಕಾನಾನಿನ ಬಾವಿಯಿಂದ ಎದ್ದು ಬರುತ್ತಾನೆ, ದುಃಖ ಬೇಡ; ಈ ದುಃಖದ ಮನೆ ಒಂದು ದಿನ ಹೂಗಳ ತೋಟ—ಗುಲಿಸ್ತಾನ್ ಆಗುತ್ತದೆ.

ಮನಸ್ಸನ್ನು ತಣಿಸಿದನು. ಭಕ್ತರ ಮೇಲೆ ಅವನ ಕರುಣೆ ಯೆಷ್ಟೆಂದು ಹೇಳಲು ಸಾಧ್ಯವಿಲ್ಲ.

ಇನ್ನು ಬೀಡಿಯೆಂಬ ಮಹಾಕ್ಷೇತ್ರದಲ್ಲಿಯೂ ರಾಮನ ಹೆಸರು ಎದ್ದು ನಿಲ್ಲುವುದು. ಈ ಬೀಡಿಯೆಂಬ ಚಿಕ್ಕ ವಸ್ತುವು ಜನರಲ್ಲಿ ಒಂದು ಬಗೆಯ ಹೊಸ ಮತವನ್ನೆ ಸ್ಥಾಪಿಸಿದಂತಿದೆ. ಸಂಪೂರ್ಣ ಭ್ರಾತೃಭಾವ ಬೀಡಿಯ ಭಜಕರಲ್ಲಿರುವಂತೆ ಮತ್ತೆಲ್ಲಿಯೂ ಗೋಚರಿಸುವುದಿಲ್ಲ ಮತ್ತು ಬೀಡಿಯ ಆರಾಧಕರಿಗೆ ರಾಮುವ ದರುಶನವು ಸುಲಭ.

ಬಾಡಿಗೆಗೆ ಮನೆಯನ್ನು ಒದಗಿಸಿಕೊಡುವ ಮನೆಯ ಮ್ಹಾಲಿಕರಲ್ಲಿ ಹಲವು ರಾಮಾವತಾರಗಳಿರುವುವು. ಇಂತಹ ಮನೆಯಲ್ಲಿ ವಾಸಿಸುವವರಿಗೆ ತಿಂಗಳಿಗೊಂದು ಸಲವಾದರೂ ಆ ರಾಮನ ಸಾಕ್ಷಾತ್ಕಾರವು ದೊರಕುವುದು. ಹಾಲಿನ ಸರಬರಾಯಿಯೂ ರಾಮರಿಂದಲೆ ಆಗುವುದು ಹೊಸತಲ್ಲ. ಹಣವು ಸರಿಯಾಗಿ ಪಾವತಿಯಾಗದಿದ್ದರೂ ಉದಾರ ಮನಸ್ಸಿನಿಂದ ಹಾಲನ್ನು ತಂದೊಪ್ಪಿಸುವ ಸಹಾನುಭೂತಿಯು ದೇವತೆಗಳಿಗೆ ಮಾತ್ರ ಸಹಜ ಗುಣವೆಂದು ಹೇಳಬೇಕು, ಇದು ಹಾಲಿನ ರಾಮರಲ್ಲಿ ಕಂಡುಬರುತ್ತದೆ!

ಇದಿರಲ್ಲಿ ಮೇಜಿನ ಮೇಲೆ ಪ್ರತಿಷ್ಠೆಯಾಗಿರುವ ಮದ್ದಿನ ಬಾಟ್ಲಿಯನ್ನು ಪರಾಂಬರಿಸಿದರೆ ಅದರಲ್ಲಿ ರಾಮಾ ಪರಾಮಸಿಯೆಂಬ ಲೇಬಲಿದೆ. ಆದುದರಿಂದ ಮದ್ದಿನ ವಿಷಯವೆತ್ತಿದರೂ ಆ ರಾಮನ ಸುದ್ದಿಯೆ. ವೈದ್ಯರಲ್ಲಿ ಪ್ರಖ್ಯಾತಿಪಟ್ಟವರೂ ಆ ರಾಮನೆಂಬ ಹೆಸರಿನ ರೂಪಾಂತರವನ್ನು ಧರಿಸಿದವರು--ರಾಘವ, ರಾಘವೇಂದ್ರ, ರಘುಪತಿ— ಎಂಬ ಹೆಸರುಗಳು ನಮ್ಮ ಡಾಕ್ಟ್ರ, ವೈದ್ಯಶಿಖಾಮಣಿಗಳಲ್ಲಿರುವ ಸಾಮಾನ್ಯ ಹೆಸರುಗಳು. ಕೇಳು ಮಲಬಾರಿನಲ್ಲಿ ಮಾತ್ರ.

ಇನ್ನು ನಮ್ಮ ನಾಸಿಕವನ್ನು ನಾಕವನ್ನಾಗಿ ಮಾರ್ಪಡಿಸಿದ ರಾಮನಸ್ಯವನ್ನು ಮರೆಯಲಿಕ್ಕಾಗುವುದಿಲ್ಲ. ಗಂಟೆಗೊಂದು ಸಲವಾದರೂ ಆ ಬುಡ್ಡಿಯನ್ನು ವಾಮಕರತಲದಲ್ಲಿ ತಲೆಕೆಳಗೆ ಅಡಿಮೇಲೆ ಮಾಡದಿದ್ದರೆ ಹುಡಿಯು ಅಲ್ಲಿಂದ ಹೊರಡುವುದಿಲ್ಲ. ಹಾಗೆ ಮಾಡಿದನಂತರವೂ ಕೆಲವು ಸಲ ಹುಡಿಯು ಬುಡ್ಡಿಯನ್ನು ಬಿಡಲಿಕ್ಕೆ ಒಪ್ಪುವದಿಲ್ಲ. ಸ್ವಲ್ಪ ಒತ್ತಾಯವೂ ಬೇಕಾಗುತ್ತದೆ. ಇಂತಹ ಆಕರ್ಷಕವಾದ ಒಂದು ವಸ್ತುವು ನಮ್ಮ ನಗರದವರಿಗೆ ರಾಮನ ಪ್ರಸಾದ ರೂಪವಾಗಿ ಸಿಕ್ಕುವುದು.

ಸೋಡಾ ಮಹಾರಾಜರು ಎಂದು ಹೇಳುವಾಗಲೆ "ರಾಮು ಹಾಜರು", ಇಲ್ಲಿಯೂ ರಾಮನ ಕೃಪೆಯೆ ಕಾಣಿಸುವುದು. ಸ್ವಲ್ಪ ಹುಡುಕಬೇಕು. ಆದರೆ ಪ್ರಯಾಸದ ಕೆಲಸವಲ್ಲ.

ಇಷ್ಟು ನಗರದ ಪ್ರಶಂಸೆಯನ್ನು ಮಾಡುವಾಗ ಗ್ರಾಮ ಹಳ್ಳಿಗಳಲ್ಲಿ ರಾಮನಿಲ್ಲವೆಂವಲ್ಲ. ಅವನು ಶಬ್ದಸ್ವರೂಪಿಯಾಗಿ ನಾವು ಉಚ್ಚರಿಸುವ ಹಲವು ಶಬ್ದಗಳಲ್ಲಿ ಅಡಕವಾಗಿರುವನು. ಕೆಲವೇ ಶಬ್ದಗಳನ್ನಿಲ್ಲಿ ಉದಹರಿಸುತ್ತೇನೆ. ಆರಾಮು, ವಿರಾಮು, ಪೂರ್ಣವಿರಾಮ, ಅಲ್ಪವಿರಾಮು, ಅರ್ಧವಿರಾಮು; ಡ್ರಾಮಾ, ಟೆಲಿಗ್ರಾಮ್ ಹೀಗೆ ಇನ್ನೂ ಅನೇಕ ಶಬ್ದಗಳಲ್ಲಿ ಅಂತರ್ಗತನಾಗಿ ಆ ರಾಮನು ಹುಡುಕುವವರಿಗೆ ಸಿಗುವನು. ಎಲ್ಲಾ ಗ್ರಾಮಗಳಲ್ಲಿರುವನೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಬರೀ ವಿಳಾಸದಲ್ಲಿ ಬರುವ ಮ. ರಾ. ರಾ. ಎಂಬಲ್ಲಿಯೂ ಆ ರಾಮನೇ ಕಾಣುವನು. ರಾಮನು ಸರ್ವಾಂತರ್ಯಾಮಿಯಲ್ಲವೆ?

ಎಂ. ವಿ. ಪ್ರಭು.

BANKING SERVICE.

THE AGRICULTURAL & INDUSTRIAL BANK LIMITED.

ESTABLISHED: 1934.

The very existence of Modern Society is based on confidence and confidence can exist only where Governments, Institutions, Corporations and Individuals keep their promises and commitments.

An Account with the Bank will save you a good deal of labour and correspondence. We should like the privilege of serving you frequently and we assure you that a cordial and friendly welcome always awaits you at any of our Offices.

Branches throughout Karnataka.

A. Madhava Pai, B. A. B., L.,
GENERAL MANAGER.

ಯತಿಪಂಥದ ಪೂರ್ವೋತ್ತರ

ಸಮತಾವಾದ (Communism)ದ ತೀರ ಆರಂಭದ ಪ್ರಯೋಗವೆಂದರೆ ಯತಿಪಂಥ. ಯತಿಪಂಥದ ಉಗಮವು ಹೇಗೆ ಆಗಿರಬಹುದೆಂಬುದನ್ನು ಕುರಿತು ಸಮಾಜ-ಶಾಸ್ತ್ರ, ಮಾನಸಶಾಸ್ತ್ರಗಳ ಸಹಾಯದಿಂದ ನಮ್ಮ ನಾಡಿನ ಐತಿಹಾಸಿಕ ಘಟನೆಗಳ ಸಿಂಹಾವಲೋಕನ ಮಾಡಿದರೆ ಈ ಮಾತಿನ ಅರ್ಥದ ಸ್ಪಷ್ಟೀಕರಣವು ದೊರೆಯುವುದು.

ಯತಿಪಂಥವು ಏಕೆ ತಲೆದೋರಿರಬಹುದು? ಕಾರ್ಯಕಾರಣ ಸಂಬಂಧವಿಲ್ಲದೆ ಈ ಲೋಕದೊಳಗಿನ ಯಾವ ಸಂಗತಿಯೂ ಒದಗುತ್ತಿರುವುದಿಲ್ಲ. ಹಿಂದು-ಮುಂದಿನ ಯಾವ ಸಂಬಂಧವಿಲ್ಲದೆ ಫಕ್ಕನೆ ಯಾವುದೂ ಸಂಭವಿಸಲಾರದು. ಪ್ರತಿಯೊಂದು ಕೃತಿ, ಪ್ರತಿಯೊಂದು ವಿಚಾರಕ್ಕೂ ದೇಶ-ಕಾಲ ಪರಿಸ್ಥಿತಿಯ ಹಿನ್ನೆಲೆಯು ಉಂಟೇ ಉಂಟು. ದಿಕ್ಕಾಲಾತೀತವೆಂದು ಭಾವಿಸುವ ತಾತ್ವಿಕ ವಿಚಾರಗಳು ಕೂಡ ಒಂದೊಂದು ವಿಶಿಷ್ಟ ಪರಿಸ್ಥಿತಿಯಲ್ಲಿ ತಲೆಯೆತ್ತಿವೆ. ಹಾಗಾದರೆ ಯತಿಪಂಥವು ಆವಶ್ಯಕವಾಗುವಂತಹ ಕಾಲ-ಪರಿಸ್ಥಿತಿಯು ಏನಿರಬಹುದು?


ಯತಿಪಂಥದ ಗೊತ್ತುಗುರಿಯೇನು? "ತ್ಯಾಗ, ವೈರಾಗ್ಯಯುಕ್ತವಾಗಿ ಸರ್ವಭೂತ ಹಿತದಲ್ಲಿ ರತವಾಗಿರುವುದು." ಯತಿಪಂಥಕ್ಕೆ ಸಂನ್ಯಾಸ ಧರ್ಮವೆಂದೂ ಇನ್ನೊಂದು ಹೆಸರಿದೆ. ತ್ಯಾಗ ಅಥವಾ ಸಂನ್ಯಾಸನ ಕಾರಣವು ಏನು? ಉಪವಾಸದ ಅವಶ್ಯಕತೆಯು ಯಾವಾಗ ಉಂಟಾಗುವುದು? ಮಾನವನು ವಿಚಾರಪೂರ್ವಕವಾಗಿ—ಬುದ್ಧಿಪುರಸ್ಸರವಾಗಿ ತಾನಾಗಿಯೇ ಉಪವಾಸಮಾಡುವುದು ಯಾವಾಗ? ಅಜೀರ್ಣದ ಬಾಧೆಯಾದಾಗಲೆ ಅಲ್ಲವೆ? ಇನ್ನೊಬ್ಬರ ಮೇಲೆ ಸಿಟ್ಟಾಗಿ ಅವರನ್ನು ಶಿಕ್ಷಿಸುವುದಕ್ಕೆ ತಾನು ಮಾಡುವ ಉಪವಾಸದ ಪ್ರಕಾರವೂ ಒಂದುಂಟು.

ರೋಗ ನಿವಾರಣೆಗಾಗಿ ಅಥವಾ ತೊಂದರೆಯನ್ನು ಪರಿಹರಿಸುವುದಕ್ಕಾಗಿ, (ಯಾವ ಕಾರಣದಿಂದ ಪೀಡೆಯು ಉಂಟಾಗಿರುತ್ತದೆಂದು ಗ್ರಹಿಕೆಯಾಗಿರುತ್ತದೊ) ಆದರ ವಿರುದ್ಧವಾದ ಉಪಾಯವನ್ನು ಕೈಕೊಂಬುವುದು ಸಾಮಾನ್ಯವಾಗಿ ಹಿಂದಿನ ಕಾಲದ ವಾಡಿಕೆಯಾಗಿದ್ದಿತು. ಉಷ್ಣಕ್ಕೆ ಶೈತ್ಯೋಪಚಾರ; ಅಜೀರ್ಣಕ್ಕೆ ಉಪವಾಸ; ಅಹಂಕಾರಕ್ಕೆ ಅನಾಸಕ್ತಿ ಅಥವಾ ತಾಟಸ್ಥ್ಯ. ಇದೇ ತೆರನಾಗಿ ಸಂನ್ಯಾಸದ ತ್ಯಾಗ ಧರ್ಮಕ್ಕೆ ವಿರೋಧವಾಗಿ ಸಾಂಸಾರಿಕ ಭೋಗವಿಲಾಸಗಳ ವೈಪರೀತ್ಯವೇ ಕಾರಣವಾಗಿರಬೇಕೆಂದು ಸಹಜವಾಗಿ ಊಹಿಸಬಹುದಾಗಿದೆ.

ಆದಕಾರಣ, ಯತಿಪಂಥವು ಭೋಗವಿಲಾಸೀ ಸಿರಿವಂತರ ಸ್ವಾರ್ಥೀ ಹೆಮ್ಮೆಯನ್ನು ತಗ್ಗಿಸಲು ಯತಿಪಂಥದ ಉದಯವಾಗಿರಬೇಕೆಂಬಲ್ಲಿ ಸಂದೇಹವಿಲ್ಲ. ಸಂಗ್ರಹಬುದ್ಧಿಯ ದುಷ್ಪರಿಣಾಮಗಳನ್ನು ಹೊಡೆದು ಹಾಕಲು ಅಂದಿನ ಸಮಾಜದಲ್ಲಿ ತ್ಯಾಗದ—ಅಪರಿಗ್ರಹದ ಉಪಾಯವು ಅವಶ್ಯವೆಂದು ಜನದ ಮನ್ನಣೆಗೆ ಪಾತ್ರವಾಗಿರಬೇಕು. "ಭುಂಜತೇ ತೇ ಅಘಂ ಪಾಪಾಃ ಯೇ ಪಚಂತಿ ಆತ್ಮಕಾರಣಾತ್". ಹೆರವರಿಗೆ ಕೊಡದೆ ಕೇವಲ ತಮ್ಮ ಸಲುವಾಗಿಯೇ ಸಂಗ್ರಹಿಸಿ ತಿನ್ನುವವರು ಪ್ರತ್ಯಕ್ಷ ನರಕವನ್ನೇ ಭುಂಜಿಸುತ್ತಾರೆಂದು ಗೀತೆಯಲ್ಲಿ ಬಂದ ವಚನವು ಅದಕ್ಕೂ ಪುರಾತನ ಕಾಲದಿಂದ ನಡೆದು ಬಂದ ಯತಿಪಂಥದ ಆದರ್ಶವನ್ನೇ ವಿವರಿಸುತ್ತದೆ.

ಭಾರತದೊಳಗಿನ ಅತಿ ಪುರಾತನ ಸಂಸ್ಕೃತಿಯ ಅವಶೇಷಗಳು, ಹರಪ್ಪ, ಮೊಹೆಂಜೊದಾರೊಗಳಲ್ಲಿ ದೊರೆಯುತ್ತವೆ. ಮೊಹೆಂಜೆದಾರೊದಲ್ಲಿ ದೊರೆತ ವಸ್ತುಗಳಲ್ಲಿ ಯತಿಗಳ ಅಸ್ತಿತ್ವಸೂಚಕ ಕುರುಹುಗಳು ಸಿಕ್ಕುತ್ತವೆ. ಆ ಕಾಲದಲ್ಲಿ ಭಾರತವು ಅತ್ಯಂತ ವೈಭವಶಾಲಿಯಾಗಿರಬೇಕೆಂದು ಅಲ್ಲಿ ದೊರೆತ ಹಲವಾರು ಅಲಂಕಾರಗಳಿಂದಲೂ ನಗರ ರಚನಾಕ್ರಮದಿಂದಲೂ ನಿಶ್ಚಿತವಾಗಿ ಗೊತ್ತಾಗುತ್ತದೆ. ಆಗಿನ ಐಶ್ವರ್ಯ ಸಂಪತ್ತುಗಳಲ್ಲಿ ಲೋಲಾಡಿ ಸ್ವಾರ್ಥಿಗಳಾದವರನ್ನು ನಾಚಿಸಲು ತ್ಯಾಗಮಾರ್ಗವು ಮುಂದೆಬಂದಿರುವುದು ಅಸಂಭವನೀಯವಲ್ಲ. ಹಾಗಾದರೆ ಈ ತ್ಯಾಗದ ಪಂಥದ ಮೊದಲಿಗರು ಯಾರು? ಬಡವರು ಬಗ್ಗರನ್ನು (ಸಿರಿವಂತರಾಗಿ ಸೆಟೆದವರನ್ನು) ಬಗ್ಗಿಸಲು ಅವರಿಗೆ ನಾಚಿಸುವುದು ಅಷ್ಟು ಸಯುಕ್ತಿಕವಾಗಿ ತೋರುವುದಿಲ್ಲ. ಏಕೆಂದರೆ ಕೈಯಲ್ಲಿ ಏನೂ ಇಲ್ಲದವನ ತ್ಯಾಗಕ್ಕೆ ಏನು ಬೆಲೆ? ಉಳ್ಳವರ ತ್ಯಾಗವೇ ತ್ಯಾಗ. ಈ ಕಾರಣದಿಂದ ಯತಿಪಂಥದ ಪ್ರಣೇತಾರರು ಹೀನ ದೀನ ದರಿದ್ರರಲ್ಲ; ಸುಸಂಪನ್ನ ಸಿರಿವಂತರೊಳಗಿನ ಕೆಲವರಿಂದ ಈ ಪಂಥವು ತಲೆಯೆತ್ತಿರಲಿಕ್ಕೆ ಬೇಕು. ಐಶ್ವರ್ಯ, ಸಂಪತ್ತುಗಳುಳ್ಳವರಲ್ಲಿ ಅವಿವೇಕಿಗಳಿರುವಂತೆ, ಅತ್ಯಂತ ಉದಾತ್ತ ಕೋಮಲ ಮನೋಭಾವದ ಸದಯಾಂತಃಕರಣೆಗಳು ಇರುವುದು ಕಂಡು ಬರುತ್ತದೆ. ಇಂತಹರ ಸಂಖ್ಯೆ (ಅವಿವೇಕಿಗಳಷ್ಟು) ವಿಶೇಷವಾಗಿರಲಿಕ್ಕಿಲ್ಲ. ಆದರೂ ಸಮಾಜದ ಉಚ್ಚಮಟ್ಟದ ಜೀವನ

ದಲ್ಲಿ ಹಿಂದಿನಿಂದ ನಡೆದು ಬಂದ ಉತ್ತಮೋತ್ತಮ ಗುಣಗಳನ್ನೆಲ್ಲ ಅಳವಡಿಸಿಕೊಂಡು ರಸಿಕತೆ, ಸಹೃದಯತೆಗಳಿಂದ ಇನ್ನೊಬ್ಬರ ಸುಖ ದುಃಖಗಳಲ್ಲಿ ಕೂಡಲೆ ತನ್ಮಯರಾಗಿ ಬಿಡುವ ಪರಿಶುದ್ಧ ಭಾವದ ಪರಮ ಪಾವನಚರಿತರು ಕುಲೀನ ವೈಭವಶಾಲಿ ಕುಟುಂಬಗಳಲ್ಲಿ ಆಗ—ಈಗ ಒಮ್ಮೊಮ್ಮೆ ಕಾಣಿಸಿಕೊಳ್ಳುವುದು ಸರ್ವಕಾಲಿಕವಾದ ಸತ್ಯವಾಗಿದೆ. ಇಂತಹ ಪರಮೋದಾರರಿಗೆ ತಮ್ಮ ಸುತ್ತಲಿನ ಜನಸಾಮಾನ್ಯರ ಸಂಕಷ್ಟಗಳನ್ನು ಕಂಡು ಸಹನವಾಗದೆ ಅವರಿಗೆ ದಾರಿ ತೋರುವುದಕ್ಕಾಗಿ ಸುಸುಖ ನಿರಭಿಲಾಷಿಗಳಾಗಿ ತ್ಯಾಗಕ್ಕೆ ಅಣಿಯಾಗಬೇಕು. ಈ ಬಗೆಯಾದ ಶೀಲವಂತರಾದ ಉಳ್ಳವರ ತ್ಯಾಗದ ಮೂಲಕವಾಗಿಯೇ ಯತಿಪಂಥಕ್ಕೆ ಸಂನ್ಯಾಸ ಧರ್ಮಕ್ಕೆ ಲೋಕದಿಂದ ಮನ್ನಣೆ ದೊರೆತು ಅದು ಗೌರವಾಸ್ಪದವೆಂದು ಬಗೆಯಲ್ಪಟ್ಟಿತು. ಇದಕ್ಕೆ ವಿರುದ್ಧವಾಗಿ ಯಾವಾಗ ಕೈಲಾಗದ ಹೇಡಿಗಳು, ದರಿದ್ರರು ಸನ್ಯಾಸಿಗಳಾಗಹತ್ತುತ್ತಲೆ ಈ ಪಂಥದ ಮರ್ಯಾದೆ ಕಡಿಮೆಯಾಗುವುದನ್ನು ಈಗಲೂ ಮನಗಾಣಬಹುದಾಗಿದೆ.



ಪುರಾತನ ಭಾರತದಲ್ಲಿ ಸಂನ್ಯಾಸಪಂಥಕ್ಕೆ ರಾಜರೇ ಪುರಸ್ಕರ್ತೃಗಳಾಗಿದ್ದರೆಂಬುದಕ್ಕೆ ಐತಿಹಾಸಿಕ ಆಧಾರಗಳಿವೆ. ಉಪನಿಷತ್ತುಗಳ ತತ್ವಪ್ರಣಾಲಿಯು ಸಂನ್ಯಾಸಮಾರ್ಗದ್ದು. ಇದರ ಪ್ರತಿಪಾದಕರಲ್ಲಿ ರಾಜರೇ ಪ್ರಮುಖರಾಗಿದ್ದರೆಂಬುದಕ್ಕೆ ಜನಕನು ಇಂತಹರಲ್ಲಿ ಶ್ರೇಷ್ಠನೆನಿಸಿದ್ದಾನೆ. ಭರತನು ರಾಜನು; ಮುಂದೆ ಯತಿಯಾಗುತ್ತಾನೆಂಬ ಕತೆ ಜೈನ ಸಂಪ್ರದಾಯದಲ್ಲಿದೆ. ಯಯಾತಿ ರಾಜನಿಗೆ ಯತಿ ಎಂಬ ಬಂಧುವಿದ್ದನು. ಗೌತಮ ಬುದ್ಧನು ಈ ಪರಂಪರೆಯಲ್ಲಿ ಲೋಕವಿಖ್ಯಾತ ಒಂದು ನಿದರ್ಶನ. ಅಶೋಕನು ಇದೇ ದಾರಿಯಲ್ಲಿ ಸಾಗಿದ್ದನ್ನು ಇತಿಹಾಸವು ಹೇಳುತ್ತದೆ. ಚಂದ್ರಗುಪ್ತನೆಂಬ ರಾಜನು ಜೈನ ಯತಿಗಳೊಡನೆ ಉತ್ತರದಿಂದ ಶ್ರವಣಬೆಳುಗೊಳಕ್ಕೆ ಬಂದು ದಕ್ಷಿಣದಲ್ಲಿ ನೆಲಸಿದ ಕಥೆಯಿದೆ.

ಯಾಜ್ಞವಲ್ಕ್ಯನಂತಹ ಎಲ್ಲ ಬಗೆಯ ಐಹಿಕ ಸಂಪತ್ತನ್ನು ಪಡೆದ ಸ್ಥಿತಿವಂತರು ತಮ್ಮ ಜೀವನದ ಉತ್ತರಾರ್ಧದಲ್ಲಿ 'ಪರಿವ್ರಾಜಕ'ರಾಗಿ (ಸಂನ್ಯಾಸ ಧರ್ಮವನ್ನು ಸ್ವೀಕರಿಸಿ) ಸರ್ವಭೂತಹಿತ ಕಾರ್ಯದಲ್ಲಿ ಜೀವನವನ್ನು ಧಾರೆಯೆರೆದು ಹೊರಟುದನ್ನು ಉಪನಿಷತ್ತು ಹೇಳುತ್ತವೆ. ಈ ಬಗೆಯ 'ಸ್ಥಿತಿವಂತ'ರು,'ತಿರುಕ'(ಪರಿವ್ರಾಜಕ, ಜಂಗಮ)ರಾಗಿ ಲೋಕಹಿತಕ್ಕಾಗಿ ಭಿಕ್ಷಾವೃತ್ತಿಯಿಂದ ಜೀವಿಸುವ ಪರಿಪಾಠವಿದ್ದುದರಿಂದಲ್ಲದೆ, ಕೇವಲ ದರಿದ್ರ, ಕೈಲಾಗದ ನಿಃಸತ್ವ ಜೀವಿಗಳು ಯತಿಗಳಾಗುತ್ತಿದ್ದುದಾಗಿದ್ದರೆ ಸಮಾಜದಲ್ಲಿ ಅದಕ್ಕೆ ಮರ್ಯಾದೆಯು ಎಂದೂ ಪ್ರಾಪ್ತವಾಗುತ್ತಿದ್ದಿಲ್ಲ.

ಪಾರಲೌಕಿಕ ಸೌಖ್ಯಕ್ಕಾಗಿ ಯತಿಪಂಥವು ಹಂಬಲಿಸುತ್ತಿದ್ದಿತೆಂಬುದು ಅವರ ಇತ್ತೀಚೆಗಿನ ಆಚಾರ ವಿಚಾರಗಳಿಂದ ನಿಶ್ಚಿತವಾಗಿದೆ. ಆದರೆ ಮಾನವನ ವಿಚಾರ ವಿಕಾಸದ ಇತಿಹಾಸವನ್ನು ಅವಲೋಕಿಸಿದರೆ "ಇಹೈವ ತೈಃ ಜಿತಃ ಸರ್ಗಃ" ಎಂಬ ಪ್ರವೃತ್ತಿಯೇ ಅವರಲ್ಲಿ ಮೊಟ್ಟ ಮೊದಲಲ್ಲಿ ಇದ್ದಿತೆಂಬುದೂ ಅಷ್ಟೇ ನಿಶ್ಚಿತವಿದೆ. ಭೂಲೋಕದೊಳಗಿನ ನಿರಾಶೆಗಳು ಹೆಚ್ಚಾದಂತೆ ಪಾರಲೌಕಿಕ ವಿಚಾರಕ್ಕೆ ಪ್ರಾಶಸ್ತ್ಯವು ಬರತೊಡಗುತ್ತದೆ. 'ಇಲ್ಲಿಯೇ ಈ ಕ್ಷಣದಲ್ಲಿಯೇ ಸುಖದ ಪರಮಾವಧಿ'ಯನ್ನು ಕಂಡುಂಬ ಹಂಬಲವು ಮನುಷ್ಯಮಾತ್ರರಲ್ಲೆಲ್ಲ ಹುಟ್ಟನಿಂದ ಬಂದುದಾಗಿದೆ. ವಾಮಾಚಾರ ಶಾಕ್ತ ಪಂಥದಂತಹ ಅಸಂಸ್ಕೃತ ಪ್ರಾಕಾರಗಳು ಈ ಬಗೆಯ ಸುಖದ ಸಿದ್ಧಿಗಾಗಿ ಆದ ಪ್ರಾಥಮಿಕ ಪ್ರಯತ್ನಗಳೆನ್ನಬಹುದು. ಲಿಂಗ ಪಂಥವು ಇಂತಹ ಪ್ರಕಾರಗಳಲ್ಲಿಯೇ ಒಂದು.

ಈ ಉದಾಹರಣೆಗಳಿಂದ ಇಲ್ಲಿ ಸೂಚಿಸಬೇಕಾದುದೇನೆಂದರೆ, ಯತಿಪಂಥವು ಕೂಡ ಆರಂಭದಲ್ಲಿ ಯಾವುದೇ ಒಂದು ಐಹಿಕ........'ಭೂಮಾ ಸುಖ'ಕ್ಕಾಗಿಯೇ ಹೊರಟಿರಬೇಕೆ ವಿನಾ ಒಮ್ಮೆಲೆ ಪಾರಲೌಕಿಕ ವಿಚಾರಗಳೇ ಅದರ ಗುರಿಯಾಗಿರಲಿಲ್ಲ.

ಯತಿಪಂಥವು, ಸಮಾನ ಭಾವನೆಯ ಸ್ಥಾಪನೆಗಾಗಿ, ವೈಷಮ್ಯ ಬುದ್ಧಿಯನ್ನು ಹೊಡೆದು ಹಾಕಿ, 'ಸಮಂ ಪಶ್ಯತಿ ಸರ್ವತ್ರ' ಎಂಬ ದೃಷ್ಟಿಯನ್ನು ಜಗತ್ತಿಗೆಲ್ಲ ಕೊಡುವುದಕ್ಕೆ ಹೊರಟಿತು. 'ಸರ್ವಭೂತೇಷು ಚ ಆತ್ಮಾನಂ, ಸರ್ವಭೂತಾನಿ ಚ ಆತ್ಮನಿ' ಎಂಬ ತತ್ವವನ್ನು ಪ್ರತ್ಯಕ್ಷ ಆಚರಿಸಿ ಲೋಕದೊಳಗಿನ ದ್ವೇಷಾಸೂಯ ಭಾವ, ಸಿರಿವಂತ ಬಡವನೆಂಬ ವೈಷಮ್ಯ ಬುದ್ಧಿಯನ್ನೆಲ್ಲ ತೊಡೆದು ಹಾಕುವುದು ಯತಿಪಂಥದ ಗುರಿಯಾಗಿದೆ.

ಸಂಪೂರ್ಣ ಸ್ವಾತಂತ್ರ್ಯವು, ಯತಿಗಳು ಸಂಪಾದಿಸತಕ್ಕ ಸಿದ್ಧಿ. ಅದಕ್ಕೇ ಮೋಕ್ಷವೆಂಬ ಹೆಸರು ಮುಂದೆ ಬಂದಿತು. ಹೊರಗಣ ಕಟ್ಟು ಕಟ್ಟಳೆಗಳ ದಾಸ್ಯವನ್ನು ಯತಿಯು ಅರಿಯನು. ಅವನು ನಿರಂಕುಶನು, ಸರ್ವತಂತ್ರ ಸ್ವತಂತ್ರನು. ಇಂತಹರಿಗೆ 'ಅರಾಜಕ'ರೆಂಬ ಹೆಸರು ಇದ್ದಿತು. ಇವರು ಸ್ವಾರಾಟ್‌ವಾದಿಗಳು. ಅಂತರ್ವಾಣಿಯೇ ಇವರ ಅಂಕುಶ.

ಪುರಾತನ ಭಾರತೀಯ ಸಮಾಜದಲ್ಲಿ ಇಂತಹ ನಿರಂಕುಶ ಜೀವನದ ಹಲವು ಬಗೆಯ ಪ್ರಯೋಗಗಳು ಆದುದಕ್ಕೆ ಆಧಾರಗಳು ದೊರೆಯುತ್ತವೆ. ವೇದ ಮಂತ್ರಗಳಲ್ಲಿ "ಸ್ವಾರಾಜ್ಯಂ ವೈರಾಜ್ಯಂ...." ಎಂಬ ಉಗ್ಘಡಣೆಯಲ್ಲಿ ಉಲ್ಲೇಖಿತ ವೈರಾಜ್ಯವು ಏನು? ರಾಜನಿಲ್ಲದ ಸಂಘ; ಇದು ಪ್ರಜಾಪ್ರಭುತ್ವದ ಗಣರಾಜ್ಯವೂ ಇರಬಹುದು. ಆದರೆ 'ಸ್ವಾರಾಜ್ಯಂ' ಎಂಬುದು ಕೇವಲ ನಿರಂಕುಶ ಪ್ರಭುಗಳ ಗುಂಪು ಎಂಬಲ್ಲಿ ಸಂದೇಹವಿಲ್ಲ. ಏಕೆಂದರೆ ಇವರೆಲ್ಲ ಸ್ವ-ರಾಟ್‌ರು!

ಮಹಾಭಾರತ ಶಾಂತಿಪರ್ವದಲ್ಲಿ ಅರಾಜಕರ ವಿಚಾರವು ಬಂದಿದೆ; ಅದರ ವರ್ಣನೆಯು ಹೀಗಿದೆ:

ಯಥಾ ರಾಜ್ಯಂ ಸಮುತ್ಪನ್ನಂ ಆದೌ
ಕೃತಯುಗೇಽಭವತ್ ||
ನೈವರಾಜ್ಯನ್ನ ರಾಜಸೋನ್ನ ಚ ದಂಡೋ ನ ದಂಡಿಕಃ |
ಧರ್ಮೇಣೈವ ಪ್ರಜಾಃ ಸರ್ವಾ ರಕ್ಷಂತಿ ಸ್ಮ ಪರಸ್ಪರಮ್ |
ಪಾಲ್ಯಮಾನಾಸ್ತಥಾಽನ್ಯೋನ್ಯಂ ನರಾ ಧರ್ಮೇಣ ಭಾರತ ||

ಕೃತಯುಗದಲ್ಲಿ ರಾಜನಿಲ್ಲದೆ, ಹೊರಗಣ ಯಾವ ದಂಡನಾಯಕನಿಲ್ಲದೆ ಪ್ರಜಗಳು ಧರ್ಮದಿಂದ ಒಳ್ಳೆದರಾಗಿ ನಡೆದುಕೊಳ್ಳುತಿದ್ದರು. ಆದರೆ "ಲೋಭಸ್ಯ ವಶಮಾಪನ್ನಾಃ ಸರ್ವೇ" ನಷ್ಟರಾದರೆಂದು ಅಲ್ಲಿ ವರ್ಣನೆಯಿದೆ.

ತೀರ ಆರಂಭ ಆದರ್ಶವಾದವು ಜಗತ್ತಿನಲ್ಲಿ ಎಲ್ಲೆಡೆಗೂ ಇದೇ ತೆರನಾದ 'ಅರಾಜಕ' ನಿರಂಕುಶ ಪ್ರವೃತ್ತಿಯದೇ ಆಗಿದ್ದಿತೆಂದು ಸಮಾಜ ಮಾನಸ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ.

ಆದರೆ ನಮ್ಮ ದೇಶದಲ್ಲಿ ಉಲ್ಲೇಖಿತವಿರುವ ಈ ಬಗೆಯ ಆದರ್ಶವಾದಿಗಳ ನಿರಂಕುಶ ಸಂಘವು ಸಾಂಸ್ಕೃತಿಕ ಕೆಲವೊಂದು ಉಚ್ಚಮಟ್ಟದಲ್ಲಿದ್ದಿತು. ನಿರಂಕುಶವಾದವು ಅನೇಕ ಕಾರಣಗಳಿಂದ ಅವ್ಯವಹಾರ್ಯವೆಂದು ಮನವರಿಕೆಯಾದ ಹಾಗೆ ವೈರಾಜ್ಯ ಘಟನೆಯ ಗಣರಾಜ್ಯಗಳು ಎಂದರೆ ಸಾಮೂಹಿಕ ಆಡಳಿತದ ಪ್ರಜಾಪ್ರಭುತ್ವದ ಸಂಘಗಳು ಅಸ್ತಿತ್ವದಲ್ಲಿ ಬಂದುವು. ೪—೫ನೆಯ ಶತಮಾನದಲ್ಲಿ ಗುಪ್ತರ ಕಾಲದವರೆಗೂ ಗಣರಾಜ್ಯಗಳು ನಮ್ಮ ದೇಶದಲ್ಲಿ ತಲೆಯೆತ್ತಿ ಮೆರೆದಿವೆ. ಅಲೆಕ್ಝಾಂಡರನಿಗೆ ವಿರೋಧಿಸಿದವರಲ್ಲಿ ಗಣರಾಜ್ಯದವರೇ ಹೆಚ್ಚು ಬಲಾಢ್ಯರಾಗಿದ್ದರೆಂದು ಗ್ರೀಕ್ ಇತಿಹಾಸಕಾರರು ನಿಃಸಂಕೋಚವಾಗಿ ಒಪ್ಪಿಕೊಂಡಿದ್ದಾರೆ. ಇಂತಹ ಪ್ರಜಾರಾಜ್ಯದ ನಾಣ್ಯಗಳು ದೊರೆತಿವೆ. ಅವುಗಳ ಮೇಲೆ "ಯೌಧೇಯ ಗಣಕ್ಕೆ ಜಯವಾಗಲಿ" ಎಂಬೀ ತೆರನಾಗಿ ಮುದ್ರಿಕೆಗಳಿವೆ. ಗುಪ್ತ ಕಾಲದ ಗಣರಾಜ್ಯಗಳಲ್ಲಿ '**ಪರಿವ್ರಾಜಕ**'ರ ರಾಜ್ಯವೂ ಒಂದಿದ್ದುದನ್ನು ಈ ಸಂದರ್ಭದಲ್ಲಿ ನೆನೆದುಕೊಳ್ಳಬೇಕು; ಎಂದರೆ ಯತಿಗಳು ಮೂಲದಲ್ಲಿ ನಿವೃತ್ತಿಮಾರ್ಗದವರೆಂಬ ಗ್ರಹಿಕೆಯನ್ನು ತಿದ್ದಿಕೊಳ್ಳಲು ಸಹಾಯವಾದೀತು. ತ್ಯಾಗದ ಆದರ್ಶವನ್ನಿಟ್ಟುಕೊಂಡು ಸರ್ವಸಮತ್ವಭಾವನೆಯಿಂದ ಸಮಾಜವನ್ನು ಕಟ್ಟುವುದೇ ಯತಿಪಂಥದ ಮೂಲೋದ್ದೇಶವಾಗಿರಬೇಕೆಂದು ಇದರಿಂದ ಊಹಿಸಬಹುದಾಗಿದೆ.

ಭಗವಾನ್ ಗೌತಮ ಬುದ್ಧನು ಸ್ಥಾಪಿಸಿದ ಸಂಘಗಳು ಸಮತಾವಾದದ ಆದರ್ಶವನ್ನೇ ಇಟ್ಟುಕೊಂಡ ಸಾಮೂಹಿಕ ಆಡಳಿತಕ್ಕೆ ಒಳಪಟ್ಟ ಸಂಸ್ಥೆಗಳಾಗಿದ್ದುವು. ಅಲ್ಲಿ ವೈಯಕ್ತಿಕ ಆಸ್ತಿ ಪಾಸ್ತಿಗಳಿಗೆ ಇಂಬು ಇದ್ದಿಲ್ಲ. ಸಂಘದ ಒಡೆತನಕ್ಕೆ ಎಲ್ಲವೂ ಸೇರಿದುದು. ಕ್ರಿಸ್ತಾಬ್ದಕ್ಕೆ ಮೊದಲೇ ನಾಲ್ಕು ನೂರು ವರುಷ ಭಾರತದಲ್ಲಿ ಆದ ಈ ಸಂಘ(commune)ವು ರಶಿಯದ ಕಮ್ಯುನಿಸ್ಟ ಮುಂದಾಳುಗಳಲ್ಲಿ ತುಂಬ ಕುತೂಹಲವನ್ನುಂಟುಮಾಡಿದೆ. ಅಲ್ಲಿಯ ವಿಶ್ವವಿದ್ಯಾನಿಲಯಗಳಲ್ಲಿ ಇತ್ತೀಚೆಗೆ ಬೌದ್ಧ ಧರ್ಮದ ಸಂಶೋಧನೆಗೆ ಈ ಕಾರಣದಿಂದಲೇ ವಿಶೇಷ ಮಹತ್ವವು ಪ್ರಾಪ್ತವಾಗಿದೆ.

ಭಾರತದಲ್ಲಿ ಸಮತಾವಾದವನ್ನು ಸ್ಥಾಪಿಸಲು ಆದ ಪ್ರಯತ್ನಗಳ ರೀತಿಗೂ ಯುರೋಪದೊಳಗಿನ ರಶಿಯದ ಪದ್ಧತಿಗೂ ವಿಪರೀತ ಭೇದವಿದೆ. ಭಾರತದೊಳಗಿನ ಸಮತಾವಾದವು ಸಿರಿವಂತರೊಳಗಿನ ಪರಮ ಕಾರುಣಿಕ ವರ್ಗದಿಂದ ಆರಂಭವಾಯ್ತು. ಆದರೆ ಯುರೋಪಿನಲ್ಲಿ ಹೊಟ್ಟೆಗಿಲ್ಲದೆ ರೊಚ್ಚಿಗೆದ್ದು ತಮ್ಮ ಹೊಟ್ಟೆಯ ಕಿಚ್ಚಿನ ಉರಿಯಿಂದ ಬೆಂದು ಪಿತ್ತ ನೆತ್ತಿಗೇರಿದ ವರ್ಗದಿಂದ ಅದಕ್ಕೆ ಚಾಲನೆ ದೊರೆತಿತು. ಅಲ್ಲಿಯ ಈ ತತ್ವ ಪ್ರಣೋತಾರನಾದ ಮಾರ್ಕ್ಸ್‌ನ ಬಡತನದ ಭವಣೆಯನ್ನು ವರ್ಣಿಸಲು ಶಕ್ಯವಿಲ್ಲ. ಮಾರ್ಕ್ಸ್‌ನು ಸಿರಿವಂತರ ಸ್ವಾರ್ಥಲಾಲಸೆಯಿಂದ ಕದಡಿದ ಮನಸ್ಸಿನವನಾಗಿ ಅವರಿಗೆ ಬುದ್ಧಿಗಲಿಸಲು ದೊಂಬಿಯೇಳುವುದಕ್ಕೆ ಬಡವರಿಗೆಲ್ಲ ಬೋಧಿಸಿದನು. ಅತ್ಯಾಚಾರಗಳಿಗೆ ಪ್ರೇರಿಸಿದನು! ಆದರೆ ಭಾರತೀಯ ಸಂಸ್ಕೃತಿಯಲ್ಲಿ ಬೆಳೆದ ಬ್ಯಾರಿಸ್ಟರ ಗಾಂಧಿಯವರು ಬಡವರ ಉದ್ಧಾರಕ್ಕಾಗಿ ತಮ್ಮ ಲಕ್ಷಾವಧಿ ರೂಪಾಯಿ ಬೆಲೆಯ ಸಂಪತ್ತನ್ನು ದಾನವಾಗಿ ಕೊಟ್ಟು ತ್ಯಾಗಮಾರ್ಗವನ್ನವಲಂಬಿಸಿ ಆಧುನಿಕ ಕಾಲದಲ್ಲಿ ಲೋಕಕ್ಕೆಲ್ಲ ಮತ್ತೆ ಆ ಪುರಾತನ ಯತಿಪಂಥದ ಮೇಲ್ಪಂಕ್ತಿಯನ್ನು ಹಾಕಿಕೊಟ್ಟದ್ದನ್ನು ಮರೆಯಲಿಕ್ಕಾಗದು.

ಸಮಾಜಕ್ಕೆ ಸುಖಶಾಂತಿಗಳು ದೊರೆಯುವುದೇ ಸಮಾಜ ಸಮತಾವಾದ(ಕಮ್ಯೂನಿಝಂ)ದ ಗುರಿಯಾಗಿದ್ದರೆ, ಸಮಾಜದಲ್ಲಿ ವರ್ಗಕಲಹವನ್ನು ನಿರ್ಮಿಸಿ, ಒಂದು ಗುಂಪಿನ ವಿರುದ್ಧ ಒಂದು ಗುಂಪಿನಲ್ಲಿ ದ್ವೇಷಾಸೂಯೆಗಳ ಪ್ರಚಾರ ಮಾಡಿ ಸುಖಶಾಂತಿಯು ಹೇಗೆ ಬರುವುದು ಸಾಧ್ಯ? ಕೊಲೆ ಸುಲಿಗೆಗಳಿಂದ ತಮ್ಮ ಪಕ್ಷದ ಪ್ರಭುತ್ವವನ್ನು ಸ್ಥಾಪಿಸಿದವರು ಮುಂದೆ ಒಮ್ಮೆಲೆ ಸಜ್ಜನಿಕೆಯಿಂದ ನಡೆದುಕೊಳ್ಳುವರೆಂದು ಭಾವಿಸುವುದು ವಿಪರೀತವಲ್ಲವೆ? ಪ್ರಜೆಗಳ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ನೆಪೋಲಿಯನ್ನನು ತಾನೇ ರಾಜನಾದ; ಕ್ರಾಮವೆಲ್ಲನಿಗೂ ಹಾಗೆಯೆ ಬುದ್ಧಿ ಕೆಟ್ಟಿತು. ಇಂದು ಸ್ಟಾಲಿನ್‌ನು ಇಪ್ಪತ್ತು ವರುಷಗಳಾದರೂ ತನ್ನ ಗುಂಪಿನವರ ಬೆಂಬಲದಿಂದ ತಾನೇ ಸರ್ವಾಧಿಕಾರಿಯಾಗಿ ಮೆರೆಯುತ್ತಿದ್ದಾನೆ.

ದ್ವೇಷಾಸೂಯೆಗಳ ಪ್ರಚಾರವು ಬಹಳ ಸುಲಭವಾಗಿ ಆಗುತ್ತದೆ. ಆದರಿಂದ ಇಂದಿನ ಸಮತಾವಾದದ ಬೇಗೆಯು ಹಬ್ಬುತ್ತಿರುವುದು ಎಲ್ಲೆಲ್ಲೂ ಕಾಣಬರುವುದು. ಆದರೆ ಈ ಬಗೆಯಾದ ವಿಧ್ವಂಸಕ ಮಾರ್ಗದಿಂದ ಸಮತಾಭಾವದ ಬದಲು ವಿಷಮ ಭಾವನೆಯೇ ಬೆಳೆದುಬಿಡುವುದು. ಮತ್ತೆ ಸಾಮಾನ್ಯ ಜನವು ಸುಖದಿಂದ ದೂರವಾಗಿಯೇ ಬೆಳೆಯುವುದು. ಜನತೆಯ ಕ್ರಾಂತಿಯೆಂದು ಮೊದಲು ಗುರಿಯಿತ್ತು. ಈಗಣ ಸೈನಿಕರ ಸಹಾಯದಿಂದ ತೋಪು ತುಬಾಕಿಗರ ನೆರವಿಂದ ಪಡೆವ ಗೆಲುವು ಜನಸಾಮಾನ್ಯರ ಶಕ್ತಿಯನ್ನು ಹೆಚ್ಚಿಸುವ ಬದಲು ಸೇನಾಪತಿಗರ ಕೈಯಲ್ಲಿಯೇ ಸರ್ವಾಧಿಕಾರವು ಹೋಗುತ್ತಿರುವ ಭಯಾವಹವಾದ ದೃಶ್ಯವು ಎಲ್ಲೆಲ್ಲೂ ಕಣ್ಣಿಗೆ ಬೀಳುತ್ತಿದೆ. ಆದುದರಿಂದ ಲೋಕದಲ್ಲಿ ಸಮತಾವಾದವನ್ನು ಪ್ರಸ್ಥಾಪಿಸಲು ಆಸುರೀ ಉಪಾಯಗಳು ನಿರುಪಯುಕ್ತವೆಂದೂ ವಿಪರೀತ ಪರಿಣಾಮಕಾರಿಯೆಂದೂ ಅನುಭವಬಂದಂತಾಗಿದೆ. ಈ ಉಪಾಯಗಳ ಸಾಧನೆಯಿಂದ ಎಲ್ಲರ ಕಲ್ಯಾಣವೆಂಬ ಸಿದ್ಧಿಯೇ ಅಸಾಧ್ಯವೆಂದು ಸಮಂಜಸರಾದವರು ಯಾರೆ ಆಗಲಿ ಒಪ್ಪತಕ್ಕ ಮಾತಾಗಿದೆ. "ಔಷಧವೆಂದು ಮದ್ಯ ಕುಡಿಯಹತ್ತಿ ಬಳಿಕ ಮದ್ಯಕ್ಕಾಗಿ ಔಷಧ ಸೇವಿಸುವ ಹೊತ್ತು ಬಂದಂತೆ" ಆಗುವುದು ಮನಗಂಡ ಮಾತಾಗಿದೆ.

ಈ ಕಾರಣದಿಂದಲೇ ಸಾಧನ ಶುದ್ಧಿಗೆ ವಿಶೇಷ ಮಹತ್ವವು ಪ್ರಾಪ್ತವಾಗಿದೆ. ಅಶಾಂತಿಯನ್ನುಂಟುಮಾಡುವ ಸಾಧನಗಳಿಂದ ಶಾಂತಿ ದೊರೆಯದು. "ಅಕ್ರೋಧೇನ ಜಯೇತ್ ಕ್ರೋಧಮ್" ಎಂದು ಬುದ್ಧದೇವನು ಹೇಳಿದ ಉಪಾಯವೇ ಮಿಗಿಲಾದ ಸಾಧನವಾಗಿದೆ. ಸಮತಾವಾದದ ಹೆಸರಿನಲ್ಲಿ ಧೂಪಹಾಕಿ ಎಬ್ಬಿಸಿದ ರಾಗದ್ವೇಷ ಅಸೂಯಾದಿ ದುರ್ಭಾವಗಳ ಭೂತವು ಬಡಕೊಂಡ ವ್ಯಕ್ತಿಗಳು ಮುಂದೆ ಸಜ್ಜನರೆಂಬ ಹೆಸರಿಗೆ ಕೂಡ ಅನರ್ಹರಾಗುವಂತಹ ನಡೆವಳಿಯುವರಾಗುತ್ತಾರೆ. ೧೯೪೨ರ ಚಳವಳಿಯಲ್ಲಿ ಅನಾಚಾರಕ್ಕೆ ಸವಿಗಲಿ ದೇಶಭಕ್ತರು ಹಲವರು ದೇಶಭಕ್ಷಕರಂತಾಗಿ ವರ್ತಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಬುದ್ಧನು ದೇವರ ಹೆಸರನ್ನು ಎತ್ತಿ ಹಾಗೆ ನಡೆಯಿರಿ, ಹೀಗೆ ನಡೆಯಿರೆಂದು ಉಪದೇಶಿಸುವ ಗೋಜಿಗೆ ಹೋಗಿಲ್ಲ. ಲೋಕದ ದುಃಖಗಳನ್ನು ಕಂಡು ಮಮ್ಮಲನೆ ಮರುಗಿ ಆತನ ಹೃದಯವು ಪ್ರೀತಿ-ದಯಾ-ಕರುಣೆಗಳಿಂದ ತುಂಬಿಬಂತು. ಈ ಸದ್ಭಾವಗಳ ಹಿನ್ನೆಲೆಯಿಲ್ಲದ ಜನರಿಂದ ಯಾರಿಂದಲೂ ನಿಜವಾದ ಲೋಕಕಲ್ಯಾಣವಾಗದು. ಸಮತಾಭಾವವು ಸಿದ್ಧಿಸದು.

ಯತಿಪಂಥವು ಈ ಬಗೆಯ ಉದಾತ್ತ ಆದರ್ಶವನ್ನು ಲೋಕಕ್ಕೆ ಹೇಳಿಕೊಟ್ಟಿದೆ. ಸತ್ಯ, ಪ್ರೀತಿ, ಸರ್ವ ಸಮತ್ವ ಭಾವ ಸಿದ್ಧಿಗಾಗಿ ಪರನಿಂದೆ, ದ್ವೇಷಾದಿ ಹಿಂಸಾಚಾರಗಳು ತ್ಯಾಜ್ಯವೆಂದು ಬೇರೆ ಹೇಳಬೇಕಾಗಿಲ್ಲ. ಇಂತಹ ಪರಮೋದಾರ ಮಾರ್ಗದಿಂದ ನಡೆದು ಲೋಕಕಲ್ಯಾಣವನ್ನು ಸಾಧಿಸಲು ಬುದ್ಧದೇವನು ಭಿಕ್ಷುಸಂಘವನ್ನು ಸ್ಥಾಪಿಸಿದನು. ದೇಶ, ಜಾತಿ, ಮತ, ಕುಲಗಳ ಅತೀತವಾಗಿರುವಂತೆ ಯತ್ನಿಸಿದನು. ಆದರೆ ತ್ಯಾಗದ ವಿಪರೀತ ಕಲ್ಪನೆಗಳಿಂದ ಈ ಪ್ರಯತ್ನಕ್ಕೆ ಯಶಸ್ಸು ದೊರೆಯಲಿಲ್ಲ. ಯತಿಪಂಥವು ತನ್ನ ವಿಶುದ್ಧಾಚರಣೆ ಲೋಕಸೇವೆಗಳಿಂದ ಕಾಲಕಾಲಕ್ಕೆ ಸಮಾಜವನ್ನು ಮೇಲಕ್ಕೆತ್ತುವ ಮಹಾಕಾರ್ಯವನ್ನು ಮಾಡುತ್ತಲೆ ಬಂದಿದೆ. ಇಂತಹ ಅಪೂರ್ವವಾದ ಮಹಾಕಾರ್ಯಕ್ಕಾಗಿ ಜನವು ಕೃತಜ್ಞತೆಯಿಂದ ಆಯಾ ಯತಿಪೀಠಗಳಿಗೆ ತಮ್ಮ ಗುರುಸ್ಥಾನದಲ್ಲಿ ಕಲ್ಪಿಸಿ ಅವರಿಗೆ ಸರ್ವಾರ್ಪಣ ಮಾಡಿದ್ದೂ ಉಂಟು. ಆದರೆ ಆ ಪೀಠಗಳ ಮುಂದಿನ ಪೀಳಿಗೆಯ ಯತಿಗಳು ಆದರದಿಂದ ತಲೆವಾಗಿದ ಜನಗಳ ತಲೆ ಮೆಟ್ಟಿ ನಿಂತು ಅಧಿಕಾರಮದದಿಂದ ಅನಾಚಾರಿಗಳಾಗುತ್ತ ನಡೆದುದು ಕಂಡುಬರುತ್ತದೆ. ತ್ಯಾಗ ಸೇವೆಗಳ ಆಗರವಾಗಿರಬೇಕಾದ ಮಠಗಳು ಭೋಗವಿಲಾಸಗಳ ಕೇಂದ್ರಗಳಾದುದು ಕಂಡುಬರುತ್ತದೆ. ತಮ್ಮ ಪೀಠದ ಅಧಿಕಾರ ದರ್ಪದಿಂದ ಜನರನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳಬೇಕೆಂಬ ವ್ಯಾಮೋಹವು ಇಲ್ಲದ ಪೀಠಗಳೇ ದೊರೆಯವು.

ಮಾರ್ಕ್ಸ್ ಪ್ರಣೀತ ಮೇಲಿನ ಪೀಠದ ಗತಿಯೂ ಇದೇ ಆಗುತ್ತಲಿದೆ. ಸ್ಟಾಲಿನನ ಅಧಿಕಾರದರ್ಪಕ್ಕೆ ಆತನ ಸಂಗಡಿಗರು ಆಹುತಿಯಾದರು. ಸಮಾನಸ್ಕಂಧರು ಯಾರೂ ಹತ್ತಿರ ಉಳಿಯಲಿಲ್ಲ. "ಎಂದುದನೆ ಎಂಬ ಬಾಳ್ವ" ಅನುಯಾಯಿಗಳಿಗಲ್ಲದೆ ಬೇರೆಯವರಿಗೆ ಅಲ್ಲಿ ಉಸಿರಾಡಲಿಕ್ಕೂ ಸಾಧ್ಯವಿಲ್ಲ. ಫಿನ್‌ಲಂಡ, ಪೋಲಂಡ, ಇಸ್ತೋನಿಯಾ ಮೊದಲಾದ ಸಣ್ಣ ರಾಷ್ಟ್ರಗಳ ಸ್ವಾತಂತ್ರ್ಯ ನಷ್ಟವಾಯ್ತು. ದೇಶದಲ್ಲಿ ವ್ಯಕ್ತಿ ಸ್ವಾತಂತ್ರ್ಯವೆಂಬುದು ಉಳಿದಿಲ್ಲ. ಸ್ವತಂತ್ರ ವಿಚಾರಕ್ಕೆ ಉತ್ತೇಜನವಿಲ್ಲ. ಈ ವಿಷಯಕ್ಕೆ ಸಂದೇಹಪಟ್ಟುಕೊಂಬು

ಗಯಟೆ ಕವಿಯ ಜೀವನೋದ್ದೇಶ

(ಲೇಖಕರು: ಶ್ರೀ ಎಸ್. ಪ್ರಹ್ಲಾದರಾವ್, ಎಮ್. ಎ.,
ಅಧ್ಯಾಪಕರು: ಇಂಟರ್‌ಮಿಡಿಯೆಟ್ ಕೊಲೇಜು,
ಚಿಕ್ಕಮಗಳೂರು.)

೧೯೪೯ನೆಯ ವರ್ಷ ಗಯಟೆ ಮಹಾಕವಿಯ ದ್ವಿ-ಶತಮಾನ ಮಹೋತ್ಸವವನ್ನು ಪ್ರಪಂಚದ ನಾನಾ ಭಾಗಗಳಲ್ಲಿ ಬಹು ವಿಜೃಂಭಣೆಯಿಂದ ಆಚರಿಸಲಾಯಿತಷ್ಟೆ. ಆ ಮಹಾ ಪುರುಷನು ಹುಟ್ಟಿದುದು ೧೭೪೯ರಲ್ಲಿ. ಫ್ರಾಂಕ್ ಫರ್ಟ್ ಆನ್ ಮೇನ್ ಎಂಬ ಊರಿನಲ್ಲಿ. ಆತ ನಮ್ಮನ್ನು ಅಗಲಿ ಹೋಗಿ ಎರಡು ನೂರು ವರ್ಷಗಳಾಗಿದ್ದರೂ ಅವನು ತನ್ನ ಕೃತಿಗಳ ಮೂಲಕ ನಮಗೆ ಬಿಟ್ಟುಹೋಗಿರುವ ಸಂದೇಶವು ಮಾರ್ಗದರ್ಶಕವಾಗಿ ಇಂದಿಗೂ ನಿಲ್ಲಬಲ್ಲುದು. ದ್ರೋಹ, ಮೋಸ, ವೈಮನಸ್ಯ, ಆಡಂಬರ, ಅನೀತಿಗಳು ತಾಂಡವವಾಡುತ್ತಿರುವ ಈ ಶತಮಾನದ ಜೀವನಕ್ಕೆ ಅವನ ಸಂದೇಶ ಅತ್ಯುತ್ತಮವಾದ ಔಷಧ. ವಿಶ್ವದ ಸಂಸ್ಕೃತಿ ಮತ್ತು ನಾಗರಿಕತೆಯ ಉಳಿವಿಗಾಗಿ ನಾವು ಅವನ ಬುದ್ಧಿಮಾತನ್ನು ಕೇಳಬೇಕಾದುದು ಅತ್ಯಗತ್ಯ. ವಿಜ್ಞಾನದಿಂದ ಯುದ್ಧ. ಅತಿ ಆಶೆಯಿಂದ ಜಗಳ. ಹೀಗೆ ಹರಿದು ಹಂಚಿ ಹೋಗುತ್ತಿರುವ ಜನತೆಗೆ ಅವನದು ಅಮೃತವಾಣಿ.

ಗಯಟೆ ಮಹಾಕವಿ. ವಿಶ್ವಕವಿಗಳ ವಿರಳ ಪಂಕ್ತಿಯಲ್ಲಿ ಅವನಿಗೂ ಒಂದು ಸ್ಥಳ ಏರ್ಪಟ್ಟಿದೆ. ಪ್ರತಿಭೆ ಒಂದು ದೇಶದ್ದಲ್ಲ. ವ್ಯಾಸ ವಾಲ್ಮೀಕಿಗಳು, ಷೇಕ್ಸ್‌ಪಿಯರ್ ಮಿಲ್ಟನ್ನರು, ಕಾಳಿದಾಸ ಭಾಸರು, ಹೋಮರ್ ಮತ್ತು ಡ್ಯಾಂಟೆ— ಇವರೆಲ್ಲ ಒಂದು ದೇಶದವರಲ್ಲ, ಒಂದು ಜನಾಂಗದವರಲ್ಲ. ಒಂದು ಕಾಲದವರಲ್ಲ. ಅವರೆಲ್ಲ ವಿಶ್ವಕವಿಗಳು. ವಿಶ್ವಪ್ರೇಮಿಗಳು. ಅವರ ಕಾವ್ಯಶ್ರೀ ಕಾಲದೇಶಗಳ ಎಲ್ಲೆಯನ್ನು ಮೀರಿ ನಿಂತಿವೆ. ಗಯಟೆಯ ಕೃತಿಗಳಲ್ಲಿ ಮುಖ್ಯವಾಗಿ ವರ್ಥರ್ (Werther) ಮತ್ತು ಫಾಸ್ಟ್ (Faust) ಇವು ಅನೇಕಾನೇಕ ಭಾಷೆಗಳಲ್ಲಿ ಅನುವಾದಿತವಾಗಿ ವಿಶ್ವ ಸಾಹಿತ್ಯದ ರತ್ನಗಳಾಗಿ ಬೆಳಗುತ್ತಿವೆ. ಆ ಮಹಾ ಕವಿಯ ಕೃತಿಗಳನ್ನು ಪರಿಶೀಲಿಸಿದಲ್ಲಿ ಅವನ ಜೀವನೋದ್ದೇಶ ಎಷ್ಟು ಘನವಾದುದು ಎಂದು ಸುಲಭವಾಗಿ ತಿಳಿಯಬಹುದು.

ಕೃತಿ ಕವಿ ಹೃದಯದ ಪ್ರಕೃತಿ. ಒಂದು ಸದ್ಗ್ರಂಥ ಕವಿಯ ಜೀವನದ ಅಂತರಾಳದಿಂದ ಹೊರಬಿದ್ದು, ಅದರ ಸಾರ ಸರ್ವಸ್ವವನ್ನು ನಮಗೆ ತಿಳಿಸುತ್ತದೆ. ಗಯಟೆಯ ಪತ್ರಗಳು, ಸಂಭಾಷಣೆಗಳು, ನಾಟಕ ಮತ್ತು ಇತರ ಕೃತಿ

ವವರು ರಶಿಯದಿಂದ ನಮ್ಮ ದೇಶಕ್ಕೆ "ಶಂಕರ್ಸ್ ವೀಕ್ಲಿ", 'ಬ್ಲಿಟ್ಝ್'ಗಳಂತಹ ಉಗ್ರ ಟೀಕೆಯ ಸರಕಾರಿ ವಿರೋಧಿ ಪಕ್ಷದ ಒಂದಾದರೂ ಪತ್ರಿಕೆಯು ಬರುತ್ತಿದೆಯೆ ನೋಡಿ ಕೊಳ್ಳಲಿ! ಇಂತಹರಿಗೆ ಸೈಬೀರಿಯದ ಅರಣ್ಯದ ಸೆರೆಮನೆಯೇ ಗತಿ ಆ ನಾಡಿನಲ್ಲಿ. ಸ್ಟಾಲಿನ್‌ನಿಗೆ ಸಂಗಡಿಗರನ್ನು ಇನ್ನು ಸಂಹರಿಸುವುದು ಸಾಕು, ಎಂದು ಸೂಚ್ಯವಾಗಿ ಹೇಳಿದ ಆತನ ಹೆಂಡತಿ, ಮುಂದೆ ಒಂದು ವಾರದಲ್ಲಿಯೇ ಪರಲೋಕವಾಸಿಯಾಗುತ್ತಾಳೆ! ಒಮ್ಮೆ ಅಧಿಕಾರಸ್ಥಾನದಲ್ಲಿ ಬರುತ್ತಲೆ ಅದರ ಹುಚ್ಚು ತಲೆಗೆ ಏರುತ್ತದೆ. ಹಿಂಸಾಚಾರಗಳನ್ನು ತ್ಯಾಜ್ಯವೆಂದು ನಿರ್ಧರಿಸದೆ ಇರುವುದರಿಂದ ಕ್ರೂರ ಕೃತಿಗಳಿಗೆ ಮೇರೆಯೆ ಉಳಿಯುವುದಿಲ್ಲ.

೨೫೦೦ ವರುಷಗಳ ಮೊದಲು ಬುದ್ಧದೇವನು ಯತಿಪಂಥದ ಮೂಲಕ ಲೋಕದಲ್ಲಿ ಸಮತಾವಾದವನ್ನು ಸ್ಥಾಪಿಸಲು ಮಾಡಿದ ಒಂದು ಪ್ರಯೋಗವನ್ನು ರಶಿಯದಲ್ಲಿ ಇನ್ನೊಂದು ಬಗೆಯಿಂದ ಮಾಡಿ ನೋಡಿದ್ದಾಯ್ತು. ಆದರೆ ಅದೂ ಈಗ ವಿಕೃತರೂಪ ತಾಳಿ ಸಾಮ್ರಾಜ್ಯವಾದದ ಕಡೆಗೆ ಒಲಿಯುತ್ತಿದೆ.

ಇಂತಹ ಕಾಲದಲ್ಲಿ ಆಧುನಿಕ ಯತಿವರ್ಯರಾದ ಮಹಾತ್ಮಾ ಗಾಂಧಿಯವರು ಸತ್ಯ ಅಹಿಂಸೆಗಳ ಮೂಲಕ ಸಮತಾವಾದವನ್ನು ಸ್ಥಾಪಿಸುವುದಕ್ಕಾಗಿ ಪುರಾತನ ಭಾರತೀಯರು ಮಾಡಿದ ಪ್ರಯೋಗವನ್ನೆ ಆಧುನಿಕ ರೀತಿಯಲ್ಲಿ ಆರಂಭಿಸಿ ಜಾಗತಿಕ ಮನ್ನಣೆಯನ್ನು ಪಡೆದಿರುವರು. ನಮ್ಮ ನಾಡಿನ ಯತಿಪೀಠಗಳು ಬೇಗನೆ ಕಣ್ದೆರೆದು ಯತಿಪಂಥದ ತ್ಯಾಗ, ಸತ್ಯ, ಅಹಿಂಸೆ, ಪ್ರೀತಿಯ ಆದರ್ಶಗಳನ್ನು ಅದಕ್ಕೆ ಜೋಡಿಸಿದರೆ ಈ ಬಗೆಯ ಸಮನ್ವಯದಿಂದಲೇ ನಿಜವಾದ ಜಾಗತಿಕ ಸಮತಾವಾದವು ಆಚರಣೆಯಲ್ಲಿ ಬರಲು ಶಕ್ಯವಿದೆ. ಆಧುನಿಕ ಕಾಲದಲ್ಲಿ ನಮ್ಮ ಯತಿಪಂಥದ ಆದ್ಯಕರ್ತವ್ಯವು ಇದೇ ಆಗಿದೆಯಲ್ಲದೆ ಬೇರೆ ಯಾವದೂ ಅಲ್ಲ. ಏಕೆಂದರೆ ಅದರ ತ್ಯಾಗ, ಸತ್ಯಭಕ್ತಿ, ಅಹಿಂಸೆಗಳಿಗೆ ಲೋಕಕಲ್ಯಾಣವಲ್ಲದೆ ಬೇರಿನ್ನಾವ ಸಾರ್ಥಕ್ಯ? ಲೋಕಾಃ ಸಮಸ್ತಾಃ ಸುಖಿನೋ ಭವಂತು!

ಅನಂತ ಚತುರ್ದಶಿ, ೨೫-೯-'೫೦. **ಶಂ. ಬಾ. ಜೋಶಿ.**

ಗಳು, ಮತ್ತು ಅವನ ವಿಚಾರವಾಗಿ ಇತರರು ನೀಡಿರುವ ಸುದ್ದಿ ಸಮಾಚಾರಗಳು–ಇವೆಲ್ಲದರಲ್ಲಿಯೂ ಅವನ ಬೃಹದ್ ವ್ಯಕ್ತಿತ್ವ ಪ್ರತಿಬಿಂಬಿತವಾಗಿದೆ. ಅವನ ಜೀವನ ಒಂದು ದೊಡ್ಡ ಗಣಿ ಇದ್ದಂತೆ. ಅಗೆದು ನೋಡಿದಷ್ಟು ಅವನ ವಿವಿಧವಾದ, ಆಳವಾದ, ಪರಿಪೂರ್ಣವಾದ ಬಾಳಿನ ನಾನಾ ಮುಖಗಳು ಕಾಣಬರುತ್ತವೆ.

ಗಯಟೆಯ ಮನೋಧರ್ಮ ವಿಚಿತ್ರವಾದುದು. ಸಹಜವಾಗಿ ಅವನು ವಿಶಾಲದೃಷ್ಟಿಯನ್ನು ಉಳ್ಳವನಾಗಿದ್ದನು. ಸಂಕುಚಿತ ಪ್ರಪಂಚದಿಂದ ಅವನ ಪಾದ ವಿಶ್ವಪ್ರಪಂಚಕ್ಕೆ ಪಯಣ ಹೊರಟಿತ್ತು. ಯಾವ ಪಕ್ಷಪಾತ, ಚಿಕ್ಕ ಆಶೋತ್ತರಗಳು, ಇಲ್ಲದೆ ಅವನ ಮನಸ್ಸು ಸಮಗ್ರ ಜನತೆಯನ್ನು ಸಂದರ್ಶಿಸಿತ್ತು, ಪ್ರೀತಿಸಿತ್ತು. ಗಯಟೆ ಕಣ್ತೆರೆದಾಗ ಅವನ ನಾಲಗೆ ಜರ್ಮನ್ ಭಾಷೆಯಲ್ಲಿ ಮಾತನಾಡಿದಾಗ ಅವನ ಮಾತು ವ್ಯಕ್ತಿಗೂ ವಿಶ್ವಕ್ಕೂ ಅನ್ವಯಿಸುವಂತೆಯೇನೋ ಇದ್ದಿತು. ಆ ಮಾತು ಸಹಜವಾಗಿ ಸುಂದರವೂ ಸಹಜವೂ ಆಗುತ್ತಿತ್ತು.

ಜನ ಎಲ್ಲ ಒಂದು ಸಂಸಾರದವರು ಎಂದು ತಿಳಿದು, ಹಾಗೆ ಪ್ರೀತಿಯಿಂದ ಇರಬೇಕಾದುದು ಮನುಷ್ಯನ ಮೂಲಭೂತವಾದ ಗುಣ. ನಾವು ಮಾನವತೆಯ ಕಟ್ಟನ್ನು ಬಿಗಿಹಿಡಿಸಿಕೊಂಡಷ್ಟೂ ಪರಸ್ಪರ ಇರುವ ಸಂಬಂಧದ ಕಟ್ಟೂ ಬಲಪಡುತ್ತದೆ. “ಒಂದು ಕಾಲ ಬರುತ್ತದೆ. ಆಗ ರಾಷ್ಟ್ರೀಯ ವಾದದ ಸಂಕೋಚ ನಿರ್ನಾಮವಾಗಿ, ಮತ್ತೊಂದು ರಾಷ್ಟ್ರದ ಸುಖ ದುಃಖ ನಮ್ಮದಾಗುತ್ತದೆ. ಅಂಥಾ ಸಂಸ್ಕೃತಿಯ ಮಟ್ಟವನ್ನು ಮುಟ್ಟುವುದು ನನ್ನ ಜೀವನದ ಸಹಜ ಉದ್ದೇಶವಾಗಿತ್ತು” ಎಂದು ಗಯಟೆ ಹೇಳಿಕೊಂಡಿದ್ದಾನೆ.

ವಿಶಾಲ ಜಗತ್ತಿನಲ್ಲಿ, ಪುರುಷನಾಗಲಿ, ಸ್ತ್ರೀಯಾಗಲಿ, ಗಯಟೆಯ ವ್ಯಾಸಂಗದಿಂದ ವಿಶ್ವಪ್ರೇಮವನ್ನು ಕಂಡುಕೊಳ್ಳಬಹುದು. ಅದೇ ಸೂತ್ರ ನಮ್ಮನೆಲ್ಲ ಕೂಡಿಸಬಲ್ಲದು. ಅದರಿಂದಲೇ ಜನ ತಮ್ಮ ಅಂತರಾಳವನ್ನು ಕಂಡುಕೊಳ್ಳಬಲ್ಲರು.

“ವಿಶ್ವ ಸಾಹಿತ್ಯ”(World Literature) ಎಂಬುದು ಗಯಟೆ ಕಟ್ಟಿದ ಪದ. ಜನ – ಜನಗಳ ಮನ ಒಂದಾಗಬೇಕು ಎಂಬ ಸೂತ್ರವನ್ನವನು ಅರಿತಿದ್ದನು. ಕವಿಗಳು, ವಿಮರ್ಶಕರು, ಲೇಖಕರು, ವಿಜ್ಞಾನಿಗಳು ಮತ್ತು ತತ್ವಶಾಸ್ತ್ರಜ್ಞರು ಪರಸ್ಪರ ಪರಿಚಯವನ್ನು ಹೆಚ್ಚುಮಾಡಿಕೊಂಡು ಪರಸ್ಪರ ಉದ್ದೇಶಗಳನ್ನು ತಿಳಿದುಕೊಳ್ಳಬೇಕು. ಒಬ್ಬರು ಮತ್ತೊಬ್ಬರ ವೈಚಿತ್ರ್ಯವನ್ನು, ಹೊಸತನವನ್ನು, ವೈವಿಧ್ಯವನ್ನು ಸಹಾನುಭೂತಿಯಿಂದ ಅರಿತುಕೊಳ್ಳಬೇಕು. ವಿಶ್ವರಂಗದ ಮನೋರಾಜ್ಯದಲ್ಲಿ ತಾವೆಲ್ಲ ಒಂದೆ ಮನೆಯವರಂತೆ ಇರಬೇಕು. ಈ ಸಾಹಿತ್ಯದ ವಿಶ್ವವ್ಯಾಪಿಯಾದ ಸೂತ್ರದಿಂದ ಜನತಾಸಮೂಹವನ್ನು ಕಟ್ಟುವ ಕೆಲಸವನ್ನು ಗಯಟೆ ಕವಿ ಯಶಸ್ವಿಯಾಗಿ ಮಾಡಿದ್ದನು.



ಇಂದಿನ ದೊಡ್ಡ ಪ್ರಶ್ನೆ ಏನೆಂದರೆ, ಗಯಟೇ ಕವಿಯ ಈ ಮಾತುಗಳನ್ನು ನಮ್ಮ ಇವತ್ತಿನ ಪ್ರಪಂಚ ಪುರಸ್ಕರಿಸುವುದೆ ಎಂದು. ಅದು ಅಸಾಧ್ಯವಾಗಬಹುದೆಂಬ ನಿರಾಶೆ ಗಯಟೆಗೇ ಇದ್ದಂತೆ ಕಾಣುತ್ತದೆ. ೧೯ನೆಯ ಶತಮಾನವನ್ನು ಕುರಿತು ಆತ ಹೀಗೆ ಬರೆದನು:

“ಜನ ತಾವು ಇತರ ಗುಂಪಿನವರಿಗಿಂತ ಹೆಚ್ಚು ಯೋಗ್ಯರೆಂದೂ, ನಿಪುಣರೆಂದೂ, ತಮ್ಮ ಹಿರಿಮೆಯನ್ನು ಸ್ಥಾಪಿಸಲು ಯತ್ನಿಸುತ್ತಾರೆ. ಆದರೆ ಅವರ ಯೋಗ್ಯತೆ, ನೈಪುಣ್ಯ ಪರಿಪೂರ್ಣವಾಗಿರುವುದಿಲ್ಲ. ನಮ್ಮ ಕಾಲಕ್ಕೇ ಸಹಾನುಭೂತಿ ಕೊನೆಯಾದಂತೆಯೇ ಸರಿ.”

ಗಯಟೆ ಕವಿ ಲಘುವಾಗಿ, ತನ್ನ ಕಾಲದ ರಾಜಕೀಯ ವಿಚಾರಗಳನ್ನೂ ಯಂತ್ರ ಯುಗವನ್ನೂ ಕುರಿತು ಬರೆದಿರುವುದುಂಟು. ನಿರಂಕುಶ ಅಧಿಕಾರವನ್ನು, ಏಕನಾಯಕ ಪ್ರಭುತ್ವವನ್ನು ಹೊಗಳಿ ಬರೆದಿರುವುದುಂಟು. ಅವುಗಳು ಗಯಟೆಯ ನಿಜವಾದ ಅಭಿಪ್ರಾಯವೆಂದು ನಾವು ತಿಳಿಯಬಾರದು. ಅದು ವ್ಯಂಗ್ಯ, ಅದು ಕಾಲ್ಪನಿಕ, ಅದು ಕಟಕಿ. ಅಷ್ಟೆ. ದೇವರಿಗೆ ತನ್ನ ಸೃಷ್ಟಿಯೇ ಅಸಮರ್ಪಕವಾಗಿ ಕಂಡು ಅವನು ಪ್ರಪಂಚ

ಭಿಕ್ಷಾನ್ನದ ಭಾಗೀರಥಮ್ಮ

ಕತೆಗಾರರು:—ಶ್ರೀ. ಎಂ. ವಿ. ಸೀತಾರಾಮಯ್ಯ, ಎಂ. ಎ. ಬೆಂಗಳೂರು. (ರಾಘವ)

೧

ಭಿಕ್ಷಾನ್ನದ ಭಾಗೀರಥಮ್ಮ! ಹೆಸರು ಕೇಳಿ ನಿಮಗೆ ಆಶ್ಚರ್ಯವಾಗಬಹುದಲ್ಲವೆ? ಆಶ್ಚರ್ಯವಾಗುವುದರಲ್ಲಿ ಆಶ್ಚರ್ಯವೇನಿಲ್ಲ. ಅಪೂರ್ವದ ಹೆಸರು. ಅಂತೆಯೇ ಅಪೂರ್ವದ ವ್ಯಕ್ತಿ. ನಭೂತೋ ನ ಭವಿಷ್ಯತಿ.

ಹಲವು ವರ್ಷಗಳ ಹಿಂದೆ ಬೆಂಗಳೂರು ಮೈಸೂರಿನಂಥ ಪಟ್ಟಣಗಳಲ್ಲಿ ಭಿಕ್ಷಾನ್ನವೆತ್ತಲು ಬೀದಿ ಬೀದಿ ಅಲೆಯುತ್ತಿದ್ದ ಬ್ರಾಹ್ಮಣ ವಿದ್ಯಾರ್ಥಿಗಳ ಪಡೆಯನ್ನೇ ಕಾಣಬಹುದಾಗಿತ್ತು. ಈಚೆಗೆ ಅವರ ಸಂಖ್ಯೆ ಬಹುಮಟ್ಟಿಗೆ ಕಡಮೆಯಾಗಿದೆ. ಏಕೆ ಹೀಗಾಯಿತು, ಹೀಗಾದದ್ದು ಒಳ್ಳೆಯದೆ ಕೆಟ್ಟದ್ದೆ, ಇದು ಬ್ರಾಹ್ಮಣ ವಿದ್ಯಾರ್ಥಿಗಳ ಆರ್ಥಿಕ ಅಭಿವೃದ್ಧಿಯನ್ನು ಸೂಚಿಸುತ್ತದೆಯೇ ಇಲ್ಲವೆ 'ಬ್ರಾಹ್ಮಣಿಕೆ'ಯ ಅಧೋಗತಿಯನ್ನು ಸೂಚಿಸುತ್ತದೆಯೆ— ಈ ಕಾರಣವಿಮರ್ಶೆಯು ಕುಲಗೋತ್ರ ವಿಚಾರ ಭಾಗೀರಥಮ್ಮನ ಕಥೆಯಲ್ಲಿ ಅಪ್ರಕೃತ. ಆದರೂ, ಇಷ್ಟು ಹೇಳಬೇಕು: ಪ್ರಾಚೀನ ಸಂಪ್ರದಾಯದ ಮೇರೆಗೆ, ಬಡವ ಬಲ್ಲಿದನೆಂಬ ಭೇದವಿಲ್ಲದೆ ದ್ವಿಜ ಬ್ರಹ್ಮಚಾರಿಗಳು ತಮ್ಮ ವಿದ್ಯಾರ್ಥಿದಶೆಯಲ್ಲಿ ಭಿಕ್ಷಾನ್ನವೆತ್ತಿಯೇ ವಿದ್ಯಾವ್ಯಾಸಂಗ ಮಾಡಬೇಕಾಗಿದ್ದಿತು. ಒಂದಾನೊಂದು ಕಾಲದಲ್ಲಿ, ಈ ಸಂಪ್ರದಾಯದ ಅವಶೇಷದ ನಾಟಕವನ್ನು ಈಗಲೂ ಉಪನಯನ ಕಾಲದಲ್ಲಿ ನೋಡಬಹುದು. ಕಾಲಕ್ರಮದಲ್ಲಿ 'ಭವತಿ ಭಿಕ್ಷಾಂ ದೇಹಿ' ಎಂಬ ಪವಿತ್ರ ಮಂತ್ರವು ಕೇವಲ ಬಡ ಬ್ರಾಹ್ಮಣ ವಿದ್ಯಾರ್ಥಿಗಳ ಲಾಂಛನವಾಯಿತು. ಗಾಯತ್ರೀ ಮಂತ್ರೋಪದೇಶವಾಗಿರದಿದ್ದರೂ, ಅಥವಾ ಆಗಿ ಅದನ್ನು ಮರೆತಿದ್ದರೂ, ಈ 'ಭವತಿ ಭಿಕ್ಷಾಂ ದೇಹಿ' ಮಂತ್ರದ ಉಪದೇಶವನ್ನು ಯಾರಿಂದಲೂ ಪಡೆಯದೆ ನಿತ್ಯ ಎರಡು

ವನ್ನೇ ಪುಡಿಗುಟ್ಟಿ ಹೊಸ ದೃಷ್ಟಿಗೆ ಎಡೆ ಕೊಡುವನೆಂಬ ನಂಬಿಕೆ ಅವನಿಗಿತ್ತು. ಇವತ್ತು ಕೂಡ ನಾವು ಅದೇ ಉಲ್ಬಣದ ಪರಿಸ್ಥಿತಿಯಲ್ಲಿದ್ದೇವೆ.

ಗಯಟೆ ಹೇಳಿದ ಭ್ರಾತೃತ್ವದ ಮಾತುಗಳೆಲ್ಲ ಕಳೆದು ಹೋದ ಶತಮಾನಗಳ ಹಳೆಯ ಮಾತುಗಳಾದುವೇನು? ಕನಸಿನ ಲೋಕಕ್ಕೆ ಸೇರಿಹೋದವೇನು? ಚರಿತ್ರೆಯ ಗರ್ಭದಲ್ಲಿ ಪುರಾಣ ಪ್ರಪಂಚದಲ್ಲಿ ಅಡಗಿದುವೇನು? ಅವನನ್ನು ಇನ್ನು ಮುಂದೆ ಅರ್ಥಮಾಡಿಕೊಳ್ಳಲಾಗುವುದಿಲ್ಲವೇನು? ಗಯಟೆಯ ಜೀವನೋದ್ದೇಶದಿಂದ ನಮಗೆ ಇಂದು ಏನೂ ಪ್ರಯೋಜನವಿಲ್ಲವೇನು? ಗಯಟೆಯನ್ನು ಜನ ಪೂರ್ತಿ ಮರೆಯಬಹುದು. ಆದರೆ "ಇರುವ ಗುಂಪಿನಲ್ಲೇ ಸ್ನೇಹವನ್ನು ಬೆಳೆಸಿರಿ" ಎಂಬ ಅವನ ಮಾತು ಹೇಗೆ ತಾನೆ ಮರೆತು ಹೋಗಬಲ್ಲದು?

ಹೇಳುವುದಕ್ಕಾಗದು. ಗಯಟೆಯ ನೆನಪಿಗಾಗಿ ದೇಶ ದೇಶದವರು ಉತ್ಸವಗಳನ್ನಾಚರಿಸಿದ್ದಾರೆ. ಅದು ಸ್ವಲ್ಪ ಆಶಾದಾಯಕವಾದ ಸಂಗತಿ. ಜನ ಏಕೆ ಅವನನ್ನು ನೆನಪು ಮಾಡಿಕೊಳ್ಳಬೇಕು? ಪ್ರಪಂಚದ ಇಂದಿನ ಪರಿಸ್ಥಿತಿಯಲ್ಲಿ ಜನಕ್ಕೆ ಅವನು ಬೇಕಾಗಿದ್ದಾನೆ ಅಲ್ಲವೆ? ಮಾಡಿದ ಉತ್ಸವ ನಮ್ಮಲ್ಲಿ ಆ ಆಶೆಯನ್ನು ಕೆರಳಿಸುತ್ತಿದೆ. ಯಾವ ಮನೋಧರ್ಮ ಭ್ರಾತೃಭಾವವನ್ನು ಬೆಳೆಸಬಲ್ಲದೋ ಅದನ್ನು ಈ ಉತ್ಸವಗಳು ಏರ್ಪಡಿಸಲಾರವೆ?

ಪ್ರಪಂಚದಲ್ಲೇ ಕ್ರೌರ್ಯ ತಾಂಡವವಾಡುತ್ತಿದೆ. ಅಧಿಕಾರದ ದುರಾಶೆ ಹೆಚ್ಚುತ್ತಿದೆ. ಆರ್ಥಿಕ ಪೈಪೋಟಿ ಎಲ್ಲೆ ಮೀರುತ್ತಿದೆ. ಕೋಮು, ವರ್ಣ, ಸಮರ್ಪಣೆ, ತ್ಯಾಗ, ಉದ್ಧಾರಗಳೆಂಬ ಪದಗಳ ಮೇಲೆ ಕುಳಿತು ಜನ ಅತ್ತ ಇತ್ತ ದಾರಿ ತಪ್ಪಿ ಜಾರುತ್ತಿದೆ. ಅದು ತಪ್ಪಿ ಜನ ಜನರಾಗಿ ಬಾಳುವಂತಾಗಬೇಕು. ಬೂಟಾಟಿಕೆ ತಪ್ಪಿ ಹೃದಯದ ಸಾಮರಸ್ಯ ಏರ್ಪಡಬೇಕು. ಕೇವಲ ಬಲವಂತದಿಂದ ಅದು ಆಗದು. ಆದರೂ ಅದು ಹೆಚ್ಚು ದಿನ ನಿಲ್ಲದು. ಅದು ಮಾನಸಿಕ, ಅದು ಹಾರ್ದಿಕ. ಅಂಥ ವ್ಯತ್ಯಾಸ ಆಗದ ಹೊರತು ನಮಗೆ ಉಳಿವಿಲ್ಲ. ದೇಶಕ್ಕೆ ಹಿತವಿಲ್ಲ ಕಟ್ಟುವ ಕೆಲಸ ಆಗದು. ಅದಾಗಬೇಕಾದರೆ ಸ್ನೇಹದಿಂದಲೇ, ಅದಕ್ಕಾಗಿ ಗಯಟೆ ಮಹಾಕವಿ ಹಿರಿಯ ಸಂದೇಶವನ್ನಿತ್ತಿದ್ದಾನೆ. ಅವನ ಜೀವನ, ಅವನ ಕೃತಿ ಮತ್ತು ಅವನ ಆಲೋಚನೆಗಳಲ್ಲೆಲ್ಲ ವಿಶ್ವ ಬಾಂಧವ್ಯದ ಮನೋಧರ್ಮ ಮೂಡಿನಿಂತಿದೆ.

ಹೊತ್ತೂ ಜಪಿಸುವುದು ಅನೇಕರ ಅಪರಿಹಾರ್ಯ ಕರ್ಮ ವಾಗಿತ್ತು. ಈ ಅವಶ್ಯ ಕರ್ಮವನ್ನು, ವಿದ್ಯೆಗಳಿಸುವುದಕ್ಕಾಗಿ ಬಡ ವಿದ್ಯಾರ್ಥಿಗಳು ಮಾಡುತ್ತಿದ್ದ ಕರ್ಮವನ್ನು ಜೀವ ಉಳಿಸಿಕೊಂಡಿರುವುದಕ್ಕಾಗಿ ಒಬ್ಬ ಗೃಹಿಣಿ ಎನ್ನಿಸಿಕೊಂಡಿ ದ್ದಾಕೆ ಮಾಡಬೇಕಾಯಿತು.

ಭಾಗೀರಥಮ್ಮನ ಭಾಗಕ್ಕೂ ಈ ಮಂತ್ರಪಠನೆ ಅವಶ್ಯ ಕರ್ಮವಾಗಿ ಪರಿಣಮಿಸಿದ ಸಂಗತಿ 'ವಿಧಿವಿಲಾಸ ನಾಟಕ ಮಂಡಲಿ'ಯ ಒಂದು ದುರಂತ ನಾಟಕ. ಈ ನಾಟಕ ನಡೆದದ್ದು ನಮ್ಮ ಬೀದಿಯಲ್ಲಿ—ಮೈಸೂರಿನಲ್ಲಿ. ನಾನು ಹುಡುಗನಾಗಿದ್ದಂದು ಈ ನಾಟಕದ ಕಡೆಯ ಅಂಕವನ್ನು ನೋಡಿದೆ. ಯಾರೂ ಈ ನಾಟಕವನ್ನು ಸಂಪೂರ್ಣವಾಗಿ ನೋಡಿದವರಿಲ್ಲ. ಒಬ್ಬೊಬ್ಬರು ಒಂದೊಂದು ದೃಶ್ಯ, ಒಂದೊಂದು ಅಂಕ ನೋಡಿರಬಹುದು, ಅಷ್ಟೆ. ಅವರು ಇವರು ಕಂಡ ನೋಟಗಳ ಕೇಳಿಕೆಯ ಅನುಭವದ ಜೊತೆಗೆ ನಾನು ಕಂಡ ನೋಟದ ಅನುಭವವೂ ಕೂಡಿಕೊಂಡು, ಈ ನಾಟಕ ಎಷ್ಟೋ ವೇಳೆ ನನ್ನ ಮನೋರಂಗಭೂಮಿಯಲ್ಲಿ ನಡೆದು, ನನ್ನ ಕಣ್ಣಿಗೆ ನೀರು ತಂದಿದೆ.

ನೀವೇ ಹೇಳಿ, ಯಾರ ಕಣ್ಣಿಗೆ ತಾನೇ ನೀರು ತರುವು ದಿಲ್ಲ? ಅರುವತ್ತು ವರ್ಷದ ಮುದುಕಿ; ಮುತ್ತೈದೆ! ವಾತ ರೋಗದಿಂದ ಕಾಲುಕೀಲೆಲ್ಲ ನೋವು; ಕಾಲು ನಡುಕ, ಕೈ ನಡುಕ, ಮಂದ. ಜಾಲ ಸೀರೆ, ಜೂಲು ಕುಪ್ಪಸ. ಒಂದು ಕೈಯಲ್ಲಿ ಕೋಲು, ಇನ್ನೊಂದು ಕೈಯಲ್ಲಿ ಡಬ್ಬ—ಹೌದು, ಡಬ್ಬ; ಹಿಡಿಯುಳ್ಳ ದೊಡ್ಡ ತವರದ ಡಬ್ಬ. ಒಂದು ಕಡೆ ನಾಯಿಯ ಕಾಟ, ಇನ್ನೊಂದು ಕಡೆ ಏನೂ ಅರಿಯದ ತುಂಟ ಹುಡುಗರ ಕಾಟ (ನಾನೂ ಈ ಹುಡುಗರ ಪಡೆಯಲ್ಲಿ ಸೇರಿದ್ದೆ ಎಂದು ನನ್ನ ತಾಯಿ ನನಗೆ ಆ ಮೇಲೆ ನೆನಪುಕೊಡು ತ್ತಿದ್ದರು; ನನಗೂ ಹಾಗೆಂದು ಸ್ವಲ್ಪ ಮಟ್ಟಿನ ನೆನಪು.) ಒಂದೊಂದು ದಿನ, ಎಡವಿಬಿದ್ದು ಅನ್ನ ಸಾರು ಚೆಲ್ಲಿಹೋಗು ತ್ತಿತ್ತು; ಕೆಲವೊಮ್ಮೆ, ಆಕೆಯನ್ನು ಬಿಡದೆ ಹಿಂಬಾಲಿಸುತ್ತಿದ್ದ ನಾಯಿ ಮುಟ್ಟಿದಂತೆ ಅವಳಿಗೆ ತೋರಿ ತಿರಿದುತಂದ ಅನ್ನವೆಲ್ಲ ಅದರ ಪಾಲೇ ಆಗುತ್ತಿತ್ತು; ಒಂದೊಂದು ಸಲ, ಎಲ್ಲೋ ಮರೆಯಲ್ಲಿ ನಿಂತಿದ್ದು ಯಾವನೋ ತುಂಟಪೋರ ಗುರಿಯಿಟ್ಟು ಅವಳ ಡಬ್ಬಕ್ಕೆ ಕಲ್ಲುಬೀರಿ ಅದನ್ನು ನೆಲಕ್ಕೆ ಕೆಡವಿ ಅವಳ ಅಂದಿನ ಆಹಾರಮಣ್ಣು ಪಾಲು ಕಾಗೆಯ ಪಾಲು, ಆಗುತ್ತಿತ್ತು. ಅಂಥ ದಿನಗಳಲ್ಲಿ ಒಮ್ಮೊಮ್ಮೆ ಅವಳು ನಮ್ಮ ಮನೆಗೆ ಬಂದು ನಮ್ಮ ತಾಯಿಯನ್ನು ಕೂಗಿ ಕರೆದು, ತನ್ನ ಗೋಳು ಹೇಳಿ ಕೊಂಡು, ಪೂರ್ಣ ಭಿಕ್ಷೆಯನ್ನು ಬೇಡುವಳು. ನಮ್ಮ ತಾಯಿ ಅವಳ ಅರೆಹೊಟ್ಟೆ ತುಂಬುವಷ್ಟಾದರೂ ಅನ್ನ ನೀಡಿ ಕಳಿಸುವರು. ನಮ್ಮ ಮನೆಯಲ್ಲಿ ಪ್ರತಿದಿನವೂ ತಂಗೂಳು ಮಿಗುವ ರೂಢಿ. ತಂಗೂಳಿದ್ದರೂ ಭಾಗೀರಥಮ್ಮನಿಗೆ ಬಿಸಿ ಯನ್ನವೇ, ಬಿಸಿಯ ಸಾರೇ. "ತಂಗಳನ್ನ ನಮಗೆ, ಭಾಗೀ ರಥಮ್ಮನಿಗೆ ಬಿಸಿಯನ್ನ. ಅವಳೇನು ಬೀಗಿತ್ತಿಯೆ?" ಎಂದು ನಮ್ಮ ಗೊಣಗಾಟ. "ಅಯ್ಯೋ ಪಾಪ, ಮುದುಕಿ. ತಂಗಳು ತಿಂದರೆ ತಡೆಯುತ್ತದೆಯೆ?" ಎಂದು ನಮ್ಮ ತಾಯಿ ಮರುಗಿ ನುಡಿದು ನಮಗೆ ಸಮಾಧಾನ ಹೇಳುವರು.

ಹೌದು; ನಾನು ಕಂಡಂತೆ ಭಾಗೀರಥಮ್ಮ ಮುದುಕಿ. ತಲೆ ಬೆಳ್ಳಗಾಗಿತ್ತು; ಮುಖ ಚೆನ್ನಾಗಿ ಸುಕ್ಕುಗಟ್ಟಿತ್ತು; ಹಲ್ಲು ಉದುರಿದ್ದುವು. ಮುಖದಲ್ಲಿ ಲಕ್ಷಣಕ್ಕೊಂದು ಅರಸಿನ ಕುಂಕುಮ ಒಪ್ಪುತ್ತಿದ್ದುವು; ತಲೆಯನ್ನು ಕೂಡ ನಿತ್ಯ ತಾನೇ ಬಾಚಿಕೊಂಡು ಗೇಣುದ್ದದ ಜಡೆ ಹಾಕಿಕೊಳ್ಳುತ್ತಿದ್ದಳು. ಗೌರೀಹಬ್ಬದ ಮೊರದ ಬಾಗಿನಕ್ಕೆ ಇಟ್ಟ ಬಾಚಣಿಗೆ ಒಂದೆರ ಡನ್ನೂ ಚಿಕ್ಕ ಕನ್ನಡಿಯೊಂದನ್ನೂ ವರ್ಷವರ್ಷವೂ ನಮ್ಮ ತಾಯಿ ಭಾಗೀರಥಮ್ಮನಿಗೆ ದಾನಮಾಡುತ್ತಿದ್ದರು. ಈ ಸಲ ಕರಣೆಗಳಿಂದ ಅವಳ ಕೇಶ ಪ್ರಸಾಧನ ಕಾರ್ಯ ನಡೆಯು ತ್ತಿತ್ತು. ಅವಳು ಮುತ್ತೈದೆಯೆಂಬ ಭಾವನೆಯಿದ್ದಾಗ ನಮ್ಮ ತಾಯಿ ಅವಳಿಗೆ ಮೊರದ ಬಾಗಿನವನ್ನೂ ಕೊಡುತ್ತಿದ್ದ ರಂತೆ. ಈಗ ಅವಳು ನಮ್ಮ ತಾಯಿಯ ಭಾವನೆಯಲ್ಲಿ (ಮತ್ತು ಬೀದಿಯವರ ಭಾವನೆಯಲ್ಲಿ ಕೂಡ) ಮುತ್ತೈದೆ ಯಾಗಿರಲಿಲ್ಲ. ಆದರೆ, ತಾನು ಮುತ್ತೈದೆಯೆಂದೇ ಭಾಗೀ ರಥಮ್ಮನ ಮುಗ್ಧ ಭಾವನೆ. ತನ್ನನ್ನು ಹಿಂದೆ ತೊರೆದು ಹೋದ ಗಂಡ ಇಂದಿಗೂ ಎಲ್ಲಿಯೋ ಬದುಕಿರುವನೆಂದೇ ಅವಳ ಭಾವನೆ. ಹನ್ನೆರಡು ವರ್ಷಗಳ ಮೇಲೆ ಸಂದರೂ ಅವಳ ಗಂಡನ ಸುಳಿವು ಕಾಣದೆ ಹೋದದ್ದರಿಂದ ಅವಳು ಶಾಸ್ತ್ರಪ್ರಕಾರ ಮುತ್ತೈದೆಯಲ್ಲವೆಂದು ನಮ್ಮ ಬೀದಿಯವರ ಸಿದ್ಧಾಂತ. "ನೀವು ಮಡಿ ಹಿಡಿಯಿರಿ, ಭಾಗೀರಥಮ್ಮ" ಎಂದು ನಮ್ಮ ಬೀದಿಯ ಸ್ತ್ರೀಯರೆಲ್ಲರ ಬೋಧೆಯೂ ಅವಳ ಅಚಲವಾದ ನಂಬಿಕೆಯನ್ನು ಕದಲಿಸಲು ಸಮರ್ಥವಾಗಲಿಲ್ಲ. ನಾವು ತಾಳಿದವರೆಂದುಕೊಳ್ಳುವ ಜನಕ್ಕೆ ಶಾಸ್ತ್ರಪ್ರಮಾಣ; ಏನೂ ಅರಿಯದ ಮುಗ್ಧ ಜೀವಕ್ಕೆ ಅಂತಃಕರಣವೇ ಪ್ರಮಾಣ; ಭಾಗೀರಥಮ್ಮ ಸತ್ತಂತು ಅವಳ ಗಂಡ ಎಲ್ಲಿಯೋ ಬದುಕಿದ್ದಾ ನೆಂದೇ ಒಬ್ಬೊಬ್ಬರ ನಂಬಿಕೆ. ಹಾಗೆ ನಂಬಿದ್ದವರಲ್ಲಿ ನಮ್ಮ ಮನೆಯಲ್ಲಿದ್ದ ಗುಮಾಸ್ತ ಗುಂಡಪ್ಪ ಒಬ್ಬ.

೨

ಅವಳ ಮುಪ್ಪಿನಲ್ಲಿ ಮಾತ್ರ ಭಾಗೀರಥಮ್ಮನನ್ನು ಚೆನ್ನಾಗಿ ಬಲ್ಲ ನಾನು ಅವಳು ಒಮ್ಮೆ ತಕ್ಕಮಟ್ಟಿಗೆ ಚೆಲುವೆ ಯಾಗಿದ್ದಳೆಂಬುದನ್ನು ನಂಬಲಾಗುತ್ತಿರಲಿಲ್ಲ. ಗಂಡನ ಮನೆಗೆ ಬಂದಾಗಿನಿಂದ ನಮ್ಮ ತಾಯಿ ಅವಳನ್ನು ಚೆನ್ನಾಗಿ ಬಲ್ಲರು. ಅವಳು ತಕ್ಕಮಟ್ಟಿಗೆ ಚೆಲುವೆಯಾಗಿದ್ದಳೆಂದೇ ಅವರ ಹೇಳಿಕೆ. ಗಂಡಿನ ಮನಸ್ಸನ್ನು ಒಲಿಸಿಕೊಳ್ಳಲು

ಹೆಣ್ಣಿಗೆ ರೂಪಿನ ಜೊತೆಗೆ ಬೆಡಗು ಬಿನ್ನಾಣ, ಜಾಣ್ಮೆ ವಿವೇಕ, ನಯ ನಾಜೂಕುಗಳೂ ಅಗತ್ಯವೆಂದು ಕಾಣುತ್ತದೆ. ತಾಯಿ ತಂದೆ ಒಪ್ಪಿ ತಂದುಕೊಂಡ ಹುಡುಗಿ ಭಾಗೀರಥಿ ತನಗೆ ತಕ್ಕ ಹೆಣ್ಣೇ ಎಂದು ಅವಳ ಗಂಡ ಶೇಷಗಿರಿ ಮೊದಮೊದಲು ಭಾವಿಸಿದಂತೆ ತೋರುತ್ತವೆ. ಶೇಷಗಿರಿ ಆಗಿನ ಕಾಲಕ್ಕೆ ತಕ್ಕಮಟ್ಟಿನ ವಿದ್ಯಾವಂತ; ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ, ಎಂಟ್ರೆನ್ಸ್ ಪರೀಕ್ಷೆಗೆ ಓದುತ್ತಿದ್ದ. ಅವನು ಫಿಫ್ತ್ ಫಾರಮ್ಮಿನಲ್ಲಿ ಓದುತ್ತಿದ್ದಾಗಲೇ ಅವನಿಗೆ ಮದುವೆಯಾಯಿತು. ಅನೇಕ ಮಕ್ಕಳನ್ನು ಕಳೆದುಕೊಂಡು ಉಳಿದ ಒಬ್ಬನೇ ಮಗನಾದ ಶೇಷಗಿರಿಯನ್ನು ಅವನ ತಾಯಿತಂದೆ ಬಹು ಮುದ್ದಿನಿಂದ ಬೆಳಸಿದ್ದರು. ಅವನು ಬಿ. ಎ. ಪ್ಯಾಸು ಮಾಡಬೇಕೆಂದು ಅವರ ಆಸೆ; ಅದಕ್ಕಿಂತ ಹೆಚ್ಚಾಗಿ, ತಾವು ಕಣ್ಣುಮುಚ್ಚಿಕೊಳ್ಳುವ ಮುನ್ನ ಮೊಮ್ಮಗುವನ್ನು ಕಾಣಬೇಕೆಂದು ಪ್ರಬಲವಾದ ಇಚ್ಛೆ. ಅದಕ್ಕಾಗಿ, ಶೇಷಗಿರಿ ಎಂಟ್ರೆನ್ಸ್ ತರಗತಿಯಲ್ಲಿದ್ದಾಗಲೇ ಭಾಗೀರಥಿ ಮನೆಗೆ ಬರುವಂತೆ ಏರ್ಪಾಡುಮಾಡಿದರು. ಸೊಸೆ ಮನೆಗೆ ಬಂದಳೆಂದು ಶೇಷಗಿರಿಯ ತಾಯಿತಂದೆಗಳಿಗೆ ಹಿಗ್ಗೋ ಹಿಗ್ಗು. ತಮ್ಮ ಮುದ್ದಿನ ಸೊಸೆ ಮೊದ್ದು ಎಂಬುದು ಪ್ರೇಮಮಯಿಗಳಾದ ತಾಯಿತಂದೆಗಳಿಗೆ ತಿಳಿಯದೆ ಹೋಯಿತು. ಒಬ್ಬಳೇ ಸೊಸೆ; ಸೊಸೆಯನ್ನು ಕೂರಿಸಿ ಅವಳಿಗೆ ಬಡಿಸುವವರು ಶೇಷಗಿರಿಯ ತಾಯಿ. ಭಾಗೀರಥಿಯ ಮೌನವನ್ನು ಲಜ್ಜೆಯೆಂದೂ, ಅಲಂಕಾರ ಬೆಡಗು ಬಿನ್ನಾಣಗಳಲ್ಲಿ ಆಸಕ್ತಿಯಿಲ್ಲದ್ದನ್ನು ಗರತಿಯ ಗುಣವೆಂದೂ, ಪೆದ್ದುತನದಿಂದ ವರ್ತಿಸುತ್ತಿದ್ದುದನ್ನು ನಿಷ್ಕಾಪಟ್ಯವೆಂದೂ, ಮನೆಗೆ ಬಂದ ವರ್ಷದಲ್ಲಿಯೆ ಮಗ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಫೇಲಾದರೂ ಒಡನೆಯೆ ಅವನಿಗೆ ಮ್ಯುನಿಸಿಪಾಲಿಟಿಯಲ್ಲಿ ಗುಮಾಸ್ತೆಯ ಹುದ್ದೆ ದೊರೆತದ್ದರಿಂದ ಅವಳು ಭಾಗ್ಯಲಕ್ಷ್ಮಿಯೇ ಎಂದೂ ಆಕೆ ಭಾವಿಸತೊಡಗಿದರು. ಸೊಸೆಗೆ ಮನೆಗೆಲಸ ಬರುತ್ತದೆಯೆ ಇಲ್ಲವೆ ಎಂದು ತಿಳಿಯುವುದಕ್ಕೆ ಅವಕಾಶವೇ ಇರಲಿಲ್ಲ; ಏಕೆಂದರೆ, ಮಾಡಲು ಯಾವ ಕೆಲಸವನ್ನೂ ಸೊಸೆಗೆ ಬಿಡುತ್ತಲೇ ಇರಲಿಲ್ಲ. ಆದರೆ, ಶೇಷಗಿರಿಗೆ ತಾನೊಂದು ಮೊದ್ದು ಹೆಣ್ಣನ್ನು ಮದುವೆಯಾಗಿದ್ದೇನೆಂದು ಅರಿತುಕೊಳ್ಳಲು ಬಹಳ ಕಾಲ ಬೇಕಾಗಲಿಲ್ಲ. ವೃದ್ಧಾಪ್ಯದಲ್ಲಿದ್ದ ತನ್ನ ತಾಯಿತಂದೆಗಳು ತನ್ನ ಹೆಂಡತಿಯ ವಿಷಯವಾಗಿ ಹೊಂದಿದ್ದ ಭ್ರಾಂತಿಜನ್ಯವಾದ ಬಂಧುರ ಭಾವವನ್ನು ಒಡೆಯಲು ಯತ್ನಮಾಡಲಿಲ್ಲ; ಅವೇ ಅವರ ಅಂತ್ಯಕಾಲದ ಅಪರಿಮಿತಾನಂದವಾಗಿದ್ದಿತು. ಅವರ ಆನಂದವನ್ನು ಅಪಹರಿಸಲು ತನಗೆ ಹಕ್ಕಿಲ್ಲವೆಂದುಕೊಂಡನವನು. ತನ್ನ ಆನಂದವೋ, ತನ್ನ ಸುಖವೋ? ಅದನ್ನು ಸಾಧಿಸಿಕೊಳ್ಳಲು ಹಲವು ಮಾರ್ಗವುಂಟು, ಸದ್ಯಕ್ಕೆ ತಾಳ್ಮೆಯಿಂದ ಇರುವುದೊಳ್ಳಿತು ಎಂದು ಶೇಷಗಿರಿ ತನ್ನಲ್ಲಿ ತಾನು ಸಮಾಧಾನಗೊಂಡನು. ಅವನು ತಾನೆ ಏನು ಮಾಡಿಯಾನು? ತಾನು ಪತ್ನಿ ಎಂಬ ಭಾವನೆ ಬರಲು ಅವಕಾಶಕೊಡದೆ ಕರು ಎಂಬ ಭಾವನೆ ಬರುವಂತೆ ನಡೆದುಕೊಳ್ಳುತ್ತಿದ್ದಳು ಭಾಗೀರಥಿ. ಇದು ಅವಳ ತಪ್ಪು ಅಲ್ಲ; ಅವಳನ್ನು ಹಾಗೆ ಸೃಷ್ಟಿಮಾಡಿದ್ದ ಬ್ರಹ್ಮನ ತಪ್ಪು. ಹೆಸರಿಗೆ ಗಂಡಹೆಂಡಿರೆಂದು ಒಂದು ಕಡೆ ವಾಸಿಸುತ್ತಿದ್ದರೇ ಹೊರತು ಕೇವಲ ಅತ್ಯಲ್ಪ ಕಾಲದೊಳಗೆ ದಾಂಪತ್ಯ ಶಯ್ಯೆಯಲ್ಲಿ ಪಾಲುಗೊಳ್ಳಲೂ ಶೇಷಗಿರಿಗೆ ಬೇಡವೆನ್ನಿಸಿತು. ಮೊಮ್ಮಗುವನ್ನು ಕಾಣದೆಯೆ ಶೇಷಗಿರಿಯ ತಾಯಿ ಸೊಸೆಯನ್ನು ಹರಸುತ್ತ ಒಂದು ದಿನ ಕಣ್ಣುಮುಚ್ಚಿಕೊಂಡರು; ಪಾರ್ಶ್ವವಾಯು ತಗಲಿ ಸತ್ತರು.

ಹೆಂಡತಿ ತೀರಿಹೋದ ಮೇಲೆ ಶೇಷಗಿರಿಯ ತಂದೆಗೆ ತನ್ನ ಸೊಸೆಯ ಸ್ವಭಾವ ಒಂದು ಭಾಗದಲ್ಲಿ ಸಂಪೂರ್ಣವಾಗಿ ಮನದಟ್ಟಾಯಿತು. ಭಾಗೀರಥಿ ಈಗ ವಾಸ್ತವವಾಗಿ ಗೃಹಿಣಿಯಾದಳು; ಆದರೆ ಗೃಹಿಣಿಯ ಕರ್ತವ್ಯಭಾರವನ್ನು ಅವಳು ವಹಿಸಲಾರದವಳಾಗಿದ್ದಳೆಂಬುದು ತಂದೆಮಕ್ಕಳಿಗೆ ಕ್ರಮೇಣ ಅರಿವಿಗೆ ಬಂದಿತು. ಅಂಗಡಿಯಿಂದ ತಂದ ಸಾಮಾನುಗಳನ್ನು ಒಪ್ಪವಾಗಿ ಇಡಲು ಬರದು; ಮನೆಯನ್ನು ಸಾರಿಸಿ ಗುಡಿಸಿ ರಂಗೋಲಿಯಿಡಲು ಬರದು. ಅವಳು ಮಾಡಿದ ಅಡಿಗೆಯನ್ನು ರುಚಿನೋಡುವ ಅವಕಾಶ ಕೂಡ ತಂದೆಮಕ್ಕಳಿಗೆ ಒದಗಿಬರಲಿಲ್ಲ. ಅಡಿಗೆಯ ಭಾರ ಬಿದ್ದ ಮೊದಲ ದಿನವೇ ಅನ್ನ ತಳವೆಲ್ಲ ಸೀದು ತಪ್ಪಲೆಗೆಲ್ಲ ಒಂದು ಮುದ್ದೆಯಾಗಿ ಕುಳಿತಿತ್ತು; ಸಾರಿನಲ್ಲಿ ಉಪ್ಪೊಂದು ಕರಗಿತ್ತೇ ಹೊರತು, ಬೇಳೆಯ ಕಾಳು ಮೆಣಸಿನ ಪುಡಿ ಹುಣಿಸೆಹಣ್ಣು ಎಲ್ಲವೂ ಬೇರೆ ಬೇರೆಯಾಗಿ ಸ್ವಸ್ವರೂಪದಲ್ಲಿ ದೊರೆಯುವಂತಿದ್ದುವು. ಆ ಹೊತ್ತು ಶೇಷಗಿರಿ ಹೆಂಡತಿಯನ್ನು ಸಿಕ್ಕಾಬಟ್ಟೆ ಬೈದು ಉಪವಾಸಮಾಡಿ ಕಚೇರಿಗೆ ಹೋದ. ಅವನ ತಂದೆ ತಾವೇ ಮತ್ತೆ ಅಡಿಗೆಮಾಡಿ ಸೊಸೆಗೂ ಬಡಿಸಿ, ತಾವು ಅನ್ನ ಕಾಣುವ ಹೊತ್ತಿಗೆ ಅಪರಾಹ್ಣ ಮೂರಾಗಿತ್ತು. ಮಾವ ಬಹಳ ಮೃದುವಾಗಿ, "ಗಂಡ ಬೈದ ಅಂತ ಏನೂ ತಿಳಿದುಕೊಳ್ಳಬೇಡವಮ್ಮ. ಹೆಂಗಸಿಗೆ ಏನು ಬರದೆ ಇದ್ದರೂ ಮುಖ್ಯವಾಗಿ ಅಡಿಗೆಮಾಡುವುದು ಚೆನ್ನಾಗಿ ಬಂದಿರಬೇಕು. ಮಾಡುತ್ತ ಮಾಡುತ್ತ ಬರುತ್ತದೆ. ಅವಳೂ ನಿನಗೆ ಏನೂ ಕಲಿಸಲಿಲ್ಲ. ನಾಳೆಯಿಂದ ನಾನಾದರೂ ಕಲಿಸುತ್ತೇನೆ" ಎಂದು ಸೊಸೆಗೆ ಸಮಾಧಾನದ ಮಾತುಗಳನ್ನಾಡಿದರು. ಗಂಡನ ಬೈಗುಳಿಂದ ಭಾಗೀರಥಿಗೆ ಕೋಪವಾಗಲಿ ದುಃಖವಾಗಲಿ ಉಂಟಾಗಿರಲಿಲ್ಲ; ಮಾವನ ಮಾತುಗಳು ಮನಸ್ಸಿಗೆ ಹೋಗಲೇ ಇಲ್ಲ. ಅಂತೂ ತನಗೆ ಅಡಿಗೆಮಾಡುವುದಕ್ಕೆ ಬರುವುದಿಲ್ಲ ಎಂಬ ಒಂದು ಸಂಗತಿ ಸ್ಪಷ್ಟವಾಯಿತು; ತಾನೇ ಮಾಡಬೇಕೆಂಬುದನ್ನೂ ಗ್ರಹಿಸಿಕೊಂಡಳು. ಮಾರನೆಯ

ದಿನ ಅಡಿಗೆಯ ಕಾರ್ಯವಲ್ಲಿ ಮಾವನವರು ನೆರವಿಗೆಂದು ಹೋಗಿ ಸಂಪೂರ್ಣವಾಗಿ ಒಲೆಯ ಮುಂದೆ ಕೂರಬೇಕಾಯಿತು. ಒಗ್ಗರಣೆಹಾಕುವ ಸಮಯದಲ್ಲಿ, "ಒಗ್ಗರಣೆ ಆದ ಕೂಡಲೆ ಸಾರಿಗೆಹಾಕಿಬಿಡಮ್ಮಾ. ನಾನು ಸ್ವಲ್ಪ ಕೈಕಾಲು ತೊಳೆದುಕೊಂಡು ಬರುತ್ತೇನೆ" ಎಂದು ಹೇಳಿ ಮಾವನವರು ಹಿತ್ತಿಲಕಡೆ ಹೊರಟರು. ಒಲೆಯಲ್ಲಿದ್ದ ಒಗ್ಗರಣೆಯ ಸೌಟಿನ ತುಪ್ಪ ಉರಿತಾಕಿ ಭಗ್ಗನೆ ಹೊತ್ತಿಕೊಂಡಿತು. ಅವ್ವಳಿಸುವ ಉರಿಯ ಜ್ವಾಲೆ ಹತ್ತಿರದಲ್ಲಿಯೇ ಕುಳಿತಿದ್ದ ಭಾಗೀರಥಿಯ ಸೀರೆಯ ತುದಿಗೆ ತಾಕಿ, ಸೀರೆ ಹೊತ್ತಿಕೊಂಡಿತು. ಅವಳಿಗೆ ಏನುಮಾಡುವುದಕ್ಕೂ ತೋರಲಿಲ್ಲ. ಆದರೆ ಆ ವಿಪತ್ಸಮಯದಲ್ಲಿ ಕಿರಿಚಿಕೊಳ್ಳುವ ಮಟ್ಟಿಗೆ ಒಂದು ಪ್ರಾಣಿಮಾತ್ರದವಳಾಗಿದ್ದಳು; ಕಿರಿಚಿಕೊಂಡಳು. ಅವಳ ಮಾವನವರು ಓಡಿಬಂದು ಸೀರೆ ಹೊತ್ತಿಕೊಂಡು ಬೆಂದುಹೋಗುವುದರಲ್ಲಿದ್ದ ಸೊಸೆಯನ್ನು ಕಂಡು, ತಕ್ಷಣ ರಂಗೋಲಿ ತುಂಬಿದ್ದ ದೊಡ್ಡ ಡಬ್ಬವನ್ನು ತಂದು, ಸೊಸೆಯನ್ನು ಕುಕ್ಕರಿಸುವಂತೆ ಮಾಡಿ, ಅವಳ ಮೇಲೆ ರಂಗೋಲಿಯನ್ನು ಚೆನ್ನಾಗಿ ಸುರಿದರು. ಅಷ್ಟು ಹೊತ್ತಿಗೆ ಹೊರಕ್ಕೆ ಹೋಗಿದ್ದ ಶೇಷಗಿರಿ ಬಂದು ಈ ದೃಶ್ಯವನ್ನು ನೋಡಿ, "ಇವಳು ಸುಟ್ಟುಹೋಗಿ ಸತ್ತುಹೋಗಿದ್ದರೆ ಒಂದು ಪೀಡೆಯೇ ತೊಲಗುತ್ತಿತ್ತು. ನೀವೇಕೆ ಸುಮ್ಮನೆ ಇರಲಾರದೆ ಇವಳನ್ನು ಬದುಕಿಸಹೋದಿರಿ?" ಎಂದು ಜುಗುಪ್ಸೆಯಿಂದಲೂ ರೋಷದಿಂದಲೂ ಗುಡುಗಿದನು. ಮಗನ ಬಾಯಿಂದ ಹೀಗೆ ಇಂಥ ಅವಾಚ್ಯ ಶಬ್ದಗಳು ಹೊರಡಲು ಕಾರಣವೇನಿದ್ದಿರಬಹುದೆಂದು ತಂದೆಯ ಮನಸ್ಸಿಗೆ ಸ್ಪಷ್ಟವಾಗಿರಬೇಕು. ಅವರು ಶಾಂತಚಿತ್ತರಾಗಿಯೇ ಮಗನಿಗೆ ಹೇಳಿದರು: "ಅಪ್ಪ, ಪ್ರಾಣಿಮಾತ್ರವನ್ನು ಕಾಪಾಡಬೇಕಾದ್ದು ಧರ್ಮವಪ್ಪ. ಇದನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊ. ಇಹಕ್ಕೂ ಪರಕ್ಕೂ ಇದು ಶ್ರೇಯಸ್ಸು. ಅದಕ್ಕಿಂತ ಹೆಚ್ಚಿನದೇನು ಬೇಕು?" ಆಗ ಆಡದೆ ಉಳಿಸಿಕೊಂಡ ಮಾತನ್ನು ಇನ್ನೊಮ್ಮೆ ಮಗನಿಗೆ ಹೇಳಿದರು: "ಮಗೂ, ಮುಖ್ಯ ನಾನು ಮೋಸಹೋದೆ. ನಿನ್ನ ತಪ್ಪೇನೂ ಇಲ್ಲ. ಬೇಕಾದರೆ ನೀನು ಇನ್ನೊಂದು ಮದುವೆಮಾಡಿಕೊ. ನನ್ನ ಅಭ್ಯಂತರವೇನೂ ಇಲ್ಲ. ಆದರೆ, ಇವಳನ್ನೂ ಕಾಪಾಡಿಕೊಳ್ಳಬೇಕಾದ್ದು ನಿನ್ನ ಧರ್ಮ." ಅದಕ್ಕೆ ಶೇಷಗಿರಿ, "ಯಾಕೆ? ಈಗ ಇವಳನ್ನು ಕಟ್ಟಿಕೊಂಡು ಇವಳು ಬೇಯುವುದನ್ನು ತಪ್ಪಿಸಿ ನಾವೇ ಬೇಯಿಸಿಕೊಳ್ಳುವ ಸ್ಥಿತಿಗೆ ಬಂದಿದ್ದೇವೆ; ನಾನು ಇನ್ನೊಂದು ಮದುವೆಮಾಡಿಕೊಂಡರೆ ನಾವೇ ಬೆಂದುಹೋಗುತ್ತೇವೆ. ಜಾಣೆಯಾದವಳನ್ನು ಕಟ್ಟಿಕೊಂಡರೆ ನಿಜವಾಗಿಯೂ ಈ ಮೊದ್ದಿಗೆ ಕೂರಿಸಿ ಬಡಿಸುತ್ತಾಳೆಯೆ? ಅದೆಲ್ಲ ಆಗದಹೋಗದ ಮಾತು. ನಮ್ಮ ಹಣೆಯಬರಹ ಹೀಗಿತ್ತು; ಅನುಭವಿಸೋಣ" ಎಂದು ಉತ್ತರಕೊಟ್ಟನು.

ಅಂತೂ, ಮಾರನೆಯ ದಿನದಿಂದಲೇ ಸಂಪೂರ್ಣ ನಳಪಾಕಕ್ಕೆ ಪ್ರಾರಂಭವಾಯಿತು; ಶೇಷಗಿರಿಯ ತಂದೆ ಒಲೆಯ ಮುಂದೆ ಕುಳಿತಿರುತ್ತಿದ್ದರು; ಅವನು ಶ್ರಮಸಾಧ್ಯವಾದ ಸಂತ್ರ್ಯಾಗಗಳನ್ನೆಲ್ಲ ಮಾಡುತ್ತಿದ್ದನು. ಕೆಲವು ಕಾಲ ಕುಳಿತು ಉಣ್ಣುವ ಭಾಗ್ಯವನ್ನು ಪಡೆದಿದ್ದಳು ಭಾಗೀರಥಮ್ಮ.

೩

ಹೀಗೆ ಕೆಲವು ಕಾಲ ಕಳೆಯಿತು. ಇದ್ದಕ್ಕಿದ್ದ ಹಾಗೆ 'ನಳ ಮಹಾರಾಯ' ತನ್ನ 'ದಮಯಂತಿ'ಯನ್ನು ಬಿಟ್ಟು ಹೋಗುವ ಪ್ರಸಂಗವೊದಗಿತು.

ನೆರೆಮನೆಯ ವೆಂಕಟರಾಯರ ಮನೆಗೆ ಅವರ ತಮ್ಮನ ಮಗಳು, ವಿಧವೆಯಾದ ತರುಣಿ, ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿ ಶಾಲಾ ಉಪಾಧ್ಯಾಯಿನಿಯಾಗಿ ಸ್ವಾವಲಂಬಿಯಾಗುವ ಉದ್ದೇಶದಿಂದ ಬಂದಿದ್ದಳು. ಅವಳ ಹೆಸರು ಸುಭದ್ರೆ. ಚೆಲುವೆ, ಜಾಣೆ; ವಿದ್ಯಾಭ್ಯಾಸದ ಕೆಲವು ಮೆಟ್ಟಲುಗಳನ್ನು ಹತ್ತಿದ್ದ ಅವಳ ಮನಸ್ಸು ಸುಸಂಸ್ಕೃತವಾಗಿತ್ತು. ಚೆನ್ನಾಗಿ ಹಾಡು ಹೇಳುತ್ತಿದ್ದಳು. ಸುಭದ್ರೆಯ ಮನೋಹರ ಕಂಠ ರೂಪಗಳು ಶೇಷಗಿರಿಯ ತೆರಪಾಗಿದ್ದ ಹೃದಯ ಮನಸ್ಸುಗಳನ್ನು ತುಂಬಿದುವು. ಇವಳು ವಿಧವೆಯಾಗಿಲ್ಲದೆ ಹೋಗಿದ್ದರೆ ತಾನು ಇವಳನ್ನು ಮದುವೆಯಾಗಿ ಸುಖವಾಗಿದ್ದಿರಬಹುದಾಗಿದ್ದಿತಲ್ಲವೆ ಎಂಬ ದಾಹಕ ಪ್ರಶ್ನೆ ಅವನ ಮನಸ್ಸನ್ನು ಕಾಡತೊಡಗಿತು. ಮದುವೆಯಾಗದಿದ್ದರೂ ಆ ಸುಖವನ್ನು ಪಡೆಯಲು ಸಾಧ್ಯವಿಲ್ಲವೆ? ವಿಧಿಯಿಂದ ವಂಚಿತನಾದ ತಾನು ಆ ಸುಖವನ್ನು ಪಡೆದು ತನ್ನಂತೆಯೇ ವಂಚಿತಳಾದ ಸುಭದ್ರೆಗೂ ಆ ಸುಖವನ್ನು ನೀಡಿದರೆ ಅದರಲ್ಲಿ ತಪ್ಪೇನು ಎಂಬ ಮೋಹಕಪ್ರಶ್ನೆ ಅವನ ಹೃದಯವನ್ನು ಸೆಳೆಯತೊಡಗಿತು. ಇಂಥ ಸಂದರ್ಭಗಳಲ್ಲಿ ಉದ್ದೇಶಸಾಧನೆಗಾಗಿ ಹೇಗೆ ಮುಂದುವರಿಯ ಬೇಕೆಂಬ ಸಮಸ್ಯೆಯಲ್ಲಿ ಸಿಕ್ಕಿ ತೊಳಲುವ ಹೃದಯಕ್ಕೆ ಮನಸ್ಸು ಅದು ಹೇಗೋ ದಾರಿ ತೋರಿಸಿಕೊಡುತ್ತದೆ. ಸುಭದ್ರೆ ತನ್ನ ಮನೆಯ ಜಗುಲಿಯ ಮೇಲೆ ನಿಂತಿರುವಂದು, ಶಾಲೆಗೆ ಹೋಗುವಾಗಲೋ ಅಲ್ಲಿಂದ ಹಿಂದಿರುಗುವಾಗಲೋ ಎಂದಾದರೊಮ್ಮೆ ದಾರಿಯಲ್ಲಿ ಅವಳನ್ನು ಸಂಧಿಸಿದಂದು, ಅರ್ಥಗರ್ಭಿತವಾದ ಕಣ್ಣೋಟ, ಮನದಿಂಗಿತವನ್ನು ಸೂಚಿಸುವ ಮುಗುಳು ನಗೆ ಮುಂತಾದ ಮನ್ಮಥಬಾಣಗಳನ್ನು ಅವಳ ಕಡೆಗೆ ಎಸೆಯತೊಡಗಿದನು ಶೇಷಗಿರಿ. ಕಲಿತ ಹೆಣ್ಣಿಗೆ ಇವು ಅರ್ಥವಾಗಿರಬೇಕು; ಇವನ ಹೃದಯದ ಕರೆಗೆ ಅವಳ ಹೃದಯ ಮಾರ್ದನಿಗೊಟ್ಟಿತು. ಕೆಲವು ಇಂಗ್ಲಿಷ್ ಪಾಠಗಳನ್ನು ಹೇಳಿಸಿಕೊಳ್ಳುವ ನೆಪಮಾಡಿಕೊಂಡು ಅವಳು ಶೇಷಗಿರಿಯ ಮನೆಗೆ ಹೋಗಿ ಬರಲು ಮೊದಲುಮಾಡತೊಡಗಿದಳು. ಭಾಗೀರಥಮ್ಮನಿಗೂ ಅಕ್ಷರಾಭ್ಯಾಸ ಮಾಡಿಸುವ

ಪ್ರತ್ಯುಪಕಾರಬುದ್ಧಿಯನ್ನು ಮೆರೆಯುವ ಸೋಗು ಹಾಕಿದಳು. ಮನೆಗೆಲಸಗಳಲ್ಲಿ ತೊಡಗಿರುತ್ತಿದ್ದ ಅರೆಗುರುಡನಾದ ಮುದುಕ ತಂದೆ, ಮೊದ್ದು ಹೆಂಡತಿ, ನಸುಗುತ್ತಲೆ ತುಂಬಿದ ಪೂರ್ವ ಕಾಲದ ಮನೆ—ಇದಕ್ಕಿಂತ ಅನುಕೂಲವಾದ ಸನ್ನಿವೇಶ ಇನ್ನೇನು ಬೇಕು ಈ ಪ್ರಣಯಿಗಳಿಗೆ? ಹೊರಗಿನ ನೋಟಕ್ಕೆ ಶೇಷಗಿರಿ ಸುಭದ್ರೆಯರ ಗುಪ್ತಪ್ರಣಯ ವಿಲಾಸದ ಸುಳಿವೂ ತೋರಿಬರುವಂತಿರಲಿಲ್ಲ. ಸುಭದ್ರೆ ಗರ್ಭಿಣಿಯಾದಳು. ವಿಷಮ ಸನ್ನಿವೇಶದಿಂದ ಪಾರಾಗಲು, ತನ್ನ ತಂದೆ ಕೂಡ ಹಾಕಿಟ್ಟ ತನ್ನ ಕೈಗೆ ಸುಲಭವಾಗಿ ದೊರೆಯುವಂತಿದ್ದ ಒಂದು ಸಾವಿರ ರೂಪಾಯಿಗಳನ್ನೂ ತೆಗೆದುಕೊಂಡು ಶೇಷಗಿರಿ ಓಡಿ ಹೋದನು. ಸುಭದ್ರೆ ಅಂದು ಶಾಲೆಗೆ ಹೋದವಳು ಮನೆಗೆ ಹಿಂದಿರುಗಲೇ ಇಲ್ಲ. ಸುಭದ್ರಾಹರಣದ ವೃತ್ತಾಂತ ಕೆಲವು ದಿನಗಳಲ್ಲಿ ಬೀದಿಯ ಮಾತಾಯಿತು. ಮಗ ಕಣ್ಮರೆಯಾಗಿ ಹೋದ, ಹಣವೂ ಹೋಯಿತು, ಮನೆಯಲ್ಲಿ ಬೇಯಿಸುವುದಕ್ಕೂ ಬಾರದ ಮೊದ್ದು ಸೊಸೆ—ಶೇಷಗಿರಿಯ ತಂದೆಯ ಪಾಡು ನಾಯಿಪಾಡಾಯಿತು. ಅವರಿಗೆ ಗುಂಡಪ್ಪ ಬೇಕಾದಷ್ಟು ಧೈರ್ಯ ಸಮಾಧಾನಗಳನ್ನು ಹೇಳುತ್ತಿದ್ದನಂತೆ. ಅದಕ್ಕೆ ಆ ಮುದುಕ—"ಹಣ ಹೋಯಿತೆಂದು ನನಗೆ ವ್ಯಸನವಿಲ್ಲ; ಮಗ ಕಣ್ಮರೆಯಾಗಿ ಹೋದನೆಂದೂ ಅಷ್ಟು ವ್ಯಸನವಿಲ್ಲ; ನಾನೂ ತೀರಿಹೋದರೆ ಈ ಬಡಪ್ರಾಣಿಗೆ ಗತಿ ಯಾರು?"—ಎಂದು ಭಾಗೀರಥಿಗಾಗಿ ಕೊರಗುತ್ತಿದ್ದನಂತೆ. ಆದರೆ, ಒಳಗೇ ಪುತ್ರವಿರಹಶೋಕವೂ ಕೊರೆಯದೆ ಇದ್ದೀತೆ? ಮುದುಕ ತಂದೆ ಹಾಸಿಗೆ ಹಿಡಿದರು. ಆ ಕಾಲದಲ್ಲಿ ನಮ್ಮ ಗುಂಡಪ್ಪ ಅವರಿಗೆ ಮಾಡಿದ ಸಹಾಯ ಅಷ್ಟಿಷ್ಟಲ್ಲ. ಹೆಂಡತಿ ಮಕ್ಕಳಿಲ್ಲದ ಆತ ಕೆಲವು ಕಾಲ ಅವರ ಮನೆಯಲ್ಲಿಯೇ ಇದ್ದುಕೊಂಡು, ಅಡಿಗೆ ಮಾಡಿ ಅವರಿಗೆ ಬಡಿಸಿ ತಾನೂ ಅಲ್ಲಿಯೇ ಊಟಮಾಡುತ್ತಿದ್ದನು. ಗುಂಡಪ್ಪನ ಈ ಸೇವಾಕಾರ್ಯ ಬಹಳ ಕಾಲವೇನೂ ನಡೆಯುವುದಾಗಿರಲಿಲ್ಲ. ಏಕೆಂದರೆ, ಶೇಷಗಿರಿಯ ತಂದೆ ಕೊರಗಿನಿಂದಲೆ ಹಾಸಿಗೆ ಹಿಡಿದು ತೀರಿಕೊಂಡರು. ಶೇಷಗಿರಿ ಊರಿನಲ್ಲಿ ಇಲ್ಲದಿದ್ದುದರಿಂದ, ನಂಜನಗೂಡಿನಲ್ಲಿದ್ದ ಅವನ ತಂದೆಯ ದಾಯಾದಿಗಳಿಗೆ ಕಾಗದ ಹಾಕಿಸಲು ಅವರು ಬಂದು ಮೃತನ ಉತ್ತರ ಕ್ರಿಯಾದಿಗಳನ್ನು ಮಾಡಿ ಮನೆಯಲ್ಲಿಯೇ ತಳವೂರಿದರು. ಕಾಲಕ್ರಮದಲ್ಲಿ ಮನೆಯನ್ನು ಹೇಗೋ ತಮ್ಮದನ್ನಾಗಿ ಮಾಡಿಕೊಂಡು, ಅದನ್ನು ಮಾರಿಯೂ ಬಿಟ್ಟರು. ಆ ಮನೆಯ ಜಗಲಿಯ ಮೇಲೆ 'ಹೊರಗಾದ' ಮನೆ ಹೆಂಗಸರಿಗೆಂದು ಒಂದು ಚಿಕ್ಕ ಕೋಣೆಯಿದ್ದಿತು. ಅಲ್ಲಿ ಒಬ್ಬರು ಕಾಲು ಮುದುಡಿಕೊಂಡು ಮಲಗಬಹುದಾಗಿತ್ತು ಅಷ್ಟೆ. ನಿಂತರೆ ಚಾವಣಿ ತಲೆಗೆ ತಗಲುವಂತಿತ್ತು. ಬಗ್ಗಿಕೊಂಡೇ ಹೋಗಬೇಕಾದಂತಹ ಕುಳ್ಳದ ಬಾಗಿಲುವಾಡ; ಹಗಲು ಹೊತ್ತಿನ ಉಪಯೋಗಕ್ಕೆ ಮಾತ್ರ ಏರ್ಪಡಿಸಿದ್ದುದರಿಂದ ಬಾಗಿಲೇ ಇರಲಿಲ್ಲ. ಕಿಟಕಿಯೂ ಇರಲಿಲ್ಲ. ಈ ಕೋಣೆ ಹಲ್ಲಿಗಳ ರಾಜ್ಯ, ಹೆಗ್ಗಣಗಳ ಕ್ರೀಡಾಕ್ಷೇತ್ರ, ಕತ್ತೆ ನಾಯಿಗಳ ವಿಶ್ರಾಂತಿಗೃಹ. ಆ ದಾಯಾದಿಗಳು ಮನೆಯಲ್ಲಿ ಇದ್ದ ಕಾಲದಲ್ಲಿಯೇ ಭಾಗೀರಥಮ್ಮನನ್ನು ಈ ಕೋಣೆಗೆ ಅಟ್ಟಿದರು. ಅವಳ ಭಿಕ್ಷಾನ್ನ ಮೊದಲಾದುದೂ ಆಗಲೇ. ಈ ಸಂದರ್ಭದಲ್ಲಿ ಬೀದಿಯವರ ಆಕ್ಷೇಪಣೆ ಬಲವಾಗಲು, ಆ ದಾಯಾದಿಗಳು ಬೀದಿಯವರಿಗೆ ತಿಳಿಯದಂತೆಯೆ ಮನೆಯನ್ನು ಯಾರಿಗೋ ಮಾರಿ ಹೊರಟುಹೋದರು. ಮನೆಯನ್ನು ಕೊಂಡಾತ ಭಾಗೀರಥಮ್ಮನನ್ನು ಜಗಲಿಯ ಮೇಲಿನ ಕೋಣೆಯಲ್ಲಿಯೇ ಇರಗೊಡಿಸುವಷ್ಟು ಮಟ್ಟಿಗೆ ದಯಾಳುವಾಗಿದ್ದನು. ಹೀಗೆ, ಭಾಗೀರಥಮ್ಮ ಬೀದಿಯವರ 'ಕರುಣೆಯ ತೊಟ್ಟಿಲ ಶಿಶು'ವಾದರೂ ಸ್ವಗೃಹದಲ್ಲಿಯೇ ವಾಸಮಾಡಿಕೊಂಡಿರುವಷ್ಟು ಮಟ್ಟಿನ ಪುಣ್ಯ ಪಡೆದಿದ್ದಳು.

೪

ಮೊದ ಮೊದಲು ಭಾಗೀರಥಮ್ಮ ನಿಜವಾಗಿಯೂ ಬೀದಿಯವರ ಕರುಣೆಯ ತೊಟ್ಟಿಲ ಶಿಶುವಾಗಿದ್ದಳು.

ಗಂಡ ತೊರೆದು ಹೋದವನು, ಮನೆಯಿದ್ದೂ ಇಲ್ಲದವಳು, ಹೆಂಗಸಾಗಿ ಹುಟ್ಟಿ ತನ್ನ ಮಟ್ಟಿಗೆ ಕೂಡ ಅಡಿಗೆ ಮಾಡಿಕೊಳ್ಳಲಾರದವಳು—ಎಂಬ ಭಾವನೆಯಿಂದ ಹಬ್ಬಹರಿದಿನಗಳಲ್ಲಿ ಬಡ ಮುತ್ತೈದೆಯೆಂದು ಅವಳನ್ನು ಭೋಜನಕ್ಕೆ ಕರೆದು, ಹೊಟ್ಟೆತುಂಬ ಅನ್ನ ಹಾಕಿ, ಅರಿಸಿನ, ಕುಂಕುಮ, ಹೂವು, ತಾಂಬೂಲಗಳನ್ನಿತ್ತು, ನಾಲ್ಕಾಣೆ ದಕ್ಷಿಣೆ ಕೊಟ್ಟು ಅವಳನ್ನು ಬೀದಿಯವರೆಲ್ಲ ಸಂತೋಷಪಡಿಸುತ್ತಿದ್ದರು. ಅವಳ ಸತ್ಕಾರ ವಿಚಾರದಲ್ಲಿ ಬೀದಿಯ ಕುಟುಂಬಗಳಲ್ಲಿ ಒಂದು ವಿಧವಾದ ಪೈಪೋಟಿಯೇ ನಡೆಯುತ್ತಿತ್ತು. ಅವಳ ಅಡಿಗೆ ಮಾಡುವ ಕೈ ಅಪ್ರಯೋಜಕವಾಗಿದ್ದರೂ ತಿನ್ನುವ ಬಾಯ ನಾಲಗೆ ಬಹು ಚುರುಕು ಎಂದು ನಮ್ಮ ಗುಂಡಪ್ಪನ ಅಭಿಪ್ರಾಯ. ಅನೇಕ ಮನೆಗಳ ಆಹ್ವಾನವಿದ್ದರೂ ನಮ್ಮ ತಾಯಿ ಮಾಡುವ ಸಾರು ಬಹು ರುಚಿ ಎಂದು ನಮ್ಮ ಮನೆಯ ಆಹ್ವಾನವನ್ನೇ ಅವಳು ಹೆಚ್ಚಾಗಿ ಒಪ್ಪಿಕೊಳ್ಳುತಿದ್ದಳು. ಊಟದ ಜೊತೆಗೆ, ಹಲವರು ಮುತ್ತೈದೆಯರು ದಾನ ಮಾಡುತಿದ್ದ ಒಳ್ಳೊಳ್ಳೆಯ ಉಟ್ಟ ತೊಟ್ಟ ಸೀರೆ ಕುಪ್ಪಸಗಳೂ ಭಾಗೀರಥಮ್ಮನಿಗೆ ಪ್ರತಿ ವರ್ಷವೂ ಉಡುಗೊರೆಯಾಗಿ ದೊರೆಯುತ್ತಿದ್ದುವು. ಹೀಗಾಗಿ ಬಡ ಭಾಗೀರಥಮ್ಮನಿಗೆ ಪರಮಾತ್ಮನಿಂದ ಅಕ್ಷಯವಸ್ತ್ರದ ಅನುಗ್ರಹ ದೊರಕಿದಂತಾಗಿತ್ತು. ಯಾರ ಮನೆಯಲ್ಲಿ ಏನೇ ಕಾರ್ಪಣ್ಯವಿರಲಿ, ಕೆಲವು ವರ್ಷ ಕಾಲ ಭಾಗೀರಥಮ್ಮ ಹೊಟ್ಟೆತುಂಬ ಉಂಡು ಮೈ ತುಂಬ ಬಟ್ಟೆ ಧರಿಸುತ್ತಿದ್ದಳು. ನಮ್ಮ ಬೀದಿಯಲ್ಲಿ 'ಬೀದಿಯ ಬಸವ' ಒಂದಿತ್ತು; ಬಸವನೇನು, ಗೂಳಿ; ವೃಷೋತ್ಸರ್ಗಕ್ಕೆ ಬಿಟ್ಟ

ಹೋರಿಗರು ಗೂಳಿಯಾಗಿ ಚೆನ್ನಾಗಿ ಮೈ ತುಂಬಿಕೊಂಡು ಬೆಳೆದಿತ್ತು. ಆದರೂ ಬಹು ಸಾಧು. ಯಾವುದೋ ಪೂರ್ವ ಜನ್ಮದ ಋಣಾನುಬಂಧದಿಂದ ಎಂಬಂತೆ, ಆ ಗೂಳಿ ಭಾಗೀರಥಮ್ಮನ ಕೋಣೆಯ ಬಳಿಯ ಜಗುಲಿಯ ಮೇಲೆಯೇ ಮಲಗುತ್ತಿತ್ತು. ಭಾಗೀರಥಮ್ಮ ಭಿಕ್ಷಾನ್ನ ಭುಂಜಿಸಿ ಉಳಿದ ಭಾಗವೆಲ್ಲಾ ಆ ಬಸವನ ಪಾಲು. ಭಾಗೀರಥಮ್ಮನ ಎಂಜಲಿಗಾಗಿ ಆ ಗೂಳಿಗೂ ಬೀದಿಯ ಒಂದು ಕೆಂಚ ನಾಯಿಗೂ ನಿತ್ಯ ಜಗಳ.

"ಭಾಗೀರಥಮ್ಮ, ನೀವು ನಂಜನಗೂಡು ಶ್ರೀಕಂಠೇಶ್ವರನಿಗೆ ಹರಿಸಿಕೊಳ್ಳಿ. ಪ್ರತಿ ವರ್ಷ ಜಾತ್ರೆಯ ಕಾಲಕ್ಕೆ ಹೋಗಿ ದೇವರ ಸೇವೆ ಮಾಡಿ. ನಿಮ್ಮ ಯಜಮಾನರು ಹಿಂದಿರುಗಿ ಬಂದರೂ ಬರುತ್ತಾರೆ" ಎಂದು ಗುಂಡಪ್ಪ ಒಮ್ಮೆ ಅವಳಿಗೆ ಸಲಹೆ ಮಾಡಿದರಂತೆ. ಗಂಡನನ್ನು ಮನೆಯಲ್ಲಿ ಉಳಿಸಿಕೊಳ್ಳುವ ಸಾಮರ್ಥ್ಯ ಅವಳಿಗಿಲ್ಲದಿದ್ದರೂ ಆತ ಎಂದಾದರೂ ಹಿಂದಿರುಗಿ ಬಂದೇ ಬರುತ್ತಾನೆ, ಎಲ್ಲಿಯೋ ಇದ್ದಾನೆ, ಸತ್ತಿಲ್ಲ-- ಎಂಬ ಭಾವನೆ ಅವಳಲ್ಲಿ ಸಹಜವಾಗಿ ನೆಲಸಿತ್ತು; ಗುಂಡಪ್ಪನ ಮಾತು ಈ ನಂಬಿಕೆಗೆ ಒತ್ತಾಸೆಕೊಟ್ಟಿತು. ಇದಕ್ಕಾಗಿ ಅವಳು ಪ್ರತಿವರ್ಷವೂ ಒಮ್ಮೆ ನಂಜನಗೂಡಿಗೆ ಹೋಗಿ ಅಲ್ಲಿ ಕೆಲವು ಕಾಲ ಇರುತಿದ್ದಳು. ಇದು ಅವಳಿಗೆ ಅಷ್ಟೇನೂ ಕಷ್ಟಕರವಾಗಿರಲಿಲ್ಲ. ಹೋಗಬರ ರೈಲು ಚಾರ್ಜಿಗೆ ಎಂಟಾಣೆಯಾದರೆ ಸಾಕು; ಶಿವಕೂಟದಲ್ಲಿ ಇರುವಷ್ಟು ಕಾಲವೂ ನಿತ್ಯ ಭೋಜನವಾಗುತ್ತಿತ್ತು. ಮೊದಲ ವರ್ಷ ಇವಳು ಸ್ವಂತ ವೆಚ್ಚದಲ್ಲಿಯೇ ನಂಜನಗೂಡಿಗೆ ಹೋಗಿಬಂದಳಂತೆ. "ನಿಮ್ಮ ಹಣ ಯಾಕೆ ವೆಚ್ಚ ಮಾಡುತ್ತೀರಿ? ಯಾರನ್ನಾದರೂ ಕೇಳಿ, ಕೊಡುತ್ತಾರೆ" ಎಂದು ಗುಂಡಪ್ಪ ಅವಳಿಗೆ ಸಲಹೆಮಾಡಿದನಂತೆ. ಅದರಂತೆ, ಭಾಗೀರಥಮ್ಮ ಪ್ರತಿ ವರ್ಷವೂ ಯಾರನ್ನಾದರೂ ನಂಜನಗೂಡಿನ ಯಾತ್ರೆಗಾಗಿ ಎಂಟಾಣೆ ಬೇಡುವುದು ರೂಢಿಯಾಯಿತು. ಅವಳು ನಂಜನಗೂಡಿನಿಂದ ಹಿಂದಿರುಗಿದ ಕೂಡಲೆ, ಬೀದಿಯ ತುಂಟ ಪೋರರಾದ ನಾವು-- "ನಂಜನಗೂಡಿಗೆ ಹೋಗಿದ್ಯಾ, ನಂದಿ ಕಂಬ ನೋಡಿದ್ಯಾ, ಕಾಸಿನ ಕಡಲೆ ಕೊಂಡಿದ್ಯಾ, ಕಾಣದ ಗಂಡನ ಕಂಡಿದ್ಯಾ" ಎಂದು ಅವಳ ಮುಂದೆ ರಾಗವಾಗಿ ಹಾಡುತ್ತ ಗೇಲಿಮಾಡುತ್ತಿದ್ದೆವು. ಗಂಡನಿಲ್ಲದ್ದಕ್ಕಾಗಿ ದುಃಖಗೊಳ್ಳದ ಆ ಬಡಪಾಯಿ, ಗಂಡನ ವಿಚಾರ ಎತ್ತಿ ಆಡಿದಕ್ಕಾಗಿ ಕೋಪಗೊಳ್ಳುತ್ತಲೂ ಇರಲಿಲ್ಲ. "ಸ್ವಲ್ಪ ಕಡಲೆ ತಂದಿದೀನಿ, ಕೊಳ್ಳಿ" ಎಂದು ತಾನು ತಂದಿದ್ದ ಕಡಕೊಳದ ಕಡಲೆಯನ್ನು ನಮಗೆಲ್ಲಾ ಹಂಚಿಬಿಡುತ್ತಿದ್ದಳು.

ನಾವು ಭಾಗೀರಥಮ್ಮನನ್ನು ಹಲವು ವಿಧದಲ್ಲಿ ಗೋಳು ಹುಯ್ದುಕೊಳ್ಳುತ್ತಿದ್ದೆವು. ಅವಳ ಭಿಕ್ಷಾನ್ನದ ಪಾತ್ರೆಗೆ ಕಲ್ಲುಬೀರುತ್ತಿದ್ದ ಸಂಗತಿಯನ್ನು ಹಿಂದೆಯೇ ಹೇಳಿರುವೆನಷ್ಟೆ. ಆ ಬಡಪ್ರಾಣಿ ಬೀದಿಯಲ್ಲಿ ನಿಧಾನವಾಗಿ ಕುಂಟುವಂತೆ ನಡೆದು ಹೋಗುತ್ತಿದ್ದರೆ, ಸರದಿಯ ಮೇರೆ ನಮ್ಮಲ್ಲಿ ಒಬ್ಬೊಬ್ಬರು ಒಂದೊಂದು ದಿನ ಮೆಲ್ಲನೆ ಅವಳ ಹಿಂದೆ ಹೋಗಿ ಅವಳ ಮೇಲುಗಚ್ಚೆಯನ್ನು ಎಳೆದು ಬಿಡುತ್ತಿದ್ದೆವು. ಅವಳಿಗೆ ನಮ್ಮ ತುಂಟಾಟ ತಿಳಿಯದಷ್ಟು ಮೊದ್ದಾಗಿರಲಿಲ್ಲ ಅವಳು. ನೆರೆಯವರು ಯಾರಾದರೂ ನಮ್ಮ ಕುಚೇಷ್ಟೆಯನ್ನು ಕಂಡು ನಮ್ಮನ್ನು ಗದರಿಕೊಂಡರೆ, "ಮಕ್ಕಳು, ಪಾಪ, ಬಿಡಿ" ಎಂದು ಕಚ್ಚೆಯನ್ನು ಸರಿಪಡಿಸಿಕೊಳ್ಳುತ್ತ ತನ್ನ ಪಾಡಿಗೆ ತಾನು ಮುಂದೆ ಹೋಗುತ್ತಿದ್ದಳು; ಹಿಂದಿರುಗಿಯೂ ನೋಡುತ್ತಿರಲಿಲ್ಲ. ಅವಳ ಈ ಸಾಧುವರ್ತನೆಯೂ ನಮ್ಮ ಹಾಸ್ಯಕ್ಕೆ ಗುರಿಯಾಗಬೇಕೆ, ಪಾಪ? "ಬಾಲ ನುಲಿಚಿದರೆ ನಮ್ಮ ಬಸವ ಹಾಯೋದಿಲ್ಲ; ಕಚ್ಚೆ ಎಳೆದರೆ ಭಾಗೀರಥಮ್ಮ ಬೈಯ್ಯೋದಿಲ್ಲ" ಎಂದು ಪಲ್ಲವಿ ಹಾಡುತ್ತಿದ್ದೆವು. ನಂಜನಗೂಡಿನ ಯಾತ್ರೆ ಪ್ರಾರಂಭವಾದಂದಿನಿಂದ ಭಾಗೀರಥಮ್ಮ ಸೋಮವಾರ ರಾತ್ರಿ ಊಟಮಾಡುತ್ತಿರಲಿಲ್ಲ; ಅಂಗಡಿಯಿಂದ ನಾಲ್ಕು ಬಾಳೆಯ ಹಣ್ಣುಗಳನ್ನು ತಂದು ತನ್ನ ಕೋಣೆಯಲ್ಲಿ ಫಲಾಹಾರಕ್ಕಾಗಿ ಇಟ್ಟುಕೊಂಡಿರುತ್ತಿದ್ದಳು; ಆ ಕೋಣೆಗೆ ಬಾಗಿಲಿರಲಿಲ್ಲ. ನಮ್ಮ ಗುಂಡಪ್ಪನೇ (ತಾನು ಸಾಯುವ ಮುನ್ನ) ಒಂದು ಗೋಣಿಯ ತಾಟನ ತೆರೆಯನ್ನು ಬಾಗಿಲಿಗೆ ಅಳವಡಿಸಿಕೊಟ್ಟಿದ್ದನು. ಅವಳ ಈ ಸೋಮವಾರ ರಾತ್ರಿಯ ಫಲಾಹಾರದ ವಿಚಾರ ನಮಗೆ ಗೊತ್ತಾದ ಕೂಡಲೆ, ಸಮಯ ಕಾದಿದ್ದು, ಅವಳು ಇಲ್ಲದ ವೇಳೆಯಲ್ಲಿ ಆ ಬಾಳೆಯ ಹಣ್ಣನ್ನು 'ಎಗರಿಸಿ' ನಮ್ಮ ನಮ್ಮಲ್ಲಿ ಹಂಚಿಕೊಂಡು ತಿಂದು, ಸಿಪ್ಪೆಯನ್ನು ಬೀದಿಯ ಬಸವನಿಗೆ ತಿನ್ನಿಸಿಬಿಡುತ್ತಿದ್ದೆವು. ಮಾರನೆಯ ದಿನ ಅವಳು ನಮ್ಮಲ್ಲಿಯೇ ದೂರು ಹೇಳಿಕೊಳ್ಳುತ್ತಿದ್ದಳು: "ನೋಡಿರಪ್ಪಾ, ಬಾಳೆಯ ಹಣ್ಣು ತಂದು ಇರಿಸಿಕೊಂಡಿದ್ದೆ. ಎಲ್ಲೋ ಹಾಳು ನಾಯಿ ಕಚ್ಚಿಕೊಂಡು ಹೋಯಿತೇನೋ." ಅದಕ್ಕೆ ನಾವು, "ಭಾಗೀರಥಮ್ಮನವರೇ, ನಾಯಿ ಎಲ್ಲಾದರೂ ಬಾಳೆಯ ಹಣ್ಣು ತಿನ್ನುತ್ತದೆಯೇ? ನಂಜುಂಡೇಶ್ವರನೇ ಬಂದು ತೆಗೆದುಕೊಂಡು ಹೋಗಿರಬೇಕು" ಎಂದು ನಗುತ್ತಿದ್ದೆವು. ನಮ್ಮಲ್ಲೆಲ್ಲ ಬಹಳ ಚಿಕ್ಕವನಾದ ನಂಜುಂಡನನ್ನು ಈ ಚೌರ್ಯಕ್ಕೆ ಮುಂದೆ ಬಿಡುತ್ತಿದ್ದೆವು. ನಮ್ಮ ಮಾತು ಅವಳಿಗೆ ಅರ್ಥವಾಗುತ್ತಿರಲಿಲ್ಲ. "ನಾನು ಅಷ್ಟು ಪುಣ್ಯ ಮಾಡಿದೀನೇನಪ್ಪ" ಎನ್ನುತ್ತಿದ್ದಳು. ಹೀಗೆ, ನಾನಾ ಬಗೆಯಲ್ಲಿ ಅವಳಿಗೆ ಕಿರುಕುಳ ಕೊಡುತ್ತಿದ್ದೆವು ನಾವು. ಇದಕ್ಕಾಗಿ ಮುಂದಿನ ಜನ್ಮದಲ್ಲಿ ನಮಗೆ ಯಾವ ಶಿಕ್ಷೆಯು ಕಾದಿದೆಯೋ ನಾವು ಕಾಣೆವು.


ನಾವು ಚಿಕ್ಕವರಾಗಿದ್ದಂದು, ಈಗಿನ ಕಾಲದ ಸಿನಿಮಾ ಹಾಡುಗಳು, ಗ್ರಾಮಫೋನ್ ಸಂಗೀತ, ರೇಡಿಯೋ ಸಂಗೀತ-- ಇವು ನಾಗರಿಕ ಜೀವನಕ್ಕೆ ಇನ್ನೂ ನುಸುಳಿರಲಿಲ್ಲ. ಬೀದಿಯ ಹೆಣ್ಣು ಮಕ್ಕಳು ಆಗತಾನೆ ಇಂಗ್ಲಿಷು ವಿದ್ಯಾಭ್ಯಾಸಕ್ಕೂ

ಅಲ್ಪ ಸ್ವಲ್ಪ ಪ್ರಾರಂಭವಾಡಿದ್ದುದರಿಂದ, ಹಳೆಯ ಕಾಲದ ಹಾಡುಗಳು ತಮಗೆ ಬಂದರೂ ಅವನ್ನು ಹೇಳಲು ಅದೇನೋ ನಾಚುತ್ತಿದ್ದರು; ಹೊಸಕಾಲದ ಹಾಡುಗಳು ಅಷ್ಟಾಗಿ ಪ್ರಚಾರವಾಗಿರಲಿಲ್ಲ. ಹೀಗಾಗಿ, ಹಬ್ಬ ಆರತಿಯಕ್ಷತೆ ಮೊದಲಾದ ಸಂದರ್ಭಗಳಲ್ಲಿ ಹಿರಿಯ ಮುತ್ತೈದೆಯರೇ ಹಾಡು ಹೇಳಬೇಕಾಗಿದ್ದಿತು. ದಿಕ್ಕಿಲ್ಲದ ಬಡ ಮುತ್ತೈದೆಯೆಂದು ಭಾಗೀರಥಮ್ಮನನ್ನು ಯಾರೂ ಆರತಿಗೆ ಕರೆಯದೆ ಇರುತ್ತಿರಲಿಲ್ಲ; ಕರೆಕರೆದು ರೂಢಿಯಾಗಿ ಕರೆಯದಿದ್ದರೂ ಆರತಿಗೆ ಹೋಗುವುದು ಭಾಗೀರಥಮ್ಮನ ರೂಢಿಯಾಗಿ ಬಿಟ್ಟಿತು. ಆದರೂ ಕರೆಯದ ಮುತ್ತೈದೆ ಎಂದು ಅವಳ ಬಗ್ಗೆ ತಿರಸ್ಕಾರವಿರಲಿಲ್ಲ. ವಿಶೇಷವೇನೆಂದರೆ, ಪೂರ್ವಕಾಲದ ಸೋಬಾನೆ ಹಾಡುಗಳು ಅವಳಿಗೆ ಬರುತ್ತಿದ್ದಷ್ಟು ನಮ್ಮ ಬೀದಿಯಲ್ಲಿ ಬೇರೆ ಯಾವ ಮನೆಯಾಕೆಗೂ ಬರುತ್ತಿರಲಿಲ್ಲ. ಭಾಗೀರಥಮ್ಮನಿಗೆ ಇಷ್ಟೊಂದು ಹಾಡುಗಳು ಬರುತ್ತವೆಯೆಂದು ಯಾರಿಗೂ ತಿಳಿಯದು. ನಮ್ಮ ಮನೆಯಲ್ಲಿ ನಡೆದ ಒಂದು ಶುಭಕಾರ್ಯ ಸಂದರ್ಭದಲ್ಲಿ "ನೀವು ಹೇಳಿ ನೀವು ಹೇಳಿ" ಎಂದು ಬಂದ ಮುತ್ತೈದೆಯರಿಂದ ಹಾಡು ಹೇಳಿಸಲು 'ಪಿರಕಣಿ'ಗೆ (ಒತ್ತಾಯಕ್ಕೆ) ಮೊದಲಿಟ್ಟಾಗ ಭಾಗೀರಥಮ್ಮ ಮುಂದೆ ಬಂದು, "ನಾನು ಹೇಳುತ್ತೀನೆ, ಬಿಡಿ ಅಂದ್ರೆ" ಎಂದು ಹಾಡಿಗೆ ಪ್ರಾರಂಭಮಾಡಿಯೇ ಬಿಟ್ಟಳು. ಸುಮಾರು ಒಂದು ಗಂಟೆಯ ಕಾಲ ಎರಡು ಮೂರು ಹಾಡುಗಳನ್ನು ಮಾತ್ರ ಹಾಡಿದಳು. ಅಂದಿನಿಂದ ಎಲ್ಲರ ಮನೆಯಲ್ಲಿಯೂ ಶುಭ ಸಂದರ್ಭಗಳಲ್ಲಿ ಅವಳ ಹಾಡಿಕೆ ತಪ್ಪದೆ ನಡೆಯುತ್ತಿತ್ತು. ಅವಳ ಹಾಡಿಕೆ ಬೇಸರ ಹಿಡಿಸುವ ಕಾಲವೂ ಬರದೆ ಇರಲಿಲ್ಲ; ಏಕೆಂದರೆ ಕಂಠ ಚೆನ್ನಾಗಿರಲಿಲ್ಲ. ಕಂಠ ಚೆನ್ನಾಗಿದ್ದಿದ್ದರೆ, 'ಭಿಕ್ಷಾನ್ನದ ಭಾಗೀರಥಮ್ಮ' ಎನ್ನುವ ಬದಲು 'ಹಾಡಿನ ಭಾಗೀರಥಮ್ಮ' ಎಂದೇ ಪ್ರಸಿದ್ಧಳಾಗುತ್ತಿದ್ದಳೇನೊ. ಕಂಠ ಚೆನ್ನಾಗಿಲ್ಲದಿದ್ದರೂ, ಕೇಳುವವರಿಗೆಲ್ಲರಿಗೂ ಬೇಸರ ಹಿಡಿದು, 'ಸಾಕು, ಆರತಿಯೆತ್ತುವ ಹಾಡು ಹೇಳಿಬಿಡಿ' ಎಂದರೂ, ತನಗೆ ಸಾಕೆನ್ನಿಸುವ ವರೆಗೂ ಭಾಗೀರಥಮ್ಮ ಹಾಡಿಕೆ ನಿಲ್ಲಿಸುತ್ತಿರಲಿಲ್ಲ. 'ಭಗೀರಥ ಬಂದರೂ ಭಾಗೀರಥಮ್ಮನ ಹಾಡು ನಿಲ್ಲಿಸಲು ಸಾಧ್ಯವಿಲ್ಲ' ಎಂದು ಗುಂಡಪ್ಪ ಹೇಳುತ್ತಿದ್ದನು. ಇದು ಹೇಗಾದರೂ ಇರಲಿ. 'ಹೆಂಗಸು ಎಂದ ಮೇಲೆ ಹಾಡು ಹಸೆ ಬಂದಿರಬೇಕು' ಎಂಬುದು ಆ ಕಾಲದ ಭಾವನೆ. ಹೆಂಗಸು ಎನ್ನಿಸಿಕೊಳ್ಳಲು ಈ ಒಂದು ಅರ್ಹತೆಯನ್ನಂತೂ ಭಾಗೀರಥಮ್ಮ ಪಡೆದಿದ್ದಳು. ಅವಳು ತನ್ನ ಗಂಡನ ಮುಂದೆ ಈ ಗುಣವನ್ನು ತೋರಿಸಿಕೊಂಡಿರಲಿಲ್ಲವೆಂದು ಕಾಣುತ್ತದೆ; ಅಥವಾ, ತೋರಿಸಿಕೊಂಡಿದ್ದರೂ ಸುಭದ್ರೆಯ ಹಾಡಿನ ಸೊಗಸಿನ ಮುಂದೆ ಭಾಗೀರಥಿಯ ಬಡ ಹಾಡಿಕೆ ಅವನಿಗೆ ರುಚಿಸದೆ ಹೋಗಿರಬೇಕು. ಬೀದಿಯವರಿಗೆ ಬೇಕಾದವಳು ಗಂಡನಿಗೆ ಬೇಡವಾದಳು.

ಭಾಗೀರಥಮ್ಮನ ಜೀವನ ರಥೋತ್ಸವ ಹೀಗೆ ನಿರಾತಂಕವಾಗಿ ಕೆಲವು ವರ್ಷಕಾಲ ಸಾಗಿತು. ಅವಳ ಜೀವನದಲ್ಲಿ ನಿತ್ಯ ಒಂದೇ ಕಾರ್ಯಕ್ರಮ. ವೈವಿಧ್ಯವಿಲ್ಲ, ವಿಶೇಷವಿಲ್ಲ. ನಡೆದ ಒಂದು ವಿಶೇಷ ಸಂಗತಿಯೆಂದರೆ, ಅವಳು ಒಂದು ಸಲ ಬಲವಾಗಿ ಖಾಯಿಲೆ ಬಿದ್ದದ್ದು. ಎರಡು ದಿನ ಒಂದೇ ಸಮನಾಗಿ ಭಿಕ್ಷಾನ್ನಕ್ಕೆ ಬಾರದಿದ್ದುದರಿಂದ ಗುಂಡಪ್ಪನಿಗೆ ಶಂಕೆಯುಂಟಾಗಿ ಅವಳ ಕೋಣೆಯ ಬಳಿಗೆ ಹೋಗಿ ಇಣಿಕಿ ನೋಡಿದನು. ಭಾಗೀರಥಮ್ಮನ ಮೈಮೇಲೆ ಪ್ರಜ್ಞೆಯಿಲ್ಲದೆ ಬಿದ್ದಿದ್ದುದು ಅವನ ಗಮನಕ್ಕೆ ಬಂದು, ಹೆಂಡತಿ ಮಕ್ಕಳು ಯಾರೂ ಇಲ್ಲದ ಆತ ಅವಳ ಉಪಚಾರಕ್ಕೆ ನಿಂತನು. "ಅವಳು ಸತ್ತರೆ ಸಾಯಲಿ. ಮುತ್ತೈದೆ ಸಾವು. ಅವಳ ಕಷ್ಟ ಬಿಡುಗಡೆಯಾಗುತ್ತೆ" ಎಂದು ಬೀದಿಯವರ ಅಭಿಪ್ರಾಯ. ಆದರೆ ಗುಂಡಪ್ಪನಿಗೆ ಹಾಗೆನಿಸಲಿಲ್ಲ. "ನನಗೆ ಮನೆಯಿಲ್ಲ ಮಠವಿಲ್ಲ, ಸಂಧ್ಯಾವಂದನೆಯಿಲ್ಲ, ದೇವರ ಪೂಜೆಯಿಲ್ಲ. ಇದೇ ನನ್ನ ದೇವರ ಪೂಜೆ" ಎಂದು ಗುಂಡಪ್ಪ ಬೀದಿಯವರಿಗೆ ಹೇಳಿದನಂತೆ. ಈ ಪ್ರಕರಣವಾದ ಒಂದೆರಡು ವರ್ಷಗಳ ನಂತರ ಗುಂಡಪ್ಪನೇ ತೀರಿಹೋದನು. ಭಾಗೀರಥಮ್ಮನಿಗಾಗಿ ಅಂತಃಕರಣಪೂರ್ವಕವಾಗಿ ಮರುಗುತ್ತಿದ್ದ ಒಬ್ಬ ವ್ಯಕ್ತಿ ಇಲ್ಲವಾಯಿತು.

೫

ಶೇಷಗಿರಿ ಹೆಂಡತಿಯನ್ನು ತೊರೆದು ಹೋಗಿ ಹನ್ನೆರಡು ವರ್ಷಗಳ ಮೇಲಾಯಿತು. ಬೀದಿಯವರೆಲ್ಲ ಅವಳಿಗೆ ಮಡಿ ಹಿಡಿಯಬೇಕೆಂದು ಬೋಧನೆಮಾಡಿದರು. ಆದರೆ ತನ್ನ ಗಂಡ ಎಲ್ಲಿಯೋ ಬದುಕಿದ್ದಾನೆ ಎಂದು ಅವಳ ಅಚಲವಾದ ನಂಬಿಕೆ. ಅವಳು ಮಡಿ ಹಿಡಿದರೂ ಒಂದೇ, ಹಿಡಿಯದಿದ್ದರೂ ಒಂದೇ, ಎಂಬುದು ಬೀದಿಯವರಿಗೆ ಅದೇಕೋ ಅರ್ಥವಾಗಲೊಲ್ಲದು. ಅವಳ ಬಗ್ಗೆ ಬೀದಿಯವರಿಗೆ ಆದರ ಕಡಿಮೆಯಾಯಿತು. ಆರತಿಯಕ್ಷತೆಗಳಿಗೆ ಕರೆದರೂ ಕರೆಯದಿದ್ದರೂ ಎಂದಿನಂತೆ ತಪ್ಪದೆ ಬರುತ್ತಿದ್ದ ಅವಳ ಕೈಗೆ ಬಾಗಿನದ ಉಂಡೆಗಳನ್ನು ಹಾಕಿದರೂ ಅರಸಿನ ಕುಂಕುಮ ಕೊಡುವುದನ್ನು ನಿಲ್ಲಿಸಿಬಿಟ್ಟರು. ಆದರೂ, ಬೀದಿಯವರು ಎಂದಿನಂತೆಯೇ ಅವಳಿಗೆ ಕೈತುಂಬ ಭಿಕ್ಷಾನ್ನವಿಡುತ್ತಿದ್ದರು. ಮುಂಜಿ ಮದುವೆಯ ದಿನಗಳಲ್ಲಿ ಅವಳಿಗೆ ಊಟಕ್ಕೂ ಹೇಳುತ್ತಿದ್ದರು. ಆದರೆ, ಸುವಾಸಿನಿಯರ ಪಂಕ್ತಿಯಲ್ಲಿ ಕೂರಲು ಅವಳಿಗೆ ಅವಕಾಶಕೊಡುತ್ತಿರಲಿಲ್ಲ; ಮಡಿ ಹೆಂಗಸರು ಅವಳನ್ನು ಹತ್ತಿರಕ್ಕೇ ಸೇರಿಸುತ್ತಿರಲಿಲ್ಲ. ಎಲ್ಲರ ಮನೆಯಲ್ಲೂ ಅವಳ ಊಟಕ್ಕಾಗಿ ಒಂದು ಮೂಲೆ ಮೀಸಲಾಗಿರುತ್ತಿತ್ತು. ನಮ್ಮ ಮನೆಯಲ್ಲಿ ಒರಳುಕಲ್ಲಿದ್ದ ಮೂಲೆಯಲ್ಲಿ ಅವಳು ಊಟಕ್ಕೆ ಕೂರುತ್ತಿದ್ದುದು ನನಗೆ ಚೆನ್ನಾಗಿ ನೆನಪಿದೆ.



ಮಣಿಪುರದ ಓರ್ವ ನೇಕಾರ್ತಿ.

ಗುಂಡಪ್ಪ ತೀರಿಕೊಂಡದ್ದು ಭಾಗೀರಥಮ್ಮನಿಗೆ ಬಹು ದುಃಖದ ವಿಷಯವಾಗಿತ್ತು. "ಗುಂಡಪ್ಪ ಬದುಕಿದ್ದರೆ ನನಗೆ ಗತಿ ಕಾಣಿಸುತ್ತಿದ್ದರು. ನಾನು ಸತ್ತರೆ ನನ್ನ ಹೆಣ ನಾಯಿ ಪಾಲು, ಅಷ್ಟೆ" ಎಂದು ಕೊರಗುತ್ತಿದ್ದಳು. "ನೀವು ಯೋಚನೆ ಮಾಡಬೇಡಿ. ಯಾರೂ ಗತಿ ಕಾಣಿಸದಿದ್ದರೆ ನಾವು ಕಾಣಿಸುತ್ತೇವೆ" ಎಂದು ನಮ್ಮ ತಾಯಿ ಅವಳಿಗೆ ಸಮಾಧಾನ ಹೇಳುತ್ತಿದ್ದರು.

ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿರುವ ಒಂದು ನೆನಪಿನ ಸಂಗತಿ ಆಗ ನನಗೆ ನಗುವುಂಟುಮಾಡುತ್ತಿತ್ತು; ಈಗ ಮನಸ್ಸನ್ನು ಕೊರೆಯುತ್ತಿದೆ. ಅವಳು ಒಂದು ಸಲ ಒಂದು ಅಂಚೆಯ ಕಾರ್ಡನ್ನು ತಂದು, "ನಮ್ಮ ಯಜಮಾನರಿಗೆ ಕಾರ್ಡು ಬರೆದು ಕೊಡಪ್ಪ" ಎಂದು ಹೇಳಿ ಅದನ್ನು ನನ್ನ ಕೈಗೆ ಕೊಟ್ಟಳು. ಆಗ ನಾನು ಮಿಡ್ಲ್ ಸ್ಕೂಲ್ ಪರೀಕ್ಷೆಯ ತರಗತಿಯಲ್ಲಿ ಓದುತ್ತಿದ್ದೆ. "ಏನು ಬರೆಯಲಿ?" ಎಂದು ಕೇಳಿದೆ. "'ನಾನು ಸಾಯುವ ಕಾಲ, ಎಲ್ಲಿದ್ದರೂ ಬೇಗ ಬಂದುಬಿಡಿ. ನಾನು ಸತ್ತ ಮೇಲೆ ನೀವು ಎಲ್ಲಿಗೆ ಬೇಕಾದರೂ ಹೋಗಿ' ಎಂದು ಬರೆಯಪ್ಪ" ಎಂದು ತಿಳಿಸಿದಳು. ನಾನು ಹಾಗೆಯೇ ಬರೆದೆ. "ಅಡ್ರೆಸ್ಸು ಏನು ಬರೆಯಲಿ?" ಎಂದು ಕೇಳಿದೆ. "ಹಾಗೆಂದರೆ ಏನಪ್ಪ?" ಎಂದು ಪ್ರಶ್ನಿಸಿದಳು. "ವಿಳಾಸ" ಎಂದೆ. "ಹಾಗೆಂದರೇನೋ ನನಗೆ ತಿಳಿಯದಪ್ಪ" ಎಂದು ತನ್ನ ಮೌಢ್ಯವನ್ನು ನನಗೆ ಸ್ಪಷ್ಟಮಾಡಿದಳು. ಅವಳಿಗೆ ಆ ಮಾತು ಅರ್ಥವಾಗಿಲ್ಲವೆಂದು ನಿಶ್ಚಯಿಸಿ, "ನಿಮ್ಮ ಯಜಮಾನರ ಹೆಸರು, ಅವರು ಇರುವ ಊರು, ಆ ಊರಿನಲ್ಲಿ ಅವರಿರುವ ಬೀದಿ, ಆ ಬೀದಿಯಲ್ಲಿ ಅವರಿರುವ ಮನೆಯ ನಂಬರು" ಎಂದು ವಿವರಿಸಿ ಹೇಳಿದೆ. "ಅವರ ಹೆಸರು........ ನಿನಗೇ ಗೊತ್ತಿದೆಯಪ್ಪ. ನಾನು ಅವರ ಹೆಸರು ಹೇಳಬಹುದೇ, ನೀನೇ ಹೇಳು? ಮಿಕ್ಕ ವಿಚಾರ ಅದೇನೋ ನನಗೆ ತಿಳಿಯದು. ಅವರು ಎಲ್ಲಿ ಇದ್ದಾರೆಯೋ ಅಲ್ಲಿಗೇ ಬರೆದು ಹಾಕಪ್ಪ" ಎಂದು ನುಡಿದಳು. "ಸ್ವರ್ಗಕ್ಕೆ" ಎಂದು ವಿಳಾಸ ಬರೆದು ಕಾರ್ಡನ್ನು ಹಿಂದಕ್ಕೆ ಕೊಟ್ಟೆ. ಆ ಏನೂ ಅರಿಯದ ಪ್ರಾಣಿ ಕಾರ್ಡನ್ನು ಅಂಚೆಯ ಡಬ್ಬಕ್ಕೆ ಹಾಕಿದ್ದನ್ನು ನಾನು ಶಾಲೆಗೆ ಹೋಗುವಾಗ ನೋಡಿದೆ. ಒಂದೆರಡು ತಿಂಗಳಾದ ಮೇಲೆ, "ಅವರು ಬರಲೇ ಇಲ್ಲ. ಅವರಿಂದ ಉತ್ತರವೂ ಬರಲಿಲ್ಲ. ಇನ್ನೊಂದು ಕಾರ್ಡು ಬರೆದು ಕೊಡಪ್ಪ" ಎಂದು ಭಾಗೀರಥಮ್ಮ ನನ್ನ ಕೈಗೆ ಕಾರ್ಡು ಕೊಟ್ಟು ಮತ್ತೆ ಪ್ರಾರ್ಥಿಸಿದಳು. ಇದನ್ನು ಕಂಡ ನಮ್ಮ ತಾಯಿ, "ಬರೆದು ಅವನೇ ಡಬ್ಬಕ್ಕೆ ಹಾಕುತ್ತಾನೆ. ಯೋಚನೆ ಮಾಡಬೇಡಿ" ಎಂದು ಅವಳಿಗೆ ನಂಬಿಕೆ ಹೇಳಿದರು. ಎರಡು ಮೂರು ತಿಂಗಳಿಗೊಂದು ಸಲ ಭಾಗೀರಥಮ್ಮನ ಗಂಡನಿಗೆ ಕಾರ್ಡು ಬರೆದು ಹಾಕುವ ನಾಟಕ ನಡೆಯುತ್ತಿತ್ತು. ಅಂದರೆ, ಕಾರ್ಡು ಬರೆಯುತ್ತಲೇ ಇರಲಿಲ್ಲ. ನಮ್ಮ ತಾಯಿ ಕಾರ್ಡಿನ ಜಿಲೆಯನ್ನು ಮಾತ್ರ ಹಾಗೆಂದು ತಿಳಿಸದೆ ಅವಳಿಗೆ ಹಿಂದಿರುಗಿ ಕೊಟ್ಟುಬಿಡುತ್ತಿದ್ದರು.

ಭಾಗೀರಥಮ್ಮನ ಜೀವನ ನಾಟಕ ಇದ್ದಕ್ಕಿದ್ದ ಹಾಗೆ ಒಂದು ದಿನ ಮುಗಿಯಿತು. ಬಾಯಿಲೆಯಿಂದ ನರಳದೆಯೆ ಕಣ್ಣುಮುಚ್ಚಿದಳು. "ಹೃದಯಸ್ತಂಭನದಿಂದ ಸತ್ತಳು" ಎಂದು ಅಧಿಕಾರವಾಣಿಯಿಂದ ಹೇಳಲು ಯಾವ ವೈದ್ಯರೂ ಬಂದಿರಲಿಲ್ಲ. ಅಂತೂ ಹಾಗೆ ನಿರಾಯಾಸ ಮರಣಹೊಂದಿದ್ದಕ್ಕಾಗಿ ಬೀದಿಯವರಿಗೆಲ್ಲ ಆಶ್ಚರ್ಯ, ಸಂತೋಷ. ಅವಳ ದಹನ ಉತ್ತರ ಕ್ರಿಯಾದಿಗಳಿಗೆ ಲೋಪವಾಗಲಿಲ್ಲ. ಬೀದಿಯವರೆಲ್ಲರೂ ಸಹಕರಿಸಿ ಆ ಕಾರ್ಯಗಳನ್ನು ಸಾಂಗವಾಗಿಯೇ ನೆರವೇರಿಸಿದರು. ಭಾಗೀರಥಮ್ಮನ ಕಿವಿಯಲ್ಲಿದ್ದ ಓಲೆಗಳಿಂದ ಐವತ್ತು ರೂಪಾಯಿ ದೊರಕಿತು. ಅವಳ ಕಿರುಕೋಣೆಯನ್ನು ಶೋಧಿಸಿದಾಗ ಒಂದು ಮಡಕೆಯ ತುಂಬ ಇಪ್ಪತ್ತು ಮೂವತ್ತು ರೂಪಾಯಿಗಳಷ್ಟು ಚಿಲ್ಲರೆ ನಾಣ್ಯಗಳು ದೊರಕಿದವು. ಈ ಧನ ಸಂಗ್ರಹಣ ಬುದ್ಧಿಯನ್ನು ಬಹುಶಃ ಅವಳಿಗೆ ಗುಂಡಪ್ಪ ಕಲಿಸಿಕೊಟ್ಟಿರಬೇಕೆಂದು ನಮ್ಮ ತಂದೆಯ ಎಣಿಕೆ. ಅದು ಹೇಗಾದರೂ ಇರಲಿ. ಅಂತೂ ಆಕೆಯ ಉತ್ತರ ಕ್ರಿಯಾದಿಗಳಿಗೆ ಬೀದಿಯವರಿಗೆ ವೆಚ್ಚವೇನೂ ತಗಲಲಿಲ್ಲ. ಬೀದಿಯ ಜನರೇ ಶವವನ್ನು ಹೊತ್ತೂ ಹಾಕಿದರು. ನಮ್ಮ ತಂದೆಯೂ ಒಬ್ಬ ವಾಹಕರಾಗಿದ್ದರು. ಗಂಡ ಇದ್ದಿದ್ದರೆ ಹೇಗೋ ಹಾಗೆ ವೈಕುಂಠ ಸಮಾರಾಧನೆಯೂ ನಡೆಯಿತು. ನಮ್ಮ ಬೀದಿಯ 'ಜಗಲಿ ಜೋಯಿಸರು' ಈ ಕಾರ್ಯಗಳಲ್ಲೆಲ್ಲ ಮುಂದಾಳಾಗಿದ್ದರು.

ಈ ಸಂದರ್ಭದಲ್ಲೆಲ್ಲ ಒಂದು ಚರ್ಚೆ ಎದ್ದಿತ್ತು. ನಮ್ಮ ತಂದೆ ಅವಳ ಸಂಸ್ಕಾರ ಮುತ್ತೈದೆಗೆ ಹೇಗೋ ಹಾಗೆ ನಡೆಯಬೇಕೆಂದು ವಾದಿಸಿದರು. ಬೀದಿಯ ಹಲವು ಪ್ರಮುಖರು ಇದನ್ನು ಒಪ್ಪಲಿಲ್ಲ. ಬಹಳ ವಾದ ವಿವಾದಗಳಾದ ಮೇಲೆ ನಮ್ಮ ತಂದೆಯ ವಾದವೇ ಗೆದ್ದಿತು. ನಿಜವಾಗಿ ಗೆದ್ದದ್ದು ನಮ್ಮ ತಂದೆಯ ಹಟವಲ್ಲ; ಗುಂಡಪ್ಪನ ಹೆಸರು. "ಗುಂಡಪ್ಪ ಬದುಕಿದ್ದಾಗ, 'ಶೇಷಗಿರಿ ಸತ್ತಿಲ್ಲ. ಭಂಡ ಬಾಳು ಬದುಕುವವರು ದೀರ್ಘಾಯುಗಳು. ಅವನು ಎಲ್ಲಿಯೋ ಇದ್ದಾನೆ. ಭಾಗೀರಥಮ್ಮ ಸತ್ತರೆ ಅವಳಿಗೆ ಮುತ್ತೈದೆಯ ಹಾಗೆಯೇ ಸಂಸ್ಕಾರ ಮಾಡಬೇಕು. ಹಣದ ವಿಚಾರ ಯೋಚನೆ ಮಾಡಬೇಕಾಗಿಲ್ಲ' ಎಂದು ಹೇಳುತ್ತಿದ್ದ" ಎಂಬುದಾಗಿ ನಮ್ಮ ತಂದೆ ಗುಂಡಪ್ಪನ ಅಂತರಾತ್ಮ ಬೋಧೆಯ ಪ್ರಮಾಣವನ್ನು ಮುಂದಿಟ್ಟರು. ಭಾಗೀರಥಮ್ಮನ ಮರಣಕಾಲದ ಆಧಾರದ ಮೇಲೆ ಗುಣಿಸಿ, ಜಗಲಿ ಜೋಯಿಸರು ತಮ್ಮ ಜ್ಯೋತಿಶ್ಶಾಸ್ತ್ರಜ್ಞಾನದ ಪ್ರಮಾಣವನ್ನೂ ಜೊತೆಗಿಟ್ಟರು. ಎಲ್ಲರೂ ಒಪ್ಪಿದರು.



ಕನ್ನಡ ನುಡಿಯು ಶುದ್ಧವಾಗಿರಬೇಡವೆ?

(ಲೇಖಕರು: ಶ್ರೀ. ಬಿ. ರಾಮಕೃಷ್ಣಾಚಾರ್, ಬಿ. ಎ. ವಿದ್ವಾನ್.)

ಭಾಷೆಯು ಜನರು ತಮ್ಮ ಭಾವವನ್ನು ಪರಸ್ಪರ ವ್ಯಕ್ತಗೊಳಿಸುವ ಮಾಧ್ಯಮ. ಜನತೆಯು ಮಾತಾಡುವ ನುಡಿಗೂ ಸಾಹಿತ್ಯಬದ್ಧವಾದ ಭಾಷೆಗೂ ಸ್ವಲ್ಪ ಅಂತರವಿರುವುದು. ನಾವು ಮಾತಾಡುವಾಗ ಭಾಷೆಯ ವ್ಯಾಕರಣ ನಿಯಮಗಳ ಕಡೆಗೆ ಹೆಚ್ಚಿನ ಗಮನವೀಯದೆ ಇರಬಹುದು. ಹಲವು ಸಲ ಅವಸರವಸರವಾಗಿ ಶಬ್ದಗಳನ್ನು ಉಚ್ಚರಿಸುವಾಗ ಕೆಲವು ಅಕ್ಷರಗಳು ಜಟ್ಟುಹೋಗುವುದೂ ಇದೆ.

ಆದರೆ ಮುದ್ರಿತವಾದ ಪುಸ್ತಕ ಪತ್ರಿಕೆಗಳಲ್ಲಿ ಭಾಷೆಯ ಶುದ್ಧರೂಪವು ಬಳಸಲ್ಪಟ್ಟರೆ, ನುಡಿಯು ಶುದ್ಧವಾಗಿರುವುದು. ಯಾವುದಾದರೊಂದು ಬರಹವನ್ನು ಬರೆಯುವಾಗ ವಿಷಯದ ಕಡೆಗೆ ಲಕ್ಷ್ಯಕೊಡುವುದು ಮಾತ್ರವಲ್ಲದೆ ಶಬ್ದಗಳ ವಿನ್ಯಾಸ, ಶುದ್ಧರೂಪ, ಅಕ್ಷರವಿನ್ಯಾಸಗಳ ಕಡೆಗೂ ಗಮನವೀಯುವುದು ಅತ್ಯಾವಶ್ಯಕ. ಆಗ ತಾನೇ ಆ ಬರವಣಿಗೆಯಲ್ಲಿ ವಿಷಯ ಪ್ರತಿಪಾದನೆಗೆ ಅನುಕೂಲವಾದ ಶಬ್ದಗಳ ಯೋಜನೆಯೂ ಇದ್ದು ಕಸುವು ಇರುವುದು. ಆಯಾ ಶಬ್ದಗಳ ಅಕ್ಷರಸಂಯೋಜನೆಯನ್ನು ಸಂಪೂರ್ಣ ಅರಿಯದಿದ್ದರೆ ಅಂತಹ ಕಸುವು ಕೆಟ್ಟು ನುಡಿಯು ಶಿಥಿಲವಾಗಿ ಓದುಗರಿಗೆ ಜುಗುಪ್ಸೆಯುಂಟುಮಾಡುವುದು ಸ್ವಾಭಾವಿಕವೇ. ಯೋಗ್ಯವಾದ ಲೇಖನ ಬರೆಯಲು ದೀರ್ಘಕಾಲದ ಸಂಪೂರ್ಣ ಸಾಹಿತ್ಯದ ಅಧ್ಯಯನವು ಬೇಕು; ಶೈಲಿಯ ಮರ್ಮವನ್ನು ಆತನು ಚೆನ್ನಾಗಿ ತಿಳಿದಿರಬೇಕು; ಶಬ್ದಗಳ ಆಯ್ಕೆಯಲ್ಲಿ ಜಾಗ್ರತೆಯಿರಬೇಕು; ಅಲ್ಲದೆ ಶಬ್ದಗಳನ್ನು ಸರಿಯಾದ ರೂಪದಲ್ಲಿರಿಸಬೇಕು. ಹಾಗೆ ಭಾಷೆಯ ಮೇಲೆ ಸಂಪೂರ್ಣವಾಗಿ ಅಧಿಕಾರವಿಲ್ಲದೆ, ಏನೇನೋ ಕಂಡದ್ದನ್ನು ಕೇಳಿದ್ದನ್ನು ಬರೆದು ಜನತೆಯ ಮುಂದಿಟ್ಟರೆ, ಕ್ರಮೇಣ ನಮ್ಮ ಸಾಹಿತ್ಯವು ಶಿಥಿಲವಾಗಿ ಕಸುವಿಲ್ಲದೆ ನೀರಸವಾಗಿ ಪರಿಣಮಿಸಬಹುದು.

ಈಚೆಗೆ ಕೆಲವು ಸಮಯದಿಂದ ಪ್ರಕಟವಾಗುತ್ತಿರುವ

೬

ಕೆಲವು ವರ್ಷ ಸಂದ ಮೇಲೆ, ನಮ್ಮೆಲ್ಲರ ಆಶ್ಚರ್ಯಕ್ಕೆ, ಶೇಷಗಿರಿ ಹಿಂದಿರುಗಿದ. ಅವನ ಜೊತೆ ಸುಭದ್ರೆ ಇರಲಿಲ್ಲ; ಹನ್ನೆರಡು ವರ್ಷದ ಹುಡುಗಿ ಇದ್ದಳು. ಅವಳು ಶೇಷಗಿರಿಯ ಮಗಳು ಎಂದು ಆ ಮೇಲೆ ಗೊತ್ತಾಯಿತು.

"ಸುಭದ್ರೆ ಹೆಣ್ಣು ಮಗು ಹೆತ್ತು ಸತ್ತುಹೋದಳು. ತಬ್ಬಲಿ ಮಗುವನ್ನು ಸಾಕಿ ಸಲಹಲು ಬಹಳ ಕಷ್ಟಪಟ್ಟೆ. ದೇಶ ದೇಶ ಅಲೆದೆ. ಮಗಳು ಬೆಳೆದು ದೊಡ್ಡವಳಾದಳು. ನನ್ನ ಹೆಂಡತಿಗೆ ನಾನು ಬಹಳ ದ್ರೋಹಮಾಡಿದೆ. ಅವಳು ಬದುಕಿದ್ದರೆ ಕಡೆಗಾಲದಲ್ಲಿಯಾದರೂ ಅವಳ ಸೇವೆ ಮಾಡಿ, ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳೋಣ ಎಂದು ಹಿಂದಿರುಗಿ ಬಂದೆ. ಅವಳು ಪುಣ್ಯ ಮಾಡಿದ್ದಳು; ತೀರಿಕೊಂಡಳು." ಎಂದು ನಮ್ಮ ತಂದೆಯ ಮುಂದೆ ಕೊರಗಿ ಮರುಗಿದ.

ಶೇಷಗಿರಿ ನಮ್ಮ ಬೀದಿಯ ಹಿಂದಿನ ಬೀದಿಯಲ್ಲಿ ಒಂದು ಕೊಠಡಿಯನ್ನು ಬಾಡಿಗೆಗೆ ಗೊತ್ತುಮಾಡಿಕೊಂಡು ಮಗಳೊಡನೆ ವಾಸಮಾಡತೊಡಗಿದ. ಮೊದಲು ಮಗಳಿಗೆ ಏನು ಹೆಸರಿಟ್ಟಿದ್ದನೋ ಗೊತ್ತಿಲ್ಲ. ಊರಿಗೆ ಹಿಂದಿರುಗಿದಂದಿನಿಂದ ಅವಳನ್ನು ಭಾಗೀರಥಿ ಎಂದೇ ಕರೆಯುತ್ತಿದ್ದ.

ಭಾಗ್ಯಹೀನೆ ಭಾಗೀರಥಮ್ಮ ಬಹು ಪುಣ್ಯವಂತೆ ಎಂದೇ ನನ್ನ ಭಾವನೆ. ಮೊದ್ದಾಗಿದ್ದ ಅವಳು ಬದುಕಿದ್ದಾಗ ಗಂಡನಿಗೆ ಬೇಡವೆನಿಸಿ ಸತ್ತು ಗಂಡನ ಹೃದಯವನ್ನು ಗೆದ್ದಳು. ಇದೊಂದು ಪವಾಡ; ನಂಬಲಾಗದ ಸತ್ಯ.

ಹಲವಾರು ಪತ್ರಿಕೆಗಳನ್ನೂ ಲಘುಸಾಹಿತ್ಯದ ಪುಸ್ತಕಗಳನ್ನೂ ಓದುವ ಸಂದರ್ಭ ಒದಗಿದಾಗ್ಗೆ, ಆ ಬರವಣಿಗೆಗಳಲ್ಲಿ ಒಡೆದು ಕಾಣಿಸುವ ಕನ್ನಡ ನುಡಿಯನ್ನೇ ಕೆಡಿಸಿ ನೀರಸವಾಗಿ ಮಾರ್ಪಡಿಸುವ ಹಲವು ದೋಷಗಳು ಕಂಡುಬಂದುವು. ಇದರಿಂದ ಅವನ್ನು ಬರೆದ, ಪ್ರಕಟಿಸಿದ ಉತ್ಸಾಹೀ ಮಹನೀಯರ ಯೋಗ್ಯತೆ ಕಡಿಮೆಯೆಂದು ನಾನು ಭಾವಿಸುವುದಿಲ್ಲ. ಹಲವು ಸಂದರ್ಭಗಳಲ್ಲಿ ಅವು ಮುದ್ರಣಾಲಯಗಳಲ್ಲಿ ಅಚ್ಚಾಗುತ್ತಿರುವಾಗ ಆ ಅಕ್ಷರದೋಷಗಳನ್ನು ತಿದ್ದದೆ, ತಪ್ಪುತಪ್ಪಾದ ಶಬ್ದಗಳು ಮುದ್ರಿತವಾಗುವುದೂ ಇದೆ. ಲೇಖಕರು ಶುದ್ಧವಾಗಿ ಬರೆದರೂ, ಅಚ್ಚಿನಲ್ಲಿ ಬರಬಹುದಾದ ದೋಷಗಳನ್ನು ತಿದ್ದಿಕೊಳ್ಳದೆ ಇದ್ದರೆ, ಆ ಲೇಖಕರ ದೋಷವೆನ್ನಲಾಗುವುದಿಲ್ಲ. ಆದಕಾರಣ ಮುದ್ರಕರ ಮೇಲೆ ಈ ಭಾಗದಲ್ಲಿ ಹೆಚ್ಚಿನ ಹೊಣೆಗಾರಿಕೆಯಿದೆ. ಪ್ರತಿಯೊಂದು ಶಬ್ದದ ಅಕ್ಷರವಿನ್ಯಾಸವನ್ನು ಸೂಕ್ಷ್ಮರೀತಿಯಿಂದ ಪರಿಶೀಲಿಸುವುದು ಅತ್ಯಗತ್ಯ. ಇದಕ್ಕೂ ಸಾಕಷ್ಟು ಪ್ರೂಫ್ ತಿದ್ದುವ ಅನುಭವ ಬೇಕು.

ಈಚೆಗೆ ನನ್ನ ದೃಷ್ಟಿಗೆ ಬಿದ್ದಿರುವ ಹಲವು ದೋಷಗಳನ್ನು ಎತ್ತಿ ತೋರಿಸಬೇಕಾಗಿದೆ. ಮೊದಲಾಗಿ ಅಕ್ಷರವಿನ್ಯಾಸ(Spelling)ದ ದೋಷಗಳೇ ವಿಪುಲವಾಗಿ ದೊರೆಯುತ್ತಿರುವುದು ಶೋಚನೀಯವಾಗಿದೆ. ಮುದ್ರಿತವಾದ ಸಾಹಿತ್ಯದಲ್ಲಿ ಅಂತಹ ದೋಷಗಳು ಬಂದರೆ, ನುಡಿಯ ರೂಪವೇ ಕೆಡುವುದಿಲ್ಲವೆ? ಭಾಷೆಯ ಸುವ್ಯವಸ್ಥಿತ ರೂಪವನ್ನು ಬಳಸುವುದಕ್ಕೆ ಅಧ್ಯಾಪಕರು ಶಿಕ್ಷಣಕೊಡುತ್ತಿರುವಾಗಲೇ ಆರಂಭಿಸಬೇಕು. ಲೇಖಕರೂ ಪತ್ರಿಕಾವ್ಯವಸಾಯಿಗಳೂ ಅದನ್ನೇ ಅನುಸರಿಸುತ್ತ ಭಾಷೆಯ ಶುದ್ಧರೂಪದ ಕಡೆಗೆ ಗಮನವೀಯಬೇಕು. ದೋಷಯುಕ್ತವಾದ ಭಾಷೆಯನ್ನು ಬರೆಯುತ್ತ ಹೋಗುವುದನ್ನು ತಡೆಗಟ್ಟುವುದು ಅತ್ಯಾವಶ್ಯಕ. ಸಾಹಿತ್ಯದಲ್ಲಿ ಇಂತಹ ತಪ್ಪುಗಳು ನುಸುಳಿಕೊಂಡರೆ, ಅವನ್ನು ಓದುವ ವಿದ್ಯಾರ್ಥಿಗಳೂ ಓದುಗರೂ ಅದನ್ನೇ ಅನುಸರಿಸುವ ಭಯವಿದೆ. ಇಂತಹ ಕೊರತೆಯ ನಿವಾರಣೆಗೆ ಒಮ್ಮೆ ಬರೆದುದನ್ನು ತಿರಿಗಿ ಓದಿ ಶುದ್ಧಗೊಳಿಸುವ, ಮುದ್ರಣದಲ್ಲಿಯೂ ಆ ದೋಷಗಳು ಬಾರದಂತೆ ಜಾಗ್ರತೆ ವಹಿಸುವ ಕಾರ್ಯದಲ್ಲಿ ಲೇಖಕರಿಗೆ ಆಸಕ್ತಿಯಿರಬೇಕು.

ಭಾಷೆಯ ಪ್ರತಿಯೊಂದು ಶಬ್ದಕ್ಕೂ ಅದರ ಅಕ್ಷರವಿನ್ಯಾಸವು ನಿಯಮಿತವಾಗಿದೆ. ಸಂಸ್ಕೃತದ ಶಬ್ದಗಳಿಗೂ ಆಯಾ ಅಕ್ಷರಗಳನ್ನು ಪ್ರಾಚೀನ ಸಾಹಿತಿಗಳು ಕಲ್ಪಿಸಿದ್ದಾರೆ. ಅದನ್ನು ಸ್ಮರಣೆಯಲ್ಲಿಟ್ಟುಕೊಳ್ಳಬೇಕಾದುದು ನಮ್ಮ ಕರ್ತವ್ಯ. ಇದಕ್ಕೆ ವ್ಯತ್ಯಾಸವಾಗಿ ಅಕ್ಷರಗಳನ್ನು ಬರೆದರೆ ಶಬ್ದದ ರೂಪವು ಕೆಡುವುದು. ಭಾಷೆಯ ಕಸುವು ಹಿಂಗಿ, ಮಾಧುರ್ಯವೂ ಇಲ್ಲದಂತಾಗುವುದು. ಸಾಹಿತ್ಯದಲ್ಲಿ ಈ ದೋಷವಿರಬಾರದು.

ಹಿಂದೆ ಒಂದು ವಾರಪತ್ರಿಕೆಯ ಸಂಪಾದಕರು ತಮ್ಮ ಅಗ್ರಲೇಖಕ್ಕಾಗಿ ‘ಉಚ್ಚಾರ’ ಎಂಬ ವಿಷಯವನ್ನು ಆರಿಸಿದ್ದರೂ, ದಪ್ಪಕ್ಷರಗಳಲ್ಲಿ ಮೊದಲಾಗಿ ‘ಉಚ್ಛಾರ’ ಎಂಬುದಾಗಿ ಮುದ್ರಿಸಿದುದು ಕಣ್ಣಿಗೆ ಒಡೆದು ಕಾಣುತ್ತಿದ್ದಿತು. ಸಂಪಾದಕರೇ ಈ ರೀತಿ ಮೇಲ್ಪಂಕ್ತಿ ಹಾಕಿಕೊಟ್ಟರೆ ಪರಿಣಾಮವೇನೆಂದು ಯೋಚಿಸಿರಿ! ಕುತೂಹಲದಿಂದ ಮುದ್ರಣದೋಷವಿರಬಹುದೆಂದು ತಿಳಿದು, ಮುಂದೆ ಓದುತ್ತಾ ಹೋದಂತೆ ಹಲವೆಡೆಗಳಲ್ಲಿಯೂ ‘ಉಚ್ಛಾರ’ ಶಬ್ದವೇ ಬಂದಿತು! ಸಂಸ್ಕೃತ ಬಲ್ಲವರಿಗೆ ಇದರ ಶುದ್ಧರೂಪವು ‘ಉಚ್ಚಾರ’ವೆಂದೇ ಇರಬೇಕೆಂದು ತಿಳಿಯದಿರಲಾರದು. ಕೋಶವನ್ನು ನೋಡಿ ಖಚಿತಪಡಿಸಿಕೊಳ್ಳುವ ತಾಳ್ಮೆಯೂ ಇರಲಿಲ್ಲ!

ಸಂಸ್ಕೃತ ನುಡಿಯಿಂದ ಬಂದ ತತ್ಸಮ ಶಬ್ದಗಳಲ್ಲಿ ಮಹಾಪ್ರಾಣಾಕ್ಷರಗಳು ಅನೇಕವಾಗಿವೆ. ಕನ್ನಡದಲ್ಲಿ ಅವನ್ನು ಬಳಸುವಾಗ ಶುದ್ಧವಾದ ಅಕ್ಷರವಿನ್ಯಾಸದ ಕಡೆಗೆ ಗಮನವೀಯದೆ ಉಂಟಾದ ಅನರ್ಥ ಪರಿಣಾಮವನ್ನು ಕೆಳಗೆ ಕೊಟ್ಟಿರುತ್ತದೆ:

ಅಶುದ್ಧ.	ಶುದ್ಧರೂಪ.	ಅಶುದ್ಧ.	ಶುದ್ಧರೂಪ.
ಬಾರತ	ಭಾರತ	ಭಂದು	ಬಂಧು
ಬಾವನೆ	ಭಾವನೆ	ಭಾಂಧವ್ಯ	ಬಾಂಧವ್ಯ
ದ್ರಢ, ಧೃಢ	ದೃಢ	ಢೀಕೆ	ಟೀಕೆ
ಭೇಧ, ಬೇಧ	ಭೇದ	ಇಷ್ಠ	ಇಷ್ಟ
ಭೋಧನೆ ಭೋದನೆ	ಬೋಧನೆ	ಅನಿಷ್ಠ	ಅನಿಷ್ಟ
ಗಂಬೀರ	ಗಂಭೀರ	ಸ್ಪಷ್ಠ	ಸ್ಪಷ್ಟ
ವಿದೇಯ	ವಿಧೇಯ	ಕನಿಷ್ಟ	ಕನಿಷ್ಠ
ವಿಧ್ಯಾಭ್ಯಾಸ	ವಿದ್ಯಾಭ್ಯಾಸ	ವರಿಷ್ಟ	ವರಿಷ್ಠ
ಉಚ್ಛಾರಣೆ	ಉಚ್ಚಾರಣೆ	ಶಿಷ್ಠ	ಶಿಷ್ಟ
ಸ್ತಾನ	ಸ್ಥಾನ	ನಿಷ್ಟೆ	ನಿಷ್ಠೆ
ಸ್ತಳ	ಸ್ಥಳ	ಪುಷ್ಠಿ	ಪುಷ್ಟಿ
ಅತವಾ	ಅಥವಾ	ದೃಷ್ಠಿ	ದೃಷ್ಟಿ
ಶಬ್ಧ	ಶಬ್ದ	ಕಷ್ಠ	ಕಷ್ಟ

— ಇತ್ಯಾದಿ.

ರೇಫ ಚಿಹ್ನೆಗಳ ಉಪಯೋಗದಲ್ಲಿ ಉಂಟಾಗಿರುವ ಅವ್ಯವಸ್ಥೆಯನ್ನು ಗಮನಿಸಿರಿ:

ಅಶುದ್ಧ	ಶುದ್ಧ.	ಅಶುದ್ಧ	ಶುದ್ಧ.
ಶತೃ	ಶತ್ರು	ಶೃದ್ಧೆ	ಶ್ರದ್ಧೆ
ಹ್ರದಯ	ಹೃದಯ	ಕ್ರತ್ಯ	ಕೃತ್ಯ
ಕ್ರ್ಯೂರ	ಕ್ರೂರ	ಮಾತ್ರು	ಮಾತೃ
ಸಮ್ರದ್ಧಿ	ಸಮೃದ್ಧಿ	ಪಿತ್ರು	ಪಿತೃ
ಶೃಮ	ಶ್ರಮ	ಕ್ರುತಿ	ಕೃತಿ
ರುಷಿ	ಋಷಿ	ರುತು	ಋತು

ಗೃಂಥ	ಗ್ರಂಥ	ಗ್ರಹೆ	ಗೃಹೆ
		ಗೃಹಗತಿ	ಗ್ರಹಗತಿ
ವಿಶ್ರಾಂತಿಗ್ರಹ	ವಿಶ್ರಾಂತಿಗೃಹ		—ಇತ್ಯಾದಿ.

(್ರ ರೇಫ ಚಿಹ್ನೆಗೂ ೃ ಚಿಹ್ನೆಗೂ ವ್ಯತ್ಯಾಸವಿದೆ. ಒಂದರ ಬದಲಾಗಿ ಇನ್ನೊಂದನ್ನು ಬಳಸಿದರೆ ಶುದ್ಧವಾಗಲಾರದು.)

ಇಂತಹ ಅಕ್ಷರ ದೋಷಗಳನ್ನು ಲೇಖಕರೂ, ಪತ್ರಿಕಾ ಕರ್ತರೂ, ಮುದ್ರಕರೂ ತಿದ್ದಿಕೊಳ್ಳಲು ಬರುವುದು. ಒಂದು ವೇಳೆ ಕೈತಪ್ಪಾಗಿ ಬರೆದಿದ್ದರೆ, ಮುದ್ರಣ ಸಮಯದಲ್ಲಿ ಪ್ರೂಫ್ ತಿದ್ದುವವರು ಚಾಣಾಕ್ಷರಾದರೆ ಅವಶ್ಯ ತಿದ್ದಲು ಅವಕಾಶವಿದೆ; ಅಧಿಕಾರವೂ ಅವರಿಗಿದೆ. ಅಂತೂ ಶಬ್ದಗಳನ್ನು ಶುದ್ಧರೂಪದಲ್ಲಿರಿಸಬೇಕೆಂಬ ಗುರಿಯಿರಬೇಕು. ಆಗತಾನೇ ಆ ಲೇಖವಾಗಲಿ, ಪುಸ್ತಕವಾಗಲೀ ಸಾರ್ಥಕವಾಗುವುದು.

ಎರಡನೆಯದಾಗಿ ಶಬ್ದವಿನ್ಯಾಸದಲ್ಲಿ ಕಾಣಬರುವ ಹಲವು ಕೊರತೆಗಳನ್ನು ಗಮನಿಸುವ. ನಮ್ಮ ನುಡಿಯಲ್ಲಿ ಸಂಸ್ಕೃತದ ತತ್ಸಮ ಶಬ್ದಗಳೂ, ತದ್ಭವಗಳೂ, ದೇಶಜ ಶಬ್ದಗಳೂ ಇರುವುವು. ಇವುಗಳ ಶುದ್ಧ ರೂಪವನ್ನು ಚೆನ್ನಾಗಿ ತಿಳಿವೇ ಬಳಸುವುದು ಆವಶ್ಯಕವಲ್ಲದೆ, ಬೇಕಾದಂತೆ ರೂಪಗೆಡಿಸಿ ಬರೆಯುವುದರಲ್ಲಿ ಅರ್ಥವಿಲ್ಲ. ಭಾಷೆಯ ಮರ್ಮ ಬಲ್ಲವರಿಗೆ ಇವು ಒಡೆದು ಕಾಣಿಸುವವಲ್ಲದೆ ಕಿವಿಗೂ ಕರ್ಕಶವಾಗಿರುವುವು. ವಿದ್ಯಾರ್ಥಿಗಳಿಗೂ ಆ ತಪ್ಪುಗಳ ಅನುಕರಣೆ ಮಾಡುವ ಪ್ರಸಂಗವಿರಬಾರದು. ಹಿಂದೆ ಹೇಳಿದಂತೆ ಅಧ್ಯಯನ-ಅನುಭವಗಳಿಂದಲೇ ಇದಕ್ಕೆ ಶಕ್ತಿಯು ಬರುವುದು.

ಸಂಸ್ಕೃತದ ಭಾವವಾಚಿ ಶಬ್ದಗಳು ಹೇಗೆ ಪಲ್ಲಟವಾಗಿ ವಿರಸವಾಗಿವೆಯೆಂಬುದನ್ನು ಕೆಳಗಿನ ಪ್ರಯೋಗಗಳಿಂದ ತಿಳಿಯಬಹುದು. ಈ ಶಬ್ದಗಳನ್ನು ಸಂಸ್ಕೃತದ ಮೂಲ ರೂಪದಲ್ಲಿಯೂ ಬರೆಯಬಹುದು. ಇಲ್ಲವೆ 'ತೆ' ಪ್ರತ್ಯಯ ಸೇರಿಸಿ ಕನ್ನಡ ರೂಪದಲ್ಲಿಯೂ ಬಳಸಲು ಬರುವುದು. ಹೊರತು ಎರಡೂ ರೂಪಗಳನ್ನು ಒಟ್ಟಾಗಿ ಸೇರಿಸಿ, ಅದೊಂದು ವಿಲಕ್ಷಣ ಶಬ್ದಗಳ ಪರಿಪಾಠಿಯು ಈಗೀಗ ಬೆಳೆಯುತ್ತಿದೆ. ಉದಾಹರಣೆಗಾಗಿ—

ಅಶುದ್ಧ	ಶುದ್ಧ
ದೌರ್ಬಲ್ಯತೆ	೧ ದುರ್ಬಲತೆ. ೨ ದೌರ್ಬಲ್ಯ.
ಕಾಠಿಣ್ಯತೆ	೧ ಕಠಿಣತೆ. ೨ ಕಾಠಿಣ್ಯ.
ನೈಪುಣ್ಯತೆ	೧ ನಿಪುಣತೆ. ೨ ನೈಪುಣ್ಯ.
ಪ್ರಾವೀಣ್ಯತೆ	೧ ಪ್ರಾವೀಣ್ಯ. ೨ ಪ್ರವೀಣತೆ.
ದಾರ್ಢ್ಯತೆ	೧ ದೃಢತೆ. ೨ ದಾರ್ಢ್ಯ.
ಮೌಢ್ಯತೆ	೧ ಮೌಢ್ಯ. ೨ ಮೂಢತೆ.
ಕೌಶಲ್ಯತೆ	೧ ಕೌಶಲ. ೨ ಕುಶಲತೆ.
ಐಕ್ಯತೆ	೧ ಏಕತೆ. ೨ ಐಕ್ಯ.
ಐಕ್ಯಮತ್ಯ	ಐಕಮತ್ಯ.
ಮಾಲಿನ್ಯತೆ	೧ ಮಾಲಿನ್ಯ. ೨ ಮಲಿನತೆ.
ಅನುಕೂಲ್ಯತೆ	೧ ಅನುಕೂಲತೆ. ೨ ಆನುಕೂಲ್ಯ.

—ಇತ್ಯಾದಿ.

ಕ್ಲಿಷ್ಟವಾದ ಸಂಸ್ಕೃತ ರೂಪವು ತಿಳಿಯದಿದ್ದರೆ, ಸರಳವಾದ ಕನ್ನಡ ರೂಪವನ್ನೇ ಬಳಸುವುದಕ್ಕೆ ಅಭ್ಯಂತರವಿಲ್ಲ. ಸಂಶಯ ಬಂದಾಗ ಕೋಶವನ್ನು ಪರಿಶೀಲಿಸಿದರೆ ಶುದ್ಧರೂಪವು ತಿಳಿಯದಿರದು. ಇದಕ್ಕೆ ತಾಳ್ಮೆ ಬೇಕಾಗಿದೆ.

ಇನ್ನು ಹಲವು ಅಶುದ್ಧರೂಪಗಳವು ಈ ರೀತಿಯಾಗಿವೆ:

ಅಶುದ್ಧ	ಶುದ್ಧ	ಅಶುದ್ಧ	ಶುದ್ಧ
ಪೋಶಣೆ	ಪೋಷಣ.	ವಿಶಯ	ವಿಷಯ.
ವಿಶಾದ	ವಿಷಾದ.	ವಿಷದ	ವಿಶದ.
ದೋಶ	ದೋಷ.	ಸಂತಾಪಕ	ಸಂತ್ರಸ್ತ.
ಕೂಲಂಕುಶ	ಕೂಲಂಕಷ.	ಅಂಕುಷ	ಅಂಕುಶ.
ಕಾತುರ	ಕಾತರ.		—ಇತ್ಯಾದಿ.

'ಸೀತಾರಾಮ' ಎನ್ನುವ ಬದಲಾಗಿ 'ಶೀತಾರಾಮ' ಎಂದೂ 'ಶೀತವಾಗಿದೆ' ಎನ್ನುವ ಬದಲು 'ಸೀತವಾಗಿದೆ' ಎನ್ನುವುದೂ ವಾಡಿಕೆಯಾಗಿದೆ! ಇವುಗಳ ಭೇದವನ್ನು ತಿಳಿದಿರಬೇಕು. ಇಲ್ಲವಾದರೆ ಆಭಾಸವೇ ಸರಿ.

ಕೋರ್ಟು-ಕಚೇರಿಗಳಲ್ಲಿ ಬರಹಗಾರರು ಬಳಸುವ ಭಾಷೆಯು ವಿಚಿತ್ರವಾಗಿದೆಯೆಂದು ಅದರ ಅನುಭವವಿರುವವರು ಮನಗಾಣದಿರಲಾರರು. ಅಲ್ಲಿಯ ಬರಹಗಾರರು ಸಾಹಿತ್ಯ ಬಲ್ಲವರಲ್ಲ. ಮಾತಿನಲ್ಲಿ ಹೇಳಿದಂತೆ ಉಚ್ಚಾರ ಮಾತ್ರ ಬಂದರಾಯಿತು. ಅಕ್ಷರಗಳ ಗೊಡವೆ ಅವರಿಗಿಲ್ಲ. ತಿಳಿದವರು ಅಂತಹ ಬರೆಹದ ರೀತಿಯನ್ನು ಅನುಸರಿಸುವುದಿಲ್ಲ. ಆದರೆ ಸಾಹಿತ್ಯದಲ್ಲಿ ಅದು ನುಸುಳದಂತೆ ಜಾಗ್ರತೆಯಿರಬೇಕಾದುದು ಆವಶ್ಯಕ. ಉದಾಹರಣೆಗಾಗಿ, ಪ್ಸೂಲು, ಹ್ಕಂ, ಅನ್ಸಲು, ಕೆಲ್ಸ, ಯಿನ್ನು, ಯಿಷ್ಟು, ಯೆಷ್ಟು, ಯೆಷ್ಟನ್ನಾದ್ರು, ಆದ್ರೂ, ಬಂದ್ರೆ, ಕೊಟ್ರೆ, ಕೇಳಿದ್ರೆ ಮುಂತಾದ ಪ್ರಯೋಗಗಳು ದಸ್ತೈವಜು--ಕೋರ್ಟು ಕಚೇರಿಗಳ ದಾಖಲೆಗಳಲ್ಲೇ ಇರಲಿ. ಸಾಹಿತ್ಯದೊಳಗೆ ಅವು ಬರುವುದೇ ಬೇಡ!

ಈಚೆಗೆ ಕನ್ನಡ ನುಡಿಯಲ್ಲಿ ನೂರಾರು ಹಿಂದೀ—ಮರಾಠೀ ಭಾಷೆಯ ಶಬ್ದಗಳು ಬಳಸಲಾಗುತ್ತಿವೆ. ನಮ್ಮ ಪ್ರಾಂತದ ಸರಹದ್ದುಗಳಲ್ಲಿ ನೆರೆ ಪ್ರಾಂತದ ನುಡಿಯ ಹಲವಾರು ಶಬ್ದಗಳು ನಮ್ಮಲ್ಲಿ ಬಳಕೆಗೆ ಬಂದಿವೆ. ಅವುಗಳ ಪೂರ್ಣ ಅರ್ಥವಾಗುವುದೋ ಇಲ್ಲವೋ ಎಂದು ಹೇಳುವುದು ಕಷ್ಟ. ಉತ್ತರ ಕರ್ನಾಟಕದ ಶೈಲಿಯಲ್ಲಿ ಮರಾಠೀಜನ್ಯ ಪದಗಳು ಬರುತ್ತಿವೆ.

ಚಿತಾವಣಿ, ತಪಾಸಣಿ, ಕಾಳಜಿ, ರೋಖಡ, ಶೋಕ್,



ಶ್ರೀ| ಸಿ. ಕೆ. ನಾಗರಾಜರಾವ್

ಶರಚ್ಚಂದ್ರ

[ಲೇಖಕರು:
ಶ್ರೀ. ಸಿ. ಕೆ. ನಾಗರಾಜರಾವ್]



ಶ್ರೀ ಶರಚ್ಚಂದ್ರ-ಚಟರ್ಜಿ

ರವೀಂದ್ರನಾಥ ಠಾಕೂರರನ್ನು ತನ್ನ ಗುರುವೆಂದು ಶರಚ್ಚಂದ್ರರು ಭಾವಿಸಿದ್ದರೂ ಬಂಗಾಲದ ಜನರು ಠಾಕೂರರ ಕೃತಿಗಳಿಗಿಂತ ಶರಚ್ಚಂದ್ರರ ಕೃತಿಗಳನ್ನು ಹೆಚ್ಚು ಪ್ರೀತಿಸುತ್ತಿದ್ದರು. ಅದರ ಕಾರಣ ಶರಚ್ಚಂದ್ರರು ಚಿತ್ರಿಸುತ್ತಿದ್ದ ನಿತ್ಯಜೀವನ–ಸತ್ಯಜೀವನ. ಬಂಗಾಳೀ ಕಾದಂಬರಿ ಸಾಹಿತ್ಯದಲ್ಲಿ ಅತ್ಯುತ್ಕೃಷ್ಟ ಸ್ಥಾನವನ್ನು ಶ್ರೀ| ಶರತ್ ಬಾಬುಗಳ ಕೃತಿಗಳು ಪಡೆದುಕೊಂಡಿವೆ.

ಇಂತಹವರನ್ನು ಕೃತಿಗಳ ಮೂಲಕ ಮೊದಲು ಪರಿಚಯ ಮಾಡಿಕೊಟ್ಟ ಪುಣ್ಯ ಶ್ರೀ| ಆರ್. ವ್ಯಾಸರಾಯರಿಗೆ ಸಲ್ಲುತ್ತದೆ. ಅದನ್ನು ಪ್ರಕಟಿಸಿ ಜನರಿಗೆ ಒದಗಿಸಿಕೊಟ್ಟ ಕೃತಜ್ಞತೆ ಬೆಂಗಳೂರಿನ ಸತ್ಯಶೋಧನ ಪ್ರಕಟನ ಮಂದಿರದವರಿಗೆ ಸಲ್ಲುತ್ತದೆ. ಶ್ರೀ| ವ್ಯಾಸರಾಯರು ಬಂಗಾಳದಲ್ಲಿ ದೊಡ್ಡ ಹುದ್ದೆಯಲ್ಲಿದ್ದರು. ಬಂಗಾಳೀ ಭಾಷೆಯನ್ನು ಅಭ್ಯಾಸ ಮಾಡಿ ಮೂಲದಲ್ಲಿ ಶರಚ್ಚಂದ್ರರ ಕೃತಿಗಳ ರುಚಿ ಕಂಡವರು. ಅದರ ಸವಿಯನ್ನು ಕನ್ನಡ ನುಡಿ ಸಹೋದರರಿಗೆ ಉಣಿಸಬೇಕೆಂದು ದಿವಂಗತರ 'ಸ್ವಾಮಿ' ಮತ್ತು 'ನಿಷ್ಕೃತಿ' ಎಂಬೆರಡು ಕೃತಿಗಳನ್ನು 'ಪತಿ' ಮತ್ತು 'ಬಿಡುಗಡೆ' ಎಂಬ ಹೆಸರಿನಿಂದ ಕನ್ನಡಕ್ಕೆ ತಂದರು. ಅವನ್ನು ಓದಿದ ಕನ್ನಡಿಗರಿಗೆ ಶರಚ್ಚಂದ್ರರ ಕೃತಿಗಳ ಬಗ್ಗೆ ಅಭಿಮಾನ ಹುಟ್ಟಿತು; ಆಶೆಯೂ ಹೆಚ್ಚಾಯಿತು. ನಂತರ ಶ್ರೀ| ವ್ಯಾಸರಾಯರು ಭಾಷಾಂತರಿಸಿದ 'ಬ್ರಾಹ್ಮಣರ ಹುಡುಗಿ' ಬೆಳಕು ಕಂಡಿತು. ಓದುಗರ ಆಸಕ್ತಿ ಹೆಚ್ಚಿದಂತೆ ಹೆಚ್ಚು ಕೃತಿಗಳನ್ನು ಕನ್ನಡಕ್ಕೆ ತರಬೇ

ದೇಣೆ, ಲೇಣೆ, ಅಜಮಾಸು, ಮಾಮಲೆ, ಮಜಕೂರು, ಸವಲತ್ತು, ಬರ್ಖಾಸ್ತು, ಅಗದಿ, ಮುದ್ದಾಂ, ಕಾಯಿದೆಶೀರ ಮುಂತಾದ ಶಬ್ದಗಳೇ ಅಲ್ಲಿನ ಪತ್ರಿಕೆ-ಪುಸ್ತಕಗಳಲ್ಲಿ ವಿಪುಲವಾಗಿ ದೊರೆಯುವುವು. ಅಲ್ಲಿರುವ ಓದುಗರಿಗೆ ಅವು ತಿಳಿದರೂ, ಇಡೀ ಕರ್ಣಾಟಕದ ಇತರ ಪ್ರದೇಶಗಳ ಜನತೆಗೆ ತಿಳಿಯಬರುವವೆ?

ಈ ಶಬ್ದಗಳಿಗೆಲ್ಲಾ ಪರ್ಯಾಯ ಶಬ್ದಗಳು ಸಿರಿಗನ್ನಡ ನುಡಿಯಲ್ಲಿ ವಿಪುಲವಾಗಿದೆ. ಅವುಗಳ ವ್ಯಾಪಕಶಕ್ತಿಯಾಗಲೀ ಸಾರ್ಥಕತೆಯಾಗಲೀ ಕಡಿಮೆಯಲ್ಲ. ಹಿಂದೀ ಶಬ್ದಗಳೂ ನಮ್ಮ ನಿತ್ಯದ ಮಾತಿನಲ್ಲಿ ಹೇರಳವಾಗಿ ಬರುತ್ತಿವೆ. ಅವನ್ನೂ ಶುದ್ಧ ಕನ್ನಡ ಲೇಖ ಬರೆಯುವಾಗ ಬಿಡಬಹುದಾಗಿದೆ.

'ರೂಪರೇಷೆ' ಎಂಬ ಆದೊಂದು ಶಬ್ದವು ವಿಲಕ್ಷಣವಾಗಿದೆ. ಯಾರೋ ಒಬ್ಬ ಲೇಖಕರು ಅದನ್ನು ಬಳಸಿದರೆಂದರೆ ಎಲ್ಲರೂ ಅದರ ಅನುಕರಣಮಾಡತೊಡಗಿದರು. ಇದರ ಶುದ್ಧರೂಪವು 'ರೂಪರೇಖೆ'. 'ರೇಖೆ'ಯು ಎಂದೂ 'ರೇಷೆ'ಯಾಗಲಾರದು. ಉತ್ತರ ಹಿಂದುಸ್ಥಾನದಲ್ಲಿ 'ಖ'ದ ಬದಲಾಗಿ 'ಷ' ಬರೆಯುವ ರೂಢಿಯಿದೆ. ಅದು ಅಲ್ಲಿಯ ಭೌಗೋಲಿಕ ಗುಣದಿಂದ ಜನತೆಯು ಉಚ್ಚಾರ ಸೌಲಭ್ಯಕ್ಕಾಗಿ ಬಳಕೆಯಲ್ಲಿದೆ. 'ಷ' ಎಂದು ಬರೆದರೂ, ಅದನ್ನು 'ಖ' ಎಂದೇ ಉಚ್ಚರಿಸುವರು. ಅವರು ಈ ಅಶುದ್ಧ ಪ್ರಯೋಗವನ್ನು ಬಿಡುವುದು ಒಳ್ಳಿತು. 'ರೂಪರೇಖೆ' ಎಂದರೆ ಅರ್ಥವು ಸ್ಪಷ್ಟವಾಗುವುದು.

ಇನ್ನು ದಿನನಿತ್ಯವೂ ಬಳೆಯಬೇಕಾದ ಕನ್ನಡ ಸಾಹಿತ್ಯದ ಉತ್ತಮ ಕೃತಿಗಳನ್ನು ಜನತೆಯ ಉಪಯೋಗಾರ್ಥವಾಗಿ ರಚಿಸುವ ಉತ್ಸಾಹಿ ಬರೆಹಗಾರರ ಕುರಿತು ಟೀಕಿಸುವುದು ಈ ಲೇಖನದ ಗುರಿಯಲ್ಲ. ಅವರ ಪ್ರಯತ್ನವು ಸ್ತುತ್ಯವಾಗಿದೆ: ಸಂಗಡ ಶುದ್ಧವಾಗಿ ಬರೆದು, ಸಾಹಿತ್ಯ ಭಂಡಾರವನ್ನು ಅಳವಡಿಸುವ ಉದಾತ್ತಧ್ಯೇಯವಿರುವುದು ವಾಂಛನೀಯವೇ ಸರಿ.

ಸಿರಿಗನ್ನಡವು ಮೆರೆಯಲಿ!

ಕೆಂಬ ಆಸೆ ಅನೇಕರಲ್ಲಿ ಸಹಜವಾಗಿ ಹುಟ್ಟಿತು. ಈ ಆಸೆಯನ್ನು ವ್ಯಾಸರಾಯರನಂತರ ಈಡೇರಿಸಿಕೊಂಡವರು ಶ್ರೀ ಗುರುನಾಥ ಜೋಶಿಯವರು. ಅವರ 'ಪರಿಣೀತಾ' 'ದೇವದಾಸ' ಜನಮನವನ್ನು ಆಕರ್ಷಿಸಿತು. ಅಷ್ಟರಲ್ಲಿ 'ದೇವದಾಸ' ಚಿತ್ರ ಬಂತು.

ನನ್ನಲ್ಲಿ ಶರಚ್ಚಂದ್ರರ ಬಗ್ಗೆ ಉಂಟಾಗಿದ್ದ ಉತ್ಸಾಹ ನೋಡಿ ಶ್ರೀ ಗುರುನಾಥ ಜೋಶಿಯವರು ಅವರ ಕೃತಿಗಳನ್ನು ಭಾಷಾಂತರ ಮಾಡಲು ನನ್ನನ್ನು ಪ್ರೇರೇಪಿಸಿದರು. ಅದರ ಫಲವಾಗಿ ಈ ಕೆಲಸಕ್ಕೆ ತೊಡಗಿದವರಲ್ಲಿ ನಾನು ಮೂರನೆಯವನಾದೆ. ಹತ್ತು ಹದಿನಾರು ಕೃತಿಗಳು ಕನ್ನಡಕ್ಕೆ ಬಂದವು. ಮತ್ತೆ ಶ್ರೀ ಮೇವುಂಡಿ ಮಲ್ಲಾರಿಯವರು ಈ ಗುಂಪಿಗೆ ಸೇರಿದರು. ಈ ವರೆಗೆ ಭಾಷಾಂತರಕಾರರು ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಒಬ್ಬರು ಭಾಷಾಂತರಿಸಿದ ಕೃತಿ ಬಿಟ್ಟು ತಾನು ಬೇರೆ ಮಾಡುವ ರೂಢಿ ಬೆಳೆದುಬಂದಿತ್ತು. ಹೆಚ್ಚು ಹೆಚ್ಚು ಶರಚ್ಚಂದ್ರರ ಕೃತಿಗಳು ಕನ್ನಡಕ್ಕೆ ಬಂದಂತೆಲ್ಲಾ ಹೆಸರು, ಉತ್ಸಾಹದ ಹೊಡೆತಗಳು ಜೋರಾದವು. ಭಾಷಾಂತರಮಾಡಬೇಕೆಂದು ಹಾತೊರೆಯುವ ಜನರು ಹೆಚ್ಚಾದರು. ಅದರ ಹುಚ್ಚು ಅತಿಯಾಗಿಯೂ ಪರಿಣಮಿಸಿತು. ಇಷ್ಟರಲ್ಲಿ ಕನ್ನಡ ಪ್ರಕಾಶಕರು ಶರಚ್ಚಂದ್ರರ ಕೃತಿಗಳು ಬೇಗ ಹಣ ಹಿಂತಿರುಗಿಸುತ್ತೆ ಎಂಬುದನ್ನು ಅರಿವುಗೊಂಡಿದ್ದರು. ಗಿರಾಕಿ ಇದ್ದಲ್ಲಿ ಮಾಲು. ಇದೇ ವ್ಯಾಪಾರದ ಮೂಲ ತತ್ವ. ಅಭಿಮಾನದಿಂದ ಪ್ರಾರಂಭವಾದ ಈ ಒತ್ತಡ ವ್ಯಾಪಾರದಲ್ಲಿ ಲೀನವಾಯಿತು. ಬಹುಶಃ ಈಗ ಶರಚ್ಚಂದ್ರರ ಎಲ್ಲ ಕೃತಿಗಳೂ ಕನ್ನಡಕ್ಕೆ ಬಂದಂತಾಗಿದೆ ಎಂದು ಹೇಳಬಹುದು.

ಅವರ ಕೃತಿಗಳು ಇದೇ ರೀತಿಯಲ್ಲಿ, ಇಷ್ಟೆ ಹುಚ್ಚಿನಲ್ಲಿ, ಇತರ ಪ್ರಾಂತೀಯ ಭಾಷೆಗಳಲ್ಲೂ ಪ್ರಕಟವಾಗಿವೆ. ಒಂದು ಕಾಲದಲ್ಲಿ ಕೇವಲ ಬಂಗಾಲದ ಮನೆ ಮಾತಾಗಿದ್ದ ಕೃತಿಗಳು ಈಗ ಇಡೀ ನಾಡಿನ ಮನೆ ಮಾತಾಗಿದೆ. ಅವರ ಕೃತಿಗಳನ್ನು ಓದಿದವರು ಅವರನ್ನು ಅರ್ಥಮಾಡಿಕೊಂಡಿರುತ್ತಾರೆ. ಅವರನ್ನು ಅರ್ಥಮಾಡಿಕೊಳ್ಳಲು ಕೃತಿಗಳು ಒಂದು ಮುಖವಾದರೆ ಅವರ ಜೀವನದ ಹಿನ್ನೆಲೆ ಅದಕ್ಕೆ ಮೆರುಗು ಕೊಡುವ ಜೀವಕಳೆ.

ಶರತ್ ಬಾಬುಗಳು ಮಧ್ಯಮ ವರ್ಗದ ಮನೆಯಲ್ಲಿ ಹುಟ್ಟಿದವರು. ಬಾಲ್ಯದಿಂದಲೂ ಬರೆಯುವ ಚಟ ಅವರಲ್ಲಿ ರಕ್ತಗತವಾಗಿ ಬಂದಿತ್ತು. ಆದರೆ ಅವರ ಒಳಗಿನ ಚೇತನ ಬೆಳಗಲು ಅವಕಾಶ ದೊರೆತುದು ತಡವಾಗಿ. ಕಷ್ಟಜೀವಿಯಾದ ಅವರು ತಮ್ಮ ಹದಿನೇಳನೆಯ ವಯಸ್ಸಿನಲ್ಲಿ ಮನೆ ಮಠವಿಲ್ಲದೆ, ಸಹಾಯ ಸಹಾನುಭೂತಿ ದೊರಕದೆ ಬರ್ಮಾಕ್ಕೆ ಹೋಗಬೇಕಾಗಿ ಬಂತು. ರಂಗೂನ್ ಸೇರಿದಾಗ ಅವರ ಜೈಯಲ್ಲಿ ಕೇವಲ ಎರಡು ರೂಪಾಯಿಗಳಿದ್ದವು. ಬಹಳ ಕಷ್ಟಪಟ್ಟು ಪ್ರಯಾಸದಿಂದ ಒಂದು ಗುಮಾಸ್ತೆ ಕೆಲಸ ದೊರಕಿಸಿಕೊಂಡು ಅವರು ಕಾಲ ತಳ್ಳುತ್ತಿದ್ದರು. ಆ ಕೆಲಸ ಸಹ ಅಲ್ಲಿಯೇ ನೆಲಸಿಬಿಟ್ಟಿದ್ದ ಒಬ್ಬ ಬಂಗಾಳೀ ಸದ್ಗೃಹಸ್ಥನ ಅಭಿಮಾನದ ಫಲ. ಶರತ್ ಬಾಬುಗಳ ಸೊಗಸಾದ ಶಾರೀರಕ್ಕೂ, ಸಂಗೀತಕ್ಕೂ ಆ ಗೃಹಸ್ಥ ಮಾರುಹೋಗಿದ್ದ. ಅದರ ಫಲವೇ ಈ ಕೆಲಸ. ಬಾಳುವುದಕ್ಕೇ ಕಷ್ಟವಾಗಿದ್ದಾಗ ಇನ್ನು ಓದುವುದೆಲ್ಲಿಂದ? ವಿದ್ಯಾರ್ಜನೆ, ಜ್ಞಾನಾರ್ಜನೆಗೆ ಆಸಕ್ತಿ ಆತನಲ್ಲಿ ಬಹಳವಿದ್ದರೂ ವಿಧಿ ಅದನ್ನು ಕೈಗೂಡಿಸಿ ಕೊಡಲಿಲ್ಲ. ಆದರೆ ಒಳಗಿನ ಚೇತನ ಎದ್ದೆದ್ದು ಮೇಲೆ ಬರಲು ಪ್ರಯತ್ನಿಸುತ್ತಿತ್ತು. ಅದಕ್ಕೆ ಸಹಾಯ ನೀಡಿತು ಇವರಲ್ಲಿ ಅಭಿಮಾನವಿಟ್ಟ ಗೃಹಸ್ಥರ ಉತ್ತಮ ಪುಸ್ತಕ ಭಂಡಾರ. ವಿಶ್ವವಿದ್ಯಾಲಯದ ಡಿಗ್ರಿಗೆ ಆ ಚೇತನ ಮಾರುಹೋಗಲಿಲ್ಲ. ನಿಜವಾದ ವಿದ್ಯಾದಾಹಕ್ಕೆ ಒಲಿದಿತ್ತು. ಆ ಒಲವು ಆ ಬಂಗಾಳೀ ಗೃಹಸ್ಥ ಪುಸ್ತಕ ಭಂಡಾರದ ಸಾರವನ್ನೆಲ್ಲಾ ಹೀರಿಬಿಟ್ಟಿತು. ಸುತ್ತಮುತ್ತಲಿನ ಜೀವನ, ಈ ಸಾರ ಒಂದುಗೂಡಿ ರಸಪಾಕವಾಗಿ ಕ್ರಮದಿಂದ ಹೊಮ್ಮಲು ಕಾಯಬೇಕಾಗಿತ್ತು.

ಅಷ್ಟರಲ್ಲಿ ಕಲ್ಕತ್ತೆಯ ಇವರ ಕೆಲವು ಬಾಲ್ಯ ಮಿತ್ರರು 'ಯಮುನಾ' ಎಂಬ ಪತ್ರಿಕೆ ಹೊರಡಿಸಿ ಇವರನ್ನು ಬರೆಯಲು ಒತ್ತಾಯಪಡಿಸಿದರು. ಆಗ ಆತ 'ಬಹಳ ವರ್ಷಗಳಿಂದ ಬರೆದೇ ಇಲ್ಲ. ಚಿಕ್ಕಂದಿನಲ್ಲಿ ಕೊಂಚ ಗೀಚಿದ್ದು. ಈಗ ಸಾಧ್ಯವಾಗಲಾರದು' ಎಂದು ತಿಳಿಸಲು, ಅವರು ಕೇಳಲಿಲ್ಲ. ಒತ್ತಾಯದ ಮೇಲೆ ಒತ್ತಾಯ ಹಾಕಿದರು. ಅಂತರಗಂಗೆಯಾಗಿದ್ದ ಶರಚ್ಚಂದ್ರರ ಈ ಕೃತಿಗಂಗೆಯನ್ನು ಈ 'ಯಮುನೆ' ಕರುಮಿಕೊಂಡು ಬಂದಳು. ಪ್ರಾರಂಭದ ಬರವಣಿಗೆ ಅನುಕ್ರಮವಾಗಿ 'ಯಮುನಾ'ದಲ್ಲಿ ಗುಪ್ತನಾಮದಿಂದ ಹೊರಬರಲಾರಂಭಿಸಿತು. ಕೃತಿಯಲ್ಲಿ ಜೀವವಿದ್ದರೆ ಉತ್ಸಾಹ ತಾನೇ ತಾನಾಗಿ ಓದುಗರಲ್ಲಿ ಹೊಮ್ಮುತ್ತದೆ. ಕೃತಿಕಾರ ದೊಡ್ಡವನಾಗಿದ್ದರೆ, ಹೆಸರು ಗಳಿಸಿಕೊಂಡವನಾಗಿದ್ದರೆ 'ಇದರಲ್ಲಿ ಏನೋ ಅರ್ಥವಿರಬೇಕು. ಇಲ್ಲದಿದ್ದರೆ ಹೇಗೇಕೆ ಅಂತಹ ದೊಡ್ಡ ಕೃತಿಕಾರ ಬರೆಯುತ್ತಿದ್ದ? ಎಂದು ತಲೆ ಕೆಡಿಸಿಕೊಂಡಾದರೂ ಉತ್ಸಾಹ ತುಂಬಿಸಿಕೊಳ್ಳುವುದು ಸ್ವಭಾವಸಿದ್ಧ ತತ್ವವೆ. ಇರಲಿ, ಇವರ ಕೃತಿ ಬಂದಂತೆಲ್ಲಾ ಯಾರೆಂದು ತಿಳಿಯದ ಜನ ಮತ್ತೊಬ್ಬ ಅದ್ಭುತ ಪ್ರತಿಭಾಶಾಲಿ ಗ್ರಂಥಕರ್ತ ಜನ್ಮತಾಳಿದ್ದಾನೆಂದು ಹೇಳಿಕೊಂಡರು. ಅವರಲ್ಲಿ ಕೆಲವರು ಠಾಕೂರರೇ ಇದನ್ನು ಬರೆದು ಗುಪ್ತನಾಮದಿಂದ ಪ್ರಕಟಿಸಿರುವರೆಂದೂ ಆಡಿಕೊಂಡರು. ನಂತರ ಒಂದೊಂದಾಗಿ ಪ್ರತಿಗಳು ಹೊರಬರಲಾರಂಭಿಸಿದುವು—ಬಡೀ ದೀದಿ, ಪರಿಣೀತಾ, ಚಂದ್ರನಾಥ, ಚರಿತ್ರಹೀನ, ಶ್ರೀಕಾಂತ, ದತ್ತಾ, ಹಳ್ಳಿಯ ಸಮಾಜ, ಗೃಹ

ದಾಹೆ, ದೇವದಾಸ, ವಿಪ್ರದಾಸ, ಕಾಶೀನಾಥ, ಅರಕ್ಷಣೀಯ ಮೊದಲಾದುವು.

ರಂಗೂನಿನ ಹವಾ ಒಗ್ಗಲಿಲ್ಲವಾಗಿ ಆರೋಗ್ಯದ ಕಾರಣವಾಗಿ ಅವರು ಕಲ್ಕತ್ತೆಗೆ ಹಿಂತಿರುಗಬೇಕಾಗಿ ಬಂತು. ಆದರೆ ಕೈಯಲ್ಲಿದ್ದ, ತಿಂಗಳಿಗೆ ಸುಮಾರು ಒಂದು ನೂರು ರೂಪಾಯಿ ತರುತ್ತಿದ್ದ ಕೆಲಸ ಬಿಟ್ಟರೆ ತನಗೆ ಅಷ್ಟು ಸಂಬಳ ಕೊಡುವವರಾರು? ತನ್ನ ಶಾಲಾ ಓದಿಗೆ ಅಷ್ಟು ಪ್ರಮಾಣದ ವರಮಾನ ಸಿಗಲು ಸಾಧ್ಯವೆ? ಇಲ್ಲಿ ಬರುತ್ತಿದ್ದುದು ಅಭಿಮಾನದ ಪರಿಣಾಮವಾಗಿ ಬರುತ್ತಿದ್ದ ವರಮಾನ ಎಂಬೆಲ್ಲ ವಿಚಾರ ಅವರನ್ನು ಬಾಧಿಸದೆ ಇರಲಿಲ್ಲ. ಆದರೆ ಅವರಿಗೆ ತಿಂಗಳಿಗೆ ನೂರು ರೂಪಾಯಿ ಕ್ರಮವಾದ ವರಮಾನ ಒದಗಿಸುವ ಭರವಸೆ ಒಬ್ಬ ಪ್ರಕಾಶಕ ಕೊಟ್ಟುದರಿಂದ ಮರಳಿ ತನ್ನ ದೇಶಕ್ಕೆ ಅವರು ಬಂದರು. ಆ ಭರವಸೆ ಕೊಡುವ ಮೊದಲೇ ಆ ಪ್ರಕಾಶಕ ಶರಚ್ಚಂದ್ರರ ನಾಲ್ಕಾರು ಪುಸ್ತಕ ಪ್ರಕಟಿಸಿ ರುಚಿಕಂಡಿದ್ದ. ಅಲ್ಲಿಂದ ಮುಂದೆ ಶ್ರೀ ಶರಚ್ಚಂದ್ರರು ಬೇರಾವ ಉದ್ಯೋಗಕ್ಕೂ ಕೈಹಾಕದೆ ಕೇವಲ ಕೃತಿ ರಚನೆಯಿಂದಲೇ ಜೀವನ ಸಾಗಿಸಿದರು. ಬರವಣಿಗೆಯಿಂದಲೇ ಜೀವನ ಸಾಗಿದ ಬೆರಳೆಣಿಸುವಷ್ಟು ಮಂದಿಯಲ್ಲಿ ಇವರು ಮೊದಲಿಗರೆಂದರೆ ತಪ್ಪಾಗಲಾರದು.

ಶರಚ್ಚಂದ್ರರಿಗೆ ತಮ್ಮ ಕೃತಿಗಳ ಬಗ್ಗೆ ದುರಭಿಮಾನವಿರಲಿಲ್ಲ. ಹೆದರಿಕೆಯೂ ಇರಲಿಲ್ಲ. ಏಕೆಂದರೆ ತನ್ನ ಮನಸ್ಸಿಗೆ ತೃಪ್ತಿಯಾಗುವ ವರೆಗೂ ಆತ ಯಾವ ಪ್ರತಿಯನ್ನೂ ಹೊರಗೆಡಹುತ್ತಿರಲಿಲ್ಲ. ಬರೆದು, ಓದಿ, ತಿದ್ದಿ, ಹೊಡೆದು ಮತ್ತೆ ಬರೆದು, ಓದಿ ಕ್ರಮಪಡಿಸಿ ಕೃತಿಗೆ ರೂಪಕೊಡುತ್ತಿದ್ದರು. ಈ ವಿಚಾರವನ್ನು ಒತ್ತಿಹೇಳಲು ಕಾರಣವಿಲ್ಲದೆ ಇಲ್ಲ. ಪ್ರಾರಂಭದ ದೆಸೆಯಲ್ಲಿ ಆತನ ಕೃತಿಗಳು ಗುಪ್ತನಾಮದಿಂದ ಬಂದಾಗ ತನ್ನ ಕೃತಿಯ ಬಗ್ಗೆ ತನ್ನದೇ ನಿರ್ದಿಷ್ಟ ಅಭಿಪ್ರಾಯವಿಲ್ಲದುದರಿಂದ ಗುಪ್ತನಾಮದಲ್ಲಿ ಪ್ರಕಟಿಸಿ ಜಗ ಮೆಚ್ಚಿದರೆ ತನ್ನದೆಂದು ಹೇಳುವುದು, ಇಲ್ಲದಿದ್ದರೆ ತನ್ನದಲ್ಲವೆಂದು ಹೇಳಿದರಾಯಿತು ಎಂದು ಹಾಗೆ ಮಾಡುತ್ತಾರೆ ಎಂದು ಜನ ಆಡಿಕೊಳ್ಳದೆ ಇರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅದು ನಿಜವೂ ಆಗಿರುತ್ತದೆ. ಆದರೆ ಶರತ್‌ಬಾಬುಗಳಿಗೆ ಆ ಬಗೆಯಾದ ವಿಕಲ್ಪಗಳು ಇರಲಿಲ್ಲ: ಏಕೆಂದರೆ ಬರೆಯುವುದು ಒಂದು ತಪಸ್ಸಾಧನ ಎಂದು ಅವರು ತಿಳಿದಿದ್ದರು.

ಅವರು ತುಂಬ ವಿನಯಶೀಲರು. ಸಂಕೋಚಪ್ರಕೃತಿಯವರು. ತಾನಾಗಿ ಮೇಲೆ ಬಿದ್ದು ಮುಂದೆ ಬರಬೇಕು, ತನ್ನ ಬಗ್ಗೆ ಪ್ರಚಾರಮಾಡಿಸಿಕೊಳ್ಳಬೇಕು, ಜನರಿಂದ ಪೂಜೆ ತೆಗೆದುಕೊಳ್ಳಬೇಕು ಮೊದಲಾದ ಆಸೆ ಆಕಾಂಕ್ಷೆಗಳು ಆತನಿಗಿರಲಿಲ್ಲ. ಯೋಗ್ಯತೆ ಇದ್ದರೆ ಅದರ ಸ್ಥಾನ ಅದಕ್ಕೆ ಸಿಕ್ಕೇ ಸಿಗುತ್ತದೆ ಎಂಬ ನಂಬಿಕೆ ಮಾತ್ರ ಅವರಿಗಿತ್ತು.

ಅವರು ಆಧುನಿಕ ವ್ಯವಹಾರ ಪ್ರಪಂಚಕ್ಕೆ ಸೇರಿದವರಲ್ಲ. ಸ್ವಾರ್ಥತೆಯಂತು ಲವಲೇಶವೂ ಇಲ್ಲ. ಉದಾಹರಣೆಗೆ ನಡೆದ ಒಂದು ಪ್ರಸಂಗ ತಿಳಿಸುತ್ತೇನೆ. ಅವರು 'ಸ್ವಾಮಿ' ಕಾದಂಬರಿ ಬರೆದುಕೊಟ್ಟರು. ಪ್ರಕಾಶಕರಿಗೆ ಮಹದಾನಂದವಾಯಿತು. ರುಜುಹಾಕಿದ ಖಾಲಿ ಹುಂಡಿಯನ್ನು ಕಳುಹಿಸಿ, "ನಿಮಗೆ ಬೇಕಾದಷ್ಟು ಹಣ ಭರ್ತಿ ಮಾಡಿ ಹಣ ಪಡೆದುಕೊಳ್ಳಿ" ಎಂದು ಚೀಟಿಬರೆದು ಕಳುಹಿಸಿದರು. (ಇಂತಹ ಪ್ರಕಾಶಕರು ಇದ್ದಾರೆಯೆ? ಎಂದು ಅನುಭವದಿಂದ ಸಂಶಯಪಡಬೇಕಾಗುತ್ತದೆ. ಕೊಡುವುದನ್ನು ಕಾಲಕ್ಕೆ ಸರಿಯಾಗಿ ಕೊಟ್ಟರೆ ಸಾಕೆಂದು ನಮ್ಮ ಬರೆಹಗಾರರು ಕಾತುರರಾಗಿರಬೇಕಾಗಿದೆ.) ಶರತ್‌ಬಾಬುಗಳಿಗೆ ಆ ತಿಂಗಳಿಗೆ ಬೇಕಾಗಿದ್ದುದು ಒಂದುನೂರು ರೂಪಾಯಿ. ಅಷ್ಟನ್ನು ಮಾತ್ರ ಪಡೆದರು. ಒಂದು ಚಿಕ್ಕ ಕಾಸೂ ಹೆಚ್ಚಾಗಿ ಪಡೆಯಲಿಲ್ಲ.

ಶರಚ್ಚಂದ್ರರ ದೇಶಪ್ರೇಮ ಅಚಲವಾದುದು. ತ್ಯಾಗಬುದ್ಧಿ ಅಮೋಘವಾದುದು. ಬರ್ಮದಲ್ಲಿನ ಅವರ ಅನುಭವ, ಬಂಗಾಳದಲ್ಲಿನ ಅನುಭವ ಅವರ ಹೃದಯವನ್ನು ತಳಮಳಗೊಳಿಸಿರಬೇಕು. ಜೊತೆಗೆ ಆತನ ಹತ್ತನೆಯ ವಯಸ್ಸಿನಲ್ಲಿ ಸ್ವಾತಂತ್ರ್ಯಗಳಿಸಲು ಜನ್ಮತಾಳಿದ ಕಾಂಗ್ರೆಸ್ ಸಂಸ್ಥೆ ಸಹ ಮನಸ್ಸನ್ನು ತನ್ನ ಕಡೆ ಒಲಿಸಿಕೊಂಡಿತ್ತು. ಅವರು ಬರೆದ 'ಪಥೇರ್ ದಾಬಿ' ಬಂಗಾಳದಲ್ಲಿ ನವಚೇತನ ಹುಟ್ಟಿಸಿತು. ಅಲ್ಪಕಾಲದಲ್ಲಿ ಎಂಟು-ಹತ್ತು ಸಾವಿರ ಪ್ರತಿಗಳು ಮಾರಾಟವಾದವು. ಅದರ ಶಕ್ತಿಯನ್ನು ಅರಿತೊಡನೆ ಬಂಗಾಳಾ ಸರಕಾರ (ಆಗಿದ್ದುದು) ಹೆದರಿಹೋಯಿತು. ಕೂಡಲೇ ಮುಟ್ಟುಗೋಲು ಆಜ್ಞೆ ಹೊರಡಿಸಿತು. ಮೊನ್ನೆ ಮೊನ್ನೆ ವರೆಗೆ ಆ ಆಜ್ಞೆ ಜಾರಿಯಲ್ಲಿತ್ತು. ಈ ಕಾದಂಬರಿ ಈಗ 'ಅಧಿಕಾರ' ಎಂಬ ಹೆಸರಿನಿಂದ ಕನ್ನಡಕ್ಕೆ ಪರಿವರ್ತಿತವಾಗಿದೆ.

ಶರಚ್ಚಂದ್ರರ ಕತೆಗಳಲ್ಲಿ ಜನಜೀವನದ ಚಿತ್ರ ನಮಗೆ ಕಾಣುತ್ತದೆ. ಅದರಿಂದಲೇ ಅದು ಜಾಗ್ರತೆಯಾಗಿ ಮನದಲ್ಲಿ ಮೂಡುತ್ತದೆ. ಅವರ ಅನೇಕ ಕತೆಗಳು ನಾಟಕವಾಗಿ ಪರಿವರ್ತಿತವಾಗಿ ಬಂಗಾಲದಲ್ಲಿ ಅಭಿನಯಿತವಾಗಿವೆ. ಹತ್ತಾರು ಕಥೆಗಳು ಚಿತ್ರಗಳಾಗಿ ರಾರಾಜಿಸಿವೆ. ಹೆಸರಿಸುವುದಾದರೆ— ದೇವದಾಸ, ಕಾಶೀನಾಥ, ಛೋಟಾಭಾಯಿ (ರಾಮೇರ್ ಸುಮತಿ), ಬಡಿದೀದಿ, ಚಿಂಗಾರಿ, ಇಂಕಾರ್ (ಅರಕ್ಷಣೀಯಾ), ಮಂಜಿಲ್ (ಗೃಹದಾಹ) ಮೊದಲಾದುವು ಥಟ್ಟನೆ ನೆನಪಾಗುತ್ತದೆ.

ಶರಚ್ಚಂದ್ರರು ಉಜ್ವಲ ಭಾಷಾಭಿಮಾನಿ. ಅದಕ್ಕೆ ಅವರು ಬೆಳೆದ ಊರು ಕಾರಣವಿರಬೇಕು. ಅವರು ಬೆಳೆದದ್ದು ಬಂಗಾಳದ ಹೃದಯದಲ್ಲಲ್ಲ. ಅದರ ಅಂಚಿನಲ್ಲಿರುವ ಭಾಗಲಪುರದಲ್ಲಿ. ಜನಾಂಗದ ಮತ್ತು ಭಾಷೆಯ ಬಗ್ಗೆ ಹೆಚ್ಚಿನ

ಎಚ್ಚರಿಕೆ, ಉತ್ಸಾಹ, ಒಲವು ಕೆಲವು ಸಂದರ್ಭದಲ್ಲಿ ಮಿತಿ ಮೀರಿದ ಅಭಿಮಾನ,—ಅಭಿಮಾನವೇನು ದುರಭಿಮಾನವೂ ಸಹ, ಭಾಷಾಪ್ರದೇಶದ ಅಂಚಿನ ಊರುಗಳಲ್ಲಿ ವಾಸ ಮಾಡುವವರಿಗಿರುತ್ತದೆ ಎಂಬುದು ನಿರ್ವಿವಾದವಾದ ಮಾತು. ಇದಕ್ಕೆ ಕಾರಣ ಅನೇಕ ಇವೆ. ಭಾರತದಲ್ಲಿಯಂತೂ ಎಲ್ಲ ಭಾಷೆಗಳವರಿಗೂ ಈ ತೊಡಕು ಇದ್ದೇ ಇದೆ. ಈ ಸಮಸ್ಯೆ ಇದ್ದೇ ಇದೆ. ನಮ್ಮ ಕನ್ನಡನಾಡಿಗೆ ಸಂಬಂಧಿಸಿದ ಹಾಗೆಯೇ ಈ ಪ್ರಶ್ನೆ ನೋಡೋಣ. ರಬಕವಿಯಲ್ಲಿ, ಬಳ್ಳಾರಿಯಲ್ಲಿ, ಕೊಳ್ಳೆಗಾಲದಲ್ಲಿ, ಕಾರವಾರದಲ್ಲಿ ಕಾಣಸಿಗುವ ಉತ್ಸಾಹ, ಚಟುವಟಿಕೆ, ಚಳುವಳಿ ಮೈಸೂರು, ಹರಿಹರ, ರಾಣೆ ಬೆನ್ನೂರು, ಉಡುಪಿಗಳಲ್ಲಿ ಇರಲು ಕಾರಣವಿಲ್ಲ. ಇಲ್ಲವೂ ಇಲ್ಲ. ಅದರಿಂದ ಬಂಗಾಳದ ಅಂಚಿನಲ್ಲಿ ಬೆಳೆದ ಶರತ್ ಬಾಬುಗಳಿಗೆ ತಮ್ಮ ಹಾಗು ಜನಗಳ ಬಗ್ಗೆ ಅಚಲವಾದ ಅಭಿಮಾನವಿತ್ತೆಂಬುದು ಸ್ವಭಾವಜನ್ಯವಾದುದು. ಈ ಅಭಿಮಾನವನ್ನು ನಾವು ಅವರು ಚಿತ್ರಿಸಿರುವ ಜನಜೀವನದಿಂದಲೇ ಅರಿವುಗೊಳ್ಳಬಹುದು.

ಶರಚ್ಚಂದ್ರರಿಗೆ ಜಿದ್ದಿಗಿಂತ ಸಹಾನುಭೂತಿ ಹೆಚ್ಚು. ಆತ ಆದರ್ಶವಾದಿಯೆಂದು ಮನಸ್ಸಿಗನ್ನಿಸಿದರೂ ವಾಸ್ತವತೆಯನ್ನು ತನ್ನ ಆದರ್ಶಕ್ಕಾಗಿ ಬಲಿಗೊಡಬಯಸಲಿಲ್ಲ. ಜೀವನ ಚಿತ್ರಿಸುವುದೇ ಈ ಸಾಹಿತ್ಯ ಶಿಲ್ಪಿಯ ಕೆಲಸ. ಸಮಸ್ಯೆಗಳನ್ನು ಬಿಡಿಸಿ ಬಿಡಿಸಿ ಜನತೆಯ ಮುಂದಿಡುವುದೇ ಆತ ಮಾಡಿದ ಅದ್ಭುತ ಕೆಲಸ. ಯಾವ ಸಮಸ್ಯೆಗೆ ಪರಿಹಾರವನ್ನು ಹೇರಲು ಆತ ಹೋಗಲಿಲ್ಲ. ಎಲ್ಲಿ ಸುಧಾರಣೆಯಾಗಬೇಕು? ಈಗಿರುವ ಕುಂದುಗಳೇನು? ಎಂಬೆಲ್ಲ ಪ್ರಶ್ನೆಗಳನ್ನು ಅವರು ಶಸ್ತ್ರಚಿಕಿತ್ಸಕನಂತೆ ವಿಂಗಡಿಸಿ ತೋರಿಸಿದರು.

ಅವರಿಗೆ ಹಳ್ಳಿಯ ಬಾಳಿನಲ್ಲಿ ತುಂಬ ಆಸಕ್ತಿ. ಹಳ್ಳಿಯಲ್ಲಿಯೇ ಬಾಳುವೆ ಮಾಡಬೇಕೆಂದು ಆತನ ಹಂಬಲ. ಹಳ್ಳಿಯ ಸುಧಾರಣೆಯಿಂದಲೇ ನಮ್ಮ ನಾಡಿನ ಉದ್ಧಾರವೆಂಬ ನಂಬಿಕೆ ಅವರಿಗಿತ್ತು. ಆದರೆ ಈ ಉದ್ಧಾರ ಕಾರ್ಯಕ್ಕೆ ಕೈ ಹಾಕಿದರೆ ಏಳುವ ಅಸಂಖ್ಯ ಸಮಸ್ಯೆಗಳ ಅರಿವು ಅವರಿಗಿತ್ತು. ಸುಧಾರಿಸಹೋಗಿ ಪ್ರತಿಫಲವಿಲ್ಲದೆ ಹಿಂತಿರುಗಿದ ಅನೇಕ ಪಟ್ಟಣಿಗರ ಅವಸ್ಥೆಯನ್ನು ಅವರು ನೋಡದೆ ಇಲ್ಲ. ಅವರ ಈ ಎಲ್ಲ ವಿಚಾರ ಲಹರಿಗಳನ್ನು ನಾವು ಅವರ 'ಹಳ್ಳಿಯ ಸಮಾಜ'ದಲ್ಲಿ ನೋಡಬಹುದು.

ಶರಚ್ಚಂದ್ರರಿಗೆ ಬಂಗಾಳಿಗಳಿಗೆ ಸ್ವಭಾವಜನ್ಯವಾದ ಕ್ರಾಂತಿಕಾರರ ಮನೋಭಾವನೆಗಳು ಇಲ್ಲದೆ ಇರಲಿಲ್ಲ. ಇತ್ತು. ಆದರೂ ಅವರ ಮನಸ್ಸು ಹೆಣ್ಣಿನ ಜೀವನದ ಕಡೆಗೇ ಹೆಚ್ಚು ಮಾಲಿತ್ತು. ನಾಡು, ನುಡಿ, ಸಂಸ್ಕೃತಿಯನ್ನು ಅರಿತುಕೊಳ್ಳಬೇಕಾದರೆ, ಅದರ ನಿಜಸ್ವರೂಪವನ್ನು ಕಂಡುಕೊಳ್ಳಬೇಕಾದರೆ ನಾವು ಸ್ತ್ರೀ ಜೀವನವನ್ನು, ಪ್ರವೃತ್ತಿಯನ್ನು ನೋಡಬೇಕೆಂಬ ನಂಬಿಕೆ ಶರಚ್ಚಂದ್ರರಿಗೆ ಇತ್ತು. ಅದರಿಂದ ಅವರ ಸ್ತ್ರೀ ಪಾತ್ರಗಳು ಅದ್ಭುತ ಯಶಸ್ಸು ಪಡೆದಿವೆ. ಅದೇ ಕಾರಣವಾಗಿ ಅವರ ಮನಸ್ಸು ಸಹ ಸಂಪ್ರದಾಯದಕಡೆ ಮಾಲುತ್ತದೆ. ಅವರ ಈ ಮನೋಭಾವವನ್ನು ಅವರೇ ಚಿತ್ರಿಸಿರುವ "ಶೇಷ ಪ್ರಶ್ನೆ"ಯ 'ಕಮಲ'ಳ ಪಾತ್ರವನ್ನು ನೋಡಿ ಅರ್ಥಮಾಡಿಕೊಳ್ಳಬಹುದು. ಆಂಗ್ಲೋ ಇಂಡಿಯನ್ ಸಮಾಜದಲ್ಲಿ ಬೆಳೆದ 'ಮೇರಿ ಭಾರತಿ', ಉಡುಪು, ಸ್ವಭಾವಶೀಲ, ರೀತಿ, ನಡತೆಗಳಲ್ಲಿ ಕೇವಲ ಸಾಂಪ್ರದಾಯಿಕ ಹಿಂದೂ ಹೆಣ್ಣುಮಗಳಂತೆ ವರ್ತಿಸುವುದು ಈ ಕಾರಣವಾಗಿಯೇ.

ಅವರ ಸಂಭಾಷಣೆಯ ವೈಖರಿ ಅವರಿಗೆ ಒಲಿದು ಬಂದ ಮೈಸಿರಿ. ಅವರು ರಚಿಸಿರುವ ಹೆಣ್ಣಿನ ಜೀವನ ಜನಾಂಗದ ಸಂಸ್ಕೃತಿಯ ಜೀವ ಜೀವ ಈ ಜೀವನ ಎಂಬ ನಂಬಿಕೆಯ ಆಧಾರದವನ್ನು ಅವಲಂಬಿಸಿದ್ದು. ಅವರು ಜೀವನಸಂಗಾತಿಯಾದ ಈ ಗಂಡು—ಹೆಣ್ಣನ್ನು ತೂಗಿ ನೋಡಿದ್ದಾರೆ. ಒಳಹೊಕ್ಕು ನೋಡಿದ್ದಾರೆ. ಮನುಷ್ಯ ಎಷ್ಟೇ ಕ್ರಾಂತಿಕಾರಕನಾದರೂ ಸುಖ ಜೀವನ ಬಯಸುತ್ತಾನೆ; ನೆಮ್ಮದಿ ಇಚ್ಛಿಸುತ್ತಾನೆ; ತೃಪ್ತಿ ಬೇಕೆನ್ನುತ್ತಾನೆ. ಅದರಿಂದ ಸಾಂಸಾರಿಕ ಜೀವನ ಬಯಸಿ ಸಮಾಜ ರೂಪಗೊಳ್ಳುತ್ತದೆ. ಅದರ ಕಟ್ಟುಪಾಡಿನೊಳಗೆ ಇರುವುದು ಕ್ಷೇಮಕರವೆಂದು ವಿವೇಚಿಸುತ್ತಾನೆ. ಇವೆಲ್ಲ ಗಂಡಿನಲ್ಲಿ ಒಂದು ತೂಕದಲ್ಲಿ ಇದ್ದರೆ ಹೆಣ್ಣಿನಲ್ಲಿ ಹತ್ತು ಪಾಲು ಹೆಚ್ಚು ಎಂದು ಶರಚ್ಚಂದ್ರರ ನಂಬಿಕೆ. ಸಂಸಾರಿಕ ಜೀವನದ ಒಂದು ಮುಖ್ಯ ಚೇತನ ಈ ದೃಷ್ಟಿಯಿಂದ ಅಳೆದರೆ ಈ ಅಭಿಪ್ರಾಯದ ಅರ್ಥವಾದೀತು. ಸಂಭೋಗದಿಂದ ಗಂಡಸಿಗೆ ಸುಖವಾಗಬಹುದು. ಅದರ ಪರಿಣಾಮವೇನಾಯಿತು—ಏನಾಗುತ್ತದೆ ಎಂದು ಅವನು ಕೆಲವೊಮ್ಮೆ ಯೋಚಿಸದೆ ಇರಬಹುದು. ಕೇವಲ ಲೈಂಗಿಕ ತೃಪ್ತಿಯಲ್ಲಿಯೇ ಅವನು ಸುಖ ಕಂಡುಕೊಂಡನೆನ್ನಬಹುದು. ಆದರೆ ಹೆಣ್ಣಿಗೆ ಕೇವಲ ಲೈಂಗಿಕ ಸುಖದಲ್ಲಿಯೇ ಎಲ್ಲ ಮುಗಿಯುವುದಿಲ್ಲ. ತಾಯ್ತನದಲ್ಲಿ ಅದು ಪರ್ಯವಸಾನವಾಗಬೇಕು. ಗಂಡಿಗೆ ತಂದೆಯಾಗುವುದು ಆಕಸ್ಮಿಕ. ಆದರೆ ತಾಯಿತನ ಹೆಂಗಸಿಗೆ ಲೈಂಗಿಕ ಪ್ರವೃತ್ತಿಯಷ್ಟೆ ಹಿರಿಯದು. ಅದರಿಂದ ಸಹನೆ, ಕೋಮಲತೆ ಅವರಲ್ಲಿ ನೆಲೆಯಾಗುತ್ತವೆ. ಉದ್ರೇಕಕ್ಕೆ ಆತುರದಲ್ಲಿ ಹೆಣ್ಣು ಎಡೆ ಕೊಡುವುದಿಲ್ಲ. ಅವಳು ಬರೀ ಹೆಣ್ಣಾಗಿ ಬಾಳುವುದಿಲ್ಲ. ತಾಯಿಯಾಗಿ ಬಾಳುತ್ತಾಳೆ. ಈ ದೃಷ್ಟಿಯಿಂದ ಶರಚ್ಚಂದ್ರರು ತನ್ನ ಸ್ತ್ರೀ ಪಾತ್ರಗಳನ್ನು ನೋಡುತ್ತಾರೆ. ಅದಕ್ಕೆ ಅವರ ಕತೆಗಳ ನಾಯಿಕೆಯರು ನಾಯಕರನ್ನು ಅನೇಕ ಸಲ ತಾಯಿಪ್ರೇಮದಿಂದಲೇ ನೋಡುವಂತೆ ಕಾಣುತ್ತಾರೆ. ಸಾಮಾಜಿಕ ಕಟ್ಟಡದಲ್ಲಿ ಗಂಡಸು ಕೇವಲ ಇಟ್ಟಿಗೆ, ಕಲ್ಲು ಇದ್ದಂತೆ ಆದರೆ ಅದಕ್ಕೆ ಸುಭದ್ರವಾದ ಆಯ ಕಟ್ಟು, ಸುಂದರವಾದ ರೂಪು ಕೊಡುವ ಗಾರೆ ಸಿಮೆಂಟ್



ಹೈದರಾಬಾದದ "ಚಾರ್ ಮಿನಾರ್"

ಚೇತನ ಹೆಂಗಸು ಎಂದು ಹೇಳಬಹುದು. ಅವರ ಮನಸ್ಸು ಈ ಅರಿವನ್ನು ಕಂಡುಕೊಂಡಿತ್ತು. ಅದಕ್ಕೆ ತನ್ನ ಆಸೆ ಹಳ್ಳಿಯ ಬಾಳಿನಲ್ಲಿರಬೇಕೆಂದು ಇದ್ದರೂ ತನ್ನ ಮಡದಿ ಶ್ರೀಮತಿ ಹಿರಣ್ಮಯಿದೇವಿಯ ಇಚ್ಛೆಯನುಸಾರವಾಗಿ ಅವರು ಕಲ್ಕತ್ತೆಯ ವಾಸಕ್ಕೆ ಒಪ್ಪಿದರು.

ಶರಚ್ಚಂದ್ರರು ವಿಜ್ಞಾನದಲ್ಲಿ ತಲೆಹಾಕಿದ್ದರು; ಹೋಮಿಯೋಪಥಿ ಕ್ರಮದಲ್ಲಿ ಅಭ್ಯಾಸಮಾಡಿ ಹಳ್ಳಿಗರಿಗೆ ವೈದ್ಯ ಮಾಡುತ್ತಿದ್ದರು. ಸಾಕು-ಪ್ರಾಣಿಗಳಲ್ಲಿ ಅವರಿಗೆ ತುಂಬ ಮಮತೆ. ಮಕ್ಕಳಿಲ್ಲದುದು ಸಹ ಅದಕ್ಕೆ ಒಂದು ಕಾರಣ ಇರಬೇಕು.

ಶರಚ್ಚಂದ್ರರಿಗೆ ಹುಕ್ಕಾ ಎಂದರೆ ಪಂಚಪ್ರಾಣ. ಎಡಗೈಯಲ್ಲಿ ಹುಕ್ಕದ ನಾಳವಿದ್ದರೆ ಬಲಗೈ ಲೇಖನಿ ಓಡುತ್ತಿದ್ದುದು. ಅಷ್ಟೆ ಪ್ರಿಯವಾದುದು 'ಚಹಾ' ಸಹ. ಒಂದು ಸಲಕ್ಕೆ ನಾಲ್ಕಾರು ಕಪ್ ಚಹಾ ಆಗಬೇಕು. ಹೀಗೆ ದಿನಕ್ಕೆ ನಾಲ್ಕಾರು ಸಲ ನಡೆದರೇ ತೃಪ್ತಿ.

ಅವರಿಗೆ ಕೃತಿ ಹೇಗೆ ಅಚ್ಚುಕಟ್ಟಾಗಿರಬೇಕೆಂದು ಆಸೆಯಿತ್ತೋ ಹಾಗೆಯೇ ಎಲ್ಲ ಅಚ್ಚುಕಟ್ಟಾಗಿರಬೇಕು. ಬರವಣಿಗೆಗೆ ಸಾಮಗ್ರಿ ಉಪಯೋಗಿಸುವ ಕಾಗದ ಎಲ್ಲ ಉತ್ತಮ ದರ್ಜೆಯದೇ ಆಗಿರಬೇಕು. ಸಾಧಾರಣವಾದ ಕಾಗದದ ಮೇಲೆ ಆತ ಬರೆದುದೇ ವಿರಳ. ಕೃತಿಯ ಒಳಮೈ ಹೊರಮೈ, ಸಾಧನ ಸಾಮಗ್ರಿ ಎಲ್ಲ ಕಲಾಮಯವಾಗಿರಬೇಕೆಂಬ ಕಲಾಪ್ರಿಯತೆ ಆತನ ಹುಟ್ಟುಗುಣ.

ಪ್ರಾರಂಭದ ಜೀವನ ಬಹು ಕಷ್ಟದೆಸೆಯಲ್ಲಿ ಸಾಗಿದರೂ ಅಂತ್ಯಕಾಲದಲ್ಲಿ ಆರೋಗ್ಯದ ಕೊರತೆ ಇದ್ದರೂ ಮಾನ ಮರ್ಯಾದೆಗಳು ಅನೇಕವಾಗಿ ಅವರಿಗೆ ದೊರೆತವು. ದೇಶ ಅವರ ಯೋಗ್ಯತೆ ಕಂಡುಕೊಂಡಿತು. ಡಾಕ್ಕಾ ವಿಶ್ವವಿದ್ಯಾಲಯದವರು ಅವರಿಗೆ ಗೌರವ ಡಾಕ್ಟರೇಟ್ ಸಹ ಕೊಟ್ಟು ಅವರನ್ನು ಗೌರವಿಸಿದರು. ಜನಪ್ರಿಯವಾದ ಬಾಳುವೆ ಮಾಡಿ, ಚಿರಕಾಲ ಬಾಳುವ ಕೃತಿಗಳನ್ನು ಕೊಟ್ಟು ಅವರು ತಮ್ಮ ಜೀವನಯಾತ್ರೆಯನ್ನು ತಮ್ಮ ಅರವತ್ತೆರಡನೆಯ ವಯಸ್ಸಿನಲ್ಲಿ ೧೯೩೮ನೆಯ ಇಸವಿಯಲ್ಲಿ ಮುಗಿಸಿದರು.

ಅವರ ಹತ್ತಾರು ಸಾವಿರ ಪುಟಗಳ ಬರವಣಿಗೆ, ಹತ್ತಾರು ಸಜೀವ ಪಾತ್ರಗಳು ನಮ್ಮ ಮುಂದೆ ರಾರಾಜಿಸುತ್ತಿವೆ. ಬಂಗಾಳದಲ್ಲಿ ಅವರ ಕೃತಿಗಳು ಮನೆಮಾತಾಗಿತ್ತು. ಈಗ ಭಾರತದಾದ್ಯಂತವೆಲ್ಲಾ ಮನೆಮಾತಾಗಿದೆ. ಕೆಲವು ಕೃತಿಗಳು ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳಿಗೆ ಪರಿವರ್ತಿತವಾಗಿ ಅವರ ಪರಿಚಯ ಅನ್ಯದೇಶೀಯರಿಗೂ ಆಗತೊಡಗಿದೆ.

ಶರಚ್ಚಂದ್ರರು ಜನಪ್ರಿಯ ಕಾದಂಬರಿಕಾರರು. ಕಾದಂಬರಿಯ ಕಲೆಗಾರಿಕೆಯನ್ನು, ತಂತ್ರವನ್ನು ಅರಿವುಗೊಂಡಿದ್ದವರು. ಅವರು ನಮ್ಮಿಂದ ದೂರವಾದರೂ ಕಿರಣಮಯಿ, ಸಾವಿತ್ರಿ, ಸುರೇಶ, ಪ್ಯಾರಿ (ರಾಜಲಕ್ಷ್ಮಿ), ಇಂದ್ರನಾಥ, ಮೇರಿ ಭಾರತಿ, ಕಮಲಾ, ಇಂದುಮತಿ, ಜ್ಞಾನದಾ, ಪಾರ್ವತಿ, ದೇವದಾಸ, ಅಚಲಾ, ಸುರೇಶ, ಕಾಶೀನಾಥ, ಅತುಲ, ರಾಮ್ ಮೊದಲಾದ ಜೀವದಿಂದ ತುಂಬಿ ತುಳುಕಾಡುವ ಅನೇಕಾನೇಕ ಪಾತ್ರಗಳು ಶರಚ್ಚಂದ್ರರನ್ನು ವ್ಯವೆತ್ತಿ ರಾರಾಜಿಸುತ್ತಿರುವುದರಿಂದ ಅವರು ದೂರವಾದ ಹಾಗೆ ನಮಗೆ ಅನ್ನಿಸುವುದಿಲ್ಲ.

ಅವರ ಪಾತ್ರರಚನಾ ಕೌಶಲ, ಕಾದಂಬರಿ ತಂತ್ರ, ವಾಸ್ತವತೆಯ ಒಲವು ನನ್ನಲ್ಲಿದ್ದ ಅಲ್ಪ ಚೇತನಕ್ಕೆ ಮಾರ್ಗದರ್ಶಕವಾದವು ಎಂದು ಒಪ್ಪಿಕೊಂಡರೆ ತಪ್ಪೇನಿಲ್ಲ.





ಸರ್ವೋದಯ ಸಮಾಜ
ಅಥವಾ
ಗಾಂಧೀ ಜಾತಿ
[ಒಂದು ವಿವೇಚನೆ]

(ಲೇಖಕ: ಗಣಪತಿ ರಾವ್ ಪಾಂಡೇಶ್ವರ್, ಹುಬ್ಬಳ್ಳಿ.)

ಉದಯವೆಂದರೆ ಬೆಳಕು. ಬೆಳಕು ಜ್ಞಾನದ ಸಂಕೇತವಾಗಿರುವಂತೆ ಕತ್ತಲೆಯು ಅಜ್ಞಾನದ ಚಿಹ್ನೆಯಾಗಿದೆ. ಅಜ್ಞಾನವು ದುಃಖಕ್ಕೆ ಮೂಲ; ದುಃಖವು ನಿರುತ್ಸಾಹಕ್ಕೆ ಮೂಲ; ನಿರುತ್ಸಾಹವು ಸೋಮಾರಿತನಕ್ಕೆ ಮೂಲ; ಸೋಮಾರಿತನವು ಬಡತನಕ್ಕೆ ಮೂಲ; ಬಡತನವು ನಾಶಕ್ಕೆ ಮೂಲ. ಈ ನಾಶದ ಹಾದಿಯಲ್ಲಿ ಧಾವಿಸುತ್ತಿದ್ದ ಹಿಂದುಸ್ತಾನವನ್ನು ಗಾಂಧಿಯವರು ಎಚ್ಚರಿಸಿ, ಜೀವದ ದಾರಿ ಹಿಡಿಸಿದರು. ಅದೇ ಸರ್ವೋದಯ. ಆ ಸರ್ವೋದಯದ ಬೆಳಕಿನಲ್ಲಿ ಜೀವಿಸುವ ವ್ಯಕ್ತಿಗಳ ಸಮುದಾಯ, ಜಾತಿಗಳ ಕೂಟ, ಧರ್ಮದ ಚಕ್ರಗಳೇ "ಸರ್ವೋದಯ ಸಮಾಜ"ವೆನ್ನಬಹುದು.

ಸರ್ವ+ಉದಯ ಎಂದರೆ, ಎಲ್ಲವುಗಳ ಬೆಳಗು ಅಥವಾ ಎಚ್ಚರ. ಇದರಲ್ಲಿ (೧) ಸರ್ವ ಸಮಾಜಗಳ ಉದಯ ಮತ್ತು (೨) ಸಮಾಜದ ಸರ್ವ ವಿಭಾಗಗಳ ಉದಯಗಳು ಅಡಕವಾಗುವುವು. ಈ ಎರಡೂ ಬಗೆಯ ಉದ್ದೇಶವನ್ನು ಸಾಧಿಸುವ ಸಾಧಕರ ಬಳಗಕ್ಕೆ **"ಸರ್ವೋದಯ ಸಮಾಜ"** ಎಂದು ಮಹಾತ್ಮಾ ಗಾಂಧಿಯವರು ಹೆಸರಿಟ್ಟರು. ಹಿಂದೂ, ಮುಸ್ಲಿಂ, ಕ್ರೈಸ್ತ, ಸೀಖ, ಪಾರ್ಸಿ, ಬೌದ್ಧ— ಎಂಬ ಎಲ್ಲ ಧರ್ಮದವರೂ, ಆಯಾ ಧರ್ಮದೊಳಗಿನ—ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಶಿಯ್ಯಾ, ಸುನ್ನಿ, ಕ್ಯಾಥಲಿಕ್, ಪ್ರಾಟೆಸ್ಟೆಂಟ್ ಮೊದಲಾದ ವಿವಿಧ ಸಮಾಜ (ಜಾತಿ)ಗಳವರೂ ಈ "ಸರ್ವೋದಯಸಮಾಜ"ಕ್ಕೆ ಸೇರುತ್ತಲೇ, ತಮ್ಮತಮ್ಮ ವಿಶಿಷ್ಟ ಸಮಾಜಗಳ ಕಟ್ಟುಕಟ್ಟಳೆಗಳನ್ನೆಲ್ಲ ಮರೆತು, ಈ ಸಮಾಜದ ಕಟ್ಟುಕಟ್ಟಳೆಗಳಿಗೆ ಕಾಯಾ, ವಾಚಾ, ಮನಸಾ ಹೊಂದಿಕೊಂಡು ನಡೆಯಬೇಕು. ಹಾಗೆ ನಡೆದಲ್ಲಿ ಮಾತ್ರವೇ ಈ ಸಮಾಜವು ಉಳಿಯಬಹುದು. ಇದರ ಸದಸ್ಯರಲ್ಲಿ ಜಾತಿ ಮತಗಳ ತಾರತಮ್ಯವಿಲ್ಲ, ಮೇಲು ಕೀಳೆಂಬಭಾವನೆಯಿಲ್ಲ; ಎಲ್ಲರೂ ಪರಸ್ಪರ ಸಮಾನಸ್ಕಂಧರಾಗಿ ಸವ್ಯವಹಾರ ಉಳ್ಳವರಾಗಿರುವರು. ಈ ಸಮಾಜವು ಗಾಂಧಿಜೀಯವರಿಂದ ಜಾತವಾದುದರಿಂದ ಇದಕ್ಕೆ **"ಗಾಂಧೀ ಜಾತಿ"** ಎಂದು, ನಮ್ಮ ದೇಶಕ್ಕೆ ರೂಢವಾಗಿರುವ, ಜಾತಿಸೂಚಕ ಶಬ್ದದ ನಾಮಕರಣ ಮಾಡಬಹುದು. ಈ ಜಾತಿಯಿಂದಲೇ ಗಾಂಧೀ ಸ್ಮಾರಕ ಉಳಿಯಬೇಕು—ಇದೇ ಗಾಂಧೀಜೀಯವರ ಬಗ್ಗೆ ಎಂದೆಂದೂ ಅಳಿಯದ ಸ್ಮಾರಕವಾಗುವುದು.

ಸರ್ವ ಸಮಾಜೋದಯ

ಎಲ್ಲ ಸಮಾಜಗಳ ಉದಯವೆಂದೆನಷ್ಟೆ. (೧) ಹಿಂದುಳಿದ ಸಮಾಜಗಳು ತಾವೇಕೆ ಹಿಂದುಳಿದೆವು ಎಂದು ವಿಚಾರಿಸಲು ಎಚ್ಚರಗೊಂಡವು, ಮತ್ತು ಮುಂದೆ ಬರುವ ಮಾರ್ಗ ಹುಡುಕತೊಡಗಿದುವು. (೨) ಹಾಗೆಯೇ, ಮುಂದರಿದವೆಂಬ ಸಮಾಜಗಳು, ಇತರ ಸಮಾಜಗಳು ಏಕೆ ಹಿಂದುಳಿದವೆಂಬುದನ್ನು ವಿಚಾರಿಸತೊಡಗಿದುವು; ಮತ್ತು ಅವುಗಳನ್ನು ಮುಂದೆ ತರುವ ದಾರಿ ಹುಡುಕತೊಡಗಿದುವು; ತಮಗೂ ಹಿಂದುಳಿದ ಸಮಾಜಗಳಿಗೂ ಇರುವ ಅಂತರವನ್ನು ಕಿರಿದುಮಾಡಿಕೊಳ್ಳುವಂತೆ ತಮ್ಮ ಅಹಂಕಾರಮಮಕಾರಾತಿರೇಕತೆಯ ಲೋಪದೋಷಗಳನ್ನು **"ಪಶ್ಚಾತ್ತಾಪ ಬುದ್ಧಿ"**ಯಿಂದ ತಿದ್ದಿಕೊಳ್ಳತೊಡಗಿದುವು. ಇದೇ ಮೇರೆಗೆ, (೩) ಗುಡ್ಡಗಾಡು ಜನರೆಂಬ (Tribal people) ಮೂಲ ನಿವಾಸಿಗಳ ಸಮಾಜಗಳು **"ನಾಗರಿಕ ಸಮಾಜ"**ಗಳನ್ನು ಕಣ್ಣಿಟ್ಟು ನೋಡತೊಡಗಿದುವು; ಆಧುನಿಕ ವಿಜ್ಞಾನ ಮತ್ತು ರಾಜ್ಯಕಾರಣದಲ್ಲಿ ತಾವೂ ತಮ್ಮ ಪಾಲನ್ನು ಪಡೆಯಬೇಕೆಂದು ಎಚ್ಚರಾದುವು; ಮತ್ತು ನಾಗರಿಕರಾಗುವ ಮಾರ್ಗಗಳನ್ನು ಹುಡುಕತೊಡಗಿದುವು; ತಮ್ಮ ಅನಾಗರಿಕ ರೀತಿರೂಢಿಗಳನ್ನು ಬಿಟ್ಟುಬಿಡಲು ನಿರ್ಧರಿ

ಸಿದುವು. ಹಾಗೆಯೇ (೪) ಸ್ಪೃಶ್ಯರು ಮತ್ತು ಅಸ್ಪೃಶ್ಯರು ಎಂಬ ವಿವಿಧ ಸಮಾಜಗಳು ಎಚ್ಚರಾದುವು; ಮಾನವ ಸಮಾಜದಲ್ಲಿ ಹುಟ್ಟಿನಿಂದಲೇ ಮೇಲು ಕೀಳು, ಸ್ಪೃಶ್ಯಾಸ್ಪೃಶ್ಯ ವೆಂಬ ಭೇದವೆಣಿಸುವುದು ಒಂದು ದೊಡ್ಡ ಸಾಮಾಜಿಕ ಕಲಂಕವೆಂದು ತಿಳಿಯತೊಡಗಿದುವು. ಸ್ಪೃಶ್ಯರೆಂಬವರಲ್ಲಿರುವ ಉಚ್ಚ ಗುಣಾದರ್ಶಗಳು ತಮಗೂ ಬೇಕು, ತಮಗೂ ಸಾಧ್ಯ ಮತ್ತು ತಮ್ಮಲ್ಲಿಯೂ ಸ್ವಯಂದತ್ತವಾದ ಕರ್ತವ್ಯಾಧಿಕಾರಗಳುಂಟು—ಎಂದು ಅಸ್ಪೃಶ್ಯರು ಅರಿತುಕೊಂಡರು; ಅದೇ ಮೇರೆಗೆ, ಸ್ಪೃಶ್ಯರೆಂಬ ಸವರ್ಣೀಯರು (ಚಾತುರ್ವರ್ಣ್ಯ) ತಮ್ಮಲ್ಲಿಯೂ ಅಸ್ಪೃಶ್ಯರೆಂಬವರಲ್ಲಿರಬಹುದಾದ ದುರ್ಗುಣ-ದುರಾಚಾರಗಳಿವೆ; ತಮ್ಮ ಕರ್ತವ್ಯಾಧಿಕಾರಗಳು ದೈವದತ್ತವಾದುವಲ್ಲ ಎಂಬ ವಿವೇಕ ಉಳ್ಳವರಾದರು.

ಸ್ತ್ರೀ ಸಮಾನತೆ

ಎಲ್ಲ ಸಮಾಜಗಳೂ ಎಚ್ಚರಗೊಂಡವೆಂದ ಮೇಲೆ, ಆ ಎಲ್ಲ ಸಮಾಜಗಳ ಹೆಂಗಸರೂ ಜಾಗ್ರತರಾದರೆಂದು ಬೇರೆ ಹೇಳಬೇಕಾಗಿಲ್ಲ. ಸ್ತ್ರೀಯರ ಜಾಗ್ರತಿ ಎಂದರೆ, ಹಲವು ಹಳೆಯ ರೂಢಿಗಳ ವಿರುದ್ಧವಾಗಿ ಅವರು ಧೈರ್ಯದಿಂದ ಪುರುಷರೊಡನೆ ಸಮಾನತೆ ಕೇಳುವುದು. ಇದರಲ್ಲಿ (೧) ಪ್ರೌಢವಿವಾಹ, (೨) ವಿಧವಾವಿವಾಹ, (೩) ಏಕಪತ್ನಿತ್ವ, (೪) ಪ್ರೇಮವಿದ್ದಲ್ಲಿ ಮದುವೆಯಾಗುವುದೆಂಬ ಅಂತರ್ಜಾತಿ ವಿವಾಹ, (೫) ಹುಡುಗರಿಗಿರುವಂತೆ ಹುಡುಗಿಯರಿಗೂ ಶಿಕ್ಷಣಸೌಕರ್ಯ, ನೌಕರಿಸೌಕರ್ಯ ಮತ್ತು ವಾರಸಾಹಕ್ಕು ಮೊದಲಾದುವು ಅಡಕಗೊಳ್ಳುವುವು.

ವಿವಿಧ ವೃತ್ತಿಗಳ ಎಚ್ಚರಿಕೆ

ಈ ಎಲ್ಲ ವರ್ಗಗಳಂತೆ, ಎಲ್ಲ ವಿಧದ ವೃತ್ತಿ(ಕಸಬು)ಯವರೂ ಎಚ್ಚರಾದರು. "ಕಾಯಕವೇ ಕೈಲಾಸ" "ಕೋಟಿ ವಿದ್ಯಕ್ಕಿಂತ ಮೇಟಿ ವಿದ್ಯವೆ ಲೇಸು" ಎಂಬ ವಿವೇಕೋದಯವಾಯಿತು. "ಶರೀರಮಾದ್ಯಂ ಖಲುಧರ್ಮಸಾಧನಂ" (ಸರ್ವ ಧರ್ಮಕಾರ್ಯಗಳಿಗೂ ಶಾರೀರಕ ಶುಚಿತ್ವ-ದೃಢತ್ವ ಮೂಲ) ಎಂಬ ಪ್ರಾಚೀನ ಸತ್ಯವನ್ನು ಪುನಃ ಕಾಣತೊಡಗಿದರು. ''Eat well and play foot ball, you will understand Gita better'' (ಒಳ್ಳೆಯ ಊಟ ಉಂಡು ಕಾಲ್ಚೆಂಡಾಡಿದರೆ, ಭಗವದ್ಗೀತೆಯನ್ನು ಇನ್ನಷ್ಟು ಚೆನ್ನಾಗಿ ತಿಳಿವೆ) ಎಂಬುದಾಗಿ ಸ್ವಾಮಿ ವಿವೇಕಾನಂದರು ಸಾರಿರುವುದನ್ನು ಸ್ಮರಿಸಿಕೊಳ್ಳಬೇಕು. ಎಂತಹ ಜ್ಞಾನ-ವಿಜ್ಞಾನ ವಿಶಾರದನಾದರೂ ದಿನಂಪ್ರತಿ ಏನಾದರೊಂದು ಬಗೆಯ ಶರೀರಶ್ರಮದ ಉತ್ಪಾದನಾಕಾರ್ಯಮಾಡಬೇಕೆಂದು ಗಾಂಧಿಯವರು ಉಪದೇಶಿಸಿದರು. ಕಾಯಕ (ಕೆಲಸ) ಮಾಡದೇ ತಿಂಬವನು ಕಳ್ಳನೆಂದೂ, ಪರಶೋಷಕನೆಂದೂ ಅವರು ನಿರ್ಭಯವಾಗಿ ಸಾರಿ, ಧನಮದ, ವಿದ್ಯಾಮದ, ಕುಲಮದಗಳಿಂದ ಕೊಬ್ಬಿದವರನ್ನು ಮೆತ್ತಗೆಮಾಡಿದರು.

"ವ್ರತಸಂಸ್ಕಾರದಿನಾದರ್ ।
ವಿತತಗುಣರ್, ಬ್ರಾಹ್ಮಣರ್, ಕ್ರಿಯಾಸಂ- ॥
ತತಿಯುತರ್, ಉಚಿತ ಸತ್ಕ್ರಿಯಾವಿರ- ।
ಹಿತನಾತಂ ನಾಮಧಾರಕಂ, ದ್ವಿಜನಲ್ಲಂ! ॥

(ಆ. ಪು. ಆ. ೧೨. ಪ. ೩೭)

ಎಂದು ಆದಿಪಂಪನಂದಂತೆ, ಜನ್ಮದಿಂದ ಎಲ್ಲರೂ ಶೂದ್ರರಾಗಿದ್ದು, ಉಚಿತವಾದ ಸಂಸ್ಕಾರದಿಂದಲೂ, ಸದ್ವರ್ತನದಿಂದಲೂ ಬ್ರಾಹ್ಮಣತ್ವವುಳ್ಳವರಾಗುವರೆಂಬುದನ್ನು ಗಾಂಧಿಯವರು ಪುನರುಚ್ಚರಿಸಿದರು. "ನಾನಾ ವ್ರತಯುತರ ನಾರುಮೇಂ ಮನ್ನಿಸರೆ?" ಎಂಬ ಪಂಪನ ಮಾತಿನಂತೆ, ಉದ್ಯೋಗಶೀಲನನ್ನು ಮನ್ನಿಸದವರಾರು? ಎಂದು ಗಾಂಧಿಯವರು ಪ್ರಶ್ನಿಸಿದರು. ಕಾಯಕ(Labour)ವೇ ಸಂಪತ್ತಿನ ಮೂಲವಾದ್ದರಿಂದ, ಕಾಯಕಮಾಡುವವರೇ ಸಂಪತ್ತಿನ ಒಡೆಯರು ಎಂಬುದಾಗಿ ಅವರು, ಪಾಶ್ಚಿಮಾತ್ಯ ಮಾರ್ಕ್ಸನ ಸಂಪತ್ಸೂತ್ರವನ್ನು ನಮ್ಮ ದೇಶದ ಕರ್ಮಯೋಗದ ಪರಿಭಾಷೆಯಲ್ಲಿ ಎರಕಹೊಯ್ದರು. ಇದರ ಫಲವಾಗಿಯೇ ಅವರ ವಿಧಾಯಕ ಕಾರ್ಯಕ್ರಮ (Constructive programme)ವು ರೂಪುಗೊಂಡಿತು.

ಒಕ್ಕಲಿಗರು, ಕಮ್ಮಾರರು, ಬಡಗಿಗಳು, ನೇಕಾರರು, ಜೇಡರು, ಕುಂಬಾರರು, ಗೌಂಡಿ(ಮಣ್ಣಿನ ಕೆಲಸ)ಗಳು, ಕಲ್ಲುಕುಟಿಕರು, ಚರ್ಮಕಾರರು—ಮೊದಲಾದ ಬಗೆಬಗೆಯ ಕಸಬಿನ 'ಕಾಯಕ'ದವರೂ ಎಚ್ಚೆತ್ತರು. ಬುದ್ಧಿಜೀವಿಗಳಿಗಿರುವಷ್ಟೇ ಸ್ವಾಭಿಮಾನ—ಸ್ವದೇಶಾಭಿಮಾನಗಳು ತಮಗೂ ಇವೆ ಎಂದು ಅವರು ಧೈರ್ಯತಾಳಿದರು. ಜನಾಂಗದ ಭೌತಿಕ ಜೀವನ ಪ್ರಗತಿಗಳಿಗೆ ತಾವೇ ಆಧಾರಸ್ತಂಭರೆಂದು ಅವರು ತಿಳಿದುಕೊಳ್ಳತೊಡಗಿದರು. ರಾಷ್ಟ್ರದ ರಾಜ್ಯಕಾರಣ ಮತ್ತು ಸರಕಾರದ ರಚನೆಯಲ್ಲಿ ತಮ್ಮ ಹಕ್ಕುಹೊಣೆಗಳಿಗೇ ಹೆಚ್ಚು ಮಹತ್ವ ಕೊಡಲ್ಪಡಬೇಕೆಂದೂ, ತಮ್ಮ ಒಲವು ನಿಲವುಗಳಿಗನುಗುಣವಾಗಿ ರಚಿತವಾಗದ ಸರಕಾರವು ನಿಜವಾದ ಪ್ರಜಾಸತ್ತೆಯ ಸರಕಾರವಾಗಲಾರದೆಂದೂ ಅವರು ಹಟಹಿಡಿಯತೊಡಗಿದರು.

ಸ್ವಾವಲಂಬನ—ಸ್ವದೇಶೀ

ಹೀಗೆ ಸರ್ವ ಸಮಾಜಗಳೂ, ಸರ್ವ ವೃತ್ತಿಯವರೂ ಎಚ್ಚೆತ್ತಂತೆ, ಸಮಾಜದ ಸರ್ವ ವಿಭಾಗಗಳಲ್ಲಿಯೂ ಎಚ್ಚರಿಕೆ ಉಂಟಾಯಿತು. ಅದರ ಫಲವಾಗಿ, (೧) ಆರ್ಥಿಕ ಸ್ವಾವಲಂಬನ, ತದಂತರ್ಗತವಾಗಿ, (೨) ಆಹಾರ ಸ್ವಾವಲಂಬನ, (೩) ವಸ್ತ್ರಸ್ವಾವಲಂಬನ, (೪) ಜ್ಞಾನಸ್ವಾವಲಂಬನ ಎಂಬೀ ಚತುರ್ವಿಧ ಸ್ವಾವಲಂಬನಗಳು ತಲೆದೋರಿದುವು. ಈ ಸ್ವಾವ

ಲಂಬನದಿಂದ (೧) ರಾಷ್ಟ್ರೀಯತೆ ಮತ್ತು (೨) ಪ್ರಾಂತೀಯತೆ-ಪ್ರಾದೇಶಿಕತೆಗಳು ಕಲ್ಪಿತವಾದುವು. ಪ್ರತಿಯೊಂದು ಪ್ರಾಂತ್ಯವೂ, ಪ್ರದೇಶವೂ ತನ್ನ ಆಹಾರ ಪೂರೈಕೆ. ವಸ್ತ್ರ ಪೂರೈಕೆ, ಛಂಡವಳ ಪೂರೈಕೆ ಮತ್ತು ಶಿಕ್ಷಣ ಪೂರೈಕೆಗಳನ್ನು ಪರರ ನೆರವಿಲ್ಲದೆ, **ತಾನೇ ಪೂರೈಸಿಕೊಳ್ಳತಕ್ಕದ್ದು** ಎಂಬ ವ್ರತ ನಿಯಮವು ಹುಟ್ಟಿತು. ಅದೇ ಪ್ರಕಾರ, ಹಿಂದುಸ್ತಾನದ ಬೇಡಿಕೆಗಳೆಲ್ಲ ಹಿಂದುಸ್ತಾನದಲ್ಲಿಯೇ, ಹಿಂದುಸ್ತಾನದಿಂದಲೇ ಪೂರೈಸಲ್ಪಡತಕ್ಕದ್ದೆಂಬ **"ಸ್ವದೇಶೀ ವ್ರತ"**ವು ಜನ್ಮತಾಳಿತು. ಪ್ರತಿಯೊಂದು ಪ್ರಾಂತ್ಯವೂ, ಪ್ರತಿಯೊಂದು ಪ್ರದೇಶವೂ ವಿಪುಲವಾದ ಪ್ರಾಕೃತಿಕ ಸಂಪತ್ತುಳ್ಳುದಾಗಿದೆ. ಧನಬಲ ಜನಬಲ ಉಳ್ಳುದಾಗಿದೆ, ಕುಶಲ ಕಲಾವಾಣಿಜ್ಯ ಕರ್ಮಗಳ ಪರಂಪರೆಯುಳ್ಳುದಾಗಿದೆ; ಹಾಗೆಯೇ ಆಯಾ ಪ್ರಾಂತಿಕ ಇಲ್ಲವೆ ಪ್ರಾದೇಶಿಕ (ಸಾಮಾಜಿಕ) ಭಾಷೆಯ ಮೂಲಕವಾಗಿಯೇ ಸರ್ವ ಶಿಕ್ಷಣವನ್ನೂ ಪಡೆಯಲನುಕೂಲವಾದ ಇತಿಹಾಸ, ಭಾಷಾ-ಸಾಹಿತ್ಯ ಸಂಸ್ಕೃತಿಗಳುಳ್ಳುದಾಗಿದೆ.

ದಾಸ್ಯದ ತಡೆ

ಈ ಸ್ವದೇಶೀವ್ರತವು ನಿರಾತಂಕವಾಗಿ ಆಚರಿಸಲ್ಪಡುವಂತೆ, ಪರದಾಸ್ಯ(ರಾಜ್ಯಕೀಯ ಗುಲಾಮಗಿರಿ)ವೆಂಬ ತಡೆಯು ಇರಬಾರದೆಂಬ ಜ್ಞಾನ ಉಂಟಾಯಿತು. ಗಾಂಧಿಯವರ ನಿರಂತರ ಪರಿಶ್ರಮದ ಫಲವಾಗಿ, ಪರದಾಸ್ಯವನ್ನು ಕಿತ್ತೊಗೆಯುವ ಬಗ್ಗೆ ದೇಶದ ಉದ್ದಗಲಕ್ಕೂ ಸ್ವರಾಜ್ಯಾಭಿಲಾಷೆಯು ಹಬ್ಬಿತು. ಇದರ ಪರಿಣಾಮವಾಗಿ, (ಕಾಯಕವಾಗಿ) ಪ್ರತ್ಯಕ್ಷಾಪ್ರತ್ಯಕ್ಷ ಚಳವಳಿಗಳು ಹೂಡಲ್ಪಟ್ಟವು. **ಸರ್ವೋದಯ**ದಲ್ಲಿ ನಂಬಿಗೆಯುಳ್ಳವರೆಲ್ಲರೂ ಈ ಕಾಯಕವನ್ನು ಕೈಕೊಂಡರು. (೧) ಸವಿನಯ ಕಾಯಿದೇಭಂಗ, (೨) ಸತ್ಯಾಗ್ರಹಗಳೇ ಈ ಕಾಯಕದ ಎರಡು ತೋಳುಗಳಾದುವು. ವಿನಯದಿಂದಲೇ ಕಾಯಿದೆಯನ್ನು ಉಲ್ಲಂಘಿಸುವುದು, ವಿನಯದಿಂದಲೇ ಹಳೆಯ ರೂಢಿ ಸಂಪ್ರದಾಯಗಳನ್ನು ಮೀರುವುದು ಅರ್ಥಾತ್ ಪ್ರೀತಿಯಿಂದ ದ್ವೇಷವನ್ನೂ, ಅಹಿಂಸೆಯಿಂದ ಹಿಂಸೆಯನ್ನೂ (ಬಲಾತ್ಕಾರವನ್ನೂ) ಇದಿರಿಸುವುದು. ಇದೇ ಗಾಂಧಿಯವರು ಕಟ್ಟಿದ ಸರ್ವೋದಯ ಸಮಾಜದ ಜೀವಜ್ಯೋತಿ.

ವಿನಯ – ಅಹಿಂಸೆ

ಈ ಜೀವಾಳವಿಲ್ಲದ ಸರ್ವೋದಯವು ಗ್ಯಾಸ್‌ದೀಪದ ಉದಯವೇ ಹೊರತು ನಿಜವಾದ ಉದಯವಲ್ಲ; ನೈಸರ್ಗಿಕ ಪರಿಮಳವಿಲ್ಲದ ಕಾಗದದ ಹೂವೇ ಸರಿ. ವಿನಯವೆಂದರೆ ನಿರಹಂಕಾರ ಭಾವ. ನಿರಹಂಕಾರವು ನಿರಭಿಮಾನವಲ್ಲ. ನಿರಹಂಕಾರಕ್ಕೂ ನಿರಭಿಮಾನಕ್ಕೂ ವ್ಯತ್ಯಾಸವಿದೆ ಎಂಬುದನ್ನು ಮರೆಯಬಾರದು. ಅಭಿಮಾನವಿಲ್ಲದೇ ಹೋದರೆ "ಸ್ವ" (ನನ್ನ ಧರ್ಮ, ನನ್ನ ಜನ, ನನ್ನ ದೇಶ) ಎಂಬುದು ತಲೆದೋರದು; ನಿರಭಿಮಾನವು ನಿಷ್ಕ್ರಿಯತೆಗೂ ಕಾರಣವಾಗುವುದು. ಆದ್ದರಿಂದ ನಿಜವಾದ ವಿನಯದಲ್ಲಿ ಸ್ವ-ಅಭಿಮಾನ (ಸದಭಿಮಾನ, ದುರಭಿಮಾನವಲ್ಲ)ವು ಅರಳಿದ ಪುಷ್ಪದೊಳಗಿನ ಮನೋಜ್ಞವಾದ ಮಕರಂದದಂತೆ ಇರುವುದೇ ಆ ಹೂವಿನ ನೈಸರ್ಗಿಕತೆಯ ಚಿಹ್ನೆಯಾಗಿದೆ.

ಒಳಹೊರಗಿನ ಸ್ವಚ್ಛತೆ

ಬೆಳಕಿದ್ದಲ್ಲಿ ಕತ್ತಲೆ ಇಲ್ಲ; ಸ್ವಚ್ಛತೆ ಇದ್ದಲ್ಲಿ ರೋಗವಿಲ್ಲ. ಅದೇ ಮೇರೆಗೆ, ಪ್ರೇಮವಿದ್ದಲ್ಲಿ ಭಯವಿಲ್ಲ; ವಿನಯವಿದ್ದಲ್ಲಿ ಅಹಂಭಾವವಿಲ್ಲ; ಜ್ಞಾನವಿದ್ದಲ್ಲಿ ಅಸೂಯೆ ಇಲ್ಲ, ದ್ವೇಷವಿಲ್ಲ. ಈ ಸತ್ಯಸೂತ್ರಗಳನ್ನು ಆಚರಿಸುತ್ತ ನಡೆಯುವವರೇ ಸರ್ವೋದಯ ಸಮಾಜದ ಆಧಾರ ಸ್ತಂಭಗಳು. ಮಿಂಚು ಮಿಂಚಿದಂತೆ ಕ್ಷಣಕಾಲ ಮಾತ್ರವೇ ವಿವೇಕೋದಯವಾದರೆ ಸಾಲದು; ಜೀವನದ ಪ್ರತಿ ನಿಮಿಷವೂ ಈ ಮಿಂಚಿನ ಬೆಳಕಿನಲ್ಲಿ ನಡೆಯುತ್ತಿರಬೇಕು. ಇದೊಂದು ಕತ್ತಿಯ ಬಾಯಮೇಲೆ ನಡೆಯುವಷ್ಟು ಕಠಿನವಾದ ಕೆಲಸ. ಇದೇ ಈ ಸಮಾಜದ ಸದಸ್ಯರಲ್ಲಿರಬೇಕಾದ ಮುಖ್ಯ ಅರ್ಹತೆಯಾಗಿದೆ. ಇದನ್ನು ಗಳಿಸಲು ವ್ಯಕ್ತಿತ್ವದ ವಿಸರ್ಜನೆಯೇ ತಳಹದಿ. ಏಕಾತ್ಮವು ವಿಶ್ವಾತ್ಮವಾಗುವುದೇ ವ್ಯಕ್ತಿತ್ವದ ವಿಸರ್ಜನೆಯಾಗುವುದು. ಎಲ್ಲರ ಸುಖ ನನ್ನ ಸುಖ, ಎಲ್ಲರ ಕೀರ್ತಿ ನನ್ನ ಕೀರ್ತಿ, ಎಲ್ಲರ ಅಧಿಕಾರ ನನ್ನ ಅಧಿಕಾರ ಎಂಬ ವಿಶಾಲ ಭಾವದ ಆದರ್ಶ ವ್ಯಕ್ತಿತ್ವದ ವಿಕಾಸವಾಗಬೇಕು. ನಾನು, ನನ್ನದು ಎಂಬುದನ್ನು ಸಮಾಜ, ಸಮಾಜದ್ದು ಎಂದು ರೂಪಾಂತರಿಸಬೇಕು. ಅದೇ ಆತ್ಮಯಜ್ಞ, ಅದೇ ಅಮೃತತ್ವ; ಅದೇ ಸರ್ವದರಲ್ಲಿಯೂ ವ್ಯಕ್ತವಾಗಿರುವ ಅವ್ಯಕ್ತತ್ವ. ಅದಕ್ಕೆಂದಿಗೂ ಸಾವಿಲ್ಲ. ಆತ್ಮದ ಅಮರತ್ವವನ್ನು ಸಾರಿದ ಪ್ರಾಚೀನ ಧೀರರ ಸನಾತನ ಧರ್ಮವೇ ಅದು. ಆ ಧರ್ಮವಿಂದು (೧) ಸ್ವಾರ್ಥಿಗಳ, (೨) ದುರಹಂಕಾರಿಗಳ ಮತ್ತು (೩) ಭೌತಿಕ ಸುಖಸಂಪದಧಿಕಾರಗಳ ಉಪಾಸಕರಿಂದ ಯಾತನೆಗೊಳಗಾಗಿದೆ. ಸನಾತನವು ನಿತ್ಯವಾದದ್ದು, ನಿರಾಪದವಾದದ್ದು. ಆ ದಿವ್ಯ ಧರ್ಮದ ಸೋಗಿ(ವೇಷ)ನಿಂದ, ಕೇವಲ ಲೌಕಿಕರಾಗಿ ಮೆರೆಯುವವರ ದುಷ್ಕಾಮನೆಯಿಂದ ಭಾರತೀಯ ಸಮಾಜವು ಅಧೋಗತಿಗೆ ತಳ್ಳಲ್ಪಟ್ಟಿತು. ಗಾಂಧಿಯವರು ಈ ಅಧೋಮುಖ ಜಾರಿಕೆ (Downward drift)ಗೆ ತಡೆ (Brake) ಹಾಕಿ ನಿಲ್ಲಿಸಿದರು; ಸೋಗನ್ನು ಬಿಟ್ಟುಕೊಟ್ಟು, ಪ್ರಾಚೀನ ಸತ್ಯಧರ್ಮದ ಉಪಾಸನೆಯನ್ನು ಪುನರಾರಂಭಿಸಿರೆಂದು ಎಚ್ಚರಿಸಿದರು. ಈ ಎಚ್ಚರಿಕೆಯನ್ನು ದುರ್ಲಕ್ಷಿಸಿದಲ್ಲಿ ನಾಶವು ಅನಿವಾರ್ಯವಾಗುವುದು.

"ಚಿತ್ತಶುದ್ಧಿಯ ಬಯಸಿ, ಇಂದ್ರಿಯಂಗಳ ಜಯಿಸಿ ।
ದ್ವೇಷಮಂ ತ್ಯಜಿಸಿ, ರೋಷವ ವರ್ಜಿಸಿ ॥

ಆರ್ಯ ಸಂಸ್ಕೃತಿಗೆ ಮೊದಲಿದ್ದ ಕನ್ನಡಿಗರ ನಾಗರೀಕತೆ

(ಲೇಖಕಿ: ಶ್ರೀಮತಿ ಎಸ್. ರತ್ನಮ್ಮ, ಎಮ್. ಎ., ನಂಜನಗೂಡು.)

ಪಡೆದ ತಾಯಿಗಿಂತ ನುಡಿವ ತಾಯ್ನುಡಿಯಲ್ಲಿ ಕಲಿತವನಿಗೆಮಮತೆ ಬಹಳ! ಮನುಷ್ಯನ ಮನಸ್ಸುಬೆಳೆದಂತೆ ಅವನಾಡುವ ಭಾಷೆಯೂ ಬೆಳೆಯುವುದು. ಅತ್ಯಾಧುನಿಕ ವೈಜ್ಞಾನಿಕ ಪ್ರಪಂಚದಲ್ಲಿಯೂ ಇಂದು ಫಾಸಿಲ್ಸ್‌ಗಳ ಮೂಲಕ ಪ್ರಪ್ರಾಚೀನ ಜೀವಿಗಳ ವ್ಯಕ್ತಿತ್ವವನ್ನು ಸಾಧಿಸುವಂತೆ ಭಾಷೆಯ ಮೂಲಪದಗಳಿಂದ ಮೂಲ ಜನಾಂಗದ ನಾಗರೀಕತೆಯನ್ನರಿಯಬಹುದು. ಮಂತ್ರಪೂರಿತ ಭೂತಗನ್ನಡಿಯಲ್ಲಿ ನೋಡಿ ಮಾಯಗಾರನು ಭೂತ ಭವಿಷ್ಯತ್ ವರ್ತಮಾನಗಳನ್ನು ತಿಳಿಸುವಂತೆ ಭಾಷಾಶಾಸ್ತ್ರಜ್ಞ ನುಡಿಗನ್ನಡಿಯಲ್ಲಿಣಿಕಿ ನೋಡಿ ಪ್ರಾಚೀನ ವೈಭವವನ್ನು ಹೊರಗೆಳೆದು ಪ್ರದರ್ಶಿಸಬಲ್ಲ.

ಫಾದರ್ ಹೀರಾಸ್, ಡಾ. ಹಾಲ್ ಮುಂತಾದವರ ಅಭಿಪ್ರಾಯವನ್ನು ಮನ್ನಿಸಿದಲ್ಲಿ ಮಾನವ ಸಂಸ್ಕೃತಿ ತೊಟ್ಟಿಲು ತೂಗಿದ್ದು ಭರತ ಖಂಡದಲ್ಲಿ; ಮುಖ್ಯವಾಗಿ ಆ ಮಲಯಾಚಲ ಹಿಮಗಿರಿಗಳ ನಡುವಿನ ವೆಂಗಿಮಂಡಲದಲ್ಲಿ ದ್ರಾವಿಡ ಮೂಲ ಮಾನವನು ವನಭವನದಲ್ಲಿ ಅರಮನೆಯನ್ನು ಕಟ್ಟಿ ನುಡಿದೇವಿಯನ್ನು ಹೃದಯ ಸಿಂಹಾಸನದಲ್ಲಿಟ್ಟು ಪೂಜಿಸಿದಂದು! ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದಿನ ದ್ರಾವಿಡ ನಾಗರೀಕತೆಗೆ ಹರಪ್ಪ ಮೊಹಂಜೊದಾರೊಗಳೇ ಸಾಕ್ಷಿ. ಗ್ರೀಕ್ ನಾಟಕಗಳಲ್ಲಿ, ಎರಡು ಸಾವಿರ ವರ್ಷಗಳ ಹಿಂದಿನ ಬೈಬಲ್ಲಿನಲ್ಲಿ ಕನ್ನಡ ಮಾತುಗಳಿವೆ. ತುಂಬಿ ತುಳುಕುತ್ತಿದ್ದ ಈ ದ್ರಾವಿಡ ಸಂಸ್ಕೃತಿ ಸರೋವರದ ಮೇಲೆ ಆರ್ಯ ಸಂಪರ್ಕದ

ಸ್ವಾತ್ಮ ಶಿಕ್ಷಣವೇ ಸ್ವರಾಜ್ಯವೆನ್ನುತ ವಚಿಸಿ ।
ಲೋಕಕೆಲ್ಲಕು ಪೂಜ್ಯನೆನಿಸಿದನು ಗಾಂಧಿ ॥

(ಡಿ. ವಿ. ಜಿ.)

ಗಾಂಧಿಯವರು ಕಂಡ ಸ್ವರಾಜ್ಯದ ಸುಂದರ ಸ್ವಪ್ನಕ್ಕೆ ಸ್ವಾತ್ಮ ಶಿಕ್ಷಣವೂ, ದ್ವೇಷಾಸೂಯೆಗಳ ವರ್ಜ್ಯವೂ ಮೂಲ ದ್ರವ್ಯಗಳಾಗಿವೆ. "ಚಿನ್ನ ಬೆಳ್ಳಿಗಳು ನನ್ನಲ್ಲಿಲ್ಲ; ನಾನೇ ಬೆಳಕು, ನಾನೇ ಜ್ಞಾನ"—ಎಂಬ ಯೇಸು ಕ್ರಿಸ್ತನ ವಾಣಿಯನ್ನು ಗಾಂಧಿಯವರು ಮರುಚ್ಚರಿಸಿದರು. ಅವರ ಶಿಷ್ಯರು, ಶಿಷ್ಯಾನುಶಿಷ್ಯರು ಚಿನ್ನಬೆಳ್ಳಿಯ ರಾಶಿಯೊಡ್ಡಿಕೊಂಡು, ಎಲ್ಲರ ಮೇಲೂ, ಎಲ್ಲದರ ಮೇಲೂ ಅಧಿಕಾರ ನಡೆಸುವ ರಾಕ್ಷಸೀ ಆಕಾಂಕ್ಷೆಯುಳ್ಳವರಾಗಬಾರದು. "ಯಸ್ಯಾಸ್ತಿ ವಿತ್ತಂ ಸ ನರಃ ಕುಲೀನಃ । ಸ ಪಂಡಿತಃ ಸ ಶ್ರುತವಾನ್ ಬಹುಜ್ಞಃ ॥ (ಯಾವನಲ್ಲಿ ಆಸ್ತಿದ್ರವ್ಯಗಳಿವೆಯೋ ಅವನೇ ಕುಲೀನ, ಅವನೇ ಪಂಡಿತ, ಅವನೇ ತತ್ವವಿದ) ಎಂಬ ಲೌಕಿಕ ಸಿದ್ಧಾಂತಕ್ಕೆ ಗಾಂಧಿ ಶಿಷ್ಯರಾರೂ ತಲೆಬಾಗಕೂಡದು. ಜ್ಞಾನ, ಗುಣ, ಕ್ರಿಯೆಗಳು ಎಲ್ಲಿದ್ದರೂ, ಯಾರಲ್ಲಿದ್ದರೂ ಗೌರವಾರ್ಹಗಳೇ ಎಂದು ತಿಳಿಯಬೇಕು. ಇದಕ್ಕಿಂತ ದೊಡ್ಡ ಗಾಂಧೀ ಸ್ಮಾರಕವಿಲ್ಲ. ಈ ತತ್ವದ ಉಪಾಸಕರೇ ಸರ್ವೋದಯ ಸಮಾಜದ ಸದಸ್ಯರಾಗಬೇಕು. ಹಾಗಿಲ್ಲದವರು ಠಕ್ಕರು, ಅಧಿಕಾರೇಚ್ಛುಗಳಾದ ರಾವಣ ಸನ್ಯಾಸಿಗಳು. ಆದರೆ ಅಂತಹವರ ಅಧಿಕಾರವೇ ಅವರ ಕುತ್ತಿಗೆಗೆ ಪಾಶವಾಗುವುದು. ಗೋಮುಖ ವ್ಯಾಘ್ರವಾಗಿ, ಕುರಿಯ ವೇಷದ ತೋಳವಾಗಿ, ಸನ್ಯಾಸಿವೇಷದ ರಕ್ಕಸನಾಗಿ ಸೀತಾದೇವಿಯನ್ನು ಅಪಹರಿಸಿದ ರಾವಣನಿಗೆ, ಆಕೆಯೇ ಮೃತ್ಯುದೇವತೆಯಾದಳಲ್ಲವೆ? ಪೂರ್ಣ ಸ್ವರಾಜ್ಯವು ಉದಿಸಿ ಮೂರು ವರ್ಷಗಳಾಗುತ್ತ ಬಂದಿದೆ. ಮಹಾತ್ಮರು ಸ್ಥಾಪಿಸಿಹೋದ ಸರ್ವೋದಯ ಸಮಾಜವಿಂದು ದುರ್ಬಲವಾಗಿದೆ, ನಿಸ್ತೇಜವಾಗಿದೆ. ಆಸ್ತಿದ್ರವ್ಯಾಧಿಕಾರಲಂಪಟರ ಪ್ರಾಬಲ್ಯವು ಬೆಳೆದು, ಅಧಿಕಾರದಲ್ಲಿರುವವರೇ ನ್ಯಾಯವಂತರು (Might is right), ಹಣದ ಬೆಂಬಲದಿಂದ ಮೆರೆದಾಡುತ್ತಿರುವ ತಾವು ಮಾತ್ರವೇ ಮೆರೆಯಲರ್ಹರು (Survival of the fittest—survival of the monied) ಎಂಬೀ ಬಗೆಯ ಆಸುರೀ ಭಾವವೃತ್ತಿಗಳಿಗೆ ಇಂದು ಉತ್ತೇಜನ ಬಹಳವಾಗಿದೆ. ಅಹಿಂಸೆ, ಸತ್ಯ, ಆಸ್ತೇಯವೇ ಮೊದಲಾದ ಬ್ರಾಹ್ಮಣೋಕ್ತ ಸದಾದರ್ಶ ಲಕ್ಷಣಗಳನ್ನು ಗಾಂಧಿಯವರು ಸತ್ಯಾಗ್ರಹಿಯ ಲಕ್ಷಣಗಳಾಗಿಯೂ ಸಾರಿದರು. ಈ ಲಕ್ಷಣಾನ್ವಿತರೇ ನಮ್ಮ ಪಂಪನು ಸಾರಿದ "ವ್ರತಸಂಸ್ಕಾರ"ಗಳನ್ನುಳ್ಳ "ನಾನಾ ವ್ರತಯುತರ್". ಅಂತಹರನ್ನು "ಆರುಮೇಂ ಮನ್ನಿಸರೆ?" ಈ ವ್ರತನಿಷ್ಠ **ಸರ್ವೋದಯಿಗ**ಳಿಂದಲೇ ಸಾಮಾಜಿಕ ಪುನರುದ್ಧಾರ, ನಿಜವಾದ ಜಾತೀಯ ಐಕ್ಯ, ಸರ್ವಸಮತ್ವದ ಭ್ರಾತೃಭಾವಗಳು ಹಬ್ಬಬೇಕು. **ಈ ಗಾಂಧಿ ಜಾತಿ** ಬಲಿಷ್ಠಮಾಡುವುದಲ್ಲಿಯೇ ಗಾಂಧಿ ಸ್ಮಾರಕವಿದೆ.

ಬಿರುಗಾಳಿ ಬೀಸಿತು. ಇಂದು ಮುಸಲ್ಮಾನರು ಹೆಜ್ಜೆ ಹೆಜ್ಜೆಗೆ ಹಿಂದುಗಳ ರಕ್ತವನ್ನು ಚೆಲ್ಲಿ ಪಾಕಿಸ್ಥಾನವನ್ನು ಪಡೆದಂತೆ ಹಿಂದೆ ಆರ್ಯರು ದ್ರಾವಿಡರೊಂದಿಗೆ ಹೋರಾಡಿ ಕುಡಿಯೂ ಉಳಿಯದಂತೆ ಚಿವಟಿ, ಸಮಸ್ತ ಸಂಸ್ಕೃತಿಯನ್ನೂ ಭೂಗತ ಮಾಡಿ ಆ ದ್ರಾವಿಡ ಸಮಾಧಿಯ ಮೇಲೆ ಆರ್ಯಾವರ್ತ ಮಹಾ ಮಂದಿರವನ್ನು ಕಟ್ಟಿದರು. ವಿಂಧ್ಯ ಪರ್ವತವನ್ನು ದಾಟಿದಕ್ಷಿಣಾ ಪಥಕ್ಕೆ ಕಾಲಿಟ್ಟಾಗ ದ್ರಾವಿಡ ಸಂಸ್ಕೃತಿ ಮಂಟಪ ಸ್ಥಿರವಾಗಿದ್ದುದರಿಂದ, ತಮ್ಮ ಧ್ವಜವನ್ನು ಊರಲಾರದೆ, ಆರ್ಯ ವಿದ್ವಾಂಸರು ವ್ಯಾಪಾರಕ್ಕಾಗಿ ಬಂದ ಪಾಶ್ಚಿಮಾತ್ಯರಂತೆ ಕುಟಿಲ ಬುದ್ಧಿಯಿಂದ ಸ್ನೇಹಹಸ್ತವನ್ನು ನೀಡಿ ಒಟ್ಟು ದ್ರಾವಿಡ ಕುಟುಂಬದಲ್ಲಿ ಐದು ಭಾಗಮಾಡಿ ಭಾಷೆಯನ್ನೊಡೆದು, ನಾಡನ್ನು ಛಿದ್ರಿಸಿ, ಸೋದರರನ್ನಗಲಿಸಿ, ಆ ಕಾದಾಟದಲ್ಲಿ ಸಂಸ್ಕೃತಿಯನ್ನು ನಾಶಪಡಿಸಿ ತಾವೇ ಗೃಹಾಧಿಪತಿಗಳಾದರು. ವಂಶಪಾರಂಪರ್ಯವಾಗಿ ಆರ್ಯ ಸಂಸ್ಕೃತಿಯ ದಾಸರಾಗಿದ್ದ ಕನ್ನಡಿಗ ವಿದ್ವಾಂಸರೂ ನಾಗವರ್ಮ ಕೇಶಿರಾಜ, ಭಟ್ಟಾಕಳಂಕ ಇತ್ಯಾದಿ ಸುಮಾರು ಹತ್ತು-ಹನ್ನೆರಡನೆಯ ಶತಮಾನದ ಹೊತ್ತಿಗೆ ತಮ್ಮ ನುಡಿಯ ಹಿರಿತನವನ್ನು ಮರೆತು ಸಂಸ್ಕೃತವೇ ಕನ್ನಡದ ಜನನಿಯೆಂದು ಪ್ರಮಾಣ ತೊಡಗಿದರು. ಮೊದಲಿಂದಲೂ ಬೇರೆಯಾಗಿದ್ದು ಸಂಸ್ಕೃತವನ್ನೆದುರಿಸಿ ತನ್ನತನವನ್ನು ಮೆರೆದ ತಮಿಳು ತಾನೆ ಮೂಲ ದ್ರಾವಿಡವೆಂದು ಇಂದು ಮೇಲೆದ್ದು ತನ್ನ ಬಾವುಟವನ್ನು ಹಿಡಿದಿದೆ. ಹೀಗಾಗಿ ಕನ್ನಡ ಪ್ರಾಚೀನತೆಯ ಕೂರಸಿ ನವಿರಿನಿಂ ತೂಗುತಿದೆ. ಆದರೂ ಇಂದು ಕನ್ನಡ ಭಾಷೆಯ ಮೂಲ ಶಬ್ದಗಳಿಂದ ಪ್ರಾಚೀನ ವೈಭವವನ್ನು ತೋರಿಸಬಹುದು.

ತಮಿಳಿಗಿಂತ ಕನ್ನಡ ಪ್ರಾಚೀನತಮವೆಂದು ತಮಿಳು ಪಂಡಿತರೇ ಒಪ್ಪಿ ಚರ್ಚೆ ನಡೆಸಿದ್ದಾರೆ. ("ನಾಡೋಜ ಪಂಪ" ವನ್ನೋದಿ) ಸ್ಟೆನ್‌ಕೊನೊ, ಗ್ರಿಯರ್‌ಸನ್ ಮುಂತಾದ ಪಾಶ್ಚಿಮಾತ್ಯ ವಿದ್ವಾಂಸರೂ J. A. D. S. ಮುಂತಾದ ಸಂಸ್ಥೆಗಳೂ ಕನ್ನಡದ ಸ್ವತಂತ್ರ ವ್ಯಕ್ತಿತ್ವವನ್ನೊಪ್ಪಿದ್ದಾರೆ. ಆದರೂ ಇಂದು ಕನ್ನಡ ನುಡಿ ಹರಿದು ಹಂಚಿದೆ. "ಮಲ್ಲಂ, ತೋರಣ" ಮುಂತಾದ ೨೧ ಪದಗಳು ಅಚ್ಚಕನ್ನಡಕ್ಕೆ ಸೇರಿದ್ದರೂ ತತ್ಸಮವಾಗಿ ಸಂಸ್ಕೃತ ಭಾಷೆಯ ದೀರ್ಘ ಬಾಹುವಿನಲ್ಲಿ ಅಡಕವಾಗಿವೆ. ಕೋನ್, ಕೋವಿಲ್, ಮಾಸ್ ಮುಂತಾದ ಪದಗಳು, ಱ, ೞ ಮುಂತಾದ ಧ್ವನಿಗಳು ಮೂಲ ದ್ರಾವಿಡ ಜನನಿಯ ಆಸ್ತಿ. ಆ ಆಸ್ತಿಯಲ್ಲಿ ಕನ್ನಡಾಂಗಿಗೆ ಪಾಲಿದ್ದರೂ ತಮಿಳ್ ತಾಯಿ ಆ ಪದಗಳು ತನ್ನದೆಂದು ತನ್ನ ಶಾಸ್ತ್ರಗ್ರಂಥಗಳಲ್ಲಿ ಆ ಪದಗಳು ಮೊದಲು ಸಿಕ್ಕಿವೆಯೆಂದು ಕಿತ್ತುಕೊಂಡಿದ್ದಾಳೆ. ಎಷ್ಟು ಪದಗಳನ್ನು ಕಿತ್ತುಕೊಂಡರೂ ಕನ್ನಡ ನುಡಿ ಜೇನಹಲ್ಲೆಯುಂತೆ. ಸಂಶೋಧನೆಯ ಸೆಕೆ ತಗುಲಿದಂತೆಲ್ಲ ಸಂಸ್ಕೃತಿ ಹನಿ ತೊಟ್ಟಿಡುತ್ತದೆ."

"ಮಾನವ ಜಾತಿಯ ಜೀವಾಳಾ ಭಾಷಾದೇವಿಯೊಳಿಲ್ಲೇನು?
ಉನ್ನತ ಸಂಸ್ಕೃತಿಯೊಳ ಬೆಳಕು ಕನ್ನಡ ತಾಯಿಗೆ ಇಲ್ಲೇನು?"

ಇದಕ್ಕೆ ಉತ್ತರ

"ಜೀವಕೆ ಜೀವವ ಬೆರಸುತಿಹ
ಭಾವದ ಬೆಳಕನು ತೋರುತಿಹ
ಸಾವಿಲ್ಲದೊಲವನುಣಿಸುತಿಹ
ತನ್ನಯ ಭಾಷೆಯೆ ತನಗಲ್ಲೆ!"

ಭಾಷೆಯ ಮೂಲ ಪದಗಳಿಂದ ಪ್ರಾಚೀನ ಸಂಸ್ಕೃತಿಯನ್ನು ಕಲ್ಪಿಸುವುದೆಂದರೆ ತುಂಬುನೆರೆ ಬಂದು ಪ್ರವಾಹ ಇಳಿದನಂತರ ಬಹು ದಿವಸದ ಮೇಲೆ ನೀರು ಮುಟ್ಟಿದ ಕಲೆಯನ್ನು ನೋಡಿ ನೀರಿನ ಪ್ರವಾಹ ವೈಭವವನ್ನು ಊಹಿಸಿಕೊಂಡಷ್ಟು ಅಸಂಪೂರ್ಣ, ಅಸ್ಪಷ್ಟ! ಆದರೂ ಪ್ರಯತ್ನಿಸುವ! ಅಚ್ಚಕನ್ನಡ ಪದ ಪ್ರತಿಮೆಗಳಿಂದ ಆ ಪ್ರತಿಮೆಗಳನ್ನು ಕಲ್ಪಿಸಿದ ಪೂರ್ವ ಶಿಲ್ಪಿಗಳ ನಾಗರಿಕತೆಯನ್ನು ನಿಟ್ಟಿಸುವ!

ಬಾನಿನಲ್ಲಿ ಬೆಳ್ಳಿ ಬೆಳಕು ಮೂಡಿದ್ದು ಕಂಡು ಮನೆ ಮಂದಿಯೆಲ್ಲ ಎಚ್ಚತ್ತು ತಮ್ಮ ತಮ್ಮ ಗೆಯ್ಮೆಗಳಲ್ಲಿ ತೊಡಗುತ್ತಿದ್ದರು. ತೆಂಗಾಳಿ ಬೀಸುತ್ತಿರಲು, ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿರಲು ಹೊಲದ ಹಸಿರುಬಯಲ ನಡುವೆ ಕಾಲುದಾರಿಯಲ್ಲಿ ಪಾಯ್ದು ಹೊಳೆಕೆರೆಗಳಿಗೆ ಹೋಗಿ ಬಟ್ಟೆಯೊಗೆದು ಮೈ ತೊಳೆದು ಮಿಂದು, ಮಡಕೆಗಳಲ್ಲಿ, ಕೊಡಗಳಲ್ಲಿ ಅಡುಗೆ ನೀರನ್ನು ತುಂಬಿಕೊಂಡು ಮನೆಗಳಿಗೆ ಹಾಡುತ್ತ ಬರುತ್ತಿದ್ದರು. ಮನೆಯನ್ನು ಗುಡಿಸಿ, ಸಾರಿಸಿ ರಂಗೋಲೆ ಹಾಕಿ, ಒಲೆ ಹಚ್ಚಿ ತಿಂಡಿ, ಅಡಿಗೆ ಮಾಡುತ್ತಿದ್ದರು. ಅವರ ಅಡಿಗೆ, ಕೂಳು, ಸಾರು, ಕರಿ, ಹಪ್ಪಳ, ಸಂಡಿಗೆ, ಪುಳ್ಳಂಗಾಯಿ ಉಂಡೆ, ಕೊನ್‌ಕೊಳಲ್, ಹುರಿಕಲು, ಅರಳು. ಬಾನಿನಲ್ಲಿ ನೇಸರು ಮೂಡಿ ಮಾರುದ್ದ ಮೇಲೆ ಬರುವಲ್ಲಿ ತೋಂಬಿ ತಮಟೆ ಬಾರಿಸುತ್ತ ನಾಡವರನ್ನು ಗುಡಿಗೆ ಬನ್ನಿರೆಂದು ಸಾರುತ್ತಿದ್ದನು. ಹೆಣ್‌ಗಂಡ್‌ಮಕ್ಕಳು ಮರಿಗಳೊಡನೆ, ಒಡಹುಟ್ಟುಗಳೊಡನೆ ತಾಯ್‌ತಂದೆಯರು ಒಡೆಯ ಆಳೆನ್ನದೆ, ಕೆಳೆಯ-ಅರಿಯೆನ್ನದೆ ಒಟ್ಟುಗೂಡಿ ಊರಾಚೆ ಇರುತ್ತಿದ್ದ ಬೆಟ್ಟದ ನಡುನೆತ್ತಿಯನ್ನು ಸೇರುತ್ತಿದ್ದರು. ಅಲ್ಲಿ ಕಲ್ಕುಟಿಗರು ಕಟ್ಟಿದ ಗುಡಿಯಲ್ಲಿ ಲಿಂಗ, ಗಿಡ, ಹಾವು, ಎತ್ತು ಮುಂತಾದುವುಗಳ ಬೊಂಬೆಯನ್ನು ಕಲ್ಲಿನಲ್ಲಿ ಕೆತ್ತಿ ಇಡುತ್ತಿದ್ದರು. ತಮ್ಮೊಂದಿಗೆ ತಮ್ಮ ಕಾಲ್ನಡೆಗಳನ್ನೂ ಹಬ್ಬದಲ್ಲಿ ಕೂಡಿ ನಲಿಯಲು ಕರೆತರುತ್ತಿದ್ದರು. ಕಾಡುಗಳಲ್ಲಿ ಅಲೆದು ಹೂ, ಹಣ್ಣು, ಎಲೆ, ಜೇನ್ ಮುಂತಾದುವುಗಳನ್ನು ತಂದಿರುತ್ತಿದ್ದರು. "ಬಾರೆಮ್ಮೊಡೆಯ! ಕಾಯೆಮ್ಮೊಡೆಯ!" ಎಂದು ಬೇಡಿ ಪೂಜೆಗೆ ಅಣಿಯಾಗುತ್ತಿದ್ದರು.

ಮನೆಯೊಡತಿ ಮುಂದಾಗಿ ನಾಡೊಡೆಯನನ್ನು ಪೂಜಿಸುತ್ತಿದ್ದಳು. ಹಣತೆಯಲ್ಲಿ ಬೆಳಕು ಹಚ್ಚಿ, ಹೂವೆರಚಿ, ಹಾಲ್ಚೆಲ್ಲಿ, ಹಣ್ಮುರಿದು, ಕಾಯೊಡೆದು ಆರತಿಯೆತ್ತಿ ಕೈಮುಗಿದು, ಮೈನೀಡಿ ಮುಂದಿಯಲ್ಲಿ ಅಡ್ಡಬೀಳುತ್ತಿದ್ದರು. ಮೈದೋರದ ಒಡೆಯನ ಚೆಲುವನ್ನು ಕಣ್ಗೆ ತೋರುವಂತೆ ನೀಲಿಬಾನ್, ಕಿವಿಕೇಳುವಂತೆ ಪೆರೆತುಂಬಾ ಅಲೆಯೆದ್ದು, ಗೆಲವಿಂದ ನಗು ನಗುತ್ತಿರುವ ಕಡಲ ಮೂರ್ತಿ ಪೂಜಿಸುವಾಗ ಹಕ್ಕಿ ಹಾಡುತ್ತಿತ್ತು, ನವಿಲಾಡುತ್ತಿತ್ತು, ಕರುಗಳು ರಿಂಗಣ ಕುಣಿತ ಕುಣಿಯುತ್ತಿರಲು ಮಕ್ಕಳು ಜೊತೆಗೂಡುತ್ತಿದ್ದವು. ಪಡ್ಡೆ ಹುಡುಗರು ಕೋಲಾಟವಾಡಿ, ಪಾಡ್ದನೆಗಳನ್ನು ಹಾಡುತ್ತಿದ್ದರು. ಕೊಳಲು, ಕೊಂಬುಗಳನ್ನೂದುತ್ತಿದ್ದರು. ತಾಯಿ ನುಡಿಯೆಂದರೆ ಅವರಿಗೆನಿತು ಪೆರ್ಮೆ!

'ಮೊದಲು ತಾಯ ಹಾಲ ಕುಡಿದು
ಲಲ್ಲೆಯಿಂದ ತೊದಲಿನುಡಿದು
ಗೆಳೆಯರೊಡನೆ ಬೆಳೆದು ಬಂದ
ಮಾತದಾವುದು?
ನಲ್ಲೆಯೊಲವ ತೆರೆದು ತಂದ
ಮಾತದಾವುದು?"

ಹಾಡಿ ಕುಣಿದು ಮತ್ತೇರಿದವನೊಬ್ಬನ ಮೇಲೆ ತಾಯಿ ಮೈದುಂಬಿ ಮಕ್ಕಳಿಗೆ ಗೆಲುವನ್ನು ಕೋರುತ್ತ ಮುಂದಿನ ಗೆಯ್ಮೆಯನ್ನು ಕೋರಿ ಮರೆಯಾಗುತ್ತಿದ್ದಳು. ಹಿಗ್ಗಿದ ಮಂದಿ ಒಡತಿಗೆ ಕೈಮುಗಿದು ಎಲೆಯಡಿಕೆ ತೆಗೆದುಕೊಂಡು ಮನೆಗಳಿಗೆ ಹೋಗುತ್ತಿದ್ದರು.

ಊರ ಒಡೆಯನನ್ನನುಸರಿಸಿ ಮಲ್ಲರು ಸಾಲುಕಟ್ಟಿ ದೊಣ್ಣೆ, ಈಟಿ, ಕತ್ತಿ, ಬಿಲ್ಲುಬಾಣ, ಒನಕೆ, ಹಾರೆ, ಕೊಡಲಿಗಳನ್ನು ಹಿಡಿದು ಹೋರಾಡಿ ನಾಡ ಗಡಿಯನ್ನು ಮುಂದುವರಿಸಲು ಹೋಗುತ್ತಿದ್ದರು. ಕಾಳಗದ ಕೊಂಬೂದಿ, ಕಹಳೆ, ತುತ್ತೂರಿಗಳನ್ನೂದಿ ಅವರು ಕಣಕ್ಕೆಕರೆಯುವ ದಾಟಿಯಿದು.

"ಕಾಳೆ ಹರೆಕೊಂಬುಗಳ ಏಳಿ.ಮೊಳಗಿ ಏಳಿ! ನಾಡುಗಳ ಕುಳಗಳನು ಕೂಡಿಕೊಳ ಹೇಳಿ! ಅದೊ ಕೂಗು ಕೇಳಿ! ಮನ್ನೆಯರ, ಬಂಟರಿರ ಮೊಳಗಿ ಏಳಿ! ಕಣಿವೆಗಳ ಬೆಟ್ಟಗಳ ಗಡಿಯಿಂದ ಬನ್ನಿ! ಕಣಬಿಲ್ಲು ಕುಡಗೋಲು ಕೊಡಲಿಗಳ ತನ್ನಿ! ಅರಿಗಳಿಗೆ ಮೊದಲು ತಮ್ಮ ಬರವನ್ನು ತಿಳಿಸಿ ಆ ಮೇಲೆ ಅವರೊಂದಿಗೆ ಬಯಲಲ್ಲಿ ಕಾಳೆಗವನ್ನು ಹೊಡಿ ಒಡಲಾಸೆಯನ್ನು ತೊರೆದು ಜೋಳದ ಪಾಳಿಯನ್ನು ನೆನೆದು ಎಕ್ಕತುಳದಲ್ಲಿ ಹೋರಾಡುತ್ತಿದ್ದರು. ಪೆಟ್ಟು ತಿಂದವರನ್ನು ಹೊತ್ತು ತಂದು ಪಾಳಯದಲ್ಲಿ ಮಲಗಿಸಿ ಬೇರು, ನಾರಿನ ಮದ್ದನ್ನು ಕಟ್ಟಿ ವಾಸಿಮಾಡುತ್ತಿದ್ದರು. ಹಾಗೆ ಗೆದ್ದನಂತರ ಸೋತವರನ್ನು ನಲ್ಮೆಯಿಂದ ಕಂಡು ಆ ಬಂಜರು ನೆಲದಲ್ಲಿ ಸಾಗುವಳಿ ಮಾಡುತ್ತಿದ್ದರು. ನೆಲವನ್ನುತ್ತಿ ಬಿತ್ತಿ, ಕಳೆಕಿತ್ತು, ಗೊಬ್ಬರ ಹೊಡಿ ಪೈರು ನಾಟಿಹಾಕಿ, ಹೊಲ, ಗದ್ದೆ, ತೋಟಗಳಿಂದು ಬೇರೆ ಬೇರೆ ಮಾಡಿ ಬಗೆಬಗೆಯ ಬೆಳೆಗಳನ್ನು ತೆಗೆಯುತ್ತಿದ್ದರು. ಪೈರು ಕುಯ್ದು ಮೆದೆಹಾಕಿ ಸುಗ್ಗಿಕುಣಿತ ಕುಣಿಯುತ್ತಿದ್ದರು. ಕಾಳನ್ನು ಒಕ್ಕಿ ಕಣದಲ್ಲಿ ತಿರುಪ ಹಾಕಿ ಕಾಳನ್ನು ಪೇಟೆಯಲ್ಲಿ ಮಾರಿ ಬಂದ ದುಡ್ಡಿನಿಂದ,ಬಟ್ಟೆ,ಒಡವೆ ವಾಲೆ, ಬಳೆ, ಸರ, ಗುಂಡು ಮುಂತಾದುವನ್ನು, ಕಂಚು ಮುಟ್ಟನ್ನು ಕೊಳುತ್ತಿದ್ದರು. ಪೇಟೆಯಲ್ಲಿ ಅಂಗಡಿಗಳಿದ್ದವು. ಸೇರು, ಪಾವು, ಬಟ್ಟು, ತೂಕ, ತಕ್ಕಡಿಯಲ್ಲಿ, ಮೋಸ, ಸುಳ್ಳು, ಕಳ್ಳತನ ಎಲ್ಲ ನಡೆಯುತ್ತಿದ್ದವು. ಹತ್ತಿಯನ್ನು ನೂತು, ನೆಯ್ದು ಬಟ್ಟೆಮಾಡುತ್ತಿದ್ದರು. ಬಿಡುವಾದಾಗ ಆಡುಂಬೊಲಗಳಲ್ಲಿ ನಲ್ಮೆಯಿಂದ ಆಡುತ್ತಿದ್ದರು. ತೆಪ್ಪಕಟ್ಟಿ ಈಜಾಡುತ್ತಿದ್ದರು. ಕಾಡಿನ ಬೇಟೆಯ ಹಲವು ಬಗೆಗಳೂ ಗೊತ್ತು.

ಅವರಲ್ಲಿ ಕೆಟ್ಟ ಕೆಲಸಗಳೂ ಕೆಲವಿದ್ದುವು. ಕಳ್ಳು ಕುಡಿತ, ಸೂಳೆಗಾರಿಕೆ, ಅತ್ತೆ ಸೊಸೆಯ ಜಗಳ, ಬೈಗಳಗಳು, ನೆಬೆಗೆ ಬೆಂಕಿಹಚ್ಚುವುದು, ಕಳ್ಳಬಟ್ಟಿ ಇಳಿಸುವುದು, ಮಾಟ ಮದ್ದು ಮಾಡುವುದು--ಮುಂತಾದುವು ಬಳಕೆಯಲ್ಲಿದ್ದುವು. ಆದರೂ ಮಂದಿ ಒಟ್ಟನಲ್ಲಿ ಒಳ್ಳೆಯವರಾಗಿದ್ದರು. ಮದುವೆಯಾಗಿ ಸೊಗದಿಂದ ಬಾಳುತ್ತಿದ್ದರು. ಒಡಹುಟ್ಟುಗಳಲ್ಲಿ ನಲ್ಮೆ, ಕೆಳೆಯರಲ್ಲಿ ಗೆಳೆತನ, ತಾಯಿತಂದೆ ನೆಂಟರಲ್ಲಿ ನಂಬಿಕೆಯಿಂದ ಒಟ್ಟು ಮನೆಯಲ್ಲಿ ಪಾಲಾಗದೆ ಒಗೆತನ ನಡೆಸುತ್ತಿದ್ದರು. ಮದುವೆ, ವಸಗೆ, ಸೋಬಾನೆ, ಹುಟ್ಟಿದ ಹಬ್ಬಗಳನ್ನು ನಡೆಸುತ್ತಿದ್ದರು. ಬಾನ್, ಮುಗಿಲ್, ನೇಸರ್, ತಿಂಗಳ್, ಅರಿಲ್ ಮುಂತಾದ ಒಡೆಯನ ಊಳಿಗದವರ ಹೆಸರು ಗೊತ್ತಿತ್ತು. ಕಬ್ಬಿಣ, ಬೆಳ್ಳಿ, ಚಿನ್ನ, ಹಿತ್ತಾಳೆಗಳ ಉಪಯೋಗ ಗೊತ್ತಿತ್ತು. ಅಕ್ಕಿ, ಭತ್ತ, ಜೋಳ, ಹೆಸರು ಮುಂತಾದ ಕಾಳುಗಳು ಗೊತ್ತಿತ್ತು. ಓದು ಬರೆಹಗಳು ಹೊಲಿಗೆ ಬರುತ್ತಿತ್ತು.* ಬಯಲಾಟವಾಡಿ, ಆರಂಬಮಾಡಿ, ಬಂಡಿ ಹೊಡೆದು ದನ ಕಾಲ್ನಡೆಗಳನ್ನು ಸಾಕುತ್ತಿದ್ದರು. ಒಟ್ಟನಲ್ಲಿ ಬಳಕೆಯ ಕೆಲಸಗಳೂ ಬರುತ್ತಿದ್ದವು.

ನುಡಿಗಟ್ಟನಿಂದ ಎಷ್ಟು ಬೇಕಾದರೂ ನಮ್ಮ ಪ್ರಾಚೀನ ವೈಭವವನ್ನು ಪ್ರದರ್ಶಿಸಬಹುದು. ಮುಖ್ಯ ಪ್ರಾಚೀನ ಸಂಸ್ಕೃತಿಯ ತೊಟ್ಟಿಲನ್ನೂದಿದವರು ಆದಿಕನ್ನಡಿಗರು. ಕನ್ನಡ ನುಡಿ ಸ್ವತಂತ್ರವಾಗಿ ಸಂಸ್ಕೃತದಸಂಪರ್ಕವಿಲ್ಲದೆ ಇಂಗ್ಲಿಷಿನ ಕೆಳೆತನವಿಲ್ಲದೆಯೇ ತನ್ನ ವೈಭವವನ್ನು ಎಷ್ಟು ಹಿರಿದಾಗಿ ಬೇಕಾದರೂ ಪ್ರದರ್ಶಿಸಬಲ್ಲುದು. ಮಿಕ್ಕುಳಿದ ಆಧುನಿಕ ಆರ್ಯ ಭಾಷೆಗಳಲ್ಲಿ ಎಷ್ಟು ಭಾಷೆಗಳು ಈ ರೀತಿ ಧೈರ್ಯದಿಂದ ತನ್ನ ತನವನ್ನು ಪ್ರದರ್ಶಿಸಬಲ್ಲುವು? ಎಷ್ಟು ಹಿರಿಯ ನುಡಿಗಟ್ಟು ನಮ್ಮದು. ಆದರೂ ನಮ್ಮ ನುಡಿಯಲ್ಲಿ ನಮ

ಕಥಕ್ಕಳಿ

ಜಗತ್ತಿನ ಅತಿ ಪ್ರಸಿದ್ಧ ನಾಟ್ಯಕಲೆ



ಭರತನಾಟ್ಯ ಶಾಸ್ತ್ರವು ಭಾರತದ ನಾಟ್ಯಶಾಸ್ತ್ರಗಳಲ್ಲಿ ಅತಿ ಪ್ರಾಚೀನವಾದುದು. ಸಾಕ್ಷಾತ್ ಪರಮೇಶ್ವರನಿಂದಲೇ ಆವಿರ್ಭೂತವಾದುದೂ ಎನಿಸಿಕೊಂಡಿದೆ. ಈ ಶಾಸ್ತ್ರಗಳಲ್ಲಿ ಹೇಳಿದ ಹಲವು ಬೇರೆ ಬೇರೆ ನೃತ್ಯಗಳಲ್ಲಿ ಕಥಕ್ಕಳಿಯು ಒಂದು ವಿಶಿಷ್ಟ ಸ್ಥಾನ ಪಡೆದಿದೆ. ಭಾರತ, ಸಿಂಹಳ, ಬರ್ಮಾ, ಸಯಾಮ್, ಪೂರ್ವ ಇಂಡೀಸ್‌ಗಳಲ್ಲಿ ಇದು ಪ್ರಚಾರದಲ್ಲಿದೆ. ಈ ನಾಟ್ಯವು ಕಲಿಯಲು ಅತ್ಯಂತ ಕಠಿಣವಾಗಿದ್ದರೂ ರಚನಾತ್ಮಕ ಕಲ್ಪನಾಶಕ್ತಿಗೆ ಪ್ರಸಿದ್ಧಿಗೊಂಡಿದೆ.

ಕಥಕ್ಕಳಿಯ ಮೂಲವೆಲ್ಲಿ ಎಂಬುದರ ಕುರಿತು ಹಲವು ಅಭಿಪ್ರಾಯಗಳಿವೆ. ಆದರೆ ಕೊಟ್ಟರಾಕ್ಕಾರಾ (ತಿರುವಾಂಕೂರು ಸಂಸ್ಥಾನದಲ್ಲಿದೆ) ರಾಜರ ಉದಾರಾಶ್ರಯದಲ್ಲಿ ಅದು ಹುಟ್ಟಿತೆನ್ನುತ್ತಾರೆ. ಹದಿನೈದನೇ ಶತಮಾನದ ಅಂತ್ಯಭಾಗದಲ್ಲಿ ಈ ರಾಜರು 'ರಾಮನಾಟ್ಟಮ್' ಎಂಬ ಹೆಸರಿನ ಜನಪ್ರೀತ ವಿನೋದವೊಂದನ್ನು ಪ್ರಚಾರಕ್ಕೆಳಿಸಿದ್ದರು. ಅದರ ರೂಪಾಂತರವೇ ಕಥಕ್ಕಳಿ ಎನ್ನುವ ವಾದ ಬಲನಾಗಿದೆ. ಕಥಕ್ಕಳಿಯ ತವರುಮನೆಯಾದ ಕೇರಳದಲ್ಲಿ ದೇವಾಲಯಗಳ ಉತ್ಸವ ಸಮಾರಂಭಗಳಲ್ಲಿ ಮತ್ತು ಇತರ ಪರ್ವದಿನಗಳಲ್ಲಿ ನಾಟ್ಯನಾಟಕಗಳ ಮೂಲಕ ಕಥಕ್ಕಳಿಯು ಪ್ರದರ್ಶನವಾಗುತ್ತದೆ. ಮನೆಗಳಲ್ಲೇ ಆದರೆ ಗಂಡಸರು ಮಾತ್ರ ಇದನ್ನು ಅಭಿನಯಿಸುತ್ತಾರೆ. ರಾತ್ರಿಯ ಆರಂಭದ ತಾಸುಗಳಲ್ಲಿ ತೊಡಗಿತೆಂದರೆ ಮುಂಜಾನೆಯ ವರೆಗೆ ಅದು ನಡೆಯುವುದು. ಒಂದಿಷ್ಟು ಬೇಸರವಿಲ್ಲದೆ ನಿದ್ದೆಯನ್ನು ಕಳಕೊಂಡಾದರೂ ಜನರು ಕುತೂಹಲದಿಂದ ಅದನ್ನು ನೋಡಲು ಕೂಡುವರು. ಕೆಲವು ಕಥಕ್ಕಳಿ ನಾಟಕಗಳು ಬಿಡದೆ ೧೨ ರಾತ್ರಿಗಳ ವರೆಗೆ ನಡೆಯುವುದುಂಟು. ಆದರೆ ಇತ್ತೀಚೆಗೆ

ಗಿಂದು ಬಡತನವೆದ್ದು ತೋರುತ್ತಿದೆ. ಮಾತೆತ್ತಿದರೆ ಇಂಗ್ಲೀಷು, ಇಲ್ಲವೆ ಸಂಸ್ಕೃತ ಪದಗಳ ಹಾರಾಟ. ಒಳಗನ್ನಡ ನುಡಿಗಟ್ಟನ್ನು ಇನ್ನು ಮುಂದಾದರೂ ಹೆಚ್ಚು ಬಳಸೋಣ!

ಸಿರಿಗನ್ನಡಂ ಗೆಲ್ಗೆ

---

*(ಇವುಗಳ ಜೊತೆಗೆ ಅವರು ಸಾಕುತ್ತಿದ್ದ ಜಾನುವಾರುಗಳು: ಹಸು, ಎಮ್ಮೆ, ಕುರಿ, ಕುದುರೆ, ನಾಯಿ, ಆನೆ, ಹುಲಿ, ಕಿರುಬ, ತೋಳ, ನೊಲ. ಹಕ್ಕಿಗಳು: ನವಿಲು, ಗಿಣಿ, ಕಾಗೆ, ಕೋಳಿ, ಗುಬ್ಬಿ. ಚಿಟ್ಟೆ, ಹುಳು, ಚಿಗಟ, ಸೊಳ್ಳೆ ಮುಂತಾದ ಹುಳುಗಳು.)

ನಾಟ್ಯದ ಕಾಲಾವಧಿಯನ್ನು ಕಡಿಮೆಮಾಡುವ ಬಗ್ಗೆ ಯತ್ನ ನಡೆಯುತ್ತಿದೆ.

ಕಥಕ್ಕಳಿ ನಾಟ್ಯ ಪ್ರದರ್ಶನ ನಡೆವಲ್ಲಿ ಪ್ರಕಾಶಕ್ಕೆ ಉಪಯೋಗಿಸುವ ದೀಪಗಳೆಂದರೆ ತೆಂಗಿನೆಣ್ಣೆಯಿಂದ ಉರಿಯುವ ಕಂಚಿನ ದೀಪಗಳು. ಸುಮಾರು ೫ ಅಡಿಗಳಷ್ಟು ಎತ್ತರವಿದ್ದು, ಈ ದೀಪಗಳ ಮಂದಪ್ರಕಾಶವು ನಾಟ್ಯಕ್ಕೆ ಅದೊಂದು ರೀತಿಯ ವಿಶಿಷ್ಟ ಕಳೆ ಕೊಡುತ್ತದೆ. ವಿದ್ಯುತ್ ದೀಪಗಳನ್ನು ಉಪಯೋಗಿಸುವುದರಿಂದ ಕಥಕ್ಕಳಿಯ ಪರಿಣಾಮವೇ ಕೆಟ್ಟು ಹೋಗುವುದು. ಹಿನ್ನೆಲೆಯಾಗಿ ಪರದೆಗಳನ್ನು ಉಪಯೋಗಿಸುವುದಿಲ್ಲ. ಸೀನ್-ಸೀನರಿಗಳೂ ಅವಶ್ಯವಿರುವುದಿಲ್ಲ. ಯಾವುದಾದರೂ ಬಣ್ಣದ ದಪ್ಪ ವಸ್ತ್ರದಿಂದ ಎದುರಿಗೆ ಮಾತ್ರ ಒಂದು ಪರದೆ ಬಿಡುವರು. ಅದಕ್ಕೆ ಚಂದದ ಬಳ್ಳಿಗಳ ಕೆಲಸವಿರುವ ಅಂಚು ಇದ್ದು, ಎರಡು ಮೂಲೆಗಳಲ್ಲಿ ಇಬ್ಬರು ಅದನ್ನು ಹಿಡಿದು ನಿಲ್ಲುವರು. ಕಥಕ್ಕಳಿ ನಾಟ್ಯವು ಆರಂಭವಾಯಿತೆಂದೊಡನೆ ಈ ವಸ್ತ್ರ ಮೇಲಕ್ಕೆತ್ತುವರು; ನಾಟ್ಯ ಅಂತ್ಯವಾಗುವಾಗ ಪುನಃ ಬಿಡುವರು. ವಸ್ತ್ರವನ್ನು ಎತ್ತುವುದೂ ನಾಟ್ಯದ ಒಂದು ಅಂಗವಾಗಿದೆ. 'ಥೆರೊನೊಟ್ಟಮ್' ಎಂದು ಆ ಕ್ರಿಯೆಯನ್ನು ಕರೆಯುತ್ತಾರೆ. ನೃತ್ಯಗಾರನೇ ಕೈಯಿಂದ ಆ ವಸ್ತ್ರವನ್ನು ಹಿಡಿದು, ಕಲಾವಿಶಿಷ್ಟವಾದ ರೀತಿಯಲ್ಲಿ ಭಾವ ಭಂಗಿಗಳನ್ನು ಪ್ರದರ್ಶಿಸುತ್ತ ಮೆಲ್ಲಗೆ ಮೇಲಕ್ಕೆತ್ತುವನು. ರಂಗಭೂಮಿಯ ವ್ಯವಸ್ಥೆ, ಬಣ್ಣ ಬಳೆಯುವ ಕೋಣೆ ಇವುಗಳ ಕುರಿತು ಯಾವುದೇ ರೀತಿಯ ಕಠಿಣ ನಿರ್ಬಂಧಗಳಾಗಲಿ ಕಟ್ಟುನಿಟ್ಟಾದ ನಿಯಮಗಳೆಂದಾಗಲಿ ಇರುವುದಿಲ್ಲ.

ಕಥಕ್ಕಳಿ ಪ್ರದರ್ಶನದಲ್ಲಿ ವೇಷ ಬಳೆಯುವ ರಂಗವು ಒಂದು ಕುತೂಹಲದಾಯಕ ಕ್ಷೇತ್ರವಾಗಿದೆ. ಮುಖಕ್ಕೆ ಬಣ್ಣ ಬಳೆದುಕೊಳ್ಳುವುದು, ವೇಷ ಭೂಷಣಗಳನ್ನು ಧರಿಸುವುದು ಇದೂ ಒಂದು ವಿಶಿಷ್ಟ ಕಲೆಯಾಗಿದೆ. ವಿವಿಧ ಬಣ್ಣಗಳ ಬೆಲೆಬಾಳುವ ಹೊಳೆಯುವ ಉಡುಪುಗಳೇ ಕಥಕ್ಕಳಿ ನಾಟ್ಯಕ್ಕೆ ಬೇಕಾಗುತ್ತವೆ. ಮುಖಕ್ಕೆ ಬಣ್ಣ ಬಳೆದುಕೊಳ್ಳುವ ಅದ್ಭುತ ರೀತಿಯು ಬೇರೆ ಯಾವ ಹಿಂದೀಯ ನಾಟ್ಯಗಳಲ್ಲೂ ಇರುವುದಿಲ್ಲ. ಅಹರ್ಯ ಅಭಿನಯದಲ್ಲಿ ಕಥಕ್ಕಳಿಯು ಇತರ ಎಲ್ಲಾ ನೃತ್ಯಗಳಿಗಿಂತ ಒಂದು ಬಣ್ಣಕ್ಕೆ ಮೀರಿದೆ ಎಂದರೆ ಹೆಚ್ಚಾಗಲಾರದು. ವೇಷ ಭೂಷಣಗಳನ್ನು ತೊಟ್ಟುಕೊಳ್ಳುವುದು ಮತ್ತು ಬಣ್ಣ ಬಳೆಯುವುದು ಈ ಕಾರ್ಯಾಚರಣೆಗೆ ಹೆಚ್ಚಿನ ಸಮಯ ತಗಲುವುದು. ನಾಟ್ಯ ಅಭಿನಯಿಸುವವನಿಗೆ ಹಾಗು ವೇಷ ಬಳೆಯುವವನಿಗೆ ತುಂಬಾ ಶ್ರಮ ಬೀಳುವ ಕೆಲಸವಿದು.

ಸಾತ್ವಿಕ, ರಾಜಸ, ತಾಮಸ ಎಂಬ ಭಾವನೆಗಳ ಮೇಲೆ ಕಥಕ್ಕಳಿಯ ವೇಷಭೂಷಣಗಳು ಅವಲಂಬಿಸಿಕೊಂಡಿವೆ. ಕಥಕ್ಕಳಿಯ ಪುರುಷ ಪಾತ್ರಗಳನ್ನು ಪಕ್ಕಾ, ಕತ್ತಿ, ಥಾಡಿ, ಮತ್ತು ಕರಿ ಹೀಗೆ ನಾಲ್ಕು ವರ್ಗಗಳನ್ನಾಗಿ ವಿಂಗಡಿಸಬಹುದಾಗಿದೆ. ಅರಸರು, ದೇವತೆಗಳು, ವೀರರು ಮತ್ತು ಇತರ ಸಾತ್ವಿಕ ಪಾತ್ರಗಳನ್ನು ಪಕ್ಕಾ ವರ್ಗಕ್ಕೆ ಸೇರಿಸಬಹುದು. ಸೊಂಟದ ವರೆಗೆ ಕೆಂಪಿನ ಮೇಲಂಗಿಯೊಂದು, ಶಾಲುಗಳು, ತಲೆಗೊಂದು ಅಂದವಾದ ಕಿರೀಟ, ಉಡಿಗೆ ತೊಡಿಗೆಗಳು, ಮುಖಕ್ಕೆ ಹಸುರು ಮತ್ತು ಬಿಳಿ ಬಣ್ಣ ಈ ರೀತಿಯ ವೇಷ ಭೂಷಣ ಪಕ್ಕಾ ವರ್ಗದವರಾದರಾಯಿತು.

ಪಕ್ಕಾ ವೇಷದಲ್ಲೇ ಕೆಂಪಗಿನ ಮುದುಡಿಕೊಂಡ ಮೀಸೆಗಳನ್ನು ಎಳೆದು, ಹಣೆಗೆ ಮತ್ತು ಮೂಗಿಗೆ ಎರಡು ದೊಡ್ಡ ಬಿಳಿಯ ಗುಳ್ಳೆಗಳನ್ನು ಅಂಟಿಸಿದರೆಂದರೆ ರಾಜಸಗುಣಭರಿತವಾದ ಕತ್ತಿ ವೇಷವಾಯಿತು.


ರಾಮ, ಕೃಷ್ಣ ಇತ್ಯಾದಿ ಸಾತ್ವಿಕ ಪಾತ್ರಗಳನ್ನು ಪಕ್ಕಾ ವೇಷದಲ್ಲಿ ಕಾಣಬಹುದಾದರೆ, ರಾವಣ, ಕಂಸ ಇತ್ಯಾದಿ ಅಸುರರನ್ನು ಕತ್ತಿ ವರ್ಗದಲ್ಲಿ ಸೇರಿಸಬಹುದು.

ಕೆಂಪು, ಕಪ್ಪು ಇಲ್ಲವೆ ಬಿಳಿ ಗಡ್ಡಗಳನ್ನಿಟ್ಟು ಬರುವ ಪಾತ್ರಗಳು ಥಾಡಿ ವರ್ಗಕ್ಕೆ ಸೇರಿವೆ. ಕೆಂಪು ಥಾಡಿ ಯಾನೆ ಗಡ್ಡ ಇಟ್ಟುಕೊಳ್ಳುವ ಪಾತ್ರಗಳು ತಾಮಸಗುಣಪ್ರತಿಬಿಂಬಿಸುತ್ತವೆ. ಕತ್ತಿ ವೇಷದಲ್ಲಿದ್ದಂತೆ ಹಣೆಗೆ ಮತ್ತು ಮೂಗಿಗೆ ಬಿಳಿಯ ಗುಳ್ಳೆಗಳು ಥಾಡಿ ವರ್ಗದವರಿಗೆ ಇರುತ್ತವೆ. ರಾಮಾಯಣದ ಹನುಮಂತ ಮತ್ತು ಇತರ ಪ್ರಸಿದ್ಧ ವಾನರ ನಾಯಕರು ಬಿಳಿಯ ಗಡ್ಡ ಧರಿಸುವರು. ಇತರ ಕೀಳು ತರಗತಿಯ ಅನಾಗರಿಕ ಪಾತ್ರಗಳು ಕಪ್ಪು ಗಡ್ಡ ಇಟ್ಟುಕೊಳ್ಳುವವು.

ಕರಿ ವರ್ಗವೂ ತಾಮಸ ಭಾವನೆಯನ್ನು ಪ್ರತಿಬಿಂಬಿಸುವುದು. ಹೆಚ್ಚಾಗಿ ದೆವ್ವ ಮತ್ತು ಭೂತಗಳನ್ನು ಈ ವೇಷಗಳಲ್ಲಿ ಕಾಣಬಹುದಾಗಿದೆ. ಕಪ್ಪು ಬಣ್ಣವೇ ಈ ವೇಷಗಳಲ್ಲಿ ಪ್ರಧಾನ.

ಸ್ತ್ರೀ ಪಾತ್ರಗಳಲ್ಲಿ ಸೌಂದರ್ಯವನ್ನು ಕಲಾಪೂರ್ಣವಾಗಿ ಹೊರಗೆಡಹುದರ ಕುರಿತು ವಿಶೇಷಗಮನಕೊಡಲಾಗುತ್ತದೆ. ಋಷಿಗಳು, ಬ್ರಾಹ್ಮಣರು, ಅರಸನ ದೂತರು, ಸೇವಕರು, ಈ ಪಾತ್ರಿಗಳೆಲ್ಲಾ ಸ್ತ್ರೀವೇಷಗಳಂತೆ ಮುಖಕ್ಕೆ ಬಣ್ಣ ಬಳೆದುಕೊಳ್ಳುವರು.

ಹಿಂದೂ ಪುರಾಣಗಳಿಂದ ಕಥೆಗಳನ್ನು ಆರಿಸಿ, ಅವುಗಳನ್ನು ಪ್ರಸಿದ್ಧ ಹಾಡುಗಾರರು ಸಂಗೀತದ ಮೂಲಕ ಹಾಡಿ ತೋರಿಸುವಾಗ (ಹಿಮ್ಮೇಳದಲ್ಲಿ ಮದ್ದಳೆ, ತಾಳ, ತಮಟೆ, ಜಾಗಟೆ ಇವುಗಳಿರುವವು) ಕಥಕ್ಕಳಿ ನಾಟ್ಯಗಾರನು ಹಾವ ಭಾವಗಳಿಂದ, ಅಭಿನಯದಿಂದ ಅದನ್ನು ಪ್ರದರ್ಶಿಸುವನು. ಅಭಿನಯಗಾರರು ಹಾಡುವುದಾಗಲಿ ಮಾತನಾಡುವುದಾಗಲಿ ಇಲ್ಲ. ಕೇವಲ ನಾಟ್ಯ ಮತ್ತು ಅಭಿನಯದಿಂದ ಅವರು ವಿವಿಧ ಭಂಗಿಗಳನ್ನು ಪ್ರದರ್ಶಿಸುವರು.



ಭಾರತ
ಜಗತ್ತಿನ ಮೂವರು ಮಹಾ ವ್ಯಕ್ತಿಗಳ ದೃಷ್ಟಿಯಲ್ಲಿ.

೧. ಈನ್‌ಸ್ಟೀನ್ ೨. ಪರ್ಲ್‌ಬಕ್ ೩. ದಿವಂಗತ ಹೆರಾಲ್ಡ್ ಲಾಸ್ಕಿ

★

[ಲೇಖಕರು: ಶ್ರೀ. ಬೈಕಾಡಿ ವೆಂಕಟಕೃಷ್ಣರಾಯರು, ಬೆಂಗಳೂರು.]

೧

ಪ್ರಿನ್ಸಿಪಾಲ್ ಎಸ್. ಎನ್. ಅಗರವಾಲರು ಈಗ್ಗೆ ಕೆಲವು ತಿಂಗಳ ಹಿಂದೆ ಭೂಲೋಕ ಯಾತ್ರೆ ಕೈಗೊಂಡರು. ಇವರ ರಾಯಭಾರ ಭಾರತ ಸರಕಾರದ ಪರವಾಗಿ. ಸಾಂಸ್ಕೃತಿಕ ರಾಯಭಾರ. ಭಾರತೀಯ ಸಂಸ್ಕೃತಿ, ಭಾರತದ ರಾಜಕೀಯ, ಭಾರತದ ಜನಜೀವನದ ಬಗ್ಗೆ ವಿದೇಶದಲ್ಲಿ ಏನು ಅಭಿಪ್ರಾಯ ಇದೆ, ತಿಳಿಯಲು ಶ್ರೀ| ಅಗರವಾಲರು ಶ್ರಮಪಟ್ಟಿದ್ದಾರೆ. ತಪ್ಪು ಅಭಿಪ್ರಾಯ ಪ್ರಚಾರದಲ್ಲಿದ್ದ ದೇಶದಲ್ಲಿ ಅದನ್ನು ಸರಿಪಡಿಸಲು ಯತ್ನಿಸಿದ್ದಾರೆ. ಅವರು ಕಂಡು ಮಾತನಾಡಿದ ಮೂರು ಮಂದಿ ಜಗತ್ತಿನ ಪ್ರಸಿದ್ಧ ಪುರುಷರ ಅಭಿಪ್ರಾಯ:ವನ್ನು ಮಾತ್ರ ಇಲ್ಲಿ ಉಲ್ಲೇಖಿಸುತ್ತೇನೆ.

ಶ್ರೀ| ಅಗರವಾಲರು ನ್ಯೂಯಾರ್ಕ್‌ನಲ್ಲಿದ್ದಾಗ ಜಗತ್ತಿನ ಪ್ರಸಿದ್ಧ ವಿಜ್ಞಾನಶಾಸ್ತ್ರ ಪ್ರೊಫೆಸರ್ ಈನ್‌ಸ್ಟೀನ್‌ರನ್ನು ಕಂಡರು. ಈನ್‌ಸ್ಟೀನ್ ಸಾಧಾರಣವಾಗಿ ಜನಕ್ಕೆ ಸಿಗುವ ವ್ಯಕ್ತಿಯೇ ಅಲ್ಲ. ಸದಾಕಾಲ ಸಂಶೋಧನಾ ಕಾರ್ಯದಲ್ಲಿ ನಿರತನಾಗಿ ಲ್ಯಾಬರೇಟರಿಯಲ್ಲಿ ಕಾಲ ಕಳೆವ ವ್ಯಕ್ತಿ. ಇತ್ತೀಚೆಗೆ ಆತನ ದೇಹಸ್ಥಿತಿಯೂ ನೆಟ್ಟಗಿರಲಿಲ್ಲ. ಆದರೂ ಗಾಂಧಿ

ಕಥಕ್ಕಳಿ ನಾಟ್ಯದಲ್ಲಿ ಹೆಸರುಹೋದ ಕಲಾಶಾಲೆಗಳೆಂದರೆ ಕೇರಳ ಕಲಾ ಮಂಡಲ ಮತ್ತು ಚೆಂಬಕೇಸರಿ ನಟನಾ ಕಲಾ ಮಂಡಲ. ಕಥಕ್ಕಳಿ ಹಾಡುಗಾರರಲ್ಲಿ ಉನ್ನಿತನ್ ಸಹೋದರರು ಮತ್ತು ನಂಬೀಸನ್ ಇವರು ಪ್ರಸಿದ್ಧರು. ಆಂಗಿಕ ಅಭಿನಯ, ಹಸ್ತ, ಮುದ್ರೆ ಇವು ಕಥಕ್ಕಳಿಯಲ್ಲಿ ಪ್ರಧಾನವಾದುವು. ಮುದ್ರೆಗಳಲ್ಲಿ ೨೪ ರೀತಿಯವುಗಳಿವೆ. ಅವುಗಳ ಜೋಡಣೆಯೇ ನಾಟ್ಯದ ಭಾಷೆ. ಭಾವರಸಗಳು ಹತ್ತು ಹಲವು.

ಕೇರಳ ಕಲಾ ಮಂಡಲದ ಸ್ಥಾಪಕರು ರಾಜಕವಿ ವಲ್ಲತೋಳ್ ನಾರಾಯಣ ಮೆನನರು. ೧೯೩೦ರಲ್ಲಿ ಅವರು ಆರಂಭಿಸಿದ ಈ ಕಲಾ ಕೇಂದ್ರ ಕಥಕ್ಕಳಿ ನಾಟ್ಯದ ಪುನರುತ್ಥಾನಕ್ಕೆ ಬಹಳ ಮಟ್ಟಿಗೆ ನೆರವಾಗಿದೆ. ಲಾ ಮೇರಿ, ರಾಗಿಣಿ ದೇವಿ, ಸಿಮ್ಕಿ, ಲೂಯಿ ಲೈಟ್‌ಫೂಟ್ ಇತ್ಯಾದಿ ವಿದೇಶೀ ನರ್ತಕ ನರ್ತಕಿಯರನ್ನೂ ಉದಯ ಶಂಕರ್, ರಾಮ ಗೋಪಾಲರಂತಹ ಪ್ರಸಿದ್ಧ ಹಿಂದೀಯ ನರ್ತಕರನ್ನೂ ಆಕರ್ಷಿಸಿದ ಕಲಾ ಮಂಡಲವಿದು. ಗೋಪಿನಾಥ್, ಶಿವರಾಮ, ಮಾಧವನ್, ಹರಿದಾಸ್ ಇವರೆಲ್ಲಾ ಕೇರಳ ಕಲಾ ಮಂಡಲದಲ್ಲಿ ಕಲಿತವರು. ಇಂದು ಅವರ ಹೆಸರು ಭಾರತದ ಅದ್ಯಂತ ಪ್ರಸಿದ್ಧವಾಗಿದೆ. ತಿರುವಾಂಕೂರು, ಕೊಚ್ಚಿ ಸರಕಾರದ ಉದಾರಾಶ್ರಯದಲ್ಲಿ ಈಗ ಕಲಾ ಮಂಡಲ ನಡೆಯುತ್ತಿದೆ.

ಚೆಂಬಕೇಸರಿ ನಟನಾ ಕಲಾ ಮಂಡಲ ಇತ್ತೀಚೆಗಿನದು. ಶ್ರೀ| ಕುಂಜು ಕುರೂಪ್‌ರವರ ನೇತೃತ್ವದಲ್ಲಿ ಅದು ನಡೆಯುತ್ತದೆ. ಇನ್ನು ಇತರ ಪ್ರಸಿದ್ಧ ಕಥಕ್ಕಳಿ ಕೇಂದ್ರಗಳಲ್ಲಿ ಶಾಂತಿನಿಕೇತನ ಮತ್ತು ರುಕ್ಮಿಣಿ ದೇವಿಯ ಕಲಾಕ್ಷೇತ್ರ ಇವು ಪ್ರಸಿದ್ಧವಾದುವು. ಕುಂಜು ಕುರೂಪ್, ಚೆಂಬಕ್ಕುಲಮ್ ಪಚ್ಚು ಪಿಳ್ಳೆ, ಮಂಗಲಮ್ ನಂಬೂದ್ರಿ, ಚೆಂಗನ್ನೂರು ರಾಮನ್ ಪಿಳ್ಳೆ, ಚಂದು ಪಣಿಕ್ಕರ್ ಇವರು ಇಂದಿನ ಕಥಕ್ಕಳಿಯ ಹಿರಿಯ ಕಲಾವಂತರು. ಕಿರಿಯರಲ್ಲಿ ಕಲಾ ಮಂಡಲ ಕೃಷ್ಣನ್‌ನಾಯರ್, ಕುದಮಲೂರ್ ಕರುಣಾಕರನ್‌ನಾಯರ್ ಮತ್ತು ಕಲಾ ಮಂಡಲ ರಾಮನ್ ಕುಟ್ಟಿ ಇವರು ಪ್ರಸಿದ್ಧರಿರುತ್ತಾರೆ.

ಜಗತ್ಪ್ರಸಿದ್ಧವಾದ ಭಾರತದ ಈ ನಾಟ್ಯ ಕಲೆಯ ಉದ್ಧಾರಕ್ಕೆ ಸರಕಾರದ ಉದಾರ ಪ್ರೋತ್ಸಾಹ ದೊರೆಯುವುದು ಅತ್ಯವಶ್ಯ.

ದೇಶದಿಂದ, ಗಾಂಧಿ ಭಕ್ತರಲ್ಲಿ ಒಬ್ಬ ತನ್ನನ್ನು ಕಾಣಲುಬಯಸಿದಾಗ ಈನ್‌ಸ್ಟಿನ್ ಸಂತೋಷದಿಂದ ತನ್ನ ಭೆಟ್ಟಿ ಅಗರವಾಲುರಿಗೆ ದಯಪಾಲಿಸಿದ. ಈ ಈರ್ವರ ಸಂಭಾಷಣೆಯು ಕಾಲದಲ್ಲಿ ಮಹಾತ್ಮಾಜೀಯವರ ಪುತ್ರ ಮಣಿಲಾಲ ಗಾಂಧಿಯವರೂ ಹಾಜರಿದ್ದರು. ಈನ್‌ಸ್ಟಿನ್ ಗಾಂಧೀಜಿ ಬಗ್ಗೆ ಹೇಳಿದರು:—

"ಶತಮಾನಗಳು ಕಳೆದ ಮೇಲೆ, ಪಂಚಭೂತಾತ್ಮಕವಾದ, ನಶ್ವರವಾದ, ಎಲುಬು ಮಾಂಸಗಳ ಮುದ್ದೆಯ ಈ ಶರೀರವನ್ನು ಹೊತ್ತು, ವಿಭೂತಿ ಪುರುಷನೊಬ್ಬ ಈ ಭೂಲೋಕದಲ್ಲಿ ಆಗಿ ಹೋಗಿದ್ದ ಎಂದರೆ ಜನ ನಂಬಿಯಾರೆ?" ಸಾದಾ ಉಡುಪಿನ, ಸರಳ ಜೀವಿ ಈನ್‌ಸ್ಟಿನ್ ಮುಂದೆ ಮಾತನಾಡುತ್ತ ಹೇಳಿದರು:

"ಗಾಂಧೀಜಿ ಕೊಲೆಯ ವಾರ್ತೆ ಕೇಳಿ ನಾನು ದಿಗ್ಭ್ರಾಂತನಾದೆ. ಜಗತ್ತೇ ದುಃಖಸಾಗರದಲ್ಲಿ ಮುಳುಗಿತು. ಆದರೆ ಆತನನ್ನು ಕೊಲೆಮಾಡಿದ ಆ ಉನ್ಮತ್ತ ಹುಡುಗನಾರು?"

ಅಗರವಾಲರು, ಭಾರತದಲ್ಲಿನ ಹಿಂದೂ ಮುಸ್ಲಿಮ್ ಜಗಳದ ಪರಿಸ್ಥಿತಿ, ಅದರಿಂದಾಗಿ ಭಾರತವನ್ನು ಅನಿವಾರ್ಯವಾಗಿ ಹೋಳುಮಾಡಬೇಕಾಗಿ ಬಂದ ಪ್ರಸಂಗ ಎಲ್ಲ ವಿವರಿಸಿ ಇದರಿಂದ ಉನ್ಮತ್ತವಾದ ಗುಂಪಿನ ಹುಡುಗ ಈತ ಎಂದರು.

"ಗಾಂಧೀಜಿಯ ಸಾವೇ ಅವರಿಗೊಂದು ಜಯ. ಕಾರಣ ಪುರುಷರ ಸಾವೇ ಹೀಗೆ. ತನ್ನ ಅಭಿಪ್ರಾಯ ಜನದಲ್ಲಿ ಸಾರ್ವತ್ರಿಕವಾಗಿ ಪ್ರಚಾರದಲ್ಲಿದೆ ಇಲ್ಲ ಎಂಬುದೂ ಗಮನಿಸದೆ, ಎಂದೂ ಪೋಲಿಸ್ ರಕ್ಷಣೆ ಕೂಡ ಬೇಡದೆ, ಒಂಟಿಯಾಗಿ, ಗುಂಪಾಗಿ ತನ್ನ ಕೆಲಸ ಸಾಗಿಸಿದ ವ್ಯಕ್ತಿ ಗಾಂಧೀಜಿ. ಈತ ಅವತಾರಿ—ಎಂಬಲ್ಲಿ ಸಂದೇಹವಿಲ್ಲ" ಅಂದರು ಈನ್‌ಸ್ಟೀನ್. ಸ್ವಲ್ಪ ತಡದು,-

"ಗಾಂಧೀಜಿಯವರ ಗುಡಿ ಕೈಗಾರಿಕೆಗಳ ತಳಹದಿ ಮೇಲೆ ಆರ್ಥಿಕ ವಿಕೇಂದ್ರೀಕರಣತ್ವ, ಕೇವಲ ಭಾರತದ ಪರಿಸ್ಥಿತಿಗೆ ಮಾತ್ರ ಅನ್ವಯಿಸತಕ್ಕದೆಂದು ಅವರ ಭಾವನೆಯಿತ್ತೆ ಅಥವಾ ಲೋಕಕ್ಕೇ ಈ ಸೂತ್ರ ಅವರು ಉಪಯೋಗಿಸಿದರೇ?"

"ಅಹಿಂಸಾತ್ಮಕ ಸಮಾಜಕ್ಕೆ ವಿಕೇಂದ್ರೀಕರಣದ ಆರ್ಥಿಕ ನೀತಿ ಅನಿವಾರ್ಯ. ಈ ನೀತಿ ಜಗತ್ತೇ ಪಾಲಿಸುವುದು ಧರ್ಮ ಎಂಬುದು ಅವರ ಅಭಿಪ್ರಾಯವಾಗಿತ್ತು" ಎಂದರು ಮಣಿಲಾಲ ಗಾಂಧಿ.

ಈನ್‌ಸ್ಟಿನ್ ಅಂದರು "ಸಮಾಜದ ಮುಂದಿನ ಬದಲಾವಣೆಯ ರೂಪ ವಿಕೇಂದ್ರೀಕರಣದ್ದಾಗಿರಬೇಕು ನಿಜ. ಆದರೆ ಇದು ಹ್ಯಾಗೆ ಸಾಧ್ಯವೊ? ಈ ವಿಪರೀತ ಕೇಂದ್ರೀಕರಣದ ನೀತಿಯು ಸರಕಾರಗಳು ಈ ವಿಕೇಂದ್ರೀಕರಣ ನೀತಿಯನ್ನು ಆಕ್ರಮಿಸಲಾರವೆ? ಸ್ಥಾನೀಕ ವಿಕೇಂದ್ರೀಕರಣ ಸಾಧ್ಯ ಎಂಬುದು ನನ್ನ ಅಭಿಪ್ರಾಯ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಬದುಕಿಗಾಗಿ ತಾನೇ ದುಡಿಯಬೇಕು. ವ್ಯಕ್ತಿಸ್ವಾತಂತ್ರ್ಯ ವ್ಯಕ್ತಿ ವಿಕಾಸವನ್ನ ಕೇಂದ್ರೀಕರಣ ನೀತಿ ಅಪಹರಿಸಬಾರದು: ನಾನೊಬ್ಬ ತತ್ವ ಒಪ್ಪಿದ ಸಾಮ್ಯವಾದಿ." ಎಂದರು ಈನ್‌ಸ್ಟಿನ್: [ಇಂಡಿಯಾ ಸರಕಾರದ ವಿಪರೀತ ಕೇಂದ್ರೀಕರಣ ನೀತಿಯ ರಾಷ್ಟ್ರವಾದಿಗಳು, ಪ್ರಾಂತವಾದ ವಿರೋಧಿಸುವವರು, ಈ ಮಾತು ಗಮನಿಸಬೇಕು—ಲೇಖಕ.]

ಅಲ್ಲಿಂದ ಮಾತು ಇತರ ವಿಚಾರಗಳ ಕಡೆ ಸರಿಯಿತು. ಶ್ರೀಮತಿ ಅಗರವಾಲ ಮಧ್ಯೆ ಮಾತನಾಡುತ್ತ ಪ್ರೊಫೆಸರರನ್ನು ಉದ್ದೇಶಿಸಿ "ಆಧುನಿಕ ಜೀವನದಲ್ಲಿ ಹೆಣ್ಣಿನ ಪಾತ್ರವೇನು?" ಎಂದಳು: "ಇಂಡಿಯದಲ್ಲಿ ಹೆಣ್ಣಿನ ಕರ್ತವ್ಯ ಸ್ಪಷ್ಟವಾಗಿದೆ. ಅವರು ಹೆಚ್ಚು ಮಕ್ಕಳನ್ನು ಹೆರಬಾರದು" ಅಂದರು ಈನ್‌ಸ್ಟಿನ್ ನಗುತ್ತ.

ಶ್ರೀಮತಿ ಅಗರವಾಲ: "ಇಲ್ಲಿ ಗಂಡಸಿನ ಕರ್ತವ್ಯದ ಭಾಗವೂ ಇಲ್ಲವೆ?"

ಪ್ರೊಫೆಸರ್ "ನಿಶ್ಚಯ. ಹೆಂಸಿಗಗೆ ಹೆಚ್ಚು ಆರ್ಥಿಕ ರಕ್ಷಣೆ ಕೊಡಬೇಕು. ಯೂರೋಪ ಮತ್ತು ಅಮೇರಿಕೆಯ ಹಾಗೆ ಅವರನ್ನು ಹಿಂದಿಡಬಾರದು."

ಶ್ರೀಮತಿಯವರು "ಸಮಾಜದ ಮತ್ತು ಗಂಡಸಿನ ನೀತಿಯ ಮಟ್ಟವನ್ನು ಏರಿಸುವ ಬಗೆ ಹೇಗೆ?"

ಉತ್ತರ: "ಇದಕ್ಕೆ ಸರ್ವಸಾಧಾರಣದ ಪರಿಹಾರ ಏನೂ ಇಲ್ಲ. ಆದರೆ ಪ್ರತಿ ಗಂಡು ಹೆಣ್ಣು, ತನ್ನ ಆತ್ಮಶೋಧನೆಯ ಕೆಲಸದಲ್ಲಿ ನಿರತರಾಗಬೇಕು. ಇವತ್ತು ನಮಗೆ ತ್ಯಾಗಕ್ಕಿಂತ ಭೋಗ ಹೆಚ್ಚಿನದಾಗಿದೆ. ಆದ್ದರಿಂದಲೇ ಮಾನವ ಹೆಚ್ಚು ಹೆಚ್ಚು ಬಯಕೆ ಉಳ್ಳವನಾಗಿ ಸ್ವಾರ್ಥಿಯಾಗಿದ್ದಾನೆ. ಮನುಷ್ಯತ್ವವನ್ನು ಹಾಳು ಮಾಡುವುದೇ ಈ "ಅತಿ ಬಯಕೆ", ಹಣಗಳಿಸುವುದು. ಶಾಲೆಗಳು, ವಿದ್ಯಾಸಂಸ್ಥೆಗಳು ಇವತ್ತು ಈ ಕೆಲಸವನ್ನು ಬಹು ಮಟ್ಟಿಗೆ ಸಾಧಿಸಬಹುದು."

ಮಣಿಲಾಲ ಗಾಂಧಿ ಕೇಳಿದರು: "ಅಂತರಾಷ್ಟ್ರೀಯ ಸಮಿತಿಯಿಂದ ಏನಾದರೂ ಲಾಭ ದೊರೆತೀತೆ?"

ಉತ್ತರ: "ಇದರ ಹುಟ್ಟಿನಲ್ಲೇ ಬಾಲಗ್ರಹ ದೋಷವಿದೆ."

ಪ್ರಶ್ನೆ: "ಮೂರನೆಯ ಯುದ್ಧದ ವಿಚಾರ ನೀವೇನು ಹೇಳುವಿರಿ?"

ಉತ್ತರ: "ಹೌದು, ಬಹುಮಂದಿ ಈ ಮಾತು ಆಡುತ್ತಾರೆ. ಆದರೆ ಯಾರಿಗೂ ಯುದ್ಧ ಬೇಕಿಲ್ಲ. ರಾಜಕೀಯದಲ್ಲಿ ಉನ್ಮತ್ತರಾದ ಕೆಲವು ಸೇನಾನಾಯಕರು ಅಧಿಕಾರ ದಾಹದಿಂದ ಯುದ್ಧಪ್ರವೃತ್ತ ಕೆಲಸದಲ್ಲಿ ನಿರತರಾಗಿ ಹುಚ್ಚರಂತೆ ನಡಕೊಳ್ಳುತಿದ್ದಾರೆ. ಇದು ದುರದೃಷ್ಟ." ಕೊನೆಯದಾಗಿ ಈ ಭಾರತೀಯರಿಗೆ "ಮಾನವನಿಗೆ ಮಾನವತೆಯನ್ನು ಅರಿಯುವುದಕ್ಕಿಂತ ದೊಡ್ಡ ಧರ್ಮ ಬೇರೆ ಇಲ್ಲ" ಎಂಬ ಸಂದೇಶ ಹೇಳಿ ಸಂಭಾಷಣೆ ಮುಗಿಸಿದರು.

೨

ಎರಡನೆಯದಾಗಿ ಪ್ರಿನ್ಸಿಪಾಲ್ ಅಗರವಾಲರು ಕಂಡದ್ದು ವಿಶ್ವದ ಸಿದ್ಧ ಸಾಹಿತಿ ಶ್ರೀಮತಿ ಪರ್ಲ್‌ಬಕ್‌ಳನ್ನು. ಭಾರತದ ಉತ್ತಮ ಸ್ನೇಹಿತೆ ಶ್ರೀಮತಿ ಬಕ್. ಚೀನದ ವಿಚಾರ, ಅಲ್ಲಿನ ಚಿಯಾಂಗ್ ಸರಕಾರದ ಸೋಲಿಗೆ ಕಾರಣ, ಈ ವಿಚಾರಗಳ ಮಾತುಕತೆ ಮುಗಿಸಿ ಇಂಡಿಯದ ವಿಚಾರವಾಗಿ ಮಾತು ಕತೆ ನಡೆಯಿತು. ಗಾಂಧಿದೇಶದ ಮೇಲೆ ಇವಳಿಗೆ ತುಂಬ ಅಭಿಮಾನ.

ಇಂಡಿಯದ ವಿಚಾರ ಮಾತನಾಡುತ್ತ "ನಿಮ್ಮ ದೇಶದ ವಿಚಾರ ಸ್ವಲ್ಪ ನಾನು ಹೇಳುವುದಾದರೆ, ಕಾಂಗ್ರೆಸ್ ಸರಕಾರ ಚೀನಾದ ಚಿಯಾಂಗ್ ಸರಕಾರದ ಪತನದ ಕಾರಣ ತಿಳಿದು ನಡೆಯಬೇಕು. ನಿಮ್ಮ ನಾಯಕರು, ಸತ್ಯ, ಸರಳ ಜೀವನ ನಡಸಬೇಕು. ಜನ ಸಮೂಹದ ಜೀವನ ಅರಿತು, ಅವರೊಡನೆ ಬೆರೆತು ಅವರಂತೆ ನಡೆಯಬೇಕು. ಕಾಲದ ಪರಿಸ್ಥಿತಿ ಚೆನ್ನಾಗಿ ಅರಿತು ಅದರ ಮೌಲ್ಯ ಮರೆಯದೆ ನಡೆಯಬೇಕು.

ಅಗರವಾಲ ಕೇಳಿದರು "ನಮ್ಮ ಸರಕಾರದ ಧೋರಣೆ ವಿಕೇಂದ್ರೀಕರಣವಾಗಿರಬೇಕಲ್ಲವೆ?"

"ಉತ್ತರ:" ನನಗೆ ಈ ವಿಷಯದಲ್ಲಿ ಸ್ವಲ್ಪವೂ ಸಂಶಯ ವಿಲ್ಲ. ಚೀನಾದ ಪರಿಸ್ಥಿತಿ ಕಂಡೂ ಕಾಣದ ಕುರುಡನಂತಿರ ಬಾರದು: ಚೀನಾದಂತೆ ವಿಪರೀತ ಆರ್ಥಿಕ ಮತ್ತು ರಾಜ ಕೀಯ ಕೇಂದ್ರೀಕರಣ ನಡೆಸಹೋದರೆ, ನಿಮ್ಮ ಸರಕಾರ ಆ ಮೇಲೆ ಪಶ್ಚಾತ್ತಾಪ ಪಡಬೇಕಾದೀತು. ರಾಷ್ಟ್ರವಾದದ ಧೋರಣೆಯಲ್ಲಿ ಪ್ರಜಾಪ್ರಭುತ್ವದ ಕೊಲೆ ನಡೆಸಿ ಭಾರತದ ಪವಿತ್ರ ಚಾರಿತ್ರಿಕ ಸಂಸ್ಕೃತಿಗೆ, ಅದರ ಉತ್ತಮ ವಿಕೇಂದ್ರೀ ಕರಣ ನೀತಿಗೆ ಧಕ್ಕೆ ತರಬಾರದು.

"ನಿಮ್ಮ ಸಂದೇಶವೇನು"ಕೇಳಿದ್ದಕ್ಕೆ, ಭಗಿನಿ ಪರ್ಲ್‌ಬಕ್ ಹೇಳಿದಳು: "ನಿಮ್ಮ ಸರಕಾರ ದೇಶದಲ್ಲೂ, ಹೊರಗೂ ಸರಳ ಜೀವನ ನಡೆಸಲಿ. ನಿಮ್ಮ ದೇಶದ ರಾಯಭಾರಿಗಳು ವಿದೇಶ ದಲ್ಲಿ, ಚೀನಾದ ಮೇಡಂ ಚಿಯಾಂಗಳ ಹಾಗೆ ಹಣದ ಲಕ್ಷ್ಯ ವಿಲ್ಲದೆ ಬೆಡಗಿನ ರಾಣಿಯರಾಗಿ, ನೀತಿ ಮರೆತು ಮೆರೆಯ ದಿರಲಿ." ಎಂದು ಕಾಲೋಚಿತ ಹಿತನುಡಿ ಹೇಳಿದಳು.

೩

ಭಾರತದ ಹಿತಚಿಂತಕರಲ್ಲಿ ಇಂಗ್ಲೆಂಡಿನ ಪ್ರಸಿದ್ಧ ರಾಜ ಕಾರಣ ಪುರುಷ, ಸಾಮ್ಯವಾದಿ ಪ್ರೊಫೆಸರ್ ಹೆರಾಲ್ಡ್ ಲಾಸ್ಕಿ. ಅಗರವಾಲರು ಈ ಮಹಾನುಭಾವನನ್ನು ಲಂಡನ್ನಿನಲ್ಲಿ ಭೆಟ್ಟಿ ಮಾಡಿದರು: ಲಂಡನ್ ಸ್ಕೂಲ್ ಒಫ್ ಕಾಮರ್ಸ್‌ನ ಡೈರೆಕ್ಟರ್ ಸರ್ ಅಲೆಕ್ಸಾಂಡರ್ ಕಾರ್ ಸೌಂಡರ್ಸ್ ಗಾಂಧೀಜಿ ಯವರ ಪ್ರಿಯ ಶಿಷ್ಯೆ ಮೀರಾಬೆನ್ (ಮಿಸ್ ಸ್ಲೇಡ್)ಳ ಅಣ್ಣ. ಆತನ ಮನೆಯಲ್ಲಿ ಭೋಜನಕ್ಕಾಗಿ ಸೇರಿದ್ದಾಗ ಅಗರವಾಲ ರಿಗೆ ಲಾಸ್ಕಿಯ ದರ್ಶನವಾಯಿತು.

ಅಗರವಾಲರು ಅನೇಕ ವಿದ್ಯಾಸಂಸ್ಥೆಗಳ ಸ್ಥಾಪನಾ ಚಾರ್ಯರಾದ್ದರಿಂದ ಲಾಸ್ಕಿ ಅವರೊಡನೆ: "ನೀವು ನಿಮ್ಮ ದೇಶದ ಮಕ್ಕಳನ್ನು ಆರ್ಥಿಕ ಮತ್ತು ರಾಜಕೀಯ ನೀತಿ ಕಲಿಯಲು ಇನ್ನು ಮುಂದೆ ನಮ್ಮ ದೇಶಕ್ಕೆ ಕಳಿಸಬೇಡಿ. ನಿಮಗೆ ಬೇಕಾದದ್ದು ಇಂತಹ ವಿದ್ಯೆಯಲ್ಲ. ನಿಮ್ಮ ದೇಶಕ್ಕೆ ಈಗ ಹೆಚ್ಚು ಮಂದಿ ವಿಜ್ಞಾನಿಗಳು ಬೇಕು. ಯಂತ್ರ, ಕಾರ್ಖಾನೆ ಗಳಲ್ಲಿ ಕೆಲಸಮಾಡಲು ಬಲ್ಲವರು ಬೇಕು. ಬುದ್ಧಿವಂತರಿ ಗೇನು ನಿಮ್ಮ ದೇಶದಲ್ಲಿ ಕಮ್ಮಿಯಿಲ್ಲ. ಯುವಕರು ಹೆಚ್ಚು ಹೆಚ್ಚು ವಿದ್ಯಾರ್ಜನೆ ಗಳಿಸಬೇಕು. ಕೇವಲ ಕೆಲಸ ಹುಡುಕುವ ವಿದ್ಯೆಯಿಂದ ಏನು ಪ್ರಯೋಜನ? ಯೋಗ್ಯತೆಗೆ ಬೆಲೆ ಇಲ್ಲದಾಗುತ್ತದೆ."

ಅಗರವಾಲ ಕೇಳಿದರು: "ದೇಶವಿಚ್ಛೇದನ ಇಂಡಿಯಕ್ಕೆ ಬಹಳ ಅನ್ಯಾಯ ಮಾಡಿತಲ್ಲವೆ?"

ಉತ್ತರ: "ಹೌದು. ಯಾವ ದೇಶಕ್ಕೂ ಇದು ಒಳ್ಳೆಯ ದಲ್ಲ. ನಿಮ್ಮಲ್ಲಿ ಮಾತ್ರ ವಿಧಿಯಿಲ್ಲದೆ ನಡೆಯಿತು. ವಿಚ್ಛೇ ದನಕ್ಕೆ ನೀವು ಒಪ್ಪದಿದ್ದರೆ ನಿಮ್ಮಲ್ಲಿಂದ ಬ್ರಿಟಿಷರು ಕಾಲು ಕೀಳುತ್ತಲೇ ಇರಲಿಲ್ಲ. ಲಾರ್ಡ್ ಪೆಥಿಕ್ ಲಾರೆನ್ಸ್, ಗಾಂಧೀಜಿ ಈ ಸತ್ಯ ಅರಿತು, ಒಪ್ಪಿದರು. ಈಗಿನ ಲೇಬರ್ ಸರಕಾರ ನಿಮ್ಮ ಸ್ವಾತಂತ್ರ್ಯಕ್ಕೆ ಕಾರಣವಾಯ್ತು. ಕ್ರಿಪ್ಸ್ ಮಿಷನ್ ಲಿನ್ಲಿತ್‌ಗೊ ಮತ್ತು ಚರ್ಚಿಲ್ಲರಿಂದಾಗಿ ಯಶಸ್ವಿ ಯಾಗದಿರುವುದು ನಿಮಗೆ ನೆನಪಿಲ್ಲವೇ?"

ಪ್ರಶ್ನೆ: "ಪಾಕಿಸ್ತಾನ ಮತ್ತು ಭಾರತಕ್ಕೆ ಮುಂದಿನ ಭವಿಷ್ಯವೇನು?"

ಉತ್ತರ: "ನನ್ನ ಅಭಿಪ್ರಾಯ ಈ ಎರಡೂರಾಷ್ಟ್ರಗಳೂ ಚೆನ್ನಾಗಿ ಬದುಕುತ್ತವೆ. ಪಾಕಿಸ್ತಾನ ಮಾಡಿದ ಅಪರಾಧ ವನ್ನು ಮರೆತು ಇಂಡಿಯ ಸರಕಾರ ಸ್ನೇಹದಿಂದ ನಡಕೊಂಡರೆ ಮುಂದೆಯಾದರೂ ಇವೆರಡು ರಾಷ್ಟ್ರಗಳು ಒಂದಾಗುವುದು ಸಾಧ್ಯವಿದೆ."

ಮಾತು ಮುಂದೆ ಸುಭದ್ರ ಪ್ರಜಾಪ್ರಭುತ್ವ ನೀತಿಯ ರಾಷ್ಟ್ರದ ಬೆಳವಣಿಗೆಯ ಕಡೆಗೆ ತಿರುಗಿತು.

ಲಾಸ್ಕಿ ಹೇಳಿದರು: "ರಚನಾತ್ಮಕವಾದ ರಾಜಕೀಯ ಪಂಗಡಗಳ ಆವಶ್ಯಕತೆ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅತೀ ಅವಶ್ಯ. ಇಲ್ಲವಾದರೆ ಪ್ರಜಾಪ್ರಭುತ್ವ ನೀತಿ ಯಶಸ್ವಿ ಯಾಗದು. ಬಲವಾದ ವಿರೋಧ ಪಕ್ಷವಿಲ್ಲದಿದ್ದರೆ ಏಕ ಪಕ್ಷೀಯ ಆಡಳಿತದಿಂದ ಪ್ರಜಾಪ್ರಭುತ್ವ ಕುಂದುತ್ತದೆ. ಇವತ್ತು ಇಂಗ್ಲಾಂಡಿನ ಲೇಬರ್ ಪಕ್ಷವೂ ಈ ದೃಷ್ಟಿಯಲ್ಲಿ ಒಂದು ಅಪರಾಧಮಾಡಿದೆ, ಕಾರಣ ಇದರ ವಿರೋಧಪಕ್ಷ ಇವತ್ತೂ ಇರುವುದು ಅಲ್ಪ ಪಕ್ಷ. **ಮುಂದಿನ ಸಾರ್ವತ್ರಿಕ ಚುನಾವಣೆಯ ಒಳಗಾಗಿ ಇಂಡಿಯ ಬಲವಾದ ಜಾತ್ಯಾತೀತ ವಿರೋಧ ಪಕ್ಷವೊಂದನ್ನು ಕಟ್ಟಲೇ ಬೇಕು.**

ಉದಾಹರಣೆಗೆ ನೀವು ಕಾರ್ಮಿಕರ ಗುಂಪು ಕಟ್ಟಬಹುದು; ರೈತರ ಗುಂಪು ಕಟ್ಟಬಹುದು. ಬಂಡವಾಳ ಶಾಹಿಗಳದ್ದೇ ಒಂದು ಗುಂಪುಕಟ್ಟ ಬಹುದು. ಜಮೀನ್ದಾರರು ಒಂದು ಗುಂಪಾಗಬಹುದು. ಯಾವ ಗುಂಪೇ ಆಗಲಿ ಅದು ಜಾತೀಯ ಧೋರಣೆ ತಳೆದಿರಬಾರದು."

ಪ್ರಶ್ನೆ: "ಇಂಡಿಯ ಗಣರಾಜ್ಯದ ರಾಜ್ಯಾಂಗದ ಕುರಿತು ನಿಮ್ಮ ಅಭಿಪ್ರಾಯವೇನು?"

ಉತ್ತರ: "ಇದು ಬಹಳ ಗೊಂದಲವುಳ್ಳದ್ದಾಗಿದೆ. ಸರಳ, ಸುಲಭವಾದ ರಾಜ್ಯಾಂಗವಿರಬೇಕು. ಬ್ರಿಟಿಷ್, ಅಮೇರಿಕ, ಆಸ್ಟ್ರೇಲಿಯದ ಸಮ್ಮಿಶ್ರ ರಾಜ್ಯಾಂಗ ಇಂಡಿಯಕ್ಕೆ ಸರಿಹೋಗದು."

ಪ್ರಶ್ನೆ: "ಗಾಂಧೀಜಿಯವರ ವಿಕೇಂದ್ರಿಕರಣ ನೀತಿ ನೀವು ಒಪ್ಪುತ್ತೀರಾ?"

ಉತ್ತರ: "ನಿಶ್ಚಯವಾಗಿಯೂ ನಾನು ವಿಕೇಂದ್ರೀಕರಣ ನೀತಿಯನ್ನು ಒಪ್ಪುತ್ತೇನೆ. ಕೇಂದ್ರೀಕರಣ ನೀತಿಯಿಂದ ಮಾನವತೆಯೇ ಅಳಿದುಹೋಗುತ್ತದೆ. ವ್ಯಕ್ತಿವಿಕಾಸಕ್ಕೆ ಎಡೆಯೇ ಇರುವುದಿಲ್ಲ. (ಪ್ರಾಂತವಾದ ವಿರೋಧಿಗಳು ಈ ಮಾತು ಗಮನಿಸಲಿ."

—ಲೇಖಕ.)

ಕೇವಲ ಕೈಗಾರಿಕೆಗಳ ಮಟ್ಟಿಗೆ ಕೇಂದ್ರೀಕರಣ ನೀತಿಪಾಲಿಸುವುದು ಉಚಿತ. ಪ್ರಮುಖ ಕೈಗಾರಿಕೆಗಳನ್ನು ಖಾಸಗೀ ಆಡಳಿತಕ್ಕೆ ಬರುವುದಕ್ಕಿಂತ ರಾಷ್ಟ್ರವೇ ತೆಗೆದುಕೊಂಡು ನಡೆಸುವುದು ಉಚಿತ."

ಪ್ರಶ್ನೆ: "ಇಂಡಿಯದ ಆರ್ಥಿಕ ಬೆಳವಣಿಗೆ ಬಗ್ಗೆ ಏನು ಯೋಜನೆ ಅವಶ್ಯ?"

ಉತ್ತರ: "ನಿಮ್ಮಲ್ಲಿ ಮುಖ್ಯ ಪ್ರಶ್ನೆ ಉದರಪೋಷಣೆಯದ್ದು. ಲಂಗಣಹಾಕುತ್ತಿರುವವರು ಏನು ಯೋಚಿಸಿಯಾರು? ಹೆಚ್ಚು ಆಹಾರ ಬೆಳೆಸಿ ಎಂದು ಬರವಣಿಗೆ ರಾಶಿ ಹಾಕುವುದಕ್ಕಿಂತ ಆಚರಣೆಯಲ್ಲಿ ತರುವುದು ಮೇಲು."

ಲಾಸ್ಕಿ ಪ್ರಶ್ನಿಸಿದರು: "ಇಂಡಿಯದಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಬಲ ಹೇಗಿದೆ?"

ಅಗರವಾಲರ ಉತ್ತರ: "ಬಂಗಾಳದಲ್ಲಿ ಹೈದರಾಬಾದಿನ ಕೆಲವೆಡೆಯಲ್ಲಿ, ಅಲ್ಲಿ, ಇಲ್ಲಿ ಆಗಿಂದಾಗ ಪುಂಡಾಟಕೆ ನಡೆಸಿ ಯಶಸ್ವಿಯಾಗಿದ್ದಾರೆ. ಜನರ ಬೆಂಬಲ ಇವರಿಗೆ ಖಂಡಿತ ಇಲ್ಲ. ಹಾಗೆಂದಮೇಲೆ ಇವರು ಹೇಗೆ ಬೆಳೆದುಬರುತ್ತಾರೆ?"

ಲಾಸ್ಕಿ: "ನಿಮ್ಮಲ್ಲಿ ಕಮ್ಯುನಿಸಂ ನಾಶವಾಗಬೇಕೆಂಬುದು ನಿಮ್ಮ ಇಚ್ಛೆಯಾದರೆ ನೀವು ಮೊದಲು ನಿಮ್ಮ ಬಂಡವಾಳ ಶಾಹಿಗಳನ್ನು ನಾಶಪಡಿಸಬೇಕು. ನಮ್ಮಲ್ಲಿ ನೂರು ವರ್ಷದ ಹಿಂದೆ ಇದ್ದ ಇಂಗ್ಲಿಷ್ ವರ್ತಕರಂತೆ ಇದ್ದಾರೆ ನಿಮ್ಮ ಬಂಡವಾಳಶಾಹಿಗಳು."

ಕಾಶ್ಮೀರದ ವಿಚಾರ ಮಾತನಾಡುತ್ತಾ "ಕಾಶ್ಮೀರದ ವಿಚಾರದಲ್ಲಿ ಇಂಡಿಯದ ವ್ಯಾಜ್ಯ ಏನೂ ಇಲ್ಲ ಎಂಬುದು ನನ್ನ ಅಭಿಪ್ರಾಯ. ಕಾಶ್ಮೀರದ ಮೇಲೆ ದಾಳಿ ನಡೆಸಿ ಪಾಕಿಸ್ತಾನ ಒಂದು ಮೂರ್ಖ ಕೆಲಸವಮಾಡಿದೆ. ಇಂಡಿಯ ಅದನ್ನು ಎದುರಿಸಲು ಹೋಗಿ ಇನ್ನೊಂದು ಮೂರ್ಖ ಕೆಲಸ ಮಾಡಿದೆ. ಕಾಶ್ಮೀರ ಬಹುಸಂಖ್ಯೆ ಮುಸಲ್ಮಾನರ ಸಂಸ್ಥಾನ. ವಿಷಯ ಹೀಗಿದ್ದು ಜನಗಣನೆಯ ಫಲಿತಾಂಶ ಏನು ಎಂಬುದು ಈಗಲೇ ಊಹಿಸಬಹುದು."

ಹೆರಾಲ್ಡ್ ಲಾಸ್ಕಿಯವರ ಈ ಅಭಿಪ್ರಾಯ ಇಂಡಿಯದ ರಾಜಕಾರಣಿಗಳಿಗೆ ಆಶ್ಚರ್ಯವನ್ನುಂಟುಮಾಡದಿರದು.

೪

ಈನ್‌ಸ್ಟಿನ್ ಪ್ರಸಿದ್ಧ ವಿಜ್ಞಾನಿ. ಪರ್ಲ್‌ಬಕ್ ಸಾಹಿತಿ, ಹೆರಾಲ್ಡ್ ಲಾಸ್ಕಿ ರಾಜಕಾರಣ ಪುರುಷ, ಹೀಗೆ ಮೂವರ ಅಭಿಪ್ರಾಯವನ್ನು ಶಿಕ್ಷಣ ಶಾಸ್ತ್ರಜ್ಞರೂ ಪ್ರಸಿದ್ಧ ವಿದ್ವಾಂಸರೂ, ಗಾಂಧಿ ಭಕ್ತರೂ ಆದ ಶ್ರೀ ಅಗರವಾಲರು ತಮ್ಮ ಯಾತ್ರೆಯಲ್ಲಿ ಸಂಗ್ರಹಿಸಿದ್ದಾರೆ. ಭಾರತಕ್ಕೆ ಇವು ಉಪಯುಕ್ತವಾದ ಸಲಹೆಗಳು. ನಮ್ಮ ಬಗ್ಗೆ ಹೊರಗಿನವರ ಅಂಬೋಣ ಏನು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಸಂಗ್ರಹಿಸಿ ಹೇಳುತ್ತೇನೆ.

(೧) ವಿಪರೀತ ಕೇಂದ್ರೀಕರಣ ನೀತಿ ರಾಷ್ಟ್ರವಾದದ ಕಡೆ ಎಳೆದು ಸರ್ವಾಧಿಕಾರ ಪ್ರಾಪ್ತವಾಗುತ್ತದೆ. ಮಾನವತೆಯ ತಳಹದಿಯ ಮೇಲೆ ಬೆಳೆದುಬಂದ ಪ್ರಜಾಪ್ರಭುತ್ವ ತತ್ವ ಇದರಿಂದ ನಾಶವಾಗುತ್ತದೆ.

(೨) ರಾಷ್ಟ್ರಪದ ವ್ಯಕ್ತಿ ವಿಕಾಸಕ್ಕೆ, ವಿಚಾರ ಸ್ವಾತಂತ್ರ್ಯಕ್ಕೆ ಅವಕಾಶಕೊಡುವುದಿಲ್ಲ. ಆದ್ದರಿಂದಲೇ ಗಾಂಧೀಜಿ ವಿಕೇಂದ್ರೀಕರಣ ತತ್ವ ಬೋಧಿಸಿದ್ದು. ಪ್ರಾಂತವಾದ ಅರಾಷ್ಟ್ರೀಯ ಅನ್ನುವವರು ಇತ್ತ ಗಮನಿಸಲಿ.

(೩) ದಿನೇ ದಿನೇ ಹೆಚ್ಚುತ್ತಿರುವ ಇಂಡಿಯದ ಪ್ರಜಾಸಂಖ್ಯೆ ತಡೆಗಟ್ಟುವಲ್ಲಿ ಗಂಡಸಿನ ಜವಾಬ್ದಾರಿ ಬಹಳ ಮಟ್ಟಿಗೆ ಇದೆ.

(೪) ಇಂಡಿಯಾ ಸರಕಾರ ಚೈನಾದ ಚಿಯಾಂಗರ ಪತನದ ಕಾರಣ ಅರಿತು ತನ್ನ ದೇಶದ ಒಳಗೂ ಹೊರಗೂ ಸತ್ಯ, ಸರಳ ಜೀವನ ನಡೆಸಲು ಪ್ರಯತ್ನಿಸಬೇಕು.

(೫) ದೇಶದಲ್ಲಿ ಔದ್ಯೋಗಿಕ, ವೈಜ್ಞಾನಿಕ ಶಿಕ್ಷಣ ಹೆಚ್ಚಿಸಬೇಕು.

(೬) ರಚನಾತ್ಮಕವಾದ ಜಾತೀಯತೆಯಿಂದ ದೂರವಾದ ರಾಜಕೀಯ ವಿರೋಧ ಪಕ್ಷ ಒಂದು ಇಂಡಿಯದಲ್ಲಿ ಮಹಾಚುನಾವಣೆಗೆ ಮುನ್ನ ಬೆಳೆದುಬರಬೇಕು. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ವಿರೋಧ ಪಕ್ಷ ಬೇಕು.

ಭಾರತದ ಖನಿಜ ಸಂಪತ್ತು

ಲೇಖಕರು: ಶ್ರೀ. ಬಿ. ಎ. ದಯಾನಾಥ, ಬೆಂಗಳೂರು.



ಹತ್ತೊಂಭತ್ತನೇ ಶತಮಾನದಲ್ಲಾದ ಔದ್ಯೋಗಿಕ ಮತ್ತು ಆರ್ಥಿಕ ಪಲ್ಲಟಕ್ಕೂ ಬಹಳ ಹಿಂದೆ ನಮ್ಮ ಭಾರತವು "ಏಸ್ಯಖಂಡದ ವ್ಯವಸಾಯದ ಮಾತೆ" ಮತ್ತು "ಪ್ರಪಂಚದ ಔದ್ಯೋಗಿಕ ಕಾರ್ಖಾನೆ" ಎಂದು ಖ್ಯಾತಿಗೊಂಡಿತ್ತು. ಹತ್ತಿ, ಗೋದಿ, ಸಕ್ಕರೆಯನ್ನು ಹೊರಗಡೆ ಭಾರತದಿಂದ ರಫ್ತುಮಾಡುತ್ತಿದ್ದಲ್ಲಿ, ಇಲ್ಲಿ ತಯಾರಾದ ಅತ್ಯಂತ ನಯವಾದ ಹತ್ತಿ ಮತ್ತು ರೇಶ್ಮೆ ಬಟ್ಟೆಗಳನ್ನು ಪ್ರಪಂಚದ ನವನಾಗರಿಕ ದೇಶಗಳೆಲ್ಲಾ ಬಯಸುತ್ತಿದ್ದವು. ಅಷ್ಟೇಕೆ, ೧೬೦೦ರಿಂದ ೧೭೭೦ರ ವರೆಗೆ ಭಾರತಕ್ಕೆ ಸ್ವರ್ಣ ಯುಗವೆಂದು ಹೆಸರು. ನಮ್ಮ ಮರದ ಮತ್ತು ದಂತದ ಕೆತ್ತನೆಯ ಕೆಲಸವೂ ಮತ್ತು ಅಮೂಲ್ಯವಾದ ಕಲ್ಲುಗಳ ಮತ್ತು ಲೋಹಗಳ ತಯಾರಿಕೆಯು ಪರರಾಷ್ಟ್ರಗಳನ್ನು ಬೆರಗುಗೊಳಿಸಿತ್ತು. ಆ ಮೇಲೆ ಬ್ರಿಟಿಷರ ಔನ್ನತ್ಯವು ನಮ್ಮ ಆರ್ಥಿಕ ದುರ್ವ್ಯವಸ್ಥೆಗೆ ಕಾರಣವಾಯಿತು. ನಮ್ಮ ಪದಾರ್ಥವನ್ನು ಒತ್ತಾಯಪೂರ್ವಕವಾಗಿ ಕಮ್ಮಿ ಬೆಲೆಗೆ ಕೊಂಡು ಹೆಚ್ಚುಹೆಚ್ಚಿನ ಲಾಭಗಳಿಸಿ, ಹೀಗೆ ಶೇಖರಿಸಿದ ಧನದಿಂದ ತಮ್ಮ ರಾಜ್ಯವನ್ನು ಕೈಗಾರಿಕಾಕ್ಷೇತ್ರದಲ್ಲಿ ಮುಂದುವರಿದ ರಾಷ್ಟ್ರವನ್ನಾಗಿ ಮಾಡಲು ತೊಡಗಿದರು.

ನಮ್ಮ ಭಾರತವು ಚಿನ್ನ, ಕಬ್ಬಿಣ ಮತ್ತು ವಜ್ರಗಳಿಗೆ ಬಹಳ ಖ್ಯಾತಿಗೊಂಡಿತ್ತು. ಹಿಂದೆ ಸಾಲೊಮನ್ ರಾಜ್ಯವಾಳುತ್ತಿದ್ದ ಕಾಲದಲ್ಲಿ ದಂತ, ವಜ್ರ, ನವಿಲು ಮತ್ತು ಚಿನ್ನಗಳು ದಕ್ಷಿಣ ಭಾರತದಿಂದಲೇ ಬಂದವೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಹೈದರಾಬಾದಿನ (ದಖಣ) ರಾಯಚೂರಿನಲ್ಲಿ ಚಿನ್ನವನ್ನು ಆಧುನಿಕ ರೀತಿಯಲ್ಲಿ ತಯಾರಿಸದೇ ಇದ್ದಾಗ್ಯೂ ಬೇರೆ ಯಾವ ಕಡೆಯಲ್ಲೂ ಹೋಗದೇ ಇದ್ದ ಆಳದಷ್ಟು, ಅಂದರೆ ೬೫೦ ಅಡಿಗಳಷ್ಟು ಕೊರೆದಿದ್ದರು. ಅವರು ಉಪಯೋಗಿಸಿದ ಸಾಮಾನುಗಳು ಕ್ರಿ. ಪೂ. ೫೦೦ ಆದಾಗ್ಯೂ ಕಲ್ಲಿನ ಯುಗಕ್ಕೆ ಸಂಬಂಧಪಟ್ಟವುಗಳಾಗಿದ್ದವು. ನಾವು ಕಲ್ಲಿನ ಯುಗದಿಂದ ನೇರವಾಗಿ ಕಬ್ಬಿಣ ಯುಗಕ್ಕೆ ಬಂದವರು. ಏಕೆಂದರೆ ನಮ್ಮಲ್ಲಿ ತಾಮ್ರ ಮತ್ತು ತಗಡು ಅತ್ಯಂತ ಅಪರೂಪವಾಗಿ ದೊರಕುವುದೇ ಕಾರಣ. ಚೈನಾ ದೇಶದವರು ನಮ್ಮಲ್ಲಿ ವ್ಯವಹರಿಸುವುದಕ್ಕೆ ಮುಂಚೆಯೇ ನಾವು ಚಿನ್ನ ತೆಗೆಯುವುದನ್ನು ನಿಲ್ಲಿಸಿದ ಹಾಗೆ ಕಾಣುವುದು, ಅಲ್ಲಲ್ಲಿ ದೇಶೀಯ ಪದ್ಧತಿಯಿಂದ ಚಿನ್ನವನ್ನು ನದೀಪಾತ್ರಗಳಲ್ಲಿ ತೆಗೆಯುವ ರೂಢಿ ಬಂದಿದೆ. ಆದರೆ ಹಿಂದಿನ ಶತಮಾನದ ಉತ್ತರಾರ್ಧದಿಂದ ನವೀನ ಪದ್ಧತಿಯಿಂದ ಮೈಸೂರು ಸಂಸ್ಥಾನದ ಕೋಲಾರದ ಗಣಿಯಲ್ಲಿ ಫಲದಾಯಕವಾಗಿ ತೆಗೆಯುತ್ತಿದ್ದಾರೆ.

ಕ್ರೈಸ್ತನ ಕಾಲಕ್ಕೂ ಹಿಂದೆ ಭಾರತದ 'ವುಟ್ಸ್ ಸ್ಟೀಲ್' ಎಂದರೆ ಹೆಸರುವಾಸಿ; ಇದನ್ನು ಮೆಡಿಟರೇನಿಯನ್‌ಗೂ ಮತ್ತು ಮಧ್ಯ ಏಷ್ಯಾಕ್ಕೂ ರವಾನಿಸುತ್ತಿದ್ದರು. ಇದರಿಂದ ಲೋಕಪ್ರಸಿದ್ಧವಾದ 'ಡೆಮಾಸ್ಕಸ್' ಬ್ಲೇಡನ್ನು ತಯಾರಿಸುತ್ತಿದ್ದರು. ಈ ಉಕ್ಕನ್ನು ಒರಟು ಪದ್ಧತಿಯಿಂದ ತಯಾರಿಸಿದ್ದಾಗ್ಯೂ, ಈಗಿನ 'ಸಿಮೆಂಟೇಷನ್' ಪದ್ಧತಿಯ ರೀತಿಯನ್ನೇ ಅನುಸರಿಸಿದ್ದಿತು. ಆ ಹಳೆಯ ಕಾಲದ ಉಕ್ಕು ಎಷ್ಟು ಅತ್ಯುತ್ತಮವಾಗಿತ್ತೆನ್ನುವುದಕ್ಕೆ 'ಕುತುಬ್ ಮಿನಾರ್' ಎದುರಿನ ೨೩ ಅಡಿ

---

(೭) ಆಹಾರ ಬೆಳವಣಿಗೆಯ ಕಾರ್ಯದಲ್ಲಿ ಮಾತಿಗಿಂತ ಕೃತಿ ಕಡೆ ಹೆಚ್ಚು ಗಮನ ಕೊಡಬೇಕು.

(೮) ಬಹುಸಂಖ್ಯಾಕ ಮುಸಲ್ಮಾನ ರಾಷ್ಟ್ರವಾದ ಕಾಶ್ಮೀರದ ಒಲವು ಹೇಗೆ ಎಂಬುದು ಜನಗಣನೆಯಿಂದ ತಿಳಿಯಬೇಕೇ? ಇಂಡಿಯಾ ಸರಕಾರ ಪಾಕಿಸ್ತಾನದೊಡನೆ ಈ ವ್ಯವಹಾರಕ್ಕೆ ಕೈಹಾಕಿ ಹುಚ್ಚು ಕೆಲಸಮಾಡಿದೆ. ಪಾಕಿಸ್ತಾನ ಆಕ್ರಮಿಸಿದ್ದು ಮೊದಲ ತಪ್ಪು ಎಂಬುದಾಗಿ ಬ್ರಿಟಿಷರ ಭಾವನೆ.

"ಮೊಡರ್ನ್ ರಿವ್ಯೂ"ನಲ್ಲಿ ಅಗಾಗ ಪ್ರಕಟವಾಗುತ್ತಿದ್ದ ಪ್ರೊಫೆಸರ್ ಶ್ರೀ ಎಸ್. ಎನ್. ಅಗರವಾಲರ ವಿದೇಶ ಯಾತ್ರೆಯ ಅನುಭವದ ಕುರಿತ ಲೇಖನಗಳ ಆಧಾರದಿಂದ ಈ ಲೇಖನಕ್ಕೆ ವಿಷಯ ಸಂಗ್ರಹಿಸಿಕೊಂಡಿದೆ.—ಲೇಖಕ.

೮ ಅಂಗುಲ ಉದ್ದವಾದ ಸ್ತಂಭವೇ ನಿದರ್ಶನ. ಇದು ಬಹುಶಃ ಕ್ರಿ. ಶ. ೪೧೫ ದಲ್ಲಿ ತಯಾರಿಸಿದ್ದಿರಬಹುದು ಎಂದು ನಂಬಲಾಗಿದೆ. ಈಗ ನವೀನ ರೀತಿಯಿಂದ ಕೆಲವಾರು ಕಡೆ ಭಾರತದಲ್ಲಿ ತಯಾರಿಸುತ್ತಿದ್ದಾರೆ.

ಬ್ರೆಜಿಲ್‌ನ ವಜ್ರಗಳನ್ನು ಕಂಡುಹಿಡಿಯುವುದಕ್ಕೆ ಮುಂಚೆಯೇ ಭಾರತವು ವಜ್ರಗಳನ್ನು ತೆಗೆಯುವುದರಲ್ಲಿ ಪ್ರಪಂಚದಲ್ಲೆಲ್ಲಾ ಮೊದಲಾಗಿದ್ದಿತು. ಪ್ರಸಿದ್ಧವಾದ ಚಾರಿತ್ರಿಕ ವಜ್ರಗಳೆಲ್ಲಾ ಗೋಲ್ಕಂಡವೊಂದರಲ್ಲೇ ಸಿಗುತ್ತಿದ್ದವು. ಆದರೆ ಈಗ ಅವು ಅಲ್ಲಲ್ಲಿ ಸಿಗುತ್ತವೆ.

ಭಾರತದ ಖನಿಜಸಂಪತ್ತನ್ನು ತಿಳಿಯಲು ಭೂಶಾಸ್ತ್ರಜ್ಞರು ನಮ್ಮ ಭಾರತವನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಂಡಿದ್ದಾರೆ. ಮೊದಲನೆಯದಾಗಿ ವಾಯುವ್ಯದಿಂದ ಈಶಾನ್ಯದ ವರೆಗೆ ೧೬೦೦ ಮೈಲಿ ಆವರಿಸಿರುವ ಹಿಮಾಲಯ ಪರ್ವತಶ್ರೇಣಿ. ಇದು ಅತ್ಯಂತ ಉದ್ದವಾದ, ಅಗಲವಾದ ಮತ್ತು ಎತ್ತರವಾದ ಪರ್ವತವಾದಾಗ್ಯೂ ಕೂಡ ಇಲ್ಲಿ ದೊರಕುವ ಖನಿಜ ಅಲ್ಪ. ಆದರೆ ಇದರ ಇಕ್ಕಡೆಗಳಲ್ಲಿಯೂ ದಕ್ಷಿಣಕ್ಕೆ ಚಾಚಿ ಎಲ್ಲಿ ಕೊನೆಗೊಳ್ಳುವದೋ ಅಲ್ಲಿ ಹೊಸ ಹೊಸದಾಗಿ ಚಿಕ್ಕ ಚಿಕ್ಕ ಬಂಡೆರಾಶಿಗಳು ಆ ಹಳೆಯ ಪರ್ವತದ ಮೇಲೆ ನಿಂತಹಾಗಿದೆ. ಇಂಥಾ ಪ್ರದೇಶವಾದ ಪಂಜಾಬ್ ಮತ್ತು ಅಸ್ಸಾಂಗಳಲ್ಲಿ ಪೆಟ್ರೋಲಿಯಂ ಎಣ್ಣೆಯೂ, ಉಪ್ಪೂ ಹೇರಳವಾಗಿ ಸಿಗುತ್ತವೆ. ದಿಗ್ಬೋಯಿ ಒಂದರಲ್ಲೇ ೬೬೦ ಗ್ಯಾಲನ್‌ಗಳಷ್ಟು ಎಣ್ಣೆಯನ್ನು ತೆಗೆಯುತ್ತಿದ್ದಾರೆ. ಇದಲ್ಲದೆ ಸೀಮೆಯೆಣ್ಣೆ ಡೀಸೀಲ್ ಎಣ್ಣೆ, ಗ್ರೀಸ್ ಮತ್ತು ವ್ಯಾಕ್ಸ್‌ಗಳನ್ನೂ ತಯಾರಿಸುತ್ತಿದ್ದಾರೆ. ಉಪ್ಪು ಅತ್ಯಂತ ಬೇಕಾದ ವಸ್ತು. ಇದು ರಾಜಪುತಾನದಲ್ಲಿ ಒಣಗಿದ ಸಾಗರದ ಪಾತ್ರಗಳಲ್ಲಿ ಸಿಗುತ್ತವೆ. ಬೊಂಬಾಯಿ ಮತ್ತು ಮದರಾಸಿನಲ್ಲಿ ಉಪ್ಪನ್ನು ಸಮುದ್ರ ನೀರನ್ನು ಕಾಯಿಸಿ ಆವೀರೂಪ ಮಾಡಿ ತಯಾರಿಸುತ್ತಾರೆ. ಇದು ಸಾಕಾಗದೆ ಭಾರತವು ೩ರಿಂದ ೪ ಸಾವಿರ ಟನ್‌ಗಳಷ್ಟು ಉಪ್ಪನ್ನು ಆಮದುಮಾಡುತ್ತಿದೆ.

ಸಿಂಧೂ ಮತ್ತು ಗಂಗಾಪ್ರದೇಶಗಳ ಫಲವತ್ತಾದ ಮೈದಾನದ ಮರಳು ಮತ್ತು ಮಣ್ಣಿನಿಂದ ಮಡಕೆಗಳನ್ನು ಮತ್ತು ಮನೆಕಟ್ಟುವ ಇಟ್ಟಿಗೆಗಳನ್ನೂ ತಯಾರಿಸುತ್ತಾರೆ. ಮೂರನೆಯದಾಗಿ ಹೇರಳ ಖನಿಜಸಂಪತ್ತಿನಿಂದ ಕೂಡಿದ ದಖನ್ ಪ್ರದೇಶ. ಇಲ್ಲಿ ಎಣ್ಣೆ, ಉಪ್ಪು ಬಿಟ್ಟರೆ ಇತರ ಎಲ್ಲಾ ಭಾರತದ ಖನಿಜಗಳೂ ಇಲ್ಲಿ ಸಿಗುತ್ತವೆ. ಇಲ್ಲಿ ಚಿನ್ನ, ಕಬ್ಬಿಣ, ಮ್ಯಾಂಗನೀಸ್, ತಾಮ್ರ ಮತ್ತು ಪ್ಲಾಟಿನಂ ಎಂಬ ಲೋಹಗಳೂ ಮತ್ತು ಕೈಗಾರಿಕೆಗಳಲ್ಲಿ ಉಪಯೋಗಿಸಬಹುದಾದ ಕಾಗೆ ಬಂಗಾರ, ಮಾಗ್ನಸೈಟ್, ಗ್ರಾಫೈಟ್ ಮುಂತಾದವುಗಳೂ ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತಿವೆ.

೧೯೩೮ರಲ್ಲಿ ಭಾರತದಲ್ಲಿನ ಖನಿಜದ ತಯಾರಿಕೆಯು ಸುಮಾರು ೩೪ ಕೋಟಿ ರೂಪಾಯಿಗಳು. ಇದರಲ್ಲಿ ಕಲ್ಲಿದ್ದಲು, ಮ್ಯಾಂಗನೀಸ್, ಚಿನ್ನ, ಕಾಗೆ ಬಂಗಾರ ಮತ್ತು ಪೆಟ್ರೋಲಿಯಂ ಇವುಗಳೊಂದೊಂದರಲ್ಲೂ ಕೂಡ ಒಂದೂವರೆ ಕೋಟಿ ರೂಪಾಯಿಗಳಷ್ಟು ಆಯಿತು.

ಭಾರತದಲ್ಲಿ ಕಲ್ಲಿದ್ದಲು ಅತ್ಯಂತ ಮುಖ್ಯವಾದ ಖನಿಜ. ಕಲ್ಲಿದ್ದಲು ತೆಗೆಯುವುದರಲ್ಲಿ ಭಾರತವು ಪ್ರಪಂಚಕ್ಕೇ ಒಂಭತ್ತನೆಯದು. ಇದನ್ನು ತೆಗೆಯಲು ೧೯೩೮ರಲ್ಲಿ ೨೨೬೦೦೦ ಕಾರ್ಮಿಕರನ್ನು ಇಟ್ಟುಕೊಂಡು ಸುಮಾರು ೨೮॥ ಟನ್‌ಗಳಷ್ಟು ಕಲ್ಲಿದ್ದಲನ್ನು ತೆಗೆದರು. ಇದು ಪ್ರಪಂಚದ ಒಟ್ಟು ಉತ್ಪತ್ತಿಯಲ್ಲಿ ಸೇಕಡಾ ೨ರಷ್ಟು. ಇದರಲ್ಲಿ ರೈಲ್ವೆಯವರು ಸುಮಾರು ೧/೩ ಭಾಗದಷ್ಟು ಕೊಂಡುಕೊಳ್ಳುವರು. ಕೈಗಾರಿಕೆಯವರು ಸುಮಾರು ೨೫ ಟನ್‌ಗಳಷ್ಟೂ ಉಪಯೋಗಿಸುತ್ತಾರೆ. ಇನ್ನು ಮಿಕ್ಕಿದ್ದನ್ನು ಫ್ಯಾಕ್ಟರಿ ಮುಂತಾದವುಗಳಿಗೆ ಹಂಚುತ್ತಾರೆ. ಗಟ್ಟಿ ಇದ್ದಲಿಗಿಂತ ಮೆದು ಇದ್ದಲನ್ನು ಮನೆಗಳಲ್ಲಿ ಉಪಯೋಗಿಸುತ್ತಾರೆ. ಆದರೆ ಇದು ಅತ್ಯಂತ ಅಲ್ಪ. ಕಲ್ಕತ್ತಾವಿಗೆ ೧೩೦ ಮೈಲು ದೂರದಲ್ಲಿರುವ ರಾಣಿಗಂಜ್, ಬೊಕಾರೊ, ಕರನ್‌ಪುರ, ಜಾರಿಯಾ ಎಂಬ ಸ್ಥಳಗಳಲ್ಲಿ ಹೇರಳವಾಗಿ ಕಲ್ಲಿದ್ದಲನ್ನು ತೆಗೆಯುತ್ತಿದ್ದಾರೆ.

ಒಂದು ದೇಶದ ಕೈಗಾರಿಕಾ ಅಭಿವೃದ್ಧಿಯು ಆ ದೇಶದಲ್ಲಿ ಎಷ್ಟು ಕಬ್ಬಿಣ ಮತ್ತು ಉಕ್ಕು ತಯಾರಾಗುತ್ತದೆ ಎಂಬುದರ ಮೇಲೆ ನಿಂತಿದೆ. ಭಾರತದ ಕಬ್ಬಿಣದ ಸಂಪತ್ತು ಬ್ರೆಜಿಲ್‌ನ್ನು ಬಿಟ್ಟರೆ ಪ್ರಪಂಚಕ್ಕೇ ಮೊದಲನೆಯದು. 'ಜಿಯಲಾಜಿಕಲ್ ಸರ್ವೆ ಆಫ್ ಇಂಡಿಯಾ' ಶಾಖೆಯವರು ಭಾರತದಲ್ಲಿ ೩೦೦ ಕೋಟಿ ಕಬ್ಬಿಣದ ಅದಿರು ಸಿಗುತ್ತದೆಂದು ಅಭಿಪ್ರಾಯಪಟ್ಟಿದ್ದಾರೆ. ಇದು ಬರೀ ಬಿಹಾರ ಮತ್ತು ಇತರ ಪೂರ್ವ ಸಂಸ್ಥಾನಗಳದ್ದಾಯಿತು. ಇದಲ್ಲದೆ ಮಧ್ಯಪ್ರಾಂತ್ಯ, ಮೈಸೂರು ಸಂಸ್ಥಾನದಲ್ಲಿರುವ ಬಾಬಾಬುಡನ್‌ಗಿರಿ ಮತ್ತು ಇತರ ಕೆಲವು ಪ್ರದೇಶಗಳಲ್ಲಿ ೬೦ ಕೋಟಿ ಟನ್ ಸಿಗುತ್ತದೆ. ಈ ಅದಿರಿನಲ್ಲಿ ಸೇಕಡಾ ೬೪ರಷ್ಟು ಕಬ್ಬಿಣ ಇರುತ್ತದೆ. ಜಾಮ್‌ಶೇದ್ ಪುರದಲ್ಲಿ ತಾತಾ ಆಯರ್ನ್ ವರ್ಕ್ಸ್‌ನವರೂ, ಅಸನ್‌ಸಾಲಿನಲ್ಲಿ 'ಇಂಡಿಯನ್ ಆಯರ್ನ್ ಅಂಡ್ ಸ್ಟೀಲ್ ವರ್ಕ್ಸ್‌'ನವರೂ ಮತ್ತು ಮೈಸೂರು ಸಂಸ್ಥಾನದಲ್ಲಿರುವ ಭದ್ರಾವತಿಯಲ್ಲಿ 'ಮೈಸೂರು ಆಯರ್ನ್ ಅಂಡ್ ಸ್ಟೀಲ್ ವರ್ಕ್ಸ್'ನವರೂ ಉಕ್ಕನ್ನು ತಯಾರಿಸುತ್ತಿದ್ದಾರೆ. ೧೯೩೮ರಲ್ಲಿ ಮೊದಲಿನ ಎರಡು ಕಂಪೆನಿಗಳು ಒಟ್ಟು ೧,೨೬೪,೮೦೦ ಟನ್‌ಗಳಷ್ಟು ಉಕ್ಕನ್ನು ತಯಾರಿಸುತ್ತಿದ್ದರು. ಈಗಿನ ಕೈಗಾರಿಕಾ ಸಾಧಾರಣೆಯ ಪ್ರಕಾರ ಇನ್ನು ಕೆಲವು ವರ್ಷಗಳಲ್ಲಿ ೨॥ ಲಕ್ಷ ಟನ್‌ಗಳಷ್ಟು ಉಕ್ಕನ್ನು ತಯಾರಿಸಬೇಕೆಂದಿದ್ದಾರೆ.

ಭಾರತದಲ್ಲಿ ಪ್ರಪಂಚದ ೧/೩ ಭಾಗದಷ್ಟು ಮ್ಯಾಂಗನೀಸ್ ಲೋಹ ದೊರಕುತ್ತದೆ. ಇದರ ಬೆಲೆಯು ಸುಮಾರು ೪½ ಕೋಟಿ ರೂಪಾಯಿಗಳು. ಇದನ್ನು ಜಾಸ್ತಿ ಉಕ್ಕಿನ ತಯಾರಿಕೆಗೋಸ್ಕರ ಉಪಯೋಗಿಸುವುದರಿಂದ ಇದರ ಬೆಲೆಯು ವ್ಯತ್ಯಾಸಹೊಂದುತ್ತಾ ಇರುತ್ತದೆ. ಆದರೆ ಈಗ ಇಂಗ್ಲೆಂಡ್ ಮತ್ತು ಅದರ ಕಾಮನ್‌ವೆಲ್ತ್ ರಾಷ್ಟ್ರಗಳು, ಫ್ರಾನ್ಸ್, ಅಮೇರಿಕಾ ಮತ್ತು ಬೆಲ್ಜಿಯಂ ದೇಶಗಳಿಂದ ಇದಕ್ಕೆ ಬೇಕಾದಷ್ಟು ಗಿರಾಕಿಯಿದೆ. ನಮ್ಮ ದೇಶದಲ್ಲೇ ೬೦,೦೦೦ ಟನ್‌ಗಳಷ್ಟು ಮ್ಯಾಂಗನೀಸ್ ಲೋಹವನ್ನು ಉಕ್ಕಿನ ತಯಾರಿಕೆಗೆ ಉಪಯೋಗಿಸುತ್ತಿದ್ದಾರೆ. ಈ ಲೋಹವನ್ನು ರಾಸಾಯನಿಕ ಕ್ಷೇತ್ರದಲ್ಲೂ, ಒಣ ಬ್ಯಾಟರಿಗಳಿಗೂ, ಗಾಜಿನ ಬಣ್ಣವನ್ನು ಹೋಗಲಾಡಿಸುವುದಕ್ಕೂ ಮತ್ತು ಕ್ರಿಮಿನಾಶಕ ಕಾರ್ಯಕ್ಕೂ ಉಪಯೋಗಿಸುತ್ತಾರೆ. ಇದು ಜಾಸ್ತಿಯಾಗಿ ಬಾಲಘಾಟ್, ನಾಗಪುರ, ಬಂಡಾರ(ಮಧ್ಯಪ್ರಾಂತ್ಯ) ಸೊಂಡೂರು ಸಂಸ್ಥಾನ, ವಿಜಯನಗರ ಮತ್ತು ಬಿಹಾರಿನಲ್ಲಿರುವ ಸಿಂಗಭೂಮ್ ಎಂಬಲ್ಲೂ ಸಿಗುತ್ತದೆ. ಇದರ ಅದಿರು ಗುಡ್ಡದೋಪಾದಿಯಲ್ಲಿರುವುದರಿಂದ, ಇದನ್ನು ತೆಗೆಯಲು ಕುಶಲ ಕಾರ್ಮಿಕರ ಅವಶ್ಯಕತೆಯಿಲ್ಲದೆ ಬಹಳ ಕಮ್ಮಿ ಖರ್ಚಿನಿಂದ ತೆಗೆಯಬಹುದು.

ಚಿನ್ನವು ಮೈಸೂರು ಕೋಲಾರ ಗಣಿಯಲ್ಲಿ ಹೇರಳವಾಗಿ ಸಿಗುತ್ತದೆ. ಇಲ್ಲಿನ ಎರಡು ಗಣಿಗಳಾದ ಛಾಂಪಿಯನ್ ರೀಫ್ ಮತ್ತು ಉರಿಗಾಂ ಗಣಿಗಳಲ್ಲೇ ೮೦೦೦ ಅಡಿಗಳ ಆಳದ ವರೆಗೂ ಕೊರೆದುಕೊಂಡು ಹೋಗಿದ್ದಾರೆ. ಪ್ರಪಂಚದಲ್ಲಿ ಇನ್ನೆಲ್ಲೂ ಇಷ್ಟು ಆಳದ ಚಿನ್ನದ ಗಣಿಯಿಲ್ಲ. ಇನ್ನೂ ೧೦,೦೦೦ ಅಡಿ ಆಳದ ವರೆಗೆ ಹೋದರೂ ಚಿನ್ನ ಸಿಗುವುದು ಕಮ್ಮಿಯಾಗುವದಿಲ್ಲವೆಂದು ನಂಬಿದ್ದಾರೆ. ಪ್ರಪಂಚದಲ್ಲಿ ದೊರಕುವ ಚಿನ್ನದಲ್ಲಿ ಇದು ಶೇಕಡಾ ೨ ಭಾಗವಾದರೂ, ಕೋಲಾರದ ಗಣಿಯೊಂದರಲ್ಲೇ ಒಟ್ಟು ೩೩೦,೦೦೦ ಔನ್ಸ್‌ಗಳಷ್ಟು ತೆಗೆಯುತ್ತಾರೆ. ಇದಲ್ಲದೇ ಚಿನ್ನದ ಗಣಿ ತೆಗೆಯುವ ಕಂಪೆನಿಗಳು ಬೊಂಬಾಯಿಯ ಧಾರ್‌ವಾರ್‌ನಲ್ಲೂ, ಮದ್ರಾಸಿನಲ್ಲಿರುವ ಅನಂತಪುರ ಮತ್ತು ವೈನಾಡಿನಲ್ಲೂ ಕೆಲಸಮಾಡಿದ್ದಾರೆ. ಹೈದರಾಬಾದಿನ ಹಟ್ಟಿ ಗಣಿಯಲ್ಲಿ ೧೦ ಲಕ್ಷ ಪೌಂಡ್ ಗಳಷ್ಟು ತೆಗೆದಿದ್ದಾರೆ.

ಚಿನ್ನವನ್ನು ಶುದ್ಧಿಮಾಡುವಾಗ ಸಿಗುವ ೨೫,೦೦೦ ಔನ್ಸ್ ಬೆಳ್ಳಿ ಬಿಟ್ಟರೆ, ಇನ್ನೆಲ್ಲೂ ಭಾರತದಲ್ಲಿ ಬೆಳ್ಳಿಯ ತಯಾರಿಕೆಯಿಲ್ಲ.

ಕಾಗೆ ಬಂಗಾರವು ಭಾರತದಲ್ಲಿ ಪ್ರಪಂಚದ ೩/೪ ಭಾಗದಷ್ಟು ಸಿಗುತ್ತದೆ. ಇದರಲ್ಲಿ ಸೇಕಡಾ ೮೦ರಷ್ಟು ಬಿಹಾರಿನಲ್ಲೂ, ಸೇಕಡಾ ಇಪ್ಪತ್ತರಷ್ಟು ಮದರಾಸಿನ ನೆಲ್ಲೂರಿನಲ್ಲೂ ಸಿಗುತ್ತದೆ. ೬೦ ಮೈಲಿ ಉದ್ದವಾದ ೧೨ ಮೈಲಿ ಅಗಲವಾದ ಕಾಗೆ ಬಂಗಾರದ ಪ್ರದೇಶ ಬಿಹಾರಿನಲ್ಲಿದೆ. ಇದರಿಂದ ೧೫೦೦ ಅಡಿ ಅಗಲವಾದ ಮತ್ತು ೧೦೦ ಅಡಿಯಷ್ಟು ದಪ್ಪವಾದ ಕಾಗೆ ಬಂಗಾರವನ್ನು ತೆಗೆಯಬಹುದು. ಬಿಹಾರಿನ ಕುಶಲ ಕಾರ್ಮಿಕರು ಇದರಿಂದ ೧/೧೦೦ ಇಂಚು ದಪ್ಪವಿರುವ ಕಾಗೆ ಬಂಗಾರವನ್ನು ಬಿಡಿಸಿ ತೆಗೆಯುವುದರಲ್ಲಿ ಪ್ರವೀಣರು. ಈ ಬಿಡಿಸುವ ಕುಶಲತೆಗೋಸ್ಕರವೇ ಪರರಾಷ್ಟ್ರಗಳಿಂದ ಟನ್‌ಗಳಷ್ಟು ಕಾಗೆ ಬಂಗಾರದ ಗಟ್ಟಿಗಳು, ಬಿಡಿಸಿ ಕಳುಹಿಸಲು, ಕಳುಹಿಸುತ್ತಾರೆ.


೧೯೧೪ರಿಂದ ಸಿಮೆಂಟಿನ ತಯಾರಿಕೆಯು ವೃದ್ಧಿಯಾಗುತ್ತಲೇ ಇದೆ. ಇದರ ಉತ್ಪತ್ತಿ ವರ್ಷಕ್ಕೆ ೨೦ ಲಕ್ಷ ಟನ್ ಗಳಷ್ಟು. ಇದಕ್ಕೆ ಬೇಕಾದ ಜಿಪ್ಸಂ ಮತ್ತು ಮ್ಯಾಗ್ನಸೈಟ್ ಪಂಜಾಬ್ ಮತ್ತು ಮದ್ರಾಸಿನಿಂದಲೂ ಬರುತ್ತದೆ. ಜಿಪ್ಸಂನಿಂದ ಪ್ರಸಿದ್ಧವಾದ 'ಪ್ಲಾಸ್ಟರ್ ಆಫ್ ಪ್ಯಾರಿಸ್'ಎಂಬ ಪದಾರ್ಥವನ್ನು ತಯಾರಿಸುತ್ತಾರೆ. ಇದು ಪಂಜಾಬಿನಲ್ಲೂ, ಬಲೂಚಿಸ್ಥಾನದಲ್ಲೂ, ತಿರುಚಿನಾಪಳ್ಳಿಯಲ್ಲಿಯೂ ಸಿಗುತ್ತದೆ. ಮ್ಯಾಗ್ನಸೈಟನ್ನು ಭಾರತದಲ್ಲಿ ೨೬,೦೦೦ ಟನ್ ಗಳಷ್ಟು ತಯಾರಿಸುತ್ತಾರೆ. ಇದರಲ್ಲಿ ೨೫೦೦ ಟನ್‌ಗಳಷ್ಟು ಮೈಸೂರಿನಿಂದಲೂ ಮಿಕ್ಕವು ಸೇಲಂದಿಂದಲೂ ಬರುತ್ತದೆ. ಈ ಲೋಹದ ರಾಶಿಯು ೧೪೦ ಅಡಿಗಳ ಎತ್ತರವಿರುವ ಗುಡ್ಡದೋಪಾದಿಯಲ್ಲಿ ದೊರಕುತ್ತದೆ.

ಭಾರತದಲ್ಲಿ ತಾಮ್ರ, ತಗಡು, ಸೀಸ ಮತ್ತು ಸತುವು ಸಿಗುವುದು ಅಪರೂಪ. ಸತುವನ್ನು ರಾಜಪುತಾನದಲ್ಲಿ ತಯಾರಿಸಲು ಉದ್ಯುಕ್ತರಾಗಿದ್ದಾರೆ. ಬಿಹಾರಿನ ಸಿಂಗ್ ಭೂಮ್ ಎಂಬಲ್ಲಿ ತಾಮ್ರವನ್ನು ತೆಗೆಯಲು ಒಂದು ಕಂಪೆನಿಯು ಶುರುಮಾಡಿದೆ. ೧೯೩೮ರ ವರೆಗೆ ಸೇಕಡಾ ೩ ಭಾಗವುಳ್ಳ ೮೫೨,೩೦೦ ಟನ್‌ಗಳಷ್ಟು ತಾಮ್ರವನ್ನು ತೆಗೆದಿದ್ದಾರೆ.

ಇದಲ್ಲದೆ ಇಲ್ಮನೈಟ್, ಮಾನೊಸೈಟ್ ಎಂಬ ಲೋಹಗಳು ಸಿಕ್ಕುವುದು ಭಾರತದಲ್ಲಿ ಮಾತ್ರ. ಇದು ತಿರುವಾಂಕೂರಿನಲ್ಲಿ ಹೇರಳವಾಗಿ ಸಿಗುತ್ತದೆ. ೧೯೩೮ರಲ್ಲಿ ಇದರ ತಯಾರಿಕೆಯು ೨೫೨,೨೨೦ ಟನ್‌ಗಳಷ್ಟು.

ಅಲ್ಯೂಮಿನಿಯಂ ಲೋಹವು ಮುಖ್ಯವಾಗಿ ಬಾಕ್ಸೈಟ್ ರೂಪದಲ್ಲಿ ಸಿಗುತ್ತದೆ. ಇದನ್ನು ಜಬ್ಬಲ್ಪುರಿನಲ್ಲಿರುವ ಕಾಟ್ನಿಯಲ್ಲೂ, ಮಧ್ಯಪ್ರಾಂತದಲ್ಲೂ, ಬೊಂಬಾಯಿಯ ಕೈರಾ ಪ್ರಾಂತದಲ್ಲೂ ತಯಾರಿಸುತ್ತಿದ್ದಾರೆ. ೧೯೩೮ರಲ್ಲಿ ೧೫೦೦೦ ಟನ್‌ಗಳಷ್ಟು ಆಗಿದ್ದಿತು. ಈ ಲೋಹವನ್ನು ಜಾಸ್ತಿಯಾಗಿ ಪೆಟ್ರೋಲಿಯಂ ಶುದ್ಧೀಕರಣದಲ್ಲೂ ಆಲಂ ಎಂಬುದನ್ನು ತಯಾರಿಸುವುದಕ್ಕೂ ಉಪಯೋಗಿಸುತ್ತಾರೆ.

ಇದಲ್ಲದೆ ಭಾರತದಲ್ಲಿ ಸಾಲ್ಟ್‌ಪೀಟರ್, ಚೈನಾ ಮಣ್ಣು, ಸ್ಟೀಟೈಟ್ (ಫೇಸ್ ಪೌಡರ್‌ಗೆ ಉಪಯೋಗಿಸುವ ಪದಾರ್ಥ) ಬಾರೈಟ್ (ಬಣ್ಣ ಹಾಕಲು ಉಪಯೋಗಿಸುವ ವಸ್ತು), ಅಸ್



ಬರ್ಮಾದ ಶ್ವೇಡಗನ್ ದೇವಾಲಯದಲ್ಲಿ ಒಂದು ಮರದ ಕಮಾನು ಮತ್ತು ಮರದ ಝಾಲರಿ.

ವರದಕ್ಷಿಣೆ

ನಾಟಕ

ಶ್ರೀ। ಕೆ. ಗುಂಡಣ್ಣ.



[ಈ ನಾಟಕವನ್ನು ಆಲ್ ಇಂಡಿಯಾ ರೇಡಿಯೋ ಬೊಂಬಾಯಿ ಮತ್ತು ಮೈಸೂರುಗಳಿಂದ ಪ್ರಸಾರಮಾಡಲಾಗಿದೆ.]

ಪಾತ್ರ ಪರಿಚಯ:

೧. ರಂಗಣ್ಣ:—ಹೈಸ್ಕೂಲು ಉಪಾಧ್ಯಾಯ.
೨. ಲಕ್ಷ್ಮಮ್ಮ:—ಇವರ ಅರ್ಧಾಂಗಿ.
೩. ಗೌರಿ:—ಇವರ ಮಗಳು.
೪. ರಾಮರಾಯರು:—ಅಮಲ್ದಾರ್.
೫. ಕಮಲಮ್ಮ:—ರಾಯರ ರಾಣಿ.
೬. ಮೂರ್ತಿ:—ಇವರ ಮಗ.
೭. ಗಣೇಶರಾಯರು:—ಓರ್ವ ಧನಿಕ.

ದೃಶ್ಯ ೧.

[ದೇವರ ಪೂಜೆಯಲ್ಲಿ ನಿರತರಾಗಿರುವ ರಂಗಣ್ಣನವರು]

ರಂಗಣ್ಣ: ಮಂಗಳಂ ಕೋಸಲೇಂದ್ರಾಯ
ಮಹನೀಯ ಗುಣಾತ್ಮನೇ ।
ಚಕ್ರವರ್ತಿ ತನೂಜಾಯಾ
ಸಾರ್ವಭೌಮಾಯ ಮಂಗಳಂ ॥

....ಲಕ್ಷ್ಮೀ....ಲಕ್ಷ್ಮೀ ಮಂಗಳಾರತಿ ತಗೋ ಬಾ.

ಲಕ್ಷ್ಮಮ್ಮ: (ಒಳಗಿನಿಂದ) ಬಂದೇ ಅಂದ್ರೇ.

ರಂಗಣ್ಣ: ಗೌರೀನೂ ಕರೀ....ಗೌರೀ....ಗೌರೀ

ಗೌರಿ: ಬಂದೇ ಅಣ್ಣಾ.

ರಂಗಣ್ಣ: ಗೌರೀ ಬಾಮ್ಮ,....ನಮಸ್ಕಾರ ಮಾಡು ದೇವರಿಗೆ.

ಗೌರಿ: ಆಗ್ಲಿ ಅಣ್ಣಾ (ನಮಸ್ಕಾರ ಮಾಡುವಳು).

ರಂಗಣ್ಣ: ಏನು ವರಾ ಬೇಡಿದೆಯಮ್ಮ ದೇವರ್‍ನಾ?

ಗೌರಿ: ನಾನು ವರಾ ಬೇಡಲಿಲ್ಲಾ ಅಣ್ಣ;....'ನಮ್ಮ ಈ ಬಡತನಾ ಹೋಗಲಾಡಿಸಿ ಅಪಾರ ಐಶ್ವರ್ಯ ಕೊಡೂ' ಅಂತ ಬೇಡಿದೆ ಅಣ್ಣಾ.

ರಂಗಣ್ಣ: 'ಒಳ್ಳೇ ಗಂಡನನ್ನು ಕೊಡಪ್ಪಾ' ಅಂತ ಬೇಡಲಿಲ್ಲವೇ?

ಗೌರಿ: ಬಡತನಾ ಮಾಯವಾಗಿ ಐಶ್ವರ್ಯ ಬಂದ್ರೇ ಗಂಡಂದಿರುಗೇನಪ್ಪಾ ಕಡಿಮೆ!

ರಂಗಣ್ಣ: ಲಕ್ಷ್ಮೀ,....ಕೇಳಿದೆಯಾ ಗೌರಿ ಬೇಡಿಕೆ!

ಲಕ್ಷ್ಮಮ್ಮ: ಬಡತನದ ಬಾಳಿನಲ್ಲೇ ಬೆಳೆದು ಬೆಂಡಾಗಿರೋ ಮನಸ್ಸು ಇನ್ನೇನನ್ನು ತಾನೇ ಕೇಳೀತು;....ಏನೋ....ಆ ದೇವರೇ ಗೌರಿಗೆ ತಾಯಿ ತಂದೆ;....ನಡೀ ಗೌರಿ, ಆ ಜರತಾರಿ ಸೀರೆ ಉಟ್ಕೋ ಹೋಗಮ್ಮ.

ರಂಗಣ್ಣ: ಇದೇನೇ!!...'ಬಡತನಾ...ಬಡತನಾ' ಅಂತಾ ಇದ್ದ ಬಾಯಲ್ಲಿ 'ಜರತಾರಿ ಸೀರೆ' ಅಂತಾ ಇದ್ದೀಯಾ!!

ಲಕ್ಷ್ಮಮ್ಮ: ಇನ್ನು ಹೆಣ್ಣು ನೋಡೋಕೆ ಬರುವವರ ಎದುರಿಗೆ ಈ ಜರಡೀ ಸೀರೆ ಉಡಿಸಿ ನಿಲ್ಲಿಸಬೇಕೇನೋ;....ಪಕ್ಕದ್ಮನೇ ಇಂದ ತಗೊಂಡ್ಬಂದಿದ್ದೀನಿ.

ರಂಗಣ್ಣ: ಲಕ್ಷ್ಮೀ........ಗಂಡನ ಮನೆಯವರು ಸೀರೆ ನೋಡಿ ಒಪ್ಪಬೇಕಾಗಿಲ್ಲ; ಗೌರೀ ರೂಪ ನೋಡಿ ಒಪ್ಪಬೇಕು.

ಲಕ್ಷ್ಮಮ್ಮ: ಆದ್ರೇ ರೂಪಕ್ಕೆ ತಕ್ಕ ಉಡಿಗೆ ಬೇಡವೇ?....ಹೋಗೇ ಗೌರಿ,....ಏನೋ ಮಾತು ಕೇಳ್ತಾ ನಿಂತ್ಕೊಂಡು ಬಿಟ್ಟಳು....ಅವರೂ ಬರೋ ಹೊತ್ತಾಯ್ತು.

ರಂಗಣ್ಣ: ರಾಮರಾಯರೇನೋ ಒಳ್ಳೆಯವರೇ ಅಂತ ಕೇಳಿದ್ದೀನಿ....ಏನೋ ನಮ್ಮ ಅದೃಷ್ಟ ಹೇಗಿದೋ....'ಹೆಣ್ಣು

ಬೆಸ್‌ಟಾಸ್, ಟಂಗ್‌ಸ್ಟನ್, ಬೆರಿಲ್, ಕೊರಂಡಂ ಎಂಬ ಇತರ ಲೋಹಗಳೂ ದೊರಕುತ್ತವೆ. ಇವೆಲ್ಲವುಗಳನ್ನೂ ಈ ಸಣ್ಣ ಪ್ರಬಂಧದಲ್ಲಿ ವಿಶದವಾಗಿ ಬರೆಯಲು ಅಸಾಧ್ಯ. ಇದರಲ್ಲಿ ಹೆಚ್ಚಿನ ಆಸಕ್ತಿಯುಳ್ಳವರು, 'ಇಂಡಿಯನ್ ಮಿನರಲ್ ವೆಲ್ತ್' ಮತ್ತು 'ಇಂಡಿಯನ್ ಮೈನಿಂಗ್' ಎಂಬ ಪುಸ್ತಕಗಳನ್ನು ನೋಡುವರೆಂಬ ಆಸೆ ನನಗಿದೆ.

ನೋಡೋಕೆ ಬರೋಕ್ಕಿಲ್ಲಾ ಒಳ್ಳೆಯವರೂ' ಅಂತಾನೇ ತಿಳ್ಕೊಂಡಿರುವುದು.

[ಅಷ್ಟರಲ್ಲಿ ಹೊರಗೆ ಮೋಟಾರು ಬಂದ ಶಬ್ದ]

ಲಕ್ಷಮ್ಮ: ಹೋ!....ನೋಡಿ ಅಂದ್ರೇ;....ಬಂದ್ರೂ ಅಂತ ಕಾಣುತ್ತೆ.

ರಂಗಣ್ಣ: ಹೌದು, ಬಂದ ಹಾಗಿದೆ....ಹೋ....ನಮಸ್ಕಾರ....ಬನ್ನೀ ರಾಮರಾಯರೇ.

ಲಕ್ಷಮ್ಮ: ಬನ್ನೀ ಕಮಲಮ್ಮನವರೇ......ಕೂತ್ಕೊಳ್ಳಿ. (ಎಲ್ಲರೂ ಕೂಡುವರು.)

ರಂಗಣ್ಣ: ಲಕ್ಷ್ಮಿ; ಗೌರೀನ ಕರ್ಕೊಂಡು ಬಾ....ಬಾಮ್ಮಾ ಗೌರೀ....ನಮಸ್ಕಾರ ಮಾಡಮ್ಮ ನಿನ್ನ ಅತ್ತೆ ಮಾವನವರಿಗೆ....ಬಾ ಹೀಗೆ, ಕೂತುಕೋ....ನೋಡಿ ರಾಮರಾಯರೇ, ಇರುವುದೊಂದೇ ಹೆಣ್ಣು; ಅವಳೇ ನನಗೆರಡು ಕಣ್ಣು. ....ನೀವೂ ದೊಡ್ಡ ಮನಸುಮಾಡಿ ಮಡಿಲಿನಲ್ಲಿ ಹಾಕಿಕೊಳ್ಳಬೇಕು....ಬಡವರ ಮನೆಯಲ್ಲಿ ಬೆಳೆದ ಹೆಣ್ಣು.

ಲಕ್ಷಮ್ಮ: (ಮಧ್ಯೆ ಬಾಯಿ ಹಾಕಿ) ಅಲ್ಪ ಸ್ವಲ್ಪ ಕೀರ್ತನೆಗಳನ್ನೂ ಹಾಡುತ್ತಾಳೆ....ಗೌರೀ, ಯಾವುದಾದರೂ ಒಂದು ಹಾಡೂ.

ಗೌರಿ: (ಮೆಲ್ಲಗೆ) ಯಾವುದು ಹೇಳಲಿ ಅಮ್ಮಾ?

ಲಕ್ಷಮ್ಮ: ಅಷ್ಟೊಂದು ಹಾಡು ಕಲಿತಿದ್ದೀಯಾ,....ಯಾವುದಾದರೂ ಒಂದು ಹಾಡು.

[ಗೌರೀ ಒಂದು ಕೀರ್ತನೆ ಹಾಡುವಳು.]

ಕಮಲಮ್ಮ: ಬೇಷ್; ಬಹಳ ಚೆನ್ನಾಗಿ ಹಾಡ್ತಾಳಮ್ಮಾ ....ಒಳ್ಳೇ ಕಂಠ.

ರಾಮ ರಾಯರು: ಮೂರ್ತಿ, ಹುಡುಗೀನ ಚನ್ನಾಗಿ ನೋಡು;....ನಿನಗೊಪ್ಪಿದರೆ ಬೇರೆ ವಿಷಯವನ್ನೆಲ್ಲಾ ಮಾತ್ನಾಡೋಣ.

ರಂಗಣ್ಣ: ಗೌರೀ....ಕೊಂಚ ಮುಖಾ ಮೇಲೆತ್ತಮ್ಮಾ; ....ನಿನ್ನ ಗಂಡನಿಗೂ ಮುಖ ತೋರಿಸೋಲ್ವೇ?

ರಾ. ರಾಯರು: ಮೂರ್ತಿ, ನೋಡಿದೆಯೋ ಹುಡುಗೀನಾ?....ಆಗ್ಲಿ ರಂಗಣ್ಣೋರೆ....ಹುಡುಗೀ ಜಾತಕಾ ಕೊಟ್ಟರಿ ....ಸರಿಹೋದ್ರೇ ಆ ಮೇಲೆ ಬಾಕಿ ವಿಷಯವೆಲ್ಲಾ ಮಾತ್ನಾಡೋಣ.

ರಂಗಣ್ಣ: ಲಕ್ಷ್ಮೀ, ಕೊಂಚ ಕಾಫೀ....ಇಗೋ ತೆಗೆದುಕೊಳ್ಳಿ ರಾಯರೇ ಜಾತಕ;....ದೊಡ್ಡ ಮನಸ್ಸು ಮಾಡಿ ಈ ಬಡವನ್ನ ಉದ್ಧಾರ ಮಾಡಬೇಕು.

ರಾ. ರಾಯರು: ಆಗ್ಲಿ ಸ್ವಾಮಿ,....ಎಲ್ಲಾ ದೇವರ ಇಚ್ಛೆ....ಹಾ! ನಾವಿನ್ನು ಹೋಗಿಬರ್ತೀವಿ....ನಮಸ್ಕಾರ.

ರಂಗಣ್ಣ: ನಮಸ್ಕಾರ....

[ರಾಮರಾಯರು ಕುಟುಂಬದೊಡನೆ ನಿರ್ಗಮನ]

ರಂಗಣ್ಣ:....ಪರಮಾತ್ಮಾ, ನಿನ್ನ ಕೃಪಾಕಟಾಕ್ಷ, ಈ ಬಡವರ ಮೇಲಿರಲಪ್ಪ....ಲಕ್ಷ್ಮೀ, ಹುಡುಗನು ಲಕ್ಷಣವಾಗಿದ್ದಾನೆ. ಗೌರಿ ಅದೃಷ್ಟ ಹೇಗಿದೆಯೋ....

ಲಕ್ಷಮ್ಮ: ಅಬ್ಬಾ, ಹತ್ತು ಗಂಡು ಹುಟ್ಟಿದರೂ ಸುಧಾರಿಸಬಹುದು....ಒಂದು ಹೆಣ್ಣಾದರೆ ಬಹಳ ಕಷ್ಟ.

ರಂಗಣ್ಣ: (ನಗುತ್ತಾ) ಅಯ್ಯೋ ಹುಚ್ಚಿ! ...'ಮಗನು ಮದುವೆಯಾಗುವ ವರೆಗೂ ಮಗ; ಮಗಳು ಸಾಯುವ ವರೆಗೂ ಮಗಳೇ' ಎಂಬ ನಾಣ್ಣುಡಿ ಕೇಳಿಲ್ಲವೇ?

ದೃಶ್ಯ ೨.

[ಆಗತಾನೆ ಮನೆಗೆ ಹಿಂದಿರುಗಿದ ರಾಮರಾಯರು]

ರಾ. ರಾಯರು: ಲೇ ಕಮಲೂ....ಕಮಲೂ....(ಒತ್ತಿ) ಲೇಕ್ಕಮ್ಲೂ.

ಕಮಲಮ್ಮ: (ಒಳಗಿನಿಂದ) ಕಾಫೀ ಶೋಧಿಸ್ತಾ ಇದೀನಿ ....ಬಂದೇ.

ರಾ. ರಾಯರು: ಹಾಳು ಕಾಫಿ....ಹೊಟ್ಟೇ ತುಂಬಾ ಲಕ್ಷಣವಾಗಿ ಊಟ ಮಾಡೋಕೆ ಗತಿ ಇಲ್ಲದಿದ್ರು ಈ ಕಾಫಿ ಮಾತ್ರಾ ಬಿಡೋಲ್ಲ....ಈ Government ನೋರು ನಂ ಸಂಬಳದ ಜೊತೆಗೆ "ಕಾಫೀ ಅಲೋಯನ್ಸ್" ಅಂತ ಒಂದು ಹತ್ರೂಪಾಯಿ ಕೊಡಬಾರ್ದೇ?

ಕಮಲಮ್ಮ: (ಪ್ರವೇಶಿಸುತ್ತ) ತಗೋಳಿ ಅಂದ್ರೇ ಕಾಫೀ ....ತಣ್ಣಗಾಗ್ಹೋಗತ್ತೆ ಕುಡಿದುಬಿಡಿ....(ರಾಯರು ಕಾಫಿ ಕುಡಿಯುತ್ತಿರುವರು).......ಜಾತಕಾ ತೋರಿಸಿಕೊಂಡು ಬಂದ್ರಾ ಅಂದ್ರೇ?

ರಾ. ರಾಯರು: ಜಾತಕವೇನೋ ತೋರಿಸಿದೆ....ಆದರೇ ಅವರ ಸಂಬಂಧ ಬೆಳೆಸೋಕೆ ಇಷ್ಟವಿಲ್ಲಾ ಕಮ್ಲೂ.

ಕಮಲಮ್ಮ: ಏಕೇ...., ನಕ್ಷತ್ರ ಚನ್ನಾಗಿಲ್ವೇ?

ರಾ. ರಾಯರು: ನಕ್ಷತ್ರದ ಮಾತಲ್ಲಾ ಕಮ್ಲೂ.... ಅವನು ಶುದ್ಧ ದರಿದ್ರಾ....ಅವನ ಸಂಬಂಧ ಬೆಳೆಸಿದರೆ ನಾಳೆ ನಾಲ್ಕು ಜನಾ ಏನಂದಾರು...."ಅಮಲ್ದಾರ್ ರಾಮರಾಯರು ಹೆಣ್ಣು ತಂದಿರೋ ಮನೇ ನೋಡಿ....ದರಿದ್ರ ಕುಟುಂಬ" ಅನ್ನೊಲ್ಲವೇ?

ಕಮಲಮ್ಮ: ಬಡವರ ಮನೇ ಹೆಣ್ಣು ತರುತ್ತೇನೆಯೋ ಹೊರತು ಅವರ ಬಡತನವನ್ನೇನು ಹೊತ್ತು ತರೋಲ್ವಲ್ಲಾ? ಮೂರ್ತಿ ಆ ಹುಡುಗೀನ ಒಪ್ಪಿದ್ದಾನೇ, ಬೇಕಾದ್ದಾಗಲಿ ಮದುವೇ ಮಾಡಿಬಿಡೋದು.

ರಾ. ರಾಯರು: (ತುಸು ಕೋಪ) ಹೂಂ!....ಮಾಡ್ಬಿಡು ....ಮಾಡ್ಬಿಡು,....ಮದುವೇ ಆದ್ರೇ ನಾಲ್ಕು ಜನಕ್ಕೆ ಊಟಕ್ಕೆ ಹಾಕೋಕೆ ಯೋಗ್ತೇ ಇಲ್ಲಾ ಇನ್ನು ಅವನು ಮದುವೇ ಮಾಡಿಸಿ....ಆಯ್ತು; ಎಲ್ಲಾ ನಂ ತಲೇ ಮೇಲೇ ಹೊತ್ಕೊಂಡು ಅವರ್ನ ಬೀಗರೂ ಅನ್ನಿಸ್ಕೋಬೇಕು....ವರದಕ್ಷಿಣೆ ಮೂರ್ಕಾಸು

ಹುಟ್ಟೋಲ್ಲಾ....ವರೋಪಚಾರ ಅವರ ಹೆಸರ್ನಲ್ಲೀ ನಾವೇ ಮಾಡಬೇಕು.

ಕಮಲಮ್ಮ: ನಮಗೆ ಬೇಕಾದ್ದೂ ವಧುವನ್ನು ದಕ್ಷಿಣೆಯಾಗಿ ಕೊಡೋದು....ವರದಕ್ಷಿಣೇನೂ ಬೇಡಾ ವರೋಪಚಾರಾನೂ ಬೇಡ.....ಹುಡುಗಿ ಲಕ್ಷಣವಾಗಿದೆ.....ಮಗೂ ಒಪ್ಪಿದೆ.

ರಾ. ರಾಯರು: ಮಗೂಗೇನೂ....'ಹೆಣ್ಣೂ ಅಂದ್ರೆ ಕಣ್ಬಿಡ್ತಾನೆ'.

ಕಮಲಮ್ಮ: ನೀವೂ....'ಹಣಾ ಅಂದ್ರೆ ಬಾಯ್ಬಿಡ್ತೀರ'.

ರಾ. ರಾಯರು: ನೋಡು ಕಮ್ಲೂ;....ನಾನು ಹೇಳೋದನ್ನೂ ಕೊಂಚ ನಿಧಾನವಾಗಿ ಕೇಳು....'ನಿಧಾನಂ ನಿಪುಣ ಲಕ್ಷಣಂ' ಅಂತಾ....ಇವೊತ್ತು ಬೆಳಿಗ್ಗೆ ಸಾಹುಕಾರ್ ಗಣೇಶರಾಯರ ಮನೆಗೆ ಹೋಗಿದ್ದೆ....ಕಾಫೀ ಗೀಫೀ ಎಲ್ಲಾ ಕೊಟ್ರೂ ಅನ್ನು. ಹಾಗೇ ಆ ಮಾತೂ ಈ ಮಾತೂ ಆಡಿ ಮದ್ವೇ ಮಾತಿಗೆ ತಿರುಗಿಸಿ ನಮ್ಮ ಮೂರ್ತಿ ವಿಷಯವೆಲ್ಲಾ ಹೇಳಿದೆ. ಆ ಮೇಲೆ ಹುಡುಗೀನ ತಂದು ತೋರಿಸಿದರು. ಹುಡುಗೀ ಗುಲಾಬಿ ಹೂ ಕಾಣೆ, ಚೆಲುವಾದ ಹುಡುಗಿ; ವಯಸ್ಸು ಹದಿನಾರು ಅಥವಾ ಹದಿನೇಳಿರಬಹುದು. ನಮ್ಮ ಮೂರ್ತಿಗೆ ಅನುಗುಣವಾದ ಬಂಗಾರದಂಥಾ ಹೆಣ್ಣು....ನಮ್ಮ ಕರಾರುಗಳೂ, ವರದಕ್ಷಿಣೇ, ವರೋಪಚಾರಕ್ಕೆಲ್ಲಾ ಹಿಂದೇಟು ಹಾಕೋರಲ್ಲ ಗಣೇಶರಾಯರು....ಅವರಿಗೂ ಬೇಕಾದಷ್ಟಿದೆ.

ಕಮಲಮ್ಮ: ಅಯ್ಯೋ!....ಅಯ್ಯೋ!! ಸಾಕು ಸುಮ್ಮನಿರಿ. ನಿಮ್ಮ ಹೆಣ್ಣು ಹುಡುಕಾಟ!

ರಾ. ರಾಯರು: ಹಾಳು ಆ ಮುಂಗೋಪ ಅನ್ನೋದು ಮೂಗಿನ ತುದೀಲೆ ಇದ್ದು ಮುಂದೆ ಬಂದ್ರೆ ಸಾಕೂ ಅಂತ ಕಾದಿರುತ್ತೆ. ನಾನು ಪೂರ್ತಿ ಹೇಳೋ ಅಷ್ಟರಲ್ಲೇ ಅವಸರ; ....ನನ್ನದೊಂದು plan ಇದೇ ಕಮ್ಲೂ, planಉ;.... ಅದಕ್ಕೆ ಸರಿಹೋಗುತ್ತೇನೋ ಅಂತ ಹವಣಿಸ್ತಾ ಇದ್ದೀನಿ.... ಏನಿಲ್ಲಾ ಅಂದ್ರೂ ಐದು ಸಾವಿರಕ್ಕೆ ಕಡಿಮೇ ಇಲ್ದೇ ವರದಕ್ಷಿಣೆ ಕೇಳಬಹುದು; ಗಣೇಶರಾಯರೂ ಕೊಟ್ಟೇ ಕೊಡ್ತಾರೆ ಅನ್ನು....ಗೊತ್ತಿದೆಯಲ್ಲಾ ಈಗಿನ ಕಾಲದ ಕನ್ಯಾಪಿತರ ಕಷ್ಟ; ಆ ಐದು ಸಾವಿರದಲ್ಲಿ ನಮ್ಮ ಸಾಲ ಹತ್ತಿರ ಹತ್ತಿರಾ ಎರಡು ಸಾವಿರ ರೂಪಾಯಿ ತೀರಿಸಿ ಬಿಟ್ಟು ಒಂದೈನೂರರಲ್ಲಿ ಮದ್ವೇ ಆಯಿತೂ ಅನ್ನಿಸಿಬಿಟ್ಟು....ಉಳಿದ ಎರಡೂವರೆ ಸಾವಿರ ಮೂರ್ತಿ L. L. B. ಓದೋಕೆ Reserve....ಹೇಗಿದೆ ಕಮ್ಲೂ ಉಪಾಯ?....ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆದ ಹಾಗೆ.

ಕಮಲಮ್ಮ: (ಕೋಪ) ಬಹಳ ಚೆನ್ನಾಗಿದೆ....ಸರ್ಕಾರದವರು ಯಾರ್ಯಾರನ್ನೋ ಲಂಡನ್‌ಗೇ ಅಮೆರಿಕಾಕ್ಕೇ ಕಳುಹಿಸ್ತಾರಂತಲ್ಲಾ....ಹಾಗೆ ನಿಮ್ಮನ್ನೂ ಏಕೆ ಎಲ್ಲೀಗಾದ್ರೂ ಕಳುಹಿಸಬಾರ್ದೂ ಅಂತ....ಇನ್ನೆಷ್ಟು ಗಟ್ಟಿಯೋ ಆ ಮಿದುಳು! ಇಗೋ ನೋಡಿ, ಮದ್ವೇ ವಿಷಯ ಅವನಿಗೆ ಬಿಟ್ಟಿದ್ದು.... ಅವನಾಯಿತೂ ಅವನ ಇಷ್ಟವಾಯಿತೂ. ಅವನು ಯಾವುದಕ್ಕೆ ತಾಳೀ ಕಟ್ಟಬೇಕೂ ಅಂತಾನೊ ಅದಕ್ಕೆ ಕಟ್ಟಿಸೋ ಭಾರ ನಮ್ಮದು. ನೀವೇನೂ ಹೆಣ್ಣು ಹುಡುಕೋ ಕೆಲಸಕ್ಕೆ ಕೈ ಹಾಕಬೇಡಿ....ಅವನೇನೋ ಗೌರೀನ ಒಪ್ಪಿದ್ದಾನೆ.

ರಾ. ರಾಯರು: (ಕೋಪ) ಹೂಂ....ನೀನೂ ಹೆಚ್ಚು ಹೋಗ್ತಾ ಇದ್ದೀಯಾ ಈ ನಡುವೆ....ಗಂಡ ಅನ್ನೋ ಭಯಾ, ಗುಂಡ್ನೂ ಅನ್ನೊ ಭಯಾ ಕೊಂಚವೂ ಇಲ್ದೇ ನಾಲಿಗೆ ತಿರುಗಿದ ಹಾಗೆ ಒದರ್ತಾ ಇದೀಯ....ಇರ್ಲೀ ಇರ್ಲೀ.

ಕಮಲಮ್ಮ: ಸಾಕ್ ಸಾಕು....ಲಕ್ಷಣವಾಗಿ ಹಬ್ಬದ ದಿನ ಮುಖಾ ಸಿಂಡಿರಿಸ್ಕೋಬೇಡಿ....ನೀವೂ ಒಂದಿಷ್ಟು ಎಣ್ಣೆ ಒತ್ತಿಕೊಳ್ಳಿ....ಬಿಸಿ ಬಿಸಿ ನೀರು ಹಾಕಿಕೊಳ್ಳುವಿರಂತೆ.

ದೃಶ್ಯ ೩.

[ಅಂದು ದೀಪಾವಳಿ. ಗೌರಿಯನ್ನು ಸಂಧಿಸಲು ದೇವಸ್ಥಾನದ ಬಳಿ ಕಾದಿರುವ ಮೂರ್ತಿ.]

ಮೂರ್ತಿ: (ಸ್ವಗತ) ಇಂದು ದೀಪಾವಳಿ....ಗೌರಿ ಖಂಡಿತವಾಗಿಯೂ ದೇವಸ್ಥಾನಕ್ಕೆ ಬರುವಳು....ಈ ಹಾದಿಯಲ್ಲಿ ಬರುವ ಹೆಣ್ಣುಗಳೆಲ್ಲಾ ನನ್ನ ಕಣ್ಣಿಗೆ ಗೌರಿಯಂತೆ ಕಾಣಿಸುತ್ತಿರುವರಲ್ಲಾ....ಇಲ್ಲ ಇಲ್ಲ ಅವರುಟ್ಟಿರುವ ಸೀರೆಯಿಂದ ಗೌರಿಯಲ್ಲವೆಂದು ನಿರ್ಧರಿಸಬಹುದು. ಪಾಪ, ಆ ಬಡ ಹುಡುಗಿಗೆ ಒಳ್ಳೆಯ ಸೀರೆ ಎಲ್ಲಿಂದ ಬರಬೇಕು?....ಹೋ ಅದೋ ಗೌರಿಯೇ ಬರುವಂತಿದೆ!....ಹೌದು!! ಗೌರಿಯೇ!!! ಎಡಗೈಯಲ್ಲಿ ಹೂವಿನ ಬುಟ್ಟಿ, ಬಲಗೈಯಲ್ಲಿ ತಟ್ಟೆ ಹಿಡಿದು ಬರುತ್ತಿರುವಳು. ಬರಲೀ....(ಮೆಲ್ಲಗೆ) ಗೌರೀ....ಗೌರೀ"

ಗೌರಿ: ಯಾರದು?....ಹೊ!....ನನ್ನನ್ನೇ ಕೂಗಿದಿರಾ?

ಮೂರ್ತಿ: ಹೌದು........ನನ್ನನ್ನು ಗುರ್ತಿಸಬಲ್ಲೆಯಾ ಗೌರಿ?

ಗೌರಿ: ನನ್ನ ಕಣ್ಣುಗಳಿಗೇನೂ ಮಂಜು ಕವಿದಿಲ್ಲವಲ್ಲಾ!

ಮೂರ್ತಿ: ನನ್ನೊಡನೆ ಮಾತನಾಡಲು ನಾಚಿಕೆಯೇನು?

ಗೌರಿ: ಹೌದು;....ಹೆಚ್ಚು ಹೊತ್ತು ಮಾತನಾಡಲು ಭಯಾ.

ಮೂರ್ತಿ: ಆದರೇ ಕೊಂಚ ಹೊತ್ತಾದರೂ ಮಾತನಾಡುವಿಯಲ್ಲಾ?

ಗೌರಿ: ಹೌದು,....ಅಂದಿನ ನನ್ನ ಸಂಗೀತ ನಿಮ್ಮನ್ನು ಬೇಸರಪಡಿಸಿರಬೇಕು.

ಮೂರ್ತಿ: ಆ ಸಂಗೀತ!...........'ಮತ್ತಷ್ಟು ಹೊತ್ತು ಹಾಡಬಾರದಾಗಿತ್ತೇ' ಅನ್ನಿಸಿತು ಗೌರಿ....ನೀನು ನನ್ನವಳಾದ ಮೇಲೆ ಸಂಗೀತ ಸಾಗರದಲ್ಲೇ ಮುಳುಗುವೆನೆಂದು ಸುಮ್ಮನಾದೆ.

ಗೌರಿ: ನೀವು ವಿದ್ಯಾವಂತರು, ನಾನು ಅವಿದ್ಯಾವಂತೆ; ನೀವು ಐಶ್ವರ್ಯವಂತರು, ನಾನು ಕಡು ಬಡವರ ಮಗಳು; ನಾನು ಹೆಣ್ಣಾಗಿ ಹುಟ್ಟಿ ನಮ್ಮ ತಂದೆಯವರ ಬಡತನದ ಸಂಕಟವನ್ನು ಮತ್ತಷ್ಟು ಹೆಚ್ಚಿಸಿದೆ.

ಮೂರ್ತಿ: ಕಣ್ಣೀರಿಡಬೇಡ ಗೌರಿ, ಬಡವರೆಂದರೆ ಅವಮಾನವಿಲ್ಲ. ನಿಮ್ಮ ಬಡತನದಲ್ಲಿ ನಿಮ್ಮ ತಂದೆಯವರ ಗುಣ ಐಶ್ವರ್ಯ....ದೇವರ ದಯೆ ನಮ್ಮ ಮೇಲಿದ್ದರೆ ಎಲ್ಲಾ ಸರಿ ಹೋಗುವುದು ಗೌರಿ.

ಗೌರಿ: ಬನ್ನೀ, ಮಂಗಳಾರತಿ ಮಾಡಿಸಿಕೊಂಡು ಬರೋಣ.

ದೃಶ್ಯ ೪.

[ಕೋಪಾಗ್ನಿಯ ಕಾವು ತಾಕಿರುವ ರಾಮರಾಯರು]

ರಾ. ರಾಯರು: ಮುಚ್ಚೋ ಬಾಯ್....ನನ್ನ ಮಗನಾಗಿ ನನಗೇ ಎದುರು ಮಾತ್ನಾಡ್ತಾ ಇದೀಯಾ?....ನಾ ಹೇಳಿದ ಹಾಗೆ ಕೇಳಬೇಕು.

ಕಮಲಮ್ಮ: ನೀವೇಕೆ ಹೀಗೆ ಎಗರಾಡ್ತೀರಾ ಅಂದ್ರೇ.... ನೀವಾ ಮದುವೇ ಮಾಡಿಕೊಳ್ಳೋದು?....ಮಗೂ ಇಷ್ಟಾನೂ ಕೊಂಚ ಕೇಳಿ.

ರಾ. ರಾಯರು: ಕಮ್ಲೂ, ಉರಿಯೋ ಬೆಂಕಿಗೆ ತುಪ್ಪಾ ಹಾಕಬೇಡಾ, ನೀರು ಹಾಕಿ ಆರಿಸು; ಅವನ್ನ ವಹಿಸಿಕೊಂಡು ಮಾತ್ನಾಡಬೇಡಾ. ಮೂರ್ತಿ ಮದುವೆಯಾದ್ರೆ ಗಣೇಶ ರಾಯರ ಮಗಳೊಡನೇ ಆಗಬೇಕು; ಇಲ್ದಿದ್ರೇ ಬ್ರಹ್ಮಚಾರಿಯಾಗೇ ಉಳಿಯೋದು.

ಮೂರ್ತಿ: ನಾನು ಮದುವೆಯಾದ್ರೆ ಗೌರೀನೇ ಆಗೋದು....ಇಲ್ದಿದ್ರೇ ಬ್ರಹ್ಮಚಾರಿಯಾಗೇ ಉಳಿತೇನೇ ವಿನಃ ಗಣೇಶರಾಯರ ಮಗಳನ್ನ ಖಂಡಿತಾ ಮದುವೆಯಾಗೋಲ್ಲಾ.

ರಾ. ರಾಯರು: ದುಡುಕಬೇಡಾ ಮೂರ್ತಿ, ದುಡುಕಬೇಡಾ. ಚನ್ನಾಗಿ ಯೋಚ್ನೆ ಮಾಡು;....ಗಣೇಶರಾಯರ ಮಗಳೂ ಚನ್ನಾಗಿ ಇದ್ದಾಳೆ. ಬೇಕಾದಷ್ಟು ಹಣವೂ ಸಿಕ್ಕುತ್ತೇ. ಹತ್ರತ್ರಾ ಇಪ್ಪತ್ತು ಸಹಸ್ರ ರೂಪಾಯಿ.... ಯಾರನ್ನು ಕೆಡಿಸ್ತೂ!

ಕಮಲಮ್ಮ: ಹಣದ ಪಿಶಾಚಿ ಹಿಡಿದಿದೆ ನಿಮಗೆ.... ಯಾವಾಗ್ಲೂ 'ಹಣಾ ಹಣಾ' ಅಂತ ಹೊಡಕೊಳ್ತಿರ್ತೀರ.

ರಾ. ರಾಯರು: ಬೇಡಾ ಕಮ್ಲೂ,....ಇಷ್ಟು ದಿನವೇನೋ ಪತಿವ್ರತೇ ಅನ್ನಿಸಿಕೊಂಡಿದ್ದಿ. ಈಗ ಹೆಸರು ಕೆಡಿಸಿಕೊಳ್ಬೇಡಾ....ನನ್ನ ಸಮ್ಮತಕಷ್ಟೆ ನಿನ್ನ ಒಪ್ಪಿಗೇನೂ ಕೊಡು. ದೂರಾಲೋಚನೆ ಇರ್ಲೀ.

ಮೂರ್ತಿ: ಅಪ್ಪಾ, ನೀನು ಮಾಡಿರೋದು **ದೂರಾಲೋಚನೆಯಲ್ಲಾ ದುರಾಲೋಚನೆ**

ರಾ. ರಾಯರು: ಮುಚ್ಚೋ ಬಾಯ್! ಏನೋ L. L. B.ಗೆ ಓದೋಕೆ ಬೊಂಬಾಯಿಗೆ ಹೋಗಬೇಕು ಅಂದಿಯಲ್ಲಾ ಅಂತಾ ನಾನು ಏನೇನೊ plan ಮಾಡ್ತಿದ್ರೇ senseless ಆಗಿ ಮಾತ್ನಾಡ್ತಾ ಇದಾನೆ.

ಮೂರ್ತಿ: ಅಪ್ಪಾ, ಆ ಗಣೇಶರಾಯರ ಮಗಳ್ನ ಮದುವೆ ಆಗೋಕೂ ನನಗಿಷ್ಟವಿಲ್ಲಾ, L. L. B- ಓದೋಕೂ ಇಷ್ಟವಿಲ್ಲಾ; ರಂಗಣ್ಣೋರ ಮಗಳ್ನ ಮದುವೆಮಾಡ್ಕೊಂಡು ಮಾನವಾಗಿ ಸಂಸಾರವಮಾಡ್ಕೊಂಡಿರೋದು.

ರಾ. ರಾಯರು: (ಬಿರುಸಾಗಿ) ಜ್ಞಾನತಪ್ಪಿ ಮಾತ್ನಾಡಬೇಡಾ.

[ಗಣೇಶರಾಯರ ಪ್ರವೇಶ]

ಗ. ರಾಯರು: ನಮಸ್ಕಾರ ರಾಮರಾಯರೇ! ಏನೊ ಮಗನಾ ಜೊತೆ ಜಗಳವಾಡ್ತಾ ಇರೋ ಹಾಗಿದೆಯಲ್ಲಾ?

ಕಮಲಮ್ಮ: (ಮೆಲ್ಲಗೆ) ಮೂರ್ತಿ, ಬಾ ಅಪ್ಪಾ ಒಳಗೆ.

ರಾ. ರಾಯರು: ಏನೂ ಇಲ್ಲಾ ಗಣೇಶರಾಯರೇ,.... ಇದ್ದೇ ಇದೆಯಲ್ಲಾ ಸಂಸಾರ ಅಂದಮೇಲೆ ನಿತ್ಯ ಜಗಳಾ; ಮೂರ್ತಿ L. L. B. ಓದೋಕೆ ಬೊಂಬಾಯಿಗೆ ಹೋಗಬೇಕೂ ಅಂದ; ನನ್ನ ಯೋಗ್ಯತೇನೂ ನೋಡಿಕೋಬೇಕಲ್ಲಾ ಸ್ವಾಮಿ.

ಗ. ರಾಯರು: ಹೌದೂ ಸ್ವಾಮಿ! ಏನ್ಮಾಡೋದೂ, ಕಳುಹಿಸಿಕೊಡೀ; ಏನೋ ಹುಡುಗನಿಗೆ ಆಸೆ. ಮದ್ವೇಯಾದ ಮೇಲೆ ಒಂದೆರಡು ವರ್ಷಾ ಹೋಗಿಬರಲಿ.

ರಾ. ರಾಯರು: ಅದೇ ಸ್ವಾಮಿ ನಾನು ಅವನಿಗೆ ಹೇಳ್ತಿದ್ದಿದೂ. "ಜಾಗ್ರತೇ ಮದುವೆಗೆ ಒಪ್ಪಿಕೊ; ನಿನಗೆ ಬರೋ ವರದಕ್ಷಿಣೆಯಲ್ಲಿ ನೀನೇನಾದ್ರೂ ಮಾಡಿಕೋ" ಎಂದೆ.

ಗ. ರಾಯರು: ಈಗೇನು ಮದುವೇಗೆ ಒಪ್ಪೋದಿಲ್ಲಾ ಅಂತಾನೇನೂ?

ರಾ. ರಾಯರು: ಒಪ್ದೇ ಏನಿಲ್ಲಾ; Examination ಮುಗೀಲಿ ಅಂತಾನೆ. ಏನಿಲ್ಲಾ ರಾಯರೇ, ನೀವೆಲ್ಲಾ ಏರ್ಪಾಟು ಮಾಡಿಬಿಡಿ.

ಗ. ರಾಯರು: ನೀವು "ಹೂಂ" ಎಂದ್ರೇ ಎಲ್ಲಾ ಮೂರು ದಿವಸದಲ್ಲಿ ಏರ್ಪಾಟು ಮಾಡಿಬಿಡ್ತೀನಿ.

ರಾ. ರಾಯರು: "ಹೂಂ" ಅನ್ನೋದೇನು ಸ್ವಾಮಿ; ಮಾತಾಯ್ತು, ಕತೆಯಾಯ್ತು; ಇನ್ನೇನಿಲ್ಲ. ಎಲ್ಲಾ ಏರ್ಪಾಟು ಮಾಡಿಬಿಡಿ.

ಗ. ರಾಯರು: ಹಾಗಾದ್ರೆ ಸರಿ ಸ್ವಾಮಿ, ನಾನಿನ್ನು ಬರ್ತೀನಿ; ಜವಳೀ ಗಿವಳೀ ತರೋ ವಿಷಯ ಎಲ್ಲಾ ನಾಳೇ ಮಾತ್ನಾಡೋಣ........ಬರ್ಲಾ? ನಮಸ್ಕಾರ.

ರಾ. ರಾಯರು: ನಮಸ್ಕಾರ.

[ಗಣೇಶರಾಯರ ನಿರ್ಗಮನ—ಕಮಲಮ್ಮನ ಪ್ರವೇಶ]

ಕಮಲಮ್ಮ: ಅಯ್ಯೋ!! ಇದೇನಂದ್ರೆ ಹೀಗೆ ಮಾತು

ಕೊಟ್ಟುಬಿಟ್ರೇ!!! ಮಗೂ ಈ ಮದುವೇಗೆ ಒಪ್ಪಲಿಲ್ಲಾ.... ನನ್ನದೊಂದು ಮಾತು ಕೇಳಲಿಲ್ಲಾ. ಧಾರಾಳವಾಗಿ ಹೇಳಿ ಬಿಟ್ರಲ್ಲಾ?

ರಾ.ರಾಯರು: ಮನೇ ಯಜಮಾನಾ ಅನ್ನಿಸಿಕೊಂಡೋನಿಗೆ ಅಷ್ಟು ಹಕ್ಕಿಲ್ಲವೇನೇ?

ಕಮಲಮ್ಮ: (ಕೋಪ) ಇದೇ ಹಕ್ಕು. ಅಲ್ಲೀ ಇಲ್ಲಿ ಹೋಗಿ ಆ ಗಣೇಶರಾಯರ ಸಂಬಂಧ ಬೆಳೆಸೋದೇ? ಏನಂದ್ರೇ ನಾನು ಖಂಡಿತಾ ಈ ಮದುವೇಗೆ ಒಪ್ಪೋಲ್ಲ.

ರಾ.ರಾಯರು: ಇನ್ನೂ ಗಲಾಟೇಮಾಡ್ತಾನೇ ಇರು. ಒಪ್ಪಿಯಾಯ್ತು, ಎಲ್ಲಾ ಆಯ್ತು; ಐದುಸಾವಿರ ರೂಪಾಯಿ ವರದಕ್ಷಿಣೆ ಬರೋದನ್ನ ನೋಡೋದು ಬಿಟ್ಟೂ.

ಕಮಲಮ್ಮ: ಸಾಕು ನಿಮ್ಮ ಹಾಳು ಆಸೆ. ಆ ಐದು ಸಾವಿರ ನೀವೇ ತಗೊಂಡು, ನೀವೇ ಮದ್ವೇ ಮಾಡ್ಕೊಳ್ಳಿ ಹುಡುಗೀನ. ಪಾಪ, ರಂಗಣ್ಣನವರು, ಎಂತಹಾ ಗೌರವಸ್ಥ ಕುಟುಂಬದವರೂ, ಏನ್ಮಾಡ್ತೀ—ಅವರ ಸಂಬಂಧ ಬಿಟ್ಟು ಆ ಗಣೇಶರಾಯರ ಸಹವಾಸ ಬಯಸಿದ್ದೀರಲ್ಲಾ.

ರಾ.ರಾಯರು: ಕಮಲ್ಲಾ, ನೀನು ಸುಮ್ಮನಿರು. ಮೂರ್ತಿನ ನಾನೊಪ್ಪಿಸ್ತೀನಿ. ನಾವೂ ಗಣೇಶರಾಯರ ಸಂಬಂಧಾ ಬೆಳೆಸ್ತಾ ಇಲ್ಲಾ. ಅವರ ಹಣದೊಡನೆ ಅಂತಾ ತಿಳ್ಕೊಂಡು ಹಸೇಮಣೆ ಹತ್ತು. ಗಣೇಶರಾಯರ ೨೦ ಸಹಸ್ರ ರೂಪಾಯಿ ಕಷ್ಟಾ ಇಲ್ದೇ ಕೈಸೇರುವಾಗ ಸಂಬಂಧಾ ಬೆಳಸಿದರೇನೊ ತಪ್ಪು.

ಕಮಲಮ್ಮ: ಆ ಹಣಕ್ಕಿಷ್ಟು ಬೆಂಕೀ ಹಾಕ್ತು........ ಮಗು ಕೇಳಿದರೆ ಎಷ್ಟು ಸಂಕಟಪಡ್ತಾನೊ.

[ಅಷ್ಟರಲ್ಲಿ ರಂಗಣ್ಣನವರ ಆಗಮನ]

ರಂಗಣ್ಣ: ರಾಮರಾಯರೇ........ರಾಮರಾಯರೇ.

ರಾ.ರಾಯರು: ಯಾರದು?

ಕಮಲಮ್ಮ: ರಂಗಣ್ಣನವರು ಇದ್ದ ಹಾಗಿದೆ............ ಹೌದು ಅವರೇ.

ರಂಗಣ್ಣ: (ಪ್ರವೇಶಿಸಿ) ನಮಸ್ಕಾರ ರಾಯರೇ.

ರಾ.ರಾಯರು: (ಅಸಡ್ಡೆ) ನಮಸ್ಕಾರ.

ರಂಗಣ್ಣ: ಜಾತಕಾ ತೋರಿಸಿದಿರಾ ಸ್ವಾಮಿ?

ರಾ.ರಾಯರು: ಜಾತಕಾ ಗೀತಕಾ ಎಲ್ಲಾ ಸರೀ ಸ್ವಾಮಿ, ಆದ್ರೇ ಒಂದು ವಿಷಯಾ ಇದೇ.

ರಂಗಣ್ಣ: ಅದೇನು ಸ್ವಾಮಿ ಅಂತಹುದೂ?

ರಾ.ರಾಯರು: ಅಂತಹುದೇನೂ ಇಲ್ಲಾ. ಹುಡುಗಾ L.L.B.ಗೆ ಓದೋಕೆ ಬೊಂಬಾಯಿಗೆ ಹೋಗಬೇಕೂ ಅಂತಾನೆ........ಅವನ್ನ ಕಳುಹಿಸಲಿಕ್ಕೆ ನಮಗೇನೂ ಅಷ್ಟು ಚೈತನ್ಯವಿಲ್ಲಾ. ಏನೋ ಹೆಣ್ಣುಕೊಡೋರೇ ಒಂದೈದು ಸಾವಿರ ಖರ್ಚುಮಾಡಿ ಓದಿಸಬೇಕು.

ರಂಗಣ್ಣ: ರಾಯರೇ ನನ್ನ ವಿಷಯವೆಲ್ಲಾ ನಿಮಗೆ ಗೊತ್ತಿದೆ. ವಧುವನ್ನು ದಕ್ಷಿಣೆಯಾಗಿ ಕೊಡಬಲ್ಲೆನೇ ವಿನಹಾ ಅವರ ಮೇಲೆ ಹಣಕೊಡೋ ಅಷ್ಟು ಚೈತನ್ಯವಿಲ್ಲಾ ಸ್ವಾಮಿ.... ಏನೋ ದೊಡ್ಡ ಮನಸ್ಸುಮಾಡಿ ಮನೇ ತುಂಬಿಸಿಕೊಳ್ಳಬೇಕು.

ರಾ.ರಾಯರು: ಕ್ಷಮಿಸಿ ರಂಗಣ್ಣೋರೆ........ನನ್ನದೇನೂ ನಡೆಯೋಲ್ಲ. ಹುಡುಗನ ತೀರ್ಮಾನ ನಿಮಗೆ ಹೇಳಿದ್ದೀನಿ. ಶಕ್ತಿ ಇದ್ರೆ ಆಗಬಹುದು.

ರಂಗಣ್ಣ: ಹುಂ! ನನ್ನ ಆಸೆ 'ಬಿರುಗಾಳಿಗೆ ಸಿಕ್ಕಿದ ದೀಪದಂತಾಯಿತು'........ಎಲ್ಲಾ ದೈವೇಚ್ಛೆ........ಮುಖ್ಯ ನಿಮ್ಮ ಸಂಬಂಧ ಬೆಳಸುವ ಋಣ ನಮಗಿಲ್ಲವೆಂದು ತೋರುತ್ತೆ. ನಾನಿನ್ನು ಹೋಗಿಬರ್ತೀನಿ ರಾಯರೇ....

ರಾ.ರಾಯರು: ತೆಗೆದುಕೊಳ್ಳಿ ನಿಮ್ಮ ಹುಡುಗೀ ಜಾತಕ........ನಮಸ್ಕಾರ.

ರಂಗಣ್ಣ: ನಮಸ್ಕಾರ (ನಿರ್ಗಮನ).

ಕಮಲಮ್ಮ: (ಚಕಿತ-ಕೋಪ) ನಿಮಗೇನು ಬಂತೂ ಅಂದ್ರೇ ಕೇಡೂ!!........'ವಿನಾಶಕಾಲೇ ವಿಚಿತ್ರ ಬುದ್ಧಿಃ' ಎನ್ನೋ ಹಾಗೇ!!!

ರಾ.ರಾಯರು: (ಗಟ್ಟಿಯಾಗಿ) ಬಾಯ್ಮುಚ್ಕೊಂಡು ಬಿದ್ದಿರೂ ಅಂದ್ರೇ ಏನೋ ದೊಡ್ಡಸ್ತಿಕೆ ಮಾಡ್ಕೊಂಡ್ ಬಂದ್ಯಾ........ನಡಿಯೋ ಒಳಗೆ.

ದೃಶ್ಯ ೫.

[ವರಾನ್ವೇಷಣದಲ್ಲಿ ವಿಫಲರಾಗಿ ಮನೆಗೆ ಹಿಂದಿರುಗಿದ ರಂಗಣ್ಣನವರು]

ಲಕ್ಷಮ್ಮ: ಹೋದ ಕೆಲಸವೇನಾಯ್ತು ಅಂದ್ರೇ?

ರಂಗಣ್ಣ: ಆಗುವುದೇನು ಲಕ್ಷ್ಮೀ........'ಬಡವರ ಮನೆಯಲ್ಲಿ ಹುಟ್ಟಿದ ಹೆಣ್ಣಿಗೆ ದೇವರು ಗಂಡನನ್ನು ಸೃಷ್ಟಿಸಿರುವುದಿಲ್ಲಾ' ಎಂಬುದು ಸಿದ್ಧಾಂತವಾಯಿತು.

ಲಕ್ಷಮ್ಮ: ಹಾಗೆಂದ್ರೇ ರಾಮರಾಯರೂ?............ಆ ದಿವಸ ಒಪ್ಪಿದಂತೆಯೇ ಮಾತನಾಡಿದರೂ!!

ರಂಗಣ್ಣ: ಅವರ ಒಪ್ಪಿಗೆಗೆ ನಾವು ಸಮ್ಮತಿ ಕೊಡುವಂತಿಲ್ಲಾ ಲಕ್ಷ್ಮೀ.

ಲಕ್ಷಮ್ಮ: ಅಂದರೇ?

ರಂಗಣ್ಣ: 'ಐದುಸಾವಿರ ರೂಪಾಯಿ ವರದಕ್ಷಿಣೆ ಕೊಟ್ಟರೆ ಆಗಬಹುದೂ' ಎಂದರು.

ಗೌರಿ: (ಚಕಿತಳಾಗಿ) ಅಮ್ಮಾ........ಅಣ್ಣಾ!!

ರಂಗಣ್ಣ: ಅಳಬೇಡಾ ಗೌರಿ........ಬಡತನದ ಹೊರೆಯನ್ನು ಹೊತ್ತ ನನಗೆ ಈ ಹೊರೆಯೇನೂ ಭಾರವಿಲ್ಲಾ ಗೌರಿ........ನೀನು ಹೆಣ್ಣಲ್ಲಾ........ಗಂಡೂ ಎಂದು ಭಾವಿಸಿ ಸಾಕುವೆನು....ವ್ಯಥೆಪಡಬೇಡ....ನಿನ್ನ ಕೈಹಿಡಿಯುವ ಗಂಡ

ನನ್ನ ದೇವರು ತೋರಿಸಿಕೊಡುವ ವರೆಗೂ ನಮ್ಮ ಪ್ರಯತ್ನ ವೇನೂ ನಡೆಯುವುದಿಲ್ಲಾ....ಬಡವನ ಹೊಟ್ಟೆಯಲ್ಲಿ ಹುಟ್ಟಿದ ತಪ್ಪು ನಿನ್ನದು ಗೌರಿ.

ಲಕ್ಷಮ್ಮ: ಗೌರೀ....ಅಳಬೇಡ....ನಮ್ಮ ಕರ್ಮವಿನ್ನೂ ಸವೆದಿಲ್ಲಾ; ...ಹೋಗು ಗೌರಿ,....ಮಲಗು ಹೋಗು....ಎಲ್ಲಾದರೂ ಸಾಲವನ್ನಾದರೂ ತರೋಣವೆಂದರೇ....ಭಾರೀ ಗಂಟು; ಕೊಡುವರಾರು?

ರಂಗಣ್ಣ: ಸಾಲತಂದು, ಮದುವೆಮಾಡಿ, ತೀರಿಸಲಾಗದೇ, ಸಾಲಗಾರನ ಶೂಲಕ್ಕೇರುವುದಕ್ಕಿಂತಾ, ಸಮಾಜ ನಿಂದನೆಯನ್ನೆದುರಿಸುವುದೇ ಮೇಲು ಲಕ್ಷ್ಮೀ. ಬಡವರಿಗೇಕೆ ಸಾಲದ ಯೋಚನೆ........ಹುಂ! ಹೊತ್ತಾಯಿತು ನಡೆ ಊಟ ಮಾಡೋಣ. ಆ ದೇವ ಇಚ್ಛೆ ಇದ್ದಂತೆ ನಡೆಯಲಿ. (ಲಕ್ಷಮ್ಮನೊಡನೆ ನಿರ್ಗಮನ).

ಗೌರಿ: (ದುಃಖಿತಳಾದ ಗೌರಿ-ಸ್ವಗತ) ಪರಮಾತ್ಮಾ... ನನಗಾಗಿ ಈ ಪ್ರಪಂಚದಲ್ಲಿ ಒಂದು ಗಂಡೆಂಬ ವಸ್ತುವನ್ನು ಸೃಷ್ಟಿಸಿಲ್ಲವೇ....ಬಡತನದ ಭಾರವನ್ನು ಹೊರಲಾಗದೆ ಸಂಕಟದಲ್ಲಿರುವ ನನ್ನ ತಂದೆತಾಯಿಗಳ ತಲೆಯ ಮೇಲೆ ನನ್ನ ಮದುವೆಯ ಯೋಚನೆಯ ಹೊರೆಯನ್ನು ಬೇರೆ ಹೊರಿಸಿದೆಯಾ; ನನ್ನನ್ನು ಮಗುವನ್ನಾಗಿಯೇ ಇಟ್ಟಿರಬಾರದಾಗಿತ್ತೇ, ಬೇರೆಯವರಿಗೆ ಉಪಯೋಗವಿಲ್ಲದೆ ಇತರರ ಸಂಕಟಕ್ಕೆ ಕಾರಣಕರ್ತಳಾದ ನಾನು ಇದ್ದೇನು ಪ್ರಯೋಜನಾ?........ ಪರಮಾತ್ಮಾ

ದೃಶ್ಯ ೬.

[ಗೌರಿಯನ್ನೇ ಮದುವೆಯಾಗಬೇಕೆಂಬ ಹಟದಲ್ಲಿರುವ ಮೂರ್ತಿ]

ಮೂರ್ತಿ: ಅಪ್ಪಾ, ನಾನೋ ಮದುವೆಯಾಗೋದು, ಇಲ್ಲವೇ ನೀನೋ?

ರಾ.ರಾಯರು: ಬಾಯಿಗೆ ಬಂದಹಾಗೆಲ್ಲಾ ಮಾತ್ನಾಡಬೇಡಾ. ನೀನಿನ್ನೂ ಹೊಸದಾಗಿ ಮದುವೇಯಾಗೋದು. ನಾನು ಮದುವೇ ಸುಖಾ ಅನುಭವಿಸುತ್ತಿರೋದು....ನನ್ನ ಮಾತು ಕೇಳೀ ಆ ಗಣೇಶರಾಯರ ಮಗಳ್ನಾ.

ಮೂರ್ತಿ: (ಮಧ್ಯೆ ಬಾಯಿಹಾಕಿ) ನಿಲ್ಲಿಸಪ್ಪಾ ಸಾಕೂ, ಇನ್ನೊಂದು ಸಲಾ ಆ ಗಣೇಶರಾಯರ ಮಾತೆತ್ತಬೇಡಾ.

ಕಮಲಮ್ಮ: ಮಗೂ ಇಷ್ಟದಂತೆ ನಡೆದರೆ ನಿಮಗೇನೂ ಅಂದ್ರೆ ತೊಂದರೇ?

ರಾ.ರಾಯರು: (ಕೋಪ ಉಲ್ಬಣ) ತಾಯಿೊ, ಮಗಾ ಇಬ್ಬರಿಗೂ ಆ ರಂಗಣ್ಣ ಏನೋ ಮಂಕುಬೂದಿ ಚೆಲ್ಲಿಬಿಟ್ಟಿದ್ದಾನೆ. ಇಲ್ದಿದ್ರೇ ಆ ದರಿದ್ರನ್ನ ವಹಿಸಿಕೊಂಡು ನೀವೇಕೆ ನನ್ನೆದುರಿಗೆ ಇಷ್ಟು ಮಾತ್ನಾಡ್ತಾ ಇದ್ರೀ.

ಮೂರ್ತಿ: 'ದರಿದ್ರಾ' ಅನ್ನೋ ಮಾತ್ನಾಡಬೇಡಪ್ಪಾ. ನಾಳೆ ನಾವು ದರಿದ್ರರಾಗೋದೆಷ್ಟು ಹೊತ್ತಿನಲ್ಲಿದೇ.

ರಾ.ರಾಯರು: ಅದು ಗೊತ್ತೇ ಇದೆ. ಅವನ ಸಂಬಂಧಾ ಬೆಳೆಸಿದ ಮೇಲೆ.

ಕಮಲಮ್ಮ: ನೋಡಿ, ನಾನೇನೋ ಈ ಮದುವೆಗೆ ಒಪ್ಪೋಲ್ಲಾ....ಗಲಾಟೆ ಇಲ್ದೇ ನಡೆಯಬೇಕೂ ಅನ್ನೋ ಹಾಗಿದ್ರೇ ಗೌರೀನ ತರೋಕೆ ಒಪ್ಪಿಕೊಳ್ಳಿ.

ರಾ.ರಾಯರು: ಉಂಡ ಮನೆಗೆ ಎರಡು ಬಗೆಯೋರೇ ನೀವೂ.

[ಗಣೇಶರಾಯರ ಆಗಮನ]

ಗ.ರಾಯರು: (ಹೊರಗಿನಿಂದ) ರಾಮರಾಯರೇ, ರಾಮರಾಯರೇ.

ರಾ.ರಾಯರು: ಯಾರಪ್ಪಾ ಅದೂ?....ಹೋ, ಗಣೇಶರಾಯರೇ? ಬನ್ನೀ, ಬನ್ನೀ.

ಗ.ರಾಯರು: (ಪ್ರವೇಶಿಸುತ್ತಾ) ಏನು ಸ್ವಾಮೀ, ಏನೋ ಗಲಾಟೆ ನಡೀತಾ ಇದೆಯಲ್ಲಾ.

ರಾ.ರಾಯರು: ಅಯ್ಯೋ, ಈಗಿನ ಕಾಲದ ಹುಡುಗರ ಗಲಾಟೆ ಗೊತ್ತಿದೆಯಲ್ಲಾ....'ನನಗೆ ಎರಡು ಸೂಟು ಬೇಕೂ' ಅಂತ ಗಲಾಟೆ; ನಾನು 'ಒಂದು ಹೊಲಿಸಿಕೊಳ್ಳೋ ಸಾಕು' ಎಂದೆ. ಅದೇ ಒಂದು ದೊಡ್ಡ ಗಲಾಟೆಮಾಡ್ತಾ ಇದ್ದಾನೆ.

ಗ.ರಾಯರು: ಅದಕ್ಕೇನು ಸ್ವಾಮೀ; ಅಬ್ಬಬ್ಬಾ ಅಂದ್ರೆ ಇನ್ನೊಂದು ನೂರು ರೂಪಾಯಿ ಹೆಚ್ಚಾದೀತು. ಅದಕ್ಕೆಲ್ಲಾ ಹಿಂದೆಗೆಯೋಲ್ಲಾ ಸ್ವಾಮಿ.

ರಾ.ರಾಯರು: ಮೂರ್ತಿ, ಕೇಳಿದೇನಯ್ಯಾ ರಾಯರು ಹೇಳಿದ್ದೂ? ಇನ್ನೇನಪ್ಪಾ, ಅಳಿಯನಿಗೆ ಎರಡು ಸೂಟು.

ಮೂರ್ತಿ: (ಅಸಡ್ಡೆಯಿಂದ) ಕೇಳ್ದೇ ಕೇಳ್ದೇ.

ರಾ.ರಾಯರು: (ಅಷ್ಟರಲ್ಲಿ ಬಾಯಿಹಾಕಿ) ಹಾಂ! ಸರೀ, ಹೊತ್ತಾಯ್ತು; ಸೊಸೈಟಿಗೆ ಹೋಗಿ ಸಾಮಾನು ತಂದುಬಿಡು. ಹೂಂ! ಹೊರಡು ಹೊರಡೂ ಹೊತ್ತಾಯ್ತು. (ಮೂರ್ತಿ ನಿರ್ಗಮನ) ಹೊರಟುಹೋದ. ಈ ಹುಡುಗರ ಎದುರಿಗೆ ಮಾತ್ನಾಡೋದೆ ಕಷ್ಟ ಈ ಕಾಲದಲ್ಲಿ. ಒಂದು ಕೇಳಿದರೆ ಎರಡು ಬೇಕೂ ಅಂತಾರೆ. ಶುದ್ಧ 'Irresponsible fellows.

ಗ.ರಾಯರು: ಅಂದಹಾಗೇ, ಒಂದು ವಿಷಯಾ ತಿಳೀತಾ ರಾಯರೇ?

ರಾ.ರಾಯರು: ಅದೇನು ಸ್ವಾಮೀ ಅಂತಹುದೂ?

ಗ.ರಾಯರು: ರಂಗಣ್ಣೋರಿಲ್ಲವೇ— ಸ್ಕೂಲುಮೇಷ್ಟ್ರು

ರಾ.ರಾಯರು: ಅಯ್ಯೋ ಬಿಡಿ ಸ್ವಾಮಿ ಅವನ ಮಾತೇನು?

ಗ.ರಾಯರು: ಬಿಡೋದಲ್ಲಾ ಸ್ವಾಮೀ; ವಿಷಯಾ ಕೇಳಿ. ಅವರ ಹೆಣ್ಣು ಮಗೂ ಒಂದಿರಲಿಲ್ಲವೇ. ಅದು ನಿನ್ನೇ ರಾತ್ರಿ ವಿಷಾ ಕುಡಿದು ಸತ್ತುಹೋಯಿತಂತೇ.

ರಾ. ರಾಯರು: (ಘಾಬರಿಯಿಂದ) ಹಾಂ!!!....(Gong)

ಕೊನೆಯ ದೃಶ್ಯ

[ಮೂರ್ತಿಯ ದುಃಖ—ತಮ್ಮ ತಪ್ಪನ್ನರಿತ ರಾಮರಾಯರ ಪಶ್ಚಾತ್ತಾಪ]

ಮೂರ್ತಿ: ಅಮ್ಮಾ, ಗೌರಿಯ ಕೈಹಿಡಿಯುವ ಭಾಗ್ಯ ನನಗಿಲ್ಲದಾಯಿತು.

ಕಮಲಮ್ಮ: ಏನು ಮಾಡುವುದು ಮೂರ್ತಿ? ಎಲ್ಲಾ ವಿಧಿಯ ಲೀಲೆ.

ಮೂರ್ತಿ: ಅಮ್ಮಾ, ವಿಧಿ ಯಾವುದು? ಲೀಲೆ ಯಾವುದು ಎಲ್ಲಾ ನಮ್ಮ ಅವಿವೇಕ. 'ಗೌರಿಯ ಮರಣಕ್ಕೆ ನೀನೇ ಕಾರಣ, ನೀನೊಬ್ಬ ಸಮಾಜದ್ರೋಹಿ' ಎಂದು ನನ್ನ ಹೃದಯಾಂತರಾಳದಿಂದ ಪದೇ ಪದೇ ಕೇಳಿಬರುತ್ತಿದೆ.

ಕಮಲಮ್ಮ: ಮೂರ್ತಿ ಆದದ್ದಾಯಿತು. ಹೆಚ್ಚಿಗೇ ಮನಸ್ಸನ್ನು ನೋಯಿಸಿಕೊಳ್ಳಬೇಡ. ಇದರಲ್ಲಿ ನಿನ್ನ ತಪ್ಪೇನೂ ಇಲ್ಲಾ ಮೂರ್ತಿ. ನಿನ್ನಪ್ಪನ ಕಠಿಣ ಹೃದಯಾ ಕರಗಲಿಲ್ಲ.

ರಾ. ರಾಯರು: (ಪ್ರವೇಶಿಸುತ್ತಾ) ಹೌದೂ ಕಮಲೂ, ಹೌದು; ಗೌರಿಯ ಮರಣಕ್ಕೆ ನಾನೇ ಕಾರಣ; ನನ್ನನ್ನು ಕ್ಷಮಿಸೂ ಕಮಲೂ. ಮೂರ್ತಿ, ನನ್ನನ್ನು ಕ್ಷಮಿಸು. ನೀನು ಚಿಕ್ಕವನಾದರೂ ನಿನ್ನಲ್ಲಿ ಕ್ಷಮೆ ಬೇಡುತ್ತಲಿದ್ದೇನೆ.

ಮೂರ್ತಿ: ಅಪ್ಪಾ, 'ಹಣಾ ಹಣಾ ಹಣ'ವೆಂದು ಹಂಬಲಿಸಿದೆ. ಹಣಕ್ಕಾಗಿ ಹಾತೊರೆದು ಬಡವನನ್ನು ನೋಯಿಸಿದೆ. ವರದಕ್ಷಿಣೆಯ ಆಸೆ ವರಗಳಿಗಿಂತ ವರಗಳ ತಂದೆ ತಾಯಿಗಳಿಗೇ ಹೆಚ್ಚಾಗಿದೆ. ಕುರುಬನು ಕುರಿಯನ್ನು ಚೆನ್ನಾಗಿ ಕೊಬ್ಬಿಸಿ ಮಾರಿಕೊಳ್ಳುವಂತೆ, ಮಕ್ಕಳನ್ನು ಚನ್ನಾಗಿ ಬೆಳೆಸಿ, ಓದಿಸಿ, ವಿದ್ಯಾವಂತರನ್ನಾಗಿ ಮಾಡಿ ಹಣವಿರುವ ಹೆಣ್ಣಿನ ತಂದೆಗೆ ಮಾರಿ ತಮ್ಮ ಸಾಲಸೂಲಗಳನ್ನು ಆ ಹಣದಿಂದ ತೀರಿಸಿಕೊಳ್ಳುವ ತಂದೆತಾಯಿಗಳನೇಕರು. ಆಗ ಆ ಗಂಡು ಹೆಣ್ಣಿನ ಪ್ರೀತಿಯ ಪತಿಯಾಗದೆ ಕೊಂಡ ಪಶುವಾಗಿ ಬಾಳನ್ನು ಸಾಗಿಸುವನು. ನಿಮ್ಮ ಸುಖಕ್ಕಾಗಿ ನಮ್ಮ ಅಭ್ಯುದಯಕ್ಕೇ ದೊಡ್ಡ ಕಳಂಕ ತಂದೊಡ್ಡಿ ಸಮಾಜದಲ್ಲಿ 'ತರುಣರು ವರದಕ್ಷಿಣೆಯ ಸತ್ಯಾಗ್ರಹ ಚಳುವಳಿಯನ್ನು ಹೂಡುವರು; ಆ ಚಳುವಳಿಗೆ ಬಡವರ ಹೆಣ್ಣುಗಳನ್ನು ಬಲಿಯಾಗಿ ತೆಗೆದುಕೊಳ್ಳುವರು' ಎಂಬ ಅಪವಾದದ ಹೊರೆಯನ್ನು ನಮ್ಮ ತಲೆಯ ಮೇಲೆ ಹೊರಿಸುವರು...........ಅಪ್ಪಾ, ಸಂತಸದ ಬಾಳನ್ನು ಹಾಳುಮಾಡಿದೆ. ಇನ್ನಾದರೂ ಹೋಗಿ ನೊಂದ ಆ ಎರಡು ಜೀವಿಗಳನ್ನೂ ಸಂತೈಸಿ ಬಾ. ಹೋಗು.

ರಾ. ರಾಯರು: ಮೂರ್ತಿ, ಹೇಗೆ ಹೋಗಲಿ? ಅಂದು ಹೆಣ್ಣು ಕೇಳಲು ಹೋದ ಮನೆ ಇಂದು ಕಣ್ಣೀರಿನ ಕಡಲಾಗಿದೆ. ಹೇಗೆ ಈ ನನ್ನ ಮುಖವನ್ನು ತೋರಿಸಲಿ?

ಮೂರ್ತಿ: ಚಿಂತೆ ಇಲ್ಲ ಹೋಗಪ್ಪಾ, ರಂಗಣ್ಣನವರು ಕ್ಷಮಾಗುಣವುಳ್ಳವರು.

ರಾ. ರಾಯರು: ಹೋಗುವೆನು ಮೂರ್ತಿ... .... ಹೋಗುವೆನು (ನಿರ್ಗಮನ).

ಮೂರ್ತಿ: (ಸ್ವಗತ) ಗೌರೀ, ಬಡತನದ ಬಾಳನ್ನು ನೀಗಿದೆ. ಸಮಾಜದಲ್ಲಿನ ಬಡತನಾ ಮತ್ತು ವರದಕ್ಷಿಣೆಗಳಿಗೆ ಬಲಿಯಾದೆ................ಇನ್ನಾದರೂ ಸಮಾಜದಲ್ಲಿನ ತರುಣರು ವರದಕ್ಷಿಣೆಯನ್ನು ಕೇಳುವುದು ಬಿಡಲಿ. ಗಂಡಿನ ತಂದೆಗಳು ತಮ್ಮ ಮಕ್ಕಳನ್ನು ಹೆಣ್ಣಿಗೆ ಮಾರಿಕೊಳ್ಳದಿರಲಿ.... ಗೌರೀ, ಆ ಹಾಡನ್ನು ಮತ್ತೊಮ್ಮೆ ಹಾಡಲಾರೆಯಾ!

ಸುಮಧುರ ಪುಷ್ಪವನು ನಿರ್ಗಂಧ ಪತ್ರವನು
ಸಮನಾಗಿ ಪೋಣಿಸುವ ನೂಲಿನಂದದಿ ।
ಪ್ರೇಮವೆಂಬುವ ಪಾಶ ಬಿಗಿಯಾಗಿ ಬಿಗಿದಿಹುದು
ಅನವರತ ಜೀವನದ ದಿವರಾತ್ರಿಗಳನು ॥

— ಸಮಾಪ್ತಿ —

ಜೀವನ ಯಜ್ಞ!

ಲೇಖಕರು:
ಡಾ। ದ. ಕೃ. ಭಾರದ್ವಾಜರು,
ಬೆಂಗಳೂರು.



"ಅಸ್ಸಾಂ ಪ್ರಾಂತ್ಯದಲ್ಲಿ ಭಯಂಕರ ಭೂಕಂಪನದಿಂದ, ಭೂಮಿಯು ಬಿರಿದು ಒಂದು ದೊಡ್ಡ ಕಾಡೇ ಆ ದರಿಯಲ್ಲಿ ಮುಳುಗಿಹೋಯಿತು. ಆ ಕಾಡಿನಲ್ಲಿ ವಾಸಿಸುತ್ತಿದ್ದ ಒಂದು ಜಾತಿಯ ಕಾಡುಜನರ ವಂಶವೇ ಸಮೂಲವಾಗಿ ನಾಶವಾಯಿತು. ಆ ಜಾತಿಯವರಲ್ಲಿ ಕೇವಲ ೧೭ ಜನ, ಬೇರೆ ಭಾಗದ ಕಾಡಿನಲ್ಲಿದ್ದುದರಿಂದ ಬಚಾವಾದರು! ನದಿಗಳಲ್ಲಿ ಪ್ರವಾಹವು ಹೆಚ್ಚಿದುದಲ್ಲದೆ ನೀರು ಗಂಧಕಮಯವಾಗಿ, ನದಿಯೊಳಗಿನ ನೀರೆಲ್ಲ ಗಂಧಕವಾಸನೆಯಿಂದ ತುಂಬಿ ಅದರೊಳಗಿದ್ದ ಮೀನುಗಳೆಲ್ಲಾ ಸತ್ತು ತೇಲಲಾರಂಭಿಸಿವೆ. ಇತ್ಯಾದಿ, ಇತ್ಯಾದಿ"

—ವೃತ್ತಪತ್ರ ವಾರ್ತೆ.

ಈ ವಾರ್ತೆಯನ್ನು ಓದುತ್ತ ಓದುತ್ತ, ನನ್ನ ಕಾಲ್ಕೆಳಗಿದ್ದ ನೆಲವೂ ನಡುಗಿದಂತೆ ಭಾಸವಾಯಿತು. ಇನ್ನು ಅಸ್ಸಾಮಿನಂತೆಯೇ ಇಲ್ಲಿಯೂ ಭೂಕಂಪವಾಗಿ ಭೂಮಿ ಬಿರಿದು, ಸಮಗ್ರ ಭಾರತದಲ್ಲಿ ಅತ್ಯಂತ ಆರೋಗ್ಯಕರವಾದ ಹವಾಗುಣವುಳ್ಳ ಬೆಂಗಳೂರು, ಆ ದರಿಯೊಳಗೆ ಮುಳುಗಿಹೋದರೆ—! ಎಂದು ಆಲೋಚಿಸುತ್ತಿರುವಾಗ ಮುಂದೆ ಆಲೋಚಿಸುವುದು ಬೇಡ! ಅಸಾಧ್ಯವಾದುದನ್ನೇಕೆ ಆಲೋಚಿಸಬೇಕು,ಎಂದೆನಿಸಿತು. ಆದರೂ ನಿಸರ್ಗದೇವಿಯು ಕೋಪಗೊಂಡರೆ ಆಗಬಾರದ್ದು, ಆಗಲಾರದೆನಿಸಿದ್ದು ಎಲ್ಲ ಆಗಿಬಿಡುವುದು, ಮನೆಯಲ್ಲಿ ಇಂತಹ ಸುದ್ದಿಗಳನ್ನು ಓದುತ್ತ ಕುಳಿತರೆ ದೇಶದ ಈಗಿನ ಸ್ಥಿತಿಯಲ್ಲಿ ಎಂತಹನಿಗೂ ಹೃದಯಸ್ತಂಭನವಾಗದಿರದು. ಆದ್ದರಿಂದ ಹೊರಗೆ ಹೋಗಿ ಕಾಲಾಡಿಸಿಕೊಂಡು ಬರೋಣ ಎಂದು ಹೊರಟೆ. ತಲೆಯಲ್ಲಿ ಈ ಮಾನವ ಜೀವನ ಯಜ್ಞವು ಈ ಬಗೆಯಾಗಿ ಆಗುತ್ತಿರುವ ವಿಚಾರವೇ ತರಂಗ ತರಂಗವಾಗಿ ಏಳುತ್ತಿದ್ದವು.

ದೇವರು–ಅಲ್ಲ ನಿಸರ್ಗದೇವತೆ–ಭಾರತ ದೇಶದ ಮೇಲೆ ಏಕೆ ಇಷ್ಟು ರೋಷಗೊಂಡಿರುವಳು! ಸ್ವಾತಂತ್ರ್ಯಕ್ಕಾಗಿ ನೂರು ವರುಷ ಕಾದಾಡಿ, ಸ್ವಾತಂತ್ರ್ಯ ಸಂಪಾದನೆ ಮಾಡಿ ಸ್ವರಾಜ್ಯಗಳಿಸಿದುದಾಯಿತು. ದೇಶದಲ್ಲಿ ಜನತೆಯ ಸರಕಾರ ನೆಲಗೊಂಡು, ಜನರು ಸುಭಿಕ್ಷದಲ್ಲಿ ನಲಿದಾಡುವಂತಾಗುವುದು ಎಂದು ನಿರೀಕ್ಷಿಸಿಕೊಂಡಿರುವಾಗ, ರಕ್ತಪಾತವಿಲ್ಲದೆ ಸ್ವರಾಜ್ಯದ ಗಳಿಕೆಯಾದುದಕ್ಕಾಗಿ ಪೂಜ್ಯ ಗಾಂಧೀಜಿಯು ಆತ್ಮಾಹುತಿಯನ್ನಿತ್ತರು, ಮತ್ತೆ ಅಖಂಡ ಭಾರತ ಖಂಡ— ಖಂಡವಾಯಿತು. ಪೂರ್ವಬಂಗಾಳ ಮತ್ತು ಪಶ್ಚಿಮ ಪಾಕಿಸ್ಥಾನಗಳಲ್ಲಿ ಆದ ಕೊಲೆ ಎಷ್ಟೋ, ಮಣ್ಣುಗೂಡಿದ ಸಂಸಾರಗಳೆಷ್ಟೊ, ಅತ್ಯಾಚಾರಕ್ಕೆ ಬಲಿಯಾದ ಹಿಂದು ಅಬಲೆಯರ ಸಂಖ್ಯೆ ಎಷ್ಟೊ, ಲಕ್ಷಗಟ್ಟಲೆ, ಕೋಟಿಗಟ್ಟಲೆ ರೂಪಾಯಿ ಬೆಲೆಬಾಳುವ ಆಸ್ತಿಯನ್ನು ಬಿಟ್ಟು ತಮ್ಮ ಪ್ರಾಣ ರಕ್ಷಣೆಗಾಗಿ ಭಾರತಕ್ಕೆ ಓಡಿಬಂದ ಹಿಂದೂಗಳ ಸಂಖ್ಯೆ ಎಷ್ಟೊ ನಾವು ಗಳಿಸಿಕೊಂಡ ಸ್ವರಾಜ್ಯಕ್ಕೆ ಬೆಲೆಯಾದರೇನು? ಎಂದು ಸಮೀಪದಲ್ಲಿರುವ 'ಬ್ಯೂಗಲ್' ರಾಕಿನ ಬಂಡೆಯೊಂದರ ಮೇಲೆ ಕುಳಿತು ಆಲೋಚಿಸುತ್ತ ನೈಮರೆತು ಅರನಿದ್ರೆ ಬಂದಂತಾಯಿತು. ಆಗ ಹಿಂದೆ ನಾನು ಕಾಂಗ್ರೆಸ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾಗ ನನ್ನೆದುರಿಗೆ ಬ್ರಿಟಿಷ ಪ್ರಭುತ್ವದ ಮಹಿಮೆಯನ್ನು ಕೊಚ್ಚುತ್ತಿದ್ದ ಹಳೆಯ ಮಿತ್ರನೊಬ್ಬನು ಹೀಗೆಂದನು—"ಏನಯ್ಯ! ಸ್ವರಾಜ್ಯ ಗಳಿಸುವುದಕ್ಕೆಂದು ಜೈಲಿಗೆ ಹೋಗಿ, ದುಡಿದು ಕಷ್ಟಪಟ್ಟ ಮನುಷ್ಯ ಸ್ವರಾಜ್ಯ ಬಂದುದಕ್ಕೆ ಸುಸ್ತಾಗಿ ಮಲಗಿ ಬಿಟ್ಟೆಯೊ? ನೋಡು ಸ್ವರಾಜ್ಯ ಬಂದ ಬಳಿಕ ನಿನ್ನ ಅವಸ್ಥೆ ಏನಾಯಿತು? ನಿನ್ನ ಸುತ್ತಲೂ ಇರುವ ಈ ನನ್ನ ಮಿತ್ರರನ್ನು ನೋಡು. ಇವರಲ್ಲನೇಕರು ನಿನ್ನಂತೆಯೇ ಸ್ವರಾಜ್ಯ ಗಳಿಸಲು ಕಾರಾಗೃಹ ಪ್ರವೇಶಿಸಿದವರು ಇಂದು ಅವರ ಅವಸ್ಥೆ ಏನಾಗಿದೆ? ನಿಮ್ಮ ಧುರೀಣರು ಅವರನ್ನು ಹೇಗೆ ಕೈಬಿಟ್ಟಿದ್ದಾರೆ, ಕೇಳು" ಎಂದ.

ಆಗ ಅವನ ಹಿಂದಿದ್ದ ಮನುಷ್ಯ ಮಿತ್ರನ ಪಕ್ಕದಲ್ಲಿ ನಿಂತು-ಭಾರತಕ್ಕೆ ಸ್ವರಾಜ್ಯ ಬಂದ ಬಳಿಕ ಮಾನವನ ಜೀವನ ಯಜ್ಞವಾಗಲಾರಂಭಿಸಿದೆ-ಈ ಯಜ್ಞಕ್ಕೆ ಮಹಾತ್ಮಾ ಗಾಂಧಿಜಿ ಮೊದಲನೆಯ ಆಹುತಿಯಾದರು. ಸಂಸ್ಥಾನದ ರಾಜರೆಲ್ಲರ ರಾಜತ್ವವು ಎರಡನೆಯ ಆಹುತಿಯಾಯಿತು. ಅದರ ನಂತರ

ಕಂಟ್ರೋಲಿನ ಹೆಸರಿನಲ್ಲಿ, ಆಹಾರ ಸಂಗ್ರಾಹದ ಮುಸುಕಿನಲ್ಲಿ ಇಂದು ಆಹಾರ ಬೆಳೆವ ಬಡ ರೈತನ ಜೀವನಯಜ್ಞ ನಡೆಯು ಲಾರಂಭಿಸಿದೆ. ನಾಲ್ಕಾರು ಮೈಸೂರು, ಬೆಂಗಳೂರು, ದಾವಣ ಗೆರೆ, ಮೊದಲಾದ ಸಂಸ್ಥಾನಗಳನ್ನು ಬಿಟ್ಟರೆ ಉಳಿದ ಊರು ಗಳಲ್ಲಿ ಮೊದಲನೆಯ ವಾರ ಪೂರ್ಣರೇಶನ್,ಎರಡನೆಯ ವಾರ ಅದರಲ್ಲರ್ಧ, ಮೂರನೆಯ ವಾರ ಅದರಲ್ಲರ್ಧ, ಸಿಕ್ಕುವುದು. ನಾಲ್ಕನೆಯ ರೇಷನ್ ಕೊಡಲು ಸ್ಟಾಕೇ ಇರುವುದಿಲ್ಲ. ಸಾಲ ದಕ್ಕೆ ನಯಾಳುಗಳಾದ ಕಾಂಗ್ರೆಸ್ ಸರ್ಕಾರದವರು, ವಾರಕ್ಕೆ ಆರೇ ದಿನದ ರೇಷನ್ ಪಡೆದುಕೊಂಡು, ಇನ್ನೊಂದು ದಿನದ ಆಹಾರವನ್ನು ಜನಾಂಗದಲ್ಲಿ ಹಸಿದವರಿಗಾಗಿ ಬಿಟ್ಟು ಸರಕಾರ ದೊಂದಿಗೆ ಸಹಕರಿಸಬೇಕು ಎಂದು ಪ್ರಕಟಿಸಿದ್ದಾರೆ. ಹೆಸ ರಿಗೆ ತಾವು ತಮ್ಮ ಸಂಬಳ ಕಡಿಮೆಮಾಡಿಕೊಂಡಿರುವೆವೆಂದು ಹೇಳಿಕೊಂಡು, ಟಿ. ಎ. (ಪ್ರಯಾಣ ಭತ್ತೆ) ಎಂದು ಸಾವಿ ರಾರು ರೂಪಾಯಿಗಳನ್ನು ಲೂಟಿಮಾಡುತ್ತಿರುವ ನಿಮ್ಮ ಮಂತ್ರಿಗಳು ಈ ಮಾತುಗಳನ್ನು ಹೇಳಬೇಕೆನಯ್ಯ! ಈಗ ಭಾರತದ ಎಲ್ಲ ಪ್ರಾಂತೀಯ ಸರಕಾರದ ಮಂತ್ರಿಗಳ ಬಂಧು ಗಳೆಲ್ಲ ಸ್ವರಾಜ್ಯ ಬಂದ ಬಳಿಕ ಲಕ್ಷಾಧೀಶರಾಗುತ್ತಿದ್ದಾರಲ್ಲ. ಈಗ ೫ ವರುಷಗಳ ಹಿಂದೆ ಅವರಿಗಿದ್ದ ಆಸ್ತಿಯನ್ನೂ ಈಗ ಅವರು ಸಂಗ್ರಹಿಸಿರುವ ಆಸ್ತಿಯನ್ನೂ ಹೋಲಿಸಿ ನೋಡಿದರೆ ಪ್ರಜೆಗಳ ಸ್ವತ್ತನ್ನು ಹೀಗೆ ಅಪಹರಣ ಮಾಡಿದ ದ್ರೋಹಕ್ಕೆ ಅವರಿಗೆ ಶಿಕ್ಷೆಯಾಗದಿರದಯ್ಯ? ಆದರೆ, ಅವರನ್ನು ವಿಚಾರಣೆ ಮಾಡುವ ಶಕ್ತಿ ಕೂಡಾ ನಮ್ಮಲ್ಲಿಲ್ಲದಂತಾಗಿದೆ. ಕೆಲವು ಮಂತ್ರಿಗಳ ಬಂಧುಗಳಂತು ವಿದೇಶಗಳಲ್ಲಿ ರಾಯಭಾರಿ ರೂಪ ದಿಂದ ಭಾರತವನ್ನು ಹೀಗೆ ಶೋಷಿಸುತ್ತಿರುವರೆಂದು ನೀನು ಪತ್ರಿಕೆಗಳಲ್ಲಿ ಓದುತ್ತಿರುವೆಯಾ? ಬಾ, ನನ್ನ ಜತೆಗೆ. ಇವತ್ತು ಬಸಪ್ಪಾ ಪಾರ್ಕಿನಲ್ಲಿ ಅನೇಕ ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಆಯುರ್ವೇದ, ಸೋಷಲಿಸ್ಟ್ ಮೊದಲಾದವರ ಸಮ್ಮೇಳನಗಳು ನಡೆಯುವವು. ಮುಂಬರುವ ಚುನಾವಣೆ ಯಲ್ಲಿ ಎಂತಹರನ್ನು ಆರಿಸಬೇಕೆಂದು ಆಯಾ ಸಮ್ಮೇಲನದ ಮುಖಂಡರು ಹೇಳುವರಂತೆ, ಕೇಳೋಣ ಬಾ" ಎಂದು ಕರೆದ. ಪಾರ್ಕಿಗೆ ಹೋಗುವಾಗ ದೂರದಿಂದಲೆ ಧ್ವನಿವರ್ಧಕ ಯಂತ್ರ ದಿಂದ ಭಾಷಣ ಪ್ರವಾಹವು ವಾತಾವರಣದಲ್ಲೆಲ್ಲ ಹರಡಿ, ಕಿವಿಗಳನ್ನು ಕೊರೆಯಲಾರಂಭಿಸಿದ್ದವು. ಪಾರ್ಕಿನಲ್ಲಿ ಹಲವು ವೇದಿಕೆಗಳು, ಪ್ರತಿಯೊಂದು ವೇದಿಕೆಯ ಮೇಲೂ ಒಂದೊಂದು ಕೂಟವನ್ನು ಪ್ರತಿನಿಧಿಸುವ ಒಬ್ಬೊಬ್ಬ ಮುಖಂಡನು ಮಾತ ನಾಡುತ್ತಿರುವನು. ಪ್ರತಿಯೊಬ್ಬನ ಬಳಿಯಲ್ಲೂ ಒಂದೊಂದು ಧ್ವನಿವರ್ಧಕ ಯಂತ್ರ. ಒಂದೇ ಬೀದಿಯ ಎರಡು ಪಕ್ಕ ಗಳಲ್ಲಿ ಸಾಲಾಗಿರುವ ೧೦-೧೨ 'ಉಪಾಹಾರ ಗೃಹ'ಗಳಲ್ಲಿ ಅವ ರವರ ಅಭಿರುಚಿಗೆ ತಕ್ಕಂತೆ, ವಿವಿಧ ಬಾನುಲಿ ಕೇಂದ್ರಗಳ ಕಾರ್ಯಕ್ರಮಗಳಿಗೆ ಅವರವರ ರೇಡಿಯೊಗಳನ್ನು ತಿರುಗಿಸಿ ಇಟ್ಟರೆ,ಯಾವ ಧ್ವನಿ ಎಲ್ಲಿಂದ ಬರುವುದೊ ಎಂದು ಪಥಿಕರಿಗೆ ಗೊತ್ತಾಗದಿರುವಂತೆ, ಪಾರ್ಕಿನ ಪ್ರೋಗ್ರಾಮುಗಳ ಭಾಷಣ ಧ್ವನಿಗಳ ಅವಸ್ಥೆಯೂ ಆಗಿತ್ತು. ಅದರಲ್ಲಿ ನನಗೆ ಕೇಳಿ ಬಂದ ಧ್ವನಿಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಿರುವೆನು:—

೧. ಕಾಂಗ್ರೆಸ್ ಡೆಮೊಕ್ರೆಟಿಕ್ ಪಾರ್ಟಿ ಅಧ್ಯಕ್ಷ:— ನಾನು........ಕಾಂಗ್ರೆಸ್ ಕಮಿಟಿ ಅಧ್ಯಕ್ಷನಾಗಿ ಮಾತಾಡುತ್ತಿ ದ್ದೇನೆ. ಈಗಿನ ಮಂತ್ರಿಮಂಡಲದಲ್ಲಿರುವವರು ಪ್ರಜೆಗಳಿಗೆ ಏನೇನೊ ಉಪಕಾರಗಳನ್ನು ಮಾಡುತ್ತೇವೆಂದು ಅಧಿಕಾರಕ್ಕೆ ಬಂದರು. ಈಗ ನೋಡಿದರೆ ಅವರು ತಂತಮ್ಮ ಬಂಧುಮಿತ್ರ ರಿಗೆ ಅಧಿಕಾರಗಳನ್ನು ಹಂಚುವುದರಲ್ಲಿ ಮಗ್ನರಾಗಿದ್ದಾರೆ. ಜನಗಳ ಆಹಾರ ಸಮಸ್ಯೆ, ಆರ್ಥಿಕ ಸಮಸ್ಯೆಗಳನ್ನು ಬಿಡಿಸು ವುದರಲ್ಲಿ ಅವರ ಗಮನವು ಹೋಗುತ್ತಿಲ್ಲ. ಮಾತೆತ್ತಿದರೆ ದಿಲ್ಲಿ ಪ್ರಯಾಣ ಬೆಳೆಸುವರು. ಸಮಸ್ಯೆಗಳನ್ನು ಪ್ರಾಂತ್ಯ ದಲ್ಲಿ ಸಂಚಾರ ಮಾಡುವುದರಿಂದ ಬಿಡಿಸಲಾಗದಿದ್ದರೂ,ತಮ್ಮ ಪ್ರಯಾಣದ ಭತ್ಯಗಳನ್ನು ಹೆಚ್ಚಿಸಿಕೊಳ್ಳಲು ಸುಮ್ಮಸುಮ್ಮನೆ ಪ್ರಯಾಣ ಮಾಡಿ ಪ್ರಜೆಗಳ ಮೇಲೆ ಅದರ ಭಾರವನ್ನು ಹೇರುತ್ತಿರುವರು. ನೀವು ಬರುವ ಚುನಾವಣೆಯಲ್ಲಿ ನಿಮ್ಮ ಸೇವೆಗೆ ಸಿದ್ಧರಾಗಿರುವ ನಮ್ಮ ಡೆಮೊಕ್ರೆಟಿಕ್ ಪಾರ್ಟಿಗೆ ಓಟು ಕೊಡಬೇಕು—ಇತ್ಯಾದಿ.

೨. ಕಾಂಗ್ರೆಸ್ ಸೋಷಿಯಲಿಸ್ಟ್ ವೇದಿಕೆಯಿಂದ:— ಈಗಿನ ಮಂತ್ರಿಮಂಡಲದವರು ಅನುಸರಿಸುತ್ತಿರುವ ವಿದೇ ಶಾಂಗ ನೀತಿ ಅಧ್ವಾನವಾಗಿದೆ. ಕಾರ್ಮಿಕರ ವಿಚಾರದಲ್ಲಿ ಅವರ ಸಹಾನುಭೂತಿ ಇಲ್ಲವಾಗಿದೆ. ಬಂಡವಾಳಗಾರರ ಕಡೆಗೆ ಅವರ ಒಲವು ಹೆಚ್ಚಾಗಿದೆ. ಆದುದರಿಂದ ಈಗಿನ ಪ್ರಭುತ್ವವೂ ಹಿಂದಿನಂತೆ ಬಂಡವಾಳಶಾಹಿಪ್ರಭುತ್ವವನ್ನು ಹೋಲುತ್ತಿದೆ. ಅದಕ್ಕಿಂತಲೂ ಇದು ದೇಶದ ಪರಿಸ್ಥಿತಿಯನ್ನು ಕೆಡಿಸಿದೆ. ಲಂಚ ರುಷುವತ್ತುಗಳು ದಿನದಿನಕ್ಕೆ ಹೆಚ್ಚುತ್ತಲಿವೆ. ಯಾವ ಕಚೇರಿಗೆ ಹೋದರೂ ಕಚೇರಿಯ ಕಂಬಗಳು ಕೂಡ, "ಮಾಮೂಲು ಎಲ್ಲಿ" ಎಂದು ಕೈಚಾಚುತ್ತಿವೆ. ಆಹಾರ ಸಮಸ್ಯೆ ದಿನದಿನಕ್ಕೆ ಹದಗೆಟ್ಟು ಹೋಗಿದೆ. 'ಆಹಾರವನ್ನು ಹೆಚ್ಚಾಗಿ ಬೆಳೆಯಿರಿ' ಎಂದು ಒಂದು ಕಡೆ ಪ್ರಚಾರ ಮಾಡುತ್ತ, ಮತ್ತೊಂದು ಕಡೆ ಅದೇ ಧುರೀಣರು "ವಾರಕ್ಕೆ ಒಂದು ದಿನ ಉಪವಾಸ ಮಾಡಿದರೆ ಆರೋಗ್ಯಕ್ಕೆ ಒಳ್ಳೆಯದು" ಎಂದು ಜನರಿಗೆ ಬೋಧಿಸುತ್ತಲಿರುವರು. ಅವರು ವರ್ಷಗಟ್ಲೆ ಉಪ ವಾಸ ಮಾಡಿದರು. ಅವರೂ ಹಿಂದೆ ತಿಂದಿರುವ ಆಹಾರದಿಂದ ಮುಂದೆ ಬಂದಿರುವ ಹೊಟ್ಟೆಯು ಕರಗುವುದೊ ಇಲ್ಲವೊ! ಎಷ್ಟೊ ಜನ ಬಡವರು ಕೆಲವರಿಗೆ ಒಪ್ಪತ್ತು ಕೂಡ ಹೊಟ್ಟೆ ತುಂಬ ಊಟ ಮಾಡಲು ಆಹಾರ ದೊರೆಯದಾಗಿದೆ ಎಂದೂ, ಅವರು ಹೊಟ್ಟೆ ತುಂಬಲು ಸಿಕ್ಕಿದ ಸೊಪ್ಪುಸದೆಗಳನ್ನು ತಿನು ತ್ತಿದ್ದಾರೆ. ಈಗ ಕೇಂದ್ರ ಮಂತ್ರಿಮಂಡಲದವರು ಪ್ರವಾಸ

ಹೊರಟು ಜನರಿಗೆ ಹುಲ್ಲು ತಿನ್ನಲು ಬೋಧಿಸಲಾರಂಭಿಸಿದ್ದಾರೆ. ಈ ಬೋಧನೆಗೆ ಇವರ ಪ್ರವಾಸಗಳೆಲ್ಲ ವಾಯು ಮಾರ್ಗವಾಗಿಯೆ ನಡೆಯಬೇಕೆ? ಈಗ ಸೇಲ್ಸ್ ಟ್ಯಾಕ್ಸ್ ನಿಂದಲೂ ಜನರಿಗೆ ಆದಾಯ ಕಡಿಮೆಯಾಗಿದ್ದರೂ ವೆಚ್ಚದ ಹೊರೆ ಮಾತ್ರ ಹೆಚ್ಚುತ್ತಿದೆ. ಈಗಿನ ಸರಕಾರ ಈಗಿನ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಿಲ್ಲ. ಬರುವ ಚುನಾವಣೆಯಲ್ಲಿ ನೀವು ನಿಮ್ಮ ಸೇವೆಗೆ ಸಿದ್ಧರಾಗಿರುವ ಸೋಷಿಯಲಿಸ್ಟರಿಗೇ—ಮತಕೊಟ್ಟು ದೇಶದಲ್ಲಿ ಶಾಂತಿ ಸುಖ ನೆಲೆಸುವಂತಹ ಕಾರ್ಯ ಮಾಡಲು ನಮಗೆ ಅವಕಾಶವೀಯುವಿರಾ ಇತ್ಯಾದಿ ಇತ್ಯಾದಿ.

೩. ದೇಶೀಯ ವೈದ್ಯಮಂಡಲಿಗಳ ಸಮ್ಮೇಲನಾಧ್ಯಕ್ಷ ವೇದಿಕೆಯಿಂದ: – ಸ್ವರಾಜ್ಯ ಬಂದ ಬಳಿಕ ನಮ್ಮ ದೇಶೀಯ ವೈದ್ಯಪದ್ಧತಿಗೆ ಹೆಚ್ಚು ಪ್ರೋತ್ಸಾಹ ಸಿಕ್ಕಬೇಕಾದ್ದು ನ್ಯಾಯವೇ ಆಗಿದ್ದರೂ, ಈಗಿನ ಮಂತ್ರಿಮಂಡಲದಲ್ಲಿರುವವರೆಲ್ಲ ನಮ್ಮ ದೇಶೀಯ ವೈದ್ಯ ಪದ್ಧತಿಯಿಂದ ದೂರವಾಗಿರುವವರೆ ಆಗಿರುವರು. ಅವರ ಬಾಲ್ಯದಿಂದ ಈಗ ಮಂತ್ರಿಗಳಾಗುವ ವರೆಗೆ ಅವರ ಜೀವನವೆಲ್ಲ ಪಾಶ್ಚಾತ್ಯ ಜೀವನ ಕ್ರಮದಲ್ಲಿ ನಡೆದು ಬಂದಿರುವುದರಿಂದ ಅವರ ಚಿಕಿತ್ಸಾ ಕ್ರಮಗಳೂ ಪಾಶ್ಚಾತ್ಯರಿಂದಲೆ ಪ್ರೇರಿತವಾಗಿವೆ. ಕೇಂದ್ರ ಅಥವಾ ಯಾವ ಪ್ರಾಂತೀಯ ಮಂತ್ರಿಮಂಡಲವನ್ನೆ ತೆಗೆದುಕೊಳ್ಳಿ. ಆರೋಗ್ಯ ಮಂತ್ರಿಗಳಾರು? ಪಾಶ್ಚಾತ್ಯ ವೈದ್ಯ ಶಾಸ್ತ್ರದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ಆ ಚಿಕಿತ್ಸಾ ಕ್ರಮದಿಂದಲೆ ಹಣಗಳಿಸಿ ದೊಡ್ಡವರಾಗಿರುವವರು, ಅಥವಾ ದೇಶೀಯ ಚಿಕಿತ್ಸಾ ಪದ್ಧತಿಯ ಗಂಧವೇ ಇಲ್ಲದೆ, ನಮ್ಮ ದೇಶದ ಬಡಜನರ ಜೀವನ ಕ್ರಮದ ಪರಿಚಯವೆ ಇಲ್ಲದೆ ಪಶ್ಚಾತ್ಯ ಜೀವನಕ್ರಮದಲ್ಲಿಯೆ ತಮ್ಮ ಬಾಳನ್ನು ಮುಂದುವರಿಸಿಕೊಂಡು ಬಂದಿರುವ ರಾಜಕುಮಾರಿಗಳು!ಅಂಥವರಿಂದ ನಮ್ಮದೇಶೀಯ ವೈದ್ಯಶಾಸ್ತ್ರಕ್ಕೆ ಮಾನ್ಯತೆ ದೊಯುವುದೆಂತು? ದೇಶೀಯ ವೈದ್ಯಕ್ರಮವು ಶಾಸ್ತ್ರೀಯವಾಗಿಲ್ಲವೆಂದು ಅವರು ವಾದ ಹೂಡಿರುವರು. ಶಾಸ್ತ್ರ ಎಂಬ ಪದದ ಅರ್ಥವಾದರೂ ಅವರಿಗೆ ತಿಳಿಯದು. ಅವರೂ ಬಂಡವಾಳ ಶಾಹಿಯವರ ಬಲೆಗೆ ಸಿಕ್ಕಿ ಔಷಧಿ ತಯಾರಿಸುವ ದೊಡ್ಡ ದೊಡ್ಡ ಪಾಶ್ಚಾತ್ಯ ಕಂಪೆನಿಗಳ ಔಷಧಿಗಳನ್ನೇ ಪ್ರೋತ್ಸಾಹಿಸುತ್ತ, ನಮ್ಮ ದೇಶದ ಹೊನ್ನ ಹೊಳೆ ಅತ್ತ ಹರಿದುಹೋಗುವಂತೆ ಮಾಡುತ್ತಿರುವರು. ದೇಶದಲ್ಲಿ ಆಹಾರಾಭಾವ, ಸರಿಯಾದ ಪೋಷಣೆಯ ಅಭಾವ ಹೆಚ್ಚಿ, ಮಕ್ಕಳಿಗೆ ಬೇಕಾದ ಹಾಲು ತುಪ್ಪ ಸರಿಯಾಗಿ ಸಿಕ್ಕದೆ ಕ್ಷಯರೋಗಾದಿಗಳು ಜಾಸ್ತಿಯಾಗುತ್ತಿರುವಾಗ, ಆಹಾರಾಭಾವವಿದ್ದರೆ, ಔಷಧಿಗಳಿಂದಲಾದರೂ ಪೋಷಣೆ ಹೊಂದಿ ಎಂದು ಸೂಚಿಸಲು ಅವರು, ಅನೇಕ ಪ್ರಸಿದ್ಧ ಪಾಶ್ಚಾತ್ಯ ಡಾಕ್ಟರುಗಳ ಖಂಡನೆಗೂ ಗುರಿಯಾಗಿರುವ ಬಿ. ಸಿ. ಜಿ. ವ್ಯಾಕ್ಸೀನ್ ಸ್ಟ್ರೆಪ್ಟೋಮೈಸಿನ್, ಪೆನ್ಸಿಲಿನ್ ಮೊದಲಾದವುಗಳ ಪ್ರಚಾರಗಳಿಗೆ ಪ್ರೋತ್ಸಾಹವೀಯುತ್ತಿರುವರು. ನಮ್ಮ ದೇಶದ ಪರಿಸ್ಥಿತಿಯ ಪರಿವೆಯೆ ಇಲ್ಲ ಅವರಿಗೆ. ಅವರ ಶರೀರ, ತಲೆ, ಇಲ್ಲಿದ್ದರೂ, ಅವರ ಮಿದುಳು ಜಿನೀವಾದಲ್ಲಿರುವ ವಿಶ್ವ ಆರೋಗ್ಯ ಸಮಿತಿ (World Health Organisation)ಯಲ್ಲಿ ಪಾಶ್ಚಾತ್ಯ ಡಾಕ್ಟರುಗಳ ವಶದಲ್ಲಿರುವದು. ಚೋಪ್ರಾ ಕಮಿಟಿಯಂತಹ ಮುಂದಗಾಮಿ (ಮಾಡರೇಟ್) ವೈದ್ಯಸಮಿತಿಯ ವರದಿಯಲ್ಲಿ ಸೂಚಿತವಾಗಿರುವ ದೇಶೀಯ ವೈದ್ಯಪದ್ಧತಿಗೆ ಈಗಿನ ಸರಕಾರ ಕೊಟ್ಟಿರುವ ಮಾನ್ಯತೆಯಿಂದಲೆ, ಅದರಲ್ಲಿರುವ ಆರೋಗ್ಯ ಮಂತ್ರಿಗಳ ಒಲವು ಎತ್ತಕಡೆ ಇದೆ ಎಂದು ವ್ಯಕ್ತವಾಗುತ್ತಿದೆ. ಮುಂದಿನ ಚುನಾವಣೆಯಲ್ಲಿ ನಮ್ಮ ಬಡ ದೇಶಕ್ಕೆ ಬೇಕಾದ, ಅವಶ್ಯವಾಗಿರುವ, ಸಾವಿರಾರು ವರುಷಗಳಿಂದ ನಡೆದುಕೊಂಡು ಬಂದು, ಈಗಲೂ ದೇಶದಲ್ಲಿ ನೂರಕ್ಕೆ ೯೦ ಜನರಿಗೆ ಚಿಕಿತ್ಸಾ ಸಹಾಯವನ್ನು ನೀಡುತ್ತಿರುವ ದೇಶೀಯ ವೈದ್ಯಶಾಸ್ತ್ರಕ್ಕೆ ಪ್ರೋತ್ಸಾಹಕೊಡಲು ಸಿದ್ಧರಾಗಿದ್ದೇವೆಂದು ಅದಕ್ಕಾಗಿ ದುಡಿದು ಬಡಜನರ ಆರೋಗ್ಯಾಭಿವೃದ್ಧಿಗೆ ಕೆಲಸಮಾಡುವಂತಹರನ್ನೆ ನೀವು ನಾವು ಮುಂದಿನ ಚುನಾವಣೆಯಲ್ಲಿ........" ಇತ್ಯಾದಿ.

೪. ಸ್ಟೂಡೆಂಟ್ಸ್ ಫೆಡರೇಶನ್ ಅಧ್ಯಕ್ಷ ವೇದಿಕೆಯಿಂದ:—ಧ್ವನಿಯು ಭೋರ್ಗರೆಯುತ್ತಿತ್ತು.— ಮಿತ್ರರೆ, ಇಂದಿನ ಯುವಕರಾದ ನಾವು ಭವಿಷ್ಯದ ಪ್ರಜೆಗಳೆಂದು ಈಗಿನ ಮಂತ್ರಿಮಂಡಲದವರಿಗೆ ಮನವರಿಕೆಯಾಗಿಲ್ಲ. ಈಗಿನ ಭಾರತ ಸರ್ಕಾರವು ಜಾತಿಕೋಮು ಭೇದವಿಲ್ಲದ ಸೆಕ್ಯೂಲರ್ ಗೌರನ್‌ಮೆಂಟ್ ಎನಿಸಿಕೊಂಡಿದ್ದರೂ ವಿದ್ಯಾಭ್ಯಾಸ ವಿಚಾರದಲ್ಲಿ ಸರಕಾರವು ತೋರುತ್ತಿರುವ ಕೋಮುವಾರು ನೀತಿಯು ಅಸಹನೀಯವಾಗಿದೆ. ಈ ನೀತಿಯು ದಕ್ಷಿಣ ಭಾರತದ ಪ್ರಾಂತೀಯ ಸರ್ಕಾರಗಳಲ್ಲಿ, ಅದರಲ್ಲಿಯೂ ಮೈಸೂರು ಮದ್ರಾಸುಗಳಲ್ಲಿ ವಿಪರೀತವಾಗಿದೆ. ತನ್ನ ಮನಸ್ಸಿಗೆ ತೋರಿದಷ್ಟು, ಶಕ್ತಿ ಅಳವಡಿಸುವಷ್ಟು ಶಿಕ್ಷಣ ಪಡೆಯುವುದು, ವಿದ್ಯಾಭ್ಯಾಸಮಾಡುವುದು ಪ್ರತಿಯೊಬ್ಬ ಪ್ರಜೆಗೆ ನಿಸರ್ಗಸಿದ್ಧವಾದ ಹಕ್ಕು ಆಗಿದೆ. ಈಗ ಸರ್ಕಾರದವರು ಟೆಕ್ನಿಕಲ್ ಕಾಲೇಜುಗಳಲ್ಲಿ, ಕಲಾಶಾಲೆಗಳಲ್ಲಿ ಉತ್ತೀರ್ಣರಾಗಿ ಯೋಗ್ಯತೆ ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರವೇಶವನ್ನೀಯುವುದರಲ್ಲಿ ಬ್ರಾಹ್ಮಣ, ಬ್ರಾಹ್ಮಣೇತರ ಎಂಬ ಕೋಮುವಾರು ನೀತಿಯಿಂದ ಸೀಟುಗಳನ್ನು ಕೊಡಲೆತ್ನಿಸಿರುವ ಪದ್ಧತಿಯು ಅತ್ಯಂತ ಖಂಡನೀಯ. ಕೋಮುಜಾತಿ ಭಾವನೆಗಳಿಂದ ಅತೀತವಾಗಿರುವುದೆನಿಸಿರುವ ಸ್ವತಂತ್ರ ಭಾರತಕ್ಕೆ ಇದು ಕಳಂಕ. ಪ್ರತಿಯೊಬ್ಬ ಪ್ರಜೆಗೂ ಅವನು ಅಪೇಕ್ಷಿಸುವ ವಿದ್ಯಾಭ್ಯಾಸಕ್ಕೆಅನುಕೂಲತೆಯನ್ನುಂಟುಮಾಡಿಕೊಡುವುದು ಸರಕಾರದ ಕರ್ತವ್ಯ. ಈಗ ಜನತಾ ಸರ್ಕಾರದವರೆನಿಸಿರುವ ಮಂತ್ರಿಮಂಡಲಕ್ಕೆಅನುಸರಿಸುತ್ತಿರುವ ನೀತಿ ಲಾಂಛನಾ

ಸ್ಪದವಾಗಿದೆ. ಮುಂದಿನ ಚುನಾವಣೆಯಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಸೇರಿ, ಈಗಿನವರಾರೂ ಮಂತ್ರಿಗಳಾಗಿ ಬರದಂತೆ ಪ್ರಚಾರಕಾರ್ಯ ಮಾಡಲು......." ಇತ್ಯಾದಿ.

೫. ವೃದ್ಧನಾಗರಿಕರ ಸಂಘಾಧ್ಯಕ್ಷ ವೇದಿಕೆಯಿಂದ: ಮೊರೆಯುತ್ತಿದ್ದ ಧ್ವನಿ—"ಎಂಥಾ ಕಾಲಬಂತು! ಅನ್ನಕ್ಕೆ ಕಷ್ಟ—ಟಟ್ಟಿಗೆ ತಾಪತ್ರಯ—ಕಟ್ಟಿಗೆ ಸಿಕ್ಕುವುದು ದುರ್ಲಭವಾಗಿದೆ. ಪದಾರ್ಥಗಳ ಬೆಲೆ—೧ಕ್ಕೆ ಆರರಷ್ಟು ಹತ್ತರಷ್ಟು ಏರುತ್ತಿದೆ. ಆದಾಗ್ಯೂ ನಮಗೆ ಕೊಡುತ್ತಿರುವ ಪೆನ್‌ಷನನ್ನು ಸರ್ಕಾರ ಏರಿಸಿಲ್ಲ. ಮಂತ್ರಿಮಂಡಲದವರು ಹೆಸರಿಗೆ ಕಡಿಮೆ ಸಂಬಳ ತೆಗೆದುಕೊಳ್ಳುತ್ತಿದ್ದರೂ ಅವರು ಜಿಲ್ಲಾ ಪ್ರವಾಸಗಳ ಮೂಲಕ ಪಡೆಯುತ್ತಿರುವ ಪ್ರಯಾಣಭತ್ಯವನ್ನು ನೋಡಿದರೆ, ಹಿಂದೆ ಅಧಿಕಾರ ಮಾಡಿ, ದೇಶವನ್ನು ದರ್ಪದಿಂದ ಸರಕಾರದವರು ಹತೋಟಿಯಲ್ಲಿಟ್ಟುಕೊಂಡಿದ್ದ ನಾವು ಸಂಬಳವಿಲ್ಲದೆ ಬರೀ ಈ ಭತ್ಯದ ಮೇಲೆಯೆ ಮಂತ್ರಿಗಳ ಕೆಲಸವನ್ನು ಮಾಡಬಲ್ಲೆವೆಂದು ಹೇಳುವ ಅವಶ್ಯಕತೆಯಿಲ್ಲ. ಈ ಸ್ವಾತಂತ್ರ್ಯ ಏನು ಸ್ವಾತಂತ್ರ್ಯ, ಬ್ಲಾಕ್‌ಮಾರ್ಕೆಟುಗಳಲ್ಲಿ ಎಮ್ಮೆ, ಕೋಣಗಳಂತಹ ದೊಡ್ಡ ದೊಡ್ಡ ಧನಿಕ ಪ್ರಾಣಿಗಳು ತಪ್ಪಿಸಿಕೊಳ್ಳುತ್ತ ಮೇಕೆ ಕುರಿಗಳಂತಹ ಬಡಪ್ರಾಣಿಗಳು ಮಾತ್ರ ಸಿಕ್ಕಿಕೊಳ್ಳುತ್ತಿವೆ. ನಾಲ್ಕೈದು ವರುಷಗಳ ಹಿಂದೆ, ೮-೧೦ ವರುಷಗಳ ಹಿಂದೆ ಮನೆಮಠವಿಲ್ಲದೆ ದುಡಿಯುತ್ತಿದ್ದವರು, ಇಂದು ಮೂರು ನಾಲ್ಕು ಅಂತಸ್ತುಗಳ ಮಹಡಿಮನೆಗಳನ್ನು ಕಟ್ಟುತ್ತಿರುವುದನ್ನು ನೋಡಿದರೆ, ಇವರಿಗೆಲ್ಲ ಹಣ ಎಲ್ಲಿಂದ ಬಂತು ಎಂದು ವ್ಯಕ್ತವಾಗುವುದು. ನಾವುಗಳೆಲ್ಲಾ ೩೦-೩೫ ವರುಷ ಕಾಲ ಸರ್ವೀಸ್‌ಮಾಡಿ ದೊಡ್ಡ ದೊಡ್ಡ ಅಧಿಕಾರಗಳನ್ನು ಮಾಡಿದಾಗ್ಗೂ ನಮ್ಮ ಮನೆಗೆ ಇನ್ನೊಂದು ಅಂತಸ್ತನ್ನು ಕಟ್ಟಿಸಲಾಗಲಿಲ್ಲ. ನಮ್ಮ ಕಾಲದಲ್ಲಿ ಲಂಚ ರುಷುವತ್ತುಗಳ ಹೆಸರೇ ಅಪರೂಪವಾಗಿತ್ತು. ಈಗ ಅದರ ಜಪವೇ ನಡೆದುಬಿಟ್ಟಿದೆ. ಈ ಮಂತ್ರಿಮಂಡಲದವರೆಲ್ಲಿ ತಾವು ಸ್ವತಂತ್ರ ಭಾರತದ ಮಂತ್ರಿಪವವಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡೆ ಕಾರಾಗೃಹಕ್ಕೆ ಹೋದರು ಅಂತ ಕಾಣತ್ತೆ. ಇನ್ನು ಮುಂದಿನ ಚುನಾವಣೆಗೆ ನಮ್ಮಲ್ಲಿ ಕೆಲವರು ಸಬಲರಾಗಿರುವವರನ್ನು ಹುರಿಯಾಳುಗಳಾಗಿ ನಿಲ್ಲಬೇಕೆಂದು ನಾನು ಸೂಚಿಸುತ್ತೇ...." ಇತ್ಯಾದಿ.

೬. ಸ್ವತಂತ್ರ ರಾಷ್ಟ್ರೀಯ ಪಕ್ಷದ ಧುರೀಣ ವೇದಿಕೆಯಿಂದ ಗರ್ಜನೆ ಘುಣಘುಣಿಸುತ್ತಿತ್ತು:—"ಮುಂದಿನ ಚುನಾವಣೆಗಾಗಿ ಈಗಿನ ಮಂತ್ರಿಮಂಡಲದವರು ನಮ್ಮ ದೇಶದ ಜನರ ಆಹಾರ ಸಮಸ್ಯೆಯ ಕಡೆ, ಆರ್ಥಿಕ ಸಮಸ್ಯೆಯ ಕಡೆ, ಕಂಟ್ರೋಲಿನಿಂದ ಜನರಿಗೆ ಆಗುತ್ತಿರುವ ತೊಂದರೆಕಡೆ ಲಕ್ಷವೀಯದೆ, ಕೊರಿಯಾ ಯುದ್ಧ, ಜಗತ್ತಿನ

SERVING YOU THESE 40 YEARS........

and still eager and willing to give you the best in Insurance Policies or Representation. We humbly pride ourselves with your recognition of our Expert and Prompt service as more have come to us with more business.

Kochikar Brothers, Limited,

Chief Agents:

The Bombay Life Assurance Company, Limited.

'Bombay Life Bldg.,' UDIPI.

WITH OFFICES AT:—

Mangalore, Calicut, Coimbatore, Madras, Madura, Bangalore, Trivandrum & Bombay.

ಶಾಂತಿ ವಿಚಾರವಾಗಿ ಹರಟುತ್ತಿದ್ದಾರೆ. ನಾಳೆ ಚುನಾವಣೆ ಸಂಬಂಧವಾಗಿ ನಿಮಗೆ ೧-೨ ತಿಂಗಳು ಕಾಲ—ಚುನಾವಣೆ ಮುಗಿಯುವವರೆಗೆ ಆಹಾರವನ್ನು ೧೨ ರಿಂದ ೧೬ ಔನ್ಸುಗಳಂತೆ ಹೆಚ್ಚಾಗಿ ಕೊಡಲು ಆಜ್ಞೆಕೊಡಬಹುದು. ನಿಮ್ಮ ಕಂದಾಯಗಳನ್ನು (ತೆರಿಗೆ) ಒಂದು ವರ್ಷ ಕಡಿಮೆ ಮಾಡಬಹುದು. ಅದೆಲ್ಲ ಚುನಾವಣೆ ಸ್ಟಂಟ್‌ಗಳು. ಅವುಗಳನ್ನು ನೀವು ನಂಬಬೇಡಿ. ನಮ್ಮ ರಾಷ್ಟ್ರವನ್ನು ರಕ್ಷಿಸಿಕೊಳ್ಳಲು ನಾವು ಮೊದಲು ಸಿದ್ಧರಾಗಬೇಕು. ನಮ್ಮ ನಾವು ಮೊದಲು ಸಾಕಾದಷ್ಟು ಅನ್ನ ಆಹಾರ ಒದಗಿಸುವುದು, ನಮ್ಮ ಕಾರ್ಮಿಕ ಜನರ ಜೀವನ ಮಟ್ಟವನ್ನು ಏರಿಸುವುದು, ಕೈಗಾರಿಕೆಗಳನ್ನು ರಾಷ್ಟ್ರೀಕರಣಮಾಡುವುದು ನಮ್ಮ ಪಕ್ಷದ ಧ್ಯೇಯವಾಗಿವೆ. ಅದಕ್ಕಾಗಿ ಸಾಯುವ ವರೆಗೆ ನಾವು ದುಡಿಯಲು ಸಿದ್ಧರಾಗಿದ್ದೇವೆ. ನೀವೆಲ್ಲರೂ ನಮಗೆ—ನಮ್ಮ ಸ್ವತಂತ್ರ ರಾಷ್ಟ್ರೀಯ ಪಕ್ಷಕ್ಕೇ-ಮತ........ಇತ್ಯಾದಿ"


ಗಾಂಧಿ ಸೇವಾಸಂಘಾಧ್ಯಕ್ಷರ ವೇದಿಕೆಯ ಕಡೆಯಿಂದ ಮಂದಮಾರುತನಂತೆ ಮೃದುವಾಗಿ ಈ ಧ್ವನಿಯು ಹರಿದು ಬರುತ್ತಿತ್ತು:—"ಪೂಜ್ಯ ಬಾಪೂಜಿಯನ್ನು ಕಳೆದುಕೊಂಡು ಇಂದು ನಾವು ದಿಕ್ಕುಕಾಣದ ತಬ್ಬಲಿಗಳಂತಾಗಿದ್ದೇವೆ. ಅವರಿದ್ದಿದ್ದರೆ ಅವರ ಉಪವಾಸ ವ್ರತದಿಂದ ಈಗಿನ ಬ್ಲಾಕ್‌ಮಾರ್ಕೆಟ್‌ಗಳು, ಲಂಚರುಷುವತ್ತುಗಳು, ಗಾಂಧಿಟೋಪಿ, ಖಾದಿ ಧಾರಣೆಯ ಮರೆಯಲ್ಲಿ ನಡೆಯುತ್ತಿರುವ ಅತ್ಯಾಚಾರಗಳನ್ನು ನಿಲ್ಲಿಸಿಬಿಡುತ್ತಿದ್ದರು. ಇಂದು ಈಗಿನ ಸಿನೇಮಾ, ಮತ್ತು ಶಿಕ್ಷಣ ಕ್ರಮಗಳ ಮೂಲಕ ನಮ್ಮ ಯುವಕ ಯುವತಿಯರಲ್ಲಿ ತಾಂಡವವಾಡಲಾರಂಭಿಸಿರುವ ನೈತಿಕ ಪತನವನ್ನು ಅವರು ತಮ್ಮ ತಪಶ್ಶಕ್ತಿಯಿಂದ ತಡೆಗಟ್ಟುತ್ತಿದ್ದರು. ದೇಶದಲ್ಲಿ ಧನ ಸಂಪಾಧನೆಯ ದುರಾಶೆಯಿಂದ ಬಂಡವಾಳ ಶಾಹಿಯವರು ತಮ್ಮ ವನಸ್ಪತಿ ಸಂಘದ ಮೂಲಕ "ವನಸ್ಪತಿ ತುಪ್ಪವನ್ನು ತಯಾರಿಸಿ" ಹಂಚುತ್ತಾ ದೇಶದ ಜನರಲ್ಲಿ ಕ್ಷಯ, ಕೂದಲು ಉದುರುವುದು, ಕರುಳುಗಳ ರೋಗಗಳು, ವ್ರಣಗಳು ಮೊದಲಾದ ರೋಗಗಳನ್ನು ಹರಡುತ್ತಿರುವ ಪ್ರಯತ್ನಗಳನ್ನು ಪ್ರತಿಭಟಿಸಿ ಅದರ ಪ್ರಚಾರವನ್ನು ಸಲ್ಲಿಸುತ್ತಿದ್ದರು. ದಿನದಿನಕ್ಕೂ ಈ ವನಸ್ಪತಿಯನ್ನು ಹೆಚ್ಚುಹೆಚ್ಚಾಗಿ ಉಪಯೋಗಿಸಿ ರೋಗಗಳನ್ನು ಹರಡುವ ಕೇಂದ್ರಗಳಾಗುತ್ತಿರುವ ಕಾಫಿಕ್ಲಬ್ಬುಗಳು, ಉಪಾಹಾರ ಮಂದಿರಗಳ ಸಂಖ್ಯೆ ಹೆಚ್ಚುವುದನ್ನು ತಪ್ಪಿಸುತ್ತಿದ್ದರು. ಇಂದು ತಮ್ಮ ಸ್ವಾರ್ಥಸಾಧನೆಯಲ್ಲಿ ಮಗ್ನರಾದವರೆಲ್ಲ ಖಾದಿ ಟೊಪ್ಪಿಯನ್ನು ಧರಿಸಿ, ಗಾಂಧಿಯವರ ಹೆಸರನ್ನೂ ತತ್ವಗಳನ್ನೂ ಉಚ್ಚರಿಸುತ್ತ, ತಮ್ಮ ಕಾರ್ಯಸಾಧನೆಮಾಡಿಕೊಳ್ಳುತ್ತಿರುವರು. ಮನೆಗೆ ಬಂದಕೂಡಲೇ ಅವರ ಗಾಂಧಿಟೋಪಿ ಮತ್ತು ತತ್ವಗಳೆಲ್ಲ ಎಲ್ಲಿಯೊ ಅಡಗಿಕೊಳ್ಳುವವು ಎಂತಹ ಮೋಸ! ಸ್ವರ್ಗದಲ್ಲಿರುವ ಗಾಂಧೀಜಿ ಇದನ್ನೆಲ್ಲ ನೋಡುತ್ತಿಲ್ಲವೆ? ಈಗಿನ ಮಂತ್ರಿಮಂಡಲದವರು ಕಾಂಗ್ರೆಸಿಗರೆಂದು ಹೇಳಿಕೊಳ್ಳುವರು. ಅವರು ಮಂತ್ರಿಗಳಾಗುವ ಮುಂಚೆ ಹೇಳುತ್ತಿದ್ದುದೇನು? ಹೋದ ಕಡೆಗಳೆಲ್ಲ ಗಾಂಧೀಜಿ ಹೆಸರಿನಲ್ಲಿ ಜೇರೆಯವರಿಗೆ ತತ್ತ್ವೋಪದೇಶ ಮಾಡುವುದೇನೂ? ತಾವು ತಮ್ಮ ಬಂಧುಮಿತ್ರರನ್ನು ತಂದು ದೊಡ್ಡ ಅಧಿಕಾರಗಳನ್ನು ಅವರಿಗೇ ಕೊಡುವುದು, ಅವರಿಗೆ ಬೇಕಾದಂತಹ ವ್ಯಾಪಾರಕ್ಕೆ ಲೈಸನ್ಸ್ ಕೊಡುವುದೆಂದರೇನು? ಇನ್ನು ಗಾಂಧಿಯವರ ತತ್ತ್ವಪ್ರಸಾರಣೆ ಮಾಡಲು, ಅವುಗಳನ್ನು ಜನರು ಬಾಳಿನಲ್ಲಿ ಅಳವಡಿಸಿಕೊಂಡು, ಆದರ್ಶ ಜೀವನ ನಡೆಸಲು ಅನುಕೂಲವಾದ ವಾತಾವರಣವು ಹುಟ್ಟಬೇಕಾದರೆ ಗಾಂಧಿಭಕ್ತರೆಂಬ ಪದವನ್ನು ಅನ್ವರ್ಥಗೊಳಿಸಬೇಕಾದರೆ ಅವರು ಇವರು ಇಂದು ತಂತಮ್ಮ ಆಡಳಿದ ಶಾಖೆಗಳಲ್ಲಿ ಗಾಂಧೀಜಿ ಹೆಸರಿನಲ್ಲಿ ನಡೆಸುತ್ತಿರುವ ದ್ರೋಹ ಕೃತ್ಯಗಳನ್ನು ತಡೆಗಟ್ಟಲು ನಾವು ಸತ್ಯಾಗ್ರಹ ಚಳವಳವನ್ನು ಹೂಡಬೇಕು, ಅದಕ್ಕೆ ಮಹಾತ್ಮಾಜಿ ಆತ್ಮವು ನಮಗೆ ಪ್ರೋತ್ಸಾಹ........" ಇತ್ಯಾದಿ.

೮. ಹಿಂದೂಧರ್ಮ ಸೇವಾಸಂಘಾಧ್ಯಕ್ಷ ವೇದಿಕೆಯಿಂದ ಉಗ್ರವಾಗಿ ಕಾರಿಬರುತ್ತಿದ್ದ ಧ್ವನಿಯು ಪ್ರವಾಹವಿದು:—"ಭಾರತವು ಭಾರತೀಯರದು. ಭಾರತ ಧರ್ಮ ಉದಾರವಾದುದು. ಆದರೆ ಔದಾರ್ಯಕ್ಕೂ ಒಂದು ಇತಿ—ಮಿತಿ ಇವೆ. ನಾವು ನಮ್ಮ ಔದಾರ್ಯದಲ್ಲಿ ಮಿತಿಮೀರಿ ಅನ್ಯದೇಶೀಯರಿಗೆ, ವಿಧರ್ಮಿಗಳಿಗೆ ಉದಾರತೆಯನ್ನು ತೋರಿದುದರಿಂದ ಅಖಂಡ ಭಾರತವು ದ್ವಿಖಂಡ ತ್ರಿಖಂಡವಾಯಿತು. ಎರಡು ಮೂರು ತಲೆಮಾರ ಹಿಂದೆ ಹಿಂದೂ ಧರ್ಮಿಗಳಾಗಿದ್ದು ಅನಂತರ ಕಾರಣಾಂತರದಿಂದ ವಿಧರ್ಮಿಗಳೆ ಇದಕ್ಕೆ ಕಾರಣರಾದರು. ಮಹಾತ್ಮಾ ಗಾಂಧಿಯವರ ಹೃದಯದ ವೈಶಾಲ್ಯವನ್ನು, ಅವರ ಸರ್ವಧರ್ಮ ಪ್ರೇಮಔದಾರ್ಯಗಳನ್ನು ಆ ವಿಧರ್ಮಿಗಳು ಗುರ್ತಿಸಲಿಲ್ಲ. ಅವರು ಜೀವಿಸಿದ್ದಾಗಲೆ ಹಿಂದೂಗಳನ್ನು ಪಾಕಿಸ್ಥಾನದ ಭಾಗಗಳಲ್ಲಿ ಕೊಲೆಮಾಡಿದರು. ಸ್ತ್ರೀಯರ ಮೇಲೆ ಅತ್ಯಾಚಾರಗಳನ್ನು ನಡೆಯಿಸಿದರು. ಆದರೂ ಅಷ್ಟರಿಂದಲೆ ತೃಪ್ತರಾಗದೆ ಮತ್ತೆ ಪಾಕಿಸ್ತಾನದಲ್ಲಿ ಉಳಿದಿರುವಹಿಂದುಗಳಿಗೆ ಹಿಂಸೆ ಕೊಡುತ್ತ ಅವರೆಲ್ಲ ಭಾರತಕ್ಕೆ ಹೊರಟುಬರುವಂತೆ ಮಾಡುತ್ತಿರುವರು. ಇದನ್ನು ಕಂಡೂ ಕಾಣದವರಂತೆ ನಮ್ಮ ಭಾರತ ಸರ್ಕಾರದವರು ಕೈಲಾಗದವರಂತೆ ಪಾಕಿಸ್ಥಾನದವರೊಂದಿಗೆ ಇನ್ನೂ ಸಮಾಧಾನ ಸಂಧಾನಗಳನ್ನು ಮಾಡಲೆತ್ನಿಸುತ್ತಿರುವರು. ಪಾಕಿಸ್ಥಾನದ ಮುಖ್ಯ ಮಂತ್ರಿ, ವಿದೇಶಾಂಗ ಮಂತ್ರಿ ಲಿಯಾಖತ್ ಅಲಿ, ಜಫರುಲ್ಲಾಖಾನ್ ಮೊದಲಾದವರು ಭಾರತದ ವಿಚಾರದಲ್ಲಿ ಹೊಟ್ಟೆಕಿಚ್ಚನ್ನು ಕಾರುತ್ತಿರುವಾಗ ಅವರೊಂದಿಗೆ ನಾವು "ಶಠಂ ಪ್ರತಿಶಾಠ್ಯಂ" ಎಂಬ ನೀತಿಯನ್ನು ಅನುಸರಿಸಬೇಕು.

ಏಟಿಗೆ ಏಟೇ ಪ್ರತಿಫಲ. ಆ ಕೃತಘ್ನರಿಗೆ ಅಹಿಂಸೆ-ಸತ್ಯ-ಪ್ರೇಮಗಳ ಭಾಷೆ ಅರ್ಥವಾಗುವುದಿಲ್ಲ. ಗಾಂಧಿಜಿ ಕೊಲೆಗೆ ಅವರೇ ಮೂಲ ಕಾರಣರು. ತನ್ನ ಪ್ರಜೆ ಎನಿಸಿರುವ ಅಲ್ಪ ಸಂಖ್ಯಾತ ಹಿಂದುಗಳಿಗೆ ಪಾಕಿಸ್ಥಾನವು ರಕ್ಷಣೆಯನ್ನು ಅಂತರ್‍ರಾಷ್ಟ್ರೀಯ ನೀತಿತತ್ತ್ವಕ್ಕನುಸಾರವಾಗಿ ಕೊಡಲಾರರಾದರೆ, ಭಾರತದ ಹಿಂದುಗಳು ಅವರ ರಕ್ಷಣೆಗೆ ನುಗ್ಗಬೇಕಾಗುವುದು. ಇನ್ನು ಹಿಂದೂಗಳೆನಿಸಿದ ನಾವು ಈ ದ್ವಿಖಂಡ-ತ್ರಿಖಂಡ ನೀತಿಯನ್ನು ಭಾರತವು ಸಹಿಸಲಾರದು. ಪಾಕಿಸ್ಥಾನವು ತಾನು ಆಡಿದ ಒಂದು ಮಾತನ್ನೂ ಉಳಿಸಿಕೊಳ್ಳುತ್ತಿಲ್ಲ. ಅದು ಒಂದು ರಾಜ್ಯವೆನಿಸಿಕೊಳ್ಳಲು ಕೂಡ ಅರ್ಹವಾಗಿಲ್ಲ. ಅಂತಹ ರಾಜ್ಯವು ಭಾರತದ ನೆರೆಯಲ್ಲಿರುವುದರಿಂದ ಈಗಿನ ಅಂತರ್‍ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಭಾರತಕ್ಕೂ ಅಪಾಯತಟ್ಟದಿರದು. ಮತ್ತೆ ಈ ವಿಚಾರದಲ್ಲಿ ಸಂಯುಕ್ತ ರಾಷ್ಟ್ರಸಂಘದ (ಯು. ಎನ್. ಓ.)ವರನ್ನು ನಾವು ನಂಬಲಾಗದು. ಕಾಶ್ಮೀರದ ವಿಚಾರದಲ್ಲಿ ಅವರು ಯಾವ ನಿರ್ಣಯವನ್ನಾಗಲಿ, ಕಾರ್ಯಾಚರಣೆಯನ್ನಾಗಲಿ ಮಾಡಲಾಗದೆ ಮೂರು ವರುಷ ಸ್ತಬ್ಧರಾಗಿರುವುದು ಆ ಸಂಸ್ಥೆಯ ನಿಸ್ಸತ್ವವನ್ನು ತೋರುವುದು. "ಆತ್ಮನಾ ಆತ್ಮಾನಂ ಉದ್ಧರೇತ್" ಎಂಬ ಗೀತಾವಾಕ್ಯದಂತೆ, ಹಿಂದೂ ಧರ್ಮೀಯರೆಲ್ಲರೂ ಸೇರಿ, ಭಾರತವನ್ನು ಮತ್ತೆ ಅಖಂಡವಾಗಿ ಮಾಡಲೆತ್ನಿಸಬೇಕು. ಆದಕ್ಕಾಗಿ ಮುಂದಿನ ಚುನಾವಣೆಯಲ್ಲಿ ಹಿಂದೂ ಧರ್ಮ ಸೇವಾಸಂಘದವರಿಗೇ ನೀವು ನಿಮ್ಮ ಮತಗಳನ್ನೀಯಬೇಕಾದ್ದು ನಿಮ್ಮ ಧರ್ಮ, ಕರ್ತವ್ಯ....."ಇತ್ಯಾದಿ.

ಅಖಿಲ ಭಾರತ ಸಾಧು ಸಂಘಾಧ್ಯಕ್ಷ ವೇದಿಕೆಯ ಮೇಲೆ ಜಟಾಧಾರಣೆ ಮಾಡಿ, ನೀಳವಾದ ದಾಡಿ ಮೀಸೆಗಳನ್ನು ಬಿಟ್ಟು ಕಪನಿಯನ್ನು ಧರಿಸಿ ನಿಂತಿದ್ದ ವ್ಯಕ್ತಿಯ ದೂರಿನ ಧ್ವನಿ ಹೀಗಿತ್ತು:—"ಸ್ವರಾಜ್ಯ ಬರುವುದಕ್ಕೆ ಮುಂಚೆ ನಾವು ಭಾರತದ ಯಾವ ಭಾಗದಲ್ಲಾದರೂ ಟಿಕೇಟಿಲ್ಲದೆ ಪ್ರಯಾಣಮಾಡುವ ಸ್ವಾತಂತ್ರ್ಯವಿತ್ತು. ನಾವು ಭಾರತದ ವಿವಿಧ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ, ದೇಶವನ್ನು ಸುಭಿಕ್ಷದಲ್ಲಿಡುವಂತೆ ದೇವತೆಗಳನ್ನು ಪ್ರಾರ್ಥಿಸುತ್ತ, ಜನರಿಗೆ ದಾನಧರ್ಮಗಳನ್ನು ಬೋಧಿಸುತ್ತಿದ್ದೆವು. ಈಗಿನ ಸರಕಾರಕ್ಕೆ ಧರ್ಮದ ವಾಸನೆಯಿಲ್ಲ. ದೇಶದಲ್ಲಿ ಧರ್ಮಕ್ಕೆಡೆಯಿಲ್ಲದಾಗಿದೆ. ಹೀಗಾದರೆ ದೇಶವು ಮುಳುಗೀತು! ಆದ್ದರಿಂದ ನಾವೆಲ್ಲ ಸತ್ಯಾಗ್ರಹ ಹೂಡಿ ಗುಂಪು ಗುಂಪಾಗಿ ಟಿಕೆಟ್ ಇಲ್ಲದೇ ರೈಲಿನಲ್ಲಿ ಯಾತ್ರೆಮಾಡಲು ನಿರ್ಧರಿಸೋಣ................" ಇತ್ಯಾದಿ.

ಹೀಗೆ ಬೇರೆ ಬೇರೆ ಸೊಲ್ಲಿನಿಂದ ಧ್ವನಿವರ್ಧಕ ಯಂತ್ರದ ಮೂಲಕ ಹರಿದುಬರುತ್ತಿದ್ದ ಧ್ವನಿಗಳನ್ನು ಕೇಳುತ್ತಿರುವಾಗ ಆಕಸ್ಮಾತ್ತಾಗಿ ಬಿರುಗಾಳಿ ಎದ್ದು ಭೂಮ್ಯಾಕಾಶದ ವರೆಗೆ ಧೂಳು ಎದ್ದಿತು. ಅಕ್ಕಪಕ್ಕದಲ್ಲಿದ್ದ ಗಿಡಮರಗಳು ತಲೆಕೆಳಗಾಗುವಂತೆ ಹೊಯ್ದಾಡಲಾರಂಭಿಸಿದುವು. ಜನರೆಲ್ಲ ದಿಕ್ಕಾಪಾಲಾಗಿ ಓಡಲಾರಂಭಿಸಿದರು! ಅದರ ಮಧ್ಯೆ "ಇನ್‌ಕಿಲಾಬ್ ಜಿಂದಾಬಾದ್!" ಏಳಿ, ಬನ್ನಿ, ಕ್ರಾಂತಿಗೆ ಜಯವಾಗಲಿ! 'ನಮಗೆ ಈ ಯಾಂತ್ರಿಕ ಕೈಗಾರಿಕೆ ಪ್ರಭುತ್ವ ಬೇಡ! 'ಈ ಗುಲಾಮಗಿರಿ ಬೇಡ' 'ಈ ಯಂತ್ರಾಲಯಗಳನ್ನು ಒಡೆಯಿರಿ', 'ಆಹಾರದ ಕೋಠಿಗಳನ್ನು ತೆರೆಯಿರಿ', 'ಆಹಾರವನ್ನು ಹಂಚಿರಿ', 'ಇನ್ನೂ ಉಪವಾಸ ಸಾಕು!', "ನಾವು ಉತ್ತು ಬಿತ್ತು ದುಡಿಯುವುದು— ಈ ಯಾಂತ್ರಿಕ ನಾಗರಿಕರು ಬಂದು ನಾವು ಬೆಳೆದುದನ್ನು ಕಿತ್ತುಕೊಳ್ಳುವುದು!-ಅನ್ಯಾಯ! ನಾವು ಯಾರಿಗೂ ಇನ್ನು ತಲೆಬಾಗಿಸಲಾರೆವು! ನಾವು ದುಡಿದು ಬೆಳೆದುದನ್ನು ನಾವೇ ತಿನ್ನುವ! ಉಳಿದುದನ್ನು ಹಂಚುವ! ಹೇಳಿ ಕಿಸಾನ್ ರಾಜ್‌ಕೊ ಜಯ್!—" ಎಂಬ ಬಗೆಬಗೆಯ ಕ್ರಾಂತಿಯ ಕೂಗು ಭೋರ್ಗರೆಯಲಾರಂಭಿಸಿತು. ಅಷ್ಟರಲ್ಲಿ ಯಾರೊ ಬಂದು ನನ್ನ ಕಾಲೆಳೆದು—ಕೊಡಿ—ನಮಗೆ ನಿಮಗೆ ಅನ್ನ ಕೊಡುವ ದೇವರಿಗೆ—ನಮ್ಮ ಓಟನ್ನು" ಎಂದು ಕೂಗಿದರು. ಎಚ್ಚರಿಕೆಯಾಯಿತು. ಕಣ್ಣುಬಿಟ್ಟು ನೋಡಿದೆ— ಶುಕ್ಲ ಚತುರ್ದಶಿಯ ಶರಚ್ಚಂದ್ರನು ನಿಧಾನವಾಗಿ ದೂರದಲ್ಲಿ ಕಾಣುತಿದ್ದ ವೃಕ್ಷರಾಜಿಗಳ ಹಿಂದಿನಿಂದ ಬಾನಿನಲ್ಲಿ ಮೇಲಕ್ಕೇರುತ್ತಿದ್ದುದು ಕಂಡುಬಂತು. ಆಗ ನಾನು ನೋಡಿದುದೆಲ್ಲ ಕನಸೆಂದು ನಿಶ್ಚಿಂತನಾದೆನು!





ಗ್ರಾಮದ ಪಟೇಲರು, ಉಗ್ರಾಣಿಗಳು ಇಂದು ತುಂಬಾ ಗಡಿಬಿಡಿಯಲ್ಲಿದ್ದರು. ಕಾರಣ ಜಿಲ್ಲಾಧಿಕಾರಿಗಳು ಇಂದು ಅವರ ಗ್ರಾಮಕ್ಕೆ ಭೇಟಿಕೊಡುವುದು ಮಾತ್ರವಲ್ಲ, ಒಂದು ರಾತ್ರಿ ಉಳಕೊಳ್ಳುವವರಿದ್ದರು. "ಹೆಚ್ಚು ಆಹಾರ ಬೆಳೆಸಿರಿ" ಎಂಬ ಸರಕಾರದ ಕಾರ್ಯಕ್ರಮಕ್ಕೆ ಅನುಸಾರವಾಗಿ ಅಧಿಕಾರಿಗಳು ಹಲವು ಮಾಗಣೆಗಳ ಪಟೇಲರನ್ನು ಆ ಗ್ರಾಮಕ್ಕೆ ಕರೆದಿದ್ದರು. ಅಧಿಕಾರಿಗಳ ಸಂಗಡ ಅವರ ಪತ್ನಿಯೂ ಬರುವವರಿದ್ದರು. ಕಾರಣ ಗ್ರಾಮದಲ್ಲಿ ಮರುದಿನ ಗೋಪಾಡ್ಯದ ದಿನ. ಹೊಸತಾಗಿ ಆಚರಿಸಲಿರುವ ಹಬ್ಬವೊಂದರ ಉದ್ಘಾಟನಾಸಮಾರಂಭವು ಅಧಿಕಾರಿಗಳ ಪತ್ನಿಯವರ ಹಸ್ತದಿಂದ ನೆರವೇರುವುದಿತ್ತು.

ಕಾರ್ಯಕ್ರಮದ ಪಟ್ಟಿಯಲ್ಲಿ ಸೂಚಿಸಿದ ಸಮಯಕ್ಕೆ ಸರಿಯಾಗಿ ಜಿಲ್ಲಾ ಅಧಿಕಾರಿಗಳ ಕಾರು ಪ್ರಯಾಣಿಕರ ಬಂಗಲೆಯಲ್ಲಿ ಬಂದು ನಿಂತೊಡನೆ ಉಗ್ರಾಣಿಗಳು ಸ್ವಲ್ಪ ಗಾಬರಿಯಾದರು. ಕಾರಣ, ಪಟ್ಟಿಯಲ್ಲಿ ಸೂಚಿಸಿದ ಸಮಯಕ್ಕೆ ಸರಿ ಎರಡು ಗಂಟೆ ವಿಳಂಬವಾಗಿ ಅಧಿಕಾರಿಗಳು ಬರುವುದು ಇಷ್ಟರ ತನಕದ ವಾಡಿಕೆ. ನಡು ಪ್ರಾಯದ ಅಧಿಕಾರಿಗಳು ಕೆಳಗಿಳಿದೊಡನೆ ತಹಶೀಲದಾರರು ಅಧಿಕಾರಿಗಳಿಗೆ ಅಲ್ಲಿ ನೆರೆದವರ ಪರಿಚಯಮಾಡಿಸಿದರು. ಅಧಿಕಾರಿಗಳ ಮಾತುಕತೆ— ಹಾಗೂ ಅವರ ವಿನಯ ಸ್ವಭಾವ ಕಂಡು ಹಳ್ಳಿಗರಿಗೆ ಸಂತೋಷವಾಯಿತು.



ಕತೆಗಾರ್ತಿ:
ಶ್ರೀಮತಿ ಲೀಲಾ ಬಾಯಿ ಕಾಮತ್, ಉಡುಪಿ.

ಮರುದಿನ ಎಂಟು ಗಂಟೆಗೆ ಹೊಸ ಹಬ್ಬದ ಉದ್ಘಾಟನಾಸಮಾರಂಭವು ನೆರವೇರುವುದಿತ್ತು. ವರ್ಷಾವಧಿಯ ಗೋಪಾಡ್ಯದ ಗೋಪೂಜೆ ನೆರವೇರಿಸಿ ಹಳ್ಳಿಗರೆಲ್ಲರೂ ಸಮೀಪದಲ್ಲಿರುವ ಗುಡ್ಡಕ್ಕೆ ಹೋಗಬೇಕಾಗಿತ್ತು. ಸೂರ್ಯೋದಯಕ್ಕೆ ಮೊದಲೇ ಏಳುವ ವಾಡಿಕೆ ಇಟ್ಟುಕೊಂಡಿದ್ದ ರೈತರೆಲ್ಲರೂ ಇಂದು ಎಂದಿಗಿಂತ ಮುಂಜಾನೆ ಎದ್ದಿದ್ದರು. ಕಾರಣ ದನಕರುಗಳಿಗೆ ಎಣ್ಣೆ ಹಚ್ಚಿ ಸ್ನಾನಮಾಡಿಸಿ ಶೃಂಗರಿಸಿ, ಪೂಜಿಸಿ ಅನಂತರ ತಮ್ಮ ದನಕರುಗಳನ್ನು ಅಟ್ಟಿಕೊಂಡು ಅವರು ಗುಡ್ಡವೇರಬೇಕಾಗಿತ್ತು.

ಜಿಲ್ಲಾಧಿಕಾರಿಗಳನ್ನೂ ಅವರ ಪತ್ನಿಯನ್ನೂ ಮುಂದಿಟ್ಟು ರೈತರು ತಮ್ಮ ದನಕರುಗಳನ್ನು ಗುಡ್ಡಕ್ಕೆ ಅಟ್ಟಿದರು. ತಾಯಿಯ ಹೊಟ್ಟೆಗೆ ಹೊಟ್ಟೆ ತಾಗಿಸಿ, ಯಾ ಮೊಲೆಯನ್ನು ಉಣ್ಣಿಸಿ ಆ ಕರುಗಳ—ಶೃಂಗರಿಸಿದ ದನಕರುಗಳು—ಗುಡ್ಡ ಮೇಲೇರುವುದು ಕಣ್ಣಿಗೊಂದು ಹಬ್ಬವಾಗಿತ್ತು. ರೈತರೆಲ್ಲರೂ ತಮಗೆ ಅನುಕೂಲವಿದ್ದಷ್ಟು, ಆಗ ತಾನೇ ಕೊಯ್ದ ಒಣಹುಲ್ಲಿನ ಕಟ್ಟುಗಳನ್ನು ತಲೆಯ ಮೇಲೆ ಹೊತ್ತುಕೊಂಡಿದ್ದರು. ಸೂರ್ಯನ ಎಳೆ ಬಿಸಿಲು ಆಗತಾನೇ ಗುಡ್ಡದ ಮೇಲೆ ಬೀಳುತ್ತಲಿತ್ತು. ಪಚ್ಚೆ ಸೀರೆಯುಳ್ಳ ಪ್ರಕೃತಿಯ ಆ ನೋಟ ಬಹಳ ಸುಂದರವಾಗಿತ್ತು. ಅಲ್ಲಲ್ಲಿ ಚಿಗುರಿದ ಚಿಕ್ಕಪುಟ್ಟ ಪೊದರುಗಳು ಪಚ್ಚೆ ಮೈಯಲ್ಲಿ ಕಡು ಪಚ್ಚೆಯ ಬೊಟ್ಟುಗಳಂತೆ ಕಾಣುತ್ತಿದುವು. ಪೂಜೆಯ ಸಮಯದಲ್ಲಿ ಹಾಕಿದ್ದ ಹೂವಿನ ಮಾಲೆಗಳು ಇಷ್ಟರತನಕ ದನಕರುಗಳು ತಿನ್ನದಂತೆ ರೈತರು ಜಾಗರೂಕತೆ ವಹಿಸಿದ್ದರೂ ಗುಡ್ಡ ಮೇಲೇರುವಾಗ ಅವರಿಂದ ಕಾಯಲು ಸಾಧ್ಯವಾಗಲಿಲ್ಲ. ಕೆಲವು ದನಗಳ ಕೊರಳಲ್ಲಿ ಅರ್ಧ ಹರಿದುಹೋದ ಮಾಲೆಗಳು ನೇತಾಡುತ್ತಿದ್ದುವು. ಹಲವು ದನಗಳ ಮಾಲೆಯ ಕೆಂಪು ನೀಲಿ ಬಣ್ಣಗಳ ಹೂಗಳದ್ದು ಹರಿದು ಗುಡ್ಡದ ಮೇಲೆ ಪುಷ್ಪವೃಷ್ಟಿಯನ್ನು ಗೈದಂತಿತ್ತು. ಗುಡ್ಡದ ಮೇಲೇರುತ್ತಿದ್ದಂತೆ ಕೊರಳಲ್ಲಿ ನೇತಾಡುತ್ತಿದ್ದ ಮಾಲೆಗಳ ಹೂ ಗುಡ್ಡದ ಮೇಲೆಲ್ಲಾ ಚೆಲ್ಲಿಬಿಟ್ಟಂತಿತ್ತು. ನಿಶ್ಚಿತ ಸ್ಥಳವೇರಲು ಹೆಚ್ಚು ಮೇಲೇರಬೇಕಾಗಿರಲಿಲ್ಲ.

ಅಲ್ಲೊಂದು ಮರದ ಕೆಳಗೆ ಎತ್ತರವಾದ ದಿನ್ನೆಯೊಂದು ಕಾಣುತ್ತಲಿತ್ತು. ಹೂವಿನಿಂದ ಮುಚ್ಚಲ್ಪಟ್ಟ ದಿನ್ನೆಯ ಸುತ್ತಲೂ ದನಗಳು ಹೂವನ್ನು ತಿನ್ನದಂತೆ ಬೇಲಿ ಕಟ್ಟಿದ್ದರು- ಪಟೇಲರು ಅಧಿಕಾರಿಗಳನ್ನು ಅವರ ಪತ್ನಿಯನ್ನೂ ಬೇಲಿಯ ಬಳಿ ಕರತಂದು:

"ಅಮ್ಮಾ ಇಂದು ನಿಮ್ಮ ಅಮೃತಹಸ್ತಗಳಿಂದ ಈ ಸಮಾಧಿಯ ಮೇಲೆ ರೈತನು ತಂದ ಹಾಲನ್ನು ಎರೆಯಬೇಕು" ಎಂದು ಪಟೇಲರು "ತನಿಯಾ ಓ ತನಿಯಾ! ಎಂದು ಕೂಗಿ ತನಿಯ ಗೌರಿಯನ್ನು ಕರಕೊಂಡು ಮುಂದೆ ಬರಲಿ" ಎಂದರು.

ಮುದುಕನೋರ್ವನು ಅಚ್ಚ ಬೆಳ್ಳನೆಯ ಶೃಂಗರಿಸಿದ ಕರುವನ್ನು ಎಳಕೊಂಡು ಮುಂದೆ ಬಂದನು. ಜನರನ್ನು ಕಂಡು ಬೆಚ್ಚಿದ ಆ ಕರುವಿನ ಕಣ್ಣುಗಳು ಅದರ ಬೆದರಿಕೆಯನ್ನು ಮೂಡಿ ತೋರಿಸುತ್ತಲಿದ್ದುವು. ನಡುಗುವ ಕೈಗಳಿಂದ ತನಿಯ ತಾನು ಹಾಲು ತಂದಿದ್ದ ಹಾಲಿನ ಲೋಟ—(ಬೆಳ್ಳಿಯದು)—ಅದನ್ನು ಅಧಿಕಾರಿಗಳ ಪತ್ನಿಯ ಕೈಯಲ್ಲಿ ಕೊಟ್ಟ. ಪಟೇಲರ ಹೇಳಿಕೆಯಂತೆ ಅಧಿಕಾರಿಗಳ ಪತ್ನಿ ಆ ಹಾಲನ್ನು ಅಲ್ಲಿಟ್ಟ ಶಿಲಾಕಲ್ಲಿನ ಮೇಲೆ ಸುರಿದರು. ತನಿಯ ತಾನು ತಂದ ಒಣಹುಲ್ಲಿನ ಸೂಡಿಯೊಂದನ್ನು ಬಿಚ್ಚಿ ಕೊಟ್ಟ. ಆ ಹುಲ್ಲು ಅಲ್ಲೇ ಬಿಚ್ಚಿಹಾಕಲ್ಪಟ್ಟಿತು. ತದನಂತರ ಪ್ರತಿಯೊಬ್ಬರೂ ತಾವು ತಂದ ಹಾಲನ್ನೂ ಹುಲ್ಲನ್ನೂ ಅಲ್ಲಿ ಹಾಕಿದರು.

ಪಟೇಲರು ಒಂದು ಚಾಪೆಯನ್ನು ತಂದು ಅಲ್ಲಿ ಹಾಸಿದರು. ಅಧಿಕಾರಿಗಳು ಆಸೀನರಾದೊಡನೆ ಕೃಷಿಕರೆಲ್ಲರೂ ಮರದ ನೆರಳಲ್ಲಿ ಸುತ್ತಲೂ ಕುಳಿತುಕೊಂಡರು.

"ಪಟೇಲರೇ, ಇಂದಿನ ಸಮಾರಂಭ ಸ್ವಲ್ಪ ವಿಚಿತ್ರವಾಗಿ ತೋರುತ್ತದೆ ನನಗೆ. ನಿನ್ನೆಯೇ ಕೇಳಬೇಕೆಂದಿದ್ದೆ. ಆದರೆ ಇಂದು ಇಲ್ಲಿ ಬಂದಮೇಲೆ ತಿಳಿಯೋಣವೆಂದೆ. ಆದರೆ ಸಮಾರಂಭದ ಮಾಹಿತಿ ಕೊಡದೆ ಸಮಾರಂಭ ಮುಗಿಸಿಬಿಟ್ಟಂತಿದೆ" ಎಂದು ಅಧಿಕಾರಿಗಳು ನಗುತ್ತಾ ನುಡಿದರು.

"ಸ್ವಾಮೀ! ಒಂದು ದೃಷ್ಟಿಯಲ್ಲಿ ಇದೇನೋ ಅಷ್ಟೊಂದು ದೊಡ್ಡ ಸಮಾರಂಭವಲ್ಲ. ಮಗದೊಂದು ದೃಷ್ಟಿಯಲ್ಲಿ ಇದರಷ್ಟು ದೊಡ್ಡ ಸಮಾರಂಭ ಮತ್ತೊಂದಿಲ್ಲ. ಆದರೆ ಸಮಾರಂಭದ ಮಾಹಿತಿ ಈ ಹಳ್ಳಿಯೇ ಏಕೆ? ಇಡೀ ಜಿಲ್ಲೆ ಬಲ್ಲುದು ಸ್ವಾಮಿ. ಎರಡು ವರ್ಷಗಳ ಹಿಂದೆ ಈ ಹಳ್ಳಿಯ ಹೆಸರು ಪ್ರತಿಯೋರ್ವನ ಮಾತುಕತೆಯ ಯಾ ಆತುರದ ಕಾರಣವಾಗಿತ್ತು ಸ್ವಾಮಿ."

"ಜಿಲ್ಲೆ ತಿಳಿದಿರಬಹುದು ಇಂದಿನ ಸಮಾರಂಭ. ಆದರೆ ನಾನು ಜಿಲ್ಲೆಗೆ ಹೊಸಬನೆಂದು ನೀವು ಮರೆತಂತಿದೆ."

"ನಿಜ ಸ್ವಾಮಿ! ಸಮಾರಂಭದ ಮಾಹಿತಿ ನಮಗಿಂತ ಹೆಚ್ಚಾಗಿ ತನಿಯ ನಿಮಗೆ ಕೊಡಬಲ್ಲನು," ಎಂದು ಪಟೇಲರು ತನಿಯನನ್ನು ಕೂಗಿದರು.

ತನಿಯ ಬಂದ ಅಧಿಕಾರಿಗಳು ಅವನನ್ನು ಕುಳಿತುಕೊಳ್ಳಲು ಸಂಜ್ಞೆಮಾಡಿದರು. ತನಿಯ ಕುಳಿತ. "ತನಿಯ! ಇಂದಿನ ಹಬ್ಬದ ಮಾಹಿತಿ ಅಧಿಕಾರಿಗಳಿಗೆ ನೀನಿಷ್ಟು ಮಾಡಿಕೊಡು. ನಿಜಕ್ಕೂ ಇದು ನಿನಗೆ ಮರಣಪ್ರಾಯ ದುಃಖ ಕೊಡುತ್ತದೆ—ಆದರೆ ನೀನು ಚಿತ್ರಿಸಿದಷ್ಟು ಹೃದಯಂಗಮವಾಗಿ ನಾವದನ್ನು ಚಿತ್ರಿಸಲಾರೆವು. ಒಲ್ಲೆನೆನ್ನಬೇಡ. ಇದು ನಿನಗೂ ನಮಗೂ ನಮ್ಮ ಗ್ರಾಮಕ್ಕೂ ಭೂಷಣದ ಸಂಗತಿ. ನಿನ್ನ ದುಃಖದಲ್ಲಿ ನಾವೆಲ್ಲರೂ ಸಹಭಾಗಿಗಳು. ಪ್ರಾರಂಭಿಸು—ನಿನ್ನ ಕತೆಯನ್ನು." ಪಟೇಲರು ತನಿಯನನ್ನು ಉದ್ದೇಶಿಸಿ ಹೇಳಿದರು.

ತನಿಯ ಒಂದು ಗಳಿಗೆ ತಟಸ್ಥನಾದ- ಘಟನೆಯನ್ನು ಪ್ರಾರಂಭಿಸುವುದು ಎಲ್ಲಿಂದ ಎಂದು ಅತ ತಿಳಿಯದಾದ. ಕೃಷಿಕರೆಲ್ಲರೂ—ದೂರದ ಮರದ ನೆರಳಲ್ಲಿ ಕೂತ ಕೃಷಿಕರು- ಹತ್ತಿರ ಬಂದು ಸೇರಿದರು. ಎರಡು ವರ್ಷಗಳ ಹಿಂದೆ ಅವರು ನೋಡಿದ್ದು ಇಂದು ಕಾಲಚಕ್ರದ ಉರುಳುವಿಕೆಯಿಂದ ಕ್ರಮೇಣ ಚರಿತ್ರೆಯಾಗಿ ಮಾರ್ಪಟ್ಟಂತಿತ್ತು. ಮರದಡಿಯಲ್ಲಿ ಶಾಂತತೆ ನೆಲಸಿತು. ಅಲ್ಲೊಂದು ಇಲ್ಲೊಂದು ದನಗಳ ಕೂಗು ಅಲ್ಲದೆ ನಾಲ್ಕು ಕಡೆಗಳಲ್ಲಿಯೂ ನಿಶ್ಶಬ್ದ—ನೀರವ.

"ತನಿಯ ನಿನ್ನ ಕತೆಯನ್ನು—ಜೀವನಕತೆಯನ್ನು ಪ್ರಾರಂಭಿಸು—ಎಲ್ಲಿಂದ ಪ್ರಾರಂಭಿಸಲಿ? ಎಂದು ಯೋಚನೆಗೊಳಗಾಗಿದ್ದೀಯೇ?" ಪಟೇಲರು ತನಿಯನನ್ನು ಹೇಳಿದರು.

"ನಿಜ ಪಟೇಲರೆ. ಈಗಲೇ ಪ್ರಾರಂಭಿಸುತ್ತೇನೆ. ಎಂದು ತನಿಯ ಹೇಳತೊಡಗಿದ.

"ಅಂದು ನಮ್ಮ ಆಕ್ಕರೆಯ ದನ "ಗಂಗೆ" ನಿತ್ಯದ ಹೊತ್ತಾದರೂ ಮನೆಗೆ ಬರಲಿಲ್ಲ. ಗಂಗೆ ಬರಲು ಹೊತ್ತಾಯಿತೆಂದು ನಾವು ತಿಳಿದುದು ಗಂಗೆಯ ಕರು ಕೂಗಿದಾಗ ಮಾತ್ರ. ಗಂಗೆ ಕರು ಹಾಕಿ ಆಗ ತಾನೇ ಒಂದು ತಿಂಗಳಾಗಿತ್ತು. ಹೆಚ್ಚಾಗಿ ನಾವು ಅವಳನ್ನು ಹೊರಗೆ ಬಿಡುತ್ತಿರಲಿಲ್ಲ. ದನಮಾರುವ ದಲ್ಲಾಲಿಗಳು ಬಂದು ನೂರು ಇನ್ನೂರು ರೂಪಾಯಿ ಕೊಡುತ್ತೇವೆಂದು ಬೆಲೆ ಕಟ್ಟಿ ಹೋಗಿದ್ದರು. ಆದರೆ ಅವರಿಗಿಂತ ನಮಗೆ ದನಕರುಗಳ ಹೆಚ್ಚು ಅವಶ್ಯಕತೆಯಿದೆ ಎಂದು ಅವರು ತಿಳಿಯರು. ನೆರಳು ಉದ್ದವಾಗುತ್ತ ಬಂದಿತ್ತು. ಸಾಧಾರಣ ಗಂಟೆ ನಾಲ್ಕಾಯಿತೊ ಏನೋ! ಗಂಗೆ ಕಾಣೆ. ಆಗ ಮಾತ್ರ ನಾನು ಮತ್ತು ನನ್ನ ಮಗಳು ದುರ್ಗಿ ಸ್ವಲ್ಪ ಗಾಬರಿಗೊಂಡೆವು. ನಾನು ಗಂಗೆಯನ್ನು ಹುಡುಕಿತರಲು ಹೊರಡಲನುವಾದೆ. ಅಲ್ಲೇ ನೇತಾಡುತಿದ್ದ ಎಲವಸ್ತ್ರವನ್ನು ತಲೆಗೆ ಸುತ್ತಿ ಬೈರಾಸೊಂದನ್ನು ಹೆಗಲಮೇಲೆ ಹಾಕಿ ನನ್ನ ಕೋಲನ್ನು ತಂದು ಕೊಡಲು ದುರ್ಗಿಯನ್ನು ಕೂಗಿದೆ."

“ಏಕೆ ಕರೆದೆ ಅಪ್ಪಯ್ಯಾ?” ಎಂದು ಆಕೆ ಒಳಗಿನಿಂದ ಕೇಳಿದಳು.

“ನನ್ನ ಕೋಲು ಸ್ವಲ್ಪ ತಂದು ಕೊಡು ಮಗು! ಗಂಗೆಯನ್ನು ಸ್ವಲ್ಪ ಹುಡುಕಿ ತರ್ತೇನೆ” ನಾನೆಂದೆ.

“ನೀನು ಹೋಗುವುದು ಬೇಡ ಅಪ್ಪಯ್ಯ! ಆಕೆ ಹುಲ್ಲಿನ ಆಸೆಗಾಗಿ ಖಂಡಿತವಾಗಿಯೂ ಗುಡ್ಡ ದಾಟಿ ಹೋಗಿರಬೇಕು. ಹತ್ತಿರವಿದ್ದಲ್ಲಿ ಊರಿನ ಮಕ್ಕಳು ಗಂಗೆಯನ್ನು ಈಚೆಗೆ ಅಟ್ಟದೆ ಬಿಡುತ್ತಿರಲಿಲ್ಲ. ನಿನ್ನಿಂದ ಗುಡ್ಡ ಹತ್ತಲಾಗಲಿಕ್ಕಿಲ್ಲ, ನಾನೀಗ ಹೋಗಿ ಆಕೆಯನ್ನು ಅಟ್ಟಿತರುವೆನು” ಎಂದು ನಾನು ಬೇಡ ಬೇಡವೆಂದರೂ ದುರ್ಗಿ ಹೊರಟೇ ಹೋದಳು.

ನಿಜಕ್ಕೂ ಗಂಗೆಯಲ್ಲಿ “ಆಕೆಯನ್ನು ಎಳಕೊಂಡು ಹೋಗಿದ್ದು ರಾಯರೇ? ನನ್ನ ಗ್ರಹಚಾರ!” ಎಂದು ತನಿಯ ತನ್ನ ಹಣೆಯನ್ನು ಬಡಕೊಂಡ.

ನಾನು ಕುಳಿತಲ್ಲಿಯೇ ಇದ್ದೆ. ಸೂರ್ಯನ ಕೆಂಪು ಬಿಂಬ ಅಸ್ತಾಚಲಕ್ಕೆ ಹೋಗುವುದು ನಮ್ಮ ಜಗಲಿಯಲ್ಲಿ ಕುಳಿತರೆ ಕಾಣುತ್ತಿತ್ತು. ನಾನು ಕುಳಿತುದನ್ನು ಕಂಡು ನಮ್ಮ ನೆರೆಮನೆಯ ಗುರ್ವ ತೋಮ ಬಂದು ಕುಳಿತರು. ನಾವು ಮಾತುಕತೆಯಾಡುತ್ತಿದ್ದರೂ ನಮ್ಮ ಮನಸ್ಸು ಗಂಗೆಯ ಹಾಗೆ ದುರ್ಗಿಯ ಕಡೆ ಇತ್ತು. ನಾನು ದುರ್ಗಿಯ ಶೋಧಕ್ಕೆ ಹೊರಡುವವನಿದ್ದೆ. ಅಷ್ಟರಲ್ಲಿ ದೂರದಿಂದ ಗಂಗೆ ಕೂಗಿನ ಧ್ವನಿ ಕೇಳಿಸಿತು. ಮನೆಯ ಹತ್ತಿರ ಸೇರುತ್ತಿದ್ದಂತೆ ಮನೆಯವರಿಗೆ ಸೂಚನೆ ಕೊಡುವುದು ಆಕೆಗೆ ಚಿಕ್ಕಂದಿನಿಂದ ಆದ ಪಾಠ. ದೂರದಿಂದ ಗಂಗೆ ಕಾಣತೊಡಗಿದಳು. ದುರ್ಗಿ ಕಾಣೆ. ಎಲ್ಲಿಯೋ ಹಾದಿಯಲ್ಲಿ ಮಾತನಾಡಿ ನಿಂತಿರುವಳೆಂದು ಎಣಿಸಿದೆ. ಗಂಗೆ ಅಂಗಳಕ್ಕೆ ಬಂದಳು. ಆಕೆಯ ಮುಖವೆಲ್ಲಾ ರಕ್ತದಿಂದ ತೊಯ್ದಿತ್ತು. ಬಿಳಿ ಮುಖದಲ್ಲಿ ಕೆಂಪು ರಕ್ತದ ದನಿಗಳು ಒಡೆದು ಕಾಣುತಿದ್ದವು. ಅಯ್ಯೋ! ದುರ್ಗಿಯೆಲ್ಲಿ? ಆಕೆಯನ್ನು ಮಾರ್ಗದಲ್ಲಿ ಕೆಡಹಿಬಿಟ್ಟೆಯೋ? ಎಂದು ನಾನು ಬೊಬ್ಬಿಡುತ್ತಾ ಎದ್ದೆ. ಬೀದಿಗೆ ಹೋಗುವವ ನಾನು ಕರುವಿನ ಕೂಗನ್ನು ಕೇಳಿ ಹಟ್ಟಿಯ ತಟ್ಟಿ ತೆಗೆದೆ ಆದರೆ ಗಂಗೆ ಕೊಟ್ಟಿಗೆಯ ಬಳಿ ನಿಂತು ಕೂಗುತ್ತಿದ್ದಳು ವಿನಾ ಒಳಗೆ ಹೋಗಲು ಒಪ್ಪಲಿಲ್ಲ. ದುರ್ಗಿ ಆಕೆಯನ್ನು ಕಟಹಾಕುವ ಪರಿಪಾಠ. ಅಲ್ಲೇ ನಿಲ್ಲಮ್ಮಾ, ದುರ್ಗಿ ಎಲ್ಲಿದಾಳೆಂದು ನೋಡಿಯೇ ನಿನಗೆ ಅಕ್ಕಚ್ಚನ್ನು ಇಡುವೆ ಎಂದು ನಾನು ಬಾಗಿಲು ಎಳಕೊಂಡು ಹೊರಟೆ. ನಮ್ಮ ಹಳ್ಳಿಗಿರುವುದು ಒಂದೇ ಮಾರ್ಗ. ಮಾರ್ಗ ದಾಟಿದರೂ ದುರ್ಗಿ ಕಾಣೆ. ಅಲ್ಲಿಂದ ಪ್ರಾರಂಭವಾಗುತ್ತಿತ್ತು. ಗುಡ್ಡ. ಗುಡ್ಡಕ್ಕೇರಬೇಕಾದದರೆ ಒಂದು ಚಿಕ್ಕ ಕಾಡು ದಾಟಿಬರಬೇಕಿತ್ತು ರಾಯರೇ! ಅದೇ ಚಿಕ್ಕ ಕಾಡು. ಇಂದು ನಾವು ಬಂದ ಹಾದಿ ನಿಮ್ಮ ಬಂಗಲೆಗೆ ಸಮೀಪದ ಹಾದಿ. ನಾವು ಗುಡ್ಡವೇರಬೇಕಾದರೆ ಕಾಡು ದಾಟಿಬರಬೇಕು. ಆದೇ ಕಾಡು ರಾಯರೇ! ತನಿಯ ಕಾಡಿನ ಕಡೆ ಬೆರಳು ತೋರಿಸಿದ.

ಅಧಿಕಾರಿಗಳೂ ಅವರ ಪತ್ನಿ ಕಾಡಿನ ಕಡೆ ತಮ್ಮ ದೃಷ್ಟಿಯನ್ನು ಬೀರಿದರು.

ತನಿಯ ತನ್ನ ಬೆವರನ್ನು ಒರಸಿಕೊಂಡ. ಸೂರ್ಯನು ಮೇಲೇರತೊಡಗಿದಂತೆ ತಂಗಾಳಿಯು ಕಡಿಮೆಯಾಗಿ ಬಿಸಿಗಾಳಿ ಬೀಸಲಾರಂಭಿಸಿತ್ತು. ತನಿಯ ಕತೆಯನ್ನು ಮುಂದುವರಿಸಿದ.

ದುರ್ಗಿ ಕಾಣೆ ಎಂದು ಸುದ್ದಿ ಹರಡುವಷ್ಟರಲ್ಲಿ ಹಳ್ಳಿಯ ಹಳ್ಳಿಯೇ ಒಟ್ಟುಗೂಡಿತು. ಪಟೇಲರಿಗೂ ಸುದ್ದಿ ಮುಟ್ಟಿತು. ಜನರು ಸೂಡಿಗಳನ್ನು ಹಚ್ಚಿ ಕಾಡನ್ನು ಹೊಕ್ಕರು. ಕಾಡಿನ ಮಧ್ಯದಲ್ಲಿ ಅಲ್ಲೊಂದು ಮರದ ಕೆಳಗೆ ದುರ್ಗಿ ಅಸ್ತವ್ಯಸ್ತವಾಗಿ ಬಿದ್ದಿದ್ದಳು. ಜನರು ನಾಲ್ಕು ಕಡೆಗಳಿಂದಲೂ ಧಾವಿಸಿದರು. ಆದರೆ ದುರ್ಗಿ ಗತಪ್ರಾಣಳಾಗಿದ್ದಳು. ಯಾರೋ ದುರಾತ್ಮರು ಆಕೆಯನ್ನು ಆಕೆಯ ಒಡವೆಯ ಆಸೆಗಾಗಿ ಕೊಲೆ ಮಾಡಿದ್ದರು. “ತನಿಯ ಬಿಕ್ಕಿ ಬಿಕ್ಕಿ ಅಳತೊಡಗಿದ. ಗ್ರಾಮಸ್ಥರು ತಮ್ಮ ಕಣ್ಣುಗಳನ್ನು ಒರಸಿದರು.

“ಇದಾರ ಸಮಾಧಿ? ಅಧಿಕಾರಿಗಳು ಆತುರದಿಂದ ಕೇಳಿದರು.

“ಸಮಾಧಿಯೇ ರಾಯರೇ? ಇನ್ನು ಕತೆ ಹೆಚ್ಚಿಲ್ಲ ಹೇಳ್ತೇನೆ” ಎಂದು ತನಿಯ ಕತೆ ಮುಂದುವರಿಸಿದ. “ಪಟೇಲರು ಹೆಣವನ್ನು ಮುಟ್ಟಗೊಡಲಿಲ್ಲ. ಪೋಲೀಸರಿಗೆ ವರದಿ ಹೋಯಿತು. ಎರಡು ದಿನಗಳ ಅನಂತರ ದುರ್ಗಿಯ ಶವ ನಮಗೆ ಸಿಕ್ಕಿತು. ಗಂಗೆಯ ಮುಖಕ್ಕೆ ತಾಗಿದ ನೆತ್ತರು ದುರ್ಗಿಯದಾಗಿರಲಿಲ್ಲ. ಕಾರಣ ಆಕೆಯ ಕುತ್ತಿಗೆ ಹಿಚುಕಲ್ಪಟ್ಟಿತ್ತು. ಗಂಗೆಯ ಮೈಯಲ್ಲಿ ಎಲ್ಲಿಯೂ ಗಾಯಗಳಾಗಿರಲಿಲ್ಲ. ಆದುದರಿಂದ ಆ ನೆತ್ತರು ದುರ್ಗಿಯ ಕೊಲೆಗೈದ ದುರಾತ್ಮನದೆಂದು ಖಂಡಿತವಾಯ್ತು. ಹತ್ತು ದಿನಗಳ ಅನಂತರ ಸಮೀಪದ ಹಳ್ಳಿಯಲ್ಲಿ ಪೋಲಿಸರು ಕೊಲೆಗಡುಕನ ಪತ್ತೆ ಹಚ್ಚಿದರು. ಕೊಲೆಗಡುಕ ಪರಸ್ಥಳದಿಂದ ಬಂದ ಗಾರುಡಿಯಾಗಿದ್ದ. ರಾಯರೇ! ಅವನ ಬಳಿ ದುರ್ಗಿಯ ಆಭರಣಗಳಿದ್ದುವಲ್ಲದೆ ಗಂಗೆ ತೊಡೆಯನ್ನು ಕಚ್ಚಿದ ಹುಣ್ಣು ಹಸಿಹಸಿಯಾಗಿತ್ತು.

ತನಿಯ ನಿಶ್ವಾಸ ಬಿಡುತ್ತ ಮುಂದುವರಿಸಿದ.

ಖಟಲೆ ಹಾಕಲ್ಪಟ್ಟಿತ್ತು. ಗಂಗೆ ದುರ್ಗಿಯ ಕೊಲೆಗೆ ಮುಖ್ಯ ಸಾಕ್ಷಿದಾರಳಾಗಿದ್ದಳು.

“ಆಕೆ ಏನು ಸಾಕ್ಷಿ ಕೊಟ್ಟಳು?” ಇಷ್ಟರ ವರೆಗೆ ಏಕಚಿತ್ತದಿಂದ ಕತೆ ಆಲಿಸುತಿದ್ದ ಅಧಿಕಾರಿಗಳ ಪತ್ನಿ ಕುತೂಹಲದಿಂದ ಕೇಳಿದಳು.

“ಸಾಕ್ಷಿಯೇ ತಾಯೇ? ಮೂಕ—ಬಾಯಿ ಬಾರದ



ಕರ್ನಾಟಕದ ಯಕ್ಷಗಾನ ವೇಷಧಾರಿ

ಗೋವು—ಏನು ಸಾಕ್ಷ್ಯ ಕೊಟ್ಟೀತು? ಹತ್ತು ಜನರ ಸಾಲಿನಲ್ಲಿ ನಿಲ್ಲಿಸಿದ್ದ ಕೊಲೆಗಡುಕನನ್ನು ನೋಡಿದೊಡನೆ ಸುರ್ಯಂನೇ ಮುನ್ನುಗ್ಗಿ ಆತನನ್ನು ಹಾಯಲು ಹೋದಳು. ಬಾಯಿ ಬಾರದ ಪಶು ತನ್ನ ಬಾಯಿಂದ ಅಚ್ಚಳಿಯದ ಸಾಕ್ಷ್ಯ ಅವನ ತೊಡೆಯ ಮೇಲೆ ಬರೆದಿಟ್ಟಿತ್ತು. ಕೊನೆಗೆ ಅವನಿಗೆ ಕೊಲೆಗಡುಕನಿಗೆ—ಕರಿನೀರಿನ—ಶಿಕ್ಷೆಯಾಯ್ತು." ತನಿಯ ತನ್ನ ಕತೆ ಮುಗಿಸುವಂತಿದ್ದ.

"ಆಗ ಇದಾರ ಸಮಾಧಿ?" ಅಧಿಕಾರಿಗಳ ಪತ್ನಿ ಹೂವಿನಿಂದ ಮುಚ್ಚಲ್ಪಟ್ಟ ದಿನ್ನೆಯ ಕಡೆ ಬೆರಳು ತೋರಿಸಿದರು.

ಅದೇ ತಾಯೇ! ಗಂಗೆಯದು. ನನ್ನ ಸಾಕು ಮಗುವಿನಂತಿದ್ದ ಗಂಗೆಯ ಸಮಾಧಿ. ನನ್ನ ದುರ್ಗಿ ಹೋದಂದಿನಿಂದ ಆಕೆ ಹಟ್ಟಿಗೆ ಒಳಹೊಗಲಿಲ್ಲ. ಅಕ್ಕಚ್ಚನ್ನು ಕುಡಿಯಲಿಲ್ಲ. ಖುಶಿ ಇದ್ದರೆ ಒಂದಿಷ್ಟು ಕುಡಿಯುತಿತ್ತು. ಹೊಟ್ಟೆಗೆ ತಿನ್ನದೆ ಬಚ್ಚಿದಳು. ದುರ್ಗಿ ಸತ್ತಂದಿನಿಂದ ಆಕೆಯ ಕಣ್ಣೀರು ಆರಲಿಲ್ಲ. ಹೊರಗೆ ಹೋಗಿ ಮೇಯಲೆಂದು ಹಗ್ಗ ಬಿಚ್ಚಿಬಿಟ್ಟೆ. ಈ ಗೌರಿಯನ್ನು ತಾಯಿ ಸತ್ತ ಮಗುವಿನಂತೆ ಪರರ ಹಾಲಿನಲ್ಲಿ ಬೆಳೆಸಿದೆ ತಾಯೇ? ಒಂದೆರಡು ತಿಂಗಳು ಗಂಗೆ ಬದುಕಿದಳು. ಆದರೆ ಹೆಚ್ಚಾಗಿ ಹಟ್ಟಿಗೆ ಬರುತ್ತಿರಲಿಲ್ಲ. ಇಡೀ ದಿನ ಕಾಡಿನ ಸುತ್ತಲೂ ಗುಡ್ಡದ ಮೇಲೆ ಅಲೆಯುತ್ತಿದ್ದಳು. ದುರ್ಗಿ ಮತ್ತು ಗಂಗೆ ತಾಯಿ ಮಗುವಿನಂತಿದ್ದರು. ಕೆಲವು ವರ್ಷಗಳ ಹಿಂದೆ ಸರಕಾರವು ನಡೆಸಿದ ಜಾನುವಾರು ಪ್ರದರ್ಶನದಲ್ಲಿ ಗಂಗೆ ಮೊದಲಿನ ಬಹುಮಾನವಾಗಿ ತನ್ನ ತಾಯೊಡನೆ ಬೆಳ್ಳಿಯ ತಟ್ಟೆಯನ್ನು ಪಡೆದಿದ್ದಳು ತಾಯೇ! ಇಂದು ಅದೇ ತಟ್ಟೆಯಲ್ಲಿ ಅವಳ ಸಮಾಧಿಗೆ ಹಾಲೆರೆಯಲು ತಂದಿದ್ದೇನೆ"—ಎಂದು ತನಿಯ ತಟ್ಟೆಯನ್ನು ಮುಂದಿಟ್ಟ.

ಅಧಿಕಾರಿಗಳು ತಟ್ಟೆಯನ್ನು ಎತ್ತಿದರು. "ಅತ್ಯುತ್ತಮ ಕರುವೆಂದು ಗಂಗೆಗೆ ಕೊಟ್ಟ ಪ್ರಥಮ ಬಹುಮಾನ" ಎಂಬುದಾಗಿ ಕೆತ್ತಲ್ಪಟ್ಟಿತ್ತು ಆ ಲೋಟೆಯಲ್ಲಿ.

ತನಿಯ ಮುಂದುವರಿಸಿದ—"ಅದೊಂದು ದಿನ ಈ ಮರದ ಕೆಳಗೆ ಗಂಗೆ ಬಿದ್ದಿರುವಳೆಂದು ದನ ಕಾಯುವ ಹುಡುಗರು ವರದಿ ಕೊಟ್ಟರು. ಇದು ಸರಕಾರಿ ಗುಡ್ಡ ಗೋಚರಾವಿಗೆ ಬಂದು ಮಾಡಲ್ಪಟ್ಟದ್ದು. ಆದರೆ ಗಂಗೆ ಇಲ್ಲಿಯೇ ಬಿದ್ದು ಸಾಯುವೆನೆಂದು ಪಣ ತೊಟ್ಟದಂತಿತ್ತು. ಅವಳನ್ನು ಗೌರವದಿಂದ ಇಲ್ಲಿಯೇ ಹೂಳಿಬಿಟ್ಟೆವು ರಾಯರೇ?" ತನಿಯ ತನ್ನ ಕತೆಯನ್ನು ಮುಗಿಸಿದ.

"ಪಟೇಲರೇ, ಇಂದಿನ ಸಮಾರಂಭದ ಚರಿತ್ರೆ ಕೇಳಿದೆ. ಗಂಗೆಯನ್ನು ಪಡೆದ ನೀವೇ ಧನ್ಯರು. "ಅಧಿಕಾರಿಗಳು ಆದರದಿಂದ ನುಡಿದರು.

"ರಾಯರೇ" ಕೈ ಮುಗಿದು ಪಟೇಲರು ಎದ್ದು ನಿಂತು, "ಗ್ರಾಮಸ್ಥರ ಕಡೆಯಿಂದ ಒಂದು ಮನವಿಯನ್ನು ನಿಮಗೆ ಮಾಡಲಿರುವೆನು" ಎಂದರು.

"ಅದಾವ ಮನವಿ? ಏನು ಬೇಕಾಗಿದೆ ಗ್ರಾಮಸ್ಥರಿಗೆ? ಕೇಳಿ ಬಿಡಿ, ಅನುಮಾನ ಬೇಡ." ಅಧಿಕಾರಿಗಳು ಪಟೇಲರಿಗೆ ಆಶ್ವಾಸನೆಯಿತ್ತಂತಿತ್ತು.

"ಗೋಚರಾವಿಗೆ ಬಂದು ಮಾಡಲ್ಪಟ್ಟ ಈ ಸ್ಥಳವನ್ನು ಗೋಚರಾವಿಗೆ ಕಾಯ್ದಿಡಬೇಕೆಂದು ನಮ್ಮದೊಂದು ಮನವಿ ಇದೆ. ತಾವು ಅದನ್ನು ಮಂಜೂರು ಮಾಡಬೇಕು" ಪಟೇಲರು ಮನವಿಯನ್ನು ಒಪ್ಪಿಸಿದರು.

ನಿಜಕ್ಕೂ ಇಂದಿನ ಸರಕಾರದ "ಹೆಚ್ಚು ಆಹಾರ ಬೆಳೆಸಿರಿ" ಎಂಬ ಘೋಷಣೆಗೆ ಈ ನಿಮ್ಮ ಮನವಿ ಪೋಷಕವಾದಂತಿದೆ. ನಿಮ್ಮ ದನಗಳು ಅನುದಿನವೂ ಇಲ್ಲಿ ಚರಾವಿಗೆ ಬರಲಿ—ಗಂಗೆಯ ಮಗಳು ಗೌರಿ ನಿತ್ಯವೂ ಇಲ್ಲಿ ಬಂದು ತಾಯ ದರ್ಶನ ಪಡೆಯಲಿ—ಪುಷ್ಟಿಕರವಾದ ಆಹಾರ ತಿಂದ ನಿಮ್ಮ ಗೋವುಗಳು ನಿಮಗೆ ಹೆಚ್ಚು ಗೊಬ್ಬರವನ್ನೂ ಹಾಲನ್ನೂ ಒದಗಿಸಲಿ. ಅದರಿಂದಾಗಿ ನೀವು ದೃಢಕಾಯರಾಗಿ ರಾಷ್ಟ್ರದ ಸಂಪತ್ತನ್ನು ಬೆಳೆಸಿರಿ" ಎಂದು ನುಡಿಯುತ್ತಾ ಅಧಿಕಾರಿಗಳು ಎದ್ದು ನಿಂತರು.

ಗ್ರಾಮಸ್ಥರು ಸಮಾಧಿಯ ಬಳಿ ಸುತ್ತುವರಿದು ನಿಂತು "ತಾಯೇ! ಇಂದು ನಾವು ಇಲ್ಲಿ ಚೆಲ್ಲಿದ ಹಾಲೂ ಮತ್ತು ಹುಲ್ಲೂ ನಮಗೆ ನಿನ್ನ ಆಶೀರ್ವಾದದಿಂದ ಒಂದಕ್ಕೆ ನೂರಾಗಲಿ. ನಿನ್ನ ಸಂತಾನ ವೃದ್ಧಿಯಾಗಿ ರಾಷ್ಟ್ರದ—ನಮ್ಮ ಸಂಪತ್ತು ಬೆಳೆಯಲಿ. ಇಂದಿನಂತೆ ಎಂದೆಂದೂ ನಿನ್ನ ಪೂಜೆಗೈಯುವಂತೆ ನಮಗೆ ಮತಿಯನ್ನು ನೀಡು ತಾಯೇ?" ಎಂದು ಕೈ ಮುಗಿದರು.

"ಪಟೇಲರೇ ಗಂಗೆಯ ಸಮಾಧಿಯ ಮೇಲೆ ದಿನ್ನೆಯಲ್ಲಿ ಗೋಪುರವಾಗಬೇಕಾಗಿದೆ. ಅದರ ಶಿಖರ ಇಡೀ ರಾಷ್ಟ್ರದಲ್ಲಿ ಗೋರಕ್ಷಣೆಯ ಮಹತ್ವವನ್ನು ಸಾರಬೇಕಾಗಿದೆ. ನಿಜಕ್ಕೂ ಇಂತಹ ಸಮಾರಂಭವನ್ನು ನಾನು ಇಷ್ಟರ ವರೆಗೆ ಜರಗಿಸಿರಲಿಲ್ಲ. ಇಂತಹ ಬೇಡಿಕೆ ನಾನಿಂದಿನ ತನಕ ಕೇಳಿಲ್ಲ. ನಮಗೆ ಸಂಕ ಬೇಕು, ನಮಗೆ ಮಾರ್ಗ ಬೇಕು; ನಮಗೆ ತಿನ್ನಲು ಒಳ್ಳೇ ಅಕ್ಕಿ ಬೇಕು ಅನ್ನುವುದಕ್ಕಿಂತ ನಮ್ಮ ಗೋವುಗಳಿಗೆ ಆಹಾರ ಬೇಕು. ಅದಕ್ಕೆ ರಕ್ಷಣೆ ಬೇಕು ಎಂದು ಯಾವ ಗ್ರಾಮವೂ ಬೇಡಿಲ್ಲ. ನೀವಿಂದು ಬೇಡಿದ ಬೇಡಿಕೆ ನಿಜಕ್ಕೂ ನಮ್ಮ ಜಿಲ್ಲೆಗೊಂದು ಭೂಷಣವಾಗಿದೆ. ನಿಮ್ಮ ಇಚ್ಛೆ ಸದ್ಯದಲ್ಲೇ ನೆರವೇರುವುದು" ಎಂದರು ಅಧಿಕಾರಿಗಳು.

ಬಿಸಿಲಿನ ತಾಪಕ್ಕೆ ಗುಡ್ಡವಿಳಿದು ಬರುವ ಎಲ್ಲರ ಮುಖಗಳಲ್ಲಿ ಆಯಾಸದೊಡನೆ ಸಂತೋಷವೂ ಉಕ್ಕಿ ಬರುತ್ತಿತ್ತು.



ನಾಟಕ ಕಲೆ*

ಲೇಖಕ: "ಶ್ರೀನಿಧಿ"

ನಾಟಕವು ಮನೋರಂಜನಕ್ಕೂ ನೀತಿಬೋಧಕ್ಕೂ ಒಂದು ಉತ್ತಮವಾದ ಸಾಧನವು. ಇಹಲೋಕದ ನ್ಯಾಯ್ಯ ಮತ್ತು ಧರ್ಮ್ಯವಾದ ಸುಖ, ಪರಲೋಕದ ಸ್ವರ್ಗಸುಖ, ಮತ್ತು ಕೊನೆಯದಾಗಿ, ಸರ್ವೋತ್ತಮವಾದ ಮೋಕ್ಷಸುಖ—ಇವುಗಳನ್ನು ಸಂಪಾದಿಸುವುದೇ ಮಾನವಜನ್ಮದ ಇತಿಕರ್ತವ್ಯವೆಂದು ಭಾವಿಸಲಾಗಿದೆ. ಮನೋರಂಜನದಿಂದ ಐಹಿಕ ಸುಖವನ್ನು ಸಾಧಿಸಿದಂತಾಗುವುದು. ಚಿರಕಾಲಿಕ ಸುಖವು ನೀತಿಯಿಂದ ವರ್ತಿಸುವುದರ ಮೂಲಕ ಪ್ರಾಪ್ತವಾಗುವುದು. ನಾಟಕವು ಇದಕ್ಕೆ ಸಹಾಯವಾಗಿರುವುದು. ಲೋಕಶಿಕ್ಷಣಕ್ಕಾಗಿಯೆ ಅಸ್ತಿತ್ವಕ್ಕೆ ಬಂದಿರುವ ನಾಟಕದಲ್ಲಿ ಸಂಸಾರದ ಪ್ರಸಂಗವು ಯಥಾವತ್ತಾಗಿ ಚಿತ್ರಿತವಾಗವುದರಿಂದ ಅದು ಧರ್ಮ, ನೀತಿ, ವ್ಯವಹಾರ, ಉದ್ಯೋಗ ಮುಂತಾದ ವಿಷಯಗಳಲ್ಲಿ ಸಮಾಜಕ್ಕೆ ಮಾರ್ಗದರ್ಶಕವಾಗುವುದು. 'ನಾಟಕವು ಸಂಸಾರದ ಪ್ರತಿನಿಧಿ' ಎನ್ನುವರು. ನಾಟ್ಯಶಾಸ್ತ್ರದಲ್ಲಿ ಇದು 'ಪಂಚಮ ವೇದ'ವೆಂದು ಕರೆಯಲ್ಪಟ್ಟಿರುವುದು. ನಾಟಕಶಾಲೆಯಲ್ಲಿ ವಿವಿಧ ಕಲೆಗಳು ಸಮ್ಮಿಳಿತವಾಗಿ ಸಾಮಾಜಿಕರ ಮನಸ್ಸಿನ ಮೇಲೆ ಒಂದು ವಿಲಕ್ಷಣವಾದ, ಐಂದ್ರಜಾಲಿಕವಾದ ಸುಪರಿಣಾಮವನ್ನು ಉಂಟುಮಾಡುತ್ತಿವೆ. ಸಮಾಜದಲ್ಲಿ, ಜನಾಂಗದಲ್ಲಿ ಮತ್ತು ರಾಷ್ಟ್ರದಲ್ಲಿ ಬೇಕಾದ ತರದ ಕ್ರಾಂತಿಯನ್ನು ಉಂಟುಮಾಡುವ ಸಾಮರ್ಥ್ಯವು ನಾಟಕದಲ್ಲಿರುವುದು. ಆದಕಾರಣ ನಾಟಕವು ಸರ್ವಮಾನ್ಯವೂ ಸರ್ವಾದರಣೀಯವೂ ಆಗಿರುವುದು.

ದೋಷರಹಿತವಾದ, ಗುಣಾದಿಗಳಿಂದ ಕೂಡಿದ ಮತ್ತು ಚಮತ್ಕಾರರಾಶಿಯನ್ನುಂಟುಮಾಡುವ ಶಬ್ದಾರ್ಥಗಳು ಕಾವ್ಯವೆನಿಸುವುವು. ಕಾವ್ಯವು ಸಮಸ್ತ ಮಾನವ ಜ್ಞಾನದ, ಮಾನವ ವಿಚಾರಗಳ, ಮಾನವ ಮನೋವೃತ್ತಿ, ಮನೋವಿಕಾರ ಮತ್ತು ಭಾಷೆ—ಇವುಗಳ ಒಂದು ವಿಕಸಿತ ಪುಷ್ಪವೂ, ಇವೆಲ್ಲವುಗಳ ಸೌರಭವೂ ಆಗಿದೆಯೆನ್ನುವರು. ಇಂತಹ ಪರಮ ಹೃದ್ಯವಾದ ಕಾವ್ಯದಲ್ಲಿ ಶ್ರವ್ಯ ಮತ್ತು ದೃಶ್ಯ ಎಂದು ಎರಡು ವಿಧ. ವಾಚನದಿಂದಲೂ ಶ್ರವಣದಿಂದಲೂ ಆನಂದ ಹುಟ್ಟಿಸಬಲ್ಲುದೇ **ಶ್ರವ್ಯ ಕಾವ್ಯವು.** ದರ್ಶನಕ್ಕೆ ಯೋಗ್ಯವಾದುದೇ **ದೃಶ್ಯ ಕಾವ್ಯವು,** ಎಂದರೆ **ನಾಟಕವು.** ಶ್ರವ್ಯ ಕಾವ್ಯಕ್ಕೂ ನಾಟಕಕ್ಕೂ ಎಷ್ಟು ನಿಕಟವಾದ ಸಂಬಂಧವಿರುವುದೆಂದರೆ, ಶ್ರವ್ಯ ಕಾವ್ಯದ ಪರಿಣತ ಸ್ವರೂಪವೇ ನಾಟಕವೆನ್ನಬಹುದು.

ಗದ್ಯ ಅಥವಾ ಪದ್ಯ ಕಾವ್ಯ ಬರೆಯುವ ಕವಿಯು ಅಥವಾ ನಾಟಕಕಾರನು ಸಮಸ್ತ ಶಾಸ್ತ್ರಗಳ ಮರ್ಮವನ್ನು ಅರಿತವನಾಗಿರಬೇಕು. ವ್ಯಾಕರಣ, ಛಂದಸ್ಸು, ಅಲಂಕಾರ ಇತ್ಯಾದಿ ಸಕಲ ಶಾಸ್ತ್ರಗಳಲ್ಲಿ ಪ್ರವೀಣನಾಗಿರಬೇಕು. ಶಕ್ತಿ ಅಥವಾ ಪ್ರತಿಭೆ, ಲೋಕಾವೇಕ್ಷಣ ಮತ್ತು ಶಾಸ್ತ್ರಕಾವ್ಯಾದ್ಯವೇಕ್ಷಣ, ಕಾವ್ಯಪಂಡಿತ ಶಿಕ್ಷಣ—ಇವು ಇರುವಾತನೇ ಕಾವ್ಯನಿರ್ಮಾಣಕ್ಕೆ ಯೋಗ್ಯನೆಂದು ಬಲ್ಲವರ ಮತ.

ನಾಟಕ ಸ್ವರೂಪದ ಪ್ರತಿಪಾದನದಲ್ಲಿ ಅದರ ಕಥಾಭಾಗದ ವಿಷಯವು ಬಹು ಮಹತ್ತಾದುದು. ಆದುದರಿಂದಲೇ ಪೂರ್ವಕಾಲದ ನಾಟಕಕಾರರು ರಾಮಾಯಣ ಮಹಾಭಾರತ ಇತ್ಯಾದಿ ಸರ್ವಮಾನ್ಯ ಗ್ರಂಥಗಳಿಂದ ಚಿತ್ತವೇಧಕವಾದ ಭಾಗಗಳನ್ನು ಆಯ್ದುಕೊಂಡು ತಮ್ಮ ಪ್ರತಿಭಾಸಾಮರ್ಥ್ಯದಿಂದ

* ಬ್ರಹ್ಮಶ್ರೀ ಆತ್ಮಾರಾಮ ಶಾಸ್ತ್ರೀ, ಒಡ್ಲಮನೆ, ಇವರ ಗ್ರಂಥದ ಆಧಾರದಿಂದ.

ತಿವುಗಳಿಗೆ ಇನ್ನೂ ಆಕರ್ಷಕವಾದ ಸ್ವರೂಪವನ್ನು ಕೊಡುತ್ತಿದ್ದರು.

ಈ ಕಥಾಭಾಗದಲ್ಲಿ ಬರುವ ೧೦-೧೫ ಮಂದಿಯಲ್ಲಿ ಮುಖ್ಯ ಪುರುಷನು **ನಾಯಕನಾಗಿರುವನು;** ಪ್ರಧಾನ ಸ್ತ್ರೀವ್ಯಕ್ತಿಯು **ನಾಯಿಕೆ.** ಇನ್ನು ಇಬ್ಬರು-ಮೂವರು ಸಹಕಾರಿಗಳು ಅಥವಾ ವಿರೋಧಿಗಳು. ಕುಲ, ಶೀಲ, ನಾಯಕ ಪದ್ಧತಿ--ಇವುಗಳನ್ನು ಅನುಸರಿಸಿ ನಾಯಕನಲ್ಲಿ **ಧೀರೋದಾತ್ತ, ಧೀರೋದ್ಧತ, ಧೀರಲಲಿತ, ಧೀರಪ್ರಶಾಂತ**—ಎಂಬುದಾಗಿ ನಾಲ್ಕು ಭೇದಗಳನ್ನು ಪ್ರಾಚೀನರು ಕಲ್ಪಿಸಿರುತ್ತಾರೆ. ನಾಯಕನು ಸಾಮಾನ್ಯವಾಗಿ ದಾತೃತ್ವ, ಶೌರ್ಯ, ಕುಲೀನತೆ, ರೂಪ, ಯೌವನ, ಉತ್ಸಾಹ, ಲೋಕಪ್ರೀತಿ, ತೇಜಸ್ಸು, ಪಾಂಡಿತ್ಯ, ಸತ್‌ಸ್ವಭಾವ ಇತ್ಯಾದಿ ಗುಣಗಳಿಂದ ಸಂಪನ್ನನಾಗಿದ್ದು ಚತುರನಾಗಿರುವನು.

ನಾಯಕನ ಗುಣಾದಿಗಳನ್ನು ವಿಶದಪಡಿಸುವಂತೆ ಒಬ್ಬ **ಪ್ರತಿನಾಯಕನ** ಯೋಜನೆಯು ಮಾಡಿರುತ್ತದೆ. ನಾಯಕನ **ಕಾರ್ಯಸಾಧಕ**ರು ಇಬ್ಬರು--ಮೂವರು; ಪ್ರತಿನಾಯಕನ **ಸಹಾಯಕ**ರು ಇಬ್ಬರು-ಮೂವರು; **ದೂತ ದೂತಿ**ಯರೆಂಬುದಾಗಿ ಮೂರು ನಾಲ್ಕು ಮಂದಿ;—ಇದಕ್ಕಿಂತ ಹೆಚ್ಚು ಪಾತ್ರಗಳನ್ನು ಯೋಜಿಸುವುದು ಉಚಿತವಲ್ಲ. **ಸಭಾಸದರು, ನಾಗರಿಕರು, ಭಟರು, ಭಿಕ್ಷುಕ**ರು—ಇವರನ್ನು ಒಂದು ವೇಳೆ ಅಧಿಕ ಸಂಖ್ಯೆಯಿಂದ ರಂಗಸ್ಥಳದಲ್ಲಿ ತರುವುದರಿಂದ ಬಾಧಕವಿಲ್ಲ; ಆದರೆ ಇವರನ್ನು ಗುಂಪುಗುಂಪಾಗಿ ತಂದು ನಿಲ್ಲಿಸಿ ಎಲ್ಲರಿಂದಲೂ ಏಕಕಾಲದಲ್ಲಿ ಉಚ್ಚಸ್ವರದಲ್ಲಿ ಮಾತನಾಡಿಸುವುದು, ಬೊಬ್ಬೆಹಾಕಿಸುವುದು ಅಥವಾ ಗೋಳಿಡಿಸುವುದು ಶಿಷ್ಟಾಚಾರವಲ್ಲ. ಸಮುದಾಯವು ದೊಡ್ಡದಾದರೂ ಮೌನದಿಂದ ನಿಂತು ಒಬ್ಬಿಬ್ಬರು ಮಾತ್ರ ಭಾಷಣಮಾಡುವುದು ಅಭಿಯುಕ್ತವಾದ ರೀತಿಯು.

ನಾಯಕನಿಗೆ ಸಹಾಯಕನಾಗಿ **ವಿದೂಷಕ**ನಿರುವನು. ಇವನು ತನ್ನ ಕ್ರಿಯೆ, ಅಂಗಚೇಷ್ಟೆ, ವೇಷ, ಭಾಷೆ—ಇವುಗಳಿಂದ ಹಾಸ್ಯವನ್ನು ಹುಟ್ಟಿಸುವನು. ವಿನೋದವನ್ನು ಪ್ರಚೋದಿಸುವುದು ಅವಶ್ಯವಾದರೂ ಅಸಭ್ಯ ಕ್ರಮದಿಂದ ಹಾಸ್ಯವನ್ನು ಉತ್ಪಾದಿಸುವುದು ಹಿತವಲ್ಲ.

ರಾಜನ ಅಂತಃಪುರದಲ್ಲಿ ವಾಮನ, ಷಂಡ, ಕುಬ್ಜ ಮುಂತಾದವರನ್ನು ತರುವ ವಾಡಿಕೆಯುಂಟು. ಇವರಲ್ಲಿ **ಕಂಚುಕಿ**ಯು ಹೆಚ್ಚು ಮಹತ್ವದವನು. ಅಂತಃಪುರಚರನಾದ ಇವನು ವಯೋವೃದ್ಧನಾಗಿರುವನು. ಜಾತಿಯಲ್ಲಿ ಬ್ರಾಹ್ಮಣನಾಗಿದ್ದು ಶುಚಿತ್ವಾದಿ ಗುಣಗಳಿಂದ ಸಂಪನ್ನನಾಗಿರುವನು. ಸ್ತ್ರೀಯರ ಪರಿಚರ್ಯದಲ್ಲಿ ದಾಸಿಯರಿರುವರು.

ವಿರಾಮಕ್ಕೋಸ್ಕರವೂ, ಕಥಾರಚನೆಯ ಸೌಕರ್ಯಕ್ಕೋಸ್ಕರವೂ, ಗೌಣ ವಿಷಯಗಳನ್ನೂ ಮುಖ್ಯ ಕಥಾಭಾಗಕ್ಕೆ ಪೋಷಕವಾದಂತಹ ಕ್ಷುದ್ರ ಸಂಗತಿಗಳನ್ನೂ ತೋರಿಸಿ ಕಥೆಯ ಪ್ರವಾಹವನ್ನು ಸರಿಯಾಗಿ ಹರಿಸುವುದಕ್ಕೋಸ್ಕರವೂ ನಾಟಕದಲ್ಲಿ ಅಂಕ, ವಿಷ್ಕಂಭಕ, ಪ್ರವೇಶಕ, ಸಂಧಿ ಇತ್ಯಾದಿ ಅನುಕೂಲತೆಗಳ ಏರ್ಪಾಡಿದೆ.

ನಾಟಕಕ್ಕೆ ಸಾಮಾನ್ಯವಾಗಿ ಐದರಿಂದ ಹತ್ತರ ವರೆಗೆ ಅಂಕಗಳು ಇರುತ್ತವೆ. ಅಂಕವು ರಸಭಾವಗಳಿಂದ ತುಳುಕುತ್ತಿರಬೇಕು. ಅಂಕದಲ್ಲಿ ನಾಯಕನ ಕಾರ್ಯಕಲಾಪಗಳು ಪ್ರತ್ಯಕ್ಷವಾಗಿ ನಡೆಯುವಂತಿರಬೇಕು. ಗೂಢಾರ್ಥದ ಮಾತುಗಳನ್ನೂ, ಕ್ಲಿಷ್ಟ ಶಬ್ದಗಳನ್ನೂ ಉಪಯೋಗಿಸಕೂಡದು. ದೀರ್ಘವಾದ ಗದ್ಯಗಳಿರಕೂಡದು. ಮುಖ್ಯ ಕಥೆಗೆ ಸಾಧಕವಾದ ಅವಾಂತರ ಸಂಗತಿಗಳು ಆಕಸ್ಮಿಕವಾಗಿ ಅರ್ಧದಲ್ಲಿ ಬಿಟ್ಟುಹೋಗಿರಬೇಕು. ಮುಂದೆ ಪುನಃ ಅವು ಮುಖ್ಯ ಕಥಾಭಾಗಕ್ಕೆ ಜೋಡಿಸಲ್ಪಡಬೇಕು. ಒಂದು ಅಂಕದಲ್ಲಿ ಹೆಚ್ಚು ಕಾರ್ಯಕಲಾಪಗಳು ಬರಬಾರದು. ಅದರಿಂದ ಕಾರ್ಯಸಾಂಕರ್ಯವುಂಟಾಗುವುದು. ಬೇರೆಬೇರೆ ಅಂಕಗಳಲ್ಲಿ ಬೇರೆಬೇರೆ ಯೋಗ್ಯ ಕಾರ್ಯಕಲಾಪಗಳಿರಬೇಕು. ಹೆಚ್ಚು ಪದ್ಯಗಳಿರಕೂಡದು. ಮುಖ್ಯವಾದ ಸಂಗತಿಗಳಲ್ಲಿ ಪರಸ್ಪರ ವಿರೋಧವನ್ನು ವರ್ಣಿಸಬಾರದು. ಒಂದಕ್ಕಿಂತ ಹೆಚ್ಚು ದಿವಸಗಳ ವರೆಗೆ ನಡೆದ ವೃತ್ತಾಂತವನ್ನು ಒಂದೇ ಅಂಕದಲ್ಲಿ ತರಬಾರದು.

ನಾಯಕ, ನಾಯಿಕೆ, ಪರಿಚಾರಿಕೆಯರು, ಮಂತ್ರಿಗಳು, ವೈಶ್ಯರು--ಇವರೇ ಮುಂತಾದವರ ಪ್ರತ್ಯಕ್ಷ ವ್ಯವಹಾರಗಳಿಂದ ರಸಪ್ರತೀತಿಯಾಗುವಂತೆ ರಚನೆಯಿರಬೇಕು. ದೂರದಿಂದ ಕರೆಯುವುದು, ಕೊಲೆ, ಯುದ್ಧ, ರಾಜ್ಯದೇಶಗಳ ನಾಶ, ಮದುವೆ, ಊಟ, ಶಾಪ, ಮಲಮೂತ್ರ ವಿಸರ್ಜನೆ, ಮರಣ, ಸರಸ ಕ್ರೀಡೆ, ಲಜ್ಜಾಸ್ಪದವಾದ ವಿಷಯಗಳು, ಸ್ನಾನ, ಗಂಧಾದಿ ಅಲಂಕಾರ ಧಾರಣ, ಜಾತಿದ್ವೇಷಕಾರಕ ಸಂಗತಿಗಳು—ಇವುಗಳ ದೇಖಾವೆಯನ್ನು ಅಂಕದಲ್ಲಿ ತರಬಾರದು. ಶೃಂಗಾರ ಮುಂತಾದುವುಗಳ ಮಾತುಕತೆಗಳನ್ನು ಅಭಿನಯಿಸಬೇಕಾದರೆ ಅವುಗಳ ಅಂತಿಮ ಕೋಟಿಯನ್ನು ರಂಗದ ಮೇಲೆ ಪ್ರದರ್ಶಿಸಬಾರದು. ಅವುಗಳಿಂದ ರಸಹಾನಿಯಾಗಿ ಪ್ರೇಕ್ಷಕರಲ್ಲಿ ಜಿಹಾಸೆಯುತ್ಪನ್ನವಾಗುವುದು. ಆಯಾ ರಸಗಳಲ್ಲಿ ಯಾವುದು ಫಲಸ್ವರೂಪವಾಗಿರುವುದೊ ಅದು ರಂಗಭೂಮಿಯ ಮೇಲೆ ಅಗೋಚರವಾಗಿರುವುದರಿಂದಲೆ ಸಾಮಾಜಿಕರ ಮನಸ್ಸು ರಸಾಸ್ವಾದನದಲ್ಲಿ ಮುಳುಗುವುದು.

ಆದರೆ ಕೆಲವು ಸಂಗತಿಗಳು ನಾಯಕನ ಉದಾತ್ತ ಸ್ವಭಾವಕ್ಕೆ ಅಥವಾ ವರ್ಣ್ಯರಸಕ್ಕೆ ಅನುಚಿತವಾಗಿರುವವುಗಳಾದರೂ, ಅಥವಾ ಒಂದು ದಿನಕ್ಕಿಂತ ಹೆಚ್ಚು ಅವಧಿಯವರೆಗೆ, ಹಲವು ವರ್ಷಗಳ ವರೆಗೆ, ನಡೆಯತಕ್ಕವುಗಳಾದರೂ ಕಥಾಬೋಧನಕ್ಕೆ ಅವಶ್ಯವಾಗಿರುತ್ತವೆ. ಅವುಗಳನ್ನು ಸೂಚಿ

ಸಿಲು ನಾಲ್ಕೈದು ತರದ ಅರ್ಥೋಪಕ್ಷೇಪಗಳನ್ನು ಪ್ರಾಚೀನ ನಾಟ್ಯಶಾಸ್ತ್ರಕಾರರು ಕಲ್ಪಿಸಿರುವರು. ಇವುಗಳಲ್ಲಿ **ವಿಷ್ಕಂಭಕ, ಪ್ರವೇಶಕ**—ಇವು ಮುಖ್ಯವಾಗಿರುವುವು. ಒಂದು ಅಂಕದ ಪ್ರಾರಂಭದಲ್ಲಿ ಮಧ್ಯಮ ಇಲ್ಲವೆ ನಿಕೃಷ್ಟವರ್ಗದ ಒಂದು ಅಥವಾ ಎರಡು ಪಾತ್ರಗಳ ಸಂಭಾಷಣರೂಪದಿಂದ ಇದನ್ನು ಸೂಚಿಸಬೇಕಾಗುತ್ತದೆ. ಈ ರೀತಿಯಿಂದ ಸೂಚಿಸುವುದೇ **ವಿಷ್ಕಂಭಕ**ವು. ಕಳೆದು ಹೋದ ಸಂಗತಿಗಳನ್ನು ಹೇಗೆ ಈಮೇರೆಗೆ ಸೂಚಿಸಬಹುದೊ, ಹಾಗೆಯೆ ಮುಂದೆ ಆಗತಕ್ಕವುಗಳನ್ನೂ ಅಂತಹ ಪಾತ್ರಗಳಿಂದಲೆ ನುಡಿಸಬಹುದು. ವಿಷ್ಕಂಭಕವು ಆದಷ್ಟು ಸಂಕ್ಷಿಪ್ತವಾಗಿರಬೇಕು. **ಪ್ರವೇಶಕ**ವಾದರೂ ಸಾಧಾರಣ ವಿಷ್ಕಂಭಕದಂತೆಯೆ ಇರುವುದು. ನಡೆದ ಅಥವಾ ನಡೆಯಲಿರುವ ವಿಷಯಗಳನ್ನು ವಿದೂಷಕ ಅಥವಾ ಸೇವಕ ಇತ್ಯಾದಿ ಕೆಳತರಗತಿಯ ಪಾತ್ರಗಳ ಬಾಯಿಂದ, ಕಥಾಸಂಬಂಧವು ತಪ್ಪದ ಹಾಗೆ, ಅಥವಾ ಆ ಸಂಬಂಧವನ್ನು ಜೋಡಿಸುವ ಹಾಗೆ ಹೇಳಿಸುವುದು **ಪ್ರವೇಶಕ**ವಾಗಿದೆ. ಪ್ರವೇಶಕವು ಪ್ರಥಮಾಂಕದ ಆದಿಯಲ್ಲಿ, ಅಥವಾ ಅಂತಿಮಾಂಕದ ಅಂತ್ಯದಲ್ಲಿ ಇರಕೂಡದು; ಯಾವಾಗಲೂ ಎರಡು ಅಂಕಗಳ ಮಧ್ಯದಲ್ಲಿರಬೇಕು.


ವಸ್ತುತವಾಗಿ **ಸಂಧಿ** ಎಂಬುದು ನಾಟಕದ ಒಂದು ಅಂಶವಲ್ಲ; ಅದೊಂದು ಸಂಬಂಧವು. ಮುಖ್ಯ ಪ್ರಯೋಜನಕ್ಕಾಗಿ ಉದಾಹರಿಸಿಕೊಂಡ ಕಥಾಂಶಗಳಿಂದ ಅವಾಂತರ (ಅಮುಖ್ಯ) ಪ್ರಯೋಜನಗಳನ್ನು ಸಾಧಿಸಿಕೊಳ್ಳುವುದು **ಸಂಧಿ**ಯಾಗಿದೆ. ಸಂಧಿಯಲ್ಲಿ **ಮುಖ, ಪ್ರಮುಖ, ಗರ್ಭ, ವಿಮರ್ಶ** ಮತ್ತು **ಉಪಸಂಹೃತಿ** ಎಂದು ಐದು ಭೇದಗಳಿವೆ. ಮುಖ್ಯ ಕಥಾಭಾಗದ ಗೊಣಸು ಮಧ್ಯದಲ್ಲೆ ಕಡಿದುಹೋಗದಂತೆ, ಅಥವಾ ಅನುರೂಪವಾದ ಇತರ ಉಪಸಂವಿಧಾನಕಗಳಿಂದ ಮುಖ್ಯ ಕಥೆಯನ್ನು ಇನ್ನಷ್ಟು ಆಕರ್ಷಕವೂ, ಇನ್ನಷ್ಟು ರಸಪ್ರದವೂ ಮತ್ತು ಇನ್ನಷ್ಟು ಸಮರ್ಪಕವೂ ಆಗುವಂತೆ ಯೋಜನೆಯನ್ನು ಮಾಡುವುದೇ ಸಂಧಿಯಾಗಿದೆ.

ನಾಟಕವನ್ನು ಪ್ರಾರಂಭಿಸುವಾಗ ಪ್ರಥಮತಃ ಪ್ರಸ್ತಾವನೆ ಬರುತ್ತದೆ. ಇದರಲ್ಲಿ ಮೊದಲು ಪೂರ್ವರಂಗ, ಅನಂತರ ಸಭಾಪೂಜೆ, ನಾಟಕದ ಹೆಸರು, ಕವಿಯ ಪರಿಚಯ—ಈ ವಿಷಯಗಳು ಸೇರುವುವು. ಸೂತ್ರಧಾರನು ಗಾಯಕರಾದ ತನ್ನ ಪರಿವಾರದವರಿಂದ ಸಮೇತನಾಗಿ ನಾಟಕಕ್ಕೂ ರಂಗಭೂಮಿಗೂ ಯಾವ ವಿಘ್ನವೂ ಬರಬಾರದೆಂದು ಪ್ರಾರ್ಥನೆ ಮಾಡುವನು. ಇದೇ **ನಾಂದಿ**ಯು.

ನಾಟಕಕ್ಕೆ, ಎಂದರೆ ಸಂವಿಧಾನಕ್ಕೆ, ಮೂಲಭೂತವಾದ ವಸ್ತುವು **ಬೀಜ**ವೆನಿಸುವುದು. ಸ್ವಲ್ಪವನ್ನೆ ಸೂಕ್ಷ್ಮವಾಗಿ ವಿವರಿಸಿ ಕ್ರಮಕ್ರಮವಾಗಿ, ಅನುಕೂಲ ಪರಿಸ್ಥಿತಿಯಿಂದ ಬೀಜವು ವೃಕ್ಷಸ್ವರೂಪದಲ್ಲಿ ಬೆಳೆಯುಹತ್ತುವಂತೆ, ವಿಸ್ತರಿಸಿಕೊಂಡು ಹೋಗುವ ರಚನಾಕೌಶಲ್ಯವು ಬೀಜದ ಪರಿಯಾಗಿದೆ. ವಸ್ತುತವಾಗಿ ಅನ್ಯವಿಷಯವನ್ನು ಅಥವಾ ವಸ್ತುವನ್ನು ಉಪಕರಿಸುವ ಸಂಗತಿಯು ಪ್ರಕೃತವಾದ ಮುಖ್ಯಾರ್ಥವನ್ನು ಅಲಂಕರಿಸಹೊರಟರೆ, ಅಥವಾ ಮುಖ್ಯಾರ್ಥದ ಪರಿಪೋಷವನ್ನು ಮಾಡತೊಡಗಿದರೆ, ಅದು **ಪತಾಕೆ** ಎನಿಸುವುದು. ಆಯಾ ಕಡೆಗಳಲ್ಲಿ ಹೇಳಿದ ಸೂಚಕ ಸಂಗತಿಗಳನ್ನು ಥಕ್ಕನೆ ಒಂದೇ ಕಡೆಯಲ್ಲಿ ತಂದು ದುಃಖಪರ್ಯವಸಾಯಿಯಾಗುವಂತೆ ಮಾಡುವ ರಚನೆಯು **ಸಂಹೃತಿ** ಎಂದು ಕರೆಯಲ್ಪಡುವ ನಿರ್ವಹಣವಾಗಿರುವುದು.

ನಾಟಕದಲ್ಲಿ ಭಾಷೆಯನ್ನು ಉಪಯೋಗಿಸುವಾಗ ಪಾತ್ರಗಳ ವಿದ್ಯೆ, ಜ್ಞಾನ, ಯೋಗ್ಯತೆ, ಜಾತಿ, ಕುಲ, ಆವರಣ—ಇವುಗಳನ್ನು ವಿವೇಚಿಸಿ ಆಯಾ ಪಾತ್ರಗಳಿಗೆ ಅನುರೂಪವಾದ ಭಾಷೆಯನ್ನು ಬಳಸಬೇಕು.

ಈ ಲಕ್ಷಣಗಳನ್ನು ಲಕ್ಷಿಸಿ ರಚಿತವಾದ ಕೃತಿಗಳು ಕಾಳಿದಾಸಾದಿಗಳ ಕೃತಿರತ್ನಗಳಂತೆ ಅಜರಾಮರವಾಗಿ ಬಾಳಿ ಬೆಳಗುವುದರಲ್ಲಿ ಸಂದೇಹವಿರದು.



ಅಪಮೌಲ್ಯನ ಮತ್ತು ವಿದೇಶ ವ್ಯಾಪಾರ

(ಲೇಖಕರು: ಶ್ರೀ ಎಚ್. ಎಸ್. ಪಾಟೀಲ, ದಿಲ್ಲಿ.)



ಕಳೆದ ವರ್ಷದ ಸಪ್ಟೆಂಬರ ತಿಂಗಳಲ್ಲಿ ಪ್ರಪಂಚದ ಅನೇಕ ರಾಷ್ಟ್ರಗಳ ಸಂಗಡ ಭಾರತವೂ ತನ್ನ ಧನದ ಅಪಮೌಲ್ಯನವನ್ನು ಮಾಡಿಕೊಂಡಿತು. ಸ್ವಾತಂತ್ರ್ಯವು ದೊರೆತ ಎರಡು ವರ್ಷಗಳಲ್ಲಿಯೆ ಇಂತಹ ಒಂದು ಮಹತ್ತರವಾದ ಆರ್ಥಿಕ ಘಟನೆಯು ಜರಗಿದುದು ನಮ್ಮ ದೇಶದ ಚರಿತ್ರೆಯಲ್ಲಿಯೆ ಹೊಸತು. ಹಿಂದೊಮ್ಮೆ ಈ ಬಗೆಯ ಅಪಮೌಲ್ಯನವನ್ನು ಮಾಡಿಕೊಳ್ಳುವ ಸನ್ನಿವೇಶವು ಒದಗಿದ್ದರೂ, ಆಗ್ಗೆ ಭಾರತವು ತನ್ನ ಆರ್ಥಿಕ ಪರಿಸ್ಥಿತಿ ಮತ್ತು ಅಭಿವೃದ್ಧಿಯ ವಿಷಯವಾಗಿ ಸ್ವಾಯತ್ತತೆಯನ್ನಾಗಲಿ, ಸ್ವಾತಂತ್ರ್ಯವನ್ನಾಗಲಿ ಪಡೆದಿರಲಿಲ್ಲ. ಈಗಿನ ಸನ್ನಿವೇಶವು ತೀರ ಭಿನ್ನವಾದುದಾಗಿದೆ. ನಮ್ಮ ಆರ್ಥಿಕ ಭವಿಷ್ಯವನ್ನು ನಾವು ನಮಗೆ ಒಪ್ಪಿಗೆಯಾದಂತೆ ಮಾರ್ಪಡಿಸಿಕೊಳ್ಳಲಿಕ್ಕೆ ನಮ್ಮ ವಿದೇಶ ವ್ಯಾಪಾರದ ನೀತಿ ನಿಯಮಗಳನ್ನು ನಮಗೆ ಅನುಕೂಲವಾಗಿ ಮಾಡಿಟ್ಟುಕೊಳ್ಳಲಿಕ್ಕೆ ನಾವು ಸ್ವತಂತ್ರರಾಗಿದ್ದೆವು. ಅಂತೆಯೆ ಪಾಕಿಸ್ತಾನವು ಕೂಡ, ಅಷ್ಟೆ ಅನುಕೂಲ ಪರಿಸ್ಥಿತಿಯಲ್ಲಿದ್ದುದು, ಅಪಮೌಲ್ಯನಕ್ಕೆ ಸಮ್ಮತಿಸದಿದ್ದರೂ, ನಾವು ನಮ್ಮ ಆರ್ಥಿಕ ಭವಿತವ್ಯದ ದೃಷ್ಟಿಯಿಂದ ನೂರಕ್ಕೆ ೩೦.೫ ರಷ್ಟು ನಮ್ಮ ನಾಣ್ಯದ ಅಪಮೌಲ್ಯನವನ್ನು ಮಾಡಿಕೊಂಡೆವು.

ಈ ಬಗೆಯ ಕೆಲಸವನ್ನು ಕೈಕೊಳ್ಳಲಿಕ್ಕೆ ಕಾರಣಗಳೇನಿದ್ದವು? ಅಂದಿನ ಈ ಕಾರ್ಯಕ್ರಮವನ್ನು ನಿರ್ಧರಿಸುವಂತಹ ಪರಿಸ್ಥಿತಿ ಎಂತಹದಿತ್ತು ಎಂಬುದನ್ನು ತಿಳಿದುಕೊಳ್ಳುವದು ಈ ಸಮಯದಲ್ಲಿ ಉಪಯುಕ್ತವೆನಿಸಬಹುದು. ಅಪಮೌಲ್ಯನವನ್ನು ಮಾಡಿಕೊಳ್ಳುವ ಕಾಲಕ್ಕೆ ಸ್ಥಿತಿಗತಿಯೆಂತಹದಿತ್ತು, ಅಪಮೌಲ್ಯನದಂತಹ ಒಂದು ಆರ್ಥಿಕ ಉಪಾಯವನ್ನು ಕೈಕೊಳ್ಳಲಿಕ್ಕೆ ಕಾರಣಗಳೇನಾದವು ಎಂಬುದನ್ನು ನಾವು ಮೊದಲು ತಿಳಿದುಕೊಂಡರೆ ಮುಂದೆ ಆ ಉಪಾಯದ ಪರಿಣಾಮವೇನಾಯಿತು ಮತ್ತು ಅದು ಎಷ್ಟರ ಮಟ್ಟಿಗೆ ಯಶಸ್ವಿಯಾಗಿ ಪರಿಣಮಿಸಿತು ಎಂಬುದನ್ನು ಗೊತ್ತುಮಾಡಲಿಕ್ಕೆ ಅನುಕೂಲವಾಗುವದು.

ಎರಡನೆಯ ಮಹಾಯುದ್ಧವು ಕೊನೆಗೊಂಡು ಅದೇ ಭಾರತವು ಪ್ರಪಂಚದ ಮಿಕ್ಕ ರಾಷ್ಟ್ರಗಳಂತೆ ಯುದ್ಧೋತ್ತರ ಪುನರ್ರಚನೆಯ ಕಾರ್ಯದಲ್ಲಿ ತೊಡಗಿತು. ೧೯೪೬ ರಿಂದ ೧೯೪೭ರ ವರೆಗೆ ಈ ಕಾರ್ಯಕ್ರಮವು ಇತ್ತ ಮೆಲ್ಲನೆಯೇ ನಡೆದಂತೆಯೆ, ಅತ್ತ ಭಾರತೀಯ ಸ್ವಾತಂತ್ರ್ಯದ ಆಂದೋಲನವು ವಿಚಿತ್ರವಾದ ರೂಪವನ್ನು ಬೆಳೆದಿತ್ತು. ರಾಷ್ಟ್ರೀಯ ಚಳವಳಿಯ ಫಲವಾಗಿ ಒಂದು ರೀತಿಯಿಂದ ಭಾರತದಲ್ಲಿಯ ಬ್ರಿಟಿಷ್ ಅಧಿಕಾರವು, ಭಾರತದ ಪ್ರಗತಿಗಾಗಿ, ಭಾರತೀಯ ಉತ್ಕರ್ಷಕ್ಕಾಗಿ, ಭಾರತದ ಅಭಿವೃದ್ಧಿಗಾಗಿ ಹೆಚ್ಚಿನ ಹೊಣೆಯನ್ನು ಹೊರುವ, ಇಲ್ಲವೆ ವೆಚ್ಚದ ಭಾರವನ್ನು ವಹಿಸುವ ಗೊಡವೆಗೆ ಹೋಗಿರಲಿಲ್ಲ. ಇತ್ತ ಯುದ್ಧಕಾಲದಲ್ಲಿ ಭಾರತದ ಪರವಾಗಿ ಮಾಡಿದ ಅನೇಕ ಬಗೆಯ ವೆಚ್ಚವನ್ನು ಪೂರೈಸಿ ಕೊಡುವ ಜವಾಬುದಾರಿಕೆಯೂ ಅವರದಾಗಿತ್ತು. ಆದರೆ ಆರ್ಥಿಕ ಹೊಣೆಯನ್ನು ನಿರ್ವಹಿಸುವದಕ್ಕಿಂತ, ರಾಜಕೀಯ ಸಮಸ್ಯೆಯನ್ನು ಬಿಡಿಸುವ ಕಾರ್ಯದಲ್ಲಿಯೆ, ಯುದ್ಧೋತ್ತರ ಬ್ರಿಟಿಷ್ ಆಧಿಪತ್ಯವಾದ "ಶ್ರಮಪಕ್ಷ"ವು, ಹೆಚ್ಚು ಮನಸ್ಸನ್ನು ಹಾಕಿತು. ಆದರೆ ಅರ್ಥಪ್ರಪಂಚವು, ಈ ಬಗೆಯ ವ್ಯವಸ್ಥೆಗಾಗಿ ತನ್ನ ಎಲ್ಲ ಚಟುವಟಿಕೆಗಳನ್ನು ನಿಲ್ಲಿಸಿಬಿಡಬಹುದೆ?

ಮೊದಲೆ ಯುದ್ಧಕಾಲೀನ ಕೊರತೆಗಳ ಪರಿಣಾಮವಾಗಿ "ಹಸಿದ" ಜನಸಮುದಾಯವು, ಆರ್ಥಿಕ ಕ್ಷೇತ್ರದಲ್ಲಿ ಸಮಯಕ್ಕನುಕೂಲವಾದ ಕಾರ್ಯವನ್ನು ಕೈಕೊಳ್ಳತೊಡಗಿತು. ಸಾಮಾನ್ಯ ವಸ್ತುಗಳ ಅಭಾವವನ್ನು ಅನುಭವಿಸಿದವರು, ಆ

ಕ್ರೂರತೆಯನ್ನು ಪೂರೈಸಿಕೊಂಡರು.; ರಾಷ್ಟ್ರದ ಲಾಭ-ಹಾನಿಗಳ ಪರಿವೆಯನ್ನು ಮಾಡಲಿಲ್ಲ. ಲಾಭ ಹೆಚ್ಚು ದೊರೆಯುವ ವ್ಯಾಪಾರವನ್ನು, ವ್ಯಾಪಾರಸ್ಥರು ಕೈಕೊಂಡರು; ಜಗತ್ತಿನ ವಾತಾವರಣದಲ್ಲಿ ಹಿಂದುಸ್ತಾನದ ಪರಿಸ್ಥಿತಿ ಮೇಲಿರುವದು ಎಂಬುದನ್ನು ಎಣಿಸದೆ ಈ ರೀತಿಯಾಗಿ "ಯಾರೂ ಇಲ್ಲದ ಊರಿಗೆ ದೆವ್ವವೆ ರಾಜ" ಎಂಬಂತೆ ಧೋರಣೆಯ ಪರಿವೆಯಿಲ್ಲದೆ ಸಾಗಿದ ಯುದ್ಧೋತ್ತರ ಭಾರತದಲ್ಲಿ ಎರಡು ವರ್ಷಗಳ ಅವಧಿಯು ಆರ್ಥಿಕ ಸ್ಥಿತಿಯನ್ನು ಹದಗೆಡಿಸಿತು.

ಯುದ್ಧ ಸಮಯದಿಂದ ಏರಿ ನಿಂತ ಬೆಲೆಗಳು ಮತ್ತೂ ಏರಿಕೆಯನ್ನು ಆಶ್ರಯಿಸಿದವು; ಯುದ್ಧಮೂಲಕ ನಡೆದ ಅನೇಕ ಹಿರಿಕಿರಿ ವೆಚ್ಚದ ಕಾರ್ಯಗಳು, ಕಾರ್ಯಾಲಯಗಳು, ಕಾರಣವಿಲ್ಲದೆ, ಹಾಗೆಯೆ ಆ ವೆಚ್ಚಗಳನ್ನು ಮುಂದುವರಿಸಿದವು. ಉದ್ಯಮ ಕ್ಷೇತ್ರದಲ್ಲಿ ರಾಷ್ಟ್ರದ ಹಿತದ ದೃಷ್ಟಿಯನ್ನು ಬದಿಗೆ ಸರಿಸಿ ಸಂಧಿಕಾಲಕ್ಕೆ ಸಹ ಒಪ್ಪದಂತಹ ಉತ್ಪಾದನವನ್ನು, ವಿನಿಮಯವನ್ನು, ವಿಚಾರಣೆಯನ್ನು ನೋಡುವ ಸಮಯವು ಬಂದೊದಗಿತು. ಸರಕಾರವು ಒಂದು ಬದಿಯಿಂದ ದಲಿತರ, ಹಿಂದುಳಿದವರ, ದಿಕ್ಕುಗೆಟ್ಟವರ ರಕ್ಷಣೆಯನ್ನು ಮಾಡುವ ಹೊಣೆ ತಮ್ಮದು ಎಂದು ಸಾರಿ, ಇನ್ನೊಂದು ಬದಿಯಿಂದ ಆ ಹೊಣೆಯನ್ನು ಕಾರ್ಯಕಾರಿಯನ್ನಾಗಿ ಮಾಡುವ ತನ್ನ ಅಸಾಮರ್ಥ್ಯವನ್ನು ವ್ಯಕ್ತಗೊಳಿಸಿತು.

ಇಂತಹ ಸಮಯದಲ್ಲಿ ಬಂದಿತು ಭಾರತದ ಸ್ವಾತಂತ್ರ್ಯ. ರಾಜಕೀಯ ಸ್ವಾತಂತ್ರ್ಯವು ಬಂದಿತೇನೊ ಸರಿ. ಆದರೆ ಆರ್ಥಿಕ ದೃಷ್ಟಿಯಿಂದ ಒಂದಕ್ಕೊಂದು ಪೂರಕವಾದ ಎರಡು ಭಾಗಗಳು ಹಿಂದುಸ್ತಾನ-ಪಾಕಿಸ್ತಾನಗಳಾಗಿ ವಿಭಜನೆ ಹೊಂದಿದವು. ಅಲ್ಪ ಸಮಯದಲ್ಲಿಯೇ, ಪಾಕಿಸ್ತಾನದಲ್ಲಿ ಹುಟ್ಟಿದ ನಾರು-ನೂಲು ಮತ್ತು ಮಿಕ್ಕ ಕಚ್ಚಾ ಮಾಲುಗಳಿಗೆ ಭಾರತದ ಗಿರಣಿಗಳೆ ಗಿರಾಕಿಗಳಾಗಿ ಇದ್ದುದು ಒಂದು ತಲೆಬೇನೆಯಾಗಿ ಕಂಡಿತು—ಎರಡೂ ರಾಷ್ಟ್ರಗಳ ಧುರೀಣರಿಗೆ. ಭಾರತದಲ್ಲಿ ಸಿದ್ಧವಾಗುವ ಅನೇಕ ಒಡವೆಗಳಿಗೆ ಪಾಕಿಸ್ತಾನವೂ ಒಂದು ಪೇಟೆಯಾಗಿರುವದು ವಿಚಿತ್ರವೆನಿಸಿತು—ಕೆಲವರಿಗೆ. ಅದರ ಪರಿಣಾಮವಾಗಿ ಒಂದು ಕಡೆ ಎರಡೂ ರಾಷ್ಟ್ರಗಳಲ್ಲಿ ಸರಕುಗಳ ಧಾರಣೆಗಳು ಏರಹತ್ತಿದವು; ಉತ್ಪನ್ನವು ಕಡಿಮೆಯಾಯಿತು. ಭಾರತದಲ್ಲಿಯ ಪರಿಸ್ಥಿತಿಯು ಹೆಚ್ಚು ಚಿಂತಾಜನಕವಾಗಿ ಕಂಡಿತು. ಇನ್ನೊಂದು ಕಡೆ ಈ ಪರಿಸ್ಥಿತಿಯ ಲಾಭವನ್ನು ಮಿಕ್ಕ ರಾಷ್ಟ್ರಗಳು ತೆಗೆದುಕೊಳ್ಳುವಂತಾಯಿತು.

ಅದು ಹೇಗೆ ಎಂಬುದನ್ನು ನಾವು ಈಗ ನೋಡಬಹುದು. ಒಂದನ್ನೊಂದು ಅವಲಂಬಿಸಿಕೊಂಡು ಇರಬೇಕಾದ ಅರ್ಥವ್ಯವಸ್ಥೆಯುಳ್ಳ ಎರಡು ಭಾಗಗಳು ಎರಡು ರಾಷ್ಟ್ರಗಳಾಗಿ ಪರಿಣಮಿಸಿ, ಅವು ಒಂದಕ್ಕೊಂದು ವಿರೋಧಕವಾದ ಧೋರಣೆಯನ್ನು ಅನುಸರಿಸಿದ ಪ್ರಸಂಗವನ್ನು ಅರಿತು, ಬೇರೆ ರಾಷ್ಟ್ರದವರು, ಪಾಕಿಸ್ತಾನದಿಂದ ಬರಬೇಕಾದ ಸಾಮಗ್ರಿಗಳು ಭಾರತಕ್ಕೆ ಬರದಂತಾಗಲು, ಅವುಗಳನ್ನೆ ಹೆಚ್ಚು ಬೆಲೆಗಳಿಗೆ ಇಲ್ಲವೆ ಸಾಲದ ಪ್ರಮಾಣದಲ್ಲಿ ಭಾರತಕ್ಕೆ ಪೂರೈಸಹತ್ತಿದರು. ಅದರಂತೆಯೆ ಭಾರತದ ಸಿದ್ಧವಸ್ತುಗಳನ್ನು ಪಾಕಿಸ್ತಾನವು ಸ್ವೀಕರಿಸದಂತಾಗಲು, ಪರಪೇಟೆಗಳಲ್ಲಿ ಅವುಗಳ ಬೆಲೆಗಳು ತಗ್ಗಿದವು; ಪೂರೈಕೆಯು ಹೆಚ್ಚಾಗಿ ಬೇಡಿಕೆಯು ಹಿಂಗಿದ ಕೂಡಲೆ, ಅವಲಕ್ಷಣಗಳು ಕಾಣತೊಡಗಿದವು. ಇದು ಒಂದೇ ಸಮನೆ ಸ್ವಾತಂತ್ರ್ಯಪ್ರಾಪ್ತಿಯ ನಂತರ ಎರಡು ವರ್ಷಗಳ ವರೆಗೆ ನಡೆಯಿತು.

ಅನಿಶ್ಚಿತ ಪರಿಸ್ಥಿತಿಯ ಮೂಲಕ ಅಂತಃ ಸ್ಥಿತಿಯು ತಾಳತಪ್ಪಿ ವೆಚ್ಚದ ಮಿತಿಮಿಾರಿತ್ತು; ಉತ್ಪಾದನವು ಕಡಿಮೆಯಾಗಿತ್ತು. ಆರ್ಥಿಕ ಅನಿಶ್ಚಿತತೆಯ ಮೂಲಕ ನಮ್ಮ ವಿದೇಶವ್ಯಾಪಾರವು ತುಂಬಾ ಹಾನಿಕಾರಕವಾಗಿತ್ತು. ಆಯಾತಗಳು ಹೆಚ್ಚಾಗಿ ಬರುತ್ತ, ಬೆಲೆಗಳ ಮತ್ತು ಗುಣದ ದೃಷ್ಟಿಯಿಂದ ಸಾಕಷ್ಟು ಅನಾನುಕೂಲವಾಗಿದ್ದುವು· ನಿರ್ಯಾತಗಳು ಕಡಿಮೆಯಾಗುತ್ತ, ಗುಣ ಮತ್ತು ಗಾತ್ರದಲ್ಲಿ ಅಪಾತ್ರವಾಗಿದ್ದುವು.

ಇವೇ ಮೊದಲಾದ ಲೋಪ-ದೋಷಗಳನ್ನು ಸರಿಪಡಿಸಲಿಕ್ಕೆಂದು ಅವಮೌಲ್ಯನದ ಅವತಾರವಾಯಿತು. ಆದರೆ ಪಾಕಿಸ್ತಾನದ ನಿರ್ಮಾಣದಿಂದಾದ ಆರ್ಥಿಕ ಅನಿಷ್ಟವನ್ನು ಸರಿ ಪಡಿಸಲಿಕ್ಕೆ ಅವಮೌಲ್ಯನ ಎಂಬ ಮೂಲ ವಿಷಯವನ್ನು ನಾವು ಮರೆತಂತೆ ತೋರುತ್ತದೆ. ಕೇವಲ ವಿದೇಶವ್ಯಾಪಾರದ ಅಂಕೆಗಳನ್ನು ಸರಿಪಡಿಸುವದು ಅವಮೌಲ್ಯನದ ಗುರಿಯಾಗಿ ಬರಲಿಲ್ಲ. ಅವಮೌಲ್ಯನವು ಕೇವಲ ಒಂದು ಪ್ರಸಂಗಿಕ, ತಾತ್ಪೂರ್ತಿಕವಾದ ಉಪಾಯ ಎಂಬುದನ್ನು ನಾವು ಈಗಾದರೂ ಮನಗಂಡರೆ, ತೋಲತಪ್ಪಿದ ನಮ್ಮ ಅರ್ಥವ್ಯವಸ್ಥೆಯನ್ನು ಸರಿಪಡಿಸಲಿಕ್ಕಾದೀತು.

ಅನಾನುಕೂಲ, ಹಾನಿಕಾರಕ ಮತ್ತು ಅನಿಷ್ಟ ಎನಿಸುವ ವಿದೇಶ ವ್ಯಾಪಾರದ ಸ್ಥಿತಿಯು ಅವಮೌಲ್ಯನದ ಪ್ರಯೋಗದಿಂದ ಕೆಲಕಾಲ ಮಾತ್ರ ಸುಧಾರಿಸಿತು ಎಂಬ ವಿಷಯವನ್ನು ನಾವು ಕಳೆದ ಎರಡು ವರ್ಷಗಳ ನಮ್ಮ ಆಯಾತನಿರ್ಯಾತಗಳ ಸಂಖ್ಯೆಗಳನ್ನು ಅಭ್ಯಸಿಸಿದರೆ ತಿಳಿದುಬರುವದು. ಆದರೆ ನಮ್ಮ ಆರ್ಥಿಕ ಬೇನೆಯು ಇಷ್ಟು ಚಿಕ್ಕದಾಗಿಲ್ಲ. ಅದರ ಹಾವಳಿಯು ಹೇಗೆ ಮತ್ತು ಯಾವ ಪ್ರಮಾಣದಲ್ಲಿ ಆಗಬಹುದು ಎಂಬುದನ್ನು ನಾವು ಸಾಕಷ್ಟು ಸರಿಯಾಗಿ ಊಹಿಸಿಲ್ಲ.

ಈಗ ಯುದ್ಧಕಾಲದ ನಂತರ ನಮಗೆ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಸಮಗೊಳಿಸಲು, ಸ್ಥಿರಗೊಳಿಸಲು ಎರಡು ಸುವರ್ಣಸಂಧಿಗಳು ಬಂದುವು. ಮೊದಲನೆಯದು ಯುದ್ಧೋತ್ತರ ಸಂಧಿಕಾಲ; ಎರಡನೆಯದು ಅವಮೌಲ್ಯನ. ಮೊದಲನೆಯದನ್ನು ನಾವು ಸ್ವಾತಂತ್ರ್ಯದ ಸ್ವಾಗತದಲ್ಲಿ ಕಳೆದು

ಕೊಂಡಿವೆ; ಇನ್ನು ಈ ಎರಡನೆಯದನ್ನು ಕಳೆದುಕೊಳ್ಳುವೆ, ಸರಿಯಾಗಿ ಅಣಿಮಾಡಿಕೊಳ್ಳುವದು ನಮ್ಮನ್ನೇ ಕೂಡಿದೆ. ಇಲ್ಲದ ಸಲ್ಲದ ಆರೋಪಗಳನ್ನು ಹೆರವರ ಮೇಲೆ ಹೇರಿ ಆಗಲಿ, ಅಂತರಾಷ್ಟ್ರೀಯ ಅವ್ಯವಸ್ಥೆಯೆ ಈ ಲೋಪಕ್ಕೆ ಕಾರಣ ಎಂಬ ಪೊಳ್ಳು ಸಮಾಧಾನವನ್ನು ಹಚ್ಚಿಕೊಂಡಾಗಲಿ, ಈಗ ನಾವು ಸುಮ್ಮನೆ ಕೂಡ್ರುವಂತಿಲ್ಲ.


ಸ್ವಾತಂತ್ರ್ಯಪ್ರಾಪ್ತಿಯ ನಂತರ ನಮಗೆ ಅಮಿತವಾದ ಶಕ್ತಿಯುಂಟಾಗದಿದ್ದರೂ, ದುರ್ದಮನೀಯವಾದ ಆತ್ಮವಿಶ್ವಾಸವುಂಟಾಗಿದೆ. ಅದರ ಪರಿಣಾಮವಾಗಿ ನಾವು ಅವಮೌಲ್ಯನದಿಂದ ಕಲಿತ ಪಾಠವನ್ನು ಕಾರ್ಯರೂಪಕ್ಕಿಳಿಸುವದು ಅಗತ್ಯವಾಗಿದೆ. ಈಗ ಹನ್ನೆರಡು ತಿಂಗಳ ಅನುಭವದಿಂದ ಅವಮೌಲ್ಯನವು ಒಂದು ಅಂತಿಮ ಉಪಾಯವಾಗದೆ, ಒಂದು ಸಾರ್ವತ್ರಿಕ ಪರಿಹಾರವೆನಿಸದೆ, ಅದೊಂದು ಸಂಧಿಕಾಲದ ಸೂಚನೆಯೆಂಬುದು ಮನಗಂಡಂತಾಗಿದೆ. ಅವಮೌಲ್ಯನ ಕಾಲವಲ್ಲಿ ನಾವು ತ್ರೈಮಾಸಿಕ ಇಲ್ಲವೆ ತಿಂಗಳು—ತಿಂಗಳ ಆಯಾತ ಮತ್ತು ನಿರ್ಯಾತಗಳ ಅಂಕಗಳನ್ನು ಮತ್ತು ಅವುಗಳಿಗಾಗಿ ಸಲ್ಲಿಸಿದ ಇಲ್ಲವೆ ಪಡೆದ ಬೆಲೆಗಳ ಸಂಖ್ಯೆಗಳನ್ನು ವಿಮರ್ಶಿಸಿ ನೋಡಿದರೆ, ನಮ್ಮ ವಿದೇಶ ವ್ಯಾಪಾರವು ಮತ್ತೆ ಅವಮೌಲ್ಯನಪೂರ್ವ ಪರಿಸ್ಥಿತಿಯನ್ನೆ ಹೋಲುತ್ತದೆ ಎಂಬದು ತಿಳಿದುಬರುವದು.

ಅಂತೆಯೆ ಭಾರತ ಆಧಿಪತ್ಯವು ಕೂಡ ಈ ವಿಷಯದಲ್ಲಿ ವಿಕಲ್ಪದ ವಿಚಾರಗಳನ್ನಿಟ್ಟುಕೊಳ್ಳದೆ, ಅಷ್ಟಾಂಗಯೋಜನೆಯನ್ನೂ, ಅವಮೌಲ್ಯನದ ನಿರ್ಣಯದ ಜೊತೆಯಲ್ಲಿಯೆ ಜಾಹೀರುಗೊಳಿಸಿದ್ದು ಸರ್ವವಿದಿತವಾಗಿದೆ. ಅವಮೌಲ್ಯನವು ನಮ್ಮ ಈಗಿನ ಆರ್ಥಿಕ ದುರ್ದೆಸೆಗೆ ರಾಮಬಾಣವೆನಿಸದೆ, ಮಿಕ್ಕ ಉಪಾಯಗಳನ್ನು ಮತ್ತು ಎಚ್ಚರಿಕೆಗಳನ್ನು ವಹಿಸಿದರೆ, ಅದೊಂದು ಸಾಧನವಾಗಬಹುದು ಎಂದು ಆಗಿನ ಕಾಲದಲ್ಲಿ ಆಧಿಪತ್ಯವು ಸಾರಿತು. ಆ ಅಷ್ಟಾಂಗಯೋಜನೆಯು ಇಂತಹ ಸಿದ್ಧಿಗಾಗಿ ಒಂದು ದಾರಿಯೆಂದು ದೊರೆಯಿತು.

ಹೀಗೆ ಇಂದು ನಾವು ಒಂದು ವರ್ಷದ ಅವಮೌಲ್ಯನವನ್ನು ಅಭ್ಯಸಿಸುವಾಗ ಹೊರಟ ಕೆಲವು ನಿರ್ಣಯಗಳನ್ನು ಈಗ ಮತ್ತೆ ಗಮನಕ್ಕೆ ತಂದುಕೊಳ್ಳುವದು ಉಚಿತವಾಗಿದೆ. ಮೊದಲನೆಯದಾಗಿ ನಾವು ಪರದೇಶಗಳಿಂದ, ತೀರ ಅಗತ್ಯವಾಗಿದ್ದ ಮತ್ತು ಅನಿವಾರ್ಯವಾದ ವಸ್ತುಗಳ ಆಯಾತವನ್ನು ಮಾತ್ರ ಮಾಡಬೇಕು. ಇಂತಹ ಸರಕುಗಳನ್ನು ತರಿಸುವಾಗ್ಗೆ ನಾವು ಅವುಗಳ ಉತ್ತಮ ಗುಣವನ್ನು ಪರೀಕ್ಷಿಸಿ ಪಡೆಯಬೇಕು ಮತ್ತು ಹೆಚ್ಚು ಅಗ್ಗವಾದ ದರಗಳುಳ್ಳ ದೇಶದಿಂದ ಅವುಗಳನ್ನು ತರಿಸಿಕೊಳ್ಳಬೇಕು. ಈ ಕಾರ್ಯವು ತುಂಬ ಮಹತ್ವದಿದ್ದ ಕಾರಣ ನಾವು ನಮ್ಮ ಆಯಾತ ನಿಯಂತ್ರಣದ ನಿರ್ಬಂಧಗಳನ್ನು ಮತ್ತು ನಿಯಮಗಳನ್ನು ಪುನಃ ಪರಿಶೀಲಿಸಿ, ಅವುಗಳನ್ನು ಅನುಕೂಲವಾಗಿ ದೃಢಪಡಿಸಬೇಕು. ಬೇಡಾದ ವಸ್ತುಗಳನ್ನಾಗಲಿ, ತುಟ್ಟಿಯ ಸಾಮಗ್ರಿಗಳನ್ನಾಗಲಿ ತರಿಸುವದರಿಂದ ಅನೇಕ ಬಗೆಯ ನಷ್ಟವುಂಟಾಗುತ್ತದೆ. ನಮ್ಮ ದೇಶದಲ್ಲಿ ಹುಟ್ಟಬಹುದಾದ ಸರಕುಗಳನ್ನು ಅನಿರ್ಬಂಧವಾಗಿ ಪಡೆಯುವದರಿಂದ, ವ್ಯರ್ಥವಾದ ಹಾನಿಯಾಗುತ್ತದೆ. ಹಾಗೆಯೇ ನಿರ್ಯಾತಗಳ ವಿಷಯವಾಗಿಯೂ ನಾವು ವಹಿಸಬೇಕಾದ ಜಾಗ್ರತೆಯು ಬೇಕಾದಷ್ಟಿದೆ. ನಿರ್ಯಾತಗಳಲ್ಲಿ ನಾವು ಮೊದಲನೆಯದಾಗಿ ನಮ್ಮ ಒಳಪೇಟೆಯ ವಿಷಯವಾಗಿ ಹೆಚ್ಚು ಎಚ್ಚರಿಕೆಯುಳ್ಳವರಾಗಬೇಕು. ಅತ್ತ ಪರಪೇಟೆಗಳಲ್ಲಿ ನಮಗೆ ಅನುಕೂಲವಾದ ಸ್ಥಾನವು ಯಾವ ಸರಕಿಗೆ ದೊರೆಯುತ್ತದೆ ಎಂಬುದನ್ನು ಕಂಡುಹಿಡಿದು, ಅದರ ಉತ್ಪಾದನವನ್ನೂ, ನಿರ್ಯಾತವನ್ನೂ ಬೆಳೆಯಿಸಬೇಕು. ಈ ರೀತಿಯಾಗಿ ಸರಕುಗಳನ್ನು ಕಳಿಸುವಾಗ್ಗೆ, ಸರಕುಗಳ ಗುಣ ಮತ್ತು ಗಾತ್ರ ಇವುಗಳನ್ನು ಉಚ್ಚಸ್ಥಾನದಲ್ಲಿರಿಸುವದು ಅಗತ್ಯವಾಗಿರುವದಲ್ಲದೆ, ಅನುಕೂಲ ಬೆಲೆಗಳನ್ನು ನಿರ್ಣಯಿಸುವದೂ, ಆ ಮೇರೆಗೆ ಪೇಟೆಗಳನ್ನು ಗೊತ್ತುಪಡಿಸುವದೂ ಅನಿವಾರ್ಯವೆನಿಸುತ್ತದೆ.

ಇವು ವಿದೇಶ ವ್ಯಾಪಾರದ ಪುನರ್ರಚನೆಗಾಗಿ ಸ್ಥೂಲವಾಗಿ ಕೈಕೊಳ್ಳಬೇಕಾದ ಉಪಾಯಗಳೆನಿಸಿದರೂ, ಒಳನಾಡಿನಲ್ಲಿ ಮಾಡಬೇಕಾದ ಕೆಲಸವು ಸಾಕಷ್ಟಿರುತ್ತದೆ. ಒಂದು ಬದಿಯಿಂದ ಕೇವಲ ನಿರುಪಾಯವಾಗಿ ತರಿಸಬೇಕಾದ ಆಯಾತಗಳನ್ನು ಆದಷ್ಟು ಕಡಿಮೆ ಪ್ರಮಾಣದಲ್ಲಿ ತರಿಸುವಂತೆ ಮತ್ತು ಅವುಗಳ ವಿನಿಯೋಗವನ್ನು ಅತ್ಯಂತ ಮಿತವ್ಯಯದಿಂದ ಮಾಡುವಂತೆ ನಾವು ಜಾಗರೂಕರಾಗಿರಬೇಕು. ಇನ್ನೊಂದು ಬದಿಯಿಂದ, ಸ್ವಂತದ ನಷ್ಟವನ್ನು ಕಡಿಮೆಮಾಡಿಕೊಳ್ಳದೆ, ವ್ಯವಹಾರ್ಯವಾಗಿ ಪರದೇಶಗಳಿಗೆ ಹೆಚ್ಚು ಸಾಮಗ್ರಿಗಳನ್ನು ಕಳಿಸಲಿಕ್ಕೆ ಬರುವಂತೆ ನಮ್ಮ ಉತ್ಪಾದನವನ್ನು ಬೆಳೆಯಿಸಿಕೊಳ್ಳುವದು ಇವು ಇಂದಿನ ನಮ್ಮ ಕರ್ತವ್ಯಗಳಾಗಿವೆ. ಆಧಿಪತ್ಯದಲ್ಲಿಯೂ ಸಮಾಜದಲ್ಲಿಯೂ ಅನವಶ್ಯಕವಾದ ವೆಚ್ಚಗಳನ್ನು ಕಡಿಮೆಮಾಡುವದೊಂದು ಇದೇ ಕಾರ್ಯಕ್ರಮದ ಅಂಶವಾಗಿದೆ.

ಅವಮೌಲ್ಯನದ ಪರಿಣಾಮವಾಗಿ ಕಲಿತ ಪಾಠದಿಂದ ಈ ರೀತಿಯಾಗಿ ನಾವು ನಮ್ಮ ವಿದೇಶ ವ್ಯಾಪಾರವನ್ನು ಸುಗಮಗೊಳಿಸಿಕೊಂಡರೆ, ನಮ್ಮ ಆರ್ಥಿಕ ಜೀವನವು ವ್ಯವಸ್ಥಿತಗೊಳ್ಳುವದು; ಅದರ ಫಲವಾಗಿ ಅನೇಕ ವರ್ಷಗಳ ಕಷ್ಟದಿಂದ ಗಳಿಸಿದ ಸ್ವಾತಂತ್ರ್ಯವೂ ಸಾರ್ಥಕವಾಗುವದು.



ಅವಳ್ಯಾರ ಹೆಂಡತಿ

ಲೇಖಕ:—ಬೊಳಂತೂರು ಕೃಷ್ಣ ಪ್ರಭು, ಬಂಟವಾಳ.

ಶ್ಯಾಮರಾಯ:—ವಿಶ್ವನಾಥ! ನಾನು ನಿಮಗೆ ಬರೆದ ಪತ್ರವು........

ವಿಶ್ವನಾಥ:—ನಿಮ್ಮ ಪತ್ರವು ನನಗೆ ಸಕಾಲದಲ್ಲೇ ಸಿಕ್ಕಿದೆ. ಕಾಲಸ್ಥಿತಿ ಕೆಟ್ಟದೆ. ಈ ಊರಲ್ಲಿ ಅಲ್ಲಲ್ಲಿ ಅಲೆದಾಡಿ ಏನೂ ಪ್ರಯೋಜನವಾಗಲಿಲ್ಲೆಂದು ಬರೆದಿರುವಿರಿ. ಮನಸ್ಸಿದ್ದರೆ ನೀವು ಕಲ್ಕತ್ತೆಗೆ ಬಂದು ನನ್ನ ದವಾಖಾನೆಯಲ್ಲಿ ಕೂತುಕೊಂಡು ನೋಡಬಹುದು. ನಮ್ಮ ದವಾಖಾನೆ ಇದ್ದ ಕಡೆಯಲ್ಲಿ ಶ್ರೀಮಂತರೇ ಹೆಚ್ಚಾದ ನಿವಾಸಿಕರು. ಡಾಕ್ಟರರೂ ಕಡಿಮೆ. ಅಲ್ಲದೇ "ಅಭಿವೃದ್ಧಿ ಸಮಿತಿಯು (Improvement scheme) ಸ್ಥಾಪಿತವಾದಂದಿನಿಂದ ಹೊಸಪರಿವಾರವು (Locality) ಬಂದು ವಾಸಿಸಿದೆ. ಇಲ್ಲಿ ನಿರುದ್ಯೋಗಿಯಾಗಿ........"

ಶ್ಯಾಮರಾಯ:—ಆಗಲಿ! ಕಲ್ಕತ್ತೆಗೆ ಬಂದು ನೋಡುವೆನು. ನೀವು ಯಾವಾಗ ಹೊರಡುವಿರಿ?

ವಿಶ್ವನಾಥ:—ನಾನಿಂದು ರಾತ್ರೆ ಎಂಟು ಗಂಟೆಯ ಮೈಲಿಗೆ ಹೊರಡುವೆನು. ಇದೇ ನನ್ನ ವಿಳಾಸ:—ಆ ಸಣ್ಣ ಕಾರ್ಡಿನಲ್ಲಿ "ಸಬರ್ಬನ್ ಡಿಸ್ಪೆನ್ಸರಿ, ನಂ ೪, ಪಾರ್ಕರ್ಸ್ ರೋಡ್" ಕಲ್ಕತ್ತಾ ಎಂದು ಇದ್ದಿತು.

ಶ್ಯಾಮರಾಯ:—ನಾನಿಂದೇ ಬರಬೇಕೆ?

ವಿಶ್ವನಾಥ:—ಇಂದು ನನ್ನೊಂದಿಗೆ ಬಂದರೆ ಮತ್ತೂ ಅನುಕೂಲ.

* * * *

ಶ್ಯಾಮರಾಯನು ಮತ್ತು ವಿಶ್ವನಾಥನು ಸಬಾರ್ಬನ್ ದವಾಖಾನೆಯಲ್ಲಿ ಕೂತುಕೊಂಡು ಪ್ರಕಟಣಾ ಪತ್ರಿಕೆಯ ಹಸ್ತಪ್ರತಿಯನ್ನು ಬರೆಯುತ್ತಿದ್ದರು. ಶಿರೋಲೇಖನವು ಬರೆದಾಯಿತು. ವಿಶ್ವನಾಥನು ಓದಿಹೇಳಿದನು. "Dr. S.S. Roy, L.M.S.A. (specialist in diseases of the brain, female diseases and in treatment of infants") ವಿಶ್ವನಾಥನು ಹಿಗ್ಗಿ ಮೋರೆಯಲ್ಲಿ ಮುಗುಳುನಗೆಯನ್ನು ಸೂಚಿ ಸಾಕು! ಇಷ್ಟೇ ಸಾಕು!! ಶ್ರೀಮಂತರ ತಲೆಯನ್ನು ಜಾಡ್ಯವು ಬಹುಬೇಗನೇ ಆಕ್ರಮಿಸಿಕೊಳ್ಳುವುದು. ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ಯಾವಾಗಲೂ ವಿವಿಧ ಬೇನೆಗಳು ಇದ್ದೇ ಇರುವವು. ಎರಡೇ ಪಂಕ್ತಿಗಳಲ್ಲಿ ಎಲ್ಲಾ ವಿಷಯಗಳನ್ನು ನಿರೂಪಿಸಿದಂತಾಯಿತು.

ಶ್ಯಾಮರಾಯ:—ಅದು ಚಲೋದಾಯಿತು. ಇನ್ನು ರೋಗಿಗಳನ್ನು ಕಂಡು........

ವಿಶ್ವನಾಥ:—ಈಗ ತತ್ಕಾಲಕ್ಕೆ ಇಬ್ಬರು ಹಾಜರಿರುವರು. ಒಬ್ಬನು ಮಿ. ಬೆನರ್ಜಿಯವರ ಪರಿಚಾರಕನು. ಮತ್ತೊಬ್ಬನು ದಸ್ತೂರ್ ಪತ್ನಿಯವರ ಮಾತಾಮಹ. ಮೊದಲು ದೊಡ್ಡ ದೊಡ್ಡ ಮನೆಗಳ ದಾಸದಾಸಿಯರನ್ನೇ (ಚಿಕಿತ್ಸಾಪೂರ್ವಕ) ಸಂತುಷ್ಟಗೊಳಿಸಿ ಆ ಮೇಲೆ ಮೆಲ್ಲಗೆ ಮುಂದರಿಸಬೇಕು!

ಶ್ಯಾಮರಾಯ:—ಇರಲಿ! ನಾನಿನ್ನು ಈಗ ಹಾಜರಿರುವ ಇಬ್ಬರ ಚಿಕಿತ್ಸೆಯನ್ನು ಪ್ರಾರಂಭಿಸುವೆನು. ನೀವು ನಿಮ್ಮ ಇಲಾಖೆಯನ್ನು ನೋಡಿಕೊಳ್ಳಿರಿ! ಪ್ರಥಮತಃ ಶೂನ್ಯವೆಂದಾಗದೆ ಇಬ್ಬರಾದರೂ ಸಿಕ್ಕಿದುದು ಒಂದು ಶುಭ ಶಕುನ.

ವಿಶ್ವನಾಥ:—ವ್ಯಾಧಿಯು ಕಂಡುಬಾರದಿದ್ದರೂ ಔಷಧವನ್ನು ಬರೆದು ಕೊಡಲೇಬೇಕು. ಇದರಿಂದ ರೋಗಿಗಳ ಮನಸ್ಸು ಪ್ರಸನ್ನತೆಯನ್ನು ಹೊಂದುವುದು. ನಮ್ಮ ದವಾಖಾನೆಯೂ ಅಭಿವೃದ್ಧಿಗೆ ಬರುವುದು.

ಶ್ಯಾಮರಾಯ:—ಆ ಶಿಕ್ಷಣವು ನನಗೆ ಮೊದಲೇ ದೊರೆತಿದೆ. ಕಳೆದ ಒಂದು ವರ್ಷದಲ್ಲಿ ನನಗೆ ಸಿಕ್ಕಿದ ಅನುಭವವು........

* * * *

ಮೂರು ತಿಂಗಳುಗಳು ಕಳೆದುಹೋದುವು. ಶ್ರೀಮಂತರ ಮನೆಗಳಲ್ಲಿ ದಾಸದಾಸಿಯರನ್ನು ಸಂತುಷ್ಟಗೊಳಿಸಿ ಮೆಲ್ಲಮೆಲ್ಲಗೆ ಮಕ್ಕಳ ಶೀತ, ಅಜೀರ್ಣ, ಖಜ್ಜಿ, ಮೊದಲಾದವುಗಳನ್ನು ಪರೀಕ್ಷಿಸಿ ಚಿಕಿತ್ಸೆಮಾಡುವ ಅಧಿಕಾರವು "ಡಾಕ್ಟರ್ ರೋಯ್" (ಶ್ಯಾಮರಾಯರ ಚಿಕ್ಕ ಹೆಸರು) ರಿಗೆ ದೊರಕಿತು. ಅಲ್ಲಿಂದ ವಧುಗಳ ಜ್ವರ, ಗ್ರಹಿಣಿಯರ ಅಗ್ನಿಮಾಂದ್ಯ, ಯಜಮಾನರ ಶಿರೋಭ್ರಮಣ......ಔಷಧವು ಫಲಿಸತೊಡಗಿ "ಡಾಕ್ಟರ್ ರೋಯ್"ಯವರ ಕೈಯು ಕಲ್ಕತ್ತೆಯ ಹಲವು ಗಲ್ಲಿಗಳಲ್ಲಿ ಯಶೋಲಾಭವನ್ನು ಹೊಂದಿತು.

ಇದನ್ನರಿತ ವಿಶ್ವನಾಥನು ಹೊಸಯೋಜನೆಯೊಂದನ್ನು ಡಾಕ್ಟರ್ ರೋಯ್‌ಗೆ ಅರುಹಿದನು. "ಶ್ಯಾಮರಾಯ! ದವಾಖಾನೆಯ ಸಮೀಪದಲ್ಲೇ ಡಾಕ್ಟರರ ವಾಸ್ತವ್ಯವೂ ಇರುವುದು; ಅಷ್ಟೊಂದು ಪ್ರಶಸ್ಥವಲ್ಲ. ಅದರಿಂದ ರೋಗಿಯ ಶ್ರದ್ಧೆಯು ತಗ್ಗಲು ಆಸ್ಪದವಿದೆ. ಅವಶ್ಯವಿದ್ದಾಗ ರೋಗಿಯು ಟೆಲಿಫೋನ್ ಮೂಲಕ ಡಾಕ್ಟರನನ್ನು ಕರೆಯಬೇಕು. ಆಗ ಸಂದರ್ಶನ ಶುಲ್ಕದೊಂದಿಗೆ ಜರೂರಾತಿಯ ಫೀಸನ್ನೂ ಆದಾಯವಮಾಡಿಕೊಳ್ಳಬಹುದು"

ಡಾಕ್ಟರ್ ರೋಯ್‌ಗೆ ಈ ಪರಾಮರ್ಶವು ಸಮಂಜಸವಾಗಿ ಕಂಡಿತು—"ಹಾಗೆಯೇ ಆಗಲಿ. ನಿಮ್ಮ ಅಭಿಪ್ರಾಯದಂತೆ ಶಹರಿನ ಹೊರಗೆ ಜನನಿವಾಸವು ಕಡಿಮೆ ಇರುವ ಸ್ಥಳದಲ್ಲಿ ಒಂದು ಸಣ್ಣ ಮನೆಯನ್ನು ಬಾಡಿಗೆಗೆ ವಹಿಸಿಕೊಳ್ಳುವೆನು. ಅಂತಹ ಸ್ಥಳದಲ್ಲಿ ಶುದ್ಧವಾದ ಹವೆಯು........

ವಿಶ್ವನಾಥ:—"ಅಂತಹ ಸ್ಥಳವೇ ಡಾಕ್ಟರರ ನಿವಾಸಕ್ಕೆ ಯೋಗ್ಯವಾಗಿರುತ್ತದೆ.

ಆರು ಮಾಸಗಳು ಕಳೆದುಹೋದುವು. ಬೆಳಿಗ್ಯೆ ಎಂಟು ಗಂಟೆಯ ಸಮಯ, ಡಾಕ್ಟರ್ ರೋಯ್‌ಯು ದವಾಖಾನೆಗೆ ಹೋಗುವುದಕ್ಕೆ ಹೊರಟನು. ಪರಿಚಾರಕನು ಭೇಟಿಯ ಚೀಟಿಯೊಂದನ್ನು ತಂದುಕೊಟ್ಟನು. ಅದರಲ್ಲಿ ನಾಗರೀ ಅಕ್ಷರಗಳಲ್ಲಿ "ಶ್ರೀಮತೀ ವಿದ್ಯುಲ್ಲತಾ, ಜಮೀನ್ದಾರ್" ಎಂದು ಮುದ್ರಿಸಿದ್ದಿತು. ಓರ್ವ ಸುಂದರಿ ಮಹಿಳೆಯು ಬಂದು ಡಾ| ರಾಯರಿಗೆ ಅಭಿನಂದಿಸಿ ಅಲ್ಲೇ ಇದ್ದ ಕುರ್ಚಿಯಲ್ಲಿ ಕುಳಿತುಕೊಂಡಳು—

ಡಾ| ರೋಯ್‌ಯು—ಬಂದ ಸುಂದರಿಯನ್ನು ನಿರೀಕ್ಷಿಸಿ ನವೋತ್ಸಾಹದಿಂದ ಮುಗುಳುನಗೆಯನ್ನು ಮುಖದಲ್ಲಿ ಸೂಸಿ ಅವಳನ್ನು ಸ್ವಾಗತಿಸಿದನು.

ಮಹಿಳೆ:—"ಡಾಕ್ಟರ್ ರೋಯ್ ಎಂದರೆ ತಾವೇ ಅಲ್ಲವೇ? ನಾನೊಂದು ಆಪತ್ತಿನ ಪರಿಹಾರಕ್ಕಾಗಿ ಬಂದಿರುವೆನು" ಎಂದಳು.

ಡಾ| ರೋಯ್:—ಚಲುವಿಗೆ ತಕ್ಕಂತೆ ಮಾತುಗಳೂ ಮಧುರವಾಗಿವೆ—ಇರಲಿ. "ಯಾರಿಗೆ ಆಪತ್ತು" ಎಂದು ಕೇಳಿದನು.

ವಿದ್ಯುಲ್ಲತೆ:—"ಆಪತ್ತು ನನ್ನ ಯಜಮಾನನವರಿಗೆ. ನಾವು ಇರುವುದು ಇಲ್ಲೇ ಹತ್ತಿರದ ಹಳ್ಳಿಯಲ್ಲಿ. ಈ ಗ್ರಾಮದಲ್ಲಿ ಜಮಿನಾನ್‌ದಾರರ ಮನೆಯೆಂದರೆ ನಮ್ಮದೇ. ನನ್ನ ಯಜಮಾನರು ಸ್ವಲ್ಪ ಸ್ಥೂಲದೇಹಿಗಳು. ಸುಮಾರು ಏಳೆಂಟು ತಿಂಗಳುಗಳಿಂದ ಅವರಿಗೆ ಮಸ್ತಕವೇ ಸರಿಯಿಲ್ಲ. ಇದುವರೆಗೆ ಮನೆಯಲ್ಲೇ ಚಿಕಿತ್ಸೆ ಮಾಡಲ್ಪಟ್ಟಿತು. ಗುಣಾಂಶವು ಕಂಡುಬರುವುದಿಲ್ಲ. ಆದ್ದರಿಂದ ಈ ಊರಿಗೆ ಕರತಂದಿರುವೆನು. ನಾವೀಗ ಇರುವುದು "ಭವಾನಿಪುರ ಲ್ಯಾನ್ಸ್ ಡೌನ್ ಬೀದಿ"........ಡಾ. ರೋಯ್:—"ನಾನೀಗ ಅಲ್ಲಿಗೆ ಬರಬೇಕೇ?"ವಿದ್ಯುಲ್ಲತೆಯು—ಒಂದು ದೀರ್ಘ ನಿಶ್ವಾಸವನ್ನು ಬಿಟ್ಟು "ಅದಕ್ಕೆ ಉಪಾಯವಿಲ್ಲ; ಅವರ ಅವಸ್ಥೆಯನ್ನು ನಿಮಗೆ ವಿವರವಾಗಿ ಹೇಳುವೆನು. ಈಗ ನಿಮಗೆ ಸಮಯವಿರುವುದಾದರೆ........ಡಾಕ್ಟರ್ ರೋಯ್:—ನನಗೆ ಬೇರೆ ಕೆಲಸವಿಲ್ಲ.

ವಿದ್ಯುಲ್ಲತೆ:—ಅವರಿಗೆ ಇತ್ತಲಾಗೆ ಪ್ರತಿ ಒಂದು ವಿಷಯದಲ್ಲಿಯೂ ಸಂದೇಹ—ಎಲ್ಲರೂ ಅವರ ಸರ್ವಸ್ವವನ್ನು ಅಪಹರಿಸುವುದಕ್ಕೆ ಪ್ರಯತ್ನಿಸುವರೆಂದು ಅವರ ಭಾವನೆ. ಡಾಕ್ಟರರನ್ನು ಕಂಡರೆ ತನ್ನನ್ನು ವಿಷಹಾಕಿ ಕೊಲ್ಲುವುದಕ್ಕೆ ಕರತಂದಿರುವರೆಂದು ಹೇಳುವರು; ಒಂದೊಂದು ಬಾರಿ ಕಂಡಕಂಡವರನ್ನು ಹೊಡೆಯುವುದಕ್ಕೂ ಮುಂದರಿವರು. ಆದ್ದರಿಂದ ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಅವರನ್ನೇ ಇಲ್ಲಿಗೆ ಕರದುಕೊಂಡು ಬರಬೇಕೆಂದು ಭಾವಿಸಿರುವೆನು. ಅನಂತರ—ನೀವು ಅವರನ್ನು ನೋಡಿ ಚಿಕಿತ್ಸೆಯ ವ್ಯವಸ್ಥೆ ಮಾಡಬೇಕು. ಒಂದೋದು ಬಾರಿ ಅವರು ಆತ್ಮೀಯರನ್ನು ಸಹಾ ಗುರುತಿಸಲಾರದೆ ಬಾಯಿಗೆ ಬಂದಂತೆ ಮಾತಾಡುವರು. ನಾನು ಏನಾದರೂ ತಿಂಡಿಯನ್ನು ಕೊಡುವುದಕ್ಕೆ ಹೋದರೆ—"ದೂರ ನಿಲ್ಲು! ನೀನ್ಯಾರು, ಎಲ್ಲಿಂದ ಬಂದೆ"ಎಂದು ಹೇಳಿ ನನ್ನನ್ನು ಸಹ ಅಪರಿಚಿತಳಂತೆ ಕಾಣುವರು.

ಡಾಕ್ಟರ್ ರೋಯ್:—ಇದೊಂದು ಭಯಂಕರ ಅನಾಹುತ.

ವಿದ್ಯುಲ್ಲತೆ:—ನಾನು ಅವರ ಜತೆಯಲ್ಲಿ ಜೀವನ್ಮೃತಾವಸ್ಥೆಯಲ್ಲಿ......ನನಗೆ ಜೀವಿಸಿರಬೇಕೆಂಬ ಆಶೆಯು ಮೊದಲೇ ಇಲ್ಲ. ಅವರಿಗೆ ಹತ್ತಿರದ ಬಂಧುಗಳು ಬೇರೆ ಯಾರೂ ಇಲ್ಲ"........ಎನ್ನುವಷ್ಟರಲ್ಲಿ ಅವಳ ಎರಡು ಕಣ್ಣುಗಳಿಂದಲೂ, ಅಶ್ರುಪ್ರವಾಹವು ಹರಿಯತೊಡಗಿತು.

ಡಾಕ್ಟರ್ ರೋಯ್:—ಅದಕ್ಕಾಗಿ ನೀವು ದುಃಖಿಸಬೇಕೆಂದಿಲ್ಲ. ನಾನು ಒಂದು ಸಾರಿ ಅವರನ್ನು ನೋಡುವೆನು....

ವಿದ್ಯುಲ್ಲತೆ:—"ಇದು ದವಾಖಾನೆಯೆಂದು ಅವರು ತಿಳಿದುಕೊಳ್ಳದಂತೆ ಜಾಗ್ರತೆನೋಡಿಕೊಳ್ಳಬೇಕು"!

ಡಾಕ್ಟರ್ ರೋಯ್:—ಇದು ಹೇಗೂ, ದವಾಖಾನೆಯಲ್ಲ. ದವಾಖಾನೆಯಲ್ಲಿ ಬೇರೆ ಇದೆ. ಇನು ನನ್ನ ಮನೆ. ಅವರನ್ನು ಇಲ್ಲಿಗೆ ಕರದುಕೊಂಡು ಬರುವುದಕ್ಕೆ ಸಂದೇಹಪಡಬೇಕೆಂದಿಲ್ಲ. ಆದರೆ ಮಾರ್ಗದಿಂದ ಇಲ್ಲಿಯ ವರೆಗೆ ಹತ್ತಿಪ್ಪತ್ತು ಮಾರುದಾರಿ ನಡೆದುಬರಬೇಕಾಗುವುದು?

ವಿದ್ಯುಲ್ಲತೆಯು ಬಿನ್ನಾಣದಿಂದ ಡಾ. ರೋಯಿಯನ್ನು ನೋಡಿ, "ಅವರ ಶಕ್ತಿಯು ಕುಂದಲಿಲ್ಲ. ಒಂದೆರಡು ಮೈಲು ದೂರವಾದರೂ ನಡೆದು ಹೋಗುವರು. ಹೇಗಾ

ದರೂ ನೀವು ಅವರನ್ನು ಈ ವ್ಯಾಧಿಯಿಂದ ಉದ್ಧಾರವಮಾಡಿದರೆ, ನಾನು ನಿಮ್ಮ ಉಪಕಾರವನ್ನು ಎಂದೂ ಮರೆತು ಬಿಡುವಹಾಗಿಲ್ಲ. ನನಗೆ ಬೇರೆ ಯಾವ ಕೊರತೆಯೂ ಇರುವುದಿಲ್ಲ. ಬೇಕಾದ ಸಂಪತ್ತು........" ಎಂದು ಡಾ. ರೋಯಿಯ ಮುಖವನ್ನು ಅವಲೋಕಿಸಿದಳು. ಇದು ವರೆಗೆ ಎಲ್ಲೋ ಅಡಗಿದ್ದ ಒಂದು ಮಿಂಚಿನ ಜ್ಯೋತಿಯು ಅವಲೋಕನದಲ್ಲಿ ಕಾಣಿಸಿಕೊಂಡಿತು. ಆ ಜ್ಯೋತಿಯ ಪ್ರಭೆಯಲ್ಲಿ ಡಾಕ್ಟರ್ ರೋಯಿಯ ಮುಖಕಮಲವು ತಾನಾಗಿ ಅರಳಿತು, "ಇರಲಿ! ಮೊದಲು ಅವರನ್ನು ನೋಡುವೆನು. ಅನಂತರ........"

ವಿದ್ಯುಲ್ಲತೆ:—ಇನ್ನೊಂದು ವಿಷಯವನ್ನು ಹೇಳುವುದಕ್ಕೆ ಮರೆತೆನು; ನಿಮ್ಮ ಈ ಮನೆಯಲ್ಲಿ ನೀವು ಒಬ್ಬರೇ ಇರುವ ಸಮಯವು ಯಾವುದು?

ಡಾಕ್ಟರ್ ರೋಯ್:—ಮಧ್ಯಾಹ್ನ ಎರಡು ಗಂಟೆಯಿಂದ ಮೂರು ಗಂಟೆಯ ವರೆಗೆ ನಾನು ವಿಶ್ರಮಿಸುವ ಸಮಯ, ಆಗ ಬೇರೆ ಯಾರೂ ಇಲ್ಲಿಗೆ ಬರುವವರಿಲ್ಲ. ಈ ವೆಂಕಪ್ಪನು ಮಾತ್ರ ಇರುವನು.

ವಿದ್ಯುಲ್ಲತೆ: —ಹಾಗಾದರೆ, ನಾನು ಎರಡುವರೆ ಗಂಟೆ ಸಮಯಕ್ಕೆ ಸರಿಯಾಗಿ ಅವರನ್ನು ಕರಕೊಂಡು ಇಲ್ಲಿಗೆ ಬರುವೆನು,ಎಂದು ಹತ್ತಿರವಿದ್ದ ಬೇಗನ್ನು ಬಿಡಿಸಿ ಅದರೊಳಗಿನಿಂದ ಹತ್ತು ರೂಪಾಯಿಗಳನ್ನು ತೆಗೆದು ಮೇಜಿನ ಮೇಲೆ ಇಟ್ಟಳು.

ಡಾಕ್ಟರ್ ರೋಯ್:—"ಛೇ! ಛೇ! ಈಗ ಬೇಡ, ಚಿಕಿತ್ಸೆಗೆ ಮೊದಲು ಹಣವನ್ನು ಕೊಡಬೇಕೆಂದಿಲ್ಲ."

ವಿದ್ಯುಲ್ಲತೆ:—"ಹಾಗಲ್ಲ, ಚಿಕಿತ್ಸೆಯನ್ನು ಪ್ರಾರಂಭಿಸಬೇಕಾದರೆ ನಿಮಗೆ ಇನ್ನೂ ಕೊಡುವೆನು. ನಿಮಗೆ ಇದೊಂದೇ ವೃತ್ತಿಯಲ್ಲವೇ? ಅವರು ಹೇಗೂ ಗುಣಹೊಂದಲಿ, ಅನಂತರ ನೀವು, ಕೇಳುವಷ್ಟು ಹಣವನ್ನು ಕೊಡುವುದಕ್ಕೆ ನಾನು ಸಿದ್ಧಳಿರುವೆನು. ಮಾತ್ರವಲ್ಲ ನಿಮಗೊಂದು ಚಿನ್ನದ........"

ಡಾಕ್ಟರನ ಅಂಗೋಪಾಂಗಗಳಲ್ಲಿರುವ ಎಲ್ಲಾ ನರಗಳಲ್ಲಿಯೂ "ಚನ್, ಚನ್," ಎಂದು ವಿದ್ಯುತ್‌ವೇಗದಿಂದ ನೆತ್ತರು ಹರಿದಾಡತೊಡಗಿತು. ರೋಗಿಯನ್ನು ನೋಡವ ಮೊದಲೇ ಹತ್ತುರೂ. ಗಳು.

ವಿದ್ಯುಲ್ಲತೆ:—"ಇನ್ನು ನಾನು ಹೋಗುವೆನು. ನಿಮ್ಮ ಅಮೂಲ್ಯ ಸಮಯವನ್ನು ಹಾಳುಮಾಡಿದುದಕ್ಕಾಗಿ ಕ್ಷಮೆಯಿರಲಿ!" ಎಂದು ಅಧರಕೋಣದಲ್ಲಿ ಒಂದು ಬಗೆಯ ಸವಿನಗೆಯನ್ನು ಸೂಸಿ ಎದ್ದುನಿಂತುಕೊಂಡಳು. ಡಾಕ್ಟರ್ ರೋಯಿಯು ವಿದ್ಯುಲ್ಲತೆಯ ಬೇಗನ್ನು ಮಾರ್ಗದ ವರೆಗೆ ಕೊಂಡುಹೋಗೆಂದು ಸೇವಕನಿಗೆ ಆಜ್ಞಾಪಿಸಿದನು. ವಿದ್ಯುಲ್ಲತೆಯು ಹೊರಟುಹೋದಳು. ಅವಳನ್ನು ಕಾದುನಿಂತ ಟೆಕ್ಸಿಯು ಮುಂದೆ ನಡೆಯಿತು.

"ವೆಂಕಪ್ಪಾ! ಜವಾನ್‌ದಾರಳು ಬರುವ ಹೊತ್ತಾಯಿತು." ಡಾ. ರೋಯಿಯು ಥಟ್ಟನೆ ಎದ್ದು ಮಾರ್ಗದ ಕಡೆಗೆ ನೋಡಿದನು. ಅದೇ ಟೆಕ್ಸಿ ಅದೇ ಸಂಪಿಗೆ ಬಣ್ಣದ ಸೀರೆಯನ್ನು ಉಟ್ಟುಕೊಂಡಿದ್ದ ಶ್ರೀಮಂತ ಮಹಿಳೆ ಸುಂದರಿ. ವಿದ್ಯುಲ್ಲತಾದೇವಿ ಬಂದೇ ಬಿಟ್ಟಳು.

ಟೆಕ್ಸಿಯಲ್ಲಿ ಮತ್ತೊಬ್ಬ ಆರೋಹಿಯು ಇದ್ದನು. ವಿದ್ಯುಲ್ಲತೆಯು ಅವನೊಡನೆ ಮೆಲ್ಲಗೆ ಮಾತಾಡಿ ಧೃತಗತಿಯಿಂದ ಡಾ. ರೋಯಿಯು ಮನೆಯನ್ನು ಪ್ರವೇಶಿಸಿದಳು. ಡಾ. ರೋಯಿಯು ಪ್ರಫುಲ್ಲವದನನಾಗಿ ಅವಳ ಮುಂದೆ ಬಂದು ಕಾಣಿಸಿಕೊಂಡನು. ಅವಳು ಅತ್ತಿತ್ತ ನೋಡದೆ ಆಸನದಲ್ಲಿ ಕುಳಿತುಕೊಂಡು "ಅವರನ್ನು ಕರತಂದಿರುವೆನು. ಜಾಗ್ರತೆಯಿಂದ ನೋಡಿಕೊಳ್ಳಿರಿ. ನನ್ನ ಮುಂದೆ ಯಾವ ಪ್ರಸ್ತಾಪವೂ ಬೇಡ. ನಿಮ್ಮ ಪರಿಚಾರಕನನ್ನು ಕಳುಹಿಸಿ ಅವರನ್ನು ಇಲ್ಲಿಗೆ ಕರೆಸಿರಿ. ಸ್ವಲ್ಪ ಕಾಫಿಕೊಟ್ಟು, ಕುಡಿಯುವರೋ ನೋಡಿರಿ!" ಆಗ ಅವಳ ಸರ್ವಾಂಗವೂ ಕಂಪಿಸುತಿದ್ದಂತೇ ಕಾಣುತಿದ್ದಿತು. ಅವಳು ವಿಪುಲ ಆವೇಶದಿಂದ ನಿಶ್ವಾಸವನ್ನು ಬಿಡುತ್ತಿದ್ದಳು.

ಡಾ. ರೋಯಿಯು: "ನೀವು ಗಾಬರಿಗೊಳ್ಳಬೇಕೆಂದಿಲ್ಲ" ಎನ್ನುವಷ್ಟರಲ್ಲಿ ವಿದ್ಯುಲ್ಲತೆಯು ಹದಿನೈದು ರೂಪಾಯಿಗಳನ್ನು ಮೇಜಿನ ಮೇಲಿಟ್ಟು "ಆಗ ಹೇಳಿದ ವಿಚಾರವು ನೆನಪಿರಲಿ" ಎಂದಳು.

ಡಾ. ರೋಯಿಯ ರೂಪಾಯಿಗಳನ್ನು ತೆಗೆದು ಎಲ್ಲವೂ ನನಗೆ ಜ್ಞಾಪಕದಲ್ಲಿದೆ ನೀವು ಇಲ್ಲೇ ಕುಳಿತುಕೊಳ್ಳುವಿರಾ?

ವಿದ್ಯುಲ್ಲತೆ:—ನಾನು ಒಳಗೆ ಕೋಣೆಯಲ್ಲಿ ಅವರಿಗೆ ಕಾಣದಂತೆ ಕೂತುಕೊಳ್ಳುವೆನು. ನೀವು ಅವರನ್ನು ಇಲ್ಲೇ ಕುಂಡ್ರಿಸಿ ಮಾತಾಡಿನೋಡಿರಿ! ಎಂದು ನಿಂತುಕೊಂಡಳು.

ಡಾ. ರೋಯ್:—"ಬನ್ನಿರಿ! ನೀವು ನನ್ನ ಖಾಸಗಿ ಕೋಣೆಯಲ್ಲಿ ಕೂತುಕೊಳ್ಳಿರಿ. ಎಂದು ನೆಟ್ಟಗೆ ಕೋಣೆಯೊಳಗೆ ಹೋದನು. ಅವನ ಹಿಂದೆಯೇ ವಿದ್ಯುಲ್ಲತೆಯೂ ನಡೆದಳು. ಡಾ. ರೋಯಿಯು ಒಂದು ಸುಖಾಸನವನ್ನು ತೋರಿಸಿ ಕೋಣೆಯಿಂದ ಹೊರಗೆ ಬಂದು ಬಾಗಿಲನ್ನು ಎಳೆದುಕೊಂಡನು. ಪರಿಚಾರಕ ವೆಂಕಪ್ಪನು ಜವಾನ್‌ದಾರನನ್ನು ಕರತಂದನು. ಮೊದಲಿನ ಮೊಗಸಾಲೆಯಲ್ಲಿ ಉಭಯತರೂ ಕುಳಿತುಕೊಂಡರು. ಡಾ. ರೋಯಿಯು ಅವನೊಡನೆ ದೇಶದ ಪರಿಸ್ಥಿತಿಯನ್ನು ಸ್ವರಾಜ್ಯ ಪಕ್ಷದವರ ಪ್ರಗತಿ ಮಿನಿಸ್ಟರರ ಶಕ್ತಿ ಮೊದಲಾದ ನಾನಾ ವಿಷಯದಲ್ಲಿ ಸಂಭಾಷಣವನ್ನು ಪ್ರಾರಂಭಿಸಿ, ಆ ಮೇಲೆ, ಜನರು ನಿಮ್ಮೊಡನೆ ವಿಶೇಷ ಚಾತುರ್ಯವನ್ನು ತೋರಿಸುವುದಕ್ಕೆ ತೊಡಗಿರುವರಂತೆ; ಅನಾವಶ್ಯಕವಾಗಿ ಠಕಾಯಿಸಿ ಹಣವನ್ನು ಕೊಂಡುಹೋಗುವುದು; ಕಳ್ಳತನದಿಂದ........ದುಷ್ಟ ವೃತ್ತಿಯ ಅಲ್ಪರು ಅಲ್ಲಲ್ಲಿ ಇದ್ದೇ ಇರುವರು" ಎಂದನು.

ಜವಿಾನ್‌ದಾರ:—"ಇಲ್ಲ ಇಲ್ಲ! ಆ ವಿಷಯದಲ್ಲಿ ನಾವು ವಿಶೇಷ ಜಾಗ್ರತೆಯಿಂದಲೇ ಇರುವೆವು. ಹಿಂದೆ ಒಂದು ಬಾರಿ ಅಲ್ಪಸ್ವಲ್ಪ ಹಣವನ್ನು ಕಳಕೊಂಡಿದ್ದೆವು. ಆ ಮೇಲೆ........"

ಡಾ. ರೋಯಿ:—"ನಿಮಗೆಷ್ಟು ಮಕ್ಕಳು?"

ಜವಿಾನ್‌ದಾರ:—"ಒಂದು ಗಂಡು ಎರಡು ಹೆಣ್ಣು"

ಡಾ. ರೋಯಿ:—"ಅವರು ಇಲ್ಲೇ ಇರುವರೇ?"

ಜವಿಾನ್‌ದಾರ:—"ಇಲ್ಲ ಇಲ್ಲ ನಾನೊಬ್ಬನೇ ಇರುವೆನು. ಹುಡುಗನು ಬೆನಾರಸಿನಲ್ಲಿರುವನು. ಹುಡುಗಿಯರು ಊರಿನಲ್ಲಿರುವರು."

ಡಾ. ರೋಯಿ:—ಜವಿಾನ್‌ದಾರನ ತಲೆಯಲ್ಲಿ ಈಗ ಸ್ವಲ್ಪ ಹುಚ್ಚುತನದ ಆಭಾಸವು ಉದಿಸಿರಬಹುದೆಂದು ಭಾವಿಸಿ, ನಿಮ್ಮ ಪತ್ನಿಯು ನಿಮ್ಮೊಂದಿಗೆ........"

ಜವಿಾನ್‌ದಾರ:—ಇಲ್ಲ ನಾನು ಬೋರ್ಡಿಂಗಿನಲ್ಲಿ ಇರುವೆನು. ಅವಳು ನಮ್ಮ ಊರಿನಲ್ಲೇ ಇರುವಳು.

ಡಾ. ರೋಯಿಯು ಜವಿಾನ್‌ದಾರನ ಚಿತ್ತವಿಭ್ರಮೆಯು ಉಲ್ಬಣವಾಗಲು ತೊಡಗಿತೆಂದು ಭಾವಿಸಿ—"ನೀವು ಈ ವೃತ್ತಪತ್ರಿಕೆಯನ್ನು ಓದಿನೋಡಿರಿ" ಎಂದು, ಒಂದು ಹಳೆಯ ಗಜೇಟನ್ನು ಅವನ ಕೈಗೆ ಕೊಟ್ಟನು.

ಜವಿಾನ್‌ದಾರನು ಗಜೇಟನ್ನು ಕೌತುಕ ದೃಷ್ಟಿಯಿಂದ ನೋಡಿ ಉರಿಮೋರೆಯಿಂದ "ಅದು ಹಾಗಿರಲಿ! ಇನ್ನು ನಾನು ಹೋಗುವೆನು. ಕಟ್ಟೆಯಲ್ಲಿ ಹೆಚ್ಚು ಕೆಲಸವಿರುತ್ತದೆ.

ಡಾ:—"ಕಟ್ಟೆ! ಎಂತಹ ಕಟ್ಟೆ?"

ಜ:—"ಸರಾಫ ಕಟ್ಟೆ, ನಮ್ಮ ಹಣವನ್ನು ಕೊಟ್ಟು ಬಿಡಿ! ನಾನು ಹೋಗುವೆನು" ಎಂದು ಒಂದು ಕಾಗದವನ್ನು ಡಾ. ರೋಯಿಯ ಕೈಗೆ ಕೊಟ್ಟನು.

ಡಾ:—"ಇದೇತಕ್ಕೆ?"

ಜ:—ಚಕಿತನಾಗಿ "ಡಾಕ್ಟರ್ ರೊಯ್ ಎಂದರೆ ನೀವೇ ಅಲ್ಲವೆ?''

ಡಾ:—''ಹೌದು!''

ಜವಿಾನುದಾರ:—"ನಿಮ್ಮ ಧರ್ಮಪತ್ನಿಯವರು ನಮ್ಮ ಸರಾಫಕಟ್ಟೆಗೆ ಬಂದು ಎರಡು ವಜ್ರದ ಬೆಂಡೋಲೆಗಳು, ಎರಡು ಬಳೆಗಳು, ಒಂದು ಮುತ್ತಿನ ಸರ, ಒಂದು ವಜ್ರದ ಉಂಗುರ—ಇಷ್ಟು ನಗಗಳನ್ನು ತೆಗೆದುಕೊಂಡು ಬಂದಿರುವರು. ಅವುಗಳನ್ನು ನಿಮಗೆ ತೋರಿಸಿ ಬೆಲೆಯ ಹಣವನ್ನು ನಿಮ್ಮಿಂದ ಕೊಡಿಸುವೆನೆಂದು ಹೇಳಿದ್ದರು. ಅವುಗಳ ಕ್ರಯದ ಬೀಲು ಇದು."

ಡಾಕ್ಟರರ ವಿಸ್ಮಯವು ಮೇರೆಯನ್ನು ಮಿಾರಿತು. ಅವನು ಬಿಲ್ಲನ್ನು ಓದಿನೋಡಿ ನಿಮ್ಮ ಹೆಸರು!

ಜ:—"ನನ್ನ ಹೆಸರು ಮೋತೀಚಂದ ಶೇಟ್. ಇಷ್ಟು ಹಣದ ಬೀಲನ್ನು ಸೇವಕನ ಕೈಯಲ್ಲಿ ಕೊಟ್ಟು ಕಳುಹಿಸುವುದಕ್ಕೆ ಅಧೀರನಾಗಿ ನಾನೇ ಬಂದಿರುವೆನು."

ಡಾ.ರೋಯ್:—"ಬಂದ ಮಹಿಳೆ............"

ಶೇಟ್:—"ಹೌದು! ನಿಮ್ಮ ಹೆಂಡತಿಯುವರು—ಅವರೇ ಬಂದದ್ದು."

ಡಾ.ರೊಯಿಗೆ—ಆಕಾಶದಿಂದ ಕೆಳಗೆ ಬಿದ್ದಂತಾಯಿತು. "ಏನೇನು ನನ್ನ ಹೆಂಡತಿ!"

ಶೇಟ್:—"ಅವರು ಇದುವರೆಗೆ ಮೂರು ಬಾರಿ ನಮ್ಮಲ್ಲಿಗೆ ಬಂದಿದ್ದರು. ಈ ಬಾರಿ ಬಿಲ್ಲಿನಲ್ಲಿ ಬರೆದ ನಗಗಳನ್ನು ಪಡಕೊಂಡು ತಾನು ಡಾಕ್ಟರ್ ರೋಯಿಯ ಹೆಂಡತಿ. ಅವರಿಗೆ ಹೆಚ್ಚು ಕೆಲಸವಿದೆ; ಸಮಯವಿಲ್ಲ. ಆದ್ದರಿಂದ ನಾನೇ ಬಂದೆನು. ಈಗ ನಮ್ಮ ಮನೆಗೆ ಬಂದರೆ ಹಣವನ್ನು ಕೊಡಿಸುವೆನೆಂದು ನನ್ನನ್ನು ಇಲ್ಲಿಗೆ ಕರಕೊಂಡು ಬಂದಿರುವರು.

ಡಾಕ್ಟರನು: ಕುರ್ಚಿಯಿಂದ ಎದ್ದು ನಿಂತು "ಏನೇನು?''
....

ಜ:—''ಬೀಲ್ ನೋಡಿರಿ! ಎಲ್ಲಾ ಅದರಲ್ಲಿ ಬರೆದಿದೆ. ಐದುಸಾವಿರದ ಎಪ್ಪತ್ತೆಂಟು ರೂಪಾಯಿಗಳು. ಒಟ್ಟು ಅಷ್ಟೇ........''

ಡಾ:—''ನಿಮ್ಮೊಂದಿಗೆ ಈಗ ಬಂದ ಮಹಿಳೆಯು ಬೆಳಿಗ್ಗೆ ಇಲ್ಲಿಗೆ ಬಂದು, ತನ್ನ ಗಂಡನಿಗೆ ತಲೆಸರಿಯಿಲ್ಲ; ಅವರನ್ನು ಇಲ್ಲಿಗೆ ಕರಕೊಂಡು ಬರುತ್ತೇನೆ; ನೀವು ಪರೀಕ್ಷಿಸಿ ಚಿಕಿತ್ಸೆಮಾಡಬೇಕೆಂದು ಹೇಳಿ, ಹತ್ತು ರೂಪ್ಯಾಗಳನ್ನು ನನಗೆ ಕೊಟ್ಟುಹೋಗಿದ್ದರು. ಇದೆಂತಹ ಕಪಟನಾಟಕ? ನೀವು ಜವಿಾನ್‌ದಾರರೂ ಅಲ್ಲ, ಅವಳು ನಿಮ್ಮ ಹೆಂಡತಿಯೂ ಅಲ್ಲ. ಅವಳು ನನ್ನ ಹೆಂಡತಿಯೂ ಅಲ್ಲ. ಹಾಗಾದರೆ, ಅವಳ್ಯಾರ ಹೆಂಡತಿ?

ಹೆಂಡತಿ.

ಶೇಟ್:—''ಅವಳನ್ನು ಕೇಳಬೇಕು. ಈಗ ಅವಳೆಲ್ಲಿರುವಳು?''

ಡಾ:—''ಇಲ್ಲಿಯೇ ಇರುವಳು. ಬನ್ನಿ ಒಳಗೆ ಬನ್ನಿ'' ಎಂದು ಡಾಕ್ಟರನು ಲಗುಬಗೆಯಿಂದ ವಿದ್ಯುಲ್ಲತೆಯು ಕೂತುಕೊಂಡ ಕಿರುಮನೆಯ ಬಾಗಿಲನ್ನು ದೂಡಿದನು. ಒಳಗೆ ಚಿಲುಕ ಹಾಕಿದ್ದಿತು.

ಡಾ.ರೋಯಿಯು:—ವೆಂಕಪ್ಪಾ! ಹಿಂದಿನ ಬಾಗಿಲಿನಿಂದ ಒಳಗೆ ಹೋಗಿ ಚಿಲುಕ ತೆಗೆ ಎಂದು ವೆಂಕಪ್ಪನಿಗೆ ಹೇಳಿದನು. ವೆಂಕಪ್ಪನು ಹೋಗಿ ಚಿಲುಕ ತೆಗೆದನು. ಡಾ. ರೋಯಿಯು ಕೋಣೆಯ ಒಳಗೆ ಹೋದನು. ಶೇಟನೂ ಅವನ ಹಿಂದೆಯೇ ಇದ್ದನು. ಕೋಣೆಯಲ್ಲಿ ಯಾರೂ ಇರಲಿಲ್ಲ. ಡಾಕ್ಟರನಿಗೆ ತಲೆ ತಿರುಗಿತು. ಮೈ ಜುಮ್ಮೆಂದಿತು. ಕೋಣೆಯಲ್ಲಿದ್ದ ಮೇಜಿನ ಮೇಲೆ ನೋಡಿ ಎಚ್ಚರತಪ್ಪಿದಂತಾಗಿ

ಇದೇನು ಸರ್ವನಾಶ! ಮೇಜಿನ ಮೇಲೆ ಇದ್ದ (Cash Box) ಹಣದ ಪೆಟ್ಟಿಗೆ ಕಾಣುವುದಿಲ್ಲ. ಅಯ್ಯೋ! ರಿಸ್ಟ್ ವಾಚು, ಚಿನ್ನದ ಸರಪಣಿ ಇಲ್ಲೇ ಇಟ್ಟಿದ್ದೆನು. ಏ ವೆಂಕಪ್ಪಾ! ವೆಂಕಪ್ಪಾ! ಎಂದು ಗದ್ಗದ ಸ್ವರದಿಂದ ಡಾ| ರೋಯಿಯು ಪರಿಚಾರಕನನ್ನು ಕರೆದನು. ವೆಂಕಪ್ಪನು ಬಂದನು.

ಡಾಕ್ಟರ:—"ವೆಂಕಪ್ಪಾ! ಅವಳೆಲ್ಲಿ?"

ವೆಂಕಪ್ಪ:—"ಸ್ವಲ್ಪ ಸಮಯಕ್ಕೆ ಮೊದಲು, ಟೇಕ್ಸಿಯಲ್ಲಿ ಇವರೊಂದಿಗೆ ಬಂದ ದೇವಿಯವರಲ್ಲವೆ?"

ಡಾಕ್ಟರ್:—"ಹೂಂ! ಅವಳು ಈಗೆಲ್ಲಿ ಇರುವಳು?"

ವೆಂಕಪ್ಪ:—"ಅವರು ಹೊರಗೆ ಹೋಗಿರುವರು. ಅವರು ಡಾಕ್ಟರರು ಕೊಟ್ಟ ಮದ್ದಿನ ಪಟ್ಟಿಯನ್ನು ಮನೆಯಲ್ಲಿ ಬಿಟ್ಟುಬಂದೆನು. ಬೇಗನೇ ಹೋಗಿ ಅದನ್ನು ತೆಗೆದುಕೊಂಡು ಬರುವೆನೆ"ಂದು ಹೇಳಿದರು.

ಡಾಕ್ಟರ:—"ಅವಳು ಹೋಗುವಾಗ ಇಲ್ಲಿ ಮೇಜಿನ ಮೇಲೆ ಇದ್ದ ಹಣದ ಪೆಟ್ಟಿಗೆಯನ್ನು ಕೊಂಡುಹೋದಳೇ?"

ವೆಂಕಪ್ಪ:—"ಅವರು ಹೋಗುವಾಗ ನಾನು ಇಲ್ಲಿ ಇರಲಿಲ್ಲ. ಜಮೀನ್ದಾರರಿಗೆ ಸ್ವಲ್ಪ ಬುದ್ಧಿ ಕೆಟ್ಟಿದೆ. ನೀನು ಅವರಿಗೆ ಕಾಣಿಸಿಕೊಳ್ಳದೇ ಮರೆಯಾಗಿ ನಿಂತುಕೊಂಡು ಅವರೇನಾಡಿದರೆಂಬುದನ್ನು ಬಂದ ಮೇಲೆ ನನಗೆ ತಿಳಿಸಬೇಕು" ಎಂದು ಅವರು ಹೇಳಿದ್ದರು. ಆದ್ದರಿಂದ ನಾನು ನಿಮ್ಮ ಹಿಂದುಗಡೆ ನಿಂತುಕೊಂಡಿದ್ದೆನು."

ಡಾಕ್ಟರನಿಗೆ ಸಿಡಿಲುಬಡಿದಂತಾಯಿತು. ಅಲ್ಲೇ ಇದ್ದ ಕುರ್ಚಿಯ ಮೇಲೆ ಅವನು ಬಿದ್ದುಬಿಟ್ಟನು.

ಶೇಟ್‌ನು ಕತ್ತಲು ಕವಿದಂತೆ ಭಾಸವಾಗಿ ನಿಂತಲ್ಲೇ ಕುಳಿತುಕೊಂಡು ಉರಿಮೋರೆಯಿಂದ "ಅವಳಿನ್ನು ಬರುವ ಹಾಗಿಲ್ಲವೇ? ಹಾಗಾಗರೆ ನಮ್ಮ....ಹಣ....ನಾನು...."

ಡಾ:—"ಅಲ್ಲ, ಅಲ್ಲ; ನಾವು ಇಬ್ಬರೂ ಠಕ್ಕರ ದವಡೆಯಲ್ಲಿ ಸಿಕ್ಕಿಬಿದ್ದಿರುವೆವು. ಈಗ ಪೋಲೀಸರನ್ನು ಕರೆಸಬೇಕು.

ಶೇಟ್:—"ಇದೆಂತಹ ವ್ಯಾಪಾರ. ಹೆಂಗಳೆಯರೆಂದು ಹೆಚ್ಚು ಲಾಭವನ್ನಿಡದೇ ಕಡಿಮೆ ಬೆಲೆಗೆ ಆಭರಣಗಳನ್ನು ಕೊಟ್ಟಿದ್ದೆನು. ಅಯ್ಯೋ ಸ್ವಲ್ಪ ಹಣವೇನು? ೫೦೭೮ ರೂಪಾಯಿ."

ಡಾಕ್ಟರ್:—"ನೀವು ಸ್ವಲ್ಪವಾದರೂ ಲಾಭವನ್ನು ಇಟ್ಟು ಕೊಟ್ಟಿರುವಿರಿ; ನನಗೆ ಸಿಕ್ಕಿದ ಲಾಭದೊಂದಿಗೆ—ಇದ್ದುದು ಹೋಯಿತು ಮದ್ದಿನ ಗುಣ..........."

"೨೦೦ ರೂಪಾಯಿ ಕ್ರಯದ ಕೈಗಡಿಯಾರ, ೨೫೦ ರೂ. ಗಳ ಚಿನ್ನದ ಸರಪಣಿ—ಅವುಗಳ ವಿನಹಾ ಕೇಶ್ ಬೋಕ್ಸಿನಲ್ಲಿ ಇದ್ದ ಹಣ...........ಇರಲಿ, ಪೋಲೀಸ್ ಆಫೀಸರರಿಗೆ ಟೆಲಿಫೋನ್ ಮಾಡಿದ್ದಾಯಿತು. ಬೇಗ ಬನ್ನಿರಿ! ದೊಡ್ಡ ಕಳವು! ಹಗಲು ಹೊತ್ತಿನಲ್ಲಿ!"

ಶೇಟ್:—"ಆ ಸೌಂದರ್ಯಮಯಿಯ ಸವಿನುಡಿ, ಬಗೆಬಗೆಯ ಬಿನ್ನಾಣ, ಇವುಗಳೇ ಸಂದೇಹಕ್ಕೆ ಎಡೆಕೊಡದೇ ನನ್ನನ್ನು ರಸಾತಳಕ್ಕೆ ಕೆಡವಿದವು."

ಡಾಕ್ಟರ್:—"ನನ್ನ ಅವಸ್ಥೆಯೂ ಬೇರೊಂದಲ್ಲ. ಅದೇ ನಾನು ಇದುವರೆವಿಗೂ ಇಂತಹ ರೋಗಿಯನ್ನು ನೋಡಲಿಲ್ಲ. ರೋಗಿಯನ್ನು ಅಥವಾ ರೋಗವನ್ನು ಕಾಣುವ ಮೊದಲೇ ಹಣವನ್ನು ಕೈಗೆ ಕೊಟ್ಟಳು. ಅದೂ ಸ್ವಲ್ಪವೇ ಇಮ್ಮಡಿಗಿಂತ ಹೆಚ್ಚಿಗೆ. ನಾನೇ ಕೇಳುವುದಾದರೂ ಅಷ್ಟು ಹಣವನ್ನು ಕೇಳುತ್ತಿದ್ದಿಲ್ಲ..........."

ಪೋಲೀಸ್ ಇನ್ಸ್‌ಪೆಕ್ಟರನು ಬಂದನು;

ಡಾಕ್ಟರನು ಸಂಪೂರ್ಣ ಸಂವಾದವನ್ನು ವಿವರಿಸಿ ಹೇಳಿದನು.

ಇನ್ಸ್‌ಪೆಕ್ಟರ್:—"ಅವಳ ಚಹರೆ ಇತ್ಯಾದಿಗಳನ್ನು ವಿವರವಾಗಿ ಹೇಳಿರಿ!"

ಶೇಟ್:—"ಹೆಸರು ವಿದ್ಯುಲ್ಲತೆ; ಕಲಿಕಾಲದಲ್ಲಿಯೂ ಸಾಕ್ಷಾತ್ ವಿದ್ಯುಲ್ಲತೆ."

ಇನ್ಸ್‌ಪೆಕ್ಟರ್:—ನಕ್ಕು "ವಿದ್ಯುತ್ತಿನಲ್ಲಿ ಲತೆಯು ಇರದಿದ್ದರೆ ಇಂತಹ ಪ್ರಭೆಯನ್ನು ಉಂಟುಮಾಡುವುದಕ್ಕೆ ಸಾಧ್ಯವಿಲ್ಲ. ಅವಳ ಚಹರೆಯಲ್ಲಿ ಒಂದನ್ನೂ ಬಿಡದೆ ಹೇಳಿರಿ."

ಡಾಕ್ಟರ್:—"ಒಳ್ಳೆ ಚಹರೆ, ಅವಳ ಚಹರೆಯನ್ನು ನಮ್ಮಿಬ್ಬರ ಮಾನಸಪಟದಲ್ಲಿ ಸ್ಥಿರ ಪ್ರತಿಷ್ಠೆಯನ್ನು ಮಾಡಿ ನಮ್ಮ ಯಥಾಸರ್ವಸ್ವವನ್ನು ದೋಚಿಕೊಂಡು ಹೋಗಿಬಿಟ್ಟಳು."

ಡಾಕ್ಟರನು ಅವಳ ಸಂಪೂರ್ಣ ಚಹರೆಯನ್ನು ಹೇಳತೊಡಗಿದನು. ಇನ್ನು ಉಪಾಯ?

ಇನ್ಸ್‌ಪೆಕ್ಟರ್:—"ಇನ್ನು ಉಪಾಯ—ಆಫೀಸಿಗೆ ಬಂದು ಕೇಸ್ ಡೈರಿಮಾಡಿಸಬೇಕು. ಗಜೇಟಿನಲ್ಲಿ ಪ್ರಕಟಿಸಬೇಕು. ಆಸಾಮಿಯು ಸಿಕ್ಕಿದರೆ ಕೈದುಮಾಡುವೆವು."

ಶೇಟ್:—"ಸಿಕ್ಕದಿದ್ದರೆ?"

ಇನ್ಸ್:—"ಸಾಧನೆಮಾಡಬೇಕು!"

ಶೇಟ್:—"ಆಭರಣಗಳು ಹೋದವೆಂದೇ ಭಾವಿಸಬೇಕು!"...............

"ಸ್ವಾಮಿ! ನಾವಿಬ್ಬರೂ ಕೂಡಿ ಐನೂರು ರೂಪಾಯಿ ಬಹುಮಾನಕೊಡುವೆವು. ಒಬ್ಬ ಹಳ್ಳಿಯ ಹುಡುಗಿಯು ಶಹರಿನ ಪುರುಷರನ್ನು ಠಕಾಯಿಸಿದಳೆಂದರೆ......."

ಇನ್ಸ್:—"ಹಳ್ಳಿಯ ಹುಡುಗಿಯ ಠಕ್ಕಿಗೆ ನೀವು ಬೀಳಲಿಲ್ಲ. ಅವಳ ರೂಪ, ಲಾವಣ್ಯ, ಅಭಿನಯಗಳೇ ನಿಮ್ಮನ್ನು ಹಳ್ಳಕ್ಕೆ ತಳ್ಳಿಬಿಟ್ಟವು. ಅವಳು ಕುರೂಪಿಯಾಗಿದ್ದರೆ...." ಅವಳ ಮೇಲೆ ನೀವು ನಂಬುಗೆಯನ್ನು ಇಡುತ್ತಿದ್ದಿರೇನು?

ಒಂದು ದೃಶ್ಯ

ಹೆಣ್ಣಿನ ರಹಸ್ಯ

ಲೇಖಕರು:
ಕೈನಾರ ರಾಜಾರಾವ್, ಬಿ. ಎ.

ಪಾತ್ರಗಳು:

೧. ವಿಶ್ವಾಮಿತ್ರ: ಸುಪ್ರಸಿದ್ಧ ವಿಜ್ಞಾನಿ.

೨. ಮೇನಕೆ: ಅವನ ಪ್ರೇಯಸಿ.

[ವಿಶ್ವಾಮಿತ್ರನ ಮನೆಯ ಸುಸಜ್ಜಿತವಾದ ಶಯನಾಗಾರದಲ್ಲಿ ಮೇನಕ ಸುಖದ ಸವಿಗನಸುಗಳನ್ನು ನೆನೆಸಿಕೊಂಡು ಸಂತೋಷದಿಂದ ಹಾಡುತ್ತಾ ಕುಳಿತಿದ್ದಾಳೆ. ಕ್ಷಣ ಹೊತ್ತಿನ ಮೇಲೆ ವಿಶ್ವಾಮಿತ್ರ ಊಟ ಮುಗಿಸಿಕೊಂಡು ಒಳಗೆ ಬರುತ್ತಾನೆ. ಮೇನಕ ಅವನನ್ನು ಕೈಹಿಡಿದು ಕರೆದು ಮಗ್ಗುಲಲ್ಲಿ ಕೂಡ್ರಿಸಿಕೊಳ್ಳುವಳು.]

ಮೇನಕ: ಊಟ ಮುಗಿಯಿತೆ?

ವಿಶ್ವಾಮಿತ್ರ: ಮುಗಿಯಿತು.

ಮೇನಕ: ಒಂದು ಹೊಸ ಬಗೆಯ ಅಡಿಗೆಯನ್ನು ಮಾಡಿಸಿದ್ದೆನಲ್ಲಾ, ಅದು ಹೇಗಿತ್ತು?

ವಿಶ್ವಾಮಿತ್ರ: ಹೊಸ ಬಗೆಯೆ! ಅದೇನು ಬಡಿಸಿದರೋ ತಿಳಿಯದು. ಅಂತೂ ಊಟವೇನೋ ಮಾಡಿ ಬಂದೆ. ಹೊಸ ಅಡಿಗೆ ಚೆನ್ನಾಗೇ ಇದ್ದಿರಬೇಕು.

ಮೇನಕ: ಹೀಗಾದರೆ ಹೇಗೆ. ನಿಮ್ಮ ಮನಸ್ಸು ಆ ವಿಜ್ಞಾನದ ಪ್ರಯೋಗಶಾಲೆಯಿಂದ ಹೊರಗೆ ಬರುವುದೇ ಇಲ್ಲ. ಮಾತನಾಡುವಾಗ, ಊಟಮಾಡುವಾಗ, ಮಲಗಿದಾಗ-- ಎಲ್ಲ ಕಾಲದಲ್ಲೂ ಮನಸ್ಸು ಪ್ರಯೋಗಶಾಲೆಯಲ್ಲೇ ಇರುತ್ತೆ. ಯಂತ್ರದ ಹಾಗೆ ಬೇರೆ ಕೆಲಸಗಳನ್ನು ಮಾಡುತ್ತೀರಿ, ಅಷ್ಟೆ.

ವಿಶ್ವಾಮಿತ್ರ: ವಿಜ್ಞಾನದ ಸಾಧನೆ—ಹೊಸ ಸೃಷ್ಟಿ—ತಪಸ್ಸಿನ ಫಲ. ನಮ್ಮ ಹಿರಿಯರು ತಪಸ್ಸು ಮಾಡಿ ಏನೇನನ್ನೋ ಸಾಧಿಸಿದರು ಎಂದು ನಾವು ಓದುವುದಿಲ್ಲವೆ? ಅದೆಲ್ಲಾ ಅಚಲನಾದ ಮನಸ್ಸಿನ ಒಂದು ಚಿಂತನೆ. ಹಾಗೆ ಮನಸ್ಸನ್ನು ಕೇಂದ್ರೀಕೃತ ಮಾಡಿದಲ್ಲದೆ ಒಂದು ಪ್ರಯೋಗ ಸಾಧಿಸಲಾರದು.

ಮೇನಕ: ಹಾಗೆ ನೀವು ಸಾಧಿಸಿರುವುದಾದರೂ ಏನು?

ವಿಶ್ವಾಮಿತ್ರ: ಏನೆಂದರೇನು. ಒಂದೇ, ಎರಡೇ. ಪ್ರಪಂಚದ ಇಂದಿನ ಸ್ಥಿತಿಯೇ ವಿಜ್ಞಾನಕ್ಕೆ ಋಣಿ. ನಿನ್ನ ಸುಖದ ಸಾಮಗ್ರಿಗಳು ಕೂಡ ವಿಜ್ಞಾನದ ಸಂಶೋಧನೆಗಳ ಪರಿಣಾಮದಿಂದುಂಟಾದುವೇ ಸರಿ.

ಮೇನಕ: ನನಗೀಗ ಬೇಸರವಾಗುತ್ತಿದೆ. ನಿಮ್ಮ ವಿಜ್ಞಾನ ನನ್ನ ಬೇಸರವನ್ನು ಕಳೆಯಬಲ್ಲುದೇ?

ವಿಶ್ವಾಮಿತ್ರ: ನಿನಗೆ ಯಾವಾಗಲೂ ಬೇಸರನೇ.

ಮೇನಕ: (ಗದ್ಗದಳಾಗಿ) ನನ್ನನ್ನು ಕಂಡರೆ ನಿಮಗೆ ತಾತ್ಸಾರ, ಅಪಹಾಸ್ಯ.

ವಿಶ್ವಾಮಿತ್ರ: ಛೆ ಛೆ, ಹಾಗೆನಬೇಡ.

ಮೇನಕ: ನೀವು ಒಂದು ಕ್ಷಣವಾದರೂ ನಿಮ್ಮ ಪ್ರಯೋಗಶಾಲೆಯನ್ನು ಬಿಟ್ಟು ವಿರಾಮ ತೆಗೆದುಕೊಂಡಿದ್ದೀರಾ. ನಾನೊಬ್ಬಳು ಇಲ್ಲಿದ್ದೇನೆ ಎಂಬ ಅರಿವಾದರೂ ನಿಮಗಿದೆಯೆ? ರಾತ್ರಿ, ಹಗಲು ನೀವಾಯಿತು ನಿಮ್ಮ ಪ್ರಯೋಗಶಾಲೆಯಾಯಿತು.

ವಿಶ್ವಾಮಿತ್ರ: (ಅವಳನ್ನು ತಪ್ಪಿಸಿಕೊಂಡು ಹೋಗುವಂತೆ) ಇರಲಿ, ಇರಲಿ. ನಿಧಾನವಾಗಿ ಮಾತನಾಡೋಣ. ನನಗೆ ಸ್ವಲ್ಪ ಕೆಲಸವಿದೆ.

ಮೇನಕ: ನೀವು ಆ ಪ್ರಯೋಗಶಾಲೆಯನ್ನೇ ಮದುವೆಯಾದ ಹಾಗಿದೆ.

ವಿಶ್ವಾಮಿತ್ರ: ಹೌದು ಮೇನಕ. ಒಂದು ದೃಷ್ಟಿಯಿಂದ ಹಾಗೆಯೇ. ನೀನಿನ್ನು ವಿಶ್ರಮಿಸಿಕೋ, ಮಲಗಿಕೋ; ಹೊತ್ತಾಯಿತು.

ಮೇನಕ: ನೀವು?

ವಿಶ್ವಾಮಿತ್ರ: ಪ್ರಯೋಗಶಾಲೆಯಲ್ಲಿ ಸ್ವಲ್ಪ ಕೆಲಸವಿದೆ.

ಮೇನಕ: ಸ್ವಲ್ಪ ಕೂಡ್ರಿ. ನನ್ನದೊಂದು ಮಾತು ಕೇಳಿ.

ವಿಶ್ವಾಮಿತ್ರ: ಇಲ್ಲಿ ನೋಡು ಮೇನಕ. ವಿಜ್ಞಾನಿಗಳ ಹೆಂಡತಿಯರು ಅವರ ಕೆಲಸದಲ್ಲಿ ಸಹಕಾರಿಗಳಾಗಬೇಕು. ಅದಕ್ಕೆ ಅಡ್ಡಿಯಾಗಬಾರದು.

ಮೇನಕ: ಹೋಗಲಿ. ನಿಮ್ಮ ಪ್ರಯೋಗವಾದರೂ ಏನು ಹೇಳಿ.

ಶೇ:—ನಿಜ, ಇನ್ನು ಯಾರೇ ಆಗಲಿ ಹೊರಗಿನ ಆಡಂಭರವನ್ನು ನೋಡಿ ನಂಬುವುದು........

ಇನ್ಸ್:—ಡಾಕ್ಟರರೇ! ಈ ಶೇಟ್‌ರೊಂದಿಗೆ ನೀವೂ ಸ್ಟೇಶನಿಗೆ ಬರಬೇಕಾಗಿದೆ?

ಡಾ:—ಆಗಲಿ! "ಹಳ್ಳದೊಂದಿಗೆ ಹನಿ!''

(ಒಂದು ಬಂಗಾಳಿ ಕಥೆಯ ತಿರುಳು)

ವಿಶ್ವಾಮಿತ್ರ: ನಿನಗೆ ಅದು ಅರ್ಥವಾಗುವುದಿಲ್ಲ.

ಮೇನಕ: ಅದರ ಗುರಿ ಏನು ಹೇಳಿ. ಅದು ನಿಜವಾಗಿ ಪ್ರಯೋಜನಕಾರಿಯಾದದ್ದಾದರೆ ನಾನು ಅದಕ್ಕೆ ಅಡ್ಡಿಬರುವುದಿಲ್ಲ.

ವಿಶ್ವಾಮಿತ್ರ: ಅದು ಒಪ್ಪುವ ಮಾತು. ಲೋಕಕಲ್ಯಾಣವೇ ಅದರ ಗುರಿ. ಕೇಳು ಮೇನಕ—ಪ್ರಪಂಚ ಯುದ್ಧದ ಬೇಗೆಯಿಂದ ಬೇಸತ್ತಿದೆ. ಯುದ್ಧಗಳ ಮಾತು ಮುಗಿಯಲಿ ಎಂದು ದೊಡ್ಡ ಯುದ್ಧವನ್ನೇ ಮಾಡಿಯಾಯಿತು. ಆದರೆ ಅದರಿಂದ ಯುದ್ಧಭಯ ಹೋಗಲಿಲ್ಲ. ಇನ್ನು ಮುಂದೆ ಯುದ್ಧ ನಡೆಯುವುದೂ ಬಿಡುವುದೂ ವಿಜ್ಞಾನಿಗಳ ಮೇಲೆ ನಿಂತಿದೆ. ನಾವದನ್ನು ಕೊನೆಗಾಣಿಸಿಬಿಡುತ್ತೇವೆ. ಹೇಳು ಮೇನಕ. ಅದು ಪ್ರಯೋಜನಕಾರಿಯಲ್ಲವೆ?

ಮೇನಕ: ನೀವು ಹೇಳುವುದು ನಿಜವಾಗಿ ಸಾಧ್ಯವಾಗುವುದಾದರೆ ಪ್ರಯೋಜನಕಾರಿಯೇ. ಆದರೆ ಯುದ್ಧವನ್ನು ಹೇಗೆ ಕೊನೆಗಾಣಿಸುತ್ತೀರಿ ಹೇಳಿ.

ವಿಶ್ವಾಮಿತ್ರ: ನಮ್ಮನ್ನು ಜಯಿಸಲಾರದಂತಹ ಮಾರಕಾಸ್ತ್ರಗಳನ್ನು ತಯಾರುಮಾಡುತ್ತೇವೆ. ನಮ್ಮ ಬಳಿ ಇತರರು ಯುದ್ಧದ ಸುದ್ದಿ ಎತ್ತದಂತೆ ಭಯ ಹುಟ್ಟಿಸುತ್ತೇವೆ.

ಮೇನಕ: ನಿಮ್ಮ ಮಾತು ಬಹು ತಮಾಷೆಯಾಗಿ ಕಾಣುತ್ತದೆ. ಮಾರಕಾಸ್ತ್ರಗಳಿಂದ ಯುದ್ಧಗಳನ್ನು ಮುಗಿಸುವುದೇ! (ನಗುವಳು.) ಅದು ಬರೀ ಭ್ರಮೆ. ನೀವುಗಳು ತುಂಬಾ ಮೇಧಾವಿಗಳೆಂಬುದು ನನಗೆ ಗೊತ್ತು. ಆದರೆ ಮಾನವರ ಸ್ವಭಾವವೇನೆಂಬುದನ್ನು ನಾನೂ ತಿಳಿದಿದ್ದೇನೆ. ನೀವು ಒಂದು ಮಾರಕಾಸ್ತ್ರವನ್ನು ಕಂಡುಹಿಡಿದರೆ ನಿಮ್ಮ ಶತ್ರುಗಳು ಭಯಪಡುವುದು ನಿಜ. ಆದರೆ ಅವರು ಹಾಗೆ ಸುಮ್ಮನೆ ಕೂಡುವುದಿಲ್ಲ. ಇನ್ನೂ ಹೆಚ್ಚು ಹಾನಿ ಮಾಡುವ ಮಾರಕಾಸ್ತ್ರಗಳನ್ನು ತಯಾರು ಮಾಡಲು ಪ್ರಯತ್ನಪಡುವರು. ಅವರು ಅದನ್ನು ಸಾಧಿಸುವ ವರೆಗೆ ನಿಮ್ಮ ಮನಸ್ಸಿಗೆ ನೆಮ್ಮದಿ, ಅವರದನ್ನು ಸಾಧಿಸಿದರೆಂದರೆ ನಿಮಗೆ ಭಯ. ನೀವಿನ್ನೊಂದು ಅದಕ್ಕಿಂತ ಹೆಚ್ಚಿನ ಭಯಂಕರವಾದ ಅಸ್ತ್ರವನ್ನು ತಯಾರು ಮಾಡುತ್ತೀರಿ. ಹೀಗೆ ಸ್ಪರ್ಧೆಗೆ ಪ್ರತಿಸ್ಪರ್ಧೆಯಾಗಿ ಒಬ್ಬರಲ್ಲದಿದ್ದರೆ ಇನ್ನೊಬ್ಬರು ಭಯದಲ್ಲಿ ಸಂಶೋಧನೆಯಲ್ಲಿ ತೊಳಲಬೇಕು. ಇದಕ್ಕೆ ಕೊನೆಯಿದೆಯೆ? ಈ ಮಾರಕಾಸ್ತ್ರಗಳ ಮೇಲೆ ಯುದ್ಧ ವಿಜೃಂಭಿಸುತ್ತದೆ. ಲೋಕವನ್ನೇ ನಾಶಮಾಡುತ್ತದೆ.

ವಿಶ್ವಾಮಿತ್ರ: (ಮಾತಿನಲ್ಲಿ ಸೋತರೂ ತೋರ್ಪಡಿಸದೆ) ಮೇನಕ, ವಿಶ್ವಾಮಿತ್ರನೂ ನಿನ್ನ ಕೈಲಿ ಹೇಳಿಸಿಕೊಳ್ಳಬೇಕೆ? ನನ್ನ ಸೃಷ್ಟಿಯ ರಹಸ್ಯಗಳನ್ನು ಇತರರು ಸಾಧಿಸಲಾರರು. ನನ್ನ ಆಯುಧಗಳನ್ನು ಕೇವಲ ಹೆಂಗಸರು ಕೂಡ ಉಪಯೋಗಿಸಬಹುದು.

ಮೇನಕ: (ಆಶ್ಚರ್ಯದಿಂದ) ಹೆಂಗಸರೆ? ಮಾರಕಾಸ್ತ್ರಗಳನ್ನು ಉಪಯೋಗಿಸುವುದೆ? ಛೆ, ಛೆ, ನೀವು ಹೇಳುವುದು ಘಾಯಗೊಂಡವರ ಶುಶ್ರೂಷೆಗಾಗಿ ಹೆಂಗಸರು ಯುದ್ಧರಂಗವನ್ನು ಪ್ರವೇಶಿಸುತ್ತಾರೆ—ಎಂದಲ್ಲವೆ? ಅದಲ್ಲವೆ ನಿಮ್ಮ ಅರ್ಥ?

ವಿಶ್ವಾಮಿತ್ರ: ಅಲ್ಲ. ಅವರೂ ಯುದ್ಧಮಾಡುತ್ತಾರೆ.

ಮೇನಕ: ಹಾಗಾದರೆ ಮಾನವನ ಸುಖ ಈ ಪ್ರಪಂಚದಲ್ಲಿ ಮುಕ್ತಾಯವಾದ ಹಾಗೇ ಸರಿ.

ವಿಶ್ವಾಮಿತ್ರ: ಏಕೆ?

ಮೇನಕ: ಈ ನಿಸ್ಸಾರವಾದ ಪ್ರಪಂಚದಲ್ಲಿ ಗಂಡಸಿಗೆ ಅಲ್ಪ ಸ್ವಲ್ಪ ಸುಖವಿದೆಯೆನ್ನುವುದಾದರೆ ಅದು ಹೆಂಗಸಿನಿಂದ. ಆ ಹೆಂಗಸು ಕೂಡ ಯುದ್ಧರಂಗವನ್ನು ಪ್ರವೇಶಿಸುವುದಾದರೆ ಅವಳ ಹೆಣ್ಣುತನ ಅಂದಿಗೆ ತೀರಿತು. ಅವಳು ಗಂಡುಬೀರಿಯಾಗುತ್ತಾಳೆ. ಕೋಮಲವಾದ ಅವಳ ಅಂಗಗಳು ಗಡುಸಾಗುತ್ತವೆ. ಸ್ತ್ರೀ ಸಹಜವಾದ ದಯೆ, ಕ್ಷಮೆ ಮುಂತಾದ ಗುಣಗಳು ಮಾಯವಾಗುತ್ತವೆ. ಅಲ್ಲಿಗೆ ಈ ಗಂಡಸು ತನ್ನ ಸುಖಕ್ಕೆ ಬಂಡೆಯೆಳೆದುಕೊಂಡ ಹಾಗೇ ಆಗುತ್ತದೆ. ಇಲ್ಲಿ ಕೇಳಿ. ನಿಮ್ಮ ಮನಸ್ಸು ಇನ್ನೂ ಯುದ್ಧದ ಅಮಲಿನಲ್ಲಿ ಇದೆ. ಇಲ್ಲಿ ಸ್ವಲ್ಪ ವಿಶ್ರಮಿಸಿಕೊಳ್ಳಿ. ಮನಸ್ಸು ತಿಳಿಗೂಡಲಿ. ಲೋಕಕಲ್ಯಾಣದ ಮಾರ್ಗ ಆಗ ಹೊಳೆದೀತು.

ವಿಶ್ವಾಮಿತ್ರ: (ಆ ಮಾತಿಗೆ ಉತ್ತರ ಕೊಡಲಾರದೆ ಮಾತು ಮರೆಸುತ್ತಾ) ನಾವು ಮಾತ್ರ ಶಸ್ತ್ರಾಸ್ತ್ರಗಳ ತಯಾರಿಕೆಗೆ ತೊಡಗುತ್ತಿಲ್ಲ ಮೇನಕ. ನಮ್ಮ ಪೂರ್ವಿಕರೂ ಹಾಗೇ ಅಂತಹ ಮಾರಕಾಸ್ತ್ರಗಳ ತಯಾರಿಕೆಯಲ್ಲಿ ತೊಡಗಿದ್ದರು. ನಮ್ಮ ಪುರಾಣ ಪುಣ್ಯಕತೆಗಳಲ್ಲಿ ಬರುವ ಆಗ್ನೇಯಾಸ್ತ್ರ ವಾರುಣಾಸ್ತ್ರ ವಾಯುವ್ಯಾಸ್ತ್ರ ಸಂಮೋಹನಾಸ್ತ್ರವೇ ಮುಂತಾದ ಮಹಾಸ್ತ್ರಗಳನ್ನು ಕೇಳಿಲ್ಲವೆ?

ಮೇನಕ: ಹೌದು. ಈಗ ಅವೆಲ್ಲಾ ಇಲ್ಲ—ಅಲ್ಲವೆ?

ವಿಶ್ವಾಮಿತ್ರ: ಇಲ್ಲ. ಅದರ ಬದಲು ನಾವು ಬೇರೆ ಅಸ್ತ್ರಗಳನ್ನು ಕಂಡುಹಿಡಿಯುತ್ತಿದ್ದೇವೆ.

ಮೇನಕ: ನೀವು ಕಂಡುಹಿಡಿಯುವುದಿರಲಿ. ಆ ಹಳೆಯ ಅಸ್ತ್ರಗಳೇನಾದುವು?

ವಿಶ್ವಾಮಿತ್ರ: ಗೊತ್ತಿಲ್ಲ. ಅವುಗಳ ತಿಳಿವಳಿಕೆ ಜನಾಂಗದಲ್ಲಿ ಉಳಿದು ಬರಲಿಲ್ಲ.

ಮೇನಕ: ಉಳಿದು ಬರದಿರಲು ಕಾರಣವೇನು? ಗೊತ್ತೆ?

ವಿಶ್ವಾಮಿತ್ರ: ಉಹು. ಯಾರಿಗೂ ತಿಳಿಯದು.

ಮೇನಕ: ಸ್ವಲ್ಪ ಊಹಿಸಿದರೆ ತಿಳಿದೀತು. ನಮ್ಮ ಹಿರಿಯರ ವಿಜ್ಞಾನ ಬದುಕಿನ ವಿಜ್ಞಾನ, ಸಾವಿನದಲ್ಲ. ಈಗಿನ ವಿಜ್ಞಾನಿಗಳ ಹಾಗೆ ಒಂದು ಅಮಲಿನಲ್ಲಿ ಅಂತಹ ಮಾರಕಾಸ್ತ್ರಗಳನ್ನು ತಯಾರಿಸಿದರು. ಪ್ರಯೋಗಿಸಿದರು. ಅವರ ಅನುಭವದಲ್ಲಿ ಅದು ಲೋಕ ಕಲ್ಯಾಣಕ್ಕಿಂತ ಲೋಕ ವಿನಾಶ

ಮಾಡುವುದೆಂದು ತಿಳಿದುಬಂತು. ಅಂತಹ ಲೋಕ ವಿನಾಶ ಕಾರಿಯಾದ ಜ್ಞಾನ, ಬುದ್ಧಿಯನ್ನು ಸ್ವಾಧೀನದಲ್ಲಿಟ್ಟುಕೊಳ್ಳಲಾರದ ಮಾನವರ ಸೊತ್ತಾದರೆ, ಜನಕ್ಕೆ ನೆಮ್ಮದಿಯಿಲ್ಲವೆಂದು ತೀರ್ಮಾನಿಸಿ ಅವರು ಆ ತಿಳಿವಳಿಕೆಯನ್ನು ಹರಡದಂತೆ ತಡೆಗಟ್ಟಿದರು. ಅದರಿಂಪಲೇ ಲೋಕ ಇದುವರೆಗೂ ಉಳಿದು ಬಂದಿತು. ಅಲ್ಲವೆ?

ವಿಶ್ವಾಮಿತ್ರ: ಈ ಮಾರಕಾಸ್ತ್ರಗಳ ತಯಾರಿಕೆಯ ವಿಷಯದಲ್ಲಿ ನನಗೂ ನಿನಗೂ ಒಮ್ಮತಸಮ್ಮತವಿಲ್ಲದೆ ಹೋದರೂ........

ಮೇನಕ: ಒಮ್ಮ-ಸಮ್ಮತವಾಗಬೇಕೆಂಬುದು ನನ್ನ ಇಷ್ಟ. ನನ್ನದು ಹೆಣ್ಣು ಮನಸ್ಸು. ಹೆಣ್ಣಿನ ಆಶಯಗಳನ್ನು ಅದು ಪ್ರತಿಬಿಂಬಿಸುತ್ತದೆ. ಪ್ರಪಂಚದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚಿನ ಸಂಖ್ಯೆ ಹೆಣ್ಣಿನದು. ಗಂಡಸರು ಅದನ್ನು ಹಾಗೆ ಅಲಕ್ಷ್ಯ ಮಾಡಲಾಗದು. ಯೋಚಿಸಿನೋಡಿ.

ವಿಶ್ವಾಮಿತ್ರ: ಆಗಲಿ, ಅದರ ವಿಚಾರ ಆ ಮೇಲೆ ನೋಡೋಣ. ಈಗ ನೋಡು; ನನ್ನ ವೈಜ್ಞಾನಿಕ ಪ್ರಯೋಗಶಾಲೆಯಲ್ಲಿ ಮಾರಕಾಸ್ತ್ರಗಳು ಮಾತ್ರ ಪ್ರಯೋಗವಾಗುತ್ತಿಲ್ಲ. ಮಾರಕಾಸ್ತ್ರಗಳ ಮಾತು ಬಂದು ಇಷ್ಟು ಕಾಲ ಮಾತಿನಲ್ಲಿ ಕಳೆದು ಹೋಯಿತು.

ಮೇನಕ: ಒಳ್ಳೆಯದೇ ಆಯಿತು. ಯೋಚನೆಗೆ ಹೊಸ ದಾರಿ ಒದಗಿಸಿದಂತಾಗಲಿಲ್ಲವೆ?

ವಿಶ್ವಾಮಿತ್ರ: ಅದೂ ನಿಜ. ಆದರೆ ನಿನಗೆ ನಮ್ಮ ಸಂಶೋಧನೆಯ ವಿಚಾರದಲ್ಲಿ ಅಷ್ಟು ನಿಕೃಷ್ಟಭಾವನೆ ಬರಲು ಕಾರಣವೇನೆಂಬುದನ್ನು ನಾನು ಊಹಿಸಲಾರೆ.

ಮೇನಕ: ಸಂಶೋಧನೆಯ ವಿಚಾರದಲ್ಲಿಲ್ಲ, ಗುರಿಯ ವಿಚಾರದಲ್ಲಿ.

ವಿಶ್ವಾಮಿತ್ರ: ಅದು ಹೇಗಾದರೂ ಇರಲಿ. ನಮ್ಮ ಸಂಶೋಧನೆಗಳು ಪ್ರಪಂಚದಲ್ಲಿ ಮಾನವರ ಜೀವನ ರೀತಿಯನ್ನೇ ಬದಲಾಯಿಸಿ ಬಿಟ್ಟವೆ. ನಾವು ಪ್ರಕೃತಿಯನ್ನು ಗೆದ್ದಿದ್ದೇವೆ. ನೆಲ ಜಲ ಆಕಾಶಗಳನ್ನು ಗೆದ್ದಿದ್ದೇವೆ. ಹಿಂದಿನ ಸಂಪ್ರದಾಯಗಳು ಮೂಢ ನಂಬಿಕೆಗಳು ಮಾಯವಾಗುವಂತೆ ವಸ್ತು ವಿಷಯ ಜ್ಞಾನಕ್ಕೆ ಕಾರ್ಯ ಕಾರಣ ಸಂಬಂಧವನ್ನು ಕಲ್ಪಿಸಿದ್ದೇವೆ. ಮಾನವನ ದೇಹಶ್ರಮ ಕಡಿಮೆಯಾಗುವಂತೆ ಯಂತ್ರೋಪಕರಣಗಳನ್ನು ನಿರ್ಮಿಸಿದ್ದೇವೆ. ಸುಖ ಸಾಧನ ಸಾಮಗ್ರಿಗಳನ್ನು ತಯಾರಿಸುತ್ತಿದ್ದೇವೆ. ಈಜುವ ಊರುಗಳನ್ನೇ ನಿರ್ಮಿಸಿದ್ದೇವೆ. ಹಾರಾಡುವ ಮನೆಗಳನ್ನೇ ಕಟ್ಟಿದ್ದೇವೆ. ವಾಹನ ಸೌಕರ್ಯದಿಂದ ಊರ ದೂರಗಳನ್ನು ಕಡಿಮೆ ಮಾಡಿದ್ದೇವೆ. ಸಿಡಿಲು ಮಿಂಚುಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ದೀಪವನ್ನು ಕೊಟ್ಟದ್ದೇವೆ. ದೂರ ದೂರಿನ ಸಂಗೀತ ಮುಂದೆ ಕುಳಿತು ಹೇಳುವಂತೆ ಹೇಳಿದಹಾಗೆ ಕೇಳುವಂತೆ ಮಾಡಿದ್ದೇವೆ. ಹೇಳುತ್ತಾ ಹೋದರೆ ಅದಕ್ಕೆ ಕೊನೆ ಮೊದಲಿಲ್ಲ. ನಮ್ಮ ಸಂಶೋಧನೆಗಳ ಹಿರಿಮೆ ನಿನಗೆ ಅರ್ಥವಾಗುವುದಿಲ್ಲವೆ? ಭೂಮಿಯ ಸ್ವರೂಪವನ್ನೇ ಮಾರ್ಪಡಿಸಿದ್ದೇವೆ.

ಮೇನಕ: ಹೆಂಗಸಿನ ಅಥವಾ ಗಂಡಸಿನ ಮುಖ ಮೈಗಳ ಸ್ವರೂಪವನ್ನು ಬದಲಾಯಿಸಬಲ್ಲಿರಾ?........ಕುರೂಪಿಗಳನ್ನು ಸುರೂಪಿಗಳನ್ನಾಗಿ ಮಾಡಬಲ್ಲಿರಾ?........

ವಿಶ್ವಾಮಿತ್ರ: (ಸ್ವಲ್ಪ ಹೊತ್ತು ಯೋಚಿಸಿ) ಓ....ಓಹೋ ಮಾಡಬಲ್ಲೆವು. 'ಪ್ಲಾಸ್ಟಿಕ್ ಸರ್ಜರಿ' ಅಂತ ಕೇಳಿಲ್ಲವೆ? ಮೂಗು ಮೊಂಡಾಗಿದ್ದರೆ ಅದಕ್ಕೆ ತೇಪೆ ಹಾಕಿ ರೋಮನರ ಮೂಗಿನಂತೆ ಮಾರ್ಪಡಿಸಬಲ್ಲೆವು. ಸುಕ್ಕು ಬಿದ್ದ ಮುಖವನ್ನು ಜೋತು ಬಿದ್ದ ಅಂಗಗಳನ್ನು ಗುಳಿಬಿದ್ದ ಗಲ್ಲವನ್ನು ಪುನಃ ನವಯೌವನದ ಅಂಗಾಂಗಗಳಂತೆ ಕಾಣುವ ಹಾಗೆ ಮಾಡಬಲ್ಲೆವು. ಮೊಮ್ಮಕ್ಕಳನ್ನು ಪಡೆದ ಮುದುಕಿಯನ್ನು ಕೂಡ ಹದಿನಾರು ವರ್ಷದ ತುಂಬು ಯೌವನೆಯಾಗಿ ಕಾಣುವಂತೆ ಮಾಡಬಲ್ಲೆವು. ಹೆಂಗಸರು ಚಿರಯೌವನೆಯರಾಗಿರುವಂತೆ ಮಾಡುಬಲ್ಲೆವು.

ಮೇನಕ: ಅದು ಮೆಚ್ಚಬೇಕಾದದ್ದು.

ವಿಶ್ವಾಮಿತ್ರ:, ಅಷ್ಟೇ ಅಲ್ಲ. ಇನ್ನೂ ಆಶ್ಚರ್ಯಕರವಾದುದನ್ನು ಮಾಡಬಲ್ಲೆವು.

ಮೇನಕ: ಏನದು?

ವಿಶ್ವಾಮಿತ್ರ: ಗಂಡಸಿನ ಸಂಪರ್ಕವಿಲ್ಲದೆ ಹೆಂಗಸು ಮಕ್ಕಳನ್ನು ಪಡೆಯಲು ಬಯಸಿದರೆ ಅದನ್ನೂ ಸಾಧಿಸಿಕೊಡಬಲ್ಲೆವು.

ಮೇನಕ: ಆದರೆ ಒಂದು ಪ್ರಶ್ನೆ?........ಹೆಂಗಸು ಅದಕ್ಕೆ ಒಪ್ಪುತ್ತಾಳೇನು?

ವಿಶ್ವಾಮಿತ್ರ:........ನನಗೆ ತಿಳಿಯದು.

ಮೇನಕ: ನಿಮ್ಮ ಪ್ರಯೋಗ ತಪ್ಪು ದಾರಿಗೆ ಹೋಗುತ್ತಿರುವಂತೆ ತೋರುತ್ತೆ. ಹಾಗಾದರೆ ಇನ್ನೊಂದು ಪ್ರಶ್ನೆ ಹೆಂಗಸಿನ ಸಂಪರ್ಕವಿಲ್ಲದೆ ಗಂಡಸು ಮಕ್ಕಳನ್ನು ಪಡೆಯಬಲ್ಲನೆ?

ವಿಶ್ವಾಮಿತ್ರ: ಇಲ್ಲ ಮೇನಕ. ಅದು ಸಾಧ್ಯವಿಲ್ಲ.

ಮೇನಕ: ನಿಮ್ಮ ವಿಜ್ಞಾನ ಸಾಧಿಸುವುದಕ್ಕೂ ಒಂದು ಮಿತಿ ಇದೆ, ಎಲ್ಲೆ ಇದೆ ಅಲ್ಲವೆ?

ವಿಶ್ವಾಮಿತ್ರ: ಮಿತಿ ಇರಬಹುದು. ಆದರೆ ವಿಜ್ಞಾನ ಹೊಸ ದೇವತೆಗಳನ್ನು ಸೃಷ್ಟಿಮಾಡುತ್ತಿದೆ. ಹಿಂದಿನ ದೇವರುಗಳೆಲ್ಲಾ ಕಳೆದು ಉರುಳಿದ್ದಾರೆ. ಹೊಸ ದೇವತ್ವ ಬಂದಿದೆ. ಹೊಸ ದೃಷ್ಟಿ ಮೂಡಿದೆ.

ಮೇನಕ: ಹೌದು, ಹೊಸ ದೇವತ್ವ ಬಂದಿದೆ. ಹಳೆಯ ದೇವರುಗಳು ಮಾಯವಾಗುತ್ತಾರೆ. ಆ ಮೇಲೆ?

ವಿಶ್ವಾಮಿತ್ರ: ನನ್ನ ಪ್ರಯೋಗ ಮುಂದುವರಿಯುತ್ತದೆ.

ಹೊಸ ದೇವತೆಗಳು ಬರುತ್ತಾರೆ.

ಮೇನಕ: ಆ ಮೇಲೆ.

ವಿಶ್ವಾಮಿತ್ರ: ಅವರೂ ಸಾಯುತ್ತಾರೆ.

ಮೇನಕ: ಆ ಮೇಲೆ.

ವಿಶ್ವಾಮಿತ್ರ: ಅವರೂ ಸಾಯುತ್ತಾರೆ. ವಿಜ್ಞಾನಿ ತನ್ನ ಕಾರಾಗಾರದಲ್ಲಿ ಕುಳಿತು ವಿಜ್ಞಾನವನ್ನು ಬೆಳೆಸಿ ಜ್ಞಾನವನ್ನು ಹರಡಿದ ಹಾಗೆಲ್ಲಾ ಹೊಸ ದೇವತೆಗಳು ಸೃಷ್ಟಿಯಾಗುತ್ತಲೂ ಹಳೆಯವರು ಮಾಯವಾಗುತ್ತಲೂ ಬರುತ್ತಾರೆ.

ಮೇನಕ: ಅದಕ್ಕೆ ಕೊನೆಯೇ ಇಲ್ಲವೆ?

ವಿಶ್ವಾಮಿತ್ರ: ಇದೆ. ನಾವು ಒಂದೊಂದು ಸೃಷ್ಟಿಯ ರಹಸ್ಯವನ್ನು ಭೇದಿಸಿದಾಗಲೂ ಆಯಾ ಅಭಿಮಾನಿ ದೇವತೆ ಮಾಯವಾಗುತ್ತದೆ. ನಾವು ಸಂತತವಾಗಿ ನಮ್ಮ ಕಾರಾಗಾರ ದಲ್ಲಿ ಸಂಶೋಧನೆಗಳನ್ನು ನಡೆಸುತ್ತಲೇ ಇರುತ್ತೇವೆ.

ಮೇನಕ: ಆ ಸಂಶೋಧನೆಗಳಿಗೆ ಮುಕ್ತಾಯವೆಲ್ಲಿ.

ವಿಶ್ವಾಮಿತ್ರ: ಎಂದಿಗೆ ಸೃಷ್ಟಿಯ ರಹಸ್ಯವೆಲ್ಲಾ ಮಾನವ ನಿಗೆ ಕೈಗತವಾಗುವುದೋ ಅಂದೇ ಅದಕ್ಕೆ ಮುಕ್ತಾಯ.

ಮೇನಕ: ಅಂದಿಗೆ ಎಲ್ಲ ದೇವರೂ ಮಾಯವಾಗಿರು ತ್ತಾರಷ್ಟೆ?

ವಿಶ್ವಾಮಿತ್ರ: ಹೌದು.

ಮೇನಕ: ಹೊಸ ದೇವರುಗಳಾರಾದರೂ ಹುಟ್ಟಿರು ತ್ತಾರೆಯೋ ಹೇಗೆ?

ವಿಶ್ವಾಮಿತ್ರ: ಅಂದಿಗೆ ವಿಜ್ಞಾನಿಯೇ ದೇವರು.

ಮೇನಕ: ದೈವತ್ವದ ಪಟ್ಟ ಅಷ್ಟು ಸುಲಭವಾಗಿ ದೊರಕ ತಕ್ಕ ವಸ್ತುವಲ್ಲ. ಸೃಷ್ಟಿಯ ರಹಸ್ಯವನ್ನು ಹೊರಗೆಡಹಿದ ಮಾತ್ರಕ್ಕೇ ವಿಜ್ಞಾನಿಯು ದೇವರಾಗುವುದಿಲ್ಲ.

ವಿಶ್ವಾಮಿತ್ರ: ಅವನಿನ್ನೇನು ಮಾಡಬೇಕೆನ್ನುತ್ತಿ?

ಮೇನಕ: ಮೊದಲು ನಿಮ್ಮ ಗುರಿ ಬದಲಾಗಬೇಕು. ಯುದ್ಧ—ಗೆಲುವುಗಳ ಗೊಂದಲವನ್ನು ಬಿಡಿ. ಮಾನವ ಸೇವೆಯ ಹೊಸ ಆದರ್ಶವನ್ನು ಕಲ್ಪಿಸಿಕೊಳ್ಳಿ. ಅವರ ಸುಖ ಶಾಂತಿ ನಿಮ್ಮ ಗುರಿಯಾಗಿರಲಿ. ಛಳಿ, ಮಳೆ-ಗಾಳಿ, ಪ್ರವಾಹ, ಭೂಕಂಪ, ಕ್ಷಾಮ—ಇತ್ಯಾದಿ ನೋವು ನರಕ ಗಳಿಂದ ಅವನನ್ನು ಉದ್ಧಾರ ಮಾಡುವ ಮಾರ್ಗವನ್ನು ತೋರಿಸಿ ಕೊಡಿ. ಹೊಟ್ಟೆಯ ತುಂಬ ಹಿಟ್ಟು, ಮೈ ತುಂಬ ಬಟ್ಟೆ, ವಾಸಿಸುವುದಕ್ಕೆ ಮನೆ—ಇವನ್ನು ಯಥೇಚ್ಛವಾಗಿ ದೊರಕಿಸಿ ಕೊಡಿ. ಅವರ ಹಸಿವನ್ನು ಹಿಂಗಿಸಿದರೆ ಯುದ್ಧ ಮಾರಿ ಸತ್ತಂತೆಯೇ ಸರಿ. ಸುಖವಾಗಿರುವವನು ಯುದ್ಧ ವನ್ನೇಕೆ ಅಪೇಕ್ಷಿಸುತ್ತಾನೆ. ಇಷ್ಟನ್ನು ನೀವು ಸಾಧಿಸಿದರೆ, ನೀವು ದೇವರಾಗದೆ ಇದ್ದರೂ ಜನ ನಿಮ್ಮನ್ನು ದೇವರಂತೆ ಕಾಣುತ್ತದೆ.

ವಿಶ್ವಾಮಿತ್ರ: (ಉತ್ಸಾಹದಿಂದ) ನಾವೇ ದೇವರಾಗುತ್ತೇವೆ.

ಮೇನಕ: (ಇಲ್ಲನೆಂದು ತಲೆಯಾಡಿಸುತ್ತಾ) ಉಹು. ನೀವು ದೇವರಾಗಲಾರಿರಿ.

ವಿಶ್ವಾಮಿತ್ರ: ಮತ್ತಿನ್ನಾರು ದೇವರಾಗುತ್ತಾರೆ.

ಮೇನಕ: (ನಕ್ಕು, ತನ್ನ ಕಡೆಗೆ ಬೆರಳು ತೋರಿಸುತ್ತಾ) ನಾನು, ನಾವು, ಹೆಣ್ಣು, ಹೆಂಗಸು........

ವಿಶ್ವಾಮಿತ್ರ: ನೀನು....ಹೆಣ್ಣು....ಅದು ಹೇಗೆ?

ಮೇನಕ: ನೀವು ಪ್ರಪಂಚವನ್ನೇ ತಲೆಕೆಳಗು ಮಾಡ ಬಹುದು, ಬದಲಾವಣೆ ಮಾಡಬಹುದು. ಆದರೆ ನಾನು ಹೀಗೆಯೇ ಇರುತ್ತೇನೆ. ದೇವತೆಗಳು ಮಾಯವಾಗಬಹುದು. ನಾನು ಹೀಗೆಯೇ ಇರುತ್ತೇನೆ. ಜನ ಬಾಯಿ ಬಿಡುವ ಸೌಂದರ್ಯದ ಪುತ್ಥಳಿಯಾಗಿ, ದೇವಲೋಕದ ಅಪ್ಸರೆಯಾಗಿ, ನವವಧುವಾಗಿ, ಮಕ್ಕಳ ತಾಯಾಗಿ, ಪ್ರಿಯರ ಪ್ರೇಯಸಿ ಯಾಗಿ, ಪೂಜಿಸಲ್ಪಡುತ್ತಾ ಇರುತ್ತೇನೆ. ಪ್ರೇಮಿಸಲ್ಪಡುತ್ತಾ ಪ್ರಪಂಚದ ರಹಸ್ಯವನ್ನು ನೀವು ಭೇದಿಸಬಹುದು. ಆದರೆ ನಾನೊಂದು ಗೂಢ ತತ್ವವಾಗಿಯೇ ಇರುತ್ತೇನೆ. ನನ್ನ ರಹಸ್ಯವನ್ನು ಯಾರೂ ಭೇದಿಸಲಾರರು.

ವಿಶ್ವಾಮಿತ್ರ: ನಾವದನ್ನು ಭೇದಿಸಲಾಗುವುದಿಲ್ಲವೆ? ಪ್ರಪಂಚದ ಸೃಷ್ಟಿಯ ರಹಸ್ಯಗಳನ್ನೇ ಹೊರಗೆಡಹುತ್ತೇವೆ. ಅಂತಹುದರಲ್ಲಿ........

ಮೇನಕ: ಇಲ್ಲ. ನನ್ನ ರಹಸ್ಯ ಭೇದಿಸಲಸಾಧ್ಯ ವಾದುದು. ಅದು ಹಾಗೇ ಇರಬೇಕು.

ವಿಶ್ವಾಮಿತ್ರ: ಅದೇತಕ್ಕೆ ಹಾಗೇ ಇರಬೇಕು?


ಮೇನಕ: ಮಕ್ಕಳು ಆಟದ ಸಾಮಾನುಗಳೊಂದಿಗೆ ಆಡಿ ಆಡಿ ಬೇಸರವಾದ ಮೇಲೆ ಬಂದು ತಾಯನ್ನಪ್ಪುವಂತೆ ಜನರು ಯುದ್ಧ, ಹೋರಾಟಗಳಿಂದ ಬಳಲಿ ಬೇಸರಗೊಂಡು ವಿಶ್ರಾಂತಿಗಾಗಿ ಸುಖಕ್ಕಾಗಿ ನನ್ನ ಬಳಿಗೆ ಬರುತ್ತಾರೆ. ಮಕ್ಕ ಳಿಗೆ ನನ್ನ ಮಡಿಲಲ್ಲಿ ಶಾಂತಿ ತೃಪ್ತಿಗಳು ಸಿಗುವಂತೆ ಅವರಿಗೂ ಶಾಂತಿ ತೃಪ್ತಿ ದೊರೆಯುತ್ತದೆ. ನನ್ನ ರಹಸ್ಯ ಅಭೇದ್ಯವಾದು ದೆಂದು ಅವರಿಗೆ ಗೊತ್ತು. ಅಂಥ ತಮಸ್ಸೂ ನಾನೇ. ಜಗಜ್ಯೋತಿಯೂ ನಾನೇ. ಈ ಲೋಕದಲ್ಲಿ ಎಂದಾದರೂ ನನ್ನ ಬೆಳಕು ನಂದಿದರೆ ಅಂದೇ ಪ್ರಳಯ.

ವಿಶ್ವಾಮಿತ್ರ: ನಿಜವಾಗಿಯೂ ನೀನೊಂದು ಮಾಯೆ. ಆದರೆ ನೀನಿಂತಹ ಜ್ಯೋತಿಯನ್ನೊಳಗೊಂಡಿರುವಿಯೆಂಬು ದನ್ನು ನಾನರಿತಿರಲಿಲ್ಲ. ಅದು ಅಳಿಯದೆ ಅಮರವಾಗಿರಲಿ. ನಮಸ್ಕಾರ. (ಏಳುವನು).

ಮೇನಕ: ಏನು? ಪ್ರಯೋಗಶಾಲೆಗೆ ಹೊರಟಿರಾ?

ವಿಶ್ವಾಮಿತ್ರ: ಇನ್ನೆಲ್ಲಿಯ ಪ್ರಯೋಗಶಾಲೆ....ನೀನು ದೊಡ್ಡ ಮನಸ್ಸು ಮಾಡಿ ನಿನ್ನ ಬಳಿ ಸ್ಥಳ ಕೊಟ್ಟರೆ..........

ಮೇನಕ: ಕೊಡುತ್ತೇನೆ. ಆದರೆ ನನ್ನ ಬಳಿ ಬರು ವವರು ವಿಜ್ಞಾನಿಗಳಾಗಿ ಬರಬಾರದು.



ಜಯಪುರದ ಶ್ರೀ ಜಗತ ಶಿರೋಮಣಿ ದೇವಾಲಯದೊಳಗಿನ ಗುರುಜಿಯ ಪ್ರಾರ್ಥನಾ ಮಂದಿರದ ನೋಟ.

ವಾಲ್ಮೀಕಿಯ ಘನತೆಯನ್ನು ತೋರುವ ಲಕ್ಷ್ಮೀಶ

[ಲೇಖಕರು: ಎಸ್. ಸುಬ್ರಾಯನ್, ವಿದ್ವಾನ್.]



ಭಾರತೀಯ ವಾಙ್ಮಯಾಕಾಶದ ಸೂರ್ಯ-ಚಂದ್ರರು ವಾಲ್ಮೀಕಿ ಮತ್ತು ವೇದವ್ಯಾಸ ಮಹರ್ಷಿಗಳು. ಸೂರ್ಯ ಚಂದ್ರರ ಮೂಲಕ ಜೀವಲೋಕ ನೆಲೆದಂತೆ ಸಾಹಿತ್ಯಲೋಕ ವಾಲ್ಮೀಕಿ ಮತ್ತು ವ್ಯಾಸ ಮಹರ್ಷಿಗಳಿಂದ ನೆಲೆದಿದೆ. ವಾಲ್ಮೀಕಿ ರಾಮಾಯಣದ ರಚಕನು. ವೇದವ್ಯಾಸನು ಮಹಾ ಭಾರತದ ಕರ್ತೃ. ಇಬ್ಬರೂ ಭಾರತದ ಜನತೆಗೆ ಬೇಕಾದ ಆದರ್ಶ ಬೋಧೆಯನ್ನು ಸಾರಿದ್ದಾರೆ. ವಾಲ್ಮೀಕಿ ಉತ್ತಮ ಗೃಹಧರ್ಮ ಮತ್ತು ಆದರ್ಶ ರಾಜಧರ್ಮದ ಪ್ರಜಾಪ್ರಭುತ್ವದ ನ್ಯಾಯಶಾಸನೆಯನ್ನೂ ಅನುಸರಣೆಯನ್ನೂ ಕಾಣಿಸಿಕೊಟ್ಟಿದ್ದಾನೆ. ವೇದವ್ಯಾಸನು ಗೃಹಕಲಹದ ಮತ್ತು ಪಕ್ಷಭಾಗ ಶಾಸನೆಯ ಪ್ರಭುತ್ವದ ದೋಷವನ್ನು ತೋರಿಕೊಟ್ಟಿದ್ದಾನೆ. ರಾಜ್ಯದ ಶಾಸನೆಯ ಸತ್ತೆಯ ಇರವಿಗೆ ಐಕ್ಯತೆಯೇ ಮುಖ್ಯ. ವರ್ಣಪರ ವಿಚಾರಾನ್ವೇಷಣೆ ರಾಜಸತ್ತೆಯ ದೌರ್ಬಲ್ಯಕ್ಕೆ ಇನ್ನೂ ಪ್ರಬಲ ಕಾರಣವೆಂದು ಕಣ್ಣಿಗೆ ಹೊಳೆಯುವಂತೆ ಮಾಡಿದ್ದಾನೆ.

ನಮ್ಮ ಕನ್ನಡದ ಕವಿಕುಲ ಚೂತವನ ಚೈತ್ರ ಲಕ್ಷ್ಮೀಶ ಕವಿ ಇದನ್ನು ಚೆನ್ನಾಗಿ ಬಲ್ಲವನಿದ್ದಾನೆ. ವಾಲ್ಮೀಕಿಯ ಕುರಿತು ಅವನು ತೋರಿದ ಘನತೆಯೇನು ಎಂಬುದೇ ಪ್ರಸ್ತುತಃ ಲೇಖದ ಉದ್ದೇಶ. ಕರ್ಣಾಟಕ ಕವಿಚೂತವನ ಚೈತ್ರ ಲಕ್ಷ್ಮೀಶ ಜೈಮಿನಿ ಭಾರತವನ್ನು ಬರೆದಿರುವನು. ಕನ್ನಡ ಕವಿಗಳು ಚೂತವನಪ್ರಾಯರು. ಮಾವಿನ ತೋಪು ಬಗೆ ಬಗೆಯ ಹಕ್ಕಿಗಳ ಗಾನಕ್ಕೆ ಸ್ಥಾನ. ಮಾವಿನ ತೋಪಿನಲ್ಲಿ ಅಧಿಕವಾಗಿ ಷಟ್ಪದಿಗಳ ಝೇಂಕಾರ ತುಂಬಾ. ಇವೇ ಕಿವಿಗೆ ಮುಟ್ಟುವವು. ಚೈತ್ರಕಾಲದಲ್ಲಿ ಮಾವು ಹೂವಿನಿಂದ ತುಂಬಿದುದು; ತಳಿರಿಡಿದುದು. ಆ ಕಾಲದಲ್ಲಿನ ಷಟ್ಪದಿಗಳ ಝೇಂಕಾರ ಇನ್ನೂ ಹಿರಿದು. ಕಾವ್ಯಕರ್ತೃಗಳ ಷಟ್ಪದಿಗಳಲ್ಲಿ ಲಕ್ಷ್ಮೀಶನ ಷಟ್ಪದಿಯ ಝೇಂಕಾರ ಇಂತಹುದು; ಬಹು ಶ್ರುತವಾದುದು. ವಿದ್ವತ್ಸಭೆಯ ಕಮಲಾಕರದಲ್ಲಿ ಝೇಂಕರಿಸುವ ಷಟ್ಪದಿಗಳು ಲಕ್ಷ್ಮೀಶನವು. ಲಕ್ಷ್ಮೀಶನು ಕೊಂಡ ಸರಣಿಯಂತಹುದು. ಜೈನ ಪುರಾಣಗಳ ಕರ್ತೃಗಳಾದ ಷಡಕ್ಷರಿಯೇ ಮೊದಲಾದ ಶೈವ ಕವಿಗಳ ಛಂದಗ್ರಾಹಿಕೆಗೂ ಬೇರೆನಿಸಿದ ಷಟ್ಪದಿಯನ್ನು ವಿದ್ವತ್ಸಭಾಕಮಲಾಕರಕ್ಕೆ ಝೇಂಕರಿಸಬಿಟ್ಟನು. ಕವಿಚೂತವನಕ್ಕೆ ಚೈತ್ರಪ್ರಾಯನಾದನು; ಚೈತ್ರನೆನಿಸಿದನು. ಚೂತವನ ಜನತೆಯ ಮುಂದಿರುವ ವಸ್ತು, ಮಾವಿನ ತೋಪು ಎಲ್ಲರೂ ಕಾಣುವಂತಹುದು. ಕವಿಗಳೂ ಗ್ರಂಥರಾಶಿಗಳೂ ಕಣ್ಣಮುಂದೆ ತೋರುವವು. ಚೈತ್ರಕಾಲ ಬಂದೊಡನೆ ಮಾವು ರಮಣೀಯವೆನಿಸುತ್ತದೆ. ಕವಿಚೂತವನದ ರಮಣೀಯತೆಯ ಜಾಜ್ವಲ್ಯ ಲಕ್ಷ್ಮೀಶನ ರಚನೆಯಲ್ಲಿ. ಈ ಚೈತ್ರನ ಸ್ಥಿತಿಯಲ್ಲಿ, ಈ ಕನ್ನಡ ಕವಿಚೂತವನ ಚೈತ್ರನು ತನ್ನ ಗ್ರಂಥದಲ್ಲಿ ಭಾರತದ ಅಶ್ವಮೇಧ ಪರ್ವ ಕತೆಯನ್ನು ಸ್ವೀಕರಿಸಿದ್ದಾನೆ. ಇದನ್ನೆ ಸ್ವೀಕರಿಸುವಲ್ಲಿ ಹಲವಾರು ಕಾರಣಗಳಿವೆ. ಶ್ರೀಕೃಷ್ಣನಿಂದ ಯುಧಿಷ್ಠಿರನಲ್ಲಿ ಸ್ಥಾಪಿತವಾದ ನ್ಯಾಯವಾದ ರಾಜ್ಯಶಾಸನೆಯಲ್ಲಿ ದೇಶವಿದೇಶದ ನರಪತಿಗಳ ಸಹಕಾರದ ಅಶ್ವಮೇಧ

ವಿಶ್ವಾಮಿತ್ರ: ಮತ್ತೆ ಹೇಗೆ ಬರಬೇಕು?
ಮೇನಕ: ಪ್ರಣಯಿಯಾಗಿ........
ವಿಶ್ವಾಮಿತ್ರ: ಪ್ರೇಮವನ್ನು ಬೇಡುತ್ತಾ........
ಮೇನಕ: (ಕೈ ಚಾಚಿ) ಬಾರೆನ್ನ ಒಲವೇ!
ವಿಶ್ವಾಮಿತ್ರ: ಬಂದೆನಿದೋ ಒಲವೇ........
[ತೆರೆ ಬೀಳುವುದು]

ಯಜ್ಞ ನಡೆಗೊಳ್ಳಲು ಯುದ್ಧದ ಜಯವಲ್ಲ ಕಾರಣ; ಶಸ್ತ್ರ ಸನ್ಯಾಸದ ಬಂಧು ಭಾವನೆಯ ಚೋದನೆಯೇ. ಇದು ರಾಜ ಶಾಸನೆಯ ಪ್ರಾಬಲ್ಯತೆಗೆ ಮುಖ್ಯವೆಂದು ಅರುಹುವ ಎಲ್ಲಿ ಹೋದರೂ ಯುದ್ಧದಿಂದ ಜಯಗೊಳ್ಳದೆ ಬಂಧುತ್ವದಿಂದ ಯುಧಿಷ್ಠಿರನ ಸತ್ತೆಯನ್ನು ಪ್ರಬಲಿಸುವ, ಅರ್ಜುನನ ಯುದ್ಧಚರಿತ್ರೆ, ಸೋಲು–ಸೋಲಾದಾಗ ಬಂಧುತ್ವದ ಸವಿ ಮಾತು-ಧೈರ್ಯವಾದವನ್ನು ತೋರಿಸುವ ಶ್ರೀಕೃಷ್ಣನ ರಾಜ್ಯತಂತ್ರ ವಿಚಾರವನ್ನು ತೋರುವುದೇ ಲಕ್ಷ್ಮೀಶನಿಗೆ ಮುಖ್ಯವಾಗಿದೆ. ಜೈಮಿನಿ ಭಾರತದ ಆದ್ಯಂತಗಳ-ಯೌವನಾಶ್ವ ಹಯಗ್ರಹಣದ ವಿನಾ ಉಳಿದ ಎಲ್ಲಾ ಕಥಾಭಾಗಗಳು ಇದಕ್ಕೆ ಸಾಕ್ಷ್ಯಗಳು. ಈ ಆದರ್ಶ ಭಾವನೆಯುಳ್ಳ ಲಕ್ಷ್ಮೀಶನು ತನ್ನ ಗ್ರಂಥದಲ್ಲಿ ವಾಲ್ಮೀಕಿಯ ವಿಷಯದಲ್ಲಿ ತೋರಿದ ಗೌರವ ಪರಮೋಚ್ಚವಾದುದು.

ಶ್ರೀರಾಮನು ತನ್ನ ಇಸಿಯಳನ್ನು ರಜಕನ ನುಡಿಗಾಗಿ ಅರಣ್ಯದಲ್ಲಿ ಬಿಡುವಂತೆ ಲಕ್ಷ್ಮಣನಿಗೆ ಕಟ್ಟಪ್ಪಣೆಯನ್ನು ಕೊಟ್ಟನು. ಅದನ್ನು ಮೀರಲರಿಯದ ಲಕ್ಷ್ಮಣನು ಸೀತೆಯನ್ನು ಕಾಂತಾರಕ್ಕೆ ಕರತಂದು "ದೇವಿ ನಿನಗೆ ಈತನಕ ಪೇಳ್ದುದಿಲ್ಲ. ಅಪವಾದವಾವರಿಸಲು ನಿನ್ನನೊಲ್ಲದೆ ರಘುಕುಲೋದ್ಭವನು ಸೀಮೆ ಹರಿಸಿಬಿಟ್ಟು ಕಾಂತಾರಕ್ಕೆ ಕಳುಹಿಬಾಯೆಂದೆನಗೆ ನೇಮಿಸಿದನು. ಆ ವಿಭುವಿನ ಆಜ್ಞೆಯನ್ನು ಮೀರಲರಿಯದೆ ನಿಮ್ಮನ್ನು ಈ ವಿಪಿನಕೊಡಗೊಂಡು ಬಂದೆನು. ಇನ್ನು ಒಯ್ಯೊಯ್ಯನೆ ಆವಲ್ಲಿಗಾದೊಡಂ ಪೋಗು" ಎಂದು ಬಾಷ್ಪಲೋಚನನಾಗಿ ತನ್ನ ಕರ್ಮವನ್ನು ಮುಗಿಸಿಬಿಟ್ಟನು. ಸೀತೆ ಏಕಾಂಗಿನಿಯಾದಳು; ಶೋಕಕ್ಕೆ ಪಾತ್ರಳಾದಳು. 'ಕರುಣಾಳು ರಾಘವನಲ್ಲಿ ತಪ್ಪಿಲ್ಲ. ಕಡು ಪಾತಕವನ್ನು ಮಾಡಿ ಹೆಣ್ಣಾಗಿ ಸಂಭವಿಸಿದ ಒಡಲನ್ನು ಪೊರೆವ ಅಪರಾಧ ನನ್ನಲ್ಲುಂಟು. ನೀನಿಲ್ಲಿರಬೇಡ. ನಡೆ; ಹೋಗು. ನಿಲ್ಲದಿರು. ನಿನಗೆ ಮಾರ್ಗದಲ್ಲಿ ಅಡಿಗಡಿಗೆ ಸುಖವಾಗಲೆ"ಂದು ಹರಕೆಗೂಡಿ ಮೈದುನನ್ನು ಕಳುಹಿಯೇ ನಿಂತಿದ್ದಳು. ಈ ಎಡೆಯಲ್ಲಿ ಲಕ್ಷ್ಮೀಶನು ವಾಲ್ಮೀಕಿಯ ಆದರ್ಶ ಭಾವನೆಯನ್ನು ಬಿಟ್ಟಿಲ್ಲ. ರಾಜಮಹಿಷಿಯ ಮುಖದಿಂದ ಹೊಲಸು ಮಾತು ಬರುವಂತೆ ಮಾಡಿಲ್ಲ. ಅನ್ಯ ಸ್ತ್ರೀಯರು ರಾಜಮಹಿಷಿ ಪತಿಯನ್ನು ಲಕ್ಷಿಸಲಿಲ್ಲ. ನಾವೇಕೆ ಪತಿಯಲ್ಲಿ ಗೌರವವನ್ನು ತಳೆಯಬೇಕೆಂಬಂತೆ ಮಾಡಿಸಲಿಲ್ಲ. ವಾಲ್ಮೀಕಿ ತೋರಿದ ಆದರ್ಶ ಸತೀಧರ್ಮವನ್ನೇ ಒಯ್ಯಲು ಮಾಡಿದ್ದಾನೆ.

ಸೀತೆಯು ಹೋಗೆಂದು ಲಕ್ಷ್ಮಣನಿಗೆ ಆಜ್ಞಪ್ತಿಯಿತ್ತಳು. ಆತನು ವನಸ್ಥಳವಾಸಿಗಳೊಡನೆಯೂ ವೃಕ್ಷ, ಮೃಗ, ಕ್ರಿಮಿ, ಕೀಟ, ಪಕ್ಷಿ, ಲತೆ, ತೃಣಗುಲ್ಮ, ಪಂಚಭೂತ, ದಶದಿಶೆಗಳೊಡನೆಯೂ ಸೀತೆಯನ್ನು ಕಾಯಲಾಗಿ ಬೇಡಿಕೊಂಡನು. ಧರ್ಮದೇವತೆಯೂ ಜಗಜ್ಜನನಿಯೂ ಎನಿಸಿದ ಗಂಗಾದೇವಿಯನ್ನು ಆ ಬಳಿಕ ಕೇಳಿಕೊಂಡನು. ಜಾನಕಿಯನ್ನು ತನ್ನ ಮಾತೆಯೆಂದೇ ಹೇಳಿಸಿ ಭೂಮಾತೆಯೊಡನೆ ಕೈಮುಗಿದು ನಿನ್ನ ಮಗಳೆಹಳೆಂದೂ ಸಲಹಿಕೊಳ್ಳುವೆಂದೂ ಬಿನ್ನವಿಸಿದನು. ಸೀತಾದೇವಿಯು ಬಲವಂದು ಬೀಳ್ಕೊಂಡನು. ಅಣ್ಣ ಅತ್ತಿಗೆಯರ ಕಡೆಗಿರುವ ಮನಸ್ಸಿನಿಂದ ಲಕ್ಷ್ಮಣನು ತೂಗುಯ್ಯಾಲೆಯಂತೆನಿಸಿದನು. ಎಂತೆಂತೋ ದುಃಖಾರ್ತನಾಗಿ ಲಕ್ಷ್ಮಣನು ನಗರದ ಕಡೆಗೆ ಸಾಗಿದನು. ಲಕ್ಷ್ಮಣನ ತಲೆ ಕಾಣದಾದ ಬಳಿಕ ಸೀತೆ ಮೂಲವನ್ನು ಕೊಯ್ದ ಎಳ ಬಳ್ಳಿಯಂತೆ ಮೈಮರೆದು ಭೂಮಿಯಲ್ಲೊರಗಿದಳು. ಅರಣ್ಯದ ಸಮಸ್ತ ಜೀವಜಾಲವೂ ಕಲ್ಗಳೂ ಸೀತೆಯ ಶೋಕಭಾರದಿಂದ ಕರಗುತಿದ್ದವು. ಸೀತೆಯಂಗವನ್ನು ನೋಡಿ ತುಂಬಿ, ನವಿಲು, ಹಂಸೆ, ಕೋಗಿಲೆ, ಗಿಳಿ, ಚಕೋರ, ಜಿಂಕೆ, ಆನೆ, ಚಮರಿ, ಸಿಂಹಗಳು ತಮ್ಮ ಮೊರೆ, ಕುಣಿತ, ಚೆರೆಯುವಿಕೆ, ನಡೆಯುವಿಕೆ, ಕೂಗಿಡುವಿಕೆ, ನುಡಿ, ನಲಿಯುವಿಕೆ, ನೆರೆಯುವಿಕೆ, ಒಲೆಯುವಿಕೆ, ಪೊರೆಯುವಿಕೆ, ಮೆರೆಯುವಿಕೆಗಳನ್ನು ಒಲ್ಲದಾದುವು. ಚಮರಿಗಳು ತಮ್ಮ ಬಾಲದಿಂದ ಚಾಮರಬೀಸಿದುವು. ಆನೆಗಳು ಮೃದುತಳಿರ ಹಾಸುಗೆ ಹಾಸಿದವು. ಹಂಸಗಳು ಗರಿಗಳನ್ನು ತೋಯ್ದು ನೀರನ್ನು ಚಿಮುಕಿಸಿದುವು. ಅದಲ್ಲದೆ ಸೀತೆಯ ಸಿರಿಮೊಗಕ್ಕೆ

ಟೆಲಿಗ್ರಾಮ್: 'ಕೃಷ್ಣಮಿಲ್ಸ್' **1914**ರಲ್ಲಿ

ಟೆಲಿಫೋನ್: **96** ಸ್ಥಾಪಿತವಾದ್ದು

ಶ್ರೀ ಕೃಷ್ಣಾ ಮಿಲ್ಸ್, ಕಂಪೆನಿ

ಪೋಸ್ಟ್ ಬಾಕ್ಸ್ ನಂ. **92.**

ಅನ್ಸಾರಿ ರಸ್ತೆ, ಬಂದರ, ಮಂಗಳೂರು.

ಶುದ್ಧ ಹಾಗೂ ಉತ್ತಮ ಕೊಬ್ರಿಯಿಂದ ಆಧುನಿಕ ವೈಜ್ಞಾನಿಕ ಯಂತ್ರಗಳಲ್ಲಿ ತಯಾರಿಸಿದ ೧ನೇ ಮತ್ತು ೨ನೇ ತರಗತಿಗಳ ಅತ್ಯುತ್ತಮ ತೆಂಗಿನ ಎಣ್ಣೆ, ಹಿಂಡಿ ಮತ್ತು ಶುದ್ಧ, ತಾಜಾ, ಉತ್ತಮ ಕಪ್ಪು ಮತ್ತು ಬಿಳಿ ಎಳ್ಳಿನಿಂದ ತಯಾರಿಸಿದ ಉತ್ಕೃಷ್ಟ ಎಳ್ಳೆಣ್ಣೆ, ಹಿಂಡಿ ನಮ್ಮಲ್ಲಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

ವಿ. ಸೂ. ನಮ್ಮ ಎಣ್ಣೆಯೆಂದು ಯಾರಾದರೂ ಠಕಾಯಿಸದಂತೆ ನಮ್ಮ ಡಬ್ಬಿಗಳ ಮೇಲೆ ೧ನೇ ನಂಬರ್ ಎಣ್ಣೆಗೆ "Superior Quality" ಎಂಬುದಾಗಿ ಕೆಂಪು ಲೇಬಲ್ ಮತ್ತು ೨ನೇ ನಂಬರ್ ಎಣ್ಣೆಗೆ "II Quality" ಎಣ್ಣೆ ಎಂದು ಇರುತ್ತದೆಂಬುದನ್ನು ದಯವಿಟ್ಟು ನೆನಪಿನಲ್ಲಿಡಿರಿ.

ಬಿಸಿಲ ಜೇಗೆಯುಂಟಾಗದಂತೆ ಗರಿಗೊಡೆಹಿಡಿದವು. ಗಂಗಾ ನದಿಯ ತುಂತುರು ಹನಿಗೂಡಿದ ಸುಖಸ್ಪರ್ಶದ ಗಾಳಿ ಬೀಸಿತು. ಸೀತೆ ಅದರಿಂದ ಚೇತನಗೊಂಡಳು. ತನ್ನ ವೈಯ ವಿಕೃತಿಯ ಕಡೆಗೆ ಮನಗೊಡದೆ ಮಿಥಿಲೆಯ ರಾಜನ ಕುಲದಲ್ಲಿ ಜನಿಸಿ, ರಘುವಂಶದ ದಶರಥ ಚಕ್ರವರ್ತಿಯ ಸೊಸೆಯಾಗಿ ಕಟ್ಟಡವಿಯಲ್ಲಿ ನೋಯಲಾದುದು ತನ್ನ ವಿಧಿಯೆಂದು ಬಗೆದು ಕೊರಗಿದಳು. ಆತ್ಮಹತ್ಯೆಯನ್ನು ಮಾಡಿದರೆ ಶಿಶುಹತ್ಯದ ದೋಷ ತನಗುಂಟಾಗುವುದು ಎಂದು ಮುಂದಡಿಯಿಟ್ಟಳು. ಕಲ್ಲು ಮುಳ್ಳುಗಳು ತುಂಬಿದ ಕಾಡಿನ ದಾರಿಯಲ್ಲಿ ನಡೆದೊಡನೆ ಸೀತೆಯ ಕಾಲುಗಳು ನೆತ್ತರು ಹನಿಯತೊಡಗಿದವು. ಇದೇ ಸಮಯದಲ್ಲಿ ಯಾಗಕ್ಕೆ ಯೂಪವನ್ನು ಹುಡುಕುತ್ತ ವಾಲ್ಮೀಕಿ ಮುನಿವರನು ತನ್ನ ಶಿಷ್ಯರೊಡಗೂಡಿ ಆಸ್ಥಾನಕ್ಕೆ ಬಂದನು. ದುಃಖದಿಂದ ಕುತ್ತಿಗೆ ಬಿಗಿದು ಅಳುತಿದ್ದ ಸೀತೆಯು ವಾಲ್ಮೀಕಿಯ ಕಣ್ಣಮುಂದಾದಳು. ಅವಳನ್ನು ಕಂಡ ವಾಲ್ಮೀಕಿ ಏನುಮಾಡಿದನೆಂದು ಲಕ್ಷ್ಮೀಶನೇ ಹೇಳುತ್ತಿರುವನು. ವಾಲ್ಮೀಕಿಯ ಹೃದಯ ಚಿತ್ರವನ್ನು ಮಾತುಗಳ ಮೂಲಕ ಮಾಡುತ್ತಿರುವನು.

ಆರಿವಳಿದೇತಕಿರ್ದಪಳೀ ವನಾಂತರದೊ-
ಳಾರೈವೆನಿದನೆಂದು ನಡೆತಂದು ಕರುಣದಿಂ-
ದಾರುಷಿ ನುಡಿಸಿದನೆಲೆ ತಾಯೇ ನೀನೀವಳೌ
ಕಂಡ ಕುರುಪಾಗಿರ್ಪುದು ।
ಘೋರತರ ಗಹನಕೊರ್ವಳೆ ಬಂದೆಯೆಂತಕಟ
ಭೀರು ಹೇಳೌ ಬೆದರಬೇಡ "ವಾಲ್ಮೀಕಿ ನಾಂ
ಭೂರಿ ಶೋಕಾರ್ತರಾಗಿರ್ದರಂ ಕಂಡು ಸುಮ್ಮನೆ
ಪೋಪನಲ್ಲೆ"ಂದನು.

ಈ ಪದ್ಯದಿಂದ ಕರ್ಣಾಟಕ ಕವಿಚೂತವನ ಚೈತ್ರ ಲಕ್ಷ್ಮೀಶನು ವಾಲ್ಮೀಕಿಯ ಸಂಪೂರ್ಣ ಹೃದಯವನ್ನು ತೋರಿದ್ದಾನೆ. ವಾಲ್ಮೀಕಿ ಕ್ರೌಂಚ ಮಿಥುನಗಳಲ್ಲೊಂದರ ವಧೆಯಿಂದ ಶೋಕಗೊಂಡು ಕಾವ್ಯವಾಹಿನಿಯನ್ನು ಹರಿಸಿದ್ದಾನೆ. ಆ ಕರುಣೆಯಿಂದಲೇ ರಾಮಾಯಣ ಉಗಮಿಸಿತು.

ಮಾನಿಷಾದ ಪ್ರತಿಷ್ಠಾಂತ್ವಮಗಮಃ ಶಾಶ್ವತೀ ಸಮಾಃ
ಯತ್ಕ್ರೌಂಚ ಮಿಥುನಾದೇಕಮವಧೀ ಕಾಮಮೋಹಿತಂ ॥

ಈ ಛಂದೋಮಯ ವಾಣಿ ರಾಮಾಯಣದ ಅವತಾರಕ್ಕೆ ರಂಗಸ್ಥಲವೆನಿಸಿತು. ಲಕ್ಷ್ಮೀಶನು ವಾಲ್ಮೀಕಿಯ ಹೃದಯ ಮರ್ಮವನ್ನು ಮುಟ್ಟಿ ನುಡಿದಿದ್ದಾನೆ. ಯಾರಾದರೂ ಅಬಲೆಯರು ಕಾಡಿನಲ್ಲಿ ದುಃಖಗೊಂಡಿರುವುದನ್ನು ಕಂಡರೆ ಜನತೆ ತಪ್ಪೆಣಿಕೆಯಿಂದ ತುಂಬಿಬಿಡುತ್ತದೆ. ಅಂತಹ ತಪ್ಪು ಭಾವನೆ ವಾಲ್ಮೀಕಿಗೆ ಬರಲಿಲ್ಲ. ಋಷಿ ಧರ್ಮದ ಹೃದಯ ಅವನಲ್ಲಿದ್ದಿತು. ಪೂಜ್ಯ ಪುರುಷರ ಹಾಗೂ ಆದರ್ಶ ಚರಿತ್ರರ ಹೃದಯ ಕರುಣಾಪೂರ್ಣ. ಜಗದ್ವಂದ್ಯ ಮಹಾತ್ಮಾ ಗಾಂಧೀಜಿ ಇದೇ ಹೃದಯದ ವ್ಯಕ್ತಿಗಳು. ರಾಮರಾಜ್ಯದ ಕಲ್ಪನೆ ಅವರಲ್ಲಿದ್ದಿತು. ವಾಲ್ಮೀಕಿ ರಾಮರಾಜ್ಯದ ಇತಿಹಾಸ ಕರ್ತೃ. ಮಾತ್ರವಲ್ಲ ಆತನ ಹೃದಯ ಕರುಣಾರಸಪೂರ್ಣ. ಲೋಕಸ್ಥಿತಿಗೆ ಮೂಲ ಕಾರಣ ಕರುಣೆಯೊಂದೇ. ಇದರಿಂದಲೇ "ಏಕೋರಸ; ಕರುಣ ಏವಹಿ ಲೋಕ ಹೇತುಃ" ಎಂದು ಭವಭೂತಿಯೇ ಮೊದಲಾದವರಿಂದ ಶ್ರುತಪಡಿಸಲಾಗಿದೆ. "ವಾಲ್ಮೀಕಿ ನಾಂ ಭೂರಿ ಶೋಕಾರ್ತರಾಗಿರ್ದರಂ ಕಂಡು ಸುಮ್ಮನೆ ಪೋಪನಲ್ಲ" ಎಂದು ವಾಲ್ಮೀಕಿಯ ಘನತೆಯನ್ನು ತೋರುವ ಲಕ್ಷ್ಮೀಶನು ಕನ್ನಡಿಗರ ಕುಲದಲ್ಲಿರುವನು. ವಾಲ್ಮೀಕಿ ಜಾನಕಿಯನ್ನು ಕಂಡೊಡನೆ ಯಾರಿವಳು! ಈ ವನಾಂತರದಲ್ಲಿ ಅದೇತಕ್ಕಾಗಿರುವಳು? ವಿಚಾರಿಸಿ ತಿಳಿದುಕೊಳ್ಳುವೆನೆಂಬ ಮನಸ್ಸುಳ್ಳವನಾಗುತ್ತಾನೆ. 'ಎಲೆ ತಾಯೆ, ನೀನಾರು? ಕಂಡ ಪರಿಚಯವಿದೆ ಈ ಕಠಿಣವಾದ ಕಾಡಿಗೆ ಒಬ್ಬಳೇ ಹೇಗೆ ಬಂದೆ? ಅಕಟ! ಭೀರುವೇ ಹೇಳು! ಬೆದರಬೇಡ. ನಾನು ವಾಲ್ಮೀಕಿ. ಅತಿ ದುಃಖಪೀಡಿತರನ್ನು ಕಂಡು ಸುಮ್ಮನೆ ತೆರಳುವನಲ್ಲವೆಂದು ಲಕ್ಷ್ಮೀಶನು ವಾಲ್ಮೀಕಿಯನ್ನು ಸಂಪೂರ್ಣವಾಗಿ ಚಿತ್ರಿಸಿದ್ದಾನೆ.

ವಾಲ್ಮೀಕಿ ಆ ಬಳಿಕ ಸೀತೆಯ ಉತ್ತರವನ್ನು ಪಡೆದನು. ಸೂರ್ಯಕುಲಸಂಭೂತನು ಲೋಕಾಪವಾದಕ್ಕೆ ಅಪರಾಧಿಯಲ್ಲದ ತನ್ನನ್ನು ಬಿಟ್ಟನು. ಈ ವನದಲ್ಲಿ ಸುಮಿತ್ರಾಪುತ್ರನು ಇರಿಸಿಹೋದನು. ಗರ್ಭಿಣಿ, ಜೀವವನ್ನು ಹೊರೆಯ ಬೇಡುವೆಯೆಂದು ಸೀತೆ ಮುನಿಪದಕೆರಗಿದಳು. ಆಗಲಾ ವಾಲ್ಮೀಕಿ– 'ದೇವಿ! ಶೋಕವನ್ನು ಬಿಡು. ಅವಳಿಜವಳಿ ಮಕ್ಕಳನ್ನು ಪಡೆವೆ. ಒಂದಿಷ್ಟೂ ಸಂದೇಹ ಭಾವನೆ ನಿನಗಿನ್ನು ಬೇಡ. ಜನಕರಾಜನಿಗೆ ನಾವನ್ಯರಲ್ಲ. ನಮ್ಮಾಶ್ರಮಕೆ ಬಂದು ಸುಖಗೊಳ್ಳುವೆಯಾದರೆ ನಿನಗಾವಾವ ಬಯಕೆಯುಂಟೋ ಅವೆಲ್ಲವನ್ನೂ ಸಲ್ಲಿಸುವೆನು. ಸ್ನೇಹಗೊಂಡಿರುವೆನು. ಅಂಜಬೇಡ'ವೆಂದು ಸಮಾಧಾನಿಸಿ ಸೀತೆಯನ್ನು ತನ್ನಾಶ್ರಮಕ್ಕೆ ಕರೆತಂದನು. ಆಕೆಗೆ ಚಿತ್ರಮಯವಾದ ಪರ್ಣಶಾಲೆಯ ರಚನೆಯಾಯಿತು. ಆ ಮನೆಯಲ್ಲಿದ್ದ ಸೀತೆ ಯಾವ ಸುಖಗೊಂಡಳೆಂದು ಲಕ್ಷ್ಮೀಶನು ಹೇಳುತ್ತಾನೆ.

WE EXTEND OUR DEEPAVALI GREETINGS TO ALL OUR CUSTOMERS, FRIENDS & WELL-WISHERS ON THIS HAPPY OCCASION AND WISH THEM PROSPERITY IN THE COMING YEAR:

Sri Krishna Mills Co.,

POST BOX NO. 92

Ansari Road — Bunder, Mangalore.

ಜಾತಿ ವೈರಂಗಳಿಲ್ಲದ ಪಕ್ಷಿಮೃಗದ ಸಂ
ಘಾತದಿಂ ಋತುಭೇದವಿಲ್ಲದ ಲತಾದ್ರುಮ
ವ್ರಾತದಿಂ ಪಗಲಿರುಳ ಶಂಕೆಯಿಲ್ಲದ ಪೂಗೊಳಂಗಳ
ವಿಕಾಸದಿಂದೆ ।
ಶೀತೋಷ್ಣದಾಸರಿಲ್ಲದ ಸುಸ್ಥಳಂಗಳಂ
ಪ್ರೀತಿ ವಿರಹಿತ ದುಃಖ ಸುಖದ ಜಂಜಡವಿಲ್ಲ
ದಾ ತಪೋವನದೊಳಗೆ ಋಷಿ ವಧುಗಳೊಡನೆ
ವೈದೇಹಿ ಪದುಳದೊಳಿರ್ದಳು
ಮುನಿ ವಟುಗಳೆಡೆಯಾಡಿ ಪರಿಚರ್ಯೆಯಂ ಮಾಳ್ಪ-
ರಿನಿದಾದ ವಸ್ತುವಂ ಋಷಿವಧುಗಳಿತ್ತಪ-
ರ್ತನ ನಗೆ ಸತ್ಕರಿಸುವುದು ತಾಪಸೋತ್ಕರಂ
ವಾಲ್ಮೀಕಿ ಸಾದರದೊಳು
ದಿನ ದಿನಕೆ ಬೇಕಾದ ಬಯಕೆಯಂ ಸಲಿಸುವಂ
ಬನದೊಳಿಂತಿರುತಿರ್ದಳವನಿಸುತೆ ರಾಘವೇಂ
ದ್ರನ ಚರಣಕಮಲವಂಧ್ಯಾನಿಸುತೆ ಮರೆದ-
ಖಿಲರಾಜವಿಭವಶ್ರೀಯನು ॥

ಸೀತೆ ವಾಲ್ಮೀಕಿಯ ತಪೋವನದಲ್ಲಿ ತನ್ನ 'ಅಖಿಲ ರಾಜ ವಿಭವಶ್ರೀ'ಯನ್ನು ಮರೆತಿದ್ದಳು. ವಾಲ್ಮೀಕಿಯ ಆಶ್ರಮದ ನೆಲೆ ರಾಮರಾಜ್ಯದ ಸುಖಪೂರ್ಣವಾಗಿದ್ದಿತು. ಲಕ್ಷ್ಮೀಶನು ರಾಮರಾಜ್ಯದ ಶ್ರೀಯ ಕಲ್ಪನೆಯನ್ನು ಮಾಡಿದ್ದಾನೆ. ಅದನ್ನೇ ತಪೋವನ ಸ್ಥಿತಿಯಲ್ಲಿ ಬಣ್ಣಿಸಿದ್ದಾನೆ. ವಾಲ್ಮೀಕಿಯ ಆಶ್ರಮದಲ್ಲಿ ಮೃಗ ಪಕ್ಷಿಗಳ ಕೂಟದಲ್ಲಿ ಜಾತಿ ವೈರವಿರಲಿಲ್ಲವಂತೆ. ಅದಲ್ಲದೆ ಮರಗಳು ಋತುಭೇದವಿರದೆ ಫಲಸಮೃದ್ಧಿಯುಳ್ಳವುಗಳಾಗಿದ್ದುವು. ಹಗಲಿರುಳ ಹೆದರಿಕೆ ಹೂಗೊಳಗಳಲ್ಲಿಯೂ ಇದ್ದಿಲ್ಲ. ಚಳಿ ಸೆಕೆಗಳ ಉಪದ್ರವ ಅಲ್ಲಿನವರಿಗಿದ್ದಿಲ್ಲ. ಪ್ರೀತಿಯಿರದ ದುಃಖ ಸುಖದ ಹಾಳು ಹರಟೆ ಆ ತಪೋವನ ನಿವಾಸಿಗಳಲ್ಲಿರಲಿಲ್ಲ. ಇದರಿಂದ ಪೂಜ್ಯ ಬಾಪೂಜಿ ಆಶಿಸಿದ್ದ ರಾಮರಾಜ್ಯ ಕಲ್ಪನೆ ನಮಗಾಗುತ್ತಿದೆ. ಜಾತಿ ವೈರವಿರದ ಬಾಳುವೆ ಭಾರತೀಯರಲ್ಲಿ ಮೊತ್ತಮೊದಲು ಕಾಣಬೇಕು. ಸದಾ ಆಹಾರಕ್ಕೆ ಕೊರತೆಯಿರದಿರಬೇಕು. ಬಗೆ ಬಗೆಯ ಫಲಸಂಪತ್ತು ಋತುಭೇದವಾದರೂ ನಮ್ಮಲ್ಲಿ ಕಾಣಬೇಕು. ಜನರಲ್ಲಿ ಕಳ್ಳಕಾಕರ ಭಯ ತಪ್ಪಿ ಹಗಲಿರುಳ ಶಂಕೆ ಹೋಗಬೇಕು. ಚಳಿ ಮಳೆಗಾಲ ಸೆಕೆಗಾಲದ ಆಸರಳಿಯಬೇಕು. ಜನರಿಗೆ ಉಳಿಯಲು ಬೇಕಾದ ಮನೆ ಬಟ್ಟೆಬರೆಯಾಗಬೇಕು. ಪ್ರೀತಿಯಿರದ ಬಾಳುವಿಕೆಯಿಂದ ಉಂಟಾಗುತ್ತಿರುವ ದುಃಖ ಸುಖದ ಜಂಜಡ ತಪ್ಪಬೇಕು. ಜನರೆಲ್ಲರೂ ಪರಸ್ಪರ ಪ್ರೀತಿಯುತರಾಗಿರಬೇಕು. ಪ್ರೀತಿ ಇರದೆ ಅನ್ಯೋನ್ಯ ಕಷ್ಟ ಸುಖಕ್ಕೊಳಗಾಗಕೂಡದು. ಭಾರತೀಯರಲ್ಲಿ ಇವುಗಳಲ್ಲೊಂದಾದರೂ ಇಂದಿವೆಯೇ? ಜಾತಿಯ ವಿದ್ವೇಷ ಇನ್ನೂ ಇದೆ. ಆಹಾರ ಸುಖವಿಲ್ಲ. ಕಳ್ಳರ ಪುಂಡರ ಭೀತಿಗೆ ಮಕ್ಕಳಿಗೆ ಹಿರಿಯರಿಗೆ ಕಿರಿಯರಿಗೆ ಹಗಲಿರುಳು ಉಂಟಾಗುತ್ತಲೇ ಇದೆ. ಮಳೆ ಬೇಸಗೆಕಾಲದಲ್ಲಿ ಉಳಕೊಳ್ಳಲು ಮನೆ, ಹೊದ್ದುಕೊಳ್ಳಲು ಬಟ್ಟೆ ಅದೆಷ್ಟು ಮಂದಿಗಿದೆ? ಅಣ್ಣತಮ್ಮಂದಿರಲ್ಲಿ ಬಂಧುಜನರಲ್ಲಿ ಪ್ರೀತಿಯಿರದೆ ಎಷ್ಟು ಕಷ್ಟಗಳು ಮನೆ ಮನೆಯಲ್ಲಿ ಕಂಡುಬರುವುದಿಲ್ಲ! ಜಾತಿ ವಿದ್ವೇಷ, ಅನ್ನಬಟ್ಟೆಯ ಸಮಸ್ಯೆ, ಮನೆಯ ಸಮಸ್ಯೆ, ಚೋರಭಯ, ಪ್ರೀತಿ ಇರದ ಬಾಳುವೆಯ ಪರಿಸ್ಥಿತಿ ತಪ್ಪುವುದು ನಮಗೆ ಬೇಕಿದೆ. ಕರ್ಣಾಟಕ ಕವಿ ಚೂತವನ ಚೈತ್ರ ಲಕ್ಷ್ಮೀಶನು ರಾಮರಾಜ್ಯ ಸುಖಸಂಪತ್ತನ್ನು ವಾಲ್ಮೀಕಿಯ ಆಶ್ರಮದಲ್ಲಿ ಕಾಣಿಸಿಕೊಟ್ಟಿರುವನು. ಈ ರೀತಿಯ ತಪೋವನದ ಗೃಹದಲ್ಲಿ ಸೀತೆಯು ಮುನಿವಟುಗಳೆಡೆಯಾಡಿ ಪರಿಚರ್ಯೆ, ಮುನಿವಧುಗಳ ಇನಿದಾದ ವಸ್ತುಗಳ ದಾನ, ತನ ತನಗೆ ಬೇಕುಬೇಕಾದ ವಿಚಾರ ಸತ್ಕಾರ, ತಾಪಸಶ್ರೇಷ್ಠನಾದ ವಾಲ್ಮೀಕಿಯ ಮೂಲಕ ಸಕಲ ಬಯಕೆಗಳ ಪೂರ್ತಿ, ಶ್ರೀರಾಮಚಂದ್ರನ ಚರಣಕಮಲ ಧ್ಯಾನ— ಇವುಗಳಿಂದ ಎಲ್ಲಾ ರಾಜವಿಭವಶ್ರೀಯನ್ನು ಮರೆತಳು. ಇವಲ್ಲವೇ ರಾಮರಾಜ್ಯದ ವಿಭವಸಂಪತ್ತು!

ಲಕ್ಷ್ಮೀಶನು ವಾಲ್ಮೀಕಿಯ ಘನತೆಯನ್ನು ತೋರುವಾಗ ಮನಃಶಾಸ್ತ್ರವನ್ನು ಮರೆತಿಲ್ಲ. ಅದನ್ನು ಬಲ್ಲವನಿದ್ದು ವಿದ್ಯಾವಿಚಾರದಲ್ಲಿ ಮಕ್ಕಳ ಓದು ಹೇಗಿರಬೇಕೆಂದು ಹೇಳಿರುವನು. ಆ ಪದ್ಯ ಈ ಕೆಳಗಣದು.

ಸೀತೆ ನಲಿವಂತೆ ವಾಲ್ಮೀಕಿ ಮೆಚ್ಚುವ ತೆರದೊ
ಳಾ ತಪೋವನದ ಮುನಿಗಣಮೈದೆ ಕೊಂಡಾಡ
ಲಾ ತರುಣರಿರ್ವರುಂ ಮಧುರ ವೀಣೆಗಳ
ಮೇಳಾಪದಾಲಾಪಂಗಳಿಂದ ।
ಗೀತದೊಳ್ಸಂಕೀರ್ಣ ಶುದ್ಧ ಸಾಳಂಗದಿರ
ಸಾತಿಶಯಮೆನೆ ಪಾಡುವರ್ದೇ ವನಗರೀ ನಿ
ಕೇತನ ಶ್ರೀಪತಿಯ ಚಾರಿತ್ರಮಪ್ಪ ರಾಮಾಯಣವ
ನನುದಿನದೊಳು ॥

ಲವಕುಶರ ಓದು ಎಷ್ಟು ರಸಾವಹವಾಗಿದ್ದಿತೆಂದು ಈ ಪದ್ಯದಿಂದ ನಮಗರಿವುದು. ಲವಕುಶರು ಸೀತೆ ನಲಿವಂತೆ ರಾಮಾಯಣವನ್ನು ಓದಿದರು. ವಾಲ್ಮೀಕಿ ಆ ಓದಿಗೆ ಮೆಚ್ಚುಗೊಳ್ಳುವಂತೆ ಓದುತಿದ್ದರು. ತಪೋವನದ ಮುನಿಗಣ ಓದುತಿದ್ದ ವೇಳೆಯಲ್ಲಿ ಬಂದು ಕೂಡುವಂತೆ ಕೊಂಡಾಡುವಂತೆ ಮಧುರ ವೀಣೆಗಳ ಮೇಳದ ಆಲಾಪದ ಗೀತ-ಸಂಕೀರ್ಣ ಸಾಳಂಗದರ ಸಾವಹ ಗೀತಪಠನ ಅವರಿಂದ ನಡೆಯುತಿದ್ದಿತು. ಸೀತೆ ನಲಿವಂತೆ ಮಕ್ಕಳ ಓದಿನಿಂದ ಹೆತ್ತವರು ತೃಪ್ತರಾಗಿರುವರೇ? ಕಾವ್ಯಕರ್ತೃ ಹಾಗೂ ಉಪಾಧ್ಯಾಯನ ಬಗೆ ಮೆಚ್ಚುವಂತೆ ಓದು ಬೇಡವೇ? ಓದುತಿದ್ದಾಗ ಅನ್ಯರು ಅದನ್ನು ಕೇಳುವ ಆತುರಗೊಂಡು ಬರುವುದು ಬೇಡವೇ? ಈ ತೆರಹದ ಓದು ಗಮಕ ನಮಗೆ ಬೇಕು. ಅಧ್ಯಯನದಿಂದ ಮಕ್ಕಳು ಮೇಲ್ಮಟ್ಟಕ್ಕೆ ಬರಬೇಕು. ಇದಲ್ಲದೆ ರಚನಾಮಾರ್ಗದಿಂದ ಮುಂದೆ ಬಂದು ಕರ್ಣಾಟಕ ಕವಿಚೂತವನ ಚೈತ್ರನು ತೋರಿದ ರಾಮರಾಜ್ಯ ಭಾವನೆ ಮೊಳೆತು ಆ ಸುಖಪ್ರಾಪ್ತಿ ನಮ್ಮಲ್ಲುಂಟಾಗಬೇಕು. ಬಾಪೂಜಿ ಆಶಿಸಿದ ವಿಚಾರ ಈಡೇರಲಿರುವ ಉದ್ಯಮ ನಮ್ಮಲ್ಲಿ ಉಂಟಾಗಲಿ; ಸುಖ ತೋರಲಿ!

ನಾಕ—ನರಕ

ಊರ ಹೊರಗಣ ಬಯಲ
ನಡುವಣಾಲದ ಕೆಳಗೆ
ಕುಳಿತೆನೇಕಾಕಿಯಾಗಿ ‖
ಬಳಿಯೆ ಹಳ್ಳಿಯ ಹಾದಿ
ಹಳ್ಳ ತಿಟ್ಟಗಳೆದೆಯ
ದೃಶ್ಯ ರಸಿಕತೆಯ ತೂಗಿ
ಹಳ್ಳಿ ಹಾಡಿನ ಹಾಗೆ–
ಬಯಲ ಹಸುರಿನ ಮೇಗೆ–
ಸಾಗಿತ್ತು ಬಾಗಿ ಬಾಗಿ ‖

ಸಂಜೆ ಹೊಂಜೆರಗೆತ್ತಿ
ಗಾಳಿಗೋಪುರ ಹತ್ತಿ
ನೀಲಸಗ್ನತೆಯೊಳೊತ್ತಿ
ತಾರಾಕ್ಷರದಿ ದಿವ್ಯ
ಮೌನಭಾವದ ಕಾವ್ಯ
ಬರೆದಳದೊ ಸುತ್ತಿ ಸುತ್ತಿ! ‖

ಮೌನ ಮೈ ತಾಳಿದೊಲು
ಕತ್ತಲೆಯನುಟ್ಟು ಬಾ–
ನ್ನೀರೆ ಬಂದಳು ಚಂದ್ರಹಾಸ ಬೀರಿ ‖
ಲೋಕಲೋಕದ ಚಿಂತೆ
ಘನಿಸಿ ಕುಳಿತಿರುವಂತೆ
ಕುಳಿತೆನ್ನ ಮನಕಮೃತ ರೇಖೆಗೀರಿ ‖

ಬಯಲ ಬಟ್ಟೆಯ ಅಂಚು–
ಹರಿವ ಹಳ್ಳದ ಹೊಂಚು–
ತಾರಕಿತ ನಭದ ಮಿಂಚು ‖
ಇಳೆಗಿದು ಸಂಚರಿಸಿ
ತೆನೆನೀರು ನೀರವದಿ
ಗ್ರಾಮುಗಡಿ ಕಾವ ಸಂಚು! ‖

ಜಾಲಿ ಬೇವಿನ ಗಿಡದ
ಕಳ್ಳಿ ಕಂಟಿಯ ದಡದ
ಹಳ್ಳದಾಚೆಯಲಿ ಹಳ್ಳಿ ‖
ಹಗಲ ಬೇಗೆಗೆ ಬೆಂದು,
ಸಂಜೆ ಗಾಳಿಯ ಮಿಂದು,
ತೂಕಡಿಪೊಲೆಸೆದುದಲ್ಲಿ! ‖

ಯೋಗಿ ಜೀವನ ಸುಪ್ರ–
ಸನ್ನ ಚಿತ್ಕಳೆಯುಂತೆ
ಮಿನುಗಿದಾ ಹಳ್ಳಿ ದೀಪ! ‖
ನಾಗರಿಕ ಜೀವನದ
ಕತ್ತಲಿಡಿದೆನ್ನೆದೆಗೆ
ಜಿನುಗಿತಾನಂದ ರೂಪ! ‖

ಎಡಗಡೆಯಲೀ ಹಳ್ಳಿ,
ಈ ಹಾದಿ, ಈ ಮೌನ
ಸಾತ್ವಿಕಾನಂದ ರಾಜ್ಯ! ‖
ಬಲಗಡೆಯೊಳದೊ ನಗರ,
ರಸ್ತೆ, ವಿದ್ಯುದ್ದೀಪ,
ನಾಗರಿಕ ನರಕ––ತ್ಯಾಜ್ಯ! ‖

—ಜಿ. ಆರ್. ಪಾಂಡೇಶ್ವರ್, ಹುಬ್ಬಳ್ಳಿ.

ಸಾಹಿತ್ಯದಲ್ಲಿ ವಾಸ್ತವಿಕತೆ

[ಲೇಖಕರು:— ಶ್ರೀ ಎಲ್. ಎಸ್. ಶೇಷಗಿರಿ ರಾವ್, ಎಮ್. ಎ.]

ಸಾಹಿತ್ಯವನ್ನೂ ಜೀವನವನ್ನೂ ಹತ್ತಿರ ಹತ್ತಿರಕ್ಕೆ ತರಲು ಪ್ರಯತ್ನ ನಡೆಯುತ್ತಿರುವ ಕಾಲ ಇದು. ಇಂದು ನಾವು ಸಾಹಿತ್ಯದಲ್ಲಿ ವಾಸ್ತವಿಕತೆಯನ್ನು ಬಯಸುತ್ತಿದ್ದೇವೆ. ಸಾಹಿತ್ಯದಲ್ಲಿ ವಾಸ್ತವಿಕತೆ ಎಂದರೇನು, ಇದು ಏಕೆಬೇಕು, ಇದು ಸಾಹಿತ್ಯದಲ್ಲಿ ಎಷ್ಟರ ಮಟ್ಟಿಗೆ ಬೇಕು ಎಂಬುದನ್ನು ವಿಮರ್ಶಿಸುವುದು ಅಗತ್ಯ.

ಸಾಹಿತ್ಯದಲ್ಲಿ ವಾಸ್ತವಿಕತೆ ಬೇಕು ಎನ್ನುವುದು ಮುಖ್ಯವಾಗಿ ಸಾಹಿತ್ಯ ನನ್ನದು ಎನ್ನಿಸಬೇಕು ಎನ್ನುವ ದೃಷ್ಟಿಯಿಂದ. ಶ್ರೀರಾಮ, ಶ್ರೀಕೃಷ್ಣ ಇವರಲ್ಲಿ ಭಕ್ತಿ ನಮಗೆ ಇರಬಹುದು, ಅವರು ನಮಗಿಂತ ಬಹು ಎತ್ತರದ ಮಟ್ಟದಲ್ಲಿರುವ, ಆಧ್ಯಾತ್ಮಿಕವಾಗಿ ಗೌರೀಶಂಕರದ ಮೇಲಿರುವ ಜೀವನ್ಮುಕ್ತರು ಎಂದು ಭಾವಿಸಲು ನಾವು ಸಿದ್ಧರಾಗಿರಬಹುದು. ಆದರೆ ಅವರ ಜೀವನಕ್ಕಿಂತ ನಮ್ಮ ಜೀವನದಲ್ಲಿ ನಮಗೆ ಆಸಕ್ತಿ ಹೆಚ್ಚಾಗಿರುವುದು ಸಹಜ. ಶ್ರೀ. ರಂಗನಾಥ ಸ್ವಾಮಿ ಆರಾಧ್ಯ ದೈವವಾಗಿದ್ದರೂ ನಮ್ಮ ಹಳ್ಳಿಯ ರಂಗಪ್ಪನಲ್ಲಿ ನಮಗೆ ಹೆಚ್ಚು ಆಸಕ್ತಿ. ಅದರಿಂದಲೇ ರಂಗನಾಥ ಪರಿಣಯಕ್ಕಿಂತ ಶ್ರೀ. ಮಾಸ್ತಿಯವರ "ರಂಗಪ್ಪನ ಮದುವೆ" ನಮ್ಮ ಮನಸ್ಸಿಗೆ ಹಿಡಿಸೀತು; ದಮಯಂತಿ ನಳನಿಗೆ ಬರೆದ, ಶಕುಂತಳೆ ದುಷ್ಯಂತನಿಗೆ ಬರೆದ ಪ್ರಣಯಪತ್ರಕ್ಕಿಂತ ರಂಗಪ್ಪನ ಹೆಂಡತಿ ರಂಗಪ್ಪನಿಗೆ "ತಿ. ರಂಗಪ್ಪನವರಿಗೆ" ಎಂದು ಆರಂಭಿಸಿ ಬರೆದ ಕಾಗದ ಹೆಚ್ಚು ಮನಸ್ಸಿಗೆ ಬಂದೀತು. ದೂರದಲ್ಲಿರುವ ದೈವಕ್ಕಿಂತ ಪಕ್ಕದಲ್ಲಿರುವ ಮನುಷ್ಯನೇ ನಮಗೆ ಹೆಚ್ಚು ನಿಜವಾಗಿ ಕಾಣುವನು.

ಆದುದರಿಂದ ಸಾಹಿತ್ಯ ಹೆಚ್ಚು ಹೆಚ್ಚು ಜನರ ಮನಸ್ಸು ಸೆಳೆಯಬೇಕಾದರೆ, ಜನರ ರಕ್ತಗತವಾಗಬೇಕಾದರೆ ಅದು ಸಾಮಾನ್ಯ ಮನುಷ್ಯನ ಜೀವನವನ್ನು ತನ್ನ ವ್ಯಾಪ್ತಿಯಲ್ಲಿ ಅಳವಡಿಸಿಕೊಳ್ಳಬೇಕು. ಆಗಲೇ ಅದು ಜನದ ಸಾಹಿತ್ಯವಾಗಿ ಜನದ ಸೊತ್ತಾದೀತು.

ಆದರೆ ಸಾಹಿತ್ಯ ಜನಜೀವನವನ್ನು ಪ್ರತಿಬಿಂಬಿಸಬೇಕು ಎನ್ನುವುದರ ಅರ್ಥವೇನು? ಸಾಹಿತ್ಯ ಜೀವನಕ್ಕೆ ಕನ್ನಡಿ ಹಿಡಿಯಬೇಕು, ನಿಜ. ಷೇಕ್ಸ್‌ಪಿಯರನೇ ಒಂದು ಕಡೆ ನಾಟಕ ಪ್ರಕೃತಿಗೆ ಕನ್ನಡಿ ಹಿಡಿಯುತ್ತದೆ ಎಂದು ಹೇಳಿದ್ದಾನೆ. ಆದರೆ ಸಾಹಿತಿಯಾದವನು ಜೀವನಕ್ಕೆ 'ಕನ್ನಡಿ ಹಿಡಿಯುವುದು' ಎಷ್ಟು ದೂರ ಸಾಧ್ಯ? ಒಬ್ಬ ಬಡಕಾರ್ಮಿಕ ಬಂಡವಾಳಗಾರರ ಕಠೋರತೆಯಿಂದಾಗಿ ಕೆಲಸ ಕಳೆದುಕೊಂಡು, ಅವನೂ ಅವನ ಹೆಂಡತಿ ಮಕ್ಕಳೂ ಹೊಟ್ಟೆಗಿಲ್ಲದೆ ಸೊರಗಿ, ಅವನ ಹೆಂಡತಿ ಪ್ರಾಣ ಬಿಡುವ ದೃಶ್ಯವನ್ನು ಕತೆಗಾರ ಚಿತ್ರಿಸುತ್ತಾನೆ ಎಂದುಕೊಳ್ಳೋಣ. ಇದು 'ವಾಸ್ತವಿಕ' ಎಂದು ನಾವೆಲ್ಲ ಒಪ್ಪುತ್ತೇವೆ. ಮಲ್ಲಿಗೆ ಸಂಪಿಗೆ ಕೇದಿಗೆಗಳ ಪರಿಮಳ ಭರಿತವಾದ ಮಂದಮಾರುತದ ಸೋಂಕಿಲ್ಲ ಇಲ್ಲಿ, ಜ್ಯೋತ್ಸ್ನೆಯಲ್ಲಿ ಮಿಂದು ನಕ್ಷತ್ರವನ್ನು ಮುಡಿದು ರಾರಾಜಿಸುತ್ತಿರುವ ಪ್ರಕೃತಿದೇವಿಯ ಕಿರುನಗೆಯ ಬೆಳಕಿಲ್ಲ ಇಲ್ಲಿ. ಆದರೂ ಕತೆಗಾರ ಈ ಸನ್ನಿವೇಶದಲ್ಲಿ ನಡೆಯುವುದನ್ನೆಲ್ಲ ಚಿತ್ರಿಸಲು ಸಾಧ್ಯವೆ? ಕಾರ್ಮಿಕ ಕೆಲಸ ಹುಡುಕಿಕೊಂಡು ಹೊರಗೆ ಹೋದಾಗ ಹತ್ತಾರು ಜನ ಪರಿಚಿತರು ಸಿಗಬಹುದು. ಒಬ್ಬೊಬ್ಬರೊಡನೆ ಒಂದೊಂದು ವಿಷಯ ಆತ ಮಾತನಾಡಬಹುದು. ಈ ಎಲ್ಲ ವಿವರಗಳನ್ನೂ ಕತೆಗಾರ ಕತೆಯಲ್ಲಿ ಪೋಣಿಸಲು ಸಾಧ್ಯವೆ? ಸಹಜವಾಗಿ ಆತ ತಾನು ಸಾಧಿಸಬೇಕೆಂದಿರುವ ರುದ್ರ ಅಥವಾ ಕರುಣಾಪೂರಿತ ಪರಿಣಾಮಕ್ಕೆ ಅಗತ್ಯವಾದ ವಿವರಗಳನ್ನು ಮಾತ್ರ ಕತೆಯಲ್ಲಿ ಅಳವಡಿಸಿಕೊಂಡು ಉಳಿದುದನ್ನು ಬಿಡಬೇಕಾಗುತ್ತದೆ. ಹೀಗೆಂದಾಗಲೇ ಸಾಹಿತಿ ಕನ್ನಡಿಯಂತಲ್ಲ ಎಂದಂತಾಯಿತು. ಕನ್ನಡಿ ತನ್ನ ಮುಂದಿರುವ ವಸ್ತುವನ್ನು ಸ್ವಲ್ಪವೂ ಬದಲಾವಣೆಯಿಲ್ಲದೆ, ಆಯ್ಕೆಯಿಲ್ಲದೆ ಪ್ರತಿಬಿಂಬಿಸುತ್ತದೆ. ಆದರೆ ಸಾಹಿತಿಯಾದವನು ಕೆಲವು ವಿವರಗಳನ್ನು ಆಯ್ದುಕೊಂಡು, ಕೆಲವು ವಿವರಗಳನ್ನೂ ಮಾರ್ಪಡಿಸಿಕೊಂಡು ಕೃತಿಯ ರಚನೆ ಮಾಡುತ್ತಾನೆ. ಶ್ರೀ. ಕಾರಂತರ 'ಚೋಮನ ದುಡಿ' ನಿಸ್ಸಂದೇಹವಾಗಿ 'ವಾಸ್ತವಿಕ' ಆದರೆ ಚೋಮ ಹುಟ್ಟಿದಂದಿನಿಂದ ಸಾಯುವವರೆಗೆ ನಡೆಸಿದ ಜೀವನ ರೀತಿಯನ್ನೆಲ್ಲ ಕತೆಗಾರರು ಚಿತ್ರಿಸುವುದಿಲ್ಲ; ಚೋಮನ ಜೀವನದ ಒಂದು ಭಾಗವನ್ನು ಮಾತ್ರ ಕಾಣುತ್ತೇವೆ. ಈ ಭಾಗದಲ್ಲಿಯೂ ಸಹ ಚೋಮನಾಡಿದ ಪ್ರತಿ ಮಾತು, ಮಾಡಿದ ಪ್ರತಿ ಕಾರ್ಯದ ವಿವರವನ್ನು ಕೃತಿ ಒಳಗೊಂಡಿಲ್ಲ. ಅವನ ದುಃಖಪೂರ್ಣವಾದ ಜೀವನವನ್ನು ತೋರಿಸಲು ಅಗತ್ಯವಾದ ವಿವರಗಳನ್ನು ಮಾತ್ರ ಕಾದಂಬರಿಕಾರರು ಆಯ್ದುಕೊಂಡಿದ್ದಾರೆ. ಇದರಿಂದಲೇ ಸಾಹಿತ್ಯ ಬರಿಯ ಕನ್ನಡಿಯಲ್ಲ ಎಂಬುದು ಸ್ಪಷ್ಟ.

ಇದೇ ವಿಷಯವನ್ನು ಮತ್ತೊಂದು ದೃಷ್ಟಿಯಿಂದ ವಿಮರ್ಶಿಸಬಹುದು. ಕೂಲಿಕಾರನೊಬ್ಬನ ಜೀವನವನ್ನು ಚಿತ್ರಿಸಲು ಹೊರಟ ಕತೆಯೊಂದರಲ್ಲಿ ಕೂಲಿಕಾರ ತನ್ನ ಮೇಲೆ

ದಬ್ಬಾಳಿಕೆ ನಡೆಸಿ, ತನ್ನ ಮನೆಮಂದಿಯನ್ನೆಲ್ಲ ಆಹುತಿ ತೆಗೆದುಕೊಂಡ ಕ್ರೂರ ಬಂಡವಾಳಗಾರರನ್ನು ನಿರ್ಮಲ, ನಿರ್ಲಿಪ್ತ ಮನಸ್ಸಿನಿಂದ "ಚಿಂತೆಯಿಲ್ಲ, ನೀವು ಸುಖವಾಗಿರಿ, ಲೋಕಾಸ್ಸಮಸ್ತಾ ಸುಖಿನೋಭವಂತು" ಎಂದು ಹರಸಿದನೆಂದು ನಿರೂಪಿತವಾಗಿತ್ತು ಎಂದುಕೊಳ್ಳೋಣ. ಕತೆಯ ಮುಖ್ಯ ವ್ಯಕ್ತಿ ಕೂಲಿಕಾರ; ಸನ್ನಿವೇಶ ಕೂಲಿಕಾರ ಬಂಡವಾಳದ ಗಾಲಿಯಡಿಯಲ್ಲಿ ನುಚ್ಚುನೂರಾಗುವುದು. ಆದರೂ ಇದನ್ನು 'ವಾಸ್ತವಿಕ' ಎಂದು ನಾವು ಒಪ್ಪಿಕೊಳ್ಳಲು ಸಾಧ್ಯವೆ?

ಇದರಿಂದ ಒಂದು ಅಂಶ ಸ್ಪಷ್ಟ. ಒಂದು ಕೃತಿಯ ವಾಸ್ತವಿಕತೆ ಅದರಲ್ಲಿ ನಾವು ಕಾಣುವ ವ್ಯಕ್ತಿಗಳ ಅಂತಸ್ತಿನಲ್ಲಿ, ಅವರ ಸನ್ನಿವೇಶದಲ್ಲಿ ಮಾತ್ರ ಇಲ್ಲ. ಕೃತಿಯಲ್ಲಿ ವಾಸ್ತವಿಕತೆ ಕಾಣಬೇಕಾದರೆ ಬೇರೆ ಯಾವುದೋ ಗುಣ ಕೃತಿಯಲ್ಲಿರಬೇಕು. ಈ ಬೇರೆಯ ಗುಣ ಇಷ್ಟೆ; ಕೃತಿಯಲ್ಲಿನ ವ್ಯಕ್ತಿಗಳ ಸ್ವಭಾವ ನಮಗೆ ಸಹಜ ಎನ್ನಿಸಬೇಕು. ಯಾವುದೇ ಸನ್ನಿವೇಶದಲ್ಲಿ ಅವರು ತೋರಿಸುವ ಭಾವನಾ ಪ್ರತಿಕ್ರಿಯೆ ಸಹಜ ಎನ್ನಿಸಬೇಕು. ಸನ್ನಿವೇಶ, ವ್ಯಕ್ತಿಯ ಸ್ವಭಾವ ಇವೆರಡು ಸಹಜವಾಗಿ ಸೇರಿದಾಗ ನಿಜವಾದ 'ವಾಸ್ತವಿಕತೆ'ಯನ್ನು ನಾವು ಕಾಣುತ್ತೇವೆ. ಇವೆರಡರಲ್ಲಿ ಯಾವುದೂ ಒಂದೇ ಇದ್ದರೂ ಸಾಲದು. ನಾವು ಚಿಕ್ಕವರಾಗಿದ್ದಾಗ ಕೇಳುತ್ತಿದ್ದ ರಾಜಪುತ್ರ, ರಾಜಪುತ್ರಿಯರ ಕತೆಗಳಲ್ಲಿ ವ್ಯಕ್ತಿಗಳ ಸ್ವಭಾವ ಸಹಜವಾಗಿ ನಿರೂಪಿತವಾಗಿರುತ್ತಿದ್ದುವು. "ರಾಜಪುತ್ರಿಯನ್ನು ರಾಕ್ಷಸನೊಬ್ಬ ಅಪಹರಿಸಿಕೊಂಡು ಏಳು ಸಮುದ್ರ, ಏಳು ಬೆಟ್ಟ ದಾಟಿ ಸಾಗರದ ಮಧ್ಯೆ, ಅರಮನೆಯಲ್ಲಿಟ್ಟು, ಚೆಂಕಿಯುಗುಳುತ್ತಿದ್ದ ಸರ್ಪವನ್ನು ಕಾವಲಾಗಿಟ್ಟಾಗ ಆಕೆಗೆ ಭಯವಾಯಿತು" ಎನ್ನುವ ಅಜ್ಜಿಯ ಕತೆಯಲ್ಲಿ ವಾಸ್ತವಿಕತೆ ಇಲ್ಲ; ಆ ಸನ್ನಿವೇಶದಲ್ಲಿ ರಾಜಪುತ್ರಿಗೆ ಭಯವಾದುದು ಸಹಜ, ಆದರೆ ಸನ್ನಿವೇಶವೇ ರಂಜಕ (Romantic) ನಾವು ಮೇಲೆ ವಿಮರ್ಶಿಸಿದ ಉದಾಹರಣೆಯಲ್ಲಿ ಸನ್ನಿವೇಶ ವಾಸ್ತವಿಕ, ಕೂಲಿಗಾರನ ಔದಾರ್ಯ ಅಸಹಜ.

ಇನ್ನು ಒಂದು ಹೆಜ್ಜೆ ಮುಂದೆ ಹೋದರೆ ಇದೇ ಸಮಸ್ಯೆ ಮತ್ತೊಂದು ರೂಪದಿಂದ ಗೋಚರಿಸುವುದು. ವಾಸ್ತವಿಕತೆಗೆ ಸನ್ನಿವೇಶ, ಪಾತ್ರದ ಸ್ವಭಾವ ಎರಡರ ಸಹಜತೆ ಬೇಕು, ಎರಡರ ಸಹಜತೆಯೇ ಸಾಕು ಎಂದರೆ ಆ ಪಾತ್ರದ ಪದವಿ, ಐಶ್ವರ್ಯ ಮುಂತಾದುವು ಅಮುಖ್ಯ ಎಂದಾಯಿತು. ಉದಾಹರಣೆಗೆ ಉತ್ತರ ರಾಮಚರಿತ್ರದ ಸನ್ನಿವೇಶವನ್ನೇ ಪರಿಶೀಲಿಸೋಣ. ಅಗ್ನಿಪರೀಕ್ಷೆಯಿಂದ ತನ್ನ ಪಾತಿವ್ರತ್ಯವನ್ನು ಸಿದ್ಧಮಾಡಿ ತೋರಿಸಿದ ಜಾನಕಿಯನ್ನು ಅಗಸನೊಬ್ಬನ ಮಾತನ್ನು ಕೇಳಿ ಶ್ರೀರಾಮಚಂದ್ರ ತೊರೆಯುತ್ತಾನೆ. ಇಲ್ಲಿ ಶ್ರೀರಾಮ ಇನಕುಲಾಂಬುಧಿ ಚಂದ್ರ; ರಘುವಂಶಲಲಾಮ, ಇಡೀ ಜಗತ್ತಿನ ಸಾರ್ವಭೌಮ ಎಂಬುದಾಗಲಿ ಜಾನಕಿ ರಾಜರ್ಷಿ ಜನಕರಾಯನ ಮಗಳು, ದೇವೇಂದ್ರನ ಮಿತ್ರನಾದ ದಶರಥಮಹಾರಾಜನ ಸೊಸೆ ಎಂಬುದಾಗಲಿ ಮುಖ್ಯವಲ್ಲ. ಈ ಹೊರ ವಿವರಗಳಿಂದ ಅವರ ನೋವಿನ ತೀಕ್ಷ್ಣತೆ ಹೆಚ್ಚಾಗಬಹುದು; ಆದರೆ ಇಲ್ಲಿ ಮುಖ್ಯವಾದುದು ಎಲ್ಲ ಮಾನವರಿಗೂ ಸಹಜವಾದ ಭಾವನೆಗಳು. ಇಲ್ಲಿ ಮುಖ್ಯವಾದುದು ಗಂಡನೊಬ್ಬ ತನ್ನ ಪತ್ನಿಯಲ್ಲಿರುವ ಪ್ರೀತಿ, ಲೋಕಾಪವಾದದ ಭಯ ಇವುಗಳ ಮಧ್ಯೆ ಸಿಕ್ಕಿಪಟ್ಟ ಸಂಕಟ. ಗಂಡನ ಹೆಸರು ಶ್ರೀರಾಮಚಂದ್ರನಾಗಿರಬಹುದು, ಆತ ಮಹಾ ಸಾರ್ವಭೌಮನಾಗಿರಬಹುದು. ಆತನ ಹೆಂಡತಿ ರಾಜರ್ಷಿ ಜನಕನ ಏಕಮಾತ್ರ ಕುವರಿ ಸೀತಾದೇವಿಯಾಗಿರಬಹುದು; ಇಲ್ಲವೇ ಗಂಡನ ಹೆಸರು ರಾಮಯ್ಯನಾಗಿದ್ದು, ಆತ ಯಾವುದೋ ಕಚೇರಿಯಲ್ಲಿ ಗುಮಾಸ್ತನಾಗಿರಬಹುದು, ಆತನ ಹೆಂಡತಿ ಒಬ್ಬ ಬಡ ಉಪಾಧ್ಯಾಯನ ಮಗಳು ಸೀತಮ್ಮನಾಗಿರಬಹುದು. ಈ ಸನ್ನಿವೇಶ ಒದಗಿದುದು ಅಯೋಧ್ಯಾನಗರದಲ್ಲಿ ರಾಜನ ಮಹಾಸೌಧದಲ್ಲಿ ಇರಬಹುದು. ಯಾವುದೋ ಮೂಲೆಯ ಹಳ್ಳಿಯ ಒಂದು ಮುರುಕಲು ಮನೆಯಲ್ಲಿರಬಹುದು. ಇವೆಲ್ಲ ಅಪ್ರಕೃತ ವಿವರಗಳು; ಮುಖ್ಯವಾದುದು ಗಂಡ-ಹೆಂಡಿರ ಪ್ರೇಮದೊಡನೆ ಜಗತ್ತಿನ ಅಭಿಪ್ರಾಯ ಘರ್ಷಿಸಿದುದು. ಹಾಗೆಯೇ ನೆಚ್ಚಿದ ತರುಣಿಯನ್ನು ಕೈಬಿಟ್ಟವನು ಪೌರವ ವಂಶದ ಕೀರ್ತಿಮಣಿ ದುಷ್ಯಂತನಾಗಿರಬಹುದು, ಪರಿತ್ಯಕ್ತಳಾದ ಕನ್ಯೆ ವಿಶ್ವಾಮಿತ್ರ-ಮೇನಕೆಯರ ಪ್ರಣಯದ ಫಲವಾದ, ಕಣ್ವರ ಸಾಕುಮಗಳಾದ ಶಕುಂತಳೆಯಾಗಿರಬಹುದು, ಇಲ್ಲವೆ ಪ್ರಣಯದಲ್ಲಿ ಮಾತು ಮುರಿದವನು ಕಾಲೇಜಿನಲ್ಲಿ ಓದುವ ಒಬ್ಬ ಹುಡುಗನಾಗಿರಬಹುದು, ಪರಿತ್ಯಕ್ತಳಾದವಳು ಅವನ ಸಹಪಾಠಿಯಾಗಿರಬಹುದು. ಮುಖ್ಯವಾದ ವಿಷಯ ತಾನು ನಂಬಿ ತನ್ನ ಸರ್ವಸ್ವವನ್ನೂ ಯಾವಾತನಿಗೆ ಅರ್ಪಿಸಿದಳೋ ಆತ ವಿಶ್ವಾಸಘಾತಕನಾದಾಗ ತರುಣಿ ಅನುಭವಿಸುವ ಯಾತನೆ.

ಆದುದರಿಂದ ಸಾಹಿತ್ಯದಲ್ಲಿ ನಾವು ಬಯಸುವ ವಾಸ್ತವಿಕತೆ ಜೀವನದ ಹೊರ ವಿವರಗಳ ವಾಸ್ತವಿಕತೆಯನ್ನಲ್ಲ. ಮಾನವ ಜೀವನದ ಅನುಭವದ ವಾಸ್ತವಿಕತೆ ಕೃತಿಯನ್ನೋದಿದಾಗ—ಅದು ಶ್ರೀರಾಮ—ಜಾನಕಿಯರ ಕತೆಯಾಗಲಿ, ರಾಮಯ್ಯ—ಸೀತಮ್ಮನ ಕತೆಯಾಗಲಿ, ಅದು ದುಷ್ಯಂತ—ಶಕುಂತಳೆಯರ ಕತೆಯಾಗಲಿ, ಮೋಹನ-ಚಂಚಲೆಯರ ಕತೆಯಾಗಲಿ, "ಜೀವನದಲ್ಲಿ ಇಂತಹ ಪ್ರಸಂಗ ಬಂದೀತು, ಬಂದಾಗ ಮನುಷ್ಯರು ಹೀಗೆ ನಡೆದುಕೊಂಡಾರು" ಎಂದು ನಮಗನ್ನಿಸಿದರೆ ಸಾಕು. ಅದರಲ್ಲಿ ವಾಸ್ತವಿಕತೆ ಇದ್ದಂತೆ ತನ್ನ ಹೆಂಡತಿ ಮತ್ತೊಬ್ಬನೊಡನೆ ಅನೀತಿಯುತ ಸಂಬಂಧವಿಟ್ಟುಕೊಂಡಿದ್ದಳೆಂದು ಅವಳನ್ನು ಕೊಲೆ ಮಾಡಿದ ಕೊಲೆಗಾರರ ಕತೆಗಳು ನಮ್ಮ ವೃತ್ತಪತ್ರಿಕೆಗಳಲ್ಲಿ ಹಲವಾರು ವರದಿಯಾಗುತ್ತವೆ, ನ್ಯಾಯಾಸ್ಥಾನಗಳಲ್ಲಿ ಹೊರಗೆ ಬರುತ್ತವೆ. ಈ ಕತೆ

ಗಳಲ್ಲಿರುವಷ್ಟೇ 'ವಾಸ್ತವಿಕತೆ' ಸತ್ಯವುಂಟು. ಷೇಕ್ಸ್‌ಪಿಯರನ 'ಒಥೆಲೊ'ದಲ್ಲಿ ಒಂದೇ ಮಾತಿನಲ್ಲಿ ಹೇಳುವುದಾದರೆ ಸಾಹಿತ್ಯದಲ್ಲಿ 'ವಾಸ್ತವಿಕತೆ' ಎಂದರೆ ಮಾನವ ಜೀವನದ ಅನುಭವದ ಸತ್ಯ.

ಇದೇ ಸಂದರ್ಭದಲ್ಲಿ ಮತ್ತೊಂದು ಮಾತನ್ನು ವಿಮರ್ಶಿಸಬೇಕು. ಸಾಹಿತ್ಯದಲ್ಲಿ ಮೇಲೆ ವಿವರಿಸಿದ ರೀತಿಯ 'ವಾಸ್ತವಿಕತೆ' ಇರಲೇಬೇಕು. ಆದರೆ ಇಷ್ಟೇ ಸಾಕೆ? ನಮ್ಮ ಜೀವನವನ್ನು ಇದ್ದುದು ಇದ್ದ ಹಾಗೇ ತೋರಿಸುವ ಕೃತಿಗಳು ನಮಗೆ ಅಗತ್ಯವಾಗಿ ಬೇಕು. ನಮ್ಮ ಸಮಾಜದ ಕೊಳಕು, ಕೊಂಕು, ಕಾಟಿಲ್ಯಗಳು ನಮ್ಮ ಕಣ್ಣಿಗೆ ಕಾಣಲೇಬೇಕು. ಆದರೆ ಇಷ್ಟೇ ಸಾಕೆ? ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ತಪ್ಪನ್ನೇ ಹುಡುಕುವ ಸಾಹಿತ್ಯ, ಪ್ರಪಂಚದ ಕೊಳಕನ್ನೇ ತೋರಿಸುವ ಸಾಹಿತ್ಯ 'ವಾಸ್ತವಿಕ'ವಾಗಿರಬಹುದು. ಆದರೆ ಈ ಬಗೆಯ ಸಾಹಿತ್ಯವೇ ಸಾಕೆ? ನಮ್ಮ ಜೀವನದಲ್ಲಿ ಆಗಲೇ ತಕ್ಕಷ್ಟು ದುಃಖ ತುಂಬಿದೆ. ಇಂದಿನ ಪೀಳಿಗೆಯಂತೂ ನಿರ್ಭಾಗ್ಯ ಪೀಳಿಗೆ. ಹುಟ್ಟುವಾಗಲೇ ನಮ್ಮ ಮಕ್ಕಳು ಮಾನಸಿಕವಾಗಿ ವೃದ್ಧಾಪ್ಯದಲ್ಲಿಯೇ ಇರುತ್ತಾರೆ, ಎನ್ನಬಹುದು. ನಾಲ್ಕು-ಐದು ವರ್ಷದ ಮಕ್ಕಳೇ ಅಂಗಡಿಗೆ ಓಡಾಡಬೇಕು, ಜೀವನಕ್ಕೆ ಅಗತ್ಯವಾದ ಸಾಮುಗ್ರಿಗಳು ಸಿಗುವುದೂ ಕಷ್ಟವಾದ ಕಾಲ ನಮ್ಮದು. ಈ ಕಾರ್ಪಣ್ಯದಲ್ಲಿ ಬೆಳೆಯಬೇಕು ಮಕ್ಕಳು. ಬರಬರುತ್ತ ಬಾಳಿನಲ್ಲಿ ಸ್ಪರ್ಧೆ, ಹೋರಾಟಗಳು ಹೆಚ್ಚುತ್ತಿವೆ. ನಮ್ಮ ನಾಗರಿಕತೆಯ ಪರಿಣಾಮದಿಂದ ನಗರಗಳೆಂದರೆ ಇಂಗ್ಲಿಷ್‌ನಲ್ಲಿ ಒಬ್ಬ ಲೇಖಕ ಹೇಳಿದಂತೆ "huge wildernesses." ಹಿಂದೆ ಹಳ್ಳಿಯ ಜೀವನದಲ್ಲಿ ನಾವು ಕಾಣುತ್ತಿದ್ದ ಸಮಷ್ಟಿ ಜೀವನ ಇಂದು ಕಾಣದು. ಪ್ರತಿಯೊಬ್ಬರಿಗೂ ತಮ್ಮ ಜೀವನವನ್ನು ಸಾಗಿಸುವುದೇ ಕಷ್ಟ. ನೆರೆಹೊರೆಯವರೊಡನೆ ಬೆರೆಯಲು ಕಾಲಾವಕಾಶವೇ ಆಗದು. ನಮ್ಮಲ್ಲಿ ಎಷ್ಟೋ ಮಂದಿಗೆ ಪಕ್ಕದ ಮನೆಯಲ್ಲಿ ಯಾರಿದ್ದಾರೆ ಎಂದು ತಿಳಿದುಕೊಳ್ಳುವುದಕ್ಕೇ ವ್ಯವಧಾನವಿರುವುದಿಲ್ಲ. ಹೀಗೆ ವ್ಯಕ್ತಿಗಳು ಬಿಡಿಬಿಡಿಯಾಗಿ ಪ್ರತ್ಯೇಕ ಜೀವನ ನಡೆಸಬೇಕಾಗಿ ಬಂದಿರುವ, ಕಾರ್ಪಣ್ಯ ಕಷ್ಟಗಳು ಹೆಚ್ಚುತ್ತಿರುವ ಈ ಜಗತ್ತಿನಲ್ಲಿ ಸಾಹಿತ್ಯವೂ ಜೀವನದ ಕೊಂಕನ್ನೇ ಒತ್ತಿ ಹೇಳುವುದು ಸಾಧುವಲ್ಲ, ಎಂದ ಮಾತ್ರಕ್ಕೆ ಜೀವನ ಮಲ್ಲಿಗೆಯ ಮಾರ್ಗ, ಚಂದ್ರಿಕೆಯ ಸಾಗರದಲ್ಲಿ ತೇಲಿಬಿಟ್ಟ ಸ್ವರ್ಗ ಎಂದು ಸಾಹಿತ್ಯ ಸಾರಬೇಕೆಂದಲ್ಲ, ಜೀವನದ ಅನುಭವದಿಂದ ದೂರವಾದ ಸಾಹಿತ್ಯದಿಂದ ನಮಗೆ ಯಾವ ಪ್ರಯೋಜನವೂ ಇಲ್ಲ. ಗಾಳಿಗೋಪುರಗಳೂ ಜೀವನಕ್ಕೆ ಸಂಬಂಧಿಸಿದ್ದರೇ ಅವುಗಳಿಗೆ ನಿಜವಾದ ಸಾಹಿತ್ಯದ ಪ್ರಪಂಚಕ್ಕೆ ಪ್ರವೇಶವುಂಟು. ಆದರೆ, ಕಷ್ಟನಿಷ್ಠುರಗಳಿಂದ ತುಂಬಿದ ಜಗತ್ತಿನಲ್ಲಿ ಕೂಡ ಅರ್ಥ, ಸೌಂದರ್ಯವನ್ನು ಕಂಡುಕೊಂಡು ಜೀವನದಲ್ಲಿ ಸಾರ್ಥಕ್ಯವನ್ನು ತೋರಿಸಬಲ್ಲ ದಾರ್ಶನಿಕರು (men of vision) ನಮಗೆ ಬೇಕು. ಕಣ್ಣಿನಲ್ಲಿ ನೀರು ತುಂಬಿದ ಯುವತಿಯ ಮುಖದಲ್ಲಿಯೂ ಒಂದು ಸೌಂದರ್ಯ ಉಂಟು; ದುಃಖ ತುಂಬಿರುವ ಜೀವನದಲ್ಲಿಯೂ ಒಂದು ಸೌಂದರ್ಯ ಉಂಟು. ಈ ಸೌಂದರ್ಯವನ್ನು ಕಂಡುಕೊಂಡು ಜಗತ್ತಿನ ಕ್ರೌರ್ಯ, ಕುರೂಪ, ದುಃಖಗಳಲ್ಲಿ ಅಡಗಿರುವ ಜೀವನದ ಸಾರ್ಥಕ್ಯವನ್ನು ತೋರಿಸುವ ಮಹಾ ಸಾಹಸಿಗರು ನಮಗೆ ಬೇಕು. ಜೀವನ ಬರಿಯ ಕಣ್ಣೀರಿನ ಕಡಲು ಎನ್ನಿಸದೆ ಆ ಕಡಲಿನ ಗರ್ಭದಲ್ಲಿ ಅಡಗಿರುವ ರತ್ನಗಳನ್ನು ಬೆಳಕಿಗೆ ತರುವ ವೀರರ ಸಾಹಿತ್ಯದಲ್ಲಿ ಬೇಕು. ಸಾಗರದ ಭೋರ್ಗರೆಯುವ ಅಲೆಗಳು, ಕರುಣಾಹೀನವಾದ ಪ್ರಚಂಡ ಮಾರುತಗಳೊಡನೆ ಅದರ ಕಗ್ಗತ್ತಲೆ ತುಂಬಿದ ಗುಹೆಯಲ್ಲಡಗಿರುವ ರತ್ನಗಳನ್ನು ತೋರಿಸುವ 'ವಾಸ್ತವಿಕತೆ' ನಮಗೆ ಬೇಕು. ಎಲ್ಲ ಹಿರಿಯ ಸಾಹಿತಿಗಳೂ ಈ ಕಾರ್ಯವನ್ನು ಮಾಡಿದ್ದಾರೆ. ಮಹಾಭಾರತ ಮೊದಲಿನಿಂದ ಕೊನೆಯವರೆಗೆ ಗೋಳಿನ ಕತೆಯೇ; ಅದರೆ ಅಭಿಮಾನಧನ ದುರ್ಯೋಧನ, ಧರ್ಮಮೂರ್ತಿ ಯುಧಿಷ್ಠಿರ, ಸಿಂಹದ ಮರಿ ಅಭಿಮನ್ಯು, ದಾನವೀರ ಕರ್ಣ, ಪ್ರಜ್ಞಾಮೂರ್ತಿ ಭೀಷ್ಮ, ಮಹಾ ಸನ್ಯಾಸಿನಿ ಕುಂತಿ-ಇವರೆಲ್ಲ ಇರುವ ಜಗತ್ತಿನಲ್ಲಿ ಎಷ್ಟೇ ಕಷ್ಟ, ದುಃಖಗಳಿರಲಿ, ಅದು ಸುಂದರ ಸಾರ್ಥಕ ಎನ್ನಿಸುತ್ತದೆ. ಷೇಕ್ಸ್‌ಪಿಯರನ 'ಲಿಯರ್' ಎಂಬತ್ತು ವರ್ಷದ ವೃದ್ಧ ದೊರೆ ಕೊನೆಯ ಮಗಳ ಸತ್ಯದ ಮಾತಿನ ಕಹಿಯನ್ನು ಸಹಿಸದೆ ಅವಳನ್ನು ತೊರೆದು ತಾನು ನೆಚ್ಚಿದ ಮಕ್ಕಳಿಂದ ಪರಿತ್ಯಕ್ತನಾಗಿ, ಮಳೆಗಾಳಿಗಳಲ್ಲಿ ಬಳಲಿ, ಕೊನೆಗೆ ತಾನೂ ತನ್ನನ್ನು ಕಾಪಾಡಲು ಬಂದ ಕೊನೆಯ ಮಗಳೂ ಸಾವಿನ ಒಡಲು ಸೇರಿದ ಕತೆ. ಆದರೆ ನಾಟಕದ ಕೊನೆಯ ಹೊತ್ತಿಗೆ ಲಿಯರನ ಸ್ವಭಾವವೇ ಬದಲಾಗಿರುತ್ತದೆ. ಈ ಹೊಸ ಲಿಯರ್, ಕರುಣಾಮೂರ್ತಿ ಕಾರ್ಡೀಲಿಯ, ನಿಸ್ವಾರ್ಥ ಸೇವಕ ಕೆಂಟ್, ಇವರಂತಹವರು ಇರುವವರೆಗೆ ಜೀವನ ಅರ್ಥಹೀನವಲ್ಲ ಎನ್ನಿಸುತ್ತದೆ. ಕಾಳಿದಾಸನ 'ಅಭಿಜ್ಞಾನ ಶಕುಂತಳ' ಏನೂ ಅರಿಯದ ಮುಗ್ಧೆಯ ಸುತ್ತ ಪ್ರಪಂಚ ಛಿದ್ರಛಿದ್ರವಾಗಿ ಮುರಿದು ಬೀಳುವ ಕರುಳು ಕತ್ತರಿಸುವ ದೃಶ್ಯವನ್ನು ಚಿತ್ರಿಸುತ್ತದೆ; ಆದರೆ ಆ ಮುಗ್ಧೆಯ ವ್ಯಕ್ತಿತ್ವವೇ ಸಾಕು. ಪ್ರಪಂಚ ಸೌಂದರ್ಯಹೀನವಲ್ಲ, ಅರ್ಥಹೀನವಲ್ಲ ಎನ್ನಿಸಲು, ಶ್ರೀ. ಕಾರಂತರ 'ಚೋಮನ ದುಡಿ,' ಶ್ರೀ. ಅ. ನ. ಕೃಷ್ಣರಾಯರ 'ನಟ ಸಾರ್ವಭೌಮ,' ಶ್ರೀ. ಶ್ರೀನಿವಾಸರ 'ಚೆನ್ನ ಬಸವ ನಾಯಕ,' ಶ್ರೀ. ಶ್ರೀ. ಅವರ 'ಅಶ್ವತ್ಥಾಮನ್,' ಯಾವ ಹಿರಿಯ ಸಾಹಿತ್ಯ ಕೃತಿಯನ್ನೇ ತೆಗೆದುಕೊಂಡರೂ ಈ ಸಾಧನೆಯನ್ನು ನಾವು ಕಾಣಬಹುದು. ಶ್ರೀ. ಪುಟ್ಟಪ್ಪನವರು ಒಂದು ಕಡೆ ಎರಡೇ ಪಂಗ್ತಿಯಲ್ಲಿ ಈ 'ದರ್ಶನ'ದ ಚಿತ್ರವನ್ನು ನಿರೂಪಿಸಿದ್ದಾರೆ:



ಶ್ರೀ ಗೋಕರ್ಣ ಮಠಾಧೀಶ ಶ್ರೀಮದ್ದ್ವಾರಕಾನಾಥ ತೀರ್ಥ ಶ್ರೀಪಾದಂಗಳವರು.

ಅಂತರರಾಷ್ಟ್ರೀಯ ಶಾಂತಿಯ ಸಂಘಟನೆ

ಲೇಖಕ: ಕೋ. ಶ. ಕಾರಂತ, ಬಿ. ಎ., ಬಿ. ಎಲ್., ಮಂಗಳೂರು

★

ಸೃಷ್ಟಿಯ ಆದಿಯಿಂದ ರಾಜ್ಯರಚನಾಸೂತ್ರವು ಸಾಗುತ್ತಿದೆ. ರಾಜನ ಪ್ರಾದುರ್ಭಾವವು ಐತರೇಯ ಬ್ರಾಹ್ಮಣದಲ್ಲಿ ಈ ಪ್ರಕಾರ ನಿರೂಪಿಸಲ್ಪಟ್ಟಿದೆ:

ನ ರಾಜ್ಯಂ ನ ರಾಜಾಽಸೀತ್ ನದಂಡೋನ ಚ ದಂಡಿಕಃ ।
ಧರ್ಮೇಣೈವ ಪ್ರಜಾಃ ಸರ್ವಾ ರಕ್ಷಂತಿ ಸ್ಮ ಪರಸ್ಪರಂ ॥

ಆದಿಯಲ್ಲಿ ದೇವತೆಗಳಲ್ಲಿ ರಾಜನಾಗಲಿ ರಾಜ್ಯವಾಗಲಿ ಇರಲಿಲ್ಲ. ಶಿಕ್ಷೆ ಅಥವಾ ಶಿಕ್ಷೆಯನ್ನು ವಿಧಿಸುವ ದಂಡಾಧಿಕಾರವು ಇರಲಿಲ್ಲ. ಪ್ರಜೆಗಳೆಲ್ಲಾ ಧರ್ಮಪರಾಯಣರಾಗಿ ಪರಸ್ಪರಾನುರಾಗದಿಂದ ಸುರಕ್ಷಿತರಾಗಿದ್ದರು. ಆದರೆ ಒಂದು ಕಾಲ ಅಸುರರು ಈ ದೇವತೆಗಳ ಮೇಲೆ ಆತಿಕ್ರಮಿಸಿದರು. ಅಪರ್ಯಾಪ್ತ ಬಲವುಳ್ಳ ದೇವತೆಗಳು ಯುದ್ಧದಲ್ಲಿ ಪರ್ಯಾಪ್ತ ಬಲದವರಾದ ಅಸುರರಿಂದ ಪರಾಜಿತರಾದರು. ದೇವತೆಗಳು ಪರಿತಾಪಗೊಂಡು ಪ್ರಜಾಪತಿಯನ್ನು ಸೇರಿ ತಮ್ಮ ಪರಾಜಯದ ಕಾರಣವೇನೆಂದು ವಿಜ್ಞಾಪಿಸಿಕೊಂಡನು. ಆಗ ಪ್ರಜಾಪತಿಯು ಹೀಗೆ ಉತ್ತರಿಸಿದರು: "ಅಸುರರು ರಾಜಾಧೀನ ಸಂಘಟಿತರು. ನೀವು ಧರ್ಮಪರಾಯಣರಾದರೂ ಸಂಗ್ರಾಮ ನೀತಿ ಪ್ರಕಾರ ಸಂಘಟಿತರಾಗಿಲ್ಲವಾದ ಕಾರಣ ವಿಜಯಶ್ರೀಯು ನಿಮ್ಮನ್ನು ಒಲಿಯಲಿಲ್ಲ."

ದೇವತೆಗಳು ಸಂಘಟನೆಯ ನೀತಿಬೋಧೆಯನ್ನು ಪಡೆದು ಮರಳಿದರು. ಓರ್ವ ಪ್ರಶಕ್ತ ದೇವನನ್ನು ತಮ್ಮ ರಾಜನನ್ನಾಗಿ ಆರಿಸಿ ಸಂಘಟಿತರಾಗಿ ಅಸುರರ ಮೇಲೆ ಯುದ್ಧವನ್ನು ಸಾರಿ ವಿಜಯಿಗಳಾದರು.

ಈ ಪ್ರಕಾರ ಜನರು ಸಂಘಟಿತರಾಗಿ ಒಬ್ಬ ನಾಯಕನ ಅಧಿಕಾರಕ್ಕೆ ಅಧೀನ ಜೀವಿಸುವುದೇ ರಾಜ್ಯವಿಧಾನವು. ಆ ನಾಯಕನೇ ಕಾಲಕ್ರಮದಿಂದ ರಾಜನೆಂಬ ಅಭಿಧಾನದಿಂದ ವಿಖ್ಯಾತನಾದನು. ಇಂಥಾ ರಾಜ್ಯಕ್ರಮಗಳನ್ನು ವಿಚಾರಿಸಿದಲ್ಲಿ ಎರಡು ಪ್ರಧಾನಕ್ರಮಗಳು ಕಾಣಬರುತ್ತವೆ; ಓರ್ವನ ಅಧಿಕಾರಕ್ಕೆ ಒಳಪಟ್ಟ ರಾಜ್ಯಕ್ರಮ ಮತ್ತು ಗಣರಾಜ್ಯಕ್ರಮ. ಗಣ ಎಂದರೆ ಬಹುಸಂಖ್ಯೆ ಅಥವಾ ಒಬ್ಬನಿಗಿಂತ ಹೆಚ್ಚಾಗಿ ಇರುವ ಪ್ರಜೆಗಳ ಪ್ರತಿನಿಧಿಗಳಿಂದ ಆಳಲ್ಪಡುವ ರಾಜ್ಯಕ್ರಮ. ಈ ರಾಜ್ಯಕ್ರಮಗಳಲ್ಲಿ ರಾಷ್ಟ್ರಭಾವನೆಯ ವರ್ಚಸ್ಸು ಇರಲಿಲ್ಲ.

ಹದಿನೆಂಟನೆಯ ಶತಮಾನವು ಕೈಗಾರಿಕೆ ಅಥವ ಯಾಂತ್ರಿಕ ಕ್ರಾಂತಿಯುಗವು. ಪಾಶ್ಚಾತ್ಯದೇಶಗಳಲ್ಲಿ ಯಂತ್ರನಿರ್ಮಾಣವಾಗಿ ಯಂತ್ರನಿಲಯಗಳು—ಕಾರಖಾನೆಗಳು ದೇಶದಲ್ಲಿ ಸ್ಥಾಪಿಸಲ್ಪಟ್ಟವು. ಇವುಗಳ ಕಾರ್ಯಕ್ಕೆ ಶ್ರಮಜೀವಿಗಳು ಅಗತ್ಯ. ಆದರೆ ಒಕ್ಕಲಿಗರು ಜಮೀನುದಾರರಿಂದ ಆನುವಂಶಿಕವಾಗಿ ಪಡೆದ ಭೂಮಿಗಳಿಗೆ ದಾಸ್ಯಗ್ರಸ್ತರಾಗಿದ್ದ ಕಾರಣ ಕಾರಖಾನೆಗಳ ಕೆಲಸಕ್ಕೆ ಸಿಗುತ್ತಿರಲಿಲ್ಲ. ಶ್ರಮಜೀವಿಗಳಿಲ್ಲದೆ ಕಾರಖಾನೆಗಳು ನಡೆಯುವಂತಿರಲಿಲ್ಲ. ರಾಜ್ಯದ ಆರ್ಥಿಕ ಅಭ್ಯುದಯವಾಗುವಂತಿರಲಿಲ್ಲ. ಹೀಗಾಗಿ ರಾಜ್ಯದಲ್ಲಿ ಭೂಮಿಯು ಒಕ್ಕಲುತನ ಬಂಧನದಿಂದ ವಿಮೋಚಿಸುವುದಕ್ಕಾಗಿ ಕ್ರಾಂತಿಯು ಸಾರಲ್ಪಟ್ಟಿತು. ಈ ಯಾಂತ್ರಿಕ ಕ್ರಾಂತಿಯ ಪರಿಣಾಮವಾಗಿ ಜನರಲ್ಲಿ ರಾಷ್ಟ್ರಭಾವನೆಯು ಮೂಡಿತು. ರಾಷ್ಟ್ರಪ್ರೇಮದ ಪ್ರಾದುರ್ಭಾವದಿಂದ ರಾಷ್ಟ್ರಕಲ್ಪನೆಯಾಗಿ ರಾಜ್ಯಗಳು ರಾಷ್ಟ್ರರಾಜ್ಯಗಳಾಗಿ ರೂಪಾಂತರಗೊಂಡವು.

ರಾಷ್ಟ್ರದ ಪ್ರಾದುರ್ಭಾವನೆಗೆ ಇನ್ನೊಂದು ಕಾರಣವಿತ್ತು. ಫ್ರಾನ್ಸನ್ನು ಅನ್ಯರು ಆಕ್ರಮಿಸಿ ಆಳುತ್ತಿದ್ದರು. ಈ ಪ್ರಕಾರ ಆಕ್ರಮಿಸಿದವರನ್ನು ಓಡಿಸಿ ತಾವೇ ತಮ್ಮ ದೇಶದ ರಾಜ್ಯಭಾರಕ್ರಮವನ್ನು ನಡೆಯಿಸಬೇಕೆಂಬ ರಾಷ್ಟ್ರಕಲ್ಪನೆಯು ಫ್ರಾನ್ಸಿನ ಜನರಲ್ಲಾಗಿ ಫ್ರಾನ್ಸಿನ ಮಹಾಕ್ರಾಂತಿಗೆ ಕಾರಣವಾಯಿತು. ನೆಪೋಲಿಯನನ ನಾಯಕತ್ವದಲ್ಲಿ ಫ್ರಾನ್ಸು "**ರಾಷ್ಟ್ರರಾಜ್ಯ**"ವಾಯಿತು.

ಸೂರ್ಯೋದಯ, ಚಂದ್ರೋದಯ,
ದೇವರ ದಯ ಕಾಣು.

ಮಾನವ ಬಾಳಿನ ಕಠೋರತೆಯನ್ನು ಚಿತ್ರಿಸಿ ಆ ಕೆಸರಿನಲ್ಲರಳುವ ಕಮಲವನ್ನು ತೋರಿಸಿ

"ಇದುವೆ ಜೀವ
ಇದು ಜೀವನ
ಪವನದಂತೆ ಪಾವನ"

ಎಂದು ಧೈರ್ಯವಾಗಿ ಘೋಷಿಸಬಲ್ಲ 'ವಾಸ್ತವಿಕತೆ' ನಮಗಿಂದು ಬೇಕು.

ಫ್ರಾನ್ಸ್ ತನ್ನ ಮೇಲೆ ದಾಳಿಮಾಡುವುದೆಂದು ಜರ್ಮನ ಜನರು ಪ್ರತಿಭಟಿಸಲು ರಾಷ್ಟ್ರಪ್ರೇಮಿಗಳಾಗಿ'ರಾಷ್ಟ್ರರಾಜ್ಯ'ವನ್ನುಸ್ಥಾಪಿಸಿದರು. ಬ್ರಿಟಿಷರ ನಿರಂಕುಶ ಪ್ರಭುತ್ವವನ್ನು ಮನಗೊಂಡು ಭಾರತದಲ್ಲಿ ರಾಷ್ಟ್ರಕಲ್ಪನೆ ರಾಷ್ಟ್ರಪ್ರೇಮಗಳು ಪ್ರಾದುರ್ಭಾವವಾಗಿ ಅಖಿಲ ಭಾರತ ರಾಷ್ಟ್ರಸಂಘವು ಜನ್ಮವೆತ್ತಿ, ಭಾರತದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೆಣಗಾಡಿತು. ಭಾರತವು ೧೯೪೭ನೆ ಆಗೋಸ್ತು ೧೫ರ ದಿನ ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಯಿತು.

ಆದರೆ ಕೆಲವು ರಾಷ್ಟ್ರರಾಜ್ಯಗಳು ತಮ್ಮ ಜನ್ಮಹಕ್ಕಿನ ರಾಜ್ಯಗಳಲ್ಲಿ ತೃಪ್ತರಾಗದೆ ಸಾಮ್ರಾಜ್ಯದ ಲಾಲಸೆಗೆ ಮನಗೊಟ್ಟವು. ತಮ್ಮ ಪ್ರಾಂತಪ್ರದೇಶಗಳನ್ನು ಅತಿಕ್ರಮಿಸಿ ಚಿಕ್ಕಪುಟ್ಟ ರಾಜ್ಯಗಳನ್ನು ಅಪೋಶನೆಮಾಡಿ 'ಸಾಮ್ರಾಜ್ಯ' (Empires)ಗಳಾದವು. ತಮ್ಮ ರಾಷ್ಟ್ರಭಾವನೆಯ ಉತ್ಕರ್ಷೆಯಲ್ಲಿ ಅನ್ಯರ ರಾಷ್ಟ್ರಗಳಿಗೆ, ರಾಷ್ಟ್ರಭಾವನೆಗೆ ಎಡೆ ಇರಲಿಲ್ಲ. ಶ್ವೇತವರ್ಣದವರು ಆಫ್ರಿಕ, ಭಾರತ, ಮಲಯ ಮೊದಲಾದ ಅನ್ಯವರ್ಣದ ರಾಜ್ಯಗಳಲ್ಲಿ ವಸತಿ ನೀತಿಯನ್ನು ಸಾರಿ ಸಾಮ್ರಾಜ್ಯಶಾಹಿಗಳಾದರು. ಅನ್ಯವರ್ಣದವರಿಗೆ ತಮ್ಮನ್ನಾಳುವ ದಕ್ಷತೆ ಇಲ್ಲವೆಂಬುದೇ ಇವರ ನಿರ್ಧಾರಿತ ನೀತಿಸೂತ್ರ. ಈ ಧೋರಣೆ ಪ್ರಕಾರ ಆ ಜನರ ಶ್ರೇಯಸ್ಸಿಗಾಗಿ ಬ್ರಿಟಿಷರು,ಫ್ರೆಂಚರು, ಡಚ್ಚರು, ಜರ್ಮನರು, ಅಮೇರಿಕನರು ತಮ್ಮ ವಸಾಹತು ರಾಜ್ಯಗಳನ್ನು ಸ್ಥಾಪಿಸಿದರಂತೆ! ಆದರೆ ಭಾರತವು ಯಾವ ಶತಮಾನದಲ್ಲಿಯೂ ಜನನೀ ಜನ್ಮಭೂಮಿಯಾದ ಭಾರತದ ಮೇರೆಗಳನ್ನು ಮೀರಿ ಅನ್ಯ ಯಾವ ಜನಾಂಗವನ್ನಾಗಲಿ ರಾಜ್ಯವನ್ನಾಗಲಿ ಜಯಿಸಿ ಸಾಮ್ರಾಜವನ್ನು ಸ್ಥಾಪಿಸುವ ಲಾಲಸೆಗೆ, ಧೋರಣೆಗೆ, ತುತ್ತಾಗಿರಲಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದು. ಅಶೋಕ ಚಂದ್ರಗುಪ್ತ ಮೊದಲಾದವರು ರಾಷ್ಟ್ರರಾಜ್ಯಗಳನ್ನು ಭಾರತ ದೇಶದಲ್ಲಿ ಸ್ಥಾಪಿಸಿದರು. ಧರ್ಮಬೋಧಕ ಋಷಿಗಳು, ಭಿಕ್ಷುಗಳು ಭಾರತದ ವೈಭವವನ್ನು ಬೃಹತ್‌ಭಾರತದಲ್ಲಿ ಸಾರಿದರು. ಆದರೆ ಸಾಮ್ರಾಜ್ಯವನ್ನು ಭಾರತವು ಎಂದೂ ಸ್ಥಾಪಿಸಲಿಲ್ಲ. ಸಾಮ್ರಾಜ್ಯಸ್ಥಾಪನೆಗಾಗಿ ಯುದ್ಧವನ್ನು ಭಾರತವು ಎಂದೂ ಸಾರಲಿಲ್ಲ. ಚರಿತ್ರಕಾರರು ಈ ಪ್ರಕಾರದ ರಾಷ್ಟ್ರರಾಜ್ಯಗಳನ್ನು 'ಸಾಮ್ರಾಜ್ಯಶಾಹಿ ಪಕ್ಷದ' ಸಾಮ್ರಾಜ್ಯಗಳೆಂದು ತಪ್ಪಾಗಿ ಕರೆದಿರುವರು.

ಮಾನವ ಮತ್ತು ಪ್ರಾಣಿ ಸಮಾಜದಲ್ಲಿ ಪೀಟರ್ ಕ್ರೊಪೊಟ್ಕಿನ್ನರು(Peter Kropotkin)ತಮ್ಮ Mutual Aid (ಸಹಯೋಗ) ಎಂಬ ಗ್ರಂಥದಲ್ಲಿ ಬೋಧಿಸಿದಂತೆ ಸಹಯೋಗ ಮತ್ತು ಸಂಘರ್ಷ ಈ ಎರಡು ಮುಖ್ಯ ನೀತಿಗಳು ರಾಜ್ಯದಲ್ಲಿ ಕಾಣಬರುತ್ತವೆ. ರಾಜ್ಯಗಳ ಸಂಘರ್ಷಣೆಯೇ ಸಮರ; ರಾಜ್ಯಗಳು ಪರಸ್ಪರ ಸಹಯೋಗದಿಂದ ಬಾಳುವುದೇ ರಾಜ್ಯಗಳ ಒಳಗೆ ಶಾಂತಿಸ್ಥಾಪನೆ. ಇದೇ ಅಂತರರಾಷ್ಟ್ರೀಯ ಶಾಂತಿಸ್ಥಾಪನೆ.

ರಾಷ್ಟ್ರಗಳ ಸಂಘರ್ಷಣೆ ಅಥವಾ ಅಂತಃಕಲಹಗಳನ್ನು ಪಂಚಾಯಿತಿಯಿಂದ ಬಗೆಹರಿಸುವುದಕ್ಕೆ ಒಂದು ಸಂಸ್ಥೆ ಬೇಕು. ಇಂಥಾ ವ್ಯವಸ್ಥೆಯನ್ನು ಸಾಧಿಸುವುದಕ್ಕಾಗಿ ಎಲ್ಲಾ ರಾಷ್ಟ್ರಗಳ ಸಮ್ಮತಿ ಇರುವ ಅಂತರರಾಷ್ಟ್ರೀಯ ಸಂಘಟನೆಯು ಅತೀ ಅಗತ್ಯವೆಂದು ನೀತಿವೇತ್ತರಾದ ರೂಸೋ, ಕ್ಯಾರಟ್, ಬೆಂಥಮ್ ಮೊದಲಾದವರು ವಾದಿಸಿದರು. ಆದರೆ ರಾಜ್ಯಗಳು ರಾಷ್ಟ್ರಭಾವನೆಯಿಂದ ಸ್ಫೂರ್ತಿಗೊಳ್ಳಬೇಕು. ಇದಕ್ಕೆ ಪ್ರಜೆಗಳ ಪ್ರಭುತ್ವವು ಎಲ್ಲಾ ರಾಷ್ಟ್ರಗಳಲ್ಲಿ ನೆಲಸಬೇಕಾಗಿರುವುದು ಅತೀ ಅಗತ್ಯವು. ಪ್ರಜೆಗಳ ಪ್ರಭುತ್ವಕ್ಕೆ ಎಡೆಯಿಲ್ಲದ ನಿರಂಕುಶ ರಾಜ್ಯಪ್ರಭುತ್ವದಲ್ಲಿ ರಾಷ್ಟ್ರಸ್ಫೂರ್ತಿಗೆ ಎಡೆ ಎಲ್ಲಿ?

ಹದಿನೆಂಟನೆ ಶತಮಾನದ ಯಾಂತ್ರಿಕ ಕ್ರಾಂತಿಯಿಂದಾಗಿ ರಾಷ್ಟ್ರಗಳ ಆರ್ಥಿಕ ಮತ್ತು ವಾಣಿಜ್ಯ ದೃಷ್ಟಿಯಲ್ಲಿ ಪರಸ್ಪರ ಅನುರಾಗ ಮತ್ತು ಅವಲಂಬನಕ್ಕೆ ಆರಂಭವಾಯಿತು. ಹತ್ತೊಂಭತ್ತನೆ ಶತಮಾನದಲ್ಲಿ ವಿದ್ಯುಚ್ಛಕ್ತಿ ಮತ್ತು ಹೊಸಯ ಯಾನ, ವಾಹನಸೌಕರ್ಯಗಳು, ಟೆಲಿಫೋನ್ ತಂತಿವಾರ್ತಾಪ್ರಸಾರ ಮೊದಲಾದ ಸೌಕರ್ಯಗಳು ಸೌಲಭ್ಯಗಳು ರಾಜ್ಯರಾಜ್ಯಗಳೊಳಗೆ ನೆಲಸಿ ಅಂತರರಾಷ್ಟ್ರೀಯ ಭಾವನೆ, ಪಾರಸ್ಪರಿಕ ಮೈತ್ರಿ ಮತ್ತು ಸಂಬಂಧ ಇವು ಉದಯಿಸಿದವು. ೧೮೧೫ರಲ್ಲಿ ಡೆವಿಡ್ ಲೌ ಡಾಡ್ಜ್ ಎಂಬಾತನು 'ನ್ಯೂಯೋರ್ಕಿನ ಶಾಂತಿಸಂಘ'ವನ್ನು ಸ್ಥಾಪಿಸಿದನು. ಆ ಮೇಲೆ ಸ್ಥಾಪಿತವಾದ 'ಕೊನ್ಸರ್ಟ್ ಒಫ್ ಯುರೋಪ್' ಎಂಬ ಸಂಸ್ಥೆಯು ಸ್ಥಾಯಿಯಾದ ಸಂಸ್ಥೆಯಾಗಿರಲಿಲ್ಲ. ಅದೊಂದು ಆಗಿಂದಾಗ್ಗೆ ಕರೆಯಿಡುವ ಕೂಟದಂತಿತ್ತು. ಆ ಬಳಿಕ ಯುರೋಪಿನಲ್ಲಿ ಕೆಲವು ಶಾಂತಿಸಂಘಗಳು ಸ್ಥಾಪಿತವಾದರೂ ಹೆಚ್ಚಿನ ಯಾವ ಫಲಕಾರಿಯಾಗಲಿಲ್ಲ. ಇಂಗ್ಲೆಂಡಿನ ಕಾಬ್ಡೆನ್, ಫ್ರಾನ್ಸಿನ ವಿಕ್ಟರ್ ಹ್ಯೂಗೋ ಸ್ವೀಡನ್ನಿನ ಆಲ್ಫ್ರೆಡ್ ನೊಬೆಲ್, ಸಂಯುಕ್ತ ಅಮೇರಿಕದ ಆಲ್ಫ್ರೆಡ್ ಕಾರ್ನೆಗೀ, ಜೊನ್ ಸ್ಟೂವರ್ಟ್ ಮಿಲ್, ಬ್ಲಂಟ್‌ಷ್ಲಿ, ವಿಲಿಯಂ ಲೊಡ್ ಮೊದಲಾದ ನೀತಿವೇತ್ತರು, ವಿದ್ವಾಂಸರು ಮತ್ತು ತಜ್ಞರು ವಿಶ್ವಶಾಂತಿಯ ಆವಶ್ಯಕತೆಯನ್ನು ಪ್ರತಿಪಾದಿಸಿದರು. ಆ ಕುರಿತು ಕೆಲವು ಗ್ರಂಥಗಳೂ ಪ್ರಕಟವಾದುವು. ೧೯೧೩ರಲ್ಲಿ ಬ್ರೈಯಾನ್ ಯೋಜನೆ ಎಂಬ ಇನ್ನೊಂದು ಯುದ್ಧವನ್ನು ತಡೆಗಟ್ಟುವ ಪ್ರಯತ್ನ ನಡೆಯಿತು. ಸಾಧ್ಯವಾದ ಮಟ್ಟಿಗೆ ರಣರಂಗಕ್ಕೆ ದುಮುಕದೆ ಮಿತ್ರರಾಷ್ಟ್ರಗಳ ಪಂಚಾಯಿತಿಯಿಂದ ರಾಷ್ಟ್ರಗಳ ಅಂತಃಕಲಹಗಳನ್ನು ಬಗೆಹರಿಸಬೇಕೆಂಬುದೇ ಇವುಗಳ ಧ್ಯೇಯವಾಗಿತ್ತು,

ಈ ಪ್ರಕಾರದ ಯತ್ನಗಳು ನಡೆಯುತ್ತಿರುವ ಸಮಯ

ದಲ್ಲಿ ಕೈಸರನು ಪ್ರಥಮ ಮಹಾಯುದ್ಧವನ್ನು ಹೂಡಿದನು. ಈ ಯುದ್ಧದ ಪರಿಣಾಮವಾಗಿ ಅಗಣಿತ ನರಬಲಿಯಾಯಿತು. ರಾಜ್ಯಗಳು ಧ್ವಂಸವಾದವು. ಯುದ್ಧವನ್ನು ಕೊನೆಗಾಣಿಸುವ ಯುದ್ಧವಿದೆಂದು ರಾಜ್ಯಬಲಗಳು ಧ್ವಜದೆಡೆಯಲ್ಲಿ ಸೇರಿ ನರಸಂಹಾರಮಾಡಿದವು. ಯುದ್ಧಾನಂತರ ಶಾಂತಿಯನ್ನು ಸ್ಥಾಪಿಸುವುದಕ್ಕಾಗಿ ಜನಾಂಗ ಸಂಘ (The League of Nations) ವನ್ನು ಮಿತ್ರರಾಷ್ಟ್ರಗಳು ಜಿನೀವದಲ್ಲಿ ಸ್ಥಾಪಿಸಿದವು. ಈ ಸಂಸ್ಥೆಗೆ (೧) ಅಂತರರಾಷ್ಟ್ರೀಯ ಪ್ರತಿನಿಧಿ ಸಭೆ (The Assembly) (೨) ಕಾರ್ಯನಿರ್ವಾಹಕ ಮಂಡಲಿ (The Council) ಮತ್ತು (೩) ಅಂತರರಾಷ್ಟ್ರೀಯ ಕಚೇರಿ (The Secretariat) ಎಂಬೀ ಪ್ರಧಾನ ಅಂಗಗಳು ಸ್ಥಾಪಿತವಾದವು. ಇವಕ್ಕೆ ಸೇರಿದ ಸದಸ್ಯರಾಷ್ಟ್ರಗಳಿಗೆ ಒಂದೊಂದು ಮತದಾನ ಹಕ್ಕಿದೆ. ಆದರೆ ಇದು ಪ್ರಜಾಪ್ರಭುತ್ವದ ನೀತಿಯನ್ನು ಸಮರ್ಥಿಸುವ ಸಂಸ್ಥೆಯಾಗಿರಲಿಲ್ಲ. ಸಾಮ್ರಾಜ್ಯಶಾಹಿಗಳಿಂದ ನೇಮಿತರಾದ ಸದಸ್ಯರು ಸೇರುವ ಸಂಸ್ಥೆಯಾಗಿತ್ತು. ಭಾರತ ಮೊದಲಾದವು ಸದಸ್ಯರಾಷ್ಟ್ರಗಳೆಂದು ಪರಿಗಣಿಸಲ್ಪಟ್ಟರೂ ಆ ರಾಷ್ಟ್ರದ ಜನರಿಗೆ ತಮ್ಮ ಪ್ರತಿನಿಧಿಗಳನ್ನು ಆರಿಸುವ ಹಕ್ಕು ಮಾತ್ರ ಇರಲಿಲ್ಲ. ಬ್ರಿಟಿಷ್ ಸಾರ್ವಭೌಮ ಪ್ರಭುತ್ವವು ಭಾರತ ಮೊದಲಾದ ಸದಸ್ಯರಾಷ್ಟ್ರಗಳ ಪ್ರತಿನಿಧಿಗಳನ್ನು ಆರಿಸುತ್ತಿತ್ತು. ಬಹುಮತದಿಂದ ತೀರ್ಮಾನಿಸಲ್ಪಡುವ ನಿರ್ಧಾರವು ಎಲ್ಲಾ ಮಿತ್ರರಾಷ್ಟ್ರಗಳು ಒಪ್ಪಬೇಕೆಂಬ ಪ್ರಜಾಪ್ರಭುತ್ವ ನೀತಿಯನ್ನು ಒಪ್ಪಿ ಈ ಸಂಸ್ಥೆಯು ಸ್ಥಾಪಿತವಾಗಿರಲಿಲ್ಲ. ಎಲ್ಲರ ಸಮ್ಮತಿ ಇರುವುದು ಮಾತ್ರ ಸಂಸ್ಥೆಯ ನಿರ್ಧಾರ ಎಂಬ ನೀತಿಯಿಂದಾಗಿ ಯಾವ ಮಹತ್ವದ ಕಾರ್ಯವೂ ನೆರವೇರುವಂತಿರಲಿಲ್ಲ. ಒಂದು ಸದಸ್ಯರಾಷ್ಟ್ರವು ತನ್ನ ಪ್ರತಿಮತದಿಂದ (Veto) ಮಿಕ್ಕ ಎಲ್ಲಾ ಸದಸ್ಯರ ಸಮ್ಮತ ನಿರ್ಧಾರವನ್ನು ಅಲ್ಲಗಳೆಯುವಂತಿರುವ ನೀತಿಯಿಂದ ಯಾವ ಸಂಭ್ರಮ ಸಾಧ್ಯವಾದೀತು? ಏಕೀಕೃತ ಭದ್ರತೆಯ ಆಶೋಕ್ತಿಯು ಭಗ್ನವಾಗಿ ಪರಿಣಮಿಸಿದುದರಲ್ಲಿ ಆಶ್ಚರ್ಯವಿಲ್ಲ. ಸದಸ್ಯರಾಷ್ಟ್ರ ಜಪಾನು ಮೊದಲು ಮಂಚೂರಿಯವನ್ನು, ಆ ಬಳಿಕ ಕೊರಿಯವನ್ನು ತನ್ನ ಪಾದಾಕ್ರಾಂತ ಮಾಡಿತು. ಇಟಲಿಯು ಎಬಿಸೀನಿಯವನ್ನು ತಿವಿದು ಸ್ವಾಧೀನಮಾಡಿತು. ಜರ್ಮನಿಯು ಹಿಟ್ಲರನ ನಾಯಕತ್ವದಲ್ಲಿ ಝುಕೋಸ್ಲೊವೇಕಿಯವನ್ನು ತಿಂದುತೇಗಿತು. ಉಳಿದ ಸದಸ್ಯಮಹಾ ಪ್ರಭೃತಿಗಳು ನಿಷೇಧವಚನಗಳನ್ನು ಕಂಠೋಕ್ತ ಸಾರಿ ತೃಪ್ತರಾದರು. ಆದರೂ ತಾವು ಒಪ್ಪಿದ ಸೂತ್ರದಂತೆ ಉಳಿದ ರಾಷ್ಟ್ರಗಳ ಮೇಲೆ ಹೂಡಿದ ಯುದ್ಧ ಇದೆಂದು ಮನಗಾಣಲಿಲ್ಲ. ತಡೆಯುವ ಹವಣಿಗೆ ಮನಮಾಡಲಿಲ್ಲ. ಈ ಪರಿಸ್ಥಿತಿಯನ್ನು ಚನ್ನಾಗಿ ಪರಿಶೋಧಿಸಿ ಹಿಟ್ಲರನು ೧೯೩೯ನೆ ಸಪ್ತಂಬರ ಆದಿಯಲ್ಲಿ ದ್ವಿತೀಯ ಮಹಾಯುದ್ಧವನ್ನು ಹೂಡಿದನು. ಉಳಿದ ಸದಸ್ಯರು ಭಯಗ್ರಸ್ತರಾಗಿ ಸಂಯುಕ್ತ ಸಂಘದ ಸಭೆಯನ್ನು ಕೂಡಾ ಕರೆಯಲಿಲ್ಲ. ಈ ಸಂಘದ ನಿಧನವು ಯಾವ ರೀತಿಯ ಸಂಸ್ಕಾರ, ಸಂತಾಪ, ಪುನಸ್ಕಾರವಿಲ್ಲದೆ ಆಯಿತು.

ಈ ದ್ವಿತೀಯ ಮಹಾ ಸಮರವು ಭರದಿಂದ ಸಾಗುತ್ತಿದ್ದಾಗ ಯುದ್ಧವನ್ನು ಕೊನೆಗಾಣಿಸುವ ಯುದ್ಧಕ್ಕೆ ಮಿತ್ರರಾಷ್ಟ್ರಗಳವರು ಸೊಂಟಗಟ್ಟಿದರು. ಸಂಯುಕ್ತ ಅಮೇರಿಕ, ಇಂಗ್ಲೆಂಡ್ ಮತ್ತು ರಷ್ಯ ಇವರು ಪ್ರಬಲ ಶಕ್ತ್ಯಾತ್ಮಕ ರಾಷ್ಟ್ರಗಳು ಒಂದೆಡೆ. ಹಿಟ್ಲರನ ಜರ್ಮನಿ ಇನ್ನೊಂದೆಡೆ. ಆ ಕಾಲದಲ್ಲಿ ಚಾಣಾಕ್ಷ ಧುರಂಧರರಾದ ಚರ್ಚಿಲರು ಇಂಗ್ಲೆಂಡಿನ ಪ್ರಧಾನ ಮಂತ್ರಿಯಾಗಿದ್ದರು. ಚರ್ಚಿಲರು ಮತ್ತು ಸಂಯುಕ್ತ ಅಮೇರಿಕದ ಅಧ್ಯಕ್ಷರಾದ ರೂಸ್ವೆಲ್ಟರು ಶಾಂತಿಸಾಗರದಲ್ಲಿ ಏಕಾಂತ ಸೇರಿ ಸಿದ್ಧಪಡಿಸಿದ ಘೋಷಣೆಯನ್ನು ೧೯೪೧ನೆ ಸಪ್ತಂಬರ ೨೪ನೆ ದಿನ ಬಹಿರಂಗಪಡಿಸಿದರು. ಇದು 'ಅಟ್ಲಾಂಟಿಕ್ ಘೋಷಣೆ' ಎಂದು ಪ್ರಸಿದ್ಧವಾಗಿದೆ. ಇದು ಯುದ್ಧದ ಹುಟ್ಟನ್ನು ನಿವಾರಿಸುವ ಘೋಷಣೆ. ಇದಕ್ಕೆ ೨೬ ಸ್ವತಂತ್ರ ರಾಷ್ಟ್ರರಾಜ್ಯಗಳ ಸಮ್ಮತಿ ಮತ್ತು ೩೪ ಇತರ ಬಗೆಯ ರಾಷ್ಟ್ರಗಳ ಅನುಮತಿ ದೊರೆಯಿತು. ಭಾರತದ ಅನುಮತಿಯನ್ನು ಬ್ರಿಟಿಷ್ ಸರಕಾರದಿಂದ ನಿಯೋಜಿತನಾದ ಸದಸ್ಯನು ಕೊಟ್ಟನು. ಆಗ ಭಾರತವು 'ಇಂಗ್ಲಿಷರೇ, ಭಾರತವನ್ನು ತೊಲಗಿರಿ' ಎಂಬ ನಿರ್ಧಾರವನ್ನು ಮಹಾತ್ಮಾ ಗಾಂಧೀಜೀಯವರ ನಾಯಕತ್ವದಲ್ಲಿ ಕೈಗೊಂಡು ಸತ್ಯಾಗ್ರಹ ಸಮರವನ್ನು ಸಾರಿತು.

ಈ ಘೋಷಣೆಯು ಭಾರತಕ್ಕೆ ಅನ್ವಯಿಸುವುದಿಲ್ಲವೆಂದು ಬ್ರಿಟಿಷ್ ಸಾಮ್ರಾಜ್ಯ ಪ್ರಧಾನ ಮಂತ್ರಿ ಚರ್ಚಿಲರು ಪ್ರಸಿದ್ಧಪಡಿಸಿದರು. "ಏನು, ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಸಮಾಪ್ತಿಗೊಳಿಸುವುದಕ್ಕಾಗಿ ತಾನು ಪ್ರಧಾನ ಮಂತ್ರಿಯಾದುದೆಂಬ ಭಾವನೆಯೋ?" ಎಂಬುದು ಅವರ ಪ್ರತಿಪ್ರಶ್ನೆಯಾಗಿತ್ತು. ಕಾರಣ ಈ ಘೋಷಣೆಯ ಮೂರನೆಯ ನೀತಿಯು ಈ ಪ್ರಕಾರ ಇದೆ:

"ಪ್ರಜೆಗಳ ಅಭಿಮತಕ್ಕೆ ಅನುಸಾರವಾದ ಸರಕಾರವನ್ನು ಸ್ಥಾಪಿಸುವುದು ಮತ್ತು ಆ ಸರಕಾರದ ನೆಲೆಯಲ್ಲಿ ಜನರು ನೆಮ್ಮದಿಯಿಂದ ಬಾಳುವ ಹಕ್ಕು ಎಲ್ಲಾ ಜನರಿಗೆ ಸೇರಿದೆಂಬುದನ್ನು ಮಿತ್ರ ರಾಷ್ಟ್ರಗಳು ಗೌರವಿಸುವುವು."

ಎಲ್ಲಾ ಜನರೆಂದರೆ ಭಾರತೀಯರು ಸೇರಿಲ್ಲವೆಂಬುದೇ ಚರ್ಚಿಲರ ಉದ್ಗಾರ.

೧೯೪೫ನೆ ಜೂನು ೨೬ನೆ ದಿನ ೫೧ ರಾಷ್ಟ್ರಗಳು ಸೇನ್ ಫ್ರೆನ್ಸಿಸ್ಕೊ ಎಂಬಲ್ಲಿ ಸಭೆಸೇರಿ ಯುದ್ಧದ ಹುಟ್ಟಡಗಿಸಿ ಅಂತರರಾಷ್ಟ್ರೀಯ ಶಾಂತಿಯನ್ನು ಸ್ಥಾಪಿಸುವ ಸಂಯುಕ್ತ ರಾಷ್ಟ್ರಗಳ ಘೋಷಣೆಯನ್ನು ಸ್ವೀಕರಿಸಿದವು. ಈ ಸಭೆಗೆ ನಮ್ಮ ರಾಷ

ಸಭೆಯು ಶ್ರೀಮತಿ ವಿಜಯಲಕ್ಷ್ಮೀ ಪಂಡಿತರನ್ನು ತನ್ನ ರಾಯಭಾರಿಯಾಗಿ ಕಳುಹಿಸಿತು. ಈ ರಾಷ್ಟ್ರವಾಣಿಗೆ ಸಂಯುಕ್ತ ರಾಷ್ಟ್ರಗಳ ಪ್ರಥಮಾಧಿವೇಶನದಲ್ಲಿ ಅವಕಾಶ ಕೊಡುವ ಸೌಜನ್ಯ ಕೂಡಾ ಇಲ್ಲದ ನೀತಿಯಿಂದ ಈ ಸಂಘಟನೆಯು ಜನ್ಮತಾಳಿತು. ಅಂತರರಾಷ್ಟ್ರೀಯ ಶಾಂತಿಸ್ಥಾಪನೆಗಾಗಿ ಸಂಯುಕ್ತ ರಾಷ್ಟ್ರಗಳ ಸನದಿನ ನೆಲೆಯಲ್ಲಿ ಸಂಯುಕ್ತ ರಾಷ್ಟ್ರಗಳ ಸಂಘಟನೆಯು ೧೯೪೫ನೆ ಅಕ್ಟೋಬರ ೨೪ನೆ ದಿನ ಸ್ಥಾಪಿತವಾಯಿತು. ಈ ದಿನವನ್ನು ಸಂಯುಕ್ತ ರಾಷ್ಟ್ರಗಳ ದಿನವಾಗಿ ಆಚರಿಸಲಾಗಿದೆ.

ಸಂಯುಕ್ತ ರಾಷ್ಟ್ರಗಳ ಉದ್ದೇಶಗಳು ಈ ಸನದಿನ ಭೂಮಿಕೆಯಲ್ಲಿ ಈ ಪ್ರಕಾರ ನಿರೂಪಿಸಲ್ಪಟ್ಟಿವೆ:

"ನಮ್ಮ ಜೀವಮಾನದಲ್ಲಿ ಮಾನವಕೋಟಿಗೆ ಅಗಣಿತ ಸಂಕಷ್ಟವನ್ನು ಎರಡು ಸಾರಿ ಒದಗಿಸಿದ ಯುದ್ಧಬಾಧೆಯನ್ನು ಮುಂದಿನ ಸಂತಾನರಕ್ಷಣೆಗಾಗಿ ನಿಲ್ಲಿಸಲು,

"ಮಾನವ ಮೂಲಭೂತ ಹಕ್ಕುಗಳು, ಮಾನವ ವ್ಯಕ್ತಿಯ ಗೌರವ ಮತ್ತು ಯೋಗ್ಯತೆ, ಸ್ತ್ರೀಪುರುಷರು, ಸಣ್ಣ ದೊಡ್ಡ ರಾಷ್ಟ್ರಗಳು ಎಂಬ ಭೇದವಿಲ್ಲದ ಸಮಾನ ಹಕ್ಕುಳ್ಳವರು ಎಂಬ ನಮ್ಮ ವಿಶ್ವಾಸವನ್ನು ದೃಢೀಕರಿಸಲು,

"ಲೇಖಗಳಿಂದ ಒದಗುವ ಋಣಾನುಬಂಧನವನ್ನು ನ್ಯಾಯ ಮತ್ತು ಸುಧಾರಣೆಯನ್ನು ಸಂರಕ್ಷಿಸುವುದಕ್ಕೆ, ಅಂತರರಾಷ್ಟ್ರೀಯ ಸಿಧಿ ಪಾಲನೆಗೆ ಯುಕ್ತ ಪರಿಸ್ಥಿತಿಗಳನ್ನು ಕಲ್ಪಿಸಲು,

"ವಿಸ್ತೃತ ಸ್ವಾತಂತ್ರ್ಯದಲ್ಲಿ ಜೀವನದ ಉಚ್ಚ ಮಟ್ಟವನ್ನು ಮತ್ತು ಸಮಾಜದ ಪ್ರಗತಿಯನ್ನು ಪ್ರವರ್ಧಿಸಲು,

"ಸಂಯುಕ್ತ ರಾಷ್ಟ್ರಗಳ ಜನರಾದ ನಾವು ದೃಢಸಂಕಲ್ಪರಾಗಿದ್ದೇವೆ. ಈ ಸಾಧನೆಗಾಗಿ, ಸಹನೆಯನ್ನು ಅಭ್ಯಾಸಿಸಿ ಅನ್ಯರೊಡನೆ ಒಳ್ಳೆಯ ನೆರೆಯವರಾಗಿ ಶಾಂತಿಯಿಂದ ಬಾಳುವ, ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗಾಗಿ ನಾವು ನಮ್ಮ ಎಲ್ಲಾ ಶಕ್ತಿಯನ್ನು ಪ್ರಯೋಗಿಸುವ, ಎಲ್ಲವರ ಹಿತಕ್ಕಾಗಿ ಅಲ್ಲದೆ ನಮ್ಮ ಶಸ್ತ್ರಶಕ್ತಿಯನ್ನು ಪ್ರಯೋಗಿಸುವುದಿಲ್ಲ, ಅಂತರರಾಷ್ಟ್ರೀಯ ಎಲ್ಲಾ ಜನರ ಆರ್ಥಿಕ ಮತ್ತು ಸಾಮಾಜಿಕ ಅಭ್ಯುದಯಕ್ಕಾಗಿ ಅಂತರರಾಷ್ಟ್ರೀಯ ಸಂಘಟನೆಯ ಉಪಕರಣಗಳನ್ನು ನಿರ್ವಹಿಸುವುದು ಎಂದು ನಾವು ನಮ ಪ್ರಯತ್ನಗಳನ್ನು ಸಾಧಿಸುತ್ತೇವೆ," ಎಂದು ಆ ರಾಷ್ಟ್ರಗಳು ನಿರ್ಧರಿಸಿದವು.

ಈ ಸಂಘಟನೆಗೆ (೧) ಪ್ರತಿನಿಧಿ ಸಭೆ; (೨) ಭದ್ರತಾ ಮಂಡಲ; (೩) ಆರ್ಥಿಕ ಮತ್ತು ಸಾಮಾಜಿಕ ಮಂಡಲ; (೪)ಅಂತರರಾಷ್ಟ್ರೀಯ ನ್ಯಾಯಾಲಯ; (೫) ಕಾರ್ಯಾಲಯ ಎಂಬ ಐದು ಪ್ರಧಾನ ಅಂಗಗಳಿವೆ. ಇದರ ನೆಲೆಯಲ್ಲಿ ಅನ್ಯ

ಶತಮಾನದ ದ್ವಿತೀಯಾಂಕದಲ್ಲಿ!

ದೇಶದ ಪ್ರಗತಿಯಲ್ಲಿ, ಆರ್ಥಿಕೋನ್ನತಿಯಲ್ಲಿ, ಶ್ರಮಿಸುವ ಸಾವಿರಾರು ಚಿಕ್ಕ-ದೊಡ್ಡ ಸಂಸ್ಥೆಗಳಲ್ಲಿ ಹಿರಿಯ-ಕಿರಿಯ ಸ್ಥಾನಗಳ ನಿರ್ಣಯವನ್ನು, ಸೇವೆಪಡೆದ ಜನತೆಯೇ ಮಾಡುವುದೆಂಬುದು ಸರ್ವವಿದಿತವಾದುದು. ಕೇವಲ ಹಣದ ಮೊತ್ತಕ್ಕಿಂತಲೂ ಹೆಚ್ಚಾಗಿ **ಪ್ರಾಮಾಣಿಕತೆ, ನಿಷ್ಪಕ್ಷಪಾತ, ಕ್ಲಪ್ತತೆ** ಮತ್ತು **ಸ್ನೇಹಮಯ ಸಂಬಂಧ**, ಇವುಗಳೇ ಹಿರಿದೆನಿಸುವುದಾದರೆ,—

—ಅದರ ಹಿರಿಮೆಯಲ್ಲಿ;—ಎರಡು ಜಾಗತಿಕ ಯುದ್ಧಗಳ ಕಾಲದಲ್ಲೂ, ಅವುಗಳ ಮೊದಲೂ ಮತ್ತೆಯೂ ಉಂಟಾದ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲೂ ನಾವು ಒಪ್ಪಿಸಿದ ಸೇವೆಯಲ್ಲಿ—ನಮ್ಮ ಅಂಶದಾನಕ್ಕಾಗಿ— ಗೌರವ ಪಡುವೆವು.

ಇಪ್ಪತ್ತೈದು ವರ್ಷಗಳ ಕಾಲ ಆರ್ಥಿಕ ಕ್ಷೇತ್ರದಲ್ಲಿ ತನ್ನ ಅಳಿಲ ಸೇವೆಯೊಪ್ಪಿಸಿ ರಜತೋತ್ಸವ ವರ್ಷವನ್ನು ದಾಟಿ, **ಉಡುಪಿ ಬೇಂಕು** ಇಂದು ಗ್ರಾಮಾಂತರಗಳಿಗೂ ತನ್ನ ಬೇಂಕಿಂಗ್ ಸೌಕರ್ಯವನ್ನೊಯ್ಯುತ್ತ, ಮೌನವಾಗಿ ಆದರೆ ದೃಢತೆಯಿಂದ ಮುಂದಡಿಯಿಡುತ್ತಿದೆ. ಬೆಳೆದು ಬರುವ ತನ್ನ ಗ್ರಾಹಕರ ಆದರಾಭಿಮಾನಗಳನ್ನು ಗೌರವಿಸುತ್ತ, ಇನ್ನೂ ಹಿರಿದಾದ ಸೇವೆಯೊಪ್ಪಿಸುವುದೆಂಬ ಆಶ್ವಾಸನೆ ಕೊಡುತ್ತಿದೆ.

ಉಡಿಪಿ ಬೇಂಕ್, ಲಿಮಿಟೆಡ್, ಉಡುಪಿ

ಶಾಖೆಗಳು: **ಉಡುಪಿ, ಕಲ್ಯಾಣಪುರ, ಕುಂದಾಪುರ, ಮುಂಡ್ಕೂರು.**

THE UDIPI BANK, LTD., UDIPI.

ವಿಶೇಷ ಸಂಸ್ಥೆಗಳು ಏರ್ಪಡಿಸಲ್ಪಟ್ಟಿವೆ; ಈ ಸಂಘಟನೆ ಕಾರ್ಯ ನಿರ್ವಹಿಸುವ ಕಾರ್ಯಗಳು ಈ ಪ್ರಕಾರ ಇವೆ:

೧. ಪ್ರತಿನಿಧಿ ಸಭೆ: ಇದೊಂದು ರಾಷ್ಟ್ರಗಳು ಸಭೆ ಸೇರುವ ನಗರವೆನ್ನಬಹುದು. ಸಾಧಾರಣವಾಗಿ ವರ್ಷ ಕ್ಕೊಮ್ಮೆ ಈ ಸಭೆ ಸೇರುವುದು. ಅಗತ್ಯವಿದ್ದಾಗ ವಿಶೇಷ ಸಭೆ ಗಳು ಸೇರಬಹುದಾಗಿದೆ. ಪ್ರತಿಯೊಂದು ಸದಸ್ಯ ರಾಷ್ಟ್ರಕ್ಕೂ ಐದು ಪ್ರತಿನಿಧಿಗಳನ್ನು ಕಳುಹಿಸುವ ಹಕ್ಕಿದೆ. ಆದರೆ ಮತ ದಾನದ ಹಕ್ಕು ಒಂದೇ ಆಗಿದೆ. ಶಾಂತಿಸ್ಥಾಪನೆ, ಶಸ್ತ್ರ ನಿಯಂತ್ರಣ, ಅಂತರರಾಷ್ಟ್ರೀಯ ವಿಧಿ ಪ್ರವರ್ಧನೆ, ಆರ್ಥಿಕ ಮತ್ತು ಸಾಮಾಜಿಕ, ಆರೋಗ್ಯ ಮತ್ತು ವಿದ್ಯಾಭ್ಯಾಸ ಇವನ್ನು ಸುಧಾರಿಸುವ ಮಾನವ ಹಕ್ಕು ಮತ್ತು ಸ್ವಾತಂತ್ರ್ಯ ಇವುಗಳ ರಕ್ಷಣೆ ಹೇಗೆ ಎಂಬುದನ್ನು ಬಗೆಹರಿಸುವುದೇ ಇದರ ಧ್ಯೇಯವಾಗಿದೆ. ಈ ಸಭೆಯು ಭದ್ರತಾಮಂಡಲಕ್ಕೆ ಆರು ಜನ ಸದಸ್ಯರನ್ನು ಆರಿಸುತ್ತದೆ. ಆರ್ಥಿಕ ಮತ್ತು ಸಾಮಾಜಿಕ ಮಂಡಲಕ್ಕೆ ಹದಿನೆಂಟು ಸದಸ್ಯರನ್ನು ಆರಿಸುತ್ತದೆ. ಮುಕ್ತೇಸರ ಮಂಡಲಕ್ಕೆ ಕೆಲವು ಸದಸ್ಯರನ್ನು ಆರಿಸುತ್ತದೆ.

೨. ಭದ್ರತಾಮಂಡಲ: ಇದು ಪ್ರಪಂಚದ ಪೋಲಿಸ್ ಅಧಿಕಾರಿ ಸಂಸ್ಥೆಯೆನ್ನಬಹುದು. ಇದು ಯಾವಾಗಲೂ ನೆರ ವೇರುವ ಕಾರ್ಯನಿರ್ವಾಹಕ ಮಂಡಲ. ಇದಕ್ಕೆ ಸಂಯುಕ್ತ ಅಮೇರಿಕ, ಇಂಗ್ಲೆಂಡ್, ರಷ್ಯ, ಫ್ರಾನ್ಸ್ ಮತ್ತು ಚೈನ ಎಂಬ ಸ್ಥಿರವಾದ ಐದು ಸದಸ್ಯರೂ, ಪ್ರತಿನಿಧಿ ಸಭೆಯಿಂದ ಆರು ಅಸ್ಥಿರ ಸದಸ್ಯರೂ ಹೀಗೆ ಹನ್ನೊಂದು ಸದಸ್ಯರು ಮಾತ್ರ ಇದ್ದಾರೆ. ಹನ್ನೊಂದರಲ್ಲಿ ಸ್ಥಿರ ಸದಸ್ಯರ ಎಲ್ಲಾ ಒಪ್ಪಿಗೆ ಯಿಂದ ಏಳು ಮತ ಎಲ್ಲಾ ಕಾರ್ಯಕ್ಕೆ ದೊರೆಯಬೇಕೆಂಬ ನೀತಿ ಇದೆ; ಎಂದರೆ: ಈ ಪಂಚಮಹಾಪ್ರಭೃತಿಗಳಲ್ಲಿ ಯಾರಾದರೂ ಒಬ್ಬರು ತಮ್ಮ ಪ್ರತಿಮತ ಕೊಟ್ಟರೆ, ಈ ಮಂಡಲದ ನಿರ್ಧಾರವು ಯಾರನ್ನೂ ಬಾಧಿಸಲಾರದು. ಇಂಥ ಐದು ಪ್ರತಿನಿಧಿಗಳ ಸ್ಥಿರವಾದ ಪ್ರತಿಮತದ ಹಕ್ಕು ಪ್ರಜಾ ಪ್ರಭುತ್ವದ ನೀತಿಯಲ್ಲವು. ಆದಕಾರಣವೇ ರಷ್ಯವು ೪೦ಕ್ಕೆ ಮಿಕ್ಕಿ ತನ್ನ ಪ್ರತಿಮತವನ್ನು ನಿಷೇಧಿಸಿದೆ. ಎಂದಿನ ವರೆಗೆ ಈ ಪ್ರತಿನಿಷೇಧಕ ಹಕ್ಕು ನಾಶವಾಗಿ ಬಹುಮತದ ನಿರ್ಧಾರವು ಪ್ರತಿನಿಧಿ ಸಭೆ ಮತ್ತು ಭದ್ರತಾಮಂಡಲ ಮತ್ತು ಇತರ ಅಂಗಗಳ ನೀತಿಯಾಗುವುದಿಲ್ಲವೋ ಅಂದಿನ ವರೆಗೆ ಈ ಸಂಯುಕ್ತ ರಾಷ್ಟ್ರಸಂಘಟನೆಯ ಕಾರ್ಯವು ಫಲಕಾರಿ ಯಾಗುವಂತಿಲ್ಲ.

ಇನ್ನು ಸಂಘಟನೆಯು ಬಗೆಹರಿಸಿದ ಕಾರ್ಯಗಳನ್ನು ವಿಚಾರಿಸುವ. ಭಾರತವು ಸ್ವಾತಂತ್ರ್ಯವನ್ನು ಪಡೆದು ಒಂದು ತಿಂಗಳು ಕಳೆದಿರಲಿಲ್ಲ. ಜಾತ್ಯಂಧ ಮುಸ್ಲೀಮರು ಕಾಶ್ಮೀರದ ಮೇಲೆ ದಾಳಿಮಾಡಿದರು. ಕಾಶ್ಮೀರದ ಜನರ ಅಸಂಖ್ಯಾತ ಬಲಿಯಾಯಿತು. ಮನೆಮಠಗಳನ್ನು, ಹಳ್ಳಿಪಳ್ಳಿಗಳನ್ನು ರಾಕ್ಷಸೀ ಮಹತ್ವಾಕಾಂಕ್ಷೆಯಿಂದ ಮುಂದೊತ್ತಿದ ಮುಸ್ಲಿ ಮರು ಸುಟ್ಟು ಧ್ವಂಸಮಾಡಿದರು. ಕಾಶ್ಮೀರವು ಧಗಧಗಿಸು ತ್ತಿದ್ದಾಗ ಭದ್ರತಾಮಂಡಲವು ಏನುಮಾಡಿತು? ಕಾಶ್ಮೀರ ವನ್ನು ಹರಿಹಂಚುವ ಒಳಸಂಚು ಭರದಿಂದ ಸಾಗಿತು. ಆದರೆ ದಕ್ಷಿಣಕೊರಿಯದ ಮೇಲೆ ಉತ್ತರ ಕೊರಿಯವು ಜೂನು ೨೫ರ ದಿನ ಸಮರವನ್ನು ಸಾರಿ ಮುಂದೊತ್ತಿತು. ೩೮ ಅಕ್ಷಾಂಶವನ್ನು ಮೀರಿ ಅತಿಕ್ರಮಿಸಿದರು. ಭದ್ರತಾಮಂಡಲದಲ್ಲಿ ಅಲ್ಲೋಲ ಕಲ್ಲೋಲ ಉದ್ಗಾರಗಳು ಕೇಳಿದುವು. ಪ್ರತಿನಿಧಿಸಭೆಯು ಅಧಿ ವೇಶನವು ೨೪ ಗಂಟೆಯ ಅವಕಾಶದಲ್ಲಿ ತ್ವರೆಯಿಂದ ಕರೆ ಯಲ್ಪಟ್ಟಿತು. ಸಪ್ತಂಬರ ೧೬ನೇ ದಿನ ಅಮೇರಿಕದ ಸೈನ್ಯವು ಅಂತರರಾಷ್ಟ್ರೀಯ ಶಾಂತಿಸ್ಥಾಪನೆಗಾಗಿ ಯುದ್ಧ ವನ್ನು ಸಾರಿತು. ಈಗ ೩೮ ಅಕ್ಷಾಂಶವನ್ನು ದಾಟಿ ಈ ಸೈನ್ಯವು ಉತ್ತರ ಕೊರಿಯಾದಲ್ಲಿ ಮುಂಮುವರಿಸುತ್ತಿದೆ. ಇದಾವ ನೀತಿ?

ಸಂಯುಕ್ತ ರಾಷ್ಟ್ರಗಳ ಸಂಘಟನೆಯಲ್ಲಿ ಎರಡು ಪ್ರಬಲ ಮಹತ್ವಾಕಾಂಕ್ಷಿತ ಶಕ್ತಿಗಳು ಪ್ರತಿಭಟಿಸುತ್ತಿವೆ; ಒಂದು ಪ್ರಜಾಪ್ರಭುತ್ವದ ಸೋಗಿನ ಧೋರಣೆ ತೊಟ್ಟಿ ರುವ ಸಂಯುಕ್ತ ಅಮೇರಿಕದ ಡೋಲರ ಸಾಮ್ರಾಜ್ಯಶಾಹಿ. ಇನ್ನೊಂದು, ಸಮಾಜವಾದ ತತ್ವದಿಂದ ರಕ್ತಾಂಬರ ಕ್ರಾಂತಿ ವರ್ಣದ ನೀತಿಯಿಂದ ಮುಂದೊತ್ತುವ ರಷ್ಯದ ಸರ್ವಾ ಧಿಕಾರಿಶಾಹಿ ಇವೆರಡರೊಳಗೆ ಬಲವಾದ ಸಂಘರ್ಷಣೆ ನಡೆಯುತ್ತಿದೆ. ಅಮೇರಿಕವು ತನ್ನ ಡೋಲರ ವರ್ಚಸ್ಸನ್ನು ಪ್ರಸರಿಸಿ ಕೊರಿಯಾ, ಫೋರ್ಮೋಸ ಮೊದಲಾದ ರಾಷ್ಟ್ರಗಳಲ್ಲಿ ಸಾಮ್ರಾಜ್ಯಶಾಹಿ ಪ್ರಾದುರ್ಭಾವನೆಯನ್ನು ನೋಡುತ್ತಿದೆ. ಇದೇ ನೀತಿಯಿಂದ ಚೈನವನ್ನು ರಷ್ಯವು ಅಧೀನಮಾಡಿದೆ. ಆದಕಾರಣ ಅಂತರರಾಷ್ಟ್ರೀಯ ಶಾಂತಿಸ್ಥಾಪನೆಯ ಧ್ಯೇಯ ವನ್ನು ಈ ಎರಡು ಪ್ರಬಲ ರಾಷ್ಟ್ರಗಳು ಮರೆತು ತಮ್ಮ ಅಧಿಕಾರ ವನ್ನು ಸ್ಥಾಪಿಸುತ್ತಿರುವುದರಿಂದ ಶಾಂತಿಸ್ಥಾಪನೆ ಎಲ್ಲಿ?

ಲೋಕಸಂಗ್ರಹಮೇವಾಪಿ ಸಂಪಶ್ಯನ್ಕರ್ತುಮರ್ಹಸಿ ||
ಗೀತಾ: ೩-೨೦.

ಭಗವಾನ್ ಶ್ರೀಕೃಷ್ಣನು ಬೋಧಿಸಿದಂತೆ ಲೋಕ ಸಂಗ್ರಹವೇ ತನ್ನ ಗುರಿಯಾಗಿ ಕರ್ಮವನ್ನು ಮಾಡಬೇಕಾಗಿದೆ ಯೆಂದು ಎಂದಿನವರೆಗೆ ರಾಷ್ಟ್ರಗಳು ತಮ್ಮ ಸಂಕಲ್ಪವಾಗಿ ನಿರ್ಧರಿಸುವುದಿಲ್ಲವೋ ಅಂದಿನವರೆಗೆ ಅಂತರರಾಷ್ಟ್ರೀಯ ಶಾಂತಿಯು ಮೃಗಜಲವೇ ಸರಿ.

ಪರಸ್ಪರಂ ಭಾವಯನ್ತಃ ಶ್ರೇಯಃ ಪರಮವಾಪ್ಸ್ಯಥ ||
ಗೀತಾ: ೩-೧೧.

ಎಂಬಂತೆ ಎಂದಿನ ವರೆಗೆ ಎಲ್ಲಾ ರಾಷ್ಟ್ರಗಳು, ಎಲ್ಲಾ ರಾಷ್ಟ್ರಗಳಲ್ಲಿರುವ ಜನರು ಅನ್ಯೋನ್ಯರೆಂಬ ಭಾವನೆಯಿಂದ

ಸ್ಟಂಟ್ ಚಿತ್ರಗಳು

ಲೇಖಕರು: ನಾಡಿಗೇರ ಕೃಷ್ಣರಾಯ, ಬೆಂಗಳೂರು.



"—ಕರಿಯ ಬಟ್ಟೆ ತುಂಡೊಂದನ್ನು ಕಣ್ಣಿಗೆ ಕಟ್ಟಿಕೊಂಡಿರುತ್ತಾನೆ................ನೂರಾರು ಜನರನ್ನು ಕತ್ತಿಯ ವರಸೆಯಲ್ಲಿ ಸೋಲಿಸಿ ಬರುತ್ತಾನೆ................ನೆಲದಿಂದ ಉಪ್ಪರಿಗೆಗೆ ಹಾರುತ್ತಾನೆ.........."

ಸ್ಟಂಟ್ ಚಿತ್ರಗಳಲ್ಲಿ ನಡೆಯುವದೆಲ್ಲಾ ಪವಾಡಗಳಿಗೆ ಸರಿಹೋಲುತ್ತವೆ. ಅಲ್ಲಿ ನಡೆಯುವದೆಲ್ಲಾ ಸಾಧ್ಯವೇ ಎಂಬ ಪ್ರಶ್ನೆಗೆ, ಪವಾಡಗಳು ಸಾಧ್ಯವೇ ಎಂಬ ಮರುಪ್ರಶ್ನೆಯು ಉತ್ತರವಾಗಿದೆ. ಋಷಿಮೂಲ, ನದಿಮೂಲ, ಗುರುಮೂಲಗಳನ್ನು ಹುಡುಕಬಾರದಂತೆ. ಅದರಂತೆ ಸ್ಟಂಟ್ ಚಿತ್ರಗಳ ಮೂಲವನ್ನೂ ಹುಡುಕಬಾರದು.

ಸ್ಟಂಟ್ ಚಿತ್ರದಲ್ಲಿನ ನಾಯಕನಲ್ಲಿ, ರಾಮ, ಕೃಷ್ಣ, ಅರ್ಜುನ, ಕರ್ಣ ಮುಂತಾದ ಪುರಾಣ ವ್ಯಕ್ತಿಗಳ ಎಲ್ಲ ಒಳ್ಳೆಯ ಗುಣಗಳೂ ಇರುತ್ತವೆ. ಇವನು ಪರಾಕ್ರಮಿ, ಸುಂದರ, ದಯಾರ್ದ್ರ ಹೃದಯಿ, ಚತುರ, ಪರೋಪಕಾರಿ, ತ್ಯಾಗಮಯಿ ಇತ್ಯಾದಿ. ನಾಯಕಿಯು ಸಹ ಸೀತೆ, ಸಾವಿತ್ರಿ, ದ್ರೌಪದಿ ಮುಂತಾದ ಪಂಚಕನ್ಯಾರತ್ನಗಳ ಉಚ್ಚಗುಣಗಳ ಹದವರಿತ ಮಹಿಳೆ.

ಖಳನಾಯಕನಿಲ್ಲದಿದ್ದರೆ ಸ್ಟಂಟ್ ಚಿತ್ರಗಳನ್ನು ತಯಾರಿಸಲು ಸಾಧ್ಯವೇ ಇಲ್ಲ. ಇವನ ಕ್ರಾಪ್‌ಕಟ್ ವಿಚಿತ್ರವಾಗಿ ಇರುತ್ತದೆ. ಅದು ಕಿವಿಯಿಂದ ಮೀಸೆಯ ತುದಿವರೆಗೂ ಇಳಿದಿರುತ್ತದೆ. ಎಂಟು ದಿನಗಳ ಮಲಬದ್ಧತೆಯಿಂದ ನರಳುವವನ ಹಾಗೆ ಇವನ ಮುಖಮುದ್ರೆ ಇರುತ್ತದೆ.

ಹಾಸ್ಯರಸ ಪೂರೈಸಲು ಇಬ್ಬರು ಅಥವಾ ಒಬ್ಬ ಕೋಡಂಗಿ ಇರುತ್ತಾನೆ. ಸಾಮಾನ್ಯವಾಗಿ ಇವನು ನಾಯಕನ ಆಪ್ತಸ್ನೇಹಿತನಾಗಿರುತ್ತಾನೆ. ಕಥಾ ನಾಯಕನು ಸಾಮಾನ್ಯವಾಗಿ ರಾಜಕುಮಾರನೇ ಆಗಿರುತ್ತಾನೆ. (ದೇಶದ ಎಲ್ಲ ರಾಜರ ಸೊಲ್ಲನ್ನು ಅಡಗಿಸಿದ ಸರದಾರ ಪಟೇಲರು ಸಿನಿಮಾದಲ್ಲಿನ ರಾಜರ ತಂಟೆಗೆ ಇನ್ನೂ ಏಕೆ ಹೋಗಿಲ್ಲವೋ ನಮಗೆ ಆಶ್ಚರ್ಯವಾಗುತ್ತದೆ.) ರಾಜಕುಮಾರನಾದವನು ಕೋಡಂಗಿಯಂಥ ಮನುಷ್ಯನನ್ನು ತನ್ನ ಆಪ್ತಮಿತ್ರನಾಗಿ ಏಕೆ ಆರಿಸಿಕೊಳ್ಳುತ್ತಾನೆ? ಅವನ ಅಭಿರುಚಿ ಅಷ್ಟು ಕೀಳುಮಟ್ಟದ್ದೇ? ಎಂಬ ಪ್ರಶ್ನೆಗಳಿಗೆ ನಾನು ಉತ್ತರಕೊಡಲಾರೆ. ಆ ಚಿತ್ರದ ಕಥೆಯನ್ನು ಬರೆದ ಪುಣ್ಯಾತ್ಮನನ್ನೇ ಕೇಳಬೇಕು. ಹಾಸ್ಯರಸ ಒದಗಿಸಲು ಖಳನಾಯಕನೂ ತುಂಬ ಸಹಾಯಮಾಡುತ್ತಾನೆ. ನಾಯಕನಿಂದ ಆಗಾಗ್ಗೆ ಒದೆಗಳನ್ನು ತಿಂದು ಕೆಟ್ಟ ಮುಖಮಾಡುತ್ತಾನೆ, ಆಗ ಜನ ಘೊಳ್ಳೆನ್ನುತ್ತದೆ. ಖಳನಾಯಕನ ಕುಯುಕ್ತಿಗಳೆಲ್ಲ ನಾಯಕನಿಗೆ ಅದು ಹೇಗೊ ಗೊತ್ತಾ

ವರ್ತಿಸುವುದಿಲ್ಲವೋ ಅಂದಿನ ವರೆಗೆ ಪರಮ ಶ್ರೇಯಸ್ಸು ಪ್ರಾಪ್ತಿಯಾಗಲಾರದು. ಆದಕಾರಣ ಗೀತಾಸಂದೇಶವನ್ನು ಸಂಯುಕ್ತ ರಾಷ್ಟ್ರಗಳು ತಿಳಿಯುವ ವರೆಗೆ ಲೋಕಕ್ಕೆ ಶಾಂತಿ ಇರದು.

ಗುತ್ತವೆ. ಸಮಯಕ್ಕೆ ಸರಿಯಾಗಿ ದೇವರು ಪ್ರತ್ಯಕ್ಷನಾಗಿ, ಖಳನಾಯಕನ ಕುತಂತ್ರಗಳನ್ನೆಲ್ಲಾ ಮಣ್ಣುಪಾಲುಮಾಡು ತ್ತಾನೆ. ಆಗ ಪ್ರೇಕ್ಷಕರ ಉತ್ಸಾಹಕ್ಕೆ ನೇರೆಯೇ ಇಲ್ಲ.

ಮುದಿ ಅರಸನಿಗೆ ಗಂಡು ಸಂತಾನವಿರುವುದಿಲ್ಲ. (ಅದು ಯಾಕೊ?) ಒಬ್ಬರೇ ಮಗಳಿರುತ್ತಾಳೆ. ಅವನ ಮಂತ್ರಿಗೆ ಒಬ್ಬ ಅರೆಹುಚ್ಚ ಮಗನಿರುತ್ತಾನೆ. ಈ ಅರಸುಕುಮಾರಿ ಯನ್ನು ತನ್ನ ಅರೆಹುಚ್ಚ ಮಗನಿಗೆ ಮದುವೆಮಾಡಿಸಿ ತಾನು ರಾಜ್ಯವನ್ನು ಲಪಟಾಯಿಸಬೇಕೆಂದು ಮಂತ್ರಿ (ಖಳನಾಯಕ) ಹೊಂಚು ಹಾಕುತ್ತಿರುತ್ತಾನೆ. ರಾಜಕುಮಾರಿಯು ಸ್ವಪ್ನ ದಲ್ಲಿ ಒಬ್ಬ ರಾಜಕುಮಾರನನ್ನು ಕಾಣುತ್ತಾಳೆ, ಸ್ವಪ್ನದಲ್ಲಿಯೇ ಅನವಲ್ಲಿ ಅನುರಕ್ತಳಾಗುತ್ತಾಳೆ. ರಾಜಕುಮಾರಿಯು ಮಂ ತ್ರಿಯ ಮಗನನ್ನು ವಿವಾಹವಾಗಲು ನಿರಾಕರಿಸಿದ್ದರಿಂದ, ಮಂತ್ರಿಯು ಕುಪಿತನಾಗಿ ಆಕೆಯನ್ನು ಬಲಾತ್ಕಾರವಾಗಿ ಅಪ ಹರಿಸಿಕೊಂಡು ಹೋಗಲು ತನ್ನ ಕಡೆಯವರಿಗೆ ತಿಳಿಸುತ್ತಾನೆ.

ಈ ರಾಜ್ಯದ ಪಕ್ಕದ ರಾಜ್ಯದಲ್ಲಿ ಇನ್ನೊಂದು ರಾಜ್ಯ ವಿರುತ್ತದೆ. ಅದರ ಮುದಿ ಅರಸು ಅರವತ್ತರ ಹೊಸಲು ದಾಟುವ ಮುನ್ನ ಒಬ್ಬ ಯುವತಿಯನ್ನು ಮದುವೆಯಾಗಿರು ತ್ತಾನೆ. ತನ್ನ ಮೊದಲ ಹೆಂಡತಿಯನ್ನೂ ಅವಳ ಮಗನನ್ನೂ (ಅದು ಒಬ್ಬನೇ ಮಗ!) ಕಾಡುಪಾಲು ಮಾಡಿರುತ್ತಾನೆ. ಈ ಅರಸುಕುಮಾರ ತನ್ನ ಸ್ನೇಹಿತರನ್ನೆಲ್ಲ ಒಟ್ಟುಗೂಡಿ ಒಂದು ಸೈನ್ಯ ಕಟ್ಟಿರುತ್ತಾನೆ. ಸಿರಿವಂತರ ತಲೆ ಹೊಡೆದು ಅದನ್ನು ಬಡವರಿಗೆ ಹಂಚುವುದೇ ರಾಜಕುಮಾರನ ಮತ್ತು ಅವನ ಪರಿವಾರದವರ ಕೆಲಸ.

ಈ ರಾಜ್ಯದ ಮಂತ್ರಿಯ ಕಡೆಯ ಜನರು ರಾಜಕುಮಾ ರಿಯನ್ನು ಅಪಹರಿಸಿ ಕಾಡಿನಲ್ಲಿ ಹೋಗುತ್ತಿರುವಾಗ ರಾಜ ಕುಮಾರನು ಹಟಾತ್ತನೆ ಬಂದು (ಅವನು ಯಾವಾಗಲೂ ಬರುವುದೇ ಹಾಗೆ) ಅಷ್ಟು ಜನರೊಂದಿಗೆ ಏಕಾಂಗಿಯಾಗಿ ಹೋರಾಡಿ ಎಲ್ಲರನ್ನೂ ಹತ್ತಿಯ ಮೂಟೆಗಳಂತೆ ಉರುಳಿಸಿ ರಾಜಕುಮಾರಿಯನ್ನು ರಕ್ಷಿಸಿ ಅವಳನ್ನು ಅರಮನೆಗೆ ತಂದು ಬಿಡುತ್ತಾನೆ. ಇಲ್ಲಿ ಇನ್ನೊಂದು ಚಮತ್ಕಾರವಿದೆ. ಅರಸು ಕುಮಾರ ಕರಿಯ ಬಟ್ಟೆತುಂಡೊಂದನ್ನು ಕಣ್ಣಿಗೆ ಕಟ್ಟಿಕೊಂಡಿ ರುತ್ತಾನೆ. ಅದರಲ್ಲಿ ಕಣ್ಣುಗಳು ಕಾಣುವಂತೆ ಎರಡು ತೂತು ಗಳಿರುತ್ತವೆ. ಆದರೆ ಅದನ್ನು ಹಾಕಿಕೊಂಡಿರುವವರು ಯಾರು ಎಂದು ಹೇಳಲು ಸಾಧ್ಯವಿಲ್ಲ. ಅರಮನೆಯ ಹತ್ತಿರ ಬರುವ ಹೊತ್ತಿಗೆ ರಾಜಕುಮಾರ ಅದು ಹೇಗೊ ಮಾಯ ವಾಗುತ್ತಾನೆ.

ತನ್ನನ್ನು ರಕ್ಷಿಸಿದವನಲ್ಲಿ ರಾಜಕುಮಾರಿ ಅನುರಕ್ತಳಾ ಗುತ್ತಾಳೆ. ರಾಜಕುಮಾರನು ರಾಜಕುಮಾರಿಯಲ್ಲಿ ಅನು ರಕ್ತನಾಗುತ್ತಾನೆ. ಮಂತ್ರಿಯ ಕಡೆಯವರು ತಮ್ಮ ಒಡೆಯ ನಿಗೆ ದೂರುಕೊಡುತ್ತಾರೆ. ಅವನು ಕಣ್ಣಿಗೆ ಚಿಂದಿಬಟ್ಟೆ ಕಟ್ಟಿದ ನೀಚನನ್ನು ಸದೆಬಡೆಯುವದ್ದಾಗಿ ಪ್ರತಿಜ್ಞಿಸಿರುತ್ತಾನೆ. ಈಗಿನಿಂದಲೇ ನಿಜವಾದ ಸ್ಟಂಟ್ ಚಿತ್ರದ ಕಥೆ ಆರಂಭವಾಗು ವುದು.

ಖಳನಾಯಕನ ನೂರಾರು ಜನ ಅನುಯಾಯಿಗಳನ್ನು ನಾಯಕನು ಕತ್ತಿಯ ವರಸೆಯಲ್ಲಿ ಸೋಲಿಸಿಬಿಡುತ್ತಾನೆ. ಮಹಡಿಯಿಂದ ಕೆಳಕ್ಕೆ ಹಾರುತ್ತಾನೆ. ಅದಕ್ಕಿಂತಲೂ ಆಶ್ಚ ರ್ಯದ ಸಂಗತಿಯೆಂದರೆ, ನೆಲದ ಮೇಲಿದ್ದವನು ಸುಮಾರು ೬೦-೭೦ ಅಡಿ ಎತ್ತರದ ಉಪ್ಪರಿಗೆಗೆ "ಝುಂಯ್" ಅಂತ ಹಾರುತ್ತಾನೆ. ನಾಯಕನ ಕುದುರೆ ಮಿಲಿಟರಿ ಕುದುರೆಯಂತಿ ರುತ್ತದೆ. ಖಳನಾಯಕನ ಅನುಯಾಯಿಗಳವು ಶಾನುಭೋ ಗರ ಮತ್ತು ಆಚಾರರ ತಟ್ಟುಗಳಾಗಿರುತ್ತವೆ. ಕೆಲ ಸಂದರ್ಭ ಗಳಲ್ಲಿ ನಾಯಕ ಯಾವುದೋ ಒಂದು ಸ್ಥಳದಲ್ಲಿ ಅಡಗಿಕೊಂಡಿ ರುತ್ತಾನೆ. ಅವನಿಗಾಗಿ ಹುಡುಕುತ್ತಿರುವ ನೂರಾರು ಜನ ಖಳನಾಯಕನ ಕಡೆಯವರು ಅವನಿರುವ ಸ್ಥಳವೊಂದನ್ನು ಬಿಟ್ಟು ಬೇರೆ ಎಲ್ಲ ಕಡೆಗಳಲ್ಲೂ ಹುಡುಕುತ್ತಾರೆ. ಏಕೆಂದರೆ ನಾಯಕ ಎಲ್ಲಿ ಅಡಗಿದ್ದನೆಂಬುದು ಅವರಿಗೆ ಗೊತ್ತು; ಅವ ನನ್ನು ಹುಡುಕಕೂಡದೆಂದು ಡೈರೆಕ್ಟರು ಹೇಳಿರುತ್ತಾನೆ.

ಸರಿ, ಕೊನೆಯ ಕತೆ ಗೊತ್ತೇಇದೆಯಲ್ಲ, ಮಂತ್ರಿಯ (ಖಳನಾಯಕನ) ಪರಾಭವ. ರಾಜಕುಮಾರ ರಾಜಕುಮಾ ರಿಯರ ವಿವಾಹ. ಆ ರಾಜ್ಯ ಈ ರಾಜ್ಯ ಒಟ್ಟು ಕೂಡಿಸಿ ಕೊಂಡು ಸುಖವಾಗಿ ರಾಜ್ಯವಾಳುವುದು.

ಈ ಸ್ಟಂಟ್ ಚಿತ್ರಗಳಲ್ಲಿ ಸೋಷಿಯಲ್ ಸ್ಟಂಟ್ ಚಿತ್ರ ವೆಂಬ ಒಂದು ಬಗೆಯಿದೆ. ಇವುಗಳಲ್ಲಿ ರಾಜರಾಣಿಯರಿರುವ ದಿಲ್ಲ. ಇವುಗಳಲ್ಲಿ ಸೂಟು, ಬೂಟು, ಹ್ಯಾಟಿನವರೇ ಜಾಸ್ತಿ. ಇದರಲ್ಲಿ ಮಾತೆತ್ತಿದರೆ ಪಿಸ್ತೂಲು ತೋರಿಸುವುದು, ದುರ್ದಾನ ಹಿಡಿದ ಬ್ರಾಹ್ಮಣನಂತೆ ಕಾರಿನಲ್ಲಿ ದಿಕ್ಕೆಟ್ಟು ಓಡುತ್ತಿರುವುದು ಇವೇ ಹೆಚ್ಚು. ಕಂಡವರ ಆಸ್ತಿ ಲಪಟಾಯಿಸಲು ಯಾರೋ ಮಸಲತ್ತು ಮಾಡುತ್ತಿರುವುದು. ಅದನ್ನು ಅವರು ಪತ್ತೆ ಹಚ್ಚಿ ಅವರೊಂದಿಗೆ ಹೊಡೆದಾಡುವದು, ಸಾಮಾನ್ಯವಾಗಿ ಈ ಕತೆಯ ವಸ್ತುವಾಗಿದೆ.

ಸ್ಟಂಟ್ ಚಿತ್ರಗಳಲ್ಲಿ ಜಂಗಲ್ ಚಿತ್ರಗಳೂ ಸೇರುತ್ತವೆ. ಮಾನವ ಪ್ರವೇಶವಿಲ್ಲದ ಸಾಂದ್ರಾರಣ್ಯದಲ್ಲಿ ಯಾವನೋ ಅದು ಹೇಗೋ ಸೇರಿಕೊಂಡಿರುತ್ತಾನೆ. ಇವನಿಗೆ ಮೃಗಗಳ ಮಾತು ಬರುವುದಂತಿರಲಿ, ಇವನು ಹೇಳಿದಂತೆ ಅವು ಕೇಳು ತ್ತವೆ. ಇವನು ಅಪಸ್ವರದಲ್ಲಿ "ವಾಂ" ಎಂದು ಕೂಗಿದರೆ ಆ ಕಾಡುಮೃಗಗಳೆಲ್ಲ ಇವನ ಹತ್ತಿರಕ್ಕೆ ಓಡಿಬರುತ್ತವೆ. ಇವ ನಲ್ಲಿ ರೇಜರ್‌ಸೆಟ್ ಮತ್ತು ಬ್ಲೇಡ್ ಇಲ್ಲದಿದ್ದರೂ ಇವನ ಕೆನ್ನೆ ಸಾಲಿಗ್ರಾಮದಂತೆ ಸದಾ ನುಣುಪಾಗಿರುತ್ತದೆ. ಇವ ನಿಗೆ ಮರದಿಂದ ಮರಕ್ಕೆ ಹಾರಲು ಯಾರೋ ಪುಣ್ಯಾತ್ಮರು ಅವುಗಳಿಗೆ ಹಗ್ಗಗಳನ್ನು ಕಟ್ಟಿರುತ್ತಾರೆ. ಇವನ್ನು ಯಾರು

ಕಟ್ಟಿರುತ್ತಾರೆಂಬ ಬಗ್ಗೆ ಕಳೆದ ಇಪ್ಪತ್ತು ವರ್ಷಗಳಿಂದ ಸಂಶೋಧನೆ ನಡೆಸುತ್ತಿದ್ದೇನೆ. ಆದರೆ ನನ್ನ ಪ್ರಯತ್ನ ವಿಫಲವಾಗಿದೆಯೆಂದು ತಿಳಿಸಲು ನನಗೆ ವಿಷಾದವಾಗುತ್ತದೆ. ಗೊರಿಲ್ಲಾ ಚರ್ಮವನ್ನು ಹೊದೆದು ಕೋತಿಯಂತೆ ವರ್ತಿಸುವುದು ತುಂಬಾ ಹಾಸ್ಯವನ್ನುಂಟುಮಾಡುತ್ತದೆ.

ಸ್ಟಂಟ್ ಚಿತ್ರಗಳಲ್ಲಿ ಕೆಲವು ಯಾವುದೋ (ಈ ಪೃಥ್ವಿಗೆ ಸಂಬಂಧ ಪಡದ) ಒಂದು ದೇಶದಲ್ಲಿ ನಡೆದ ಕಥೆಯಾಗಿರುತ್ತದೆ. ಇದರಲ್ಲಿನ ನಾಯಕ ಮತ್ತು ಖಳನಾಯಕನ ಉಡುಗೆಗಳು ವಿಚಿತ್ರವಾಗಿರುತ್ತವೆ. ನಾಟ್ಯಚಾರನಂತೆ ತುಂಬು ಗೂದಲು, ಒಂದೊಂದು ಕಿವಿಯಲ್ಲಿ ಒಂದೊಂದು ಕೋಡುಬಳೆ. ತಲೆಗೆ ಚುಕ್ಕೆ ಇರುವ ಒಂದು ಬಟ್ಟೆ ತುಂಡನ್ನು ಬೇರೆ ಕಟ್ಟಿರುತ್ತಾನೆ. ಕತ್ತಿಯನ್ನು ತಿರುವುತ್ತಿರುವಾಗ ಎಡಗೈಯಿಂದ ಕಣ್ಣುಗಳ ಮೇಲೆ ಇಳಿಯುವ ಕೂದಲನ್ನು ಸರಿಸಿ ಹಿಂದಕ್ಕೆ ಸರಿ ಮಾಡಿಕೊಳ್ಳುವುದೇ ಒಂದು ಝೋಕು.

ಸ್ಟಂಟ್ ಚಿತ್ರಗಳಲ್ಲಿ ರೈಲುಗಳ ಓಡಾಟವೂ ಬಹಳ ಹೆಚ್ಚು. ರೈಲುಗಳ ಹೆಸರಿನಮೇಲೇ ಕೆಲವು ಚಿತ್ರಗಳಾಗಿವೆ. ಪಂಜಾಬ್ ಮೇಲ್, ತುಫಾನ್ ಮೇಲ್, ಇವು ಮುಖ್ಯವಾದವು. ನಾಯಕ ಅಥವಾ ನಾಯಕಿಯನ್ನು ಅವರ ಸ್ನೇಹಿತ ಪಾರುಮಾಡಲು ಯತ್ನಿಸುವಾಗ (ಅವರನ್ನು ಖಳನಾಯಕನ ಕಡೆಯವರು ಎಚ್ಚರ ತಪ್ಪುವಂತೆ ಹೊಡೆದಿರುತ್ತಾರೆ.) ರೈಲು ಕಂಬಿ ಹತ್ತಿರ ಬಿದ್ದು ಬಿಡುತ್ತಾನೆ. ಅಷ್ಟು ಹೊತ್ತಿಗೆ ರೈಲು ಕೂಗುವ ಶಬ್ದ ಕೇಳುತ್ತದೆ. ರೈಲು ಬರುವ ಹೊತ್ತಿಗೆ ಸರಿಯಾಗಿ ಸ್ನೇಹಿತ ಭಗೀರಥ ಯತ್ನದಿಂದ ಅವರನ್ನು ಪಾರುಮಾಡುತ್ತಾನೆ.

ನಾಯಿಗಳು ಸ್ಟಂಟ್ ಚಿತ್ರಗಳಲ್ಲಿ ಪಾತ್ರವೆತ್ತಿ ಖ್ಯಾತಿಗೊಂಡಿವೆ. ಯಾವ ಸಿ. ಐ. ಡಿ. ಗೂ ಸಾಧ್ಯವಿಲ್ಲದುದನ್ನು ಇವು ಸಾಧಿಸುತ್ತವೆ. ಪಿಸ್ತೂಲು ಹಾರಿಸುವುದು, ಫೋನಿನಲ್ಲಿ ಮಾತನಾಡುವುದು, ನಾಯಕ ನಾಯಕಿಯನ್ನು ಚುಂಬಿಸುವನೆಂದು ತಿಳಿದ ಕೂಡಲೇ ಆ ಸ್ಥಳದಿಂದ ಜಾರಿಕೊಳ್ಳುವುದು ಮುಂತಾದ ಅನೇಕ ಚಮತ್ಕಾರಿಕ ಅಭಿನಯವನ್ನು ತೋರುತ್ತವೆ. ಇದರಂತೆ ಕುದುರೆಗಳೂ ಅಭಿನಯಿಸುತ್ತವೆ.

ಸ್ಟಂಟ್ ಚಿತ್ರಗಳಲ್ಲಿ ಜಾದೂ ಚಿತ್ರಗಳು ಒಂದು ಗಣ್ಯಸ್ಥಾನವನ್ನೇ ಅಲಂಕರಿಸಿವೆ. ಹೆಸರಾಂತ ಚಿತ್ರದ ಹೆಸರಿಗೆ 'ಜಾದೂ' ಎಂಬ ಎರಡಕ್ಷರಗಳನ್ನು ಸೇರಿಸಿದರೆ ಆಯಿತು. 'ಜಾದೂ ಇ ಕಂಗನ್' 'ಜಾದೂ ಇ ಬಂಧನ್' ಎಂಬ ಚಿತ್ರಗಳು ತಯಾರಿಸಲ್ಪಟ್ಟವೆ. 'ಕಂಗನ್' 'ಬಂಧನ್' ಚಿತ್ರಗಳಿಗೂ ಇವಕ್ಕೂ ಯಾವ ಸಂಬಂಧವೂ ಇಲ್ಲ. ಸೈಸಿಕೊಂಡಾಗ ಮಾಂತ್ರಿಕ ಖಳನಾಯಕನು ಮಾಯವಾಗುವುದೇ ಇದರಲ್ಲಿ ನೋಡಬೇಕಾದ ದೃಶ್ಯ. ಈ ದುಷ್ಟ ಮಾಂತ್ರಿಕನನ್ನು ನಾಯಕನು ಸಾಧುವೊಬ್ಬನ ಸಹಾಯದಿಂದ ಮಾಂತ್ರಿಕ ವಿದ್ಯೆ ಕಲಿತು ಅವನನ್ನು ಸದೆಬಡಿಯುತ್ತಾನೆ.

ಸ್ಟಂಟ್ ತಾರೆಯರೇ ಕೆಲವರಿದ್ದಾರೆ. ಇವರಿಗಾಗಿಯೇ ಕಥೆಗಳನ್ನು ಬರೆದುದಾಗಿದೆ. 'ಹಂಟರ್‌ವಾಲಿ' 'ಪಿಸ್ತೂಲ್ ವಾಲಿ' 'ಚಷ್ಮಾವಾಲಿ' ಮುಂತಾದ ಚಿತ್ರಗಳು ಇದಕ್ಕೆ ಸಾಕ್ಷಿ. ಇನ್ನು 'ಚಪ್ಪಲ್ ವಾಲಿ' 'ಫೌಂಟೆನ್‌ಪೆನ್ ವಾಲಿ' 'ಪೆನ್ಸಿಲ್ ವಾಲಿ' ಚಿತ್ರಗಳು ಬರಬೇಕಾಗಿವೆ ಅಷ್ಟೆ. ಈ ಎದೆವಾನ ತಾರೆಯರು ಗಂಡಸರು ಪೋಷಾಕು ಹಾಕಿಕೊಂಡು ಹೆಣ್ಣು ದನಿಯಲ್ಲಿ ಮಾತನಾಡುತ್ತ, ಖಳನಾಯಕನೊಂದಿಗೆ ವೈಯಾರವಾಗಿ ಕತ್ತಿತಿರುಗುವುದು, ಪಿಸ್ತೂಲು ತೋರಿಸುವುದು, ಅವನ ಕೆನ್ನೆಗೆ ಮೃದುವಾಗಿ ಥಳೀರೆಂದು ಹೊಡೆಯುವುದು ಬಹಳ ಸ್ವಾರಸ್ಯವಾಗಿರುತ್ತವೆ. ಈ ಹೆಂಗಸು-ತಾರೆಯರು ಕುದುರೆ ಹತ್ತುವುದು, ಕಾರು, ಏರೋಪ್ಲೇನುಗಳನ್ನು ನಡೆಸುವುದು, ಒಂದುವರೆ ಅಡಿ ಉದ್ದದ ನೀರಿನಲ್ಲಿ ಮೊಳಕಾಲೂರಿ ಈಜುವಂತೆ ನಟಿಸುವುದು, ಮತ್ತು ಸ್ಟಂಟ್ ಚಿತ್ರದ ನಾಯಕನಂತೆ 'ಸುಂಯ್' ಅಂತ ಫರ್ಲಾಂಗು ಗಟ್ಟಲೆ ಹಾರುವುದು ಮುಂತಾದುವನ್ನು ಕಲಿತಿರುತ್ತಾರೆ.

ಅಡಗೂಲಜ್ಜಿ ಕತೆಗಳು ಸಹ ಒಂದು ಮಾದರಿ ಸ್ಟಂಟ್ ಚಿತ್ರಗಳು. ತಮಿಳು ಚಿತ್ರಕಾರರಿಗೆ ಇವನ್ನು ಬಿಟ್ಟು ಬೇರೆ ತಯಾರಿಸಲು ಬರುವುದೇ ಇಲ್ಲ. ಇವು ದುಡ್ಡಿನ ಡಬ್ಬಿಗಳು, ತೆಲುಗು ಚಿತ್ರಕಾರರೂ ಇವನ್ನು ತಯಾರಿಸಿದ್ದಾರೆ.

ಸ್ಟಂಟ್ ಚಿತ್ರಗಳಲ್ಲಿಯೂ ಹಾಡು, ನೃತ್ಯ ಇರುತ್ತದೆ. ಖ್ಯಾತಿವೆತ್ತ ಚಿತ್ರದ ಹಾಡುಗಳ ಧಾಟಿಯಲ್ಲಿಯೇ ಅಪಖ್ಯಾತಿ ಬರುವಂತೆ ಇಲ್ಲಿ ಹಾಡುತ್ತಾರೆ. ಕಥಕ್, ಕಥಕಳಿ, ಭರತನಾಟ್ಯ, ಮಣಿಪುರಿ, ರಂಬಾ, ಫಾಕ್ಸ್ ಟ್ರಾಟ್, ಆಫ್ರಿಕನ್ ನೃತ್ಯ, ಇವೆಲ್ಲವುಗಳ 'ಹೊಲಸು ಮೇಲೋಗರ'ವೇ ಸ್ಟಂಟ್ ಚಿತ್ರಗಳಲ್ಲಿನ ನೃತ್ಯವಾಗಿರುತ್ತದೆ. ಸ್ಟಂಟ್ ಚಿತ್ರಗಳ ಕೋಟಿ ಸಂತಾನ ವಿವರಿಸಲು ಸಾಧ್ಯವಿಲ್ಲ. ಕೆಲವದರ ರೂಪರೇಖೆ ಕೊಟ್ಟಿದ್ದೇನೆ.

THE HOUSE OF THE PEOPLE
WITH TASTE AND CULTURE.


S. L. SHET DIAMOND HOUSE

Karnad Sadashiv Rao Road - MANGALORE.

Pure Diamonds of Quality - Gifts for all occasions - Silverware - Jewellery in Latest Designs - Gems Etc , Etc.

Prop: **S. L. SHET.**

ಕವಿಯ ಕನಸು



೧

ಕವಿತೆ-ಕಾಮಿನಿ ಕಾಂಚಿನೆನ್ನುತ
ಎದುರುಗೊಳ್ಳಲು ನಡೆದೆನು:
ಗೆಳೆಯ ಬಳಗದ ಗಳಹುವಿಕೆಯಲಿ
ಮುನಿದು ಮೌನವ ತಳೆದೆನು.

೨

ದಾರಿಯುದ್ದಕು ನಡೆದೆ ನೆನೆಯುತ
ಕಣ್ಣು ಕ್ಷಿತಿಜೆಗೆ ಆನಿಸಿ,
ಬಂದೆ ಬರುವೆನೆನುತ್ತ ವಚನವ—
ನಿತ್ತ ಬಗೆಯನು ಚಿಂತಿಸಿ.

೩

ಹಳೆಯ ಗುಡ್ಡದ ಕಲ್ಲುಗುಂಡಿನ
ಚರಿತೆಯಲಿ ಮನತೊಡಗಿರೆ,
ಶೋಧನೆಯ ಸುವಿಲಾಸ ನಟನೆಯ
ಕಣ್ಣು ಹಾದಿಯ ಕಡೆಗಿರೆ

೪

ಗುಡ್ಡ ಹತ್ತಲು ನೆಲದ ಅಗಲವು
ಸುತ್ತಲೆಲ್ಲವು ಪರಿವುದು;
ತೋರ ಕೆಯ್ವೊಲ ತೊರೆಯ ತನಕವು
ಹೊಲದ ಹಾದಿಯು ಹೊಳೆವುದು.

೫

ಹಳೆಯ ಗುಡ್ಡದ ಕೋಟೆಯೆಂಬುದು
ಶಿಲಾಹಾರದ ರಾಜ್ಯವು
ಗರುಡಗಾಹುತಿಯಾದ ವಿದ್ಯಾ—
ಧರನ ವಂಶದ ಭಾಗ್ಯವು!

೬

ನಾಗಸಂತತಿ ಪರಮ ನಾಗಾ-
ನಂದ ತ್ಯಾಗವೆ ಬಳೆಯಿತು;
ನಾಗ—ವಿದ್ಯಾಧರರ ಪ್ರೀತಿಗೆ
ಪೂರ್ವ ಪೀಠಿಕೆಯಾಯಿತು!

೭

ನಾಗ-ನಗಧರ ವಂಶವಂದಿಗೆ
ನಂಟನಂಟನು ಬೆಳೆಸಿತು.
ಅವರ ಪೀಳಿಗೆ ನಾಗಖಂಡವ
ಪರಮ ವಿಭವದೊಳಾಳಿತು

೮

ಅವರ ಶೀವಿಯು ಅವರ ಶೌರ್ಯವು
ಇಹುದು ನಾಡವರೆದೆಯೊಳು
ಅವರ ಜಾಣ್ಮೆಯು ಅವರ ಪೆರ್ಮೆಯು
ಹೊಳೆವುದಿಂದಿಗು ಮೊಗದೊಳು!

೯

ನಾಗ-ವಿದ್ಯಾಧರರ ಹೆಂಗಳು
ಕೇಳಿಗೆಳಿಸಿದ ಬನವಿವು!
ಸುತ್ತುಮುತ್ತಲು ನಿಂತ ಕಲ್-ಮರ
ಅದನೆ ಕಿವಿಯಲಿ ನುಡಿದವು!

೧೦

ಅವರ ವಿಭವವಿಲಾಸವೆಲ್ಲವು
ನನ್ನ ಕಣ್ಣಿಗೆ ಸುಳಿದುವು
ಅವರ ಕೋಮಲ ಮುಗ್ಧಹೃದಯವು;
ಮಾನವತೆಯೊಳು ಮೆರೆದುವು!

೧೧

ಕವಿಯು ತಾನೆನೆ ಮರೆತೆನಲ್ಲಿಗೆ
ರಾಜ್ಯ ಸಿರಿಯನು ಕಾಣುತ,
ಪ್ರಜೆಗಳೋಲಗಿಸಿರಲು ಸಿಂಹಾ-
ಸನವನೇರಿದೆ ಬಾಗುತ!

೧೨

ರಾಜನಾದೆನು ಹಳೆಯ ರಾಜ್ಯಕೆ
ಹೊಸ ಜನಾಂಗವೆ ಅರಳಲು
ರಾಣಿಸ್ಮರಣೆಯೊಳೆದ್ದು ನಿಂತೆನು
ಓಲಗವೆ ಒಡನೇಳಲು—

೧೩

ಹೊಲದ ಜೈಲಿನ ತೆಂಗು ಮಾಮರ
ಹಣ್ಣು ಹೂಗಳ ಪಡೆದುವು;
ತಮ್ಮ ರಾಣಿಯು ಬರುವಳೆನ್ನುತ
ಎಲೆಯ ಚಾಮರವಿಡಿದುವು!!

—ಸದಾನಂದ ನಾಯಕ.

ಪುಣ್ಯಪುರುಷರ ಪುಣ್ಯಸ್ವರೂಪ

ಜಿ. ವರದರಾಜರಾವ್, ಎಮ್. ಎ., ಚಿತ್ರದುರ್ಗ

ಯಾವ ಮಹಾತ್ಮರ ಜೀವನವನ್ನೇ ಆಗಲಿ ಅಭ್ಯಾಸ ಮಾಡುವಾಗ ಸಾಧಾರಣವಾಗಿ ಎರಡು ಭಾಗಮಾಡಿಕೊಂಡು ಪರಿಶೀಲಿಸುವುದು ಸೂಕ್ತವಾಗಿದೆ. ಏಕೆಂದರೆ, ಅವರ ಜೀವನದ ಪೂರ್ವಾರ್ಧದಲ್ಲಿ ಉತ್ತರಾರ್ಧ ಜೀವನದ ಸದ್ಗುಣ ರಾಶಿಗಳಿಗೆ ಮೊಳಕೆಯ ರೂಪದಲ್ಲಿ ಅನೇಕ ಅಂಶಗಳು ವ್ಯಕ್ತವಾಗುವುವು. ಹೀಗೆ ಮಾಡದೆ ಕೇವಲ ಅವರ ಉತ್ತರಾರ್ಧ ಜೀವನವನ್ನೇ ಗಮನಿಸಿದರೆ ಅದರಿಂದ ಅನೇಕ ರೀತಿಯಲ್ಲಿ ಕೊರತೆಯುಂಟಾಗುವುದು. ಮುಖ್ಯವಾಗಿ ಆ ಮಹಾತ್ಮನೆನಿಸಿದವನು ಕೈಕೊಂಡಿರಬಹುದಾದ ವಿವಿಧ ಸಾಧನೆಗಳೆಲ್ಲ ತಿಳಿಯದೆ ಹೋಗುವುದು. ಈ ಸಂತತ ಪ್ರಯತ್ನಗಳೇ ಇತರರಿಗೆ ಮಾರ್ಗದರ್ಶಕವಾದ ಮೆಟ್ಟಲುಗಳು. ಈ ಸಲುವಾಗಿಯೇ ಮಹಾ ಪುರುಷರ ಜೀವನಚರಿತ್ರೆಯನ್ನು ಬರೆಯುವವರು ಆತನ ಬಾಲ್ಯದಿಂದ ಆರಂಭಿಸಿ, ವಿದ್ಯಾರ್ಜನೆ, ಜ್ಞಾನಾರ್ಜನೆ, ಗಳನ್ನು ರೇಖಿಸಿ, ತುದಿಗೆ ಆತನ ಲೋಕೋಪಕಾರವನ್ನು ವರ್ಣಿಸುವರು. ಆಗ ಆ ಮಹಾತ್ಮನ ಪೂರ್ಣಸ್ವರೂಪದ ಪರಿಚಯವುಂಟಾಗಿ ಪಂಡಿತ ಪಾಮರರಿಬ್ಬರಿಗೂ ಆದರ್ಶ ಪ್ರಾಯವಾಗುವುದು.

ನಮ್ಮ ಪುರಾಣೇತಿಹಾಸಗಳಲ್ಲಿ ಬರುವ ಕೆಲವು ಪುಣ್ಯ ಪುರುಷರ ಜೀವನವನ್ನೂ ಮೇಲೆ ಹೇಳಿದಂತೆ ಅಖಂಡ ದೃಷ್ಟಿಯಿಂದ ವಿಚಾರಿಸಿದರೆ ಅನೇಕ ವಿಷಯಗಳು ಗೋಚರವಾಗುತ್ತವೆ. ಐತಿಹಾಸಿಕ ವ್ಯಕ್ತಿಗಳ ವಿಷಯದಲ್ಲಿಯೇ ಅನೇಕ ವಿಚಾರಗಳು ಖಚಿತವಾಗಿ ಗೊತ್ತಾಗದೆ ಇರಬೇಕಾದರೆ, ಪುರಾಣ, ಪುಣ್ಯ ಕಥೆಗಳಲ್ಲಿ ಬರುವ ಪವಾಡ ಪುರುಷರಲ್ಲಿ ಪೂರ್ಣವಿವರಗಳು ದೊರೆಯಬಲ್ಲವೆ ಎನ್ನುವ ಪ್ರಶ್ನೆ ಬರುವುದುಂಟು! ಆದರೆ ಇಂಥ ಕೆಲವು ಸಮಸ್ಯೆಗಳಿಗೆ ನಮ್ಮ ಊಹಾಬಲ ಮತ್ತು ಸೂಕ್ತಾಸೂಕ್ತಗಳ ಪರ್ಯಾಲೋಚನಾಶಕ್ತಿಯೇ ಮುಖ್ಯವಾದ ಮಂತ್ರಶಕ್ತಿ. ಇದಲ್ಲದೆ ನಮ್ಮ ಕವಿಗಳು ಆಯಾ ಪುಣ್ಯಪುರುಷರ ವಿಚಾರವನ್ನು ಬರೆಯುವಾಗ ಅವರ ಪೂರ್ಣ ವ್ಯಕ್ತಿತ್ವವು ಒಡಮೂಡುವಂತೆ ಬರೆದಿರುವ ಸಂಭವವುಂಟು. ಇದು ತೀರ ವಿರಳ. ಆದರೂ ಹಲಕೆಲವು ಗ್ರಂಥಗಳ ಆಧಾರದ ಮೇಲೆ ಈ ಲೇಖನದಲ್ಲಿ ಕೆಲವು ಪೌರಾಣಿಕ ಪಾತ್ರಗಳಪೂರ್ಣ ಸ್ವರೂಪವನ್ನು ರೇಖಿಸಲು ಪ್ರಯತ್ನಮಾಡಲಾಗಿದೆ. ಇಲ್ಲಿನ ಪ್ರಯತ್ನವಾದರೂ ಸಿದ್ಧಾಂತವಲ್ಲ; ಸಲಹೆ, ಇಲ್ಲವೇ, ಸೂಚನೆ ಮಾತ್ರ.

ಮೊದಲು, ಮಹಾಭಾರತದ ಮಹಾಪುರುಷರಲ್ಲಿ ಒಬ್ಬನಾದ ಕರ್ಣನ ದೃಷ್ಟಾಂತವನ್ನೇ ತೆಗೆದುಕೊಳ್ಳಬಹುದು. ಕರ್ಣನನ್ನು ನಮ್ಮ ಕವಿಗಳು ಮುಕ್ತಕಂಠದಿಂದ ಕೊಂಡಾಡಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಕನ್ನಡದ ಆದಿ ಕವಿಯಾದ ಪಂಪನಂತೂ ಕರ್ಣನ ಸಮಸ್ತ ಸದ್ಗುಣಗಳನ್ನೂ ನಿರೂಪಿಸಿ ಒಂದು ಚರಮಗೀತೆಯನ್ನೇ ಬರೆದಿರುತ್ತಾನೆ. ಇದೇ ಕವಿ, ಭಾರತವು ಲೋಕಪೂಜ್ಯವಾಗಿರುವುದಕ್ಕೆ ಅಲ್ಲಿ ಬರುವ ಮಹಾವ್ಯಕ್ತಿಗಳೇ ಕಾರಣವೆಂದು ಹೇಳಿ ಆಯಾ ವ್ಯಕ್ತಿಗಳ ಪ್ರಧಾನ ಗುಣವನ್ನು ತಿಳಿಯಪಡಿಸಿರುವುದು ಈ ಲೇಖನಕ್ಕೆ ಪ್ರಕೃತವಾದದ್ದು.

ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ
ಗಂಡಿನೊಳ್ ಭೀಮಸೇನಂ ।
ಬಲದೊಳ್ ಮದ್ರೇಶನತ್ಯುನ್ನತಿಯೊಳಸುರ
ಸಿಂದೂದ್ಭವಂ ಚಾಪವಿದ್ಯಾ ॥
ಬಲದೊಳ್ ಕುಂಭೋದ್ಭವಂ ಸಾಹಸದ
ವಿಜಯದೊಳ್ ಫಲ್ಗುಣಂ ಧರ್ಮದೊಳ್ ನಿ ।
ರ್ಮಲಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ
ಭಾರತಂ ಲೋಕಪೂಜ್ಯ ॥

(ಪಂಪಭಾರತ, ಆ. ೧೪, ಪ. ೬೪)

ಕೌರವ ಪಾಂಡವರೆಂಬ ಪಕ್ಷಪಾತವಿಲ್ಲದೆ ಪಂಪನು ಉಭಯ ಪಕ್ಷಗಳ ಮಹಾನುಭಾವರನ್ನೂ ಸ್ಮರಿಸಿರುವುದು ಸ್ತುತ್ಯವಾದ ವಿಚಾರ. ಈ ಮಹಾಪುರುಷರ ಪಂಕ್ತಿಯಲ್ಲಿ ಕರ್ಣನನ್ನು ಕುರಿತು ಹೇಳಿರುವ ಮಾತು ತುಂಬ ಗಮನಾರ್ಹವಾದುದು. ಕರ್ಣನ ದಾನ, ದಯೆ, ಧರ್ಮನಿಷ್ಠೆ ಮತ್ತು ಸ್ವಾಮಿಭಕ್ತಿ ಇವುಗಳು ಸುಪ್ರಸಿದ್ಧವಾದ ಗುಣಗಳು. ಧರ್ಮರಾಯನ ಸತ್ಯನಿಷ್ಠೆ ಲೋಕಪ್ರಸಿದ್ಧವಾದುದು. ಪಂಪನಾದರೋ ಈ ಪದ್ಯದಲ್ಲಿ **"ನನ್ನಿಯೊಳಿನತನಯಂ"** ಎಂಬುದಾಗಿಯೂ

"ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ" ಎಂಬುದಾಗಿಯೂ ಹೇಳಿರುವುದು ಅರ್ಥವತ್ತಾಗಿದೆ. ಕರ್ಣನ ಸತ್ಯಸಂಧತೆಯನ್ನು ಕುರಿತು ಪ್ರಸ್ತಾಪಿಸಿರುವುದಂತೂ ತುಂಬ ಮನೋಜ್ಞವಾಗಿದೆ.

ಈಗ, ಕರ್ಣನ ಸಮಗ್ರಜೀವನವನ್ನು ಪರಿಶೀಲಿಸಿದರೆ ಈ ಸತ್ಯಸಂಧತೆ ಆತನಲ್ಲಿ ಇಷ್ಟು ಉಜ್ವಲವಾಗಿ ಪ್ರಕಾಶಿಸುವುದಕ್ಕೆ ಏನು ಕಾರಣವೆಂಬುದು ಗೋಚರಿಸುತ್ತದೆ. ಮಹೋನ್ನತವಾದ ಪದವಿಯನ್ನು ಪಡೆದಿರುವ ಕರ್ಣನ ಜೀವನದಲ್ಲಿ ಯಾವಾಗಲಾದರೂ ಸತ್ಯದ ಗೆರೆಯನ್ನು ಮೀರಿಹೋಗಿರುವ ಸಂದರ್ಭವುಂಟೇ ಎನ್ನುವುದನ್ನು ವಿಚಾರಿಸುವುದು ಸೂಕ್ತ. ಈ ದೃಷ್ಟಿಯಿಂದ ಕರ್ಣನ ವಿಸ್ತಾರವಾದ ಜೀವನವನ್ನು ಸಿಂಹಾವಲೋಕನ ಮಾಡಿದರೆ, ಕರ್ಣನಿಗೂ ಪರಶುರಾಮನಿಗೂ ಘಟಿಸಿದ ಆ ಅನಿರೀಕ್ಷಿತವಾದ ಭೇಟಿಯು ಚಿತ್ರ ತೋರಿಬರುತ್ತದೆ. ಬ್ರಾಹ್ಮಣರನ್ನುಳಿದು ಬೇರೆ ಯಾರಿಗೂ ಧನುರ್ವಿದ್ಯಾಭ್ಯಾಸವನ್ನು ಹೇಳಿಕೊಡುವುದಿಲ್ಲವೆಂದು ಹಟ ತೊಟ್ಟಿದ್ದ ಆ ಪರಶುರಾಮನೊಂದುಕಡೆಯೂ, ತಾನು ಸೂತಪುತ್ರನೆಂದು ಭಾವಿಸಿ, ಹತಾಶನಾಗಿ, ಉದ್ದೇಶಸಾಧನೆಗಾಗಿ, ತಾನು ಬ್ರಾಹ್ಮಣನೇ ಎಂಬುದಾಗಿ ಸುಳ್ಳುಹೇಳಿ, ವಿದ್ಯಾಭ್ಯಾಸವನ್ನು ಕಲಿತ ಕ್ಷತ್ರಿಯಕುಲೋತ್ಪನ್ನನಾದ ಕರ್ಣನೊಂದು ಕಡೆಯೂ ನಮ್ಮೆದುರು ಬಂದು ನಿಲ್ಲುತ್ತಾರೆ. ಕರ್ಣನ ಬಾಲ್ಯಜೀವನದಲ್ಲಿ ಈ ಪ್ರಸಂಗ ಬಹಳ ಕಠಿಣವಾದುದು. ವಿದ್ಯಾಭ್ಯಾಸವೆಲ್ಲವೂ ಮುಕ್ತಾಯವಾಗಿ ಗುರುವಿನ ಆಶೀರ್ವಾದ ಸಮೇತನಾಗಿ ಹೊರಡಲಿರುವ ಶುಭಮುಹೂರ್ತದಲ್ಲಿ, ಕರ್ಣನ ಗುಟ್ಟು ಬಹಿರಂಗವಾಗಿ, ಪರಶುರಾಮರು ಕ್ರುದ್ಧರಾಗಿ, ಶಿಷ್ಯನ ಮೇಲೆ ಕೋಪಕಾರಿ, ಶಾಪವಿತ್ತ ಸಂದರ್ಭವಂತೂ ಬಹಳ ಘೋರವಾದುದು. ಇದರ ದುಷ್ಪರಿಣಾಮವನ್ನು ಕರ್ಣನ ಕಡೆಗಾಲದಲ್ಲಿ ಕಾಣುತ್ತೇವೆ. ಭಾರತ ಕಥೆಯಲ್ಲಿ ಎಂತೆಂತಹ ಸಂದರ್ಭಗಳು ಬಂದರೂ. ತನ್ನ ತಾಯಿಯಾದ ಕುಂತಿ, ತನ್ನ ಬಂಧುವಾದ ಶ್ರೀಕೃಷ್ಣ, ಇಂದ್ರ ಮೊದಲಾದವರೇ ಬಂದರೂ, ಸುಳ್ಳು ಹೇಳದೆ, ಸರ್ಪಾಸ್ತ್ರ ಮೊದಲ್ಗೊಂಡು, ಪ್ರತಿಯೊಬ್ಬರಿಗೂ ಕೊಟ್ಟ ಮಾತನ್ನು ನಡೆಸಿಕೊಟ್ಟು 'ನನ್ನಿ'ಗೆ ಹೆಸರಾದ ಕರ್ಣನು ಬಾಲ್ಯದಲ್ಲಿ ಗುರುವಿನೊಂದಿಗೆ ಆಡಿದ ಆ ಒಂದು ಸುಳ್ಳೇ ಅವನ ಈ ಸತ್ಯ ನಿಷ್ಠುರತೆಗೆ ಕಾರಣವೆಂದು ಹೇಳುವುದರಲ್ಲಿ ಅಡ್ಡಿಯೇನಿದೆ? ಆ ಒಂದು ಸುಳ್ಳಿಗಾಗಿ ತಾನು ಅನುಭವಿಸಬೇಕಾಗಿರುವ ಅನಂತ ದುಃಖವನ್ನು ಲಕ್ಷಿಸಿ, ಸಾಯುವತನಕ ಸತ್ಯಪರಿಪಾಲನೆಯನ್ನೇ ಕೈಕೊಂಡು ಕೃತಕೃತ್ಯನಾದ ಕರ್ಣನ ಚಿತ್ರ ಎಷ್ಟು ಮನೋಹರವಾಗಿ ವೇದ್ಯವಾಗುತ್ತದೆ! ಅಷ್ಟೇ ಅಲ್ಲದೆ, ಈ ಪುಣ್ಯಪುರುಷನ ಉತ್ತರಾರ್ಧ ಮತ್ತು ಪೂರ್ವಾರ್ಧಗಳ ಜೀವನ, ಆಗ, ಎಷ್ಟು ಸಮನ್ವಯವಾಗಿ ತೋರಿಬಂದು, ಒಟ್ಟು ಪಾತ್ರವೇ ಸಾಧುವಾಗಿಯೂ, ಸ್ವಾಭಾವಿಕವಾಗಿಯೂ ಕಂಡು ಬರುತ್ತದೆ![೧]

ಇಂಥ ಸಂದರ್ಭವನ್ನೇ, ಸತ್ಯನಿಷ್ಠೆಗೆ ಸುಪ್ರಸಿದ್ಧನಾದ ಹರಿಶ್ಚಂದ್ರನ ಜೀವನದಲ್ಲಿಯೂ ಕಾಣಬಹುದು. "ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು" ಎಂದು ಸಾರಿ ಹೇಳಿದ ಹರಿಶ್ಚಂದ್ರನು, ಜನ್ಮಾರಭ್ಯ ಸತ್ಯಸಂಧನಾಗಿದ್ದನೆ? ಎಂಬ ವಿಚಾರ ಬಹು ಮಾರ್ಮಿಕವಾಗಿದೆ. ಹರಿಶ್ಚಂದ್ರನ ಸತ್ಯಸಂಧತೆಯನ್ನು ಹೊಗಳಿ ಹೇಳಿದಂತಹ ವಸಿಷ್ಠನನ್ನು ವಿಶ್ವಾಮಿತ್ರನು ತೆಗಳುವ ಸಂದರ್ಭವನ್ನು ಕವಿ ರಾಘವಾಂಕನು ಬಹು ಮನೋಹರವಾಗಿ ಚಿತ್ರಿಸಿರುತ್ತಾನೆ. ಈ ಸನ್ನಿವೇಶದಲ್ಲಿ ವಿಶ್ವಾಮಿತ್ರನು ಎತ್ತುವ ಒಂದು ಆಕ್ಷೇಪಣೆ ಪುಣ್ಯಪುರುಷನಾದ ಹರಿಶ್ಚಂದ್ರನ ಜೀವನದ ಮೇಲೆ ತುಂಬ ಬೆಳಕನ್ನು ಬೀರುತ್ತದೆ. ಇಡಿಯ ಸೂರ್ಯವಂಶದಲ್ಲಿಯೇ ಹರಿಶ್ಚಂದ್ರನಂತಹ ಸತ್ಯಸಂಧನಿಲ್ಲ ಎಂಬ ವಸಿಷ್ಠರ ಮಾತಿಗೆ, ವಿಶ್ವಾಮಿತ್ರನ ಬಾಯಲ್ಲಿ ಬರುವ ಈ ಎರಡು ಪದ್ಯಗಳು ಪ್ರಶ್ನಿಕೇಳುವಂತಿವೆ!

> ಎಸೆವ ಮಗನಿಲ್ಲದಡೆ ನರಕವಹುದೆಂದು ಚಿಂ
> ತಿಸಿ ವರುಣನಲಿ ವರಂಬಡೆಯಲಾತನ ಯಾಗ
> ಪಶುವ ಮಾಡುವೆನೆಂದು ಮರಳೀವೆಯಾದ
> ಡೀವೆನು ಮಗನ ನಿನಗೆಂದೆನೆ ।
> ಶಿಶುವಾದನೆಂಬುದಾದಡೆ ಸಾಕೆನಲ್ ಕೊಡಲು
> ಹುಸಿದಡವಿಗಟ್ಟಿ ಬಯ್ಚಿಟ್ಟನೆಂಬುದ ನಿಂತು
> ಎಸೆವ ವೇದಂಗಳೊಳು ಕೇಳಿ ಪೊಗಳುವಡರಿದು
> ನಿನ್ನ ಧೀವಶವೆಂದನು ॥
> ಹಿರಿದು ಹುಸಿಗಬುಧಪತಿ ಮುನಿದು ಮಾಡಿದ ಜಳೋ
> ದರವ ಭಾವಿಸದೆ ಕಂಗೆಟ್ಟ ಜಾಡ್ಯಂ ಮಹಾ
> ಧ್ವರಕೆ ಪಶುವಂ ಮಗನ ಮಾಡಲಾಱದೆ ಮೋಹ
> ದಿಂದ ಜೀಗರ್ತ ಮುನಿಯ ॥
> ವರಸುತ ಶುನಶ್ಯೇಫನಂ ತಂದು ಯಾಗ ವಿಧಿ
> ಗರಿದು ಬೀಳಲ್ಕೆ ಮನದಂದ ಪಾತಕನು ಭೂ
> ವರನನೇತಕ್ಕೆ ಹೇಸದೆ ಹೊಗಳ್ವೆಯೆಂದು ವಾಸಿಷ್ಠ
> ನಂ ಕೆಡೆ ನುಡಿದನು ॥

(ಹರಿಶ್ಚಂದ್ರ ಕಾವ್ಯಸಂಗ್ರಹ; ಅ. ೨; ಪ. ೭ ಮತ್ತು ೮)

"ಇಕ್ಷ್ವಾಕುವಂಶದೊಳಗಣ ಚತುರ್ದಶ ಭುವನಪತಿಗಳೊಳಗಿಂದುತನಕಾನಱಿಯೆ, ಹುಸಿ ಹೊದ್ದದವರಿಲ್ಲ, ಹಿಂದಣರಸುಗಳನುದ್ಧರಿಸಲೆಂದವತರಿಸಿದ ವಸುಧಾಧಿಪತಿ ಹರಿಶ್ಚಂದ್ರನಾತನ ಸತ್ಯದೆಸಕಮಂ ಪೊಗಳಲೆನ್ನಳವೆ ಫಣಿಪತಿ

---

೧. ಕರ್ಣನ ಜೀವನದ ಈ ಅಂಶವನ್ನು ಇನ್ನೂ ವಿವರವಾಗಿ, ಕಾವ್ಯದೃಷ್ಟಿಯಿಂದ ತಿಳಿಯಲಪೇಕ್ಷಿಸುವವರು, ಇದೇ ಲೇಖಕರ "ಕಲಿಕರ್ಣ" ಎಂಬ ಪುಸ್ತಕದಲ್ಲಿ "ವಿಪ್ರಶಾಪ" ಎಂಬ ಅಧ್ಯಾಯವನ್ನು ನೋಡಬಹುದು. (ಕಲಿಕರ್ಣ: ಪುಟ ೩೪.)

THE RECORD OF TWENTY YEARS..........

Total Payments made under Policies		Rs.	5,35,780
Annual Income in 1949	....	,,	5,96,890
Life and Reserve Funds	....	,,	16,33,380
New Business Completed in 1949		,,	30,09,650
Total Business in Force	....	,,	1,10,39,100

The "POPULAR" welcomes you to its ever-growing ranks, either as a Policy-holder or a Field Representative. It offers you a straight-forward contract based on sound and modern insurance lines. And to add, it backs your association with the Company with its characteristic efficiency and Service.

THERE'S A POPULAR PLAN
FOR YOUR FUTURE PLANS

The Popular Insurance Company Ltd.

MANGALORE.

ESTD. 1929.

PHONE: 217

Organisation all over India.

ಗರಿದು ಶಶಿವರೌಳಿಯಾಣೆ!" ಎಂಬ ವಸಿಷ್ಠನ ಮಾತೆಲ್ಲಿ, ನಿದರ್ಶನಸಮೇತವಾಗಿ ಹರಿಶ್ಚಂದ್ರನ ಹುಳುಕೊಂದನ್ನು ಎತ್ತಿ ತೋರಿಸಿ, ವೇದಾದಿಗಳ ಆಧಾರವನ್ನೂ ಉದಾಹರಿಸಿ, "ಪಾತಕನು ಭೂವರನನೇತಕ್ಕೆ ಹೇಸದೆ ಹೊಗಳ್ವೆ" ಎಂದು ಸನಾಲುಹಾಕುವ ವಿಶ್ವಾಮಿತ್ರನ ಕಠೋರವಾದ ನುಡಿಗಳೆಲ್ಲಿ? ಈ ಮಹಾ ಸಮಸ್ಯೆಗೆ ಕವಿ ರಾಘವಾಂಕನು ವಸಿಷ್ಠನ ಬಾಯಲ್ಲಿ ಆಡಿಸಿರುವ ಮಾತೂ ಸಮಾಧಾನಕರವಾಗಿಲ್ಲ. "ಹಲವು ಮಾತೇಕಾ ಹರಿಶ್ಚಂದ್ರ ಭೂನಾಥನೊಳಗಸತ್ಯವನು ಕಾಣಿಸಲು ಬಲ್ಲರು ಧಾತ್ರಿಯೊಳು ಮುನ್ನ ಹುಟ್ಟಿದವರಿಲ್ಲಿನ್ನು ಹುಟ್ಟುವರ ಕಾಣೆ ನಾನಿದ ಬಲ್ಲೆನು" ಎಂಬ ಮಾತು ವಿಶ್ವಾಮಿತ್ರನ ಪ್ರಶ್ನೆಗೆ ತಕ್ಕ ಉತ್ತರವೆನಿಸದು. ಹರಿಶ್ಚಂದ್ರನ ಕಥೆಯನ್ನು ಬಲ್ಲ ಪ್ರತಿಯೊಬ್ಬರಿಗೂ, ಆ ಮಹಾನುಭಾವನ ಜೀವನದಲ್ಲಿ ಕಂಡುಬರುವ ಈ ಲೋಪಕ್ಕೆ ಕಾರಣವೇನಿರಬೇಕೆಂದು ಎನ್ನಿಸುವುದು ಸಹಜವೇ ಸರಿ! ಈ ಅಂಶಗಳು ರಾಘವಾಂಕನು ಕಲ್ಪಿಸಿದ ಕಥೆಯೇನಲ್ಲ. ವೈದಿಕ ಗ್ರಂಥಗಳಲ್ಲಿಯೂ ಈ ವಿಚಾರ ಬರುತ್ತದೆ. ಈ ಸಂದರ್ಭದಲ್ಲಿ ಶೀರ ವಿವರಗಳಿಗೆ ಪ್ರವೇಶಿಸದೆ, ಹರಿಶ್ಚಂದ್ರೋಪಾಖ್ಯಾನದ ಇತಿಹಾಸವನ್ನು ಸಂಶೋಧಿಸಿ ವಿಶೇಷ ವಿಚಾರಗಳನ್ನು ನಮ್ಮ ಮುಂದೆ ಇಟ್ಟಿರುವ ಪ್ರೊ|| ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ಅವರ ನಿರ್ಧಾರಗಳನ್ನು ಇಲ್ಲಿ ಸೂಚಿಸಬಹುದು.

"ಹರಿಶ್ಚಂದ್ರೋಪಾಖ್ಯಾನವು ವೇದಪುರಾಣ ಸಾಹಿತ್ಯಗಳಲ್ಲಿ ಪ್ರಸಿದ್ಧವಾದ ಪುರಾತನ ಕಥೆಯಾಗಿದೆ. ಆದರೆ, ವೈದಿಕಗ್ರಂಥಗಳಲ್ಲಿ ಮುಖ್ಯವಾಗಿ ಈ ಕಥೆಯ ಯಾಜ್ಞಿಕಾಂಶವೂ, ಪೌರಾಣಿಕಗ್ರಂಥಗಳಲ್ಲಿ ಐತಿಹಾಸಿಕಾಂಶವೂ, ಸಾಹಿತ್ಯ ಗ್ರಂಥಗಳಲ್ಲಿ ಧಾರ್ಮಿಕಾಂಶವೂ ಪ್ರತಿಪಾದಿತವಾಗಿವೆಯೆಂದು ಹೇಳಬಹುದು. ಇವೆಲ್ಲವೂ ಆಮೂಲಾಗ್ರವಾಗಿ ಅಖಂಡವಾಗಿ, ವಿಸ್ತಾರವಾಗಿ ಯಾವ ಒಂದು ಕಡೆಯಲ್ಲಿಯೂ ದೊರೆಯುವುದಿಲ್ಲ.[೨]

"ವೈದಿಕ ಪೌರಾಣಿಕ ಗ್ರಂಥಗಳನ್ನು ನೋಡಿದರೆ ಹರಿಶ್ಚಂದ್ರನು, ಐತರೇಯ ಬ್ರಾಹ್ಮಣದ ಕಥೆಯಂತೆ, ಸತ್ಯಸಂಧನೇನಲ್ಲ; ಮಗನ ಮೇಲಣ ಅಭಿಮಾನದಿಂದ ವರುಣನನ್ನು ಮೋಸಗೊಳಿಸಲೆಳಸಿ, ರೋಗ ತಂದುಕೊಂಡು, ಜೀವಕ್ಕೆ ಜೀವ ಕೊಡುವುದಕ್ಕೆ ಹೋಗಿ, ಕೊನೆಗೆ ಯಾವ ನಷ್ಟಕ್ಕೂ ಗುರಿಯಾಗದೆ ಗುರುಹಿರಿಯರ ಪ್ರಭಾವದಿಂದಲೂ, ದೇವತೆಗಳ ಕೃಪೆಯಿಂದಲೂ, ತನ್ನನ್ನೂ ಮಗನನ್ನೂ ಉಳಿಸಿಕೊಂಡವನು. ಪ್ರಾಚೀನ ಪುರಾಣಗಳಲ್ಲಿ "ಸತ್ಯವ್ರತ"ನು ಹರಿಶ್ಚಂದ್ರನಲ್ಲ, ಅವನ ತಂದೆ; ಹರಿಶ್ಚಂದ್ರನ ಪ್ರಸಿದ್ಧಿಯೆಲ್ಲಾ ಅವನು ಮಾಡಿದ ರಾಜಸೂಯ ಯಾಗಕ್ಕೆ (ಮಹಾಭಾರತ. ಸಭಾ. XII, ೧೦-೨೫). ಅವನ ಸತ್ಯಸಂಧತೆಯು ಪ್ರಕಾಶಕ್ಕೆ ಬಂದಿರುವುದು ಮಾರ್ಕಂಡೇಯ ಮುಂತಾದ ಈಚೆಗಿನ ಪುರಾಣಗಳಲ್ಲಿ; ಮತ್ತು ವಿಶ್ವಾಮಿತ್ರನ ಮೂಲಕ ಆದ್ದರಿಂದ ಇವುಗಳ ಆಧಾರದ ಮೇಲೆ ಹುಟ್ಟಿದ ಸಾಹಿತ್ಯ ಗ್ರಂಥಗಳಲ್ಲಿ ಹರಿಶ್ಚಂದ್ರ, ಅವನ ಸತ್ಯ, ಅವನ್ನು ಉಳಿಸಿಕೊಳ್ಳುವುದಕ್ಕೆ ಹೋಗಿ ಅವನು ಪಟ್ಟ ಕಷ್ಟ, ಆ ಕಷ್ಟಗಳಿಗೆ ಕಾರಣನಾದ ವಿಶ್ವಾಮಿತ್ರ, ಅವುಗಳಿಗೆ ಮೂಲವಾದ ಅವನ ಕೋಪ ಮುಂತಾದವುಗಳಿಗೆ ಪ್ರಾಧಾನ್ಯವಿದೆ........"[೩]

ಈ ನಿಶ್ಚಯಾಂಶಗಳಿಂದ ಹರಿಶ್ಚಂದ್ರನ ಒಟ್ಟು ಜೀವನವನ್ನು ಪರಿಶೀಲಿಸಲು ಪ್ರಯತ್ನಿಸಬಹುದು. ಹರಿಶ್ಚಂದ್ರನು ಸುತನ ಸಲುವಾಗಿ ಸುಳ್ಳುಹೇಳಿ, ವರುಣನ ಉಗ್ರ ಕೋಪಕ್ಕೆ ಗುರಿಯಾಗಿ ಜಲೋದರ ಅಪಯಶಸ್ಸುಗಳಿಗೆ ಪಕ್ಕಾಗಿ ಪಾಡುಪಟ್ಟ. ಆತನ ಜೀವನದ ಒಂದು ಮುಖ ವೇದ್ಯವಾಗುತ್ತದೆ. ಅನಂತರ ವಿಶ್ವಾಮಿತ್ರನ ಕಪಟಕ್ಕೆ ಸಿಕ್ಕಿಬಿದ್ದು, ಮಹಾಮುನಿಗೆ ಪ್ರತ್ಯುತ್ತರವನ್ನೀಯದೆ ಸಕಲ ಸಂಕಟಗಳನ್ನೂ ಅನುಭವಿಸಿ, ಕೀರ್ತಿಶಾಲಿಯಾದ ಹರಿಶ್ಚಂದ್ರನ ಧೀರವಾದ ವ್ಯಕ್ತಿತ್ವವೊಂದು ಕಡೆ ವೇದ್ಯವಾಗುತ್ತದೆ. ಈ ಎರಡು ಭಿನ್ನ ವಿಷಯಗಳಿಗೂ ಸೂಕ್ತವಾದ ಸಾಮಂಜಸ್ಯವನ್ನು ಕಲ್ಪಿಸಲು ಒಂದೇ ಒಂದು ಮಾರ್ಗವುಂಟು. ಅದು ಏನೆಂದರೆ, ಮೊದಲಿನ ಅಂಶವನ್ನು ಹರಿಶ್ಚಂದ್ರನ ಪೂರ್ವಾರ್ಧ ಜೀವನದಲ್ಲಿ ನಡೆದ ಒಂದು ಘಟನೆಯಿರಬೇಕೆಂಬುದಾಗಿಯೂ, ಎರಡನೆಯ ಅಂಶವನ್ನು ಆತನ ಉತ್ತರಾರ್ಧ ಜೀವನದಲ್ಲಿ ನಡೆದ ಇನ್ನೊಂದು ಘಟನೆಯಿರಬೇಕೆಂಬುದಾಗಿಯೂ ಭಾವಿಸಿದರೆ ಆಗ ಹರಿಶ್ಚಂದ್ರನ ಪಾತ್ರದ ಪೂರ್ಣ ಕಲ್ಪನೆಯುಂಟಾಗುತ್ತದೆ. ಉತ್ತರಾರ್ಧ ಭಾಗದಲ್ಲಿ ವ್ಯಕ್ತವಾಗುವ ವಿಶಿಷ್ಟಸದ್ಗುಣಗಳಿಗೂ ಪೂರ್ವಾರ್ಧ ಭಾಗದ ಆ ದಾರುಣ ವೇದನೆಯ ಅನುಭವ ಎಂತಹ ತಳಹದಿಯೆಂಬುದು ಮನವರಿಕೆಯಾಗುತ್ತದೆ. ಪ್ರೊ| ಎ. ಆರ್. ಕೃಷ್ಣಶಾಸ್ತ್ರಿಗಳೂ ಸಹ "ಶುನಶ್ಶೇಫನ ನರಮೇಧವು ನಡೆದ ಮೇಲೆ ಹರಿಶ್ಚಂದ್ರನು ರಾಜಸೂಯ ಯಾಗವನ್ನು ಮಾಡಿ ವಿಶ್ವಾಮಿತ್ರನ ಕೈಗೆ ಸಿಕ್ಕಿ ನರಳಿದನೆಂದು ತೋರುತ್ತದೆ"[೪] ಎಂಬುದಾಗಿ ಊಹಿಸಿರುವುದು ನಮ್ಮ ಈ ಪೂರ್ಣ ಸ್ವರೂಪದ ಅವಲೋಕನೆಗೆ ಸಹಾಯಕವಾಗುತ್ತದೆ. ಈ ಮಧ್ಯೆ ರೋಹಿತಾಶ್ವನ ವಯಸ್ಸಿನ ಪ್ರಶ್ನೆಯೊಂದು ಉದ್ಭವಿಸುವುದಾಗಿ ಶ್ರೀಯುತರು ಸೂಚಿಸಿರುತ್ತಾರೆ. ಕವಿ ರಾಘವಾಂಕನು ಹರಿಶ್ಚಂದ್ರನ ಕಾವ್ಯವನ್ನು ಬರೆಯುವಾಗ ಗ್ರಂಥಸ್ಥವೋ

---

೨. ಹರಿಶ್ಚಂದ್ರ ಕಾವ್ಯಸಂಗ್ರಹ (ಐದನೆಯ ಮುದ್ರಣ), ಪೀಠಿಕೆ, ಪುಟ XXXIV.

೩. ಹರಿಶ್ಚಂದ್ರ ಕಾವ್ಯಸಂಗ್ರಹ (ಐದನೆಯ ಮುದ್ರಣ), ಪೀಠಿಕೆ, ಪುಟ XI ಮತ್ತು XII.

೪. ಹರಿಶ್ಚಂದ್ರ ಕಾವ್ಯಸಂಗ್ರಹ (ಐದನೆಯ ಮುದ್ರಣ), ಪೀಠಿಕೆ ಪುಟ XXXIX.

ಕಂಠಸ್ಥವೋ ಆಗಿದ್ದ ಯಾವುದೋ ಒಂದು ವಿಸ್ತೃತ ಪಾಠವನ್ನನುಸರಿಸಬೇಕೆಂಬ ಅವರ ಮಾತನ್ನೇ ಒಪ್ಪಿಕೊಂಡು, ರೋಹಿತಾಶ್ವನ ವಯಸ್ಸಿಗಿಂತ, ಅವನ ಸಾವಿನ ಕಡೆಗೆ ಗಮನವಿತ್ತ ಆತನು ಕರುಣಾರಸಪ್ರತಿಪಾದನೆಗಾಗಿ ಹಾಗೆ ಮಾರ್ಪಡಿಸಿದ್ದರೂ ಇರಬಹುದು ಎಂದು ಸಮಾಧಾನ ಹೇಳಿಕೊಳ್ಳಬಹುದು. ಏನೇ ಇರಲಿ, ಹರಿಶ್ಚಂದ್ರನ ಆ ಕಷ್ಟಸಹಿಷ್ಣುತೆ, ಆ ಅಪಾರವಾದ ಸಹನೆ, ಆ ಶಾಶ್ವತವಾದ ಸತ್ಯನಿಷ್ಠೆಗೆ ಆತನು ಪೂರ್ವದಲ್ಲಿ ತನ್ನ ಮಗನ ಸಲುವಾಗಿ ಪಟ್ಟ ಪಾಡೇ ಮುಖ್ಯ ಕಾರಣವಾಗಿರಬಹುದು. ಆ ತರುವಾಯ ಅಚಲವಾದ ಸತ್ಯವ್ರತವನ್ನು ಕೈಕೊಂಡು, ಕೀರ್ತಿ ಸಂಪಾದಿಸಿ, ವಂಶಗುರುವಾದ ವಸಿಷ್ಠನ ಪ್ರಶಂಸೆಗೆ ಪಾತ್ರನೆನಿಸಿರಬಹುದು. ಉತ್ತರಾರ್ಧ ಜೀವನದಲ್ಲಿ ಪ್ರಕಾಶಕ್ಕೆ ಬಂದ ಅವನ ಸತ್ಯಸಂಧತೆ, ಆತನ ಪೂರ್ವಾರ್ಧ ಜೀವನದ ಅಪವಾದವನ್ನೇ ಪರಿಹರಿಸಿತೆಂದು ಭಾವಿಸಿದರೆ ಹರಿಶ್ಚಂದ್ರನ ವ್ಯಕ್ತಿತ್ವಕ್ಕೆ ಒಂದು ಸ್ವಯಂಪೂರ್ಣತೆಯುಂಟಾಗುವುದು. ಅಷ್ಟೇ ಅಲ್ಲದೆ, ಆ ಮಹಾನುಭಾವನ ದಿವ್ಯ ಜೀವನವು, ಪಾಪ—ಪಶ್ಚಾತ್ತಾಪ—ಪ್ರಾಯಶ್ಚಿತ್ತಗಳಿಂದ ಏನನ್ನು ಬೇಕಾದರೂ ಸಾಧಿಸಬಹುದೆಂಬುದಕ್ಕೆ ಎಂದೆಂದಿಗೂ ಮಾರ್ಗದರ್ಶಕವಾಗಿ ನಿಲ್ಲುತ್ತದೆ.

ಈ ವರೆಗೆ ಪುರಾಣಪುರುಷರಿಬ್ಬರ ಪೂರ್ಣ ವ್ಯಕ್ತಿತ್ವವನ್ನು ಒಂದೇ ಒಂದು ಗುಣಗ್ರಹಣದ ದೃಷ್ಟಿಯಿಂದ ವಿವೇಚನೆ ಮಾಡಿದ್ದಾಯಿತು. ಈಗ ಪವಾಡ ಪುರುಷನಾದ ಪ್ರಭುದೇವರ ಇಡಿಯ ಜೀವನವನ್ನೇ ಈ ದೃಷ್ಟಿಯಿಂದ ಪರಿಶೀಲಿಸುವುದಾದರೆ ಅತ್ಯದ್ಭುತವಾದ ಅಂಶವೊಂದು ವೇದ್ಯವಾಗುವಂತಿದೆ. ವೀರಶೈವ ಪಂಥದಲ್ಲಿ ಪ್ರಭುದೇವರಿಗೆ ದೊರಕಿರುವ ಸ್ಥಾನವು ತುಂಬ ಉನ್ನತವಾದುದು. ಹುಟ್ಟಿನಿಂದಲೇ ಮಹಾಜ್ಞಾನಿಯಾದ ಪ್ರಭುದೇವರು ಜೀವನದಲ್ಲಿ ಯಾವ ಚಿತ್ತವಿಕಾರಕ್ಕೂ ಗುರಿಯಾಗುವುದಿಲ್ಲ. ಉಳಿದ ಶಿವಶರಣರ ಚರಿತ್ರೆಯಲ್ಲಿ ಸಾಧನೆಯ ಮೆಟ್ಟಲುಗಳನ್ನು ಅಲ್ಪಸ್ವಲ್ಪವಾದರೂ ಕಾಣಬಹುದು. ಆದರೆ ಪ್ರಭುದೇವರು ಹುಟ್ಟಿದಂದಿನಿಂದ ಜ್ಞಾನ, ವೈರಾಗ್ಯಗಳ ಮೂರ್ತಿಸ್ವರೂಪರಾಗಿ ಬೆಳಗಿ ಶಿವಶರಣರನ್ನೂ ಜಗತ್ತನ್ನೂ ಉದ್ಧಾರಮಾಡುವರು. ಆದರೆ, ಪ್ರಭುದೇವರ ಸಮಗ್ರ ಜೀವನವನ್ನು ನಿರೂಪಿಸಿರುವ ಇಬ್ಬರು ಕನ್ನಡ ಕವಿಗಳ ಕೃತಿಗಳನ್ನು ಓದಿನೋಡಿದರೆ ಆ ಮಹಾಪುರುಷರ ಜೀವನದ ವೃತ್ತಾಂತದ ಬಗ್ಗೆ ಅತಿ ಸೋಜಿಗವಾದ ವಿಷಯಗಳು ಗೋಚರವಾಗುತ್ತವೆ. ಹರಿಹರನ "ಪ್ರಭುದೇವರ ರಗಳೆ" ಮತ್ತು ಚಾಮರಸನ "ಪ್ರಭುಲಿಂಗ ಲೀಲೆ" ಈ ಎರಡನ್ನೂ ಕಥಾದೃಷ್ಟಿಯಿಂದ ಹೋಲಿಸಿನೋಡಿದರೆ ಎಂಥ ವಿಚಾರಮತಿಗಾದರೂ ವಿಸ್ಮಯವಾಗುತ್ತದೆ. ಶ್ರೀ ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ. ಎ., ಅವರು, ಈ ಮಹತ್ಕಾರ್ಯವನ್ನು ಕೈಕೊಂಡು, ಆ ಮೇಲೆ ಹೇಳಿದ ಗ್ರಂಥಗಳಲ್ಲದೆ ಇನ್ನೂ ಅನೇಕ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು, ಕೂಲಂಕುಷವಾಗಿ ವಿಚಾರಮಾಡಿ ಕೆಲವು ಅಮೂಲ್ಯವಾದ ವಿಚಾರಗಳನ್ನು ನಮ್ಮ ಮುಂದೆ ಇಟ್ಟಿರುತ್ತಾರೆ.

> “(ಪ್ರಭುದೇವರಿಗೆ ಸಂಬಂಧಿಸಿದ) ಕಥೆಗಳನ್ನೆಲ್ಲ ವಿಮರ್ಶಿಸಿದರೆ ಅಲ್ಲಮ ಪ್ರಭುವಿನ ಚರಿತ್ರೆಯನ್ನು ಲಕ್ಕಣ್ಣ ದಂಡೇಶ, ಚಾಮರಸ, ಅದೃಶ್ಯಕವಿ ಮುಂತಾದವರು ಒಂದು ರೀತಿ ತಿದ್ದುವುದಕ್ಕೆ ಪ್ರಯತ್ನಪಟ್ಟಹಾಗೆ ತೋರುತ್ತದೆ, ಇನ್ನು ಕೆಲವರು ಅಲ್ಲಮಪ್ರಭು ಪ್ರಾರಂಭದಲ್ಲಿ ಕಾಮವಶನಾಗಿದ್ದರೂ ವೈರಾಗ್ಯಪರನಾದ ಮೇಲೆ ಆತನ ಜೀವನ ಮಹತ್ವವು ಅನುಪಮವಾಗಿರುವುದೆಂದೂ, ಕಾಮಲತೆಯ ವೃತ್ತಾಂತದಿಂದ ಉನ್ನತ ಸ್ಥಾನಕ್ಕೆ ಕುಂದು ಬರುವುದಿಲ್ಲವೆಂದೂ ಗ್ರಹಿಸಿ ಹರೀಶ್ವರನ ಪ್ರಭು ದೇವರ ರಗಳೆಯ ಕಥಾಸರಣಿಯನ್ನು ಅನುಮೋದಿಸಿರುವ ಹಾಗೆ ತೋರುತ್ತದೆ”.[೫]

ಈ ಸಂದರ್ಭದಲ್ಲಿ, ಹಿಂದೆ ನಿರೂಪಿಸಿದ್ದಂತೆ ಒಂದು ಜೀವನದ ಉಭಯಾರ್ಧಗಳನ್ನು ಪೃಥಕ್ಕರಿಸಿ ವಿಮರ್ಶಿಸುವುದಕ್ಕಿಂತ, ಯಾವ ಕಥಾಸರಣಿ ಪೂರ್ಣಸ್ವರೂಪದ ಪರಿಶೀಲನೆಗೆ ಹೆಚ್ಚು ಸಹಾಯಕವೆನ್ನುವುದನ್ನು ಗಣಿಸಬೇಕಾಗುತ್ತದೆ. ಮಾನವ ಸಹಜವಾದ, ಇಲ್ಲವೇ ಪ್ರಕೃತಿ ಸಹಜವಾದ ಅಂಶದಿಂದ ಗಣಿಸುವುದಾದರೆ ಹರಿಹರನ ಕಥಾ ನಿರೂಪಣೆಯೇ ತುಂಬ ಪುಷ್ಟಿದಾಯಕವಾಗಿ ತೋರಿಬರುತ್ತದೆ. ಕೈಲಾಸದಲ್ಲಿ ಕಾಮಾಸಕ್ತನಾಗಿ, ಈಶ್ವರಾನುಗ್ರಹದಿಂದ ಭೂಲೋಕದಲ್ಲಿ ಅವತರಿಸಿ, ಕಾಯಸುಖವನ್ನನ್ನುಭವಿಸಿ, ಅದರ ಕ್ಷಣಿಕತೆಯನ್ನು ಮನವಾರೆ ಕಂಡು, ನಿರ್ವೇಗಪರನಾಗಿ, ನಿರ್ಮಾಯನಾಗಿ, ನಿರ್ಲಿಪ್ತನಾಗಿ, ನಿರಂಜನನಾಗಿ ಜಗತ್ತಿನ ಕಲ್ಯಾಣವನ್ನು ಸಾಧಿಸಿದ ಅಲ್ಲಮ ಪ್ರಭುವಿನ ಪೂರ್ಣಸ್ವರೂಪದ ನಿರೂಪಣೆ ಎಲ್ಲ ದೃಷ್ಟಿಗಳಿಂದಲೂ ಪರಿಪೂರ್ಣವಾಗಿರುತ್ತದೆ. ಚಾಮರಸನ ಕಥಾನಕದಲ್ಲಿ ಈ ಸ್ವಾಭಾವಿಕತೆಗಿಂತ ಮಿಗಿಲಾಗಿ ಪ್ರಭುದೇವರ ಮಾಹಾತ್ಮ್ಯಗೇ ವಿಶೇಷ ಪ್ರಾಧಾನ್ಯವನ್ನು ಕೊಟ್ಟಿರುವಂತಿದೆ: ಶಿವಶರಣರನೇಕರ ಜೀವನದಲ್ಲಿ ಈ ಸೋಜಿಗವನ್ನು ಕಾಣಬಹುದು. ಅಕ್ಕಮಹಾದೇವಿಯ ವಿವಾಹದ ವೃತ್ತಾಂತವೂ ಇಂಥ ಬಗೆಹರಿಯದ ಸಮಸ್ಯೆಯಾಗಿದೆ.

ಮುಖ್ಯವಾಗಿ, ನಮ್ಮಲ್ಲಿ ಮಹಾತ್ಮ ಮತ್ತು ಪುಣ್ಯಪುರುಷರ ಸ್ವರೂಪವನ್ನು ಸಮಷ್ಟಿ ದೃಷ್ಟಿಯಿಂದ ನಿರ್ದೇಶಿಸುವ ಸಂಪ್ರದಾಯ ಸಾಕಾದಷ್ಟು ರೂಢಿಗೆ ಬಂದಿಲ್ಲ. ಋಷಿಮೂಲ, ಗುರುಮೂಲ, ನದಿಮೂಲಗಳನ್ನು ಭೇದಿಸಲು ತೊಡ

---

೫. ಪ್ರಭುಲಿಂಗ ಲೀಲೆಯ ಸಂಗ್ರಹ (ಮೊದಲನೆಯ ಮುದ್ರಣ,) ಪೀಠಿಕೆ, ಪುಟ, XLIV.

ಗಬಾರದೆಂಬ ಭಾವನೆಯಿಂದ ಈ ಮಹಾ ವ್ಯಕ್ತಿಗಳ ಸಮಗ್ರ ಜೀವನವನ್ನೂ ವಿಚಾರಮಾಡುವುದು ನಿಂದಾಸ್ಪದವೆಂದು ಎಣಿಸುವುದೇ ಹೆಚ್ಚು. ಹಲವರಲ್ಲಿ ಈ ಮೂಲಕ ಆ ಪುಣ್ಯಪುರುಷರಿಗೆ ಅಪಚಾರವಾದೀತೆಂದು ಪ್ರತೀತಿಯಿದೆ. ಆದರೆ ಸಾಹಿತ್ಯ ಪ್ರಪಂಚದಲ್ಲಿ ಈ ಮಹಾಪುರುಷರ ಪುನರ್ಜನನವಾಗಬೇಕಾದಾಗ ಒಟ್ಟು ಬದುಕನ್ನು ರೇಖಿಸಿ, ಉತ್ತರಾರ್ಧದ ಉಜ್ವಲ ಪ್ರತಿಭೆಗೆ, ಪೂರ್ವಾರ್ಧದ ಯಾವ ಅವ್ಯೃತಗಳಿಗೆ ಕಾರಣವಾಯಿತೆಂಬುದನ್ನು ಗುರುತಿಸುವುದು ಬಹಳ ಗುರುತರವಾದ ಕಾರ್ಯ; ಜೈನರ ಕಾವ್ಯಗಳಲ್ಲಿ, ಅವರ ಜನ್ಮಾಂತರ ಕತೆಗಳಲ್ಲಿ ಬಹುಮಟ್ಟಿಗೆ ಈ ಸ್ವಾಭಾವಿಕ ಕಥಾನಿರೂಪಣೆಯನ್ನು ಕಾಣಬಹುದು. ಭೋಗದ ತುತ್ತತುದಿಯೇ ತ್ಯಾಗವೆಂಬುದಾಗಿ ಸಾಧಿಸಿ ತೋರಿಸುವ ಅವರ ಕೃತಿಗಳಲ್ಲಿ ಅವಧಿಜ್ಞಾನದ ಕಲ್ಪನೆಯಿಂದ ಈ ಸಹಜತೆಗೆ ಲೋಪಬಂದಿಲ್ಲ. ಐತಿಹಾಸಿಕ ವ್ಯಕ್ತಿಗಳಾದ ಬುದ್ಧ, ಅಶೋಕ ಮತ್ತು ಮಹಾತ್ಮಾಗಾಂಧಿ ಮೊದಲಾದವರ ಜೀವನ ಚರಿತ್ರೆಯನ್ನು ಅವಲೋಕಿಸುವುದರಿಂದ ಮಾನವಜೀವನದಲ್ಲಿ ಎಂತೆಂತಹ ಮನಃಪರಿವರ್ತನೆಗಳು ಸಾಧ್ಯವೆಂಬುದು ಸ್ಪಷ್ಟವಾಗಿವೆ. ಆದ್ದರಿಂದ ನಮ್ಮ ಪುಣ್ಯಪುರುಷರೂ, ಮಹಾವ್ಯಕ್ತಿಗಳೂ ಒಂದು ಕಾಲದಲ್ಲಿ ಯಾವುದೋ ಒಂದು ಕಳಂಕಕ್ಕೆ ಗುರಿಯಾಗಿ ಸಾಮಾನ್ಯರಂತೆ ಮನೋದೌರ್ಬಲ್ಯದಲ್ಲಿ ತೊಳಲಿ, ದಿವ್ಯಪ್ರೇರಣೆಯಿಂದಲೋ ಯಾವುದಾದರೊಂದು ಅನಿರೀಕ್ಷಿತ ಘಟನೆಯಿಂದಲೋ ದಿವ್ಯಜ್ಞಾನಿಗಳಾಗಿ ತಮ್ಮ ಪೂರ್ವಾರ್ಧ ಜೀವನದ ಅಪವಾದದಿಂದ ಮುಕ್ತರಾಗಿ ಎಂದೆಂದಿಗೂ ಮಾಸದಂತಹ ಕೀರ್ತಿಯನ್ನು ಗಳಿಸಿದರೆಂದು ಭಾವಿಸಿದರೆ ಯಾರಿಗೂ ಮನನೋಯಬೇಕಾಗಿಲ್ಲ. ಈ ದೃಷ್ಟಿಯಿಂದ, ಉದಾಹರಣೆಯ ಸಲುವಾಗಿ ಕರ್ಣ, ಹರಿಶ್ಚಂದ್ರ ಮತ್ತು ಪ್ರಭುದೇವರ ಜೀವನವನ್ನು ಇಲ್ಲಿ ಸೂಕ್ಷ್ಮವಾಗಿ ಸಮಾಲೋಚಿಸಲಾಗಿದೆ. ಇಂಥ ಪರಿಶೀಲನೆಯಿಂದ ಪ್ರತಿಯೊಬ್ಬ ಪುಣ್ಯಪುರುಷನ ಪೂರ್ಣಸ್ವರೂಪವೂ, ನಖಶಿಖಾಂತವಾಗಿ ಗೋಚರವಾಗಿ ಭವ್ಯವಾದ ಭಾವಾವೇಶದಿಂದ ಕೂಡಿ, ಸರ್ವದಾ ಬೋಧಪ್ರದವಾಗಿ ಬೆಳಗುವುದರಲ್ಲಿ ಸಂಶಯವಿಲ್ಲ.

[ಈ ಲೇಖನದಲ್ಲಿ ನನ್ನ ಅಭಿಪ್ರಾಯ ಸಮರ್ಥನೆಗಾಗಿ ಮಾನ್ಯ ಹಿರಿಯರಿಬ್ಬರ ಅಮೂಲ್ಯವಾದ ಸಂಶೋಧನೆಗಳನ್ನು ಧಾರಾಳವಾಗಿ ಬಳಸಿಕೊಂಡಿರುತ್ತೇನೆ. ಇದಕ್ಕಾಗಿ ಆ ಇಬ್ಬರು ಮಹನೀಯರಿಗೂ ನಾನು ಚಿರ ಕೃತಜ್ಞನಾಗಿರುತ್ತೇನೆ.]

Books of Outstanding Value

BY

M. A. KAMATH, M. B. & C. M.

POST. KODIYALBAIL, (S. Kanara)

1. **Ophthalmic Surgery & Sight-Testing-** II Edn. 1944. Dy Oct. 326pp. 65 Illus. Rs 6—0—0
2. **Medical Jurisprudence for India-** A Text Book for Students and Practitioners. V. Edn. Dy. Oct. 460pp. 4 Illus. 1948 Rs. 10—0—0
3. **Pharmacology and Therapeutics-** with Special Reference to tropical Diseases. Official B. P. 1948, and Non-official Remedies and Specialities—II Edn. 1948 with 200 Prescriptions—Poisons and Antidotes. Cr. Oct. 480 pp. ... Rs 7—8—0
4. **The Expectant Mother & Her Child-** A Guide to Mother--craft and Child--rearing in India. II Edn. 1949. Cr. Oct. 240 pp 32 Illns. ... Rs. 4—0—0
5. ಗರ್ಭಿಣಿ ಮತ್ತು ಶಿಶು- Dy. Oct. pp. 216—32 Illus. ... Rs. 2—0—0 (A Kannada rendering of No. 4 above)
6. **Atlas of first aids Treatment-** Cr. Oct. 64 pp. 83 Illus. 2 Plates, one in colour. Re. 1—0—0.
7. ಪ್ರಥಮ ಚಿಕಿತ್ಸೆ — (ಸಚಿತ್ರ ಕೈಪಿಡಿ) A Kannada rendering of No 6 above—Cr. Oct. 96. pp.—83 Illus 2 Plates, One in Colour Re. 1—0—0.
8. **Healthy Parentage-** A Hand book of Eugenics or How to Get Nice Children 14 Illus. 1947. ... Rs 3—0—0
9. **Hinduism and Modern Science-** with a Foreword by Dr. C. Kunhan Raja of the Madras University. Cr. Oct. 228 pp. 1947. ... Rs. 4—8—0
10. **Sandhyavandan of the Hindus-** Introduction and English Translation—Text in Roman Script and Kannada. Cr. Oct. 88 pp. 1947. ... Re. 1—8—0
11. **Preventable Diseases and Disabilities of our Clime**—A Layman's Guide to their Prevention—**(IN THE PRESS)**

Copies, Descriptive Literature and Reviews

from THE AUTHOR,

AND

College Book Company,

POST. KODIYALBAIL, (S. KANARA.)


ಭಾರತದಲ್ಲಿ ಧರ್ಮವಿದ್ಯೆ

[ವೀ. ಪುಟ್ಟ ಮಾದಪ್ಪ.]

ಭಾರತ ಧಾರ್ಮಿಕರ ನಾಡು. ಭಗವದ್ಗೀತೆಯಲ್ಲಿ ಬರುವ "ಯದಾಯದಾಹಿಧರ್ಮಸ್ಯ...." ಎಂಬ ಪದಗಳು ಭಾರತೀಯರಿಗೆ ಧರ್ಮದಲ್ಲಿರುವ ನಂಬಿಕೆಯನ್ನು ಸಾರುತ್ತವೆ. ಅಭ್ಯುದಯ ಎಂದಾದರೂ ಕರೆಯಿರಿ, ಇಲ್ಲವೇ ಅವನತಿ ಎನ್ನಿರಿ—ಭಾರತ ಮಾತ್ರ ೧೭ ಮತ್ತು ೧೮ನೆಯ ಶತಮಾನ ಗಳಲ್ಲಿ ಯೂರೋಪ್ ದೇಶವಿದ್ದಂತೆ ಧರ್ಮಕ್ಕೆ, ಮತಕ್ಕೆ ಹೆಚ್ಚು ಪ್ರಾಶಸ್ತ್ಯಕೊಡುತ್ತಿದೆ. ಈ ಧರ್ಮಭಾವ ಪ್ರತಿಯೊಬ್ಬ ಭಾರತೀಯನ ಜೀವನದಲ್ಲಿ ಹೆಚ್ಚು ಮುಖ್ಯ ಪಾತ್ರ ಪಡೆದಿದೆ. ಭಾರತದಲ್ಲಿ ಹುಟ್ಟುವ ಪ್ರತಿಯೊಂದು ಮಗುವಿಗೂ ಧರ್ಮದ ಅಂತರಾರ್ಥ ತಿಳಿದಿದೆ ಎಂದರೆ ಅತಿಶಯೋಕ್ತಿಯಲ್ಲ. ಸಾಹಿತ್ಯ ಕಲೆ, ವಿದ್ಯಾಭ್ಯಾಸ ಮತ್ತು ಸಮಾಜದ ಸಂಬಂಧ—ಇವೆಲ್ಲವೂ ಧರ್ಮದಿಂದ ಪರಿಪೋಷಿತವಾಗಿವೆ. ಧಾರ್ಮಿಕ ಸಾಹಿತ್ಯ ನಮ್ಮ ದೇಶದಲ್ಲಿ ಹೆಚ್ಚು ಜನಪ್ರಿಯವಾಗಿದೆ. ಧಾರ್ಮಿಕ ಬೋಧನೆಗಳನ್ನೊಳಗೊಂಡ ಅನೇಕ ತೈಲ ಚಿತ್ರಗಳೂ, ಶಿಲ್ಪಗಳೂ ನಮ್ಮ ದೇಶದಲ್ಲಿವೆ. ಎಲ್ಲ ದೇಶಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ದೇಶದ ಭಕ್ತಾದಿಗಳು ಪ್ರತಿ ವರುಷವೂ ತೀರ್ಥಯಾತ್ರೆಗಳಿಗೆ ಹೋಗಿಬರುತ್ತಾರೆ. ಭಜನೆ, ಕೀರ್ತನೆ ಮುಂತಾದ ಸಮಯಗಳಲ್ಲಿ ನೆರೆಯುವ ನೂರಾರು ಜನರ ಉತ್ಸಾಹವೇ ನಮ್ಮ ದೇಶದ ಧರ್ಮಸತ್ವವನ್ನು ಸಾರುತ್ತದೆ. ಜೋಲಾಡುವ ಗಡ್ಡ ಬಿಟ್ಟು, ದೇಹಕ್ಕೆ ಬೂದಿ ಬಳಿದು ಗಂಟೆ ಬಾರಿಸುತ್ತ ಬರುವ ಸಾಧುಗಳನ್ನು ಕಂಡಾಗ ನಮ್ಮಲ್ಲಿ ಅದೆಷ್ಟು ಪೂಜ್ಯಭಾವನೆ ಮೂಡುತ್ತದೆ! ಭಾರತದಲ್ಲಿರುವ ಮಹಮ್ಮದೀಯರೂ ತುರ್ಕಿ ಅಥವಾ ಪರ್ಶಿಯಾದಲ್ಲಿರುವ ತಮ್ಮ ಮತೀಯರಿಗಿಂತಲೂ ಹೆಚ್ಚು ಧರ್ಮ ಸ್ವಭಾವವುಳ್ಳವರಾಗಿದ್ದಾರೆ. ಭಾರತದಲ್ಲಿರುವ ಸರ್ವ ಮತೀಯರೂ ಪ್ರಪಂಚದ ಇತರ ಭಾಗಗಳಲ್ಲಿರುವ ಅದೇ ಮತೀಯರಿಗಿಂತಲೂ ಹೆಚ್ಚು ಧಾರ್ಮಿಕರಾಗಿದ್ದಾರೆ. ಬಹಳ ಹಿಂದಿನಿಂದಲೂ ನಮ್ಮ ದೇಶದಲ್ಲಿ ಧರ್ಮಕ್ಕಾಗಿ ತಮ್ಮ ಪ್ರಾಣಗಳನ್ನೇ ಮುಡುಪಾಗಿಟ್ಟ ಅನೇಕ ತತ್ವಜ್ಞಾನಿಗಳೂ, ಮತ ಪ್ರಚಾರಕರೂ, ಧರ್ಮಪ್ರಕಾಶಕರೂ ಇದ್ದಾರೆ. ಹಾಗೂ ಅವರು ವೈಯಕ್ತಿಕ ಆಸೆಗಳನ್ನು ತೊರೆದು ಭಾರತ ಮಾತ್ರವಲ್ಲದೆ ಪ್ರಪಂಚದ ಇನ್ನಿತರ ದೇಶಗಳಲ್ಲಿಯೂ ಧರ್ಮಪ್ರಸಾರ ಕಾರ್ಯವನ್ನು ನಿರ್ವಹಿಸಿದ್ದಾರೆ. ಅವರು ಅಂದು ನೆಟ್ಟ ಸಸಿ, ಇಂದು ಹೆಮ್ಮರವಾಗಿ ಇನ್ನೂ ಬೆಳೆಯುತ್ತಲೇ ಇದೆ. ಸಾವನ್ನರಿಯದ ತಮ್ಮ ಧರ್ಮದ ಪುರುಳನ್ನೂ, ತಿರುಳನ್ನೂ ಅರಿತು ನಮ್ಮ ಜನ ಇಂದು ಧರ್ಮವನ್ನು ತಮ್ಮ ಉಸಿರೆಂದೇ ಭಾವಿಸಿದ್ದಾರೆ.

ನಮ್ಮ ದೇಶದ ಭೌಗೋಳಿಕ ವೈಶಿಷ್ಟ್ಯವಾದರೂ ನಮ್ಮ ಜನರಲ್ಲಿ ಧರ್ಮಭಾವನೆಯನ್ನು ಹುಟ್ಟಿಸುತ್ತಲೇ ಇದೆ. ಸಿರಿತನ ಬಡತನಗಳ ಸಂಕೇತವಾಗಿರುವ ಮುಂಗಾರು ಹಿಂಗಾರು ಮಳೆಗಳ ವೈಪರೀತ್ಯ ಮಾನವಪ್ರಯತ್ನಕ್ಕೆ ಇನ್ನೂ ಮಣಿದಿಲ್ಲ. ಕೆಲವೊಮ್ಮೆ ನದಿಯುಕ್ಕಿ ಊರಿಗೆ ಊರೇ ಹಾಳಾದ ನಿದರ್ಶನಗಳಿವೆ. ವರುಷಕ್ಕೆರಡು ಬಾರಿ ಆಗಸದಲ್ಲಿ ನಡೆಯುವ ಗುಡುಗು ಮಿಂಚುಗಳ ಕದನ ಎಂತಹ ಕಲ್ಲೆದೆಯವನನ್ನೂ ಅಳ್ಳೆದೆಯವನನ್ನಾಗಿ ಮಾಡುತ್ತದೆ. ದೇಶದ ವೈಶಾಲ್ಯ, ಆರೋಹಣಕ್ಕೆ ಅಲಭ್ಯವಾಗಿರುವ ಮೇರುಗಳ ಸಾಲು. ವಿಶಾಲ ಕಾಡುಗಳು ಮಾನವನಿಗೆ ಅವನ ಅಸಹಾಯಕತೆಯನ್ನು ತೋರಿಸಿಕೊಡುತ್ತಿವೆ. ಕ್ರೂರ ಮೃಗಗಳು ಜನರ ಪ್ರಾಣಗಳನ್ನು ಆಹುತಿ ತೆಗೆದುಕೊಳ್ಳುತ್ತಿವೆ. ಇವುಗಳ ಜತೆಗೆ ಆಗಾಗ ಕಾಣಿಸಿಕೊಳ್ಳುತ್ತಲೇ ಇರುವ ಪಿಡುಗುಗಳು ಕೋಟ್ಯಂತರ ಜನರ ಪ್ರಾಣ ತೆಗೆದಿವೆ. ಇವೇ ಕಾರಣಗಳಿಂದ ಪ್ರತಿಯೊಬ್ಬ ಭಾರತೀಯನೂ ತನ್ನ ನಿರ್ಬಲತೆಯನ್ನರಿತು, ತನ್ನ ಪ್ರಾಣ ರಕ್ಷಣೆಗೆಂದು ಇಷ್ಟದೇವತೆಯೊಂದನ್ನು ಸರ್ವದಾ ಪ್ರಾರ್ಥಿಸುತ್ತಿರುತ್ತಾನೆ. ಪ್ರಕೃತಿಯ ಶಕ್ತಿಯನ್ನು ತನ್ನೆಡೆಗೆ ಒಲಿಸಿಕೊಳ್ಳಲು ಮನುಷ್ಯಬರೆದಿರುವ ಹಲವಾರು ಮಂತ್ರಗಳು ಋಗ್ವೇದದಲ್ಲಿಯೂ ಇವೆ.

ಹಿಂದಿನ ಕಾಲದ ನ್ಯಾಯಾಧೀಶರು ನಮ್ಮ ಜನರಲ್ಲಿದ್ದ ಅಂಧ ಧರ್ಮಶ್ರದ್ಧೆಯನ್ನು ತಮ್ಮ ಸೌಕರ್ಯಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುತ್ತಿದ್ದರು. ಮಾನವ ಜೀವನಕ್ರಮವನ್ನೂ, ಮಾನವ ಸಮಾಜವನ್ನೂ ಕುರಿತು ಹಲವಾರು ಟೀಕೆ ಟಿಪ್ಪಣಿಗಳು ಇಂದೂ ಹಲವಾರು ಧರ್ಮಗ್ರಂಥಗಳಲ್ಲಿ ಕಂಡು ಬರುತ್ತಿವೆ. ಚಿರಸ್ವತ್ತು, ವಿವಾಹ, ನೈರ್ಮಲ್ಯ, ಸಮಾಜ—



ನೇಪಾಲದಲ್ಲಿರುವ ಪಶುಪತಿ ದೇವಾಲಯ.

ಇವೆಲ್ಲಕ್ಕೂ ಧರ್ಮದ ತಳಹದಿ ಇದೆ. ನಮ್ಮ ಜೀವನದ ಪ್ರತಿಯೊಂದು ಹಂತವೂ ಧರ್ಮದಿಂದ ಬೇರ್ಪಡಿಸಲ್ಪಟ್ಟಿದೆ. ಸಾವಿರಾರು ವರುಷಗಳಿಂದ ಸಾವಿರಾರು ಜನರ ಬೆಂಬಲ ಪಡೆದಿರುವ ಈ ಧರ್ಮಗಳು ಇಂದೂ ಮಾನವನನ್ನು ತಮ್ಮ ಮುಷ್ಟಿಯಲ್ಲಿ ಹಿಡಿದಿವೆ. ಮಾನವನಾದರೂ ಎಂದೂ ಧರ್ಮಕ್ಕೆ ಎದುರುಬಿದ್ದುದಿಲ್ಲ.

ಆಯಾ ದೇಶದ ಸಂಪ್ರದಾಯ, ಧರ್ಮಗಳಿಗನುಸಾರವಾಗಿ ಅಲ್ಲಿನ ವಿದ್ಯಾಭ್ಯಾಸಕ್ರಮವೂ ಏರ್ಪಟ್ಟಿರುತ್ತದೆ. ವಿದ್ಯಾಭ್ಯಾಸಕ್ರಮವಾದರೂ ಸರ್ವಸ್ವತಂತ್ರವಾಗಿರುವುದಿಲ್ಲ. ೧೯ನೆಯ ಶತಮಾನದಲ್ಲಿ ಆಂಗ್ಲೇಯರು ಬಂದು ನಮ್ಮ ದೇಶದಲ್ಲಿ ನೆಲಸಿದಾಗ, ನಮಗೆ ಇಂದಿರುವ ವಿವೇಚನೆ ಅಂದಿದ್ದರೆ ನಾವು ಪರಕೀಯ ಭಾಷೆಯನ್ನುಕಲಿಯುವಗೋಜಿಗೆ ಹೋಗುತ್ತಿರಲಿಲ್ಲ. ಒಂದು ದೇಶದ ವಿದ್ಯಾಕ್ರಮ ಮತ್ತೊಂದು ದೇಶಕ್ಕೂ ಸೂಕ್ತವೆಂದು ನಮ್ಮ ಹಿರಿಯರು ನಂಬಿದ್ದರು. ಜ್ಞಾನಾಂಧಕಾರದಲ್ಲಿದ್ದ ಅಂದಿನ ನಮ್ಮ ಹಿರಿಯರು ತಮ್ಮ ಮಕ್ಕಳನ್ನು ಆಂಗ್ಲೇಯ ವಿದ್ಯಾಭ್ಯಾಸಕ್ರಮದ ರೀತ್ಯಾ ಓದಿಸಿದರು. ಪರಕೀಯರ ಸಂಪರ್ಕದಿಂದ ತಮ್ಮ ಮಕ್ಕಳು ಉತ್ತಮ ಯೋಜನೆಗಳಲ್ಲಿ, ಸುಪಾತ್ರತೆಯಲ್ಲಿ, ಮುಂದಾಳುತನದಲ್ಲಿ ಹೆಚ್ಚು ಪರಿಶ್ರಮಹೊಂದುವರೆಂದು ನಮ್ಮ ಹಿರಿಯರು ನಂಬಿದ್ದರು. ಆದರೆ ಇಂದಿನ ನಮ್ಮ ವಿದ್ಯಾಭ್ಯಾಸಕ್ರಮದಲ್ಲಿರುವ ನ್ಯೂನತೆಗಳನ್ನು ಗಮನಿಸಿದರೆ ನಮ್ಮ ಹಿರಿಯರು ಕೇವಲ ಕನಸಿನ ಸಾಮ್ರಾಜ್ಯವೊಂದನ್ನು ರಚಿಸಿದ್ದರು, ಎಂಬುದು ಖಚಿತವಾಗುತ್ತದೆ. ಇನ್ನು ಮುಂದಾದರೂ ನಮ್ಮ ದೇಶದ ಧರ್ಮ, ಪದ್ಧತಿ, ಸಂಪ್ರದಾಯಗಳ ಮೇಲೆ ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿ ಅವರ ಸ್ವಭಾಷಾಪ್ರೇಮವನ್ನೂ, ಸ್ವದೇಶ ಪ್ರೇಮವನ್ನೂ ಹುಟ್ಟಿಸುವ ಹೊಣೆ ನಮ್ಮ ಹೆಗಲಿನ ಮೇಲಿದೆ.

ಇಂದಿನ ನಮ್ಮ ವಿದ್ಯಾಭ್ಯಾಸಕ್ರಮದಲ್ಲಿ ಬದಲಾವಣೆ, ವಿದ್ಯಾಪ್ರಸಾರವಿಧಾನಗಳಲ್ಲಿ ಹೊಸ ಮಾರ್ಗಗಳು, ಗುರುಗಳೆನಿಸಿಕೊಂಡಿರುವವರಿಗೆ ಹೆಚ್ಚಿನ ಪಾಂಡಿತ್ಯ, ನೂತನ ವಿದ್ಯಾಭವನಗಳ ಅವಶ್ಯಕತೆ, ಆರೋಗ್ಯಸಾಧನೆ—ಇವೆಲ್ಲವೂ ನಮ್ಮ ಇಂದಿನ ವಿದ್ಯಾಸುಧಾರಣಾ ಯೋಜನೆಯಲ್ಲಿ ಅತಿ ಮುಖ್ಯ ಅಂಶಗಳಾಗಿವೆ. ನಮ್ಮ ಇಂದಿನ ವಿದ್ಯಾಶಾಲೆಗಳು ಕೇವಲ ವ್ಯಾಪಾರದ ಕಟ್ಟೆಗಳಾಗಿವೆಯೇ ಹೊರತು ನಿಜವಾದ ವಿದ್ಯಾಮಂದಿರಗಳೆನಿಸಿಕೊಂಡಿಲ್ಲ. ವಿದ್ಯಾರ್ಜನೆಯಲ್ಲಿಯೂ ನಮ್ಮ ವಿದ್ಯಾರ್ಥಿಗಳಿಗೆ ಅಷ್ಟಾಗಿ ಆಸೆ ಇಲ್ಲ. ಉತ್ತಮ ಶಿಕ್ಷಣಸಮಿತಿ ಇದ್ದರೂ ನಮ್ಮ ಧರ್ಮ, ಆಚಾರಗಳ ಶಿಕ್ಷಣವಿಲ್ಲದೆ ಇಂದಿನ ವಿದ್ಯಾಕ್ರಮ ವಿದ್ಯಾರ್ಥಿಗಳಲ್ಲಿ ಯಾವ ಬಗೆಯ ಸ್ಫೂರ್ತಿಯನ್ನೂ ಪ್ರಚೋದಿಸುವುದಿಲ್ಲ.

ಇಂದಿನ ಪಾಶ್ಚಾತ್ಯ ಜನಾಂಗ ಮಾನವನ ಕೋರಿಕೆಗಳನ್ನನುಸರಿಸಲು, ಹಾಗೂ ಆ ಕೋರಿಕೆಗಳನ್ನು ಪೂರೈಸಲೋಸುಗ ಇತರರನ್ನು ಶೋಷಿಸುವ ಕಾರ್ಯದಲ್ಲಿ ತೊಡಗಿದೆ. ಆದರೆ ಭಾರತಜನಾಂಗವಾದರೋ ಮಾನವನ ಕೋರಿಕೆಗಳನ್ನು ಕಡಿಮೆಮಾಡುವ ಹಾಗೂ ಇತರರ ಶ್ರೇಯಸ್ಸನ್ನು ಕೋರುವ ಪ್ರಯತ್ನ ಮಾಡುತ್ತಿದೆ.

"ನ ಕರ್ಮಣಾ ನ ಪ್ರಜಯಾಧನೇನ ತ್ಯಾಗೇನೈಕ ಅಮೃತತ್ವ ಮಾನುಷಃ" ಎಂಬುದು ಭಾರತೀಯರ ಜೀವನ ಸಂದೇಶ. ಈ ಸಂದೇಶ ಕೇವಲ ಕೆಲವು ವ್ಯಕ್ತಿಗಳಿಗೆ ಮಾತ್ರ ಅನ್ವಯಿಸುವುದಿಲ್ಲ; ರಾಷ್ಟ್ರಕ್ಕೇ ಅನ್ವಯಿಸುವ ಮಾತುಗಳಿವು. ಕೈಗಾರಿಕೆಯ ಸಂಸ್ಥೆಗಳನ್ನು ಹೆಚ್ಚಿಸಿದ ಮಾತ್ರಕ್ಕೇ, ವಾಣಿಜ್ಯ ದ್ವಿಗುಣಿತಗೊಂಡ ಕಾರಣದಿಂದಲೇ, ಐಶ್ವರ್ಯಗಳಿಸಿದ ಮೂಲಕವೇಒಂದುರಾಷ್ಟ್ರದ ಪ್ರಸಿದ್ಧಿಯಾಗಲಾರದು. ಧರ್ಮ, ಆಚಾರ, ಸಂಪ್ರದಾಯಗಳಿಂದ ಮಾತ್ರ ಒಂದು ರಾಷ್ಟ್ರ ಪ್ರಸಿದ್ಧವಾಗಬಲ್ಲುವು. ಇಂದು ಜನರನ್ನು ಪ್ರಪಂಚದ ಮೂರನೆಯ ಯುದ್ಧವೆಂಬ ಪೆಡಂಭೂತ ಪೀಡಿಸುತ್ತಿರುವುದಾದರೂ ಏಕೆ? ಇಂದು ಪ್ರಪಂಚದಲ್ಲಿ ಧರ್ಮ, ಆಚಾರ, ಸಂಪ್ರದಾಯಗಳು ಮಾಯವಾಗಿರುವುದರಿಂದಲೇ ಅಲ್ಲವೇ? ಇಂದು ಪ್ರಪಂಚದ ಪರಿಸ್ಥಿತಿಯನ್ನು ಪರಿಶೀಲಿಸಿದರೆ ನಮಗೊಂದು ಹೊಸ ಮತ, ಹೊಸ ಧರ್ಮ ಅನಿವಾರ್ಯವಾಗಿದೆ. ಒಂದು ಶತಮಾನಕ್ಕೂ ಮೀರಿದ ಆಂಗ್ಲ ವಿದ್ಯಾಭ್ಯಾಸ ನಮ್ಮ ದೇಶದ ಧ್ಯೇಯಗಳಲ್ಲಿಯೇ ನಮಗೆ ಅಪನಂಬಿಕೆ ಹುಟ್ಟಿಸಿದೆ. ನಮ್ಮ ದೇಶದ ಹಿಂದಿನ ಮತ್ತು ಇಂದಿನ ಜನಜೀವನ ತಿಕ್ಕಾಟದಲ್ಲಿ ನಮ್ಮ ಜೀವನನೀತಿ ಮಾಯವಾಗುತ್ತ ಬಂದಿದೆ. ಎಷ್ಟೇ ಒಳ್ಳೆಯದಾಗಿದ್ದರೂ ನಮ್ಮ ಇಂದಿನ ವಿದ್ಯಾಭ್ಯಾಸದಿಂದ ಅಜ್ಞಾನಾಂಧಕಾರದಲ್ಲಿರುವ ನಮ್ಮನ್ನು ಜ್ಞಾನಕ್ಕೆಳೆಯಲು ಸಾಧ್ಯವಿಲ್ಲ. ನಮ್ಮ ದೇಶ ಮತ್ತು ನಮ್ಮ ಜನ ಮತ್ತೊಮ್ಮೆ ಎದೆಯೊತ್ತಿ 'ನಾವು ಸಮ ನಿಮಗೆಂದು' ಹೇಳಬೇಕಾದರೆ ಉಳಿದಿರುವುದೊಂದೇ ದಾರಿ. ನಾವು ನಮ್ಮ ದೇಶದ ಹಿಂದಿನ ವೇದಾಂತಪುರಾಣಗಳ ಕಾಲದ ಧರ್ಮವನ್ನು, ಧ್ಯೇಯವನ್ನು ಪುನಸ್ಥಾಪಿಸಬೇಕು, ನಮ್ಮ ಪುರಾತನ ಪಾಠಶಾಲೆಗಳನ್ನು ಪುನರುಜ್ಜೀವನಗೊಳಿಸಬೇಕು.

ವಿದ್ಯೆ ಮತ್ತು ಧರ್ಮವನ್ನು ಬೇರ್ಪಡಿಸುವ ಪ್ರಯತ್ನಗಳು ಪ್ರಪಂಚಾದ್ಯಂತ ನಡೆದುವು. ಆದರೆ ಇಂದು ವಿದ್ಯೆ ಮತ್ತು ಧರ್ಮ ಏಕದೇಹಿಗಳೆಂದು ಪ್ರಪಂಚಕ್ಕೇ ತಿಳಿದಿದೆ. ಇಂದು ಮೇಲಿಂದ ಮೇಲೆ ಆಗುತ್ತಿರುವ ಯುದ್ಧಗಳು ಪ್ರಪಂಚಕ್ಕೆ ಧರ್ಮದ ಆಗತ್ಯವನ್ನು ತೋರಿಸಿಕೊಟ್ಟಿವೆ.

ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಧಾರ್ಮಿಕ ಗ್ರಂಥಗಳನ್ನೋದಲು ಪ್ರೋತ್ಸಾಹಿಸಬೇಕು; ಹಾಗೂ ನಮ್ಮ ಸರಕಾರ ಹಲವಾರು ಭಾಷಾಪಂಡಿತರನ್ನು ಪಾಠಶಾಲೆಗಳಲ್ಲಿ ನಿಯಮಿಸ

ಬೇಕು. ನಮ್ಮ ಜೀವನದ ಮುನ್ನಡೆಗೆ ಧರ್ಮದ ಅಗತ್ಯ ವಿದ್ಯಾರ್ಥಿಗಳೆಲ್ಲರ ಮನಸ್ಸಿಗೂ ಬರಬೇಕು.

ಧರ್ಮ ಪ್ರತಿಯೊಬ್ಬ ಭಾರತೀಯನ ಜೀವದುಸಿರು ಹಾಗೂ ಮಾರ್ಗದರ್ಶಿ. ಅದೇ ಕಾರಣದಿಂದಾಗಿ ಇಂದು ನಮಗೆ ಹೆಚ್ಚಿನ ಪ್ರಮಾಣದಲ್ಲಿ ಧರ್ಮವಿದ್ಯಾಭ್ಯಾಸ ಅಗತ್ಯ ವಾಗಿದೆ.

['ಜರ್ನಲ್ ಆಫ್ ಎಜುಕೇಷನ್ ಅಂಡ್ ಸೈಕಾಲಜಿ' ಎಂಬ ಪತ್ರಿಕೆಯಲ್ಲಿ ಪ್ರಿನ್ಸಿಪಾಲ್ ಪಿ. ಎಸ್. ಕಟ್ಟಿ ಅವರು ಬರೆದ 'ರಿಲಿಜಿಯಸ್ ಎಜುಕೇಷನ್ ಇನ್ ಇಂಡಿಯಾ' ಎಂಬ ಲೇಖನದ ಅನುವಾದ.]

ಸಾಹಿತ್ಯದ ಮನೋಧರ್ಮ

ಲೇಖಕರು: ಶ್ರೀ| ಆರ್. ಎಸ್. ರಾಮರಾವ್.

ಸಾಹಿತ್ಯ ಜೀವನದ ಪ್ರತಿಬಿಂಬ. ಆದ್ದರಿಂದ ಸಾಹಿತ್ಯ ಜೀವನದ ಆಗುಹೋಗುಗಳ, ಸುಖದುಃಖಗಳ, ಬಡವಬಲ್ಲಿದರ ಚಿತ್ರಗಳನ್ನು ವಾಸ್ತವಿಕವಾಗಿ ನಿರೂಪಿಸಬೇಕು ಎನ್ನುವವರು ಕೆಲವರು. ಸಾಹಿತ್ಯ ಜೀವನದ ಪ್ರತಿಬಿಂಬವಾದರೂ ಮನೋರಂಜನೆಯನ್ನುಂಟುಮಾಡಬೇಕು. ಸದ್ಯಃ ಪರನಿವೃತ್ತಿಯನ್ನು ಕೊಡಬೇಕು, ಇಲ್ಲವೇ ಮನಸ್ಸನ್ನು ಕೆರಳಿಸಬೇಕು, ಉದ್ರೇಕಗೊಳಿಸಬೇಕು ಎನ್ನುವುದು ಇನ್ನೂ ಕೆಲವರ ವಾದ. ಸಾಹಿತ್ಯದ ಉದ್ದೇಶ ಇವು ಯಾವುವೂ ಅಲ್ಲ. ಯಶಸ್ಸು, ಹಣ, ಪುಣ್ಯ, ಲಾಭ ಎನ್ನುವವರು ಮತ್ತು ಕೆಲವರು.

ಸಾಹಿತ್ಯ ಮೀಮಾಂಸಕರು ಕಾವ್ಯಜೀವಾಳವನ್ನು ಕುರಿತು ಚರ್ಚೆ ಮಾಡಿ ಯಾವ ಸಿದ್ಧಾಂತಕ್ಕೆ ಬಂದಿದ್ದಾರೆ? ವಿಮರ್ಶಕರು ಹೇಳುವ 'ಯಶಸೇ ಅರ್ಥಕೃತೇ' ಕೊನೆಯ ಸಿದ್ಧಾಂತವಲ್ಲ. ರಾಘವಾಂಕ, ಕುಮಾರವ್ಯಾಸ, ಚಾಮರಸರು ಹೇಳುವಂತೆ ವೇದವನ್ನೋದಿದ, ಯಜ್ಞವನ್ನಾಚರಿಸಿದ, ಕಾಶೀಯಾತ್ರೆ ಮಾಡಿದ, ಗೋದಾನ ಮಾಡಿದ ಫಲಪ್ರಾಪ್ತಿಯೇ ಕೊನೆಯ ಗುರಿಯಲ್ಲ. ಅಥವಾ ಈಗಿನವರು ಬಯಸುವ ಹಣ ಮುಖ್ಯವಲ್ಲ, ಕೀರ್ತಿ ಪ್ರಧಾನವಲ್ಲ. ಹಾಗಾದರೆ ಏನು? ಆನಂದ ಕಾವ್ಯದ ಗಮ್ಯ.

ಕಾವ್ಯದ ಆತ್ಮ ರಸ ಇರಬಹುದು. ವೇದಾಂತಿಗಳು ಹೇಳುವ ಬ್ರಹ್ಮಸಾಕ್ಷಾತ್ಕಾರದಲ್ಲಿ ದೊರಕುವ ಸಮಾಧಿತ್ವದ ಅಂತಃಸುಖ ಇರಬಹುದು. ಅಥವಾ ಬಾಹ್ಯವ್ಯಾಪಾರಗಳನ್ನು, ಸಂಸಾರದ ದುಃಖಗಳನ್ನು ಮರಸುವ ಆನಂದ ಕಾವ್ಯದ ಗುರಿ ಆಗಬಹುದು. ಆದರೆ 'ಈ' ಆನಂದವನ್ನು ಪಡೆಯುವ ಬಗೆ ಯಾವುದು? ಅಮೇರಿಕ ಇಂಗ್ಲೆಂಡ್ ಮುಂತಾದ ಮುಂದುವರಿದ ಅಕ್ಷರಸ್ಥರಾದ ಹೆಚ್ಚು ಜನಸಂಖ್ಯೆಯುಳ್ಳ ರಾಷ್ಟ್ರಗಳಲ್ಲಿ ಹತ್ತಾರು ವರುಷ ನಾಲ್ಕಾರು ಸಾವಿರ ಗ್ರಂಥಗಳನ್ನೂ ಅಭ್ಯಾಸ ಮಾಡಿ (ಇದೇನು ಸಾಧಾರಣವಾದ ಕಾರ್ಯವಲ್ಲ; ಕವಿತ್ವಕ್ಕೆ ನಮ್ಮವರು ಕೊಡುವ ಕಾರಣಗಳಲ್ಲಿ ಅಭ್ಯಾಸವೂ ಒಂದು). ಒಂದೋ ಎರಡೋ ಪುಸ್ತಕಗಳನ್ನು ಪ್ರಕಟಿಸಿ ಅದರಿಂದ ಲಭ್ಯವಾದ ಹಣವನ್ನು ಪಡೆದು ವಂಶಪಾರಂಪರ್ಯವಾಗಿ ಆರ್ಥಿಕಮುಗ್ಗಟ್ಟಿಲ್ಲದೆ ಜೀವನವನ್ನು ನಡಸುವ ಸುಖವೇ? ಜನಾಭಿರುಚಿಗೆ ತಕ್ಕಂತೆ, ಅವರ ಕೀಳು ಅಭಿರುಚಿಗೆ ತಕ್ಕಂತೆ ಅಭಿಪ್ರಾಯಗಳನ್ನೊ ಉದ್ರೇಕಗೊಳಿಸುವ ವರ್ಣನೆಗಳನ್ನೋ ನಾಲಗೆ ಚಪ್ಪರಿಸುವಂತೆ ವಿವರಿಸಿ ಕ್ಷಣಿಕವಾದ ಕೀರ್ತಿಯನ್ನು ಗಳಿಸಿ ನಾಲ್ಕು ಜನರಿಂದ 'ಭೇಷ್' ಎಂದು ಹೊಗಳಿಸಿಕೊಂಡು ರೋಮಾಂಚಿತರಾಗಿ ಮೈಮರೆಯುವ ಸುಖವೇ? ಉದಾತ್ತವಾದ ಧ್ಯೇಯವನ್ನು ಅಪರೂಪವಾದ ಸನ್ನಿವೇಶವನ್ನು ಭವ್ಯವಾಗಿ ಚಿತ್ರಿಸಿ ಜೀವನದ ಆ ಸತ್ಯ ಸಾರ್ವತ್ರಿಕವಾಗಿ ಧ್ರುವನಕ್ಷತ್ರದಂತೆ ಬೆಳಗುತ್ತಿರುವಂತೆ, ಅದರಿಂದ ಮತ್ತೊಬ್ಬರು ಆನಂದಪಟ್ಟು ಆತ್ಮಜ್ಞಾನವನ್ನು ಪಡೆದು ಜೀವನವನ್ನು ಸುಗಮವನ್ನಾಗಿ ಮಾಡಿಕೊಳ್ಳುವುದನ್ನು ಪರೋಕ್ಷದಲ್ಲಿ ಕಂಡು ಅನುಭವಿಸುವ ಆನಂದವೇ?

ಸಾಹಿತ್ಯದ ಗುರಿ ಆನಂದ; ನಿಜ. ಆದರೆ ಆ ಆನಂದ ಕ್ಷಣಿಕವಾದದ್ದೇ, ತಾತ್ಕಾಲಿಕವಾದದ್ದೇ ಎಂಬುದರ ಅರಿವಾಗಬೇಕು. ರಾಮಾಯಣ ರಚಿತವಾಗಿ ಹಲವಾರು ವರ್ಷಗಳಾದುವು. ಶಾಕುಂತಲ ಕಾಲಿದಾಸನಿಂದ ಕಲ್ಪಿತವಾಗಿ ಅನೇಕ ವರ್ಷಗಳಾದವು. ಅವುಗಳಲ್ಲಿ ಪ್ರತಿಪಾದಿತವಾಗಿರುವ ಆದರ್ಶ ಪ್ರೇಮ ಅಚಲವಾದದ್ದು ಅಮರವಾದದ್ದು ಎಂಬುದರಲ್ಲಿ ಸಂಶಯವಿಲ್ಲ. ಅವುಗಳನ್ನು ಜನ, ಜನವೇನು ಪಂಡಿ

ತೆರು ವಿದ್ವಾಂಸರು ಓದಿದನ್ನೇ ಪುನಃ ಪುನಃ ಓದುವುದೇಕೆ? ಎಷ್ಟು ಸಲ ಓದಿದರೂ ಅಷ್ಟು ಸಲವೂ ಹೊಸ ಹೊಸ ಭಾವಗಳು ಗೋಚರವಾಗುತ್ತವೆ. ಮನಸ್ಸಿಗೆ ಆಹ್ಲಾದವನ್ನು ಕೊಡುತ್ತವೆ. ಏಕೆಂದರೆ ಅಲ್ಲಿನ ಪ್ರತಿಭೆ ನವನವೋನ್ಮೇಷಶಾಲಿನಿಯಾದದ್ದು. ಅಂಥ ಕಾವ್ಯದ ರಚನೆಗೆ ಅವರು ಸಾಧನೆ ಮಾಡಿದರು, ತಪಸ್ಸು ಮಾಡಿದರು. ಕೀರ್ತಿಯ ಆಶೆ ಇರಲಿಲ್ಲ. ಅರ್ಥದ ಲಾಲಸೆ ಇರಲಿಲ್ಲ ಮಧುರ ಭಾವವಿತ್ತು, ಉದಾತ್ತ ಧ್ಯೇಯ ಇತ್ತು.

ಕನ್ನಡ ಕವಿಗಳಾದ ಪಂಪರನ್ನರಾಗಲಿ, ರಾಘವಾಂಕ ಕುಮಾರವ್ಯಾಸರಾಗಲಿ ತಮ್ಮ ಕಾವ್ಯದ ಧರ್ಮವನ್ನು ನುತ್ತೊಂದು ಗುರಿಯಿಂದ ಪ್ರತಿಪಾದಿಸಿದರು. ಪಂಪರನ್ನರಿಗೆ ಆರ್ಥಿಕ ಸಹಾಯವಿತ್ತು; ರಾಜಾಶ್ರಯವಿತ್ತು. ಅವರು ತಮ್ಮ ಪಾಲಕರ ಮೆಚ್ಚಿಗೆಗಾಗಿ ಕಾವ್ಯ ರಚಿಸಿದರೂ ಕಾವ್ಯದ ಧರ್ಮ ಆನಂದ ಎನ್ನುವ ಮುಖ್ಯ ಗುರಿಯನ್ನು ಅವರು ಮರೆಯಲಿಲ್ಲ, ನಿಜ. ಆದರೆ ಅವರು ಕಾವ್ಯಕ್ಕೆ ಆರಿಸಿಕೊಂಡ ವಸ್ತು ಹಳೆಯದು. ಆದ್ದರಿಂದ ಧ್ಯೇಯ ವಸ್ತುವನ್ನವಲಂಬಿಸಿತು. ಧಾರ್ಮಿಕ ವಸ್ತುವಿನಲ್ಲಿ ಅವರು ಕಾವ್ಯವನ್ನೂ ಕಂಡರು. ಆದರೆ, ರಾಘವಾಂಕ, ಕುಮಾರವ್ಯಾಸ ಚಾಮರಸರು ಆರಿಸಿಕೊಂಡ ಪೌರಾಣಿಕ ವಸ್ತುವಲ್ಲಿ ಕಾವ್ಯಧರ್ಮದ ಜೊತೆಗೆ ಪರಮಾತ್ಮನ ಲೀಲಾವಿನೋದವನ್ನೂ, ಧರ್ಮಾಚರಣೆಯ ಫಲವನ್ನೂ, ದೈವಮಾನವ ಸಂಬಂಧವನ್ನೂ ಕಂಡರು. ಅವರು ಕಾವ್ಯ ರಚಿಸಿದ್ದು ಕಾವ್ಯಾನಂದಕ್ಕಿಂತಲೂ ಹೆಚ್ಚಾಗಿ ಜನಮನೋಧರ್ಮವನ್ನು ತಿದ್ದುವುದಕ್ಕಾಗಿ. ತಾವು ಕಂಡ ಉತ್ತಮ ಜೀವನದ ಕನಸನ್ನು ತಾವು ಹೇಳದೆ ಪರಮಾತ್ಮನ ತಲೆಗೆ ಕಟ್ಟಿ ಅವನ ಮೂಲಕ ಹೇಳಿಸಿದರು. ಅವರ ಬರಹಗಳನ್ನು ಓದಿದರೆ ಸರ್ವಶಕ್ತನಾದ ಪರಮಾತ್ಮ ಮುಕ್ತಿ ದೊರಕಿಸಿಕೊಡುತ್ತಾನೆಂದು ಹೇಳಿ, ತಾವು ಹೇಳಿರುವಂತೆ ನಡೆದುಕೊಂಡರೆ ಅಶ್ವಮೇಧಯಾಗಫಲ ದೊರಕೀತು ಎಂದು ಆಸೆ ಹುಟ್ಟಿಸಿ ಕಾವ್ಯಾಭ್ಯಾಸಕ್ಕೆ, ಧಾರ್ಮಿಕ ಗ್ರಂಥಗಳ ವ್ಯಾಸಂಗಕ್ಕೆ ಪ್ರಚೋದನೆ ಕೊಟ್ಟರು. ಹರಿಹರ, ನಯಸೇನ ಮುಂತಾದವರು ನೇರವಾಗಿ 'ದೈವವೇ ಶರಣು' 'ದಯವೇ ಧರ್ಮದ ಮೂಲ' ಎಂಬ ಸಮಾಜದಲ್ಲಿರಬೇಕಾದ ಮೂಲ ತತ್ವಗಳನ್ನು ಸಂಪ್ರದಾಯದ ರೀತಿಯಲ್ಲಿ ಹೇಳದೆ ಕಾವ್ಯದ ಮಾರ್ಗದಲ್ಲಿ ಪ್ರತಿಪಾದಿಸಿದರು. ಇತರ ಕವಿಗಳು ಕಾವ್ಯಧರ್ಮವಾದ ಆನಂದವನ್ನು ಮನಸ್ಸಿನಲ್ಲಿಟ್ಟುಕೊಂಡು ಪೌರಾಣಿಕ, ಕಾಲ್ಪನಿಕ ವಿಷಯಗಳ ವಿವರಣೆಯನ್ನು ಮಾಡಿದರು.

ಇದರಿಂದ ಒಂದು ತತ್ವ ಸಂಗ್ರಹಿತವಾಗಬಹುದು, ಕಾವ್ಯದ ಧರ್ಮ ಹಾಗಾದರೆ ನೀತಿಬೋಧನೆಯೇ ಎಂಬುದು. ಕಾವ್ಯದ ಅಥವಾ ಸಾಹಿತ್ಯದ ಮೂಲಧರ್ಮ ನೀತಿ ಅಲ್ಲ ನಿಜ. ಆದರೆ ಕಾವ್ಯದಲ್ಲಿ ನೀತಿ ಇರಲೇ ಬೇಕು ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಕಲೆಯ ಗುರಿ, ಸೌಂದರ್ಯಾರಾಧನೆಯೋ ಸುಖಪ್ರಾಪ್ತಿಯೋ ಆಗಬಹುದು. ಆದರೆ ಅದರ ಪರಿಣಾಮವೇನಾಗಬೇಕು. ಅನಂತವಾದ ಸುಖ? ಇದು ಹೇಗೆ ಲಭ್ಯ. ಸಮಾಜದ ಉನ್ನತಿಯಿಂದ, ಜೀವನದ ತುಂಬುಬದುಕಿನಿಂದ.

ಒಂದು ಜನತೆಯ ಸಂಸ್ಕೃತಿ ಅದರ ಸಾಹಿತ್ಯದಲ್ಲಿ ಕಲೆಯಲ್ಲಿ ಸಮಾಜದ ನಡವಳಿಕೆಯಲ್ಲಿ ವ್ಯಕ್ತವಾಗುತ್ತದೆ. ಈ ಸಾಹಿತ್ಯ ಜನಜೀವನದ ಮಾರ್ಪಾಟಿಗೆ ಮುಖ್ಯವಾದ ಕಾರಣಗಳಲ್ಲಿ ಒಂದು. ಈಗಿನ ಚಲಚ್ಚಿತ್ರಗಳು ಮನುಷ್ಯನ ಅಭಿರುಚಿಯನ್ನು ಶುದ್ಧಮಾಡುವುದಕ್ಕಿಂತ ಹೆಚ್ಚಾಗಿ ಕಲುಷಿತವನ್ನಾಗಿ ಮಾಡುತ್ತಿದೆ ಅನ್ನಿಸುತ್ತಿದೆ. ನಾಟಕದ ಬದಲು ಚಲಚ್ಚಿತ್ರವನ್ನು ನಾವು ನೋಡುತ್ತಿದ್ದೇವೆ. ನಿಜ ಸಾಹಿತ್ಯ ಇಂಥದೇ ಚಿತ್ರವನ್ನು ನಮ್ಮ ಕಣ್ಣೆದುರಿಗೆ ತೋರಿಸುವುದಕ್ಕೆ ಪ್ರತಿಯಾಗಿ ಮನಸ್ಸಿನ ಕಣ್ಣಿಗೆ ತೋರಿಸುತ್ತದೆ. ಕೆಲವೊಮ್ಮೆ ಚಿತ್ರ, ನಾಟಕ ನೋಡುವುದಕ್ಕಿಂತ ಹೆಚ್ಚಿನ ಪರಿಣಾಮ ಮನೋಭಿಪ್ರಾಯದ ಮೇಲೆ ಕಂಡುಬರುವ ಸಾಹಿತ್ಯಚಿತ್ರಗಳಿಂದ ಸಾಧ್ಯ. ಆಗ ಮನಸ್ಸು ಹೆಚ್ಚು ಕಲುಷಿತವಾಗಬಹುದು. ಮನಸ್ಸಿನಂತೆ ನಡೆಯುವ ಬುದ್ಧಿ ಹುಟ್ಟಬಹುದು. ಆಗ ಆ ಕ್ಷುಬ್ಧವಾದ ಮನಸ್ಸುಳ್ಳ ಆತ ಸಮಾಜದ ನಿಯಮಕ್ಕೆ ವಿರುದ್ಧವಾಗಿ ನಡೆದುಕೊಳ್ಳಬಹುದು. ಹೀಗೆ ಮನಃಪ್ರೇರಣೆಯನ್ನು ಮಾಡುವುದು ಸಾಹಿತ್ಯದ ಉದ್ದೇಶವೇ, ಧರ್ಮವೇ?

ಸಾಹಿತ್ಯದ ಉದ್ದೇಶ ಸ್ಥಾಯಿಯಾದ ಆನಂದ ಮಾತ್ರ ಅಲ್ಲ. ಅದು ಕೆಲವು ವೇಳೆ ತಾತ್ಕಾಲಿಕವಾಗಿ ಮಾನವನ ಮನಸ್ಸನ್ನು ಉದ್ರೇಕಗೊಳಿಸಿ ಕಾರ್ಯರಂಗಕ್ಕೆ ಅವನು ಧುಮುಕಲು ಸಹಾಯಮಾಡಬೇಕು. ಜನ ಕ್ರಾಂತಿಕಾರರಾಗುವಂತೆ ಮಾಡಬೇಕು. ಬಡವರು ಶ್ರೀಮಂತರ ಮೇಲೆ ಬೀಳುವಂತೆ ಪ್ರಚೋದಿಸಬೇಕು. ಅನ್ಯಾಯದಿಂದ ಹತರಾಗುತ್ತಿದ್ದೇವೆ ಎನ್ನುವವರನ್ನು ತಮಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಕಾಣಿಸುವವರ ಮೇಲೆ ಕೆರಳುವಂತೆ ಮಾಡಬೇಕು. ದೇಶಕ್ಕಾಗಿ, ತನ್ನ ಸ್ವಾರ್ಥಕ್ಕಾಗಿ, ತಾನು ಹೇಳಿದುದೇ ಸರಿ ಎಂದು ವಾದಿಸುವವನಿಗಾಗಿ ಆ ಜನ, ಅವನನ್ನು ಅನುಸರಿಸುತ್ತಿರುವ ಜನ ತ್ಯಾಗಮಾಡುವಂತೆ ಪ್ರೇರೇಪಿಸಬೇಕು ಎನ್ನುವುದಾದರೆ ಯುದ್ಧಕಾಲದ ಸಾಹಿತ್ಯ, ಶಾಂತಿಸಮಯದ ಸಾಹಿತ್ಯ, ಸ್ವರ್ಣಯುಗದ ಸಾಹಿತ್ಯ ಇವುಗಳ ಧರ್ಮವೆಲ್ಲ ಬೇರೆಬೇರೆಯೇ? ಸಾಹಿತ್ಯದಲ್ಲಿ ಉದ್ರೇಕಗೊಳಿಸುವ ಶಕ್ತಿ ಇದೆ ಎಂದಮೇಲೆ ಅದು ಆನಂದದಲ್ಲಿ ಪರ್ಯವಸಾನವಾಗುವ ಗುರಿಯನ್ನು ಹೊಂದುವುದು ಕಷ್ಟ. ದೇಶಪ್ರೇಮಕ್ಕಾಗಿ ಅತುಲ ಸ್ನೇಹಕ್ಕಾಗಿ, ಶುದ್ಧ ಪ್ರೇಮಕ್ಕಾಗಿ, ಸಾಹಿತ್ಯಪ್ರಚೋದನೆಗೊಳಿಸಬಹುದಾದ ಮೇಲೆ ಸ್ವಾರ್ಥಸಾಧನೆಗಾಗಿ, ದುಷ್ಟ ಶಕ್ತಿ ಸಂಪಾದನೆಗಾಗಿ, ಪರಹಿತವನ್ನು ಲಕ್ಷಿಸದೆ ಸ್ವಹಿತಲಾಭ


ಗಳಿಸುವುದಕ್ಕಾಗಿ ಪ್ರಚೋದನೆಗೊಳಿಸುವಂಥ ಸಾಹಿತ್ಯವನ್ನೂ ನಿರ್ಮಾಣಮಾಡಬಹುದಲ್ಲವೆ? ಹಾಗಾದರೆ ಸಾಹಿತ್ಯದ ನಿಜವಾದ ಉದ್ದೇಶವೇನ.? ಸತ್ಯವಾದ ಧರ್ಮವೇನು? ಅದರ ಮೂಲ ಮನೋಧರ್ಮವೇನು?

ಸಾಹಿತ್ಯ ಜನಜೀವನಕ್ಕೆ ಸಂಬಂಧಪಟ್ಟ ಮೇಲೆ ಅದರ ಪ್ರತಿಬಿಂಬವಾಗದೇ ಅದಕ್ಕೆ ಪೂರಕವಾಗಬೇಕು. ಜನ ಆದರ್ಶ ಸಮಾಜದ ಸೃಷ್ಟಿಗೆ ಕಾರಣರಾಗುವಂತೆ ಮಾಡಬೇಕು. ಆಗ ಸಾಹಿತ್ಯದ ಉದ್ದೇಶ ಆನಂದದ ಮೂಲಕ ಮನಃಪರಿಪಾಕವಾಗುತ್ತದೆ. ಈ ಪರಿಪಾಕ ಸಂಸ್ಕಾರದಿಂದ ಸಾಧ್ಯವಾದರೂ ಸಾಹಿತ್ಯಾಭ್ಯಾಸದಿಂದಲೂ ಸಾಧ್ಯವಾಗುತ್ತದೆ. ಕಡೆಗೆ ಅನಾಗರಿಕ ಮನಸ್ಸನ್ನು ಸುಸಂಸ್ಕೃತವನ್ನಾಗಿ ಪರಿವರ್ತನೆಗೊಳಿಸುವುದಕ್ಕಾದರೂ ಸಾಹಿತ್ಯಸೃಷ್ಟಿ ನಡೆಯಬೇಕು.

ಈಗ ನಮ್ಮಲ್ಲಿ ಹೆಚ್ಚು ಪ್ರಚಾರದಲ್ಲಿರುವ ಸಾಹಿತ್ಯ ವಿಭಾಗವೆಂದರೆ ಕಾದಂಬರಿ, ಸಣ್ಣಕತೆ ಇವುಗಳಿಗೆ ವಿಷಯವನ್ನು ನಮ್ಮ ಲೇಖಕರು ಜೀವನದ ಎಲ್ಲ ರಂಗಗಳಿಂದ ಆರಿಸಿಕೊಳ್ಳುತ್ತಿದ್ದಾರೆ. ಸಾಹಿತ್ಯದಲ್ಲಿ ವಾಸ್ತವಿಕತೆಗೆ ಪ್ರಾಮುಖ್ಯ ಕೊಟ್ಟು ಯಥಾವತ್ತಾಗಿ ಚಿತ್ರಗಳನ್ನು ರಚಿಸುತ್ತಿದ್ದಾರೆ. ಈ ಯಥಾವತ್ ಚಿತ್ರದ ಪ್ರವಾಹದಲ್ಲಿ ಜೀವನದ ನೇಪಥ್ಯವನ್ನು ರಂಗಸ್ಥಳಕ್ಕೆ ತಿರುಗಿಸುವ ಏರ್ಪಾಡು ನಡೆಯುತ್ತಿದೆ. ಅದನ್ನು ಹೊಸ ಹೆಸರಿನಿಂದ ನಾಮಕರಣ ಮಾಡಿ ಹಳೆಯದನ್ನು ಹಳಿದು ತಾವು ನಿರ್ಮಿಸುತ್ತಿರುವ ಹೊಸದನ್ನು ಹೊಗಳಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ನಮ್ಮ ಕಾವ್ಯವಸ್ತು ಪುರಾಣದ, ಅರಮನೆಯಿಂದ, ಕಾಲ್ಪನಿಕ ಅಂತರಿಕ್ಷದಿಂದ ಜನಜೀವನದ, ಸಮಾಜಧರ್ಮದ ಮಟ್ಟಕ್ಕೆ ಇಳಿದಿರುವುದೇ ಸಾಹಿತ್ಯಗಂಗೆ ಜೀವನದ ನೆರವಿಗೆ ಬಂದಿರುವುದಕ್ಕೆ ಸಾಕ್ಷಿ. ಪಂಡಿತರಂಜನವಾದ ಸಾಹಿತ್ಯ ಜನರಂಜಿತವಾಗುವುದು ಸುದೈವ. ಆದರೆ ಹತ್ತಿರಕ್ಕೆ ಬಂದ ಆಯುಧವನ್ನು ಆತ್ಮಹತ್ಯಕ್ಕೆ ಉಪಯೋಗಿಸಿಕೊಳ್ಳದೆ ಆತ್ಮರಕ್ಷಣೆಗೆ ಬಳಸಿಕೊಳ್ಳುವುದು ಜನರ ಧರ್ಮ; ಲೇಖಕರ ಕರ್ತವ್ಯ.

ಕಥೆಗೆ, ಕಾದಂಬರಿಗೆ, ಚಿತ್ರಗಳಿಗೆ ವಸ್ತುವನ್ನು ಯಾವ ಮೂಲೆಯಿಂದ ಬೇಕಾದರೂ ತೆಗೆದುಕೊಳ್ಳಬಹುದು. ಆದರೆ ಅದನ್ನು ಕಾಣುವ, ಇನ್ನೊಬ್ಬರಿಗೆ ಕಾಣಿಸುವ ದೃಷ್ಟಿ ಮಲಿನವಾಗಿರಬಾರದು. ಕಲುಷಿತವಾಗಿರಬಾರದು. ಹೆಣ್ಣಿನ ಕಾಮಲಾಲಸೆ, ಕಾರ್ಮಿಕನ ಬಂಡವಾಳಶಾಹಿಯ ದ್ವೇಷ, ರಾಜಕೀಯ ತತ್ವಜ್ಞನ ಸ್ವಾರ್ಥ, ಅರ್ಥಲಂಪಟನ ಲಾಭಖೋರತನ, ವೇಶ್ಯೆಯ ಜೀವನವೃತ್ತಿ, ದರಿದ್ರನ ಬಡತನ, ಬಂಡವಾಳಗಾರನ ಮೇಲ್ಮೆ, ಕೂಲಿಯ ಕೀಳ್ಮೆ, ಇವೆಲ್ಲ ತಿದ್ದಬೇಕಾದ ವಿಷಯಗಳೇ. ಆದರೆ ಸಾಹಿತಿಯ ಮನೋಧರ್ಮ ಅವನು ಈ ವಸ್ತುಗಳನ್ನು ನೋಡುವ ದೃಷ್ಟಿಯಲ್ಲಿದೆ. ಅಸೂಯೆಯಿಂದ ಅದು ಕಲುಷಿತವಾಗಬಾರದು, ದ್ವೇಷದಿಂದ ಸಿಂಚಿತವಾಗಿರಬಾರದು. ಅಭಾವದಿಂದ ಉದ್ರೇಕಿತವಾಗಿರಬಾರದು, ವೈರಾಗ್ಯಪರವಾಗಿರಬಾರದು. ನಿಷ್ಕಲ್ಮಷವಾಗಿರಬೇಕು. ಶುದ್ಧವಾಗಿರಬೇಕು. ಉದಾತ್ತಭಾವನೆಯಿಂದ ಪ್ರಚೋದಿತವಾಗಿರಬೇಕು. ಕಾಂತಾಸಮ್ಮಿತವಾಗಿರಬೇಕು.

ಸಾಹಿತ್ಯದ ಮನೋಧರ್ಮ ಸನ್ಮಾರ್ಗಕ್ಕೆ ನಿಷ್ಕಂಟಕವಾದದ್ದು. ಮನಃಪರಿಪಾಕಕ್ಕೆ ಸತ್ ಆನಂದದ ಮೂಲಕ ಪ್ರೇರಣೆಗೊಳಿಸತಕ್ಕದ್ದು.



ವೈದ್ಯಶಾಸ್ತ್ರಗಳ ದೀರ್ಘ ವಿಚಾರದ ಫಲ! ಅನೇಕ ವರ್ಷಗಳ ಅನುಭವದ ಬಲ!

ಈ ಹಿನ್ನೆಲೆಯಲ್ಲಿ ಬಾಣಂತಿಯರಿಗೊಂದು ವರಪ್ರದಾನ

ಆಯುರ್ವೇದ ಭೂಷಣ ಡಾ| ಯಂ. ವಿ. ಶಾಸ್ತ್ರಿಯವರ

ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಕಾಲದ ನಷ್ಟವಾದ ಶರೀರಧಾತುಗಳನ್ನು ತುಂಬಿಸಿ ಶುದ್ಧ ಹಾಗೂ ಸಮೃದ್ಧವಾದ ಸ್ತನ್ಯವನ್ನು ಉತ್ಪಾದಿಸಿ ಮನಸ್ಸಿಗೆ ಆನಂದವನ್ನೂ ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಪುಷ್ಟಿಯನ್ನೂ ಉಂಟುಮಾಡುವ ಏಕಮಾತ್ರ ಸಾಧನ.

ಹೆಚ್ಚಿನ ಮಾಹಿತಿಗೆ: ಡಾ| ಎಂ. ವಿ. ಶಾಸ್ತ್ರಿ,

"ಗೋಪಾಲ ಭೇಷಜಾಶ್ರಮ", ಕದ್ರಿ, ಮಂಗಳೂರು.

ಪರಿಗ್ರಹ ಪರಿಮಾಣವೇ ವಿಶ್ವಶಾಂತಿಯ ದಿವ್ಯ ಔಷಧ

ಲೇಖಕರು: ವಿದ್ಯಾಭೂಷಣ ಕೆ. ಭುಜಬಲಿ ಶಾಸ್ತ್ರಿಗಳು, ಸಂ. 'ಜೈನ ಸಿದ್ಧಾಂತ ಭಾಸ್ಕರ' ಮೂಡಬಿದ್ರಿ

ಇಂದು ಪ್ರಪಂಚದ ಪ್ರತಿಯೊಂದು ಮೂಲೆಯಲ್ಲಿ ಭಯಂಕರವಾದ ಅಶಾಂತಿಯು ವ್ಯಾಪಿಸಿಕೊಂಡಿದೆ. ಅಮೇರಿಕವು ರಷ್ಯಾವನ್ನು ಯುದ್ಧಕ್ಕೆ ಕರೆಯುತ್ತಿದ್ದರೆ, ರಷ್ಯಾವು ಅಮೇರಿಕವನ್ನು ಆಮಂತ್ರಿಸುತ್ತಿದೆ. ಜರ್ಮನಿ, ಜಪಾನು, ಆಫ್ರಿಕಾ ಮೊದಲಾದ ದೇಶಗಳಲ್ಲಿ ರಷ್ಯಾ ಮತ್ತು ಅಮೇರಿಕದ ಅಚಲ ಸಾಮ್ರಾಜ್ಯವಿದೆ. ಅಧಿಕಾಂಶ ದೇಶಗಳನ್ನು ಈ ಶ್ರಮಜೀವಿ ಮತ್ತು ಧನಾಢ್ಯ ದೇಶಗಳ ಪ್ರಬಲ ಶಕ್ತಿಗಳು ತಮ್ಮ ವಶಮಾಡಿಕೊಂಡಿರುವುವು. ಇವು ಪ್ರಪಂಚದ ಸಮಸ್ತ ರಾಷ್ಟ್ರಗಳನ್ನು ನುಂಗಿಬಿಡಬೇಕೆಂದು ಹೊಂಚುಹಾಕುತ್ತಿರುವುವು. ಇವುಗಳ ಮಹತ್ವಾಕಾಂಕ್ಷೆಗಳೇ ಇಂದು ವಿಶ್ವಶಾಂತಿಗೆ ಬಾಧಕಗಳಾಗಿ ನಿಂತಿವೆ. ಸಾಮ್ರಾಜ್ಯ-ವಿಸ್ತಾರ ಹಾಗೂ ವ್ಯಾಪಾರಪ್ರಸಾರದ ಭಾವನೆಯೇ ಪ್ರಪಂಚದ ಸಮಸ್ತ ರಾಷ್ಟ್ರಗಳಲ್ಲಿ ಅಶಾಂತಿಯನ್ನು ಹರಡಿರುವುವೆಂದು ಹೇಳುವುದು ತಪ್ಪಾಗಲಾರದು. ಈ ಭಾವನೆಯು ಪ್ರತಿಯೊಂದು ರಾಷ್ಟ್ರ ಮತ್ತು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಪ್ರತ್ಯಕ್ಷ ಕಂಡುಬರುವುದು. ಆದುದರಿಂದಲೇ ಅಶಾಂತಿಯ ನಗ್ನನೃತ್ಯವು ಸರ್ವತ್ರ ಕಾಣಬರುತ್ತದೆ.

ವ್ಯಕ್ತಿ ಅಥವಾ ರಾಷ್ಟ್ರದ ಭಯಂಕರ ಹಸಿವೆಯು ಸೀಮಿತ ಸಾಮಗ್ರಿಗಳಿಂದ ಶಾಂತವಾಗುವ ಲಕ್ಷಣವು ಕಂಡುಬರುವುದಿಲ್ಲ. ಇಡೀ ಪ್ರಪಂಚವನ್ನು ನುಂಗಿ ಜೀರ್ಣಿಸಿಕೊಂಡು ಸಂಸಾರದಲ್ಲಿ ಒಬ್ಬ ಅನನ್ಯ ಧನಕುಬೇರನಾಗಬೇಕೆಂಬುದೇ ಇಂದಿನ ಪ್ರತಿಯೊಂದು ರಾಷ್ಟ್ರ ಅಥವಾ ವ್ಯಕ್ತಿಯ ಮುಖ್ಯ ಲಕ್ಷ್ಯವಾಗಿದೆ. ಇದೇ ಭಾವನೆಯೇ ಪರಿಗ್ರಹ. ರಷ್ಯಾ, ಅಮೇರಿಕಾ, ಭಾರತವೇ ಮೊದಲಾದ ಯಾವ ರಾಷ್ಟ್ರದ ನಿವಾಸಿಯೇ ಆಗಿರಲಿ, ಭೌತಿಕವಾದದ ಸಬಲ ಮುಷ್ಟಿಯಲ್ಲಿ ನಿರ್ದಯವಾಗಿ ಸಿಕ್ಕಿಕೊಂಡಿರುವನು. ಸಂಗ್ರಹ ಮಾಡಬೇಕೆಂಬ ಭಾವನೆಯು ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಅತ್ಯಧಿಕ ಪರಿಮಾಣದಲ್ಲಿ ನೆಲಸಿರುವುದರಿಂದ ಅವನಿಗೆ ಸ್ವಾರ್ಥದ ಹೊರತು ಇನ್ನಾವುದೂ ಕಾಣುವುದಿಲ್ಲ. ಸ್ವಾರ್ಥದ ಸಂಘರ್ಷದಿಂದ ಮನುಷ್ಯನು ಲೋಕದಲ್ಲಿ ಅತ್ಯಾಚಾರ, ಅನೀತಿ, ಹಿಂಸೆಯೇ ಮೊದಲಾದ ಕುಕೃತ್ಯಗಳನ್ನು ಮಾಡಲು ಹೇಸುವುದಿಲ್ಲ! ಅಂತಹವನಲ್ಲಿ "ಬದುಕು ಹಾಗೂ ಬದುಕುವುದಕ್ಕೆ ಬಿಡು" ಎಂಬ ಉಚ್ಚ ಭಾವನೆಯು ಅಂಶವಾದರೂ ಇರುವುದಿಲ್ಲ. ಹೀಗೆ ಪ್ರತಿಯೊಂದು ರಾಷ್ಟ್ರದ "ವ್ಯಕ್ತಿಗತ ಜೀವನದಲ್ಲಿ ಸ್ವಾರ್ಥಬುದ್ಧಿ ಮತ್ತು ಭೌತಿಕವಾದ ಇವುಗಳ ಭಯಂಕರ ಸಂಗ್ರಾಮವು ನಡಿಯುತ್ತಿದೆ.

ಭೌತಿಕವಾದ, ಅರ್ಥಲೋಲುಪತೆ, ಶೋಷಣನೀತಿ, ಹಾಗೂ ಸ್ವಾರ್ಥಪರತೆ ಇವು ಹೇಗೆ ವೈಯಕ್ತಿಕ ಜೀವನದೊಡನೆ ಸಂಬಂಧಿಸಿಕೊಂಡಿವೆಯೋ ಹಾಗೆಯೇ ಸಮಾಜದೊಡನೆಯೂ ಸಂಬಂಧಿಸಿಕೊಂಡಿವೆ. ಏಕೆಂದರೆ ಅನೇಕ ವ್ಯಕ್ತಿಗಳ ಸಮುದಾಯವೇ ಸಮಾಜ. ಇದರಲ್ಲಿ ಅನೇಕ ವ್ಯಕ್ತಿಗಳ ಇಚ್ಛೆಗಳು ಅಸಮಾನ ರೂಪದಲ್ಲಿ ಒಂದು ಭಯಂಕರ ರೂಪವನ್ನು ಧರಿಸುವುವು, ಈ ಇಚ್ಛೆಗಳ ಪ್ರಾಬಲ್ಯದಿಂದ ಇಂದು ಒಂದು ಸಮಾಜವು ತನ್ನ ಪ್ರಭುತ್ವವನ್ನು ಸ್ಥಾಪಿಸಬೇಕೆಂಬ ಪ್ರಬಲ ಕಾಂಕ್ಷೆಯಿಂದ ಸಾಮಗ್ರಿಗಳನ್ನು ಸಂಗ್ರಹಿಸುತ್ತಾ ಮಿಕ್ಕ ಸಮಾಜಗಳನ್ನು ಅವನತಿಯ ಹಳ್ಳಕ್ಕೆ ತಳ್ಳುವುದಕ್ಕೆ ಪ್ರಯತ್ನಿಸುತ್ತದೆ. ಮಮತ್ವಬುದ್ಧಿಯೇ ವ್ಯಕ್ತಿಯನ್ನು ಅತ್ಯಾಚಾರಮಾಡುವಂತೆ ಪ್ರೇರೇಪಿಸುತ್ತದೆ. ಮಮತ್ವ ಬುದ್ಧಿಯು ಶಸ್ತ್ರದಂತೆ ಸಂಪೂರ್ಣವಾಗಿ ಮನುಷ್ಯನ ವಾಸ್ತವಿಕ ಶಾಂತಿಯನ್ನು ನಷ್ಟಮಾಡುವುದು. ಆದುದರಿಂದಲೇ ಜೈನ ಮಹರ್ಷಿಗಳು ಮೂರ್ಛೆ ಅಥವಾ ಮಮತ್ವಬುದ್ಧಿಯನ್ನು ಪರಿಗ್ರಹವೆಂದು ಸಂಬೋಧಿಸಿರುವರು. ಅಂದರೆ ಮೂರ್ಛೆ, ಲಾಲಸೆ, ಲೋಭ ಮೊದಲಾದುವೇ ಪರಿಗ್ರಹವೆಂದು ಇವರ ತಾತ್ಪರ್ಯ. ಏಕೆಂದರೆ ಈ ಭಾವನೆಗಳೇ ಭೌತಿಕ ಸಂಪತ್ತಿಯ ಪ್ರಧಾನ ಕಾರಣಗಳು. ವೈಯಕ್ತಿಕ ಮತ್ತು ಸಾಮಾಜಿಕ ಭಾವನೆಗಳ ಆಧಾರದಿಂದಲೇ ರಾಷ್ಟ್ರಗಳ ಜೀವನ ನಿರ್ಮಿಸಲ್ಪಡುವುದು. ಶೋಷಣನೀತಿ ಹಾಗೂ ಸಾಮ್ರಾಜ್ಯ ವಿಸ್ತಾರವು ರಾಷ್ಟ್ರಗಳ ಪರಿಗ್ರಹ.

ಸನ್ ೧೯೧೪ರಲ್ಲಿ ಅಟ್ಲಾಂಟಿಕ ಮಹಾಸಾಗರದಲ್ಲಿ ಜರ್ಮನಿಯೇ ಮೊದಲಾದ ರಾಷ್ಟ್ರಗಳೊಡನೆ ನಡೆದ ಪ್ರಥಮ ಯುದ್ಧದಂತೆ, ಸನ್ ೧೯೩೯ರಲ್ಲಿ ಮುಖ್ಯವಾಗಿ ಜರ್ಮನಿ ಮತ್ತು ರಷ್ಯಾ ಇವುಗಳೊಡನೆ ನಡೆದ ದ್ವಿತೀಯ ಮಹಾಯುದ್ಧದಂತೆ ಇಂದು ಉತ್ತರ ಕೋರಿಯಾ ಹಾಗೂ ದಕ್ಷಿಣ ಕೋರಿಯಾದ ಸಂಘರ್ಷವು ಪ್ರತ್ಯಕ್ಷ ಉದಾಹರಣೆಯಾಗಿದೆ. ಇದರಲ್ಲಿ ಒಂದು ಕಡೆಯಲ್ಲಿ ಅಮೇರಿಕವು ಜೀವನದಲ್ಲಿ ಧನಕ್ಕೆ

ಪ್ರಮುಖ ಸ್ಥಾನವನ್ನು ಕೊಡಬೇಕೆಂದು ಪ್ರಯತ್ನಿಸಿದರೆ, ಇನ್ನೊಂದು ಕಡೆಯಲ್ಲಿ ರಷ್ಯಾವು ಶ್ರಮಕ್ಕೆ ಪ್ರಧಾನ ಸ್ಥಾನವನ್ನು ಕೊಡಬೇಕೆಂದು ಯತ್ನಿಸುತ್ತಿದೆ. ಇವೆರಡರ ಮಧ್ಯದಲ್ಲಿ ಸಂಘರ್ಷದ ಮುಖ್ಯ ಕಾರಣ ಇದೊಂದೇ ಆಗಿದೆ. ಶ್ರಮಜೀವಿಗಳು ಪುಂಜಿವಾದಿಗಳ ಮೇಲೂ ಪುಂಜಿವಾದಿಗಳು ಶ್ರಮಜೀವಿಗಳ ಮೇಲೂ ತಂತಮ್ಮ ಪ್ರಭುತ್ವದ ಸಾಮರ್ಥ್ಯದಿಂದ ಅಧಿಕಾರವನ್ನು ಮಾಡಬೇಕೆಂದಿರುವವು. ಈ ಪ್ರಕಾರವಾಗಿ ಇಂದು ಕೋರಿಯಾದ ಭಯಂಕರ ಸಂಗ್ರಾಮವು ಸ್ವಾರ್ಥಪರತೆ ಮತ್ತು ಭೌತಿಕ ಸಂಪತ್ತಿಗೋಸ್ಕರ ನಡಿಯುತ್ತಿದೆ. ಆಧುನಿಕ ಯುಗದಲ್ಲಿ ಸ್ವಪ್ನದಲ್ಲಿಯೂ ಯಾರಿಗೂ ತ್ಯಾಗಭಾವವು ರುಚಿಸುವುದಿಲ್ಲ! ಪ್ರತ್ಯೇಕ ವ್ಯಕ್ತಿ ಪ್ರತಿಯೊಂದು ಸಮಾಜ ಅಥವಾ ರಾಷ್ಟ್ರ ಇಂದು ಪರಿಗ್ರಹಸಂಚಯದ ಕಡೆಗೆ ನೃಷ್ಟಿ ಇಟ್ಟಿದೆ. ಅಂತು ಹೀಗೆ ಆರ್ಥಿಕ, ರಾಜನೈತಿಕ ಮತ್ತು ಸಾಮಾಜಿಕ ಪ್ರತಿಯೊಂದು ಕ್ಷೇತ್ರದಲ್ಲಿಯೂ ಪರಿಗ್ರಹಪಿಪಾಸೆಯು ಹೆಚ್ಚುತ್ತಿದೆ. ಸ್ವಾರ್ಥತ್ಯಾಗಕ್ಕೆ ಯಾರೂ ಸಿದ್ಧರಾಗುವುದಿಲ್ಲ.

ಪ್ರಪಂಚದ ಪ್ರತಿಯೊಂದು ಪ್ರಾಣಿಯು ಸುಖವನ್ನು ಅಪೇಕ್ಷಿಸುತ್ತದೆ. ಇದರ ಸಂಪೂರ್ಣ ಶ್ರಮ ಮತ್ತು ಉದ್ಯೋಗ ಈ ಬಯಕೆಯ ಪೂರ್ತಿಗಾಗಿಯೇ ಆಗಿದೆ. ಪರಿಗ್ರಹದ ವೃದ್ಧಿಯಿಂದಲೇ ಸುಖಶಾಂತಿಗಳು ಸಿಗುವುವೆಂದು ಪ್ರತಿಯೊಂದು ಪ್ರಾಣಿಯ ಮನಸ್ಸಿನಲ್ಲಿದೆ. ಆದುದರಿಂದಲೇ ಲೋಭ, ಮಮತ್ವಾದಿಗಳು ಇದರ ಮೇಲೆ ಅಧಿಕಾರವನ್ನು ಮಾಡುತ್ತಿವೆ. ಪ್ರಪಂಚದ ಪ್ರಮುಖ ವ್ಯಕ್ತಿಗಳು ಭೌತಿಕವಾದದ ಅಸ್ತಿತ್ವವು ಚಿಗುರಬಾರದೆಂದು ಬಯಸಿದರೂ ಅವರ ಸಹಯೋಗಿಗಳ ಹಾಗೂ ಅನ್ಯ ವ್ಯಕ್ತಿಗಳ ಮನಸ್ಸಿನಲ್ಲಿ ಶಾಂತಿಗಾಗಿ ಆವಶ್ಯಕತೆಯಿಂದ ಹೆಚ್ಚಿನ ಪರಿಗ್ರಹದಲ್ಲ ಅಲ್ಪಸ್ವಲ್ಪವನ್ನಾದರೂ ತ್ಯಾಗಮಾಡಬೇಕೆಂಬ ತ್ಯಾಗಭಾವವು ಇಲ್ಲ. ಆದುದರಿಂದಲೇ ಎಲ್ಲೆಲ್ಲಿಯೂ ಅಸಂತೋಷದ ಸಾಮ್ರಾಜ್ಯವೇ ದೃಷ್ಟಿಗೋಚರವಾಗುತ್ತಿದೆ. ಭೌತಿಕವಾದ, ಅರ್ಥಲೋಲುಪತೆ ಮತ್ತು ಶೋಷಣನೀತಿಯು ಇಂದಿನ ಸಮಸ್ತ ಸಂಸಾರವನ್ನು ಭಸ್ಮಮಾಡುತ್ತಿದೆ! ಈ ನನ್ನ ಭೌತಿಕ ಸಂಪತ್ತಿಯ ರಕ್ಷಣೆ ಮತ್ತು ವ್ಯಯದಲ್ಲಿ ನನಗಿರುವಷ್ಟೇ ಹಕ್ಕು ಇತರರಿಗೂ ಇದೆಯೆಂಬ ವಿಚಾರವು ಹುಟ್ಟದ ಹೊರತು ಪ್ರತಿಯೊಬ್ಬ ವ್ಯಕ್ತಿ, ಸಮಾಜ ಮತ್ತು ರಾಷ್ಟ್ರ ಇತರರೊಡನೆ ಸಹಾನುಭೂತಿಯನ್ನು ತೋರಿಸಲಾರದು.

ಜನರು ಸುಖದುಃಖಗಳ ಮುಖ್ಯ ಆಧಾರ ಬಾಹ್ಯ ಸಾಧನಗಳ ಪ್ರಾಪ್ತಿ ಅಥವಾ ಅಪ್ರಾಪ್ತಿಯೇ ಆಗಿದೆಯೆಂದು ತಿಳಿದುಕೊಂಡಿರುವುದೇ ದಾರ್ಶನಿಕ ದೃಷ್ಟಿಯಿಂದ ವ್ಯಕ್ತಿ

SEASON DEPOSITS

of Rs. 500/- & above are now accepted at 3½% p. a.

FIXED DEPOSITS ARE RECEIVED:

For 1 Year .... @ 3½% P. A.

For 2 Years .... @ 4% P. A.

INVEST IN OUR

THREE YEARS' CASH CERTIFICATES

AND EARN 4½% INTEREST.

NAGARKARS BANK, LTD.,
MANGALORE.

ನಗರ್ಕಾರ್ಸ್ ಬೇಂಕ್ ಲಿಮಿಟೆಡ್
ಮಂಗಳೂರು.

ಮತ್ತು ರಾಷ್ಟ್ರದ ಜೀವನದಲ್ಲಿರುವ ಒಂದು ದೊಡ್ಡ ಕೊರತೆ. ಯಾವನು ಎಷ್ಟೆಷ್ಟು ಹೆಚ್ಚು ಬಾಹ್ಯ ಸಾಧನಗಳನ್ನು ಸಂಗ್ರಹಿಸಿಕೊಳ್ಳುತ್ತಾನೆಯೋ ಅವನು ತನ್ನನ್ನು ಅಷ್ಟಷ್ಟೇ ಅಧಿಕ ಸುಖಿಯನ್ನಾಗಿ ತಿಳಿಯುತ್ತಾನೆ. ಏಕೆಂದರೆ ಈಗ ಪ್ರಪಂಚವು ಅಂತರ್ಮುಖಿ ದೃಷ್ಟಿಯನ್ನು ಪರಿತ್ಯಾಗಮಾಡಿ ಬಹಿರ್ಮುಖಿಯಾಗಿ ಬಾಹ್ಯರೂಪದಲ್ಲಿಯೇ ಮುಳುಗಿದೆ! ಆದುದರಿಂದಲೇ ಬಾಹ್ಯ ಸಾಧನಗಳನ್ನು ಸಂಗ್ರಹಿಸುವುದರಲ್ಲಿ ಸಫಲವಾದರೆ ತನ್ನ ಜೀವನವೇ ಸಫಲವಾಯಿತೆಂದು ತಿಳಿಯುತ್ತದೆ. ವ್ಯಕ್ತಿ ಅಥವಾ ರಾಷ್ಟ್ರಕ್ಕೆ ಬಾಹ್ಯ ಸಾಧನಗಳು ಅಗತ್ಯ ಇಲ್ಲವೆಂದು ನಾನು ಹೇಳುವುದಿಲ್ಲ. ಕಿಂತು ತನ್ನ ಆವಶ್ಯಕತೆಗಿಂತ ಹೆಚ್ಚು ಬಾಹ್ಯ ಸಾಧನಗಳನ್ನು ಸಂಗ್ರಹಿಸುವುದು ತಪ್ಪೆಂದು ಮಾತ್ರ ನಾನು ವಾದಿಸುವುದು. ವರ್ತಮಾನ ಯುಗದಲ್ಲಿ ಪ್ರಜ್ವಲಿಸುತ್ತಿರುವ ಈ ಸಂಘರ್ಷಕ್ಕೆ ಮೂಲ ಕಾರಣ ಧನ. ಸಂಪತ್ತಿ ಎಷ್ಟೆಷ್ಟು ಬೆಳೆಯುತ್ತಿದೆಯೋ ಮನುಷ್ಯನ ಅಶಾಂತಿಯೂ ಅಷ್ಟಷ್ಟೇ ಬೆಳೆಯುವುದು. ಈ ಸಿದ್ಧಾಂತದ ಪ್ರಕಾರ ಅಶಾಂತಿಯು ಭೌತಿಕ ಪದಾರ್ಥಗಳ ಅಭಾವದಲ್ಲಿರುವುದಕ್ಕಿಂತಲೂ ಸದ್ಭಾವದಲ್ಲಿ ಅತ್ಯಧಿಕ ಬೆಳೆಯುವುದೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಹೀಗೆ ಪ್ರಪಂಚದ ಮುಂದೆ ಪರಿಗ್ರಹದ ಕೃಪೆಯಿಂದೊಂದು ದೊಡ್ಡ ಸಂಕಟವು ಬಂದೊದಗಿದೆ.

ಒಂದು ಮಾತನ್ನು ನಾವಿಲ್ಲಿ ಅವಶ್ಯ ನೆನಪಿನಲ್ಲಿಟ್ಟುಕೊಳ್ಳಬೇಕು. ಮನುಷ್ಯನ ಅಶಾಂತಿಗೆ ಬಾಹ್ಯ ಭೌತಿಕ ವಸ್ತುಗಳು ಮಾತ್ರ ಕಾರಣವಲ್ಲ; ಕಾಮ, ಕ್ರೋಧ, ಲೋಭ, ಮೋಹಾದಿ ಅಂತರಂಗ ಪರಿಗ್ರಹಗಳೂ ಕಾರಣಗಳಾಗಿವೆ. "ಮೂರ್ಚ್ಛಾ ಪರಿಗ್ರಹ" ಎಂದು ಮಮತ್ವಬುದ್ಧಿಯೇ ಪರಿಗ್ರಹದ ಬುಡವೆಂದು ಮಹರ್ಷಿಗಳು ಹೇಳಿರುವುದರಿಂದ ಸರ್ವ ಪ್ರಥಮ ನಾವು ಮಮತ್ವ ಬುದ್ಧಿಯನ್ನು ಕಿತ್ತೊಗೆಯುವುದಕ್ಕೋಸ್ಕರ ಪ್ರಯತ್ನಿಸುವುದು ಅತ್ಯಗತ್ಯ. ಇದರಿಂದಲೇ ನಮಗೆ ವಾಸ್ತವಿಕ ಶಾಂತಿಯು ಸಿಗಬೇಕು. ಮಮತ್ವ ಬುದ್ಧಿಯನ್ನು ಜಯಿಸುವ ಮುಖ್ಯ ಉಪಾಯ ಇಚ್ಛಾನಿಯಂತ್ರಣ. ಈ ಇಚ್ಛಾನಿಯಂತ್ರಣದಿಂದಲೇ ಪ್ರಪಂಚದಲ್ಲಿ ಪ್ರಜ್ವಲಿಸುತ್ತಿರುವ ಸಂಘರ್ಷದ ಜ್ವಾಲೆಯು ನೊಂದಿ ಶಾಂತಿಯು ದೃಷ್ಟಿಗೋಚರವಾಗುವುದು. ಜೈನಧರ್ಮದಲ್ಲಿ ಹೇಳಿರುವ ಪರಿಗ್ರಹಪರಿಮಾಣವ್ರತ ಇಚ್ಛಾನಿಯಂತ್ರಣದ ಒಂದು ರೂಪಾಂತರವಾಗಿದೆ. ಪ್ರತಿಯೊಬ್ಬ ಗೃಹಸ್ಥ ಇದನ್ನು ಅನಾಯಾಸವಾಗಿ ಪಾಲಿಸಬಲ್ಲ. ಆದುದರಿಂದಲೇ ಅಹಿಂಸಾದಿ ಐದು ವ್ರತಗಳಲ್ಲಿ ಪರಿಗ್ರಹಪರಿಮಾಣವ್ರತವನ್ನು ಗರ್ಭೀಕರಿಸಿ ಪ್ರತಿಯೊಬ್ಬ ಗೃಹಸ್ಥನು ಬೇರೆ ನಾಲ್ಕು ವ್ರತಗಳೊಡನೆ ಇದನ್ನೂ ಅಗತ್ಯ ಪಾಲಿಸಬೇಕೆಂದು ಜೈನಧರ್ಮವು ಹೇಳಿದೆ. ಇದೇ ಪರಿಗ್ರಹಪರಿಮಾಣವ್ರತಕ್ಕೆ ಇಚ್ಛಾಪರಿಮಾಣವೆಂಬ ಹೆಸರೂ ಉಂಟು. ಬಾಹ್ಯ ವಸ್ತುಗಳ ಪರಿಮಾಣದಿಂದ ಮನುಷ್ಯನು ಭೌತಿಕ ಸಾಧನಗಳನ್ನು ಅಧಿಕ ಪರಿಮಾಣದಲ್ಲಿ ಸಂಗ್ರಹಮಾಡಿಕೊಳ್ಳಲಾರ. ಹಾಗೂ ಅಧಿಕ ಸಂಗ್ರಹಮಾಡಿಕೊಳ್ಳುವ ಇಚ್ಛೆಯೂ ಅವನಲ್ಲಿ ಹುಟ್ಟಲಾರದು.

ಯಾವನಿಗೆ ಬಾಹ್ಯ ಸಾಧನಗಳು ಎಷ್ಟು ಬೇಕೋ ಅಷ್ಟು ಸಿಕ್ಕಿದರೆ ಅವನು ಅಷ್ಟರಿಂದಲೇ ಸಂತುಷ್ಟನಾಗುವನು. ಇದರಿಂದ ಪ್ರತಿಯೊಬ್ಬನ ಇಚ್ಛೆಯು ಪೂರ್ಣವಾಗಿ ಪ್ರಪಂಚವು ಶಾಂತಿಯನ್ನನುಭವಿಸುವುದರಲ್ಲಿ ಸಂದೇಹವಿಲ್ಲ. ಇಚ್ಛಾಪರಿಮಾಣವು ವ್ಯಕ್ತಿ ಅಥವಾ ರಾಷ್ಟ್ರಕ್ಕೆ ಉದಾರವಾದೊಂದು ತ್ಯಾಗಬುದ್ಧಿಯನ್ನು ಕಲಿಸುವುದು. ವ್ಯಕ್ತಿಯ ಮನೋವೃತ್ತಿಯನ್ನು ನಿಯಂತ್ರಿಸಿ ಶಾಂತಿಯನ್ನು ಸ್ಥಾಪಿಸುವುದೇ ಪರಿಗ್ರಹಪರಿಮಾಣವ್ರತದ ಪ್ರಧಾನ ಲಕ್ಷ್ಯವಾಗಿದೆ. ಇದರ ಮೂಲಕ ಸ್ಥಾಪಿಸಲ್ಪಡುವ ಚಿರಶಾಂತಿಯು ವರ್ತಮಾನಯುಗದ ಪರಮಾಣು ಬಾಂಬ್, ಹೈಡ್ರೋಜನ್ ಬಾಂಬ್ ಮೊದಲಾದುವುಗಳಿಂದ ಸ್ಥಾಪಿಸಲ್ಪಡಲಾರದು. ಇಚ್ಛಾನಿಯಂತ್ರಣದ ಶಿಕ್ಷಣವೇ ಸಂಘರ್ಷಮಯ ಪ್ರಪಂಚವನ್ನು ಶಾಂತಿಮಯ ಪ್ರಪಂಚದ ರೂಪದಲ್ಲಿ ಬದಲಾಯಿಸಬಲ್ಲುದು. ಸಂಪತ್ತಿಯನ್ನು ಸಮಾನರೂಪದಲ್ಲಿ ಹಂಚಿದರೂ ಲೋಕದಲ್ಲಿ ಲೋಭವು ಇರುವಷ್ಟು ಕಾಲ ಶಾಂತಿಯು ನೆಲಸಲಾರದು. ಇಡೀ ಪ್ರಪಂಚ ಹಿಂದಿನ ಕಾಲದಂತೆ ಆಧ್ಯಾತ್ಮಿಕವಾದದ ಮಹಿಮೆಯನ್ನು ತಿಳಿದು ಭೌತಿಕವಾದಕ್ಕೆ ತಿಲಾಂಜಲಿಯನ್ನು ಕೊಟ್ಟ ಹೊರತು ಲೋಭವನ್ನು ಬಿಡುವುದು ಅಸಂಭವ. ಆದುದರಿಂದ ಮೂರನೆಯ ಮಹಾಯುದ್ಧವನ್ನು ತಡೆಯಬೇಕಾದರೆ ನಾವು ಮೊದಲು ಪರಿಗ್ರಹಲಾಲಸೆಯನ್ನು ತಡಕೊಳ್ಳಬೇಕು.

ಈಗ ಭಾರತದಲ್ಲಿ ನಡಿಯುತ್ತಿರುವ ಕಪ್ಪುಸಂತೆ, ಲಂಚ, ಧಾನ್ಯಾಭಾವವೇ ಮೊದಲಾದುವುಗಳಿಗೂ ಪರಿಗ್ರಹ ಸಂಚಯದ ಲಾಲಸೆಯೇ ಮುಖ್ಯ ಕಾರಣವಾಗಿದೆ. ಪರಿಗ್ರಹ ಸಂಚಯದ ಭಾವನೆಯು ನಿರ್ಮೂಲವಾಗುವ ವರೆಗೆ ಚತುರ ಕಾರ್ಯಕುಶಲ ವ್ಯಕ್ತಿಯು ತನ್ನ ಪ್ರಖರ ಬುದ್ಧಿಯ ಬಲದಿಂದ ಪ್ರಪಂಚವನ್ನು ಶೋಷಣಮಾಡುತ್ತಲೇ ಇರುವನು. ನಮ್ಮ ದೇಶದಲ್ಲಿ ಅನ್ನವಸ್ತ್ರಗಳ ನ್ಯೂನತೆಗೂ ಸಂಚಯಶೀಲ ವೃತ್ತಿಯೇ ಮೂಲ ಕಾರಣವಾಗಿದೆ. ಆದುದರಿಂದ ಶಾಂತಿಯ ಉಪಾಸಕರು ಸ್ವಾರ್ಥಪೂರ್ಣ ಸಂಚಯಶೀಲ ವೃತ್ತಿಯನ್ನು ಪರಿತ್ಯಾಗಮಾಡಿ ಬೇರೆಯವರ ಸುಖದುಃಖಗಳ ಕಡೆಗೂ ದೃಷ್ಟಿಯನ್ನಿಡಬೇಕು. ಪರಿಗ್ರಹಪಿಶಾಚಿಯೇ ಎಲ್ಲಾ ಅನರ್ಥಗಳಿಗೂ ಕಾರಣ. ಪರಿಗ್ರಹ ಬೆಳೆದಷ್ಟು ಅಶಾಂತಿಯು ಬೆಳೆಯುವುದು. ಪರಿಣಾಮದ ಚಂಚಲತೆಗೂ ಪರಿಗ್ರಹವೇ ಕಾರಣವಾಗಿದೆ. ಮನುಷ್ಯನ ಇಚ್ಛೆಗೆ ಮೇರೆ ಇಲ್ಲ. ಅದು ತ್ಯಾಗ ಅಥವಾ ನಿಯಂತ್ರಣದಿಂದಲೇ ಶಾಂತವಾಗಬೇಕು.

ಸಾಹಿತ್ಯದಲ್ಲಿ ಅನ್ಯೋಕ್ತಿ

ಲೇಖಕರು: ಆಸ್ಥಾನ ವಿದ್ವಾನ್ ಶ್ರೀ. ಸುಬ್ರಹ್ಮಣ್ಯ ಶಾಸ್ತ್ರಿ ಅವರು

ಸಾಹಿತ್ಯದಲ್ಲಿ ಕಾವ್ಯ, ನಾಟಕ, ಕಾದಂಬರಿಗಳಿಗಿರುವಂತೆ ಅನ್ಯೋಕ್ತಿಗೂ ಅದರದೇ ಆದ ಒಂದು ಸ್ಥಾನವುಂಟು. ಯಾವುದಾದರೂ ಒಂದು ವಸ್ತುವಿನ ಸಮಗ್ರ ವರ್ಣನೆಯಿಂದ ಪ್ರಕಟವಾಗುವ ಭಾವ ಬೇರೊಂದು ವಸ್ತುವಿಗೂ ಸಂಪೂರ್ಣವಾಗಿ ಅನ್ವಯಿಸುವಂತಿದ್ದರೆ ಅದನ್ನು ಅನ್ಯೋಕ್ತಿ ಎನ್ನುತ್ತಾರೆ. ಈ ಅನ್ಯೋಕ್ತಿಗೆ ಅನ್ಯಾಪದೇಶ ಎಂದು ಇನ್ನೊಂದು ಹೆಸರುಂಟು. ಕೆಲವರು ಇದನ್ನು ಕನ್ನಡದಲ್ಲಿ 'ಗುರಿಮಾತು' ಒಗಟಿ ಮಾತು ಎನ್ನುತ್ತಾರೆ. ಅನ್ಯೋಕ್ತಿಗೆ 'ವಕ್ರೋಕ್ತಿ ಜೀವಿತ' ಪ್ರಾಣ.

ಈ ಅನ್ಯೋಕ್ತಿ ಸಾಹಿತ್ಯದಲ್ಲಿ ಸೃಷ್ಟಿಯಾಗಲು ಆಯಾ ಕವಿಗಳ ಜೀವನಾನುಭವ ಮುಖ್ಯಕಾರಣ. ಲೋಕದಲ್ಲಿ ಕವಿಯ ಜೀವನ, ಅವನ ಅನುಭವದೃಷ್ಟಿ ಮತ್ತು ಧ್ಯೇಯಗಳು ಲೋಕಾತೀತವೇ ಆದವು. ಕವಿಯ ಮನಸ್ಸಂತೂ ಬಹು ವಿಜಾತೀಯವಾದುದು. ಕವಿಹೃದಯವನ್ನು ಒಳಹೊಕ್ಕು ಅವನ ದೃಷ್ಟಿಯಲ್ಲಿ ತಮ್ಮ ದೃಷ್ಟಿಯನ್ನು ಬೆರಸಿ ಅವನ ಅನುಭವ ಮತ್ತು ಧ್ಯೇಯಗಳನ್ನು ಗೌರವಿಸುವ ಸಹೃದಯರು ತೀರಾ ವಿರಳ. ಈ ಕಾರಣದಿಂದ ಕವಿ ಲೋಕದಲ್ಲಿ ಕಾಣುವ ಮತ್ತು ತನ್ನ ಅನುಭವಕ್ಕೆ ನೇರವಾಗಿ ಕಂಡುಬರುವ ಅಪ್ರಿಯವಾದ ಸತ್ಯವನ್ನು ಪ್ರಿಯವಾಗಿ ಸಹೃದಯಗ್ರಾಹ್ಯವಾಗಿ ಹೊರಹೊಮ್ಮಿಸಲು ಪ್ರಯತ್ನಿಸುತ್ತಾನೆ. ಈ ಪ್ರಯತ್ನದಲ್ಲಿ ಅವನಿಗೆ ನೆರವಾಗುವುದು ಈ ಅನ್ಯೋಕ್ತಿಮಾರ್ಗ. ಇಲ್ಲದಿದ್ದರೆ ಅವರವರ ಅನುಭವದ ಮಾನದಂಡದಿಂದಲೇ ಕವಿಯ ಅನುಭವವನ್ನು ಅಳೆಯತೊಡಗುವ ಲೋಕಕ್ಕೆ ಸತ್ಯವನ್ನು ಆ ಕವಿ ಕಟುವಾಗಿ ತಿಳಿಸುವುದು ಹೇಗೆ? ಆದುದರಿಂದಲೇ ಕವಿ ಹಲವು ವೇಳೆ ಸಜಾತೀಯ ಸಹವಾಸವನ್ನೇ ದೂರಮಾಡಿ ತನ್ನದೇ ಆದ ಒಂದು ಪ್ರಪಂಚವನ್ನು ಕಲ್ಪಿಸಿಕೊಂಡು ಅಲ್ಲಿಯ ವಿಜಾತೀಯ ವಸ್ತುಗಳೊಡನೆ ಸಲ್ಲಪಿಸಿ ತನ್ನ ಮನದಲ್ಲಿ ಮೂಡಿರುವ ಜನತೆಯ ಮೌಢ್ಯ, ವೈಪರೀತ್ಯ ಮೊದಲಾದುವುಗಳನ್ನು ಕಾಂತಾಸಮ್ಮಿತಿಯಿಂದ ಟೀಕಿಸಿ ತೃಪ್ತಿಗೊಳ್ಳುತ್ತಾನೆ. ಇದನ್ನು ಜನ ಸಹೃದಯತೆಯಿಂದ ಅರಿತುಕೊಂಡರೆ ಅವರಿಗೊಂದು ಮಹತ್ಪ್ರಯೋಜನವುಂಟು. ಇಂಥ ಅನ್ಯೋಕ್ತಿಗಳಲ್ಲಿ ಮೊತ್ತಮೊದಲು ರಸಿಕಲೋಕಕ್ಕೆ ಪ್ರಮೋದಪ್ರಯೋಜನವಂತೂ ದೊರತೇ ದೊರೆಯುವುದು. ಆ ಮೇಲೆ ಅದರಲ್ಲಿ ಅಡಗಿರುವ ಅನ್ಯೋಕ್ತಿಯ ಮುಳ್ಳು ಚುಚ್ಚಿದರೆ ಜೀವನವನ್ನೂ ಚಾರಿತ್ರ್ಯವನ್ನೂ ನೇರ್ಪುಗೊಳಿಸುವುದಕ್ಕೆ—ಮನಸ್ಸುಮಾಡಿದರೆ—ಸಾಧ್ಯವಾದರೂ ಆಗಬಹುದು.

ಅನ್ಯೋಕ್ತಿಯಲ್ಲಿ ಮೊಗಲೇ ಹೇಳಿದಂತೆ ವ್ಯಕ್ತಿಗೆ ನೇರವಾಗಿ ಸಂಬಂಧಿಸಿದ ಯಾವ ವಿಷಯವೂ ಇರುವುದಿಲ್ಲ. ಅದರಲ್ಲಿ ಬರುವ ಸಂಗತಿಗಳೆಲ್ಲ ಗಿಡ, ಮರ, ಬಳ್ಳಿ, ಮೃಗ, ಪಕ್ಷಿ, ಕೊಳ, ಕಡಲು, ಮುಗಿಲು, ಗಾಳಿ, ಸೂರ್ಯ, ಚಂದ್ರ, ದುಂಬಿ ಮೊದಲಾದುವುಗಳನ್ನೇ ಕುರಿತದ್ದು. ಜನಸಮುದಾಯಕ್ಕೆ ಅನ್ವಯಿಸುವ ಚುಚ್ಚುನುಡಿಗಳೂ ರಮಣೀಯವಾದ ಸದುಪದೇಶಗುಣವೂ ಅದರಲ್ಲಿ ಧ್ವನಿತವಾಗಿಯೇ ಇರುತ್ತವೆ. ಆದಕಾರಣ ಅನ್ಯೋಕ್ತಿಗಳನ್ನು ಕೆಲಸಕ್ಕೆ ಬಾರದ ಚಾಟುಪದ್ಯಗಳೆಂದು ಅಲ್ಲಗಳೆಯಬಾರದು. ಒಂದು ವಿಧದಲ್ಲಿ ಸಮಾಜಸುಧಾರಣೆಗೂ ಅವು ತುಂಬಾ ನೆರವಾಗುತ್ತವೆ.

ಅನ್ಯೋಕ್ತಿಗಳು ಸಂಸ್ಕೃತ ಸಾಹಿತ್ಯದಲ್ಲಿ ಎಲ್ಲ ಪ್ರಕಾರದ ಸಾಹಿತ್ಯ ಮುಖಗಳಂತೆಯೇ ವಿಪುಲವಾಗಿ ಬೆಳೆದು ದಷ್ಟಪುಷ್ಟವಾಗಿ ವಿರಾಜಿಸುತ್ತದೆ. ವ್ಯಂಗ್ಯ ಚಮತ್ಕೃತಿಯನ್ನೇ ಬಹುಮಟ್ಟಿಗೆ ಜೀವಿತವನ್ನಾಗಿಸಿಕೊಂಡಿರುವ ಈ ಅನ್ಯೋಕ್ತಿಮಾರ್ಗವನ್ನನುಸರಿಸಿ ಸಂಸ್ಕೃತ ಸಾಹಿತ್ಯದಲ್ಲಿ ಅನೇಕ ಕವಿಗಳು ಬೃಹದ್ಗ್ರಂಥಗಳನ್ನೇ ಬರೆದಿದ್ದಾರೆ. ಹಿತೋಪದೇಶ, ಪಂಚತಂತ್ರ, ವಿಶ್ವಗುಣಾದರ್ಶ, ಕೆಲವು ಶತಕಗಳು, ಇದಕ್ಕೆ ನಿದರ್ಶನವಾಗಿವೆ. ಪ್ರಕೃತದಲ್ಲಿ ಒಂದೆರಡು ಅನ್ಯೋಕ್ತಿ ಶ್ಲೋಕಗಳನ್ನು ಉದಾಹರಿಸಬಹುದು.

ಈ ಸಂಘರ್ಷಮಯ ಯುಗದಲ್ಲಿ ಪರಿಗ್ರಹಪರಿಮಾಣದ ಪ್ರಚಾರವು ಅತ್ಯಗತ್ಯ. ಇದರಿಂದಲೇ ಸಂಸಾರದಲ್ಲಿ ಸುಖ ಶಾಂತಿಗಳು ಸ್ಥಾಯಿಯಾಗಿ ನೆಲಸಬಲ್ಲುವು.

ಯದಂಬುಕಣವಾದಾಯ ಪ್ರಾಪ್ತೋಸಿ ಜಲದೋನ್ನತಿಂ।
ತಸ್ಯೋಪರ್ಯಂಬುದೇರ್ಗರ್ಜಾ ಮಲನಸ್ಯೋಚಿತೈವ ತೇ॥

ಇದು ಮುಗಿಲನ್ನು ಕುರಿತ ಅನ್ಯೋಕ್ತಿ. ಮುಗಿಲು ಕಡಲ ಹನಿಗಳನ್ನು ಕೊಂಡೊಯ್ದು ಆ ಕಡಲ ಮೇಲೆಯೇ ನಿಂತು ಗರ್ಜಿಸುತ್ತದೆ. ಮಲಿನವಾದ ಅದಕ್ಕೆ ಅದೇ ಉಚಿತ ಈ ಅನ್ಯೋಕ್ತಿಯನ್ನೇ ಇನ್ನೂ ಸ್ವಲ್ಪ ಬಿಡಿಸಿ ಹೇಳುವುದಾದರೆ ಇನ್ನೂ ಸ್ವಲ್ಪ ವಿಶದವಾಗಬಹುದು. ಅನ್ಯೋಕ್ತಿಯ ಮುಳ್ಳು ಎಲ್ಲಿದೆ ಎಂಬುದು ಚೆನ್ನಾಗಿ ಅರ್ಥವಾದೀತು.

ಜಲಕಣವ ಕೊಂಡೊಯ್ದು ಬಾನಸೇರಿದ ನೀನು
ಹಿರಿದು ಹಿರಿದಾಗುತ್ತೆ ವ್ಯೆಮರೆತು ಓ ಮುಗಿಲೆ
ಉಪಕೃತಿಯ ನೆನೆಯದಯೆ ಕಡಲ ಮೇಲೆಯೆ ನಿಂತು
ಗರ್ಜಿಸುವೆಯೇಕಿಂತು ಸಾಕು, ಸಾಕು.

ಇದೊಂದು ಅನ್ಯೋಕ್ತಿ; ಇದು ಕಡಲನ್ನೇ ಕುರಿತದ್ದು.

ಪಿಯೂಷೇಣ ಸುರಾಃ ಶ್ರೀಯಾ ಮುರರಿಪುಃ ಮರ್ಯಾದಯಾ ಮೇದಿನೀ
ಶಕ್ರಃ ಕಲ್ಪರುಹಾ ಶಶಾಂಕ ಕಲಯಾ ಶ್ರೀಶಂಕರ ಸ್ತೋಷಿತಃ
ಮೈನಾಕಾಹಿ ನಗಾ ನಿಜೋದರ ಗತಾಃ ಸಂಸ್ಥಾನತಃ ಸ್ಥಾಪಿತಾಃ
ತ್ವಚ್ಚೂಲೀಕರಣೇ ಘಟೋದ್ಭವ ಮುನಿಃ ಕೇನಾಪಿ ನೋ ವಾರಿತಃ

ಕಡಲಲ್ಲಿ ಹುಟ್ಟಿದ ಅಮೃತ ಸುರರಿಗೆ, ಹರಿಗೆ ಶ್ರೀ ಮಹಾಲಕ್ಷ್ಮಿ, ಶಕ್ರನಿಗೆ ಕಲ್ಪವೃಕ್ಷ, ಹರನಿಗೆ ಶಶಿಖಂಡ, ದೊರೆತು ಎಲ್ಲರೂ ಸಂತೋಷಗೊಂಡರು. ಭೂಮಿ ಕಡಲಿನಿಂದಲೇ ಮರ್ಯಾದೆಯನ್ನು ತೆಗೆದುಕೊಂಡಳು. ಮೈನಾಕ ಮೊದಲಾದ ಬೆಟ್ಟಗಳೆಲ್ಲ ಕಡಲಲ್ಲಿಯೇ ಆಶ್ರಯಪಡೆದವು. ಆದರೇನು ಅಗಸ್ತ್ಯ ಕಡಲನ್ನೆಲ್ಲ ಒಂದು ಗುಟುಕು ಮಾಡಿ ಆಪೋಶನ ತೆಗೆದುಕೊಂಡಂದು ಇವರಾರೂ ಆ ಮುನಿಯನ್ನು ತಡೆಯಲಿಲ್ಲ. ಇದು ಇಲ್ಲಿಯ ಭಾಗ. ಹಲವರಿಗೆ ಉಪಕಾರಿಯಾಗಿದ್ದವನು ಸಂಕಟಕ್ಕೆ ಸಿಕ್ಕಿದಾಗ ಅವನನ್ನು ರಕ್ಷಿಸಲು ಯಾರೂ ಬರುವುದಿಲ್ಲ ಎಂಬ ಚುಚ್ಚುನುಡಿ ಇಲ್ಲಿ ಇದೆ.

ಜನಪ್ರಿಯವಾದ ಮತ್ತೊಂದು ಅನ್ಯೋಕ್ತಿ:

ರೇ ರೇ ರಾಸಭ, ವಸ್ತ್ರಭಾರವಹನಾತ್ ಕುಗ್ರಾ ಸಮಶ್ನಾಸಿ ಕಿಂ
ರಾಜಶ್ವಾವಸಥಂ ಪ್ರಯಾಹಿ ಚಣಕಾಭ್ಯೂಷಾನ್ ಸುಖಂ ಭಕ್ಷಯ
ಸರ್ವಾನ್ ಪುಚ್ಛವತೋ ಹಯಾ ಇತಿ ವದಂತ್ಯತ್ರಾಧಿ ಕಾರೇಸ್ಥಿತಾಃ
ರಾಜಾ ತೈರುಪದಿಷ್ಟಮೇವ ಮನುತೇ ಸತ್ಯಂ ತಟಸ್ಥಾಃ ಪರೇ.

ಇದಕ್ಕೆ ಶ್ರೀ. ಜಿ. ಪಿ. ರಾಜರತ್ನಂ ಅವರ ಅನುವಾದವನ್ನು ಹೇಳಿದರೆ ಸುಲಭವಾಗಿ ಅರ್ಥವಾಗುತ್ತದೆ.

ಕತ್ತೆ ಕೇಳೈ ವಸ್ತ್ರಭಾರವ । ಹೊತ್ತು ಹೀನಾನ್ನಗಳ ತಿನಲೇ
ಕತ್ತ ರಾಜಾಶ್ವಾವಸಥವನ । ಹತ್ತಿ ಸುಖದಲಿ ಕಡಲೆ ಗುಗ್ಗರಿ ಗಳನೆ ತಿನ್ನುತಿರು ॥
ಅತ್ತಣಧಿಕಾರಿಗಳು ಬಾಲಂ।ಬೆತ್ತುದೆಲ್ಲವು ಕುದುರೆಯೆಂದೇ
ಗೆತ್ತು ನುಡಿವರು ರಾಜನೋ ಅವ। ರಿತ್ತುದೇ ಪರಸತ್ಯವೆಂಬ ತಟಸ್ಥರುಳಿದವರು ॥

ಇಲ್ಲಿ ಪಾತ್ರಾಪಾತ್ರ ಮತ್ತು ಯುಕ್ತಾಯುಕ್ತ ವಿವೇಚನೆ ಇಲ್ಲದೆ ವ್ಯವಹರಿಸುವ ಅಧಿಕಾರಿಗಳಿಗೆ ಒಂದು ಎಚ್ಚರಿಕೆಯಿದೆ.

ಕಪ್ಪೆಯನ್ನು ಕುರಿತು ಈ ಪದ್ಯವನ್ನು ಓದಿರಿ:

ಗಂಗಾದೀನಾಂ ಸಕಲ ಸರಿತಾಂ ಪ್ರಾಪ್ಯತೋಯಂ ಸಮುದ್ರಃ।
ಕಿಂಚಿದ್ಗರ್ವಂ ನಭವತಿ ವಪುರ್ದಿವ್ಯ ರತ್ನಾಕರೋಪಿ ॥
ಏಕೋಭೇಕಃ ಪರಮಮುದಿತಃ ಪ್ರಾಪ್ಯ ಗೋಷ್ಪಾದ ನೀರಂ।
ಕೋಮೇ ಕೋಮೇ ರಟತಿ ಬಹುಧಾ ಸ್ಪರ್ಧಯಾ ವಿಶ್ವ ಮುಚ್ಚೈಃ ॥

ತುಂಬಿದ ಕೊಡ ತುಳುಕುವುದಿಲ್ಲ. ಮಹಾತ್ಮರು ಎಂದಿದ್ದರೂ ಮಹಾತ್ಮರೇ—ಅಲ್ಪನಿಗೆ ಅಲ್ಪೈಶ್ವರ್ಯ ಬಂದರೂ ಅವನಿಗೆ ತಲೆ ನಿಲ್ಲುವುದೇ ಕಷ್ಟ. ಆ ನೀತಿಯೇ ಇಲ್ಲಿಯ ಧ್ವನಿ. ಇದರ ಭಾವಾನುವಾದವನ್ನು ಕೊಟ್ಟಿದೆ.

ಗಂಗಾದಿ ನದನದೀಜಲಗಳಿಂ ತುಂಬಿದರು
ಸಾಗರಂ ಗರ್ವಿಸನು ಜಗದಿ
ಗುಂಡಿನೀರನು ಸೇರಿ ಕಪ್ಪೆಯಿದು ಬೀಗುತುಂ
ಕಿರುಚುವುದು ಲೋಕವೇ ಕಿವುಡಾಗುವಂತೆ.

ವೃಕ್ಷಾನ್ಯೋಕ್ತಿಯೊಂದನ್ನುಕೊಡಬಹುದು; ಎಷ್ಟುಚೆನ್ನಾಗಿದೆ:

ಕಿಂ ಜಾತೋಸಿ ಚತುಷ್ಪಥೇ ಘನತರಂ ಛನ್ನೋಸಿ ಕಿಂ ಛಾಯಯಾ
ಛನ್ನಶ್ಚೇತ್ ಫಲಿತೋಸಿ ಕಿಂ ಫಲಭರೈರಾಢ್ಯೋಸಿ ಕಿಂ ಸನ್ನತಃ
ಹೇ ಸದ್ವೃಕ್ಷ ಸಹಸ್ವ ಸಂಪ್ರತಿ ಸಖೇ ಶಾಖಾಶಿಖಾಕರ್ಷಣ ।
ಕ್ಷೋಭಾಂ ಮೋಟನ ಭಂಜನಾದಿ ಜನತಃ ಸ್ವೈರೇವ ದುಶ್ಚೇಷ್ಟಿತೈಃ ।

ಓ, ಗೆಳೆಯ ಸದ್ವೃಕ್ಷ, ಎಲ್ಲರೂ ತಿರುಗುವ ಈ ಚೌಕದಲ್ಲೇಕೆ ಹುಟ್ಟಿದೆ? ಹುಟ್ಟಿದರೂ ತಪ್ಪಿಲ್ಲ, ದಟ್ಟವಾಗಿ ಬೆಳೆದು ನೆರಳನಿಂದೇಕೆ ಕೂಡಿರುವೆ? ನೆರಳಿದ್ದರೂ ಚಿಂತೆಯಿಲ್ಲ, ಹಣ್ಣನ್ನೇಕೆ ತಳೆದಿರುವೆ? ಹಣ್ಣಿದ್ದರೂ ಇರಲೆಂದರೆ, ಅವುಗಳ ಭಾರ

ದಿಂದ ಬಗ್ಗಿರಲೇಕೆ? ಇದೆಲ್ಲವೂ ನಿನ್ನದೇ ತಪ್ಪು, ಜನ ನಿನ್ನ ಕೊಂಬೆಗಳನ್ನು ಮುರಿಯುತ್ತಾರೆ, ಎಳೆಯುತ್ತಾರೆ ಈ ತೊಂದರೆಗಳನ್ನೆಲ್ಲಾ ಸಹಿಸಿಕೋ.—ಇದು ಈ ಪದ್ಯದ ತಾತ್ಪರ್ಯ. ಸಾಧುಗಳನ್ನು ಎಲ್ಲರೂ ಎಳೆದಾಡುತ್ತಾರೆ. ಆದರೂ ಸಾಧುವು ಸಾಧುವಾಗಿಯೇ ಇರುತ್ತಾನೆ. ಎಂದು ಇಲ್ಲಿ ಧ್ವನಿತವಾಗುತ್ತದೆಯಲ್ಲವೇ?

ಇನ್ನು ನಾನು ಅನುವಾದಿಸಿರುವ ಒಂದೆರಡು ಅನ್ಯೋಕ್ತಿಗಳನ್ನು ಇಲ್ಲಿ ಉದಾಹರಿಸಬಹುದು. ಅವುಗಳಲ್ಲಿರುವ ಧ್ವನಿ ಸುಲಭಗ್ರಾಹ್ಯವಾಗಿರುವುದು.

ಕಾಡಬೇಡನು ಮೂಡಿ ಕಳೆಯುವುದು ಕೆಲಕಾಲ
ಬೇಸರವೆ ಬಿಡು ಚಿಂತೆ ಲೇಸಹುದು ಕೋಗಿಲೆ
ಇಮ್ಮಾವು ತಳಿತಂದು ಅಳಿವಿಂಡು ನುಡಿದಂದು
ಬಂದು ನೀನ್ ನಲಿದಾಡು ಬೇಡವೆನ್ನುವರಾರು?

ರತ್ನಗಳ ರಾಶಿಯೇ ತುಂಬಿಹುದು ನಿನ್ನಲ್ಲಿ
ನಿನ್ನೊಡಲ ನೋಟವೋ ನೀಲಮೇಘೋಪಮವು
ಏನಾದರೇಂ ಜಲಧಿ ಬಾಯಾರಿ ಬಂದವರ
ಬಳಲಿಕೆಯ ಬೇಗೆಯಂ ಕಳೆವೆಯೇನೈ?

ತಲ್ಲಣಸಿ ನಿಲ್ಲದಿರು, ನಡೆಮುಂದೆ, ಓ ಪಾಂಥ!
ಗುಡುಗುದನಿ ಕೇಳ್ದು ನೀಂ ಬೆದರಿದೆಯ ಮರುಳೆ?
ದನಿಯುದುವೆ ಕೇಳಯ್ಯ, ಜಗದ ಕಷ್ಟವ ಕಳೆದು
ವೃಷ್ಟ್ಯನ್ನ ದೊರಕಿಸುವ ಮುಗಿಲ ನಾದ!

ಅನ್ಯೋಕ್ತಿಗಳು ಕನ್ನಡ ಸಾಹಿತ್ಯದಲ್ಲೂ ಅಲ್ಲೊಂದು ಇಲ್ಲೊಂದು ಪ್ರಾಸಂಗಿಕವಾಗಿ ಕಂಡುಬರುತ್ತವೆ. ಕನ್ನಡ ಕವಿಗಳು ಒಕ್ಕಣಿಸಿರುವ ಕುಕವಿನಿಂದೆಗಳೆಲ್ಲಾ ಒಂದು ವಿಧದಲ್ಲಿ ಅನ್ಯೋಕ್ತಿಗಳೇ ಆಗಿವೆ. ಗಾದೆಗಳೂ, ದಾಸರಪದಗಳಲ್ಲಿ ಕೆಲವೂ, ಹಲವು ವಚನಗಳೂ ಇವುಗಳಲ್ಲೆಲ್ಲಾ ಅನ್ಯೋಕ್ತಿಯ ಧ್ವನಿ ಕಂಡಬರುತ್ತವೆ. ಆದರೂ ಕನ್ನಡದಲ್ಲಿ ಅನ್ಯೋಕ್ತಿಸಾಹಿತ್ಯವನ್ನು ಹೆಚ್ಚಾಗಿ ಬೆಳೆಸಿಲ್ಲ. ಬೆಳಸಬೇಕೆಂದು ಸಾಹಿತಿಗಳಲ್ಲಿ ನನ್ನ ಪ್ರಾರ್ಥನೆ. ಒಟ್ಟಿನ ಮೇಲೆ ಅಪ್ರಿಯವಾದ ಸತ್ಯವನ್ನೂ ಬಹುಪ್ರಿಯವಾಗಿ ಜನದ ಕಿವಿಗೆ ಹಾಕಬೇಕೆಂದರೆ ಅನ್ಯೋಕ್ತಿಯಂಥ ಸಾಧನ ಮತ್ತೊಂದಿಲ್ಲವೆಂದು ಹೇಳಬಹುದು.

ಆಸೆಯಲಿ ಬಳಿವಂದ ದುಂಬಿ ಇದನೆಂದಿಗು
ಕಡೆಗಣಿಸಬೇಡಯ್ಯ, ಕರಿರಾಜಕುವರ!
ತಾಳುವರು ತಲೆಯಲ್ಲಿ ದಾನಸುಂದರರಾದ
ದ್ವಿಪಧುರ್ಯರಿದನೆಂದು ಮನ್ನಿಸಯ್ಯ!

ಎರಡು ಉತ್ಕೃಷ್ಟ ವಸ್ತುಗಳು—!

ನಂಬ್ರ 1 ಸ್ಪೆಶಲ್ ಸಂಪಂಗಿ ——ಮತ್ತು—— **ಫ್ಲವರ್ ಕುಸುಮ್**

ಸರಿಸಾಟಿಯಿಲ್ಲದ ಈ ಅಗರಬತ್ತಿಗಳನ್ನೆ ಕೊಂಡುಕೊಳ್ಳಿರಿ.

ಸ್ಟಾಕಿಸ್ಟರು: ಮೆಸರ್ಸ್ ಕುಂಬ್ಳೆ ಕೃಷ್ಣ ಅನಂತ ಪ್ರಭು, ಗೋಳಿಕಟ್ಟೆ ಬಜಾರ, ಮಂಗಳೂರು.
,, ದಾಸ ನಾಯಕ ಎಂಡ್ ಕೋ., ,, ,,
,, ಎಮ್. ಅಚ್ಯುತ ಬಾಳಿಗ, ,, ,,
,, ಹರಿದಾಸ ಭಂಡಾರಕಾರ, ,, ,,
,, ಎಮ್. ಎಸ್. ಎಸ್. ಮಲ್ಯ, ,, ,,
,, ಕೆ. ಅಣ್ಣಪ್ಪ ಶ್ಯಾನಭಾಗ ಎಂಡ್ ಸನ್ಸ್, ಮಾರ್ಕೆಟ್ ರೋಡ್,,
,, ರಂಜಾಳ ನರಸಿಂಹ ಶೆಣೈ, ಕಾರ್ಕಳ.
,, ಯು. ವೆಂಕಟೇಶ ಜೋಗಪ್ಪ ಶ್ಯಾನಭಾಗ ಎಂಡ್ ಸನ್ಸ್, ಉಡುಪಿ.

ತಯಾರಿಸುವವರು: **ನಟರಾಜ ಫ್ಲೋರ್ ಮಿಲ್ಸ್ ಎಂಡ್ ಪರ್ಫ್ಯೂಮರಿ ವರ್ಕ್ಸ್,**
ಸುಲ್ತಾನ ಪೇಟೆ, ಬೆಂಗಳೂರು.

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮಲಬಾರಿನ ಪ್ರತಿನಿಧಿಗಳು: **ಕೆ. ಉಪೇಂದ್ರ ಕಿಣಿ, ಡೊಂಗರಕೇರಿ, ಮಂಗಳೂರು.**

ಮಹಾಜನರ ಮಹಾವಿಚಾರಗಳು

ಲೇ: ಪ್ರೊ। ಕೆ. ಎಸ್. ಸವಣೂರ, ಎಮ್. ಎಸ್. ಸಿ.,
ಕರ್ನಾಟಕ ಕಾಲೇಜ, ಧಾರವಾಡ



ಪ್ರಾಸ್ತಾವಿಕ ಇಂದು ಸಾಪೇಕ್ಷ ಸಿದ್ಧಾಂತವೆಂದು ಜಗತ್ತಿಗೇ ಪರಿಚಿತವಿರುವ ತತ್ವವನ್ನು ತಮ್ಮ ಬುದ್ಧಿ ಪ್ರೌಢಿಮೆಯಿಂದ ಪ್ರತಿಪಾದಿಸಿ ಜಗತ್ತಿನೊಳಗಿನ ವಿಜ್ಞಾನಿಗಳ ಮಾಲಿಕೆಯಲ್ಲಿ ಪದಕದಂತಿರುವ ಆಲ್ಬರ್ಟ ಐನ್‌ಸ್ಟೈನ್‌ರವರ ಹಲವು ವಿಚಾರಗಳನ್ನು ಈ ಲೇಖನದಲ್ಲಿ ಪ್ರಕಟಿಸಲಿದ್ದೇನೆ. ಭೌತ ಶಾಸ್ತ್ರದಲ್ಲಿ ಗಣ್ಯಸ್ಥಾನವನ್ನು ಪಡೆದ ಇವರು ಹಿಟ್ಲರನ ಜರ್ಮನಿಯಿಂದ ಹೊರ ದೂಡಲ್ಪಟ್ಟು, ಇಂದು ಅಮೇರಿಕೆಯಲ್ಲಿ ಇರುವರು. ಹಾಗು ತಮ್ಮ ವಿಜ್ಞಾನದ ಶೋಧಗಳನ್ನಾದರೂ ಅಲ್ಲಿಯೇ ಸಾಗಿಸಿರುವರು. ಇವರು ನೋಬೆಲ್ ಬಹುಮಾನವನ್ನು ದೊರಕಿಸಿದ ಅನೇಕ ಮಹನೀಯರಲ್ಲಿ ಒಬ್ಬರಿದ್ದು, ಇಂದು ನಿಸರ್ಗವು ನಮ್ಮಿಂದ ಬಚ್ಚಿಟ್ಟ ಅಣುಶಕ್ತಿಯ ಗುಟ್ಟನ್ನು ಹೊರಗೆಡಹಲು ಇವರೇ ಕಾರಣರೆಂದು ಹೇಳಿದಲ್ಲಿ, ಇವರ ಪ್ರತಿಭೆಯ ಕಲ್ಪನೆಯು ಎಲ್ಲರಿಗೂ ಸುಲಭವಾಗಿಯೇ ಆಗುವುದು.

ರೋಜರ್ ಬೇಕನ್ ಗ್ಯಾಲಿಲಿಯೊ ಮೊದಲಾದ ಪ್ರತಿಭಾನ್ವಿತರು ಅನುಭವಿಸಿದ ಪಾಡೇ ಇಂದು ಐನ್‌ಸ್ಟೈನ್‌ರವರದಾಗಿದೆ. ಮೊದಲಿನವರು ತಮ್ಮ ನಿಸರ್ಗ ಶೋಧನೆಯ ಕಾರ್ಯಕ್ಕೆ ಅನೇಕ ವರುಷಗಳ ಕಾರಾಗೃಹವಾಸ, ಸುತ್ತಲಿನವರ ಛಲನೆ ಇತ್ಯಾದಿಗಳ ರೂಪದಲ್ಲಿ ದಂಡವನ್ನು ತೆರಬೇಕಾಯಿತು. ನಾಗರಿಕತೆಯಲ್ಲಿ ಮುಂದುವರಿದಿದೆ ಎಂದು ಹೇಳಿಕೊಳ್ಳುವ ಇಂದಿನ ಯುಗದಲ್ಲಿ ಸಹ ದೊಡ್ಡವರ ಛಲನೆಯು ತಪ್ಪಿಲ್ಲ. ಇದಕ್ಕೆ ಐನ್‌ಸ್ಟೈನರವರಾದರೂ ಹೇಗೆ ಅಪವಾದವಾದಾರು? ಇಂದು ತಮ್ಮ ಮನಸ್ಸಿನ ವಿರುದ್ಧವಾಗಿ ರಾಜಕಾರಣದ ಮಡುವಿನಲ್ಲಿ ಎಳೆಯಲ್ಪಟ್ಟ ಇವರ ರೀತಿನೀತಿಗಳು ಹಾಗು ಅಭಿಪ್ರಾಯಗಳು, ಸಲ್ಲದ ರೀತಿಯಲ್ಲಿ ಜಗತ್ತಿನೆದುರು ಇಡಲ್ಪಟ್ಟವೆ. ದಯಾಪೂರ್ಣರಾದ ಇವರು--ತಮ್ಮತಮ್ಮೊಳಗೆ ಸಹಾಯವನ್ನು ಒದಗಿಸಲಿರುವ ಶಾಂತಿಯುತವಾದ ಜಗತ್ತಿನಲ್ಲಿ ಹಾಗು ವಿಜ್ಞಾನದ ಉಚ್ಚಧ್ಯೇಯ ಇವೆರಡರಲ್ಲಿಯೂ, ವಿಶ್ವಾಸವುಳ್ಳವರು. ಈ ಲೇಖನದಲ್ಲಿ ಅವರ ಶೋಧಗಳ ವಿಷಯವನ್ನು ತಿಳಿಸುವ ಗುರಿಯನ್ನು ನಾನು ಇರಿಸಿಲ್ಲ. ಆದರೆ ಜೀವನ ವಿಷಯದಲ್ಲಿ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿಯ ಹಲವುಗಳನ್ನು ಮಾತ್ರ ವಿವರಿಸಲಿದ್ದೇನೆ. ಯಾವನು ತನ್ನ ಹಾಗೂ ಉಳಿದ ಜತೆಗಾರರ ಜೀವನವು ಅರ್ಥಹೀನವೆಂದು ತಿಳಿಯುವನೋ ಅಂತಹ ಮನುಷ್ಯನು ದುರ್ದೈವಿಯು ಅಲ್ಲದೆ ಬದುಕಲು ಸಹ ಅಯೋಗ್ಯನು' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಇವರ ಹಲವು ವಿಚಾರಗಳನ್ನು ತಿಳಿಯುವಾ.

ನಾನು ಕಾಣಲಿರುವ ಜಗತ್ತು: ಮರಣಾಧೀನರಾದ ನಮ್ಮದು ಎಂತಹ ಲೋಕೋತ್ತರ ಹಾಗೂ ವಿಲಕ್ಷಣವಾದ ಸ್ಥಿತಿಯು? ನಮ್ಮಲ್ಲಿಯ ಪ್ರತಿಯೊಬ್ಬನೂ ಇಲ್ಲಿಗೆ ಅಲ್ಪಕಾಲದ ವಸ್ತಿಗಾಗಿ ಬಂದಿದ್ದಾನೆ; ಯಾವ ಕಾರಣಕ್ಕಾಗಿ ಬಂದಿರುವನು ಎಂಬುದು ಅವನಿಗೆ ಗೊತ್ತಿಲ್ಲವಾದರೂ ಹಲವು ವೇಳೆ ಗೊತ್ತಿರುವುದಾಗಿಯೂ ತಿಳಿದಂತೆ ಎನಿಸುವದು. ದೈನಂದಿನದ ಜೀವನದ ದೃಷ್ಟಿಯಿಂದ ವಿಚಾರಮಾಡಿದಲ್ಲಿ ಮೊದಲನೆಯದಾಗಿ ಯಾವ ನಮ್ಮ ಸಂಗಾತಿಗಳ ಪ್ರಸನ್ನಮುದ್ರೆ ಹಾಗು ಕಲ್ಯಾಣ ಇವುಗಳ ಮೇಲೆ ನಮ್ಮ ಸುಖವು ಅವಲಂಬಿಸಿರುವದೋ ಇವರ ಸಲುವಾಗಿ ಮತ್ತು ಆ ಬಳಿಕ ಅಂತಃಕರಣದ ಕಟ್ಟಿನ ಮೂಲಕ ಯಾರ ಭವಿತವ್ಯವು ನಮ್ಮದರೊಡನೆ ತಳಕು ಹಾಕಲ್ಪಟ್ಟದೆಯೋ ಅಂತಹ ನಮಗೆ ಗೊತ್ತಿಲ್ಲದೆ ಉಳಿದ ಜನರ ಸಲುವಾಗಿ--ನಾವು ಬದುಕಿರುವೆವು ಎಂಬುದು, ಮೇಲೆಯೇ ಕಾಣುವದು. ನನ್ನ ಒಳಗಿನ ಹಾಗೂ ಹೊರಗಿನ ಜೀವನವು, ಇಂದು ಬದುಕಿದ ಹಾಗೂ ಮೃತರಾದ ಅನೇಕರ ಶ್ರಮವನ್ನೇ ಅವಲಂಬಿಸಿದೆ ಮತ್ತು ಇಂತಹ ಶ್ರಮದ ಫಲವನ್ನು ಈ ವರೆಗೆ ಯಾವ ಪ್ರಮಾಣದಲ್ಲಿ ಸ್ವೀಕರಿಸಿರುವೆ


ಮತ್ತು ಇನ್ನೂ ಸ್ವೀಕರಿಸಲಿದ್ದೇನೆ. ಅದೇ ಪ್ರಮಾಣದಲ್ಲಿ ಕೊಡಲು, ನಾನಾರಾದರೂ ಪರಿಶ್ರಮಪಡಬೇಕು ಎಂಬುದಾಗಿ ದಿನಾಲು ನೂರಾರು ಬಾರಿಯಾದರೂ ಸ್ಮರಿಸುತ್ತೇನೆ. ಆಡಂಬರ ರಹಿರವಾದ ಜೀವನವು ನನಗೆ ಮೆಚ್ಚಿಗೆಯದಾಗಿದ್ದು, ನನ್ನ ನಿಕಟವರ್ತಿಗಳ ಶ್ರಮದ ಫಲವನ್ನು ಅತಿಯಾಗಿ ಉಪಭೋಗಿಸುವೆನೆಲ್ಲಾ ಎಂಬುದು ನನಗೆ ಪೀಡೆಯನ್ನು ಉಂಟು ಮಾಡುವದು. ವರ್ಗಭೇದವು ನ್ಯಾಯಸಮ್ಮತವಲ್ಲದುದು ಎಂದು ಮತ್ತು ಇದು ಕೊನೆಯ ಹಂತದಲ್ಲಿ ಬಲವನ್ನು ಅವಲಂಭಿಸಿದುದು ಎಂದೂ ನನ್ನ ಅಭಿಪ್ರಾಯವು. ದೈಹಿಕವಾಗಿ ಹಾಗೂ ಮಾನಸಿಕವಾಗಿ ಸರಳ ಜೀವನವೇ ಎಲ್ಲರಿಗೂ ಸೂಕ್ತವಾದುದೆಂದು ನಾನು ತಿಳಿದಿದ್ದೇನೆ.

ತನ್ನ ಜೀವನ ಹಾಗು ಹುಟ್ಟು ಇವುಗಳ ಅರ್ಥವನ್ನು ಭೌತಿಕ ಮಾನದಂಡದಿಂದ ಅಳೆಯುವದು ಅಸಂಬದ್ಧವೆಂದು ನಾನು ತಿಳಿದಿದ್ದೇನೆ; ಆದರೂ ಪ್ರಯತ್ನ ಹಾಗು ತೀರ್ಮಾನಗಳ ಮಾರ್ಗಗಳನ್ನು ನಿರ್ಧರಿಸುವಲ್ಲಿ ಪ್ರತಿಯೊಬ್ಬನಿಗೂ ಹಲವು ಧ್ಯೇಯಗಳು ಇರುವವು. ಈ ದೃಷ್ಟಿಯಲ್ಲಿ–ಸುಸ್ಥಿತಿ ಹಾಗು ಸುಖ–ಇವುಗಳೇ ಕೊನೆಯದಾಗಿ ಸಾಧಿಸತಕ್ಕವುಗಳೆಂದು ನಾನು ಎಂದೂ ತಿಳಿದಿಲ್ಲ. ನನ್ನ ಮಾರ್ಗವನ್ನು ಪ್ರದೀಪ್ತಗೊಳಿಸುವಲ್ಲಿ ಹಾಗು ಜೀವನವನ್ನು ಉತ್ಸಾಹದಿಂದ ಎದುರಿಸುವಲ್ಲಿ ನನಗೆ ಮೇಲಿಂದ ಮೇಲೆ ಕಲಿತನವನ್ನು ಒದಗಿಸಿದ ಧ್ಯೇಯಗಳೆಂದರೆ—ಸತ್ಯ, ಒಳ್ಳೆತನ ಮತ್ತು ಸೌಂದರ್ಯ ಇವುಗಳೇ. ಇದೇ ಅಭಿಪ್ರಾಯದ ಜನರೊಡನೆ ಅನ್ಯೋನ್ಯ ಭಾವವು ಇಲ್ಲದಿದ್ದಲ್ಲಿ, ಧ್ಯೇಯದೊಡನೆ ಏಕನಿಷ್ಠತೆಯು ಇಲ್ಲದಿದ್ದಲ್ಲಿ ಇತ್ಯಾದಿ—ನನಗೆ ನನ್ನ ಜೀವನವೇ ಸಾರರಹಿತವೆಂದು ಎನಿಸಬಹುದಾಗಿತ್ತು. ಮಾನವ ಪ್ರಯತ್ನಕ್ಕೆ ಸಾಮಾನ್ಯ ವಸ್ತುಗಳಾದ—ಆಸ್ತಿ, ತೋರಿಕೆಯ ಕಾರ್ಯಸಿದ್ಧಿ ಹಾಗು ವಿಲಾಸ ವಸ್ತುಗಳು—ಇವುಗಳು, ನನಗೆ ಯಾವಾಗಲೂ ಗರ್ಹಣೀಯವೆಂದೇ ಎನಿಸಿವೆ.

ಸಮಾಜ ಹಾಗು ವ್ಯಕ್ತಿತ್ವ: ನಮ್ಮ ಜೀವನ ಹಾಗು ಪ್ರಯತ್ನ ಇವುಗಳ ರೀತಿಗಳ ಸೂಕ್ಷ್ಮವ ಲೋಕನವನ್ನು ಮಾಡಿದಲ್ಲಿ ನಮ್ಮ ಕೃತಿಗಳು ಹಾಗು ಆಶೆ-ಆಕಾಂಕ್ಷೆಗಳು ಬೇರೆ ಜನರ ಜೀವಿತಗಳೊಡನೆ ತಳಕು ಹಾಕಲ್ಪಟ್ಟರುವವಾಗಿ ಕಂಡುಬರುವವು. ನಮ್ಮ ಸ್ವಭಾವವು ಪರಸ್ಪರ ಪ್ರೇಮಭಾವವುಳ್ಳ ಜೀವಿಗಳದನ್ನು ಹೋಲುವದು. ನಾವು ಬೇರೆಯವರು ಬೆಳೆದ ಆಹಾರವನ್ನು ತಿನ್ನುವೆವು, ಬೇರೆಯವರು ತಯಾರಿಸಿದ ಉಡುಗೆಗಳನ್ನು ತೊಡುವೆವು ಮತ್ತು ಬೇರೆಯವರು ಕಟ್ಟಿದ ಮನೆಗಳಲ್ಲಿ ವಾಸಿಸುವೆವು. ಇಂದು ನಾವು ನಮ್ಮದೆಂದು ಕರೆದುಕೊಳ್ಳುವ ಜ್ಞಾನ ಹಾಗೂ ವಿಶ್ವಾಸಪೂರ್ಣ ಅಭಿಪ್ರಾಯಗಳಲ್ಲಿಯ ಬಹುಭಾಗವು ಬೇರೆಯವರಿಂದ ರಚಿತವಾದ ಭಾಷೆಯ ಮಾಧ್ಯಮದಲ್ಲಿಯೇ ನಮಗೆ ಕೊಡಲ್ಪಟ್ಟಿದೆ. ಭಾಷೆಯ ಸಹಾಯವು ಇಲ್ಲದಿದ್ದಲ್ಲಿ, ನಮ್ಮ ಬುದ್ಧಿಸಾಮರ್ಥ್ಯವು ಅತ್ಯಂತ ಹೀನಸ್ಥಿತಿಯಲ್ಲಿ ಇರುತಿತ್ತು. ಮುಖ್ಯವಾಗಿ ಎಂದರೆ—ನಮ್ಮ ಸಮಾಜದಲ್ಲಿಯ ಇರೋಣವೇ—ಪ್ರಯೋಜನಕಾರಿಯಾಗಿದ್ದು, ನಮಗೆ ಇದೇ ಉಳಿದ ಪಶುಗಳಿಗೆ ಇಲ್ಲದ ಲಾಭವು. ಯಾವನೊಬ್ಬ ಮನುಷ್ಯನನ್ನು ಹುಟ್ಟಿದಾಗಿನಿಂದಲೇ ಬೇರೆಯಾಗಿ ಇಟ್ಟರೆ ಅವನು ತನ ವಿಚಾರ ಹಾಗು ಭಾವನೆಗಳಲ್ಲಿ—ನಮಗೆ ವಿಚಾರಮಾಡಲು ಸಹ ಸಾಧ್ಯವಿಲ್ಲದಷ್ಟು, ಮೂಲನಿವಾಸಿಗಳನ್ನೇ ಹೋಲುವನು. ಇಂದು ಯಾವನೊಬ್ಬ ವ್ಯಕ್ತಿಯು ಮಹತ್ವದವನಾಗಿರಲು ಅವನ ವ್ಯಕ್ತಿತ್ವವು ಮುಖ್ಯವಾದ ಕಾರಣವಿರದೆ—ಅವನನ್ನು ತೊಟ್ಟಿಲದಿಂದ ಗೋರಿಗೆ ಹೋಗುವ ವರೆಗೆ ಮಾರ್ಗದರ್ಶನವನ್ನು ಮಾಡಲಿರುವ ಸಮಾಜದ ಘಟಕನಾಗಿ ಅವನು ಇರುವುದೇ ಕಾರಣವು.

ಇಂದು ನಾವು ಎಂತಹ ವೇಳೆಯಲ್ಲಿ ಬದುಕಿರುವೆವು ಎಂಬುದನ್ನಷ್ಟು ತಿಳಿಯುವ ಮತ್ತು ಸಮಾಜ ಹಾಗು ವ್ಯಕ್ತಿಗಳಾದರೂ ಹೇಗೆ ಸಾಗಿರುವರು ಎಂಬುದನ್ನೂ ನೋಡುವಾ. ನಾಗರಿಕತೆಯಲ್ಲಿ ಮುಂದುವರಿದ ರಾಷ್ಟ್ರಗಳಲ್ಲಿಯ ಇಂದಿನ ಜನಸಂಖ್ಯೆಯು, ಹಳೆಯ ಕಾಲದ ಅಲ್ಲಿಯ ಜನಸಂಖ್ಯೆಯೊಡನೆ ತುಲನೆಮಾಡಿದಲ್ಲಿ ಹೆಚ್ಚಾಗಿರುವದೆಂದು ಕಂಡುಬರುವದು. ನೂರು ವರುಷಗಳಾಚೆಯ ಯುರೋಪಕ್ಕಿಂತ ಇಂದಿನ ಯುರೋಪದ ಜನಸಂಖ್ಯೆಯು ಮೂರು ಮಡಿ ಹೆಚ್ಚಾಗಿರುವದಾದರೂ, ದೊಡ್ಡ ಜನರ ಸಂಖ್ಯೆಯು ಮಾತ್ರ ಅತಿಯಾಗಿ ಕಡಿಮೆಯಾಗಿದೆ. ತಮ್ಮ ನಿರ್ಮಾಪಕ ಶಕ್ತಿಯ ಸಾಧನೆಗಳ ಮೂಲಕ, ಹಲವೇ ವ್ಯಕ್ತಿಗಳು ಮಾತ್ರ ಗಣ್ಯರೆಂದೇ ಎಣಿಸಲ್ಪಡಲಿದ್ದಾರೆ. ವೈಜ್ಞಾನಿಕ ಹಾಗು ಔದ್ಯೋಗಿಕ ಕ್ಷೇತ್ರಗಳಲ್ಲಿ, ವ್ಯಕ್ತಿಗಳ ಸ್ಥಳಗಳನ್ನು ಸಂಸ್ಥೆಗಳು ಆಕ್ರಮಿಸತೊಡಗಿದೆ.

ಗಣ್ಯವ್ಯಕ್ತಿಗಳ ಕೊರತೆಯು ಕಲೆಯ ವಿಭಾಗದಲ್ಲಿ ಅತಿಯಾಗಿ ಎನಿಸತೊಡಗಿದೆ. ಚಿತ್ರಕಲೆ ಹಾಗು ಸಂಗೀತ—ವಿದ್ಯೆಗಳು ಅವನತ ಸ್ಥಿತಿಗೆ ಇಳಿದಿವೆ. ರಾಜಕಾರಣದಲ್ಲಿ ಸಹ ಮುಂದಾಳುಗಳ ಕೊರತೆಯು ಎನಿಸತೊಡಗಿದ್ದು, ನಾಗರಿಕರ ಸ್ವಾತಂತ್ರ್ಯದ ಕೆಚ್ಚು ಹಾಗೂ ನ್ಯಾಯಬುದ್ಧಿ ಇವುಗಳಾದರೂ ಹೆಚ್ಚಾಗಿ ಇಳಿಮುಖವಾಗತೊಡಗಿವೆ. ಇಂತಹ ಸ್ವಾತಂತ್ರ್ಯವನ್ನು ಹಿನ್ನೆಲೆಯಲ್ಲಿ ಇರಿಸಿ ಕಾರ್ಯಮಾಡಲಿರುವ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯು ಹೊಯ್ದಾಡತೊಡಗಿದ್ದು, ಸರ್ವಾಧಿಕಾರಿತ್ವವು ತಲೆದೋರಹತ್ತಿದೆ ಹಾಗೂ ಇಂತಹ ಪದ್ಧತಿಯು ಸ್ಥೈರಿಸಲ್ಪಡತೊಡಗಿದೆ. ಹಲವು ನಿರುಪಯೋಗಿ ಗುಂಪುಗಳ ಧ್ಯೇಯಗಳನ್ನು ಸಾಧಿಸಲೋಸುಗ, ಕೇವಲ ಎರಡೇ ವಾರಗಳ ಅವಧಿಯಲ್ಲಿ—ವೃತ್ತಪತ್ರಿಕೆಗಳ ಮುಖಾಂತರ ಕುರಿಗಳ ಸ್ವಭಾವದ ಜನತೆಯನ್ನು ರೊಚ್ಚಿಗೆಬ್ಬಿಸಿ, ಸಮವಸ್ತ್ರವನ್ನು ಧರಿಸುವಂತೆ, ಮಾಡಿಕೊಳ್ಳಲು ಹಾಗೂ ಸಾಯಲು ತಯಾರಾ



ಅಣುಶಕ್ತಿಯ ಗುಟ್ಟನ್ನು ರಟ್ಟುಮಾಡಿದ ವಿಜ್ಞಾನ ಚಕ್ರವರ್ತಿ ಆಲ್ಬರ್ಟ ಐನ್‌ಸ್ಟೈನ್.

ಗುವಂತೆ ಮಾಡಬಹುದು. ಇಂದು ಮುಂದುವರಿದ ಮಾನವ ಜನಾಂಗವು ಆತ್ಮಗೌರವಕ್ಕೆ ಕುಂದು ತರುವಂತಹ ಒಂದು ರೋಗದಿಂದ ಬಳಲಲಿದೆ; ಒತ್ತಾಯದ ಸೈನ್ಯಸೇವೆಯೇ ಇಂತಹ ಹೀನಾಯ ರೋಗಲಕ್ಷಣವೆಂದು ನಾನು ತಿಳಿದಿದ್ದೇನೆ. ಈ ಕಾರಣದಿಂದಾಗಿ ನಮ್ಮ ನಾಗರಿಕತೆಯು ರಾಹುಗ್ರಸ್ತವಾಗಲಿದೆ ಎಂದು ಭವಿಷ್ಯನುಡಿಯುವ ಕಾಲಜ್ಞಾನಿಗಳಿಗೆ ಇಂದು ಕೊರತೆಯು ಮಾತ್ರ ಇಲ್ಲವೆಂಬುದರಲ್ಲಿ ಏನೂ ಆಶ್ಚರ್ಯವೆನಿಸದು. ಹೀಗೆ ಹೇಳುವ ನಿರಾಶಾವಾದಿಯು ಮಾತ್ರ ನಾನಲ್ಲ; ಶುಭಕಾಲವು ಬರಲಿದೆ ಎಂಬುದರಲ್ಲಿ ನನಗೆ ನಂಬಿಗೆ ಇದೆ ಮತ್ತು ಈ ನನ್ನ ನಂಬಿಗೆಯ ಕಾರಣಗಳನ್ನಾದರೂ ಸ್ವಲ್ಪದರಲ್ಲಿಯೇ ವಿವರಿಸುವೆ.

ಉದ್ಯಮ ಹಾಗು ಯಂತ್ರ ಇವುಗಳ ಪ್ರಗತಿಯು ಜೀವನದ ಹೋರಾಟವನ್ನು ಹೆಚ್ಚು ತೀಕ್ಷ್ಣಗೊಳಿಸಿದೆ ಮತ್ತು ಇದು ವ್ಯಕ್ತಿಯ ಸ್ವತಂತ್ರವಾದ ಬೆಳವಣಿಗೆಗೆ ಹಾನಿಕರವಾಗಿ ಪರಿಣಮಿಸಿದೆ ಎಂಬುದೇ— ಇಂದಿನ ಅವನತಿಯ ಲಕ್ಷಣಗಳನ್ನು ತಿಳಿಹೇಳುವ ಕಾರಣವೆಂದು ನನ್ನ ಅಭಿಪ್ರಾಯವು. ಸಮಾಜದ ಅವಶ್ಯಕತೆಗಳ ವಿಷಯದಲ್ಲಿ—ಯಾಂತ್ರಿಕ ಬೆಳವಣಿಗೆ ಮೂಲಕ, ವ್ಯಕ್ತಿಯು ಕಡಿಮೆ ದುಡಿಯಬೇಕಾಗುವದು. ಇಂದು ಪೂರ್ವಭಾವಿ ಯೋಜನೆಯನ್ವಯ ದುಡಿಮೆಯ ಹಂಚಿಕೆಯನ್ನು ಮಾಡುವದು ಅತ್ಯಗತ್ಯವಾಗಿದ್ದು ಇಂತಹ ಹಂಚಿಕೆಯೇ ವ್ಯಕ್ತಿಯ ಪ್ರಾಪಂಚಿಕ ಭದ್ರತೆಯಲ್ಲಿ ಪರಿಣಮಿಸುವದು. ಇಂತಹ ಭದ್ರತೆ, ಯಂತ್ರಗಳ ಮೂಲಕ ಉಳಿತಾಯವಾದ ವೇಳೆ ಹಾಗು ವ್ಯಕ್ತಿಯ ಬಲ ಇವೆಲ್ಲವುಗಳು ಅವನ ಹೆಚ್ಚಿನ ಪ್ರಗತಿಗೆ ಕಾರಣವಾಗಬಹುದಾಗಿವೆ. ಈ ಪ್ರಕಾರವಾಗಿ ಸಮಾಜಕ್ಕೆ ಕಳೆದುಹೋದ ಸ್ವಾಸ್ಥ್ಯವು ಲಭಿಸಬಹುದಾಗಿದೆ; ಮತ್ತು ಭವಿಷ್ಯಕಾಲದ ಇತಿಹಾಸಕಾರರು, ಇಂದಿನ ಸಮಾಜವು ಬಳಲರಿರುವ ರೋಗದ ಲಕ್ಷಣವನ್ನು— ಮಹತ್ವಾಕಾಂಕ್ಷೆಯಿಂದ ಮುಂದುವರಿಯಬೇಕೆನ್ನುವ ಜಾತಿಯ ಶೈಶವಾವಸ್ಥೆಯ ಬಳಲಿಕೆಗಳೆಂದೂ ಮತ್ತು ಇಂತಹ ಬಳಲಿಕೆಗಳು ತ್ವರಿತಗತಿಯಿಂದ ಮುನ್ನುಗ್ಗಲಿರುವ ನಾಗರಿಕತೆಯ ಮೂಲಕವೇ ಎಂದೂ-ಹೀಗೆ ವರ್ಣಿಸುವರಾಗಿ ಆಶಿಸೋಣ.

ಸಂಪತ್ತನ್ನು ಕುರಿತು: ಹಣವನ್ನೇ ನಿಮಿತ್ತವಾಗಿರಿಸಿ ದುಡಿಯಲಿರುವ ಅತ್ಯಂತ ಉತ್ಸಾಹಿ ಕಾರ್ಯಕರ್ತನಿಂದ ಸಹ, ಮಾನವ ಜಾತಿಯನ್ನು ಮುಂದುವರಿಸಲು ಸಾಧ್ಯವಾಗದು. ಉನ್ನತ ಹಾಗು ಪವಿತ್ರ ಗುಣಗಳ ನಿದರ್ಶನವೇ ಉಚ್ಚ ತರದ ವಿಚಾರ ಹಾಗೂ ಮಹಾಕಾರ್ಯಗಳಲ್ಲಿ ಪರಿಣಮಿಸುವದು. ಹಣವು ಸ್ವಾರ್ಥಕ್ಕೇ ರುಚಿಸುವುದಲ್ಲದೆ, ಯಾವಾಗಲೂ ಹಣವಂತರನ್ನು ಅದರ ದುರುಪಯೋಗಕ್ಕೇ ಎಳೆಯುವುದು. ಮೊಸಿಸ್, ಜೀಜಸ್ ಅಥವಾ ಗಾಂಧೀಜಿ ಇವರು ಹಣದ ಚೀಲಗಳಿಂದ ಸಜ್ಜಾಗಿದ್ದರೆಂದು ಯಾರಾದರೂ ಭಾವಿಸಬಹುದೋ?


ವಿದ್ಯಾರ್ಥಿಗಳಿಗೆ: ನಿರ್ಮಿತ ಹಾಗು ಜ್ಞಾನ ಇವುಗಳ ವಿಷಯದಲ್ಲಿ ಆನಂದವನ್ನು ಜಾಗ್ರತಗೊಳಿಸುವುದೇ ಗುರುವಿನ ಮುಖ್ಯ ಕಲಾಕೌಶಲ್ಯವು.

ನೀವೆಲ್ಲರೂ ಸಾಲೆಗಳಲ್ಲಿ ಕಲಿಯಲಿರುವ ಸೋಜಿಗದ ಸಂಗತಿಗಳು, ಉತ್ಸಾಹಪರ ಹಾಗು ಅವಿಶ್ರಾಂತ ಶ್ರಮದಿಂದ ಎಲ್ಲ ರಾಷ್ಟ್ರಗಳಲ್ಲಿಯೂ—ಅನೇಕ ಪೀಳಿಗೆಗಳಲ್ಲಿ—ಕಲೆ ಹಾಕಿದ ದುಡಿತದ ಫಲಗಳು. ಇವೆಲ್ಲವುಗಳನ್ನು ಪಿತ್ರಾರ್ಜಿತ ಸೊತ್ತಿನಂತೆ ನೀವು ಸ್ವಾಗತಿಸಿ ಸ್ವೀಕರಿಸಿ, ಇವುಗಳನ್ನು ಸನ್ಮಾನಿಸಿರಿ, ಇವುಗಳಿಗೆ ಭರತಿಹಾಕಿರಿ ಮತ್ತು ಮುಂದೆ ಪ್ರಾಮಾಣಿಕ ಬುದ್ಧಿಯಿಂದ ನಿಮ್ಮ ನಿಮ್ಮ ಮಕ್ಕಳಿಗೆ ಒಪ್ಪಿಸಿರಿ. ಈ ಪ್ರಕಾರವಾಗಿ ನಾವು ಒಟ್ಟಿನಲ್ಲಿ ನಿರ್ಮಿಸಲಿರುವ ಶಾಶ್ವತ ವಸ್ತುಗಳಿಂದಾಗಿಯೇ ಮರ್ತ್ಯನು ಅಮರತ್ವವನ್ನು ಹೊಂದುವನು.

ಈ ಮಾತನ್ನು ನೀವು ಸದಾಕಾಲದಲ್ಲಿ ಲಕ್ಷ್ಯದಲ್ಲಿರಿಸಿದರೆ, ನಿಮಗೆ ಜೀವನ ಹಾಗು ದುಡಿಮೆ ಇವುಗಳ ನಿಜವಾದ ಅರ್ಥವಾಗುವದು ಮತ್ತು ಭಿನ್ನ ಜನಾಂಗಗಳು ಹಾಗು ಯುಗಗಳು ಇವುಗಳನ್ನು ಹೇಗೆ ಕಾಣಬೇಕು ಎಂಬ ವಿಷಯದಲ್ಲಿ ನಿಜವಾದ ಮನೋಭಾವವು ಹುಟ್ಟುವದು.

—ಇದುವೇ ಮಹಾಜನರ ಮಹಾವಿಚಾರಗಳ ಮಾದರಿಯು.

ಆಲ್ಬರ್ಟ ಐನ್‌ಸ್ಟೈನ್‌ರವರು ಬರೆದ ‘The world as I see it’ ಎಂಬ ಪುಸ್ತಕದ ಆಧಾರದಿಂದ.



THIS YEAR!

Always the current year is ours!
Therefore we Say "This Year" !!

No day is bad, and all Years are Good,-
IF YOU THINK BEFORE YOU ACT!!

THIS YEAR—We promise you something Novel, Something Interesting—In sarees of quality—At prices that defy competition.

THIS YEAR—We have toiled hard to get you the latest and best in the line of cloth!

THIS YEAR— We begin with confidence and satisfaction, because we have served you efficiently in the past,—and are in a position to please you more with our ample new stocks!

THIS YEAR—We are sure, the weddings at yours will be more gayous—because of the sparkling sarees bought at us.

WE JUST REQUEST YOU TO VISIT US,
WE DO NOT COMPEL YOU TO BUY

BECAUSE

WE KNOW YOU'LL BUY THEM WITH
PLEASURE WHEN ONCE YOU SEE THEM.

SUJIRKAR'S FASHION HOUSE

Ballal Mahal - Hampankatta, MANGALORE.

HAMPANK

ಗಾಂಡೀವದ ಮಹತ್ವ

[ಲೇಖಕರು: ಶ್ರೀ ಶ್ರೀನಿವಾಸರಾವ್, ಕದಿರಿ.]

(ಶ್ರೀ ಕೃಷ್ಣ ಪರಮಾತ್ಮನ ನಿಯಮದಂತೆ ಹದಿನಾರು ದಿನದ ಭಾರತ ಯುದ್ಧವು ಕಳೆದುಹೋಗಿದೆ. ಕರ್ಣನ ದಿವ್ಯಾಸ್ತ್ರ ಪ್ರಯೋಗದಿಂದ ಜರ್ಜರಿತ ದೇಹದಿಂದ ಧರೆಗೊರಗಿದ್ದ ಧರ್ಮರಾಯನನ್ನು ಕುರುಕುಲೇಶನ ಸ್ವಾಧೀನಪಡಿಸುವುದಕ್ಕಾಗಿ ಎಳೆದೊಯ್ದಿದ್ದಾರೆ. ಪಾಂಡವರ ಶಿಬಿರವು ನಿಸ್ಸಹಾಯಕವಾಗಿದೆ. ಧನಂಜಯನು ಪಾತಾಳಲೋಕದಲ್ಲಿ ಸಮಸಪ್ತಕರೊಡನೆ ಯುದ್ಧದಲ್ಲಿ ತೊಡಗಿದ್ದಾನೆ. ಬಾಹುಬಲಿ ಭೀಮನ ಹೊರತು ಧರ್ಮದ ಕಡೆ ಯಾರೂ ಇರಲಿಲ್ಲ.)

ನಡುಗುವವಯವಗಳಿಂದ ಚರನೊಬ್ಬನು ಪ್ರವೇಶಿಸಿ ಭೀಮಸೇನನ ಕಾಲ್ಗೆರಗಿ ನುಡಿಯುತ್ತಾನೆ,—

ಚರ—ಹದಿನಾರು ದಿನ ಕೋಳುಗುಳಂ ನಡೆದರಿದುತನಕ
ಧರ್ಮದೇವನ ದೆಸೆಯು ಪಿಂತೆಸೆಯದಿರೆ ದೇವ;
ಉಸುರಲೆನ್ನಳವಲ್ಲ, ಕರ್ಣ ಸಾಹಸಮಿಂದು!!

ಭೀಮಸೇನ—ಆರಿವನು? ಚರನೆಮ್ಮ! ಏಕಿಂತು ನಡುಗುತ್ತ
ನುಡಿಯುತಿಹೆ! ಧರ್ಮದೇವನಗುಡಿಗೆ ನಡುಕಮಿಂ-
ದನ್ನೆಗಂ ಬಂದಿಲ್ಲ. ನೀನಿಂದು ನಡುಗುತ್ತ
ನುಡಿಯಲಾರದೆ ನುಡಿವೆ! ಸೊಲ್ಲಿಸೆಲೆ ಬಂದೆಡರ.

ಚರ—ಕುರುಕುಲದ ಸಾಹಸಿಯು,—

ಭೀಮ—ಬಲ್ಲೆನದ. ಮಗುಳೊಮ್ಮೆ
ಸಾಹಸಪದವನುಚ್ಚರಿಸದಿರ್—ಪೇಳ್ವುದಂ
ಪೇಳೆನ್ನ ಸಮ್ಮುಖದಿ.

ಚರ—ಕರ್ಣ ತಾ, ಧರ್ಮದೇ-.
ವನನಸ್ತ್ರ ನಿಚಯದಿಂ ಹಿಡಿದೆಳೆದು ಕುರುಕುಲ-
ಕ್ಕೆಳೆದೊಯ್ದು—ಕೆಡಹುತಿಹ—ಪೇಳಲದ—

(ಭೀಮನ ಅಸ್ತವ್ಯಸ್ತ ವದನಾಕಾಶವು ಕಾರ್ಮೋಡಗಳಿಂದ ತುಂಬಿತು. ವಿಷಾದಮಯ ಪಾಳಯವು ಭೀಮನ ಹುಂಕಾರದಿಂದ ಬಿರಿಯಿತು. ಚರನಲ್ಲಿ ನಿಂದಿರದೆ ಮಾಯವಾದನು.)

ಭೀಮ—ನಡೆಯಿರೈ ರಾಹುತರು,—ಕೌರವನ ಕಾರಿರುಳ
ಹರಿದೆಸೆಯೆ ಮೆರೆವೆಮ್ಮ ಕಿರಣ ಚೂರ್ಣಗಳು!! ಪರ-
ಮಾತ್ಮನಿಂಗಿತದ ಹದಿನೆಂಟು ದಿನದಾಹವಂ
ಹದಿನಾರರೊಳೆ ತೀರ್ಚುವೆನು! ನೋಳ್ಪೆ!! ಈ ಹಗಲ-
ನೇರಿರ್ದ ಗಧೆಗಿಂದು ಹಬ್ಬದೂಟವು! ಬದುಕು-
ವರು ಬದುಕಿರಲಿ! ಅಣ್ಣನಯ್ಯನೊಳಿಗವ ನಾ-
ನೇ ಕೊಂಬೆ! ಎನ್ನ ಗದೆಯೇಕಾಂಗ ವಿಜಯಿಯೆಂ-
ದೆಸಗುಪೆಂ! ದೇವಂಗಿದೇ ಪ್ರಣಾಮಂಗಳುಂ!!

(ಎಂದು ಗಧಾದಾರಿ ಭೀಮನು ಕೌರವ ಸೇನಾಶರಧಿಯಲ್ಲಿ ದುಮ್ಮಿಕ್ಕಿದನು. ಇದಿರಿಗಿದ್ದ ರಥಾರೋಹಿ ಕರ್ಣನು ಇದನ್ನು ನೋಡಿದನು.)

ಕರ್ಣ—ಆರಯ್ಯ! ಸಾರಥಿಯೆ! ನೋಡಿದೆಯ? ಸಮ್ಮುಖದಿ
ಪ್ರಳಯ ತಾಂಡವನೆಸಗಿ ತುಂಬಿದೆದೆ ಅಟ್ಟ ಹಾ-
ಸಂ ಬೀರಿ ಬರುತಿರ್ಪ ವೈರಿವೀರಂ? ಆರ-
ವಂ ಪೇಳೆನಗೆ; ಈ ವರೂಥಮಂ ಅವನಿದಿರಿ-
ಗಡ್ಡೈಸಿ ನಿಲಿಸಯ್ಯ! ತಡವೇಕೆ? ಎಮ್ಮ ಸೈ-
ನಿಕವದೋ ಭಯದಿಂದ ಕಂಗೆಟ್ಟು ಚದರಿಹುದು!
ಸಾರಥಿಯೆ! ತಡವೇಕೆ?

ಶಲ್ಯ—ಏಂ ನುಡಿವೆ? ಕೊಳುಗುಳದ
ಕೂರ್ಮೆಯಿಂ ಪೆರ್ಚಿರ್ದ ನಿನ್ನೆದೆಯು ಕಾಲಕಾ-
ಲಕೆ ತಕ್ಕ ಓಲಗವನೊಪ್ಪದದು! ಆ ಮಹಾ
ವೀರನವನಾರೆಂದು ತಿಳಿದಿರುವೆ?

ಕರ್ಣ—ಸಾರಥಿಯೆ?
ಸಾರಥಿಯು ನೀನೈಸೆ; ನುಡಿದೆನ್ನ ಅಪ್ಪಣೆಯ
ಪಾಲಿಕುಂವೇಳ್ಕುಮಲ್ಲದೆ ಮಾತ ನುಡಿಯದಿರು;
ವೈರಿಯುಂ, ವೀರಂ ಮಹಾವೀರನೆಂದೆನಗೆ
ನುಡಿನುಡಿದು ಹೊಗಳುವಂ ಹೇಡಿಯೈ.

ಶಲ್ಯ—ಏ ನೆನಲಿ;
ಕುರುಕುಲೇಶಗೆ ನಾನು ನಿನ್ನಲ್ಲಿ ಸಾರಥ್ಯ-

ವನ್ನೊಪ್ಪಿ ಬಂದುದತಿ ತಿಳಿಗೇಡು; ಆ ವೀರ-
ನಾರೆಂದು ತಿಳಿವನಿತು ತಾಳ್ಮೆ ನಿನ್ನಂತರವ-
ನುಳಿದಿಹುದು! ಅವನಿದಿರು ರಥವನ್ನು ಹಾರಿಸೆಂ-
ದುಸುರುತಿಹೆ! ಭೀಮನಾತಂ! ಭೀಮ! ಕಲಿಭೀಮ!!

ಕರ್ಣ—ನುಡಿಯೊಳೇ ಇನಿತಿನಿತು ಕಾಲಮಂ ಕಳೆದೆನ್ನ
ಕಲ್ಪನೆಯ ಕೆಡಿಸುತಿಹೆ! ಭೀಮ ನಾಂ ತಿಳಿದಿಲ್ಲ-
ವೆಂದೆಯೇಂ? ಈ ದಿನಂ, ಪೂಜ್ಯಗುರು ಪರಶುರಾ-
ಮಂ ತನಗೆ ತನ್ನಸ್ತ್ರ ಫಲಿಸಲೆಂದೊಲಿದಿತ್ತ
ದಿನವೈಸೆ! ಆರಾದೊಡೇನವನ ಸೊಕ್ಕಿಂದು
ಮುರಿವೆನಾಂ; ಕರ್ಣಾಸ್ತ್ರಮಯಮೆಂದು ತೋರ್ಪನೀ
ರಣಭೂಮಿ! ನೋಡದರ ಮಹಿಮೆಯಂ! ಮತ್ತೆ ನುಡಿ.

ಶಲ್ಯ—ನಿನ್ನಿಚ್ಛೆಗಡ್ಡೈಸಿ ಬರಲೇಕೆ? ಮುನ್ನ ಬಹ
ತೊಡರ ನಾನು ಸುರಿದೆನು; ನಿನಗದು ಕಹಿಯಾಯ್ತು;
ಪ್ರತ್ಯಕ್ಷ ನೀನಿಂದು ನೋಡದನು. ಭೀಮನವ.

(ಎನಲು ಕ್ಷಣಾರ್ಧದಲ್ಲಿ ಕರ್ಣ ವರೂಥವು ಭೀಮನ ಸಮ್ಮುಖವಾಯ್ತು. ಕರ್ಣನು ಒಂದೇ ಸಮನೆ ಭೀಮನ ಮೇಲೆ ಶಸ್ತ್ರದ ಜಡಿಮಳೆಯನ್ನು ಸುರಿದನು. ದಿವ್ಯಾಸ್ತ್ರ ಶಕ್ತಿಯನ್ನು ನೋಡಿ ಮೆಚ್ಚಿದನು ಶಲ್ಯನು.)

ಶಲ್ಯ—ಕರ್ಣ! ನಿನ್ನಸ್ತ್ರ ಶಕ್ತಿಯನು ಕಂಡೆನ್ನ ಮನ
ವಿಂದು ಸಂತಸದಿ ಕೊನೆಯುತಿದೆ, ಕರಚಳಕದಲಿ
ಅರಿಸೇನೆ ಕಂಗೆಟ್ಟು ಚದರಿಹುದು! ಭೀಮನವ
ಬರುಹಸ್ತ್ರಗಳನಿರಿಯೆ ತೊಳಲುತ್ತ ನಿಂದಿಹನು!
ನೀನಲ್ತು ಸಾಹಸಿಯು! ಕರಯುಗಲದಿಂ ನಿನ್ನ
ಕಣೆಗಳನ್ನೊಂದೊಂದೆ ಮುರಿದವನು ಮಗುಳೆಸೆಯು-
ತಿಹನಲ್ಲಿ! ನೋಡಯ್ಯ, ನೋಡವನ ಪರಿಯನಿತು.

ಕರ್ಣ—ಏನೆಂದೆ! ಕುಲಗುರುಂ, ಸಾಕ್ಷಾತು ಭಾರ್ಗವಂ
ಸಹಮೆನ್ನ ಶಕ್ತಿಯನು ಮೆಚ್ಚಿಹನು! ಈ ಭೀಮ,
ಅರ್ಜುನಂ, ಮಗುಳುಳಿದ ಅನುಜರುಂ, ಇವರೇನು?
ಕಲಿಗಳೇ? ನೋಡಸ್ತ್ರ ಮಹಿಮೆಯಂ ಇನ್ನೊಮ್ಮೆ!

ಶಲ್ಯ—ಭಲ! ಭಲಾ! ಶಕ್ತಿಯುತನೈಸೆ ನೀಂ! ಇದು ತನಕ
ನಿನ್ನೊಡನೆ ಬೆರೆವುದಕೆ ಎಡೆಯಿಲ್ಲ! ಇಂದಾನು
ಮನಗಂಡೆ; ಬಿಡುಶಸ್ತ್ರ ಭೀಮನೆಲ್ಲಂ ಕಡಿದು
ಮಗುಳೆಸೆವ ಕಣೆಗಳನು ಖಂಡಿಸುತ ಪ್ರತಿ ಶರವ-
ನಿರದೆಸೆಯು; ಕಣ್ತುಂಬ ನೋಡಿನಾಂ ದಣಿವೆನೈ.

(ಈ ಮಾತುಗಳಿಂದ ಉಬ್ಬಿದ ಕರ್ಣನು ಸರ್ವಶಕ್ತಿಯನ್ನೂ ತೋರಿ ಪ್ರಯೋಗಿಸಿದ ಕಣೆಗಳು ಭೀಮನನ್ನು ನಾಲ್ದೆಸೆಗಳಿಂದಲೂ ಮುಸುಕಿ ಕಂಗೆಡಿಸಿದವು! ರೋಷಭೀಷಣನಾದ ಭೀಮನು ಎಷ್ಟು ಶಕ್ತಿಯಿಂದ ಅವುಗಳನ್ನು ಖಂಡಿಸಿದರೂ ಮತ್ತೂ ಬರುತಿದ್ದುವು. ಎಲ್ಲೆಡೆಯೂ ಕರ್ಣಾಸ್ತ್ರಮಯವಾಯ್ತು! ಪ್ರಳಯ ಸ್ವರೂಪನಾಗಿ ಭೀಮನು, ಖಡ್ಗಧಾರಿಯಾಗಿ ತನ್ನ ರಥದಿಂದ ಕರ್ಣನ ರಥಕ್ಕೆ ಹಾರಿ ಆತನ ಜುಟ್ಟನ್ನೆಳೆದು ಶಿರಶ್ಛೇದನ ಮಾಡುವಲ್ಲಿ ತಡೆದು.)

ಶಲ್ಯ—ತಡೆ ಭೀಮ! ಕೊಲ್ಲದಿರು; ದಯೆದೋರು;-ಇವನಲ್ತೆ
ಕುರುಕುಲೇಶನ ಪ್ರೇಮದಾ ಮಿತ್ರ! ಅವನಿಗಿರು-
ವೊಂದಾಸೆಯಾ ಕೊನೆಯು! ನೀನವನ ಕೊಲ್ಲದಿರು;—
ಪರಮ ಸಾಹಸಿ ನೀನು.

ಭೀಮ—ಏಕೆನ್ನ ತಡೆವೆ ನೀಂ?
ಕುನ್ನಿಯಿದು ಉಳಿದರೇನಳಿದರೇಂ? ತನ್ನಸ್ತ್ರ
ದಿವ್ಯವೆಂದೆನ್ನನಿಂದಿವನಿಂತು ಚುರ್ಚಿದನು.
ತಡೆಯದಿರು, ದಯೆಯೇಕೆ? ಸಾಕಿವನ ಬಾಳಿನಿತು!

ಶಲ್ಯ—ಕೊಲ್ಲದಿರು; ಕಾಲ್ಗೆರಗಿ ಶರಣೆಂಬ ನರನ ನೀ
ಕೊಂದೇಕೆ ಕೆಡಬೇಕು? ಬೇಡುವೆನು ಬಿಟ್ಟುಬಿಡು;
ತಮ್ಮನಾ ಶಪಥವನು ಭಂಗಿಸುವ ಬಗೆ ನಿನಗೆ
ಬೇಡೆಂಬೆ! ಬಿಟ್ಟುಬಿಡು! ಸಾಹಸಿಯು ನೀನಲ್ತೆ!

ಭೀಮ—ಬದುಕಿರಲಿ ನಾಯಿಯೊಲು:-ಇವನಸ್ತ್ರ ಮಹಿಮೆಯನು
ಮೆರೆಸಲೆನ್ನನುಜನೊಳು; ಕುನ್ನಿಯೇ, ತೊಲಗು ನೀ;
ತೊಲಗೆಲವೊ! ನಡೆ;—ಎನ್ನ ಮಾವನಂ ಮನ್ನಿಸಿದೆ

ಶಲ್ಯ—ಕಾರಣಕೆ ಕೋಪಿಯೂ ದಯವಂತನಾಗುವನು.

(ಎನಲು ತೆರೆ ಬೀಳುವುದು.)

ದೃಶ್ಯ ೨.

(ಪಾಂಡವರ ಶಿಬಿರದಲ್ಲಿ ಧರ್ಮಜನು ಕುಳಿತಿರುವನು. ಕರ್ಣನಸ್ತ್ರಂಗಳಿಂದಾದ ಧರ್ಮಜನ ಗಾಯಗಳಿಗೆ ಪಾಂಚಾಲೆಯು ಶುಶ್ರೂಷೆ ನಡೆಸುತ್ತಿದ್ದಾಳೆ,—ನೊಂದಿರುವ ಧರ್ಮಜನ ಬಳಿಯಲ್ಲಿ ಬೇರೆ ಯಾರೂ ಇರಲಿಲ್ಲ.)

ಧರ್ಮರಾಯ—ಆ ಕಣೆಗಳೇಂ ಕ್ರೂರತರವಿಹುದು! ಕರ್ಣಾಸ್ತ್ರ
ಕೆಂತುಟೋ ಶಕ್ತಿ! ಕಡು ಧೀರ! ಭೀಮನು ಬಾರ-
ದಿರ್ದೊಡಾಂ ಕೌರವನ ಸೆರೆಮನೆಯ ಸೇರುತ್ತ-
ಲಿರ್ದೆನಾಂ! ಬಲುನೊಂದೆನಾಹವದಿ, ದ್ರೌಪದಿಯೆ!

ದ್ರೌಪದಿ—ಪಾಳಯವು ಬರಿದೆಂಬ ಸಮಯವನೆ ಸಾಧಿಸಿದ
ಕರ್ಣ! ಧರ್ಮವು ತನ್ನರಸನಾಶ್ರಯವನೊಂದಿ
ಬಾಳಲೆನೆ ಬಗೆದನೇಂ?

ಧರ್ಮ—ನಾಡನಲ್ಮೆಗೆ ನೀವು
ಸಮರವನೆ ಸಂಘಟಿಸಿ ಬಳಲಿದಿರಿ; ಅನರೊಡನೆ
ಕೌರವನ ಸಾಮ್ರಾಜ್ಯಕವನತಿಯನೇಕೆ ನಾವ್
ತಂದೊಡ್ಡಬೇಕಿನಿತು! ಅನುಜರಾದರೆ ಧರೆಯ-
ನಾಳಲಸಮರ್ಥರೇಂ! ಏಕಿನಿತು ವೈರಾಗ್ಯ?

ದ್ರೌಪದಿ—ಧರ್ಮಜಂ ನೀನು! ಧರ್ಮದಲಿ ಲೌಕಿಕದ
ರೀತಿಯನು ಬೆರೆಸುವುದೆ ಮೆಚ್ಚುಗೆಯು! ಹೀಗಿರಲು
ಸಾವಧಾನಂ ಮೇಲ್ಮೆಯೆಂದೆನಿಸಿ ಎನಿತೆನಿತು
ಕಷ್ಟಗಳ ಜನ್ಮದಲಿ ಸಹಿಸಿದೆವು! ವನವಾಸ-

ದುಪವಾಸ! ಕಾಂತಾರದಲೆದಾಟ!! ಅಜ್ಞಾತ-
ದಲಿ ನೀಚ ಕೀಚಕನ ಕೈಯಿಂದ ಬಳಲಿದೆನು!
ಪತಿಗಳೈವರು ನೀವು ಗಂಡುಗಲಿಗಳು ನೋಡೆ!
ಭೀಮನಾ ಪ್ರಳಯ ರುದ್ರಂ, ಬಳಿಕ ಅರ್ಜುನಂ
ಭೂತ್ರಯಕಜೇಯ ತಾಂ; ನೀ ಧರ್ಮದೇವನೈ!
ಆದರೂ ಎನ್ನದೆಸೆ,—ಅನುದಿನಂ ಕಣ್ಣೀರ
ಸುರಿಸಿ ಕೊರಗಿ ಕೊರಗಿ ಕೌರವರ ಕೈವಾಡವೆಂ-
ಬಂತೆ ಕಷ್ಟವನು ಪಡುವುದೇ! ಆಹಾಹ!
ಭಾಗ್ಯವೋ? ಈ ರಾಜ್ಯಕಡಿಯಿಟ್ಟ ನಂತರಂ
ಸುಖವೆನಗೆ ಬಿಸಿಲುಗುದುರೆಯ ತೆರದಿ ಬಾದಿಹುದು!
ಜನ್ಮದಲಿ ನಾ ಪಡೆದ ಕರ್ಮವಿದು! ನೀನಲ್ತೆ
ಸತ್ಯಸಂದಂ, ಪ್ರಜ್ಞ! ಆದರೇಂ! ಕಷ್ಟಗಳ
ಮುಂಗಾವಲಾಗಿಹುದು ಸತತಮೀ ಸತ್ಯಧ-
ರ್ಮವಾ! ನಾವದರ ಪಿಂತೆ, ಏತಕೀ ಜನ್ಮಗಳು!
ಮಾನಿನಿಯ ಮಾನವನು ಆ ದಿನದಿ ಭಗವಂತ-
ನಲ್ಲವೊಡೆ ಕಾಯ್ದರಾರ್! ಮಾನಭಂಗದ ಸಮಯ
ಬಿಚ್ಚಿರ್ದ ಕೇಶವಿದುತನಕವೂ ಕಟ್ಟಿಲ್ಲ!
ಶಪಥವನು ಕೈಕೊಂಡೆ, ಪೂರೈಸುವವರಾರು!

ಧರ್ಮ—ಪಾಂಚಾಲ ಭೂಪತಿಯ ಸಂಪತ್ತು ಶರಧಿಯಿಂ-
ದೊಗೆದಿರುವ ರತುನವೇ! ನಿನ್ನ ಕುಲ ಸೌಭಾಗ್ಯ
ಸುಖದ ಸಂಜೀವನವು ನಮ್ಮಿಂದ, ನಮ್ಮ ಒಡ-
ನಾಟದಿಂದ ನಾಶವಾದುದು ಪ್ರಿಯೇ! ದೇಸಿಗರ
ನಿರ್ಭಾಗ್ಯ ಪುತ್ರರಂ ಎಮ್ಮನ್ನು ಸೇರ್ದಂದು
ನಿನಗಿಂತು ಕಷ್ಟವಿದು.

(ಕೃಷ್ಣಾರ್ಜುನರ ಪ್ರವೇಶ. ಅರ್ಜುನನು ಧರ್ಮಜನ ಕಾಲ್ಗೆರಗುವನು.)

ಕೃಷ್ಣ—ಧರ್ಮಜಾ! ಕಣ್ಣೀರು
ಸುರಿಸುತಿಹೆ! ಏನಿದೀ ವಿಪರೀತ! ಆ ರೀತಿ
ದ್ರೌಪದಿಯು! ತಂಗಿ, ನೀ ಅಳುತಿರುವೆ! ಏಂ ಭವಣೆ
ಪೇಳೆನಗೆ!

ಧರ್ಮಜ—(ಕುಳಿತಲ್ಲಿಂದಲೇ ವಂದಿಸುವನು.)

ದ್ರೌಪದಿ—(ವಂದಿಸಿ) ಭವಣೆಯೇಂ? ಎನಗೇನು ಭವಣೆಗಳು! ಭಗವಂತ-
ನನುಜೆ! ತ್ರೈಭುವನ ಪ್ರಖ್ಯಾತರಂ ವರಿಸಿಹೆನು!!
ಧರ್ಮಜಂ ಜರ್ಜರಿತನಾಗಿಹನು! ಆದರೂ
ಎನಗೇನು ಭವಣೆಗಳು—?

ಅರ್ಜುನ—ಕೃಷ್ಣೆಯೇ, ನಿನ್ನ ನುಡಿ ಮೊನೆಯಂತೆ ನಾಟುತಿದೆ
ಬರಿದೇಕೆ ಹಂಬಲಿಪೆ! ಬಂದಿರುವ ತೊಡರುಗಳ
ತೊಡೆಯಲೀ ಪರಮಾತ್ಮನಿಹನೆಂದು ಮರೆತೆಯೇಂ?
ಅಣ್ಣದೇವಂ ಬರಿದೆ ಮರುಗುತಿಹನೇಕೆಂದು
ಹೇಳಲಾಗದೆ ನಿನಗೆ?

ದ್ರೌಪದಿ—ಜರ್ಜರಿತನಾಗಿಹನು! ಕಾಂಬುದನು ಕೇಳ್ವುದೇ?
ಈ ರೀತಿ ಗೈವವರು ವೈರಿಯಲ್ಲದೆ ಬೇರೆ
ಯಾರಿಲ್ಲ! ಹೀಗಿರಲು ಪೇಳ್ವುದೇನಿಹುದಿಲ್ಲಿ?

ಅರ್ಜುನ—ಅದಕಿಂತು ಮರುಕವೇ? ಕ್ಷತ್ರಿಯರು ನಾವೈಸೆ;
ಕ್ಷಾತ್ರ ಧರ್ಮದ ಮರ್ಮವೆಮ್ಮದದು; ಎಮಗೈಸೆ
ರಾಜದಂಡಂ--ಧರ್ಮದಂಡಂ!

ದ್ರೌಪದಿ—(ಮರ್ಮಬೇಧಕವಾಗಿ ದುಃಖದಿಂದ) ಏನಿದೀ ದಂಡಗಳು!
ಕೈವಿಡಿದ ಕುಲವತಿಯ ಸಭೆಯಲ್ಲಿ ಸೆಳೆತಂದು
ಸೆರಗೆಳೆವ ಸಮಯದಲಿ ಎಲ್ಲೀರ್ದವೀದಂಡ
ಗಳ್? ನಾನು ಪಾಂಚಾಲ ಭೂಪತಿಯ ತನುಜೆ—ನೆರೆ
ಗಂಡುಗಲಿಗಳ ಮಡದಿ—ಸಾಕ್ಷಾತು ಪರಬ್ರಹ್ಮ
ರೂಪಿ ಶ್ರೀಕೃಷ್ಣನಿಗೆ ಸೋದರಿಯು. ಆದರೂ
ಕೌರವನ ರೌರವಕೆ ಬೆದರುವೆವು. ಧರ್ಮಜನು
ಕರ್ಣನಸ್ತ್ರದ ಸವಿಯನುಣಬೇಕು!

ಧರ್ಮಜ—(ಮಧ್ಯದಲ್ಲಿ ತಡೆದು) ಅರ್ಜುನನ-
ನೇಕೆ ನೀ ಮೂದಲಿಪೆ? ನಿರ್ದೋಷಿಯಾತನಹ;
ನಿಮಗೆಲ್ಲ ಎಡರೊಡ್ಡಿದವ ನಾನು. ಜೂಜಾಟ
ವಾಡಿದೆನು; ಹೆಂಡತಿಯ ಮಾರಿದೆನ; ವನವಾಸ
ಕೈಕೊಂಡೆ; ಅಜ್ಞಾತದಲಿ ಘೋರ ಕಷ್ಟಗಳ-
ನಿತ್ತಿಹೆನು. ಈಗಲಾ ಯುದ್ಧವೇ ಒದಗಿದುದು.
ಮಾಡಿದ್ದ ತಪ್ಪಿತಕೆ ವೀರ ಕರ್ಣನು ಎನಗೆ
ಶಿಕ್ಷೆಯಿಂದಿತ್ತಿಹನು. ಅರ್ಜುನಾ! ಏನಿಂತು
ಶಿರಬಾಗಿ ನಿಂತಿರುವೆ? ಕ್ಷತ್ರಿಯರು ನೀವೈಸೆ;
ನಾವೇನು ಕ್ಷತ್ರಿಯರೆ? ಕರ್ಣಾಸ್ತ್ರಕಂಜುವರು
ನಾವಿಂದು ಕ್ಷತ್ರಿಯರೆ?—ಕ್ಷತ್ರಿಯರು ನೀವಾದ
ರಿಂದಿನಾಹವದಲ್ಲಿ ಅರಿಸೇನೆ ಮುಂಬರಿಯೆ,
ನಿನ್ನ ಸೈನ್ಯವು ಬೆದರಿ ಕಂಗೆಟ್ಟು ಓಡುತಿರೆ
ಎಲ್ಲಿರ್ದನಾ ಕ್ಷತ್ರಿ? ಕ್ಷತ್ರಿಯರು ನೀವೈಸೆ,—
ಓಡುತಿಹ ಸೈನಿಕರು ಕರ್ಣಾಸ್ತ್ರದಲಿ ಸಿಲುಕಿ
ನುಚ್ಚುನೂರಾಗುತಿರೆ ಎಲ್ಲಿರ್ದನಾ ಕ್ಷತ್ರಿ?
ಕ್ಷತ್ರಿಯರು ನೀವೈಸೆ,—ನಾಯಕನ ಸೆಳೆದೊಯ್ದು
ಕೆಡಹುತಿರೆ ಎಲ್ಲಿದ್ದೆಯೋ ಕ್ಷತ್ರಿ? 'ರಾಜದಂ
ಡಂ' ಏನು ಎಲ್ಲಿರ್ದುದಾ ದಂಡ? ಕ್ಷತ್ರಿಯನೆ,
ನೀನಹುದು ಕ್ಷತ್ರಿಯಂ! ದಂಡಂ ಮಹಾದಂಡ
ನಿನಗಿಹುದು—ಕರ್ಣನಿದಿರಲ್ಲೇನು ಕುಸಿದುದೇ?
ಅವನಸ್ತ್ರದಲಿ ನಿನ್ನ ಗಾಂಡೀವ ಸುಟ್ಟುದೇ?....

ಅರ್ಜುನ—ಗಳಹದಿರು ಆರಾದೊಡೇನೆನ್ನ ಗಾಂಡೀವ-
ಮಂ ಜರೆವ ಪಾಪಿಯನು ಕೊಂದಪೆನು ಎಂದಾನು
ಶಂಕರಗೆ ಪಣತೊಟ್ಟ ವ್ರತಮಹುದು; ಮಾಡಲೇಂ?

(ಎಂದು ಸಾಕ್ಷಾತ್ ಧರ್ಮ ಪುತ್ರನನ್ನೆ ಸಂಹರಿಸಲಿಕ್ಕಾಗಿ ಗಾಂಡೀವವನ್ನು ಎತ್ತಿ ಹಿಡಿದಿದ್ದಾನೆ,—ತ್ರೈಭುವನವು ಭಯದಿಂದ ಹಾಹಾಕಾರವೆತ್ತಿದೆ. ಆಗ ಭಗವಾನ್ ಶ್ರೀಕೃಷ್ಣನು ಕಿರುನಕ್ಕು ಗಾಂಡೀವಕ್ಕೆ ಇದಿರಾಗಿ ಬಂದು ಅರ್ಜುನನ್ನು ತಡೆದು—)

ಭಗವಂತ—ಏನಯ್ಯ ಅವಿವೇಕ? ಅರ್ಜುನಾ, ಇವನಾರು?
ನಿನ್ನಣ್ಣನೆಂದಿಷ್ಟೆ ತಿಳಿದೆಯಾ? ನೋಡವನ—

ಅರ್ಜುನ—ದೇವ! ತಡೆದೆನ್ನ ವ್ರತವನ್ನು ಕೆಡಿಸುವೆಯ ನೀಂ?

ಭಗವಂತ—ಏನಂಥ ವ್ರತವದುವು! ಸಾಕ್ಷಾತು ಧರ್ಮ ಪು-
ತ್ರನ ಕೊಲುವ ವ್ರತವೊಂದು ಜಗಕಿಹುದೆ—ಆ ವ್ರತಂ
ಸಾಧಿಕುವೆ? ಕೊಲುವೆಡೆಯೆ ತಾನಿದುವು! ಕೊಲುವ ಕೊ-
ಲ್ಲಿಸಿ ಕೊಂಬರೀಯೆಡೆಯೊಳಿಬ್ಬರು ಅಪಾತ್ರರೈ,-
ಮೇಣೆಂತು ಕೊಲುವೆನೀ? ಸುವಿಚಾರಮುಂ ಕೊಳ್ಳು.

ಅರ್ಜುನ—ಏನಮಾಡಲಿ ದೇವ? ಧರ್ಮಸಂಕಟಮಲ್ತೆ!

ಭಗವಂತ—ಆಗದುದನಾದಂತೆ ತೆರುವಂಥ ಸುವಿಚಾರ-
ವನ್ನೆಸಗು. ಅರ್ಜುನಾ, ಆಲಿಸೈ— ಈತಂ ಮ-
ಹಾ ಮಹಿಮ! ಧರ್ಮಜಂ! ಧರ್ಮವನ್ನಳಿಸುವಂ
ಉಳಿಸುವಂ ಇವನಲ್ತೆ! ಅವನೊಳಗವ ಮಾಳ್ಪ
ಹಕ್ಕಿಹುದು ನಿನಗೈಸೆ! ಅದರಿಂದ ನುಡಿವೆ ನಾ
ಕೇಳಿದನು. ಭಾರ್ಗವನ ದಯದಿಂದ ಸೂತ ಪು-
ತ್ರನು ತಾನು ಇಂದಜೇಯಂ; ಮೇಣು ಧರ್ಮಜನ
ಕೌರವಗೆ ಕೆಡಹುವೆಂ ಎಂದವಂ ನುಡಿದಂತೆ
ನಡೆದುದ್ದೈ. ಕೌರವಗೆ ಕೆಡಹಿದೀ ಧರ್ಮಜಂ
ಸಾಯಲೇವೇಳ್ಕುಮೆಂಬಂತಿವನು ನಿನ್ನ ಗಾಂ-
ಡೀವಕ್ಕೆ ತಪ್ಪಿದನು. ಶಂಕರಗೆ ವ್ರತವೊಂದು
ಸಲಬೇಕು. ಕ್ಷತ್ರಿಯನ ಮೂದಲಿಸೆ ಕೇಳ್ದರೂ
ಸುಮ್ಮನಿರೆ ಸತ್ತನವ. ಧರ್ಮ ಸಂಸ್ಥಾಪನೆಯ
ಸಲುವಾಗಿ ಧರ್ಮಜಂ ಮರಣವನ್ನಾದರೂ
ಸ್ವೀಕರಿಸಿ ಸುಮ್ಮನಿರಲೇವೇಳ್ಕು. ಮೂದಲಿಸೆ
ಸುಮ್ಮನಿರೆ ಮೃತನಪ್ಪ. ಹಿರಿಯನಂ ಜರೆದವಂ
ಧರ್ಮವಂ ಕೆಡೆದವಂ ತನ್ನ ತಾ ಕೊಂದಂತೆ.
ಆತ್ಮಶ್ಲಾಘನೆಮಾಡಿ ಆತ್ಮಹತ್ಯದ ಫಲವ
ಗಳಿಸಿ ನೀಂ ನಿನ್ನಘವ ಪರಿಹರಿಸು. ಎನ್ನಾಜ್ಞೆ,
ಎನ್ನಮತ ನುಡಿದಿಹೆನು, ನಡೆಸುವೀ ನೆಪಮಾತ್ರ
ನೀನ್ನೈಸೆ. ಎನ್ನಿದಿರೆ ನಡೆಯಲ್ಕೈ. ಮಾಡಿದನು.

ಅರ್ಜುನ— ಅಸ್ತು! ನಿನ್ನಾಜ್ಞೆಗಾಂ ಶರಣೆಂದು ವರ್ತಿಪೆನು.

(ಈ ಲೇಖಕರ 'ಏಕಾಂಗ ವಿಜಯಿ' ಎಂಬ ನಾಟಕದ ಒಂದು ದೃಶ್ಯ.)

ಬಟ್ಟೆಯು ಮೈ ಮುಚ್ಚಿದರೆ ಸಾಲದು.

ಮನ ಮೆಚ್ಚಬೇಕು.

ಹೆಚ್ಚು ಬಾಳಬೇಕು.

ನೂತನ ನಮೂನೆಯ ಬಹುಕಾಲ ಬಾಳುವ

ಖಾತ್ರಿ ರಂಗಿನ ಶೀರೆಗಳಿಗೆ

ಮಣಿಪಾಳ ಟೆಕ್ಸ್‌ಟೈಲ್ಸ್, ಮಣಿಪಾಳ.

ಉಡುಪಿ. [ದ. ಕ.]

"ಅ"

'ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು' ಎಂಬಂತೆ, ಶೀರ್ಷಿಕೆ ಸಣ್ಣದಾದರೂ ವಿಷಯ ದೊಡ್ಡದು. ಹತ್ತು ಅಂಗುಲ ಅಗಲಕ್ಕೋಡುವ ಕಲೆಬರಹ ಹಾಕಿ, ಓದುವ ಮೊದಲೇ, ಕಣ್ಣು ಬೀಳುತ್ತಲೇ ಗಾಬರಿಗೊಳ್ಳುವಂತೆ ಮಾಡಿ, ಓದಿದಾಗ 'ತಟಪಟ ಹನಿಯಪ್ಪ'ನಂತೆ ಏನೂ ಇಲ್ಲ, ಯಾರಿಗೆ ಯಾರಿಲ್ಲ ಎಂಬಂತಾಗಿಸುವುದೇನೂ ದೊಡ್ಡ ವಿಷಯವಲ್ಲ. ಹಲವೊಮ್ಮೆ ನಾನು, "ಪಾತಾಳಲೋಕದಲ್ಲಿ ಈಗಲೂ ಮನುಷ್ಯರು ಇರುವರೇ?" ಎಂಬ ಶಿರೋನಾಮೆ ಬರೆದು, ಕೆಳಗೆ ಇರುವೆಗಳ ವಿಷಯ ನಾಲ್ಕು ಪುಡಿ ಅಕ್ಷರಗಳನ್ನು ಗೀಚಿ, "ಪಾತಾಳಲೋಕದಲ್ಲಿ ಮನುಷ್ಯರಿದ್ದರೆ ಅಣುವಿನಂತಹ ಆ ಜೀವಿಗಳ ರೀತಿ ರಿವಾಜುಗಳನ್ನು ಕಂಡು, ನಾಚಿ, ಸಾಯುತ್ತಿದ್ದರು" ಎಂಬ ಮುದ್ರಿಕೆಯಿಂದ ಮುಗಿಸುವೆನು ಎಂದಾಲೋಚಿಸಿದ್ದುಂಟು. ಆದರೆ, ಆನೆಯಂಥಾ ಶಿರೋನಾಮೆಗೆ ಇರುವೆಯಂಥಾ ವಿಷಯ ಬರೆವ ಬದಲಿಗೆ, ಇರುವೆಯಂಥಾ ಶಿರೋನಾಮೆಯಡಿ ಆನೆಯಂಥಾ ವಿಷಯ ಬರೆಯೋದೇ ದೊಡ್ಡ ಸಾಹಸ. ಏಕೆಂದರೆ, ಇರುವೆಯಂಥ ವಿಷಯಗಳಿಗೆ ಇರುವೆಗಳು ಮುತ್ತುತ್ತವೆ. ಆನೆಯಂಥಾ ವಿಷಯಗಳಿಗೆ ಆನೆಗಳು ಸುತ್ತುತ್ತವೆ. ('ಆನೆ ತಿನ್ನೋದು ಸೊಪ್ಪು, ಇರುವೆ ತಿನ್ನೋದು ಸಕ್ಕರೆ' ಎಂಬುದನ್ನು ಇಲ್ಲಿ ಹಚ್ಚಬಾರದು.) ದೊಡ್ಡ ಮುಂಡಾಸಿನಡಿ ಚಿಕ್ಕ ತಲೆ ಇರಿಸಬಹುದೇ? ಬಹುದು! ಉದಾಹರಣಾರ್ಥ,— ಈ ಕೆಳಗಿನ ವಿಷಯಗಳನ್ನು ನೋಡಿ:

೧. **ಶಿರೋನಾಮೆ:** "ಹೆಗ್ಗಣಗಳಿಂದ ಐದು ಜನರ ಪ್ರಾಣಹಾನಿ!!!"

ಶಿರೋನಾಮೆಯ ಉದ್ದಳತೆ: ಹತ್ತು ಇಂಚು, ಮೂರು ಸೆಂಟಿಮೀಟರು.

ಶಿರೋನಾಮೆಯಡಿಯ ಲೇಖನ: "ಗೋಡೆ ಬಿದ್ದು ಐವರು ಮಡಿದರು. ಹೆಗ್ಗಣಗಳು ಬಿಲಕೊರೆದು ಹೀಗಾಯಿತೆನ್ನಲಾಗಿದೆ."

ಬುದ್ಧಿವಾದ: ಹೆಗ್ಗಣಗಳು ಬಿಲಕೊರೆವ ಗೋಡೆಗಳ ಕೆಳಗೆ ಮಲಗಬಾರದು.

೨. **ಶಿರೋನಾಮೆ:** "ರೋಮ್ ನಗರದ ರಾಣಿಯ ರೋಮಾಂಚಕ ರೋಮಾನ್ಸ್!!!"

ಶಿರೋನಾಮೆಯ ಉದ್ದಳತೆ: ಹದಿನಾರು ಇಂಚು.

ಲೇಖನ: "ಎದ್ದ ಮೂಗಿನ, ಉದ್ದ ಕೂದಲಿನ, ಹದ್ದು ದೃಷ್ಟಿಯ ರಾಣಿ ಸೆಸಿಪಿನಾ, ದಿನಕ್ಕೆ ಮೂವರು ತರುಣರನ್ನು ಹಿಚುಕಿ ಕೊಲ್ಲುತಿದ್ದಳು. ಅವಳ ಬಗ್ಗೆ ಅಫಘಾನ್, ತುರ್ಕಿ, ಇರಾನ್, ಈಜಿಪ್ಟ್, ಹಬಸಿ ಮೊದಲಾದ ದೇಶಗಳಿಂದ ಕೂಡ ತರುಣರನ್ನು ಕರೆಸಲಾಗುತಿತ್ತು. ಆಕೆ ಎಷ್ಟು ಬೆಲೆ ತೆತ್ತಾದರೂ ತರುಣರ ಖರೀದಿಮಾಡಿಸಿ.................. ಕೊನೆಗೆ ಸಾಯುವ ಕಾಲದಲ್ಲಿ ಕೂಡ, "ನೂರಿನ್ನೂರು— ಸಾವಿರ ಲಕ್ಷ ಸಾಧ್ಯವಿಲ್ಲದಿದ್ದರೆ ಹತ್ತಿಪ್ಪತ್ತು ತರುಣರನ್ನಾದರೂ ತಂದು ನನ್ನ ಮುಂದೆ ಕೊಲ್ಲಿರಿ—ಅದನ್ನು ನೋಡಿ ನಾನು ತೃಪ್ತಳಾಗಿ ಸುಖದಿಂದ ಪ್ರಾಣಬಿಡುತ್ತೇನೆ" ಅಂದಳಂತೆ..................."

ಬುದ್ಧಿವಾದ: ರೋಮ್ ನಗರಕ್ಕೆ ಹೋದರೆ, ಎದ್ದ ಮೂಗಿನ ಉದ್ದ ಕೂದಲಿನ, ಹದ್ದು ದೃಷ್ಟಿಯ ಹೆಂಗಸರನ್ನು ಕಂಡಾಗ ಅಲ್ಲಿ ನಿಲ್ಲಬೇಡಿ. ಅದಕ್ಕಿಂತಲೂ ಮುಖ್ಯವಾಗಿ,— ಸಾಧ್ಯವಾದರೆ—ತುರ್ಕಿ, ಅಫಘಾನ್, ಈಜಿಪ್ಟ್ ಮೊದಲಾದ ದೇಶಗಳಲ್ಲಿ ಹುಟ್ಟಬೇಡಿ."

—ಇಂತಹ ಲೇಖನಗಳನ್ನು ಬರೆದರೆ ಮಾನನಷ್ಟದ ವ್ಯಾಜ್ಯವಿಲ್ಲ. ಹೆಗ್ಗಣಗಳಾಗಲಿ, ಸಾವಿರ ವರ್ಷಗಳ ಹಿಂದಿನ, ಐದುಸಾವಿರ ಮೈಲು ದೂರದ ರಾಜ್ಯಗಳ ಸಾಮ್ರಾಜ್ಞಿಗಳಾಗಲಿ ಆಕ್ಷೇಪವೆತ್ತುವುದಿಲ್ಲ. ಓದುವವರಿಗೂ ಹಾಯಾಗುವುದು.

— ಹೀಗೆ ದಿನಕ್ಕೆ ಇಪ್ಪತ್ತು ಲೇಖನಗಳನ್ನು ಗೀಚಬಹುದು. ಪುರುಷಾರ್ಥವೇನು?

ಆದಕಾರಣ, ನಾನು ಅತಿ ಚಿಕ್ಕ ಶಿರೋನಾಮೆಗೆ ಯತ್ನಿಸುತಿದ್ದೇನೆ. ಹತ್ತಕ್ಷರ, ಎಂಟಕ್ಷರ, ನಾಲ್ಕಕ್ಷರ, ಎರಡಕ್ಷರಗಳ ಶಿರೋನಾಮೆಗಳನ್ನು ಮುಗಿಸಿದ್ದೇನೆ. ಈಗ, ಜಗತ್ತಿನ ಚಿಕ್ಕ ಶಿರೋನಾಮೆಯೆಂದರೆ ಒಂದಕ್ಷರದ್ದು. ಅದೂ ವ್ಯಂಜನವಾಗಿರದೆ ಕೇವಲ ಸ್ವರ; ಮತ್ತೆ ಮೊದಲನೇ ಸ್ವರ—

"ಅ"

ಈ ಸ್ವರವನ್ನೇ ಶಿರೋನಾಮೆಯಾಗಿ ಆರಿಸಲು ಇನ್ನೊಂದು ಕಾರಣವೂ ಇದೆ. ಇದು ಜಗತ್ತಿನ ಪ್ರಥಮ ಸ್ವರ.

ಮನುಷ್ಯನಿಗೂ ಪ್ರಾಣಿಗೂ ಮಾತಿಗೆ ಮೊದಲಿನ ಸ್ವರ. ಮಾನವನಲ್ಲಿ ಜ್ಞಾನ ಮೂಡುವ ಮೊದಲೂ ಇದ್ದುದು. 'ಓಂ'ಕಾರಕ್ಕೆ ಆರಂಭ ಇದರಿಂದಲೇ. ಆದರೂ, ಇಷ್ಟು ಶ್ರೇಷ್ಠ ಸ್ವರವು ಲೋಕದಿಂದ ಅಲಕ್ಷಿಸಲ್ಪಟ್ಟಿದೆ. ಒಳ್ಳೇ ವಸ್ತುಗಳ ವಿಷಯವೇ ಹಾಗೆ,—ಎಲ್ಲರಿಂದಲೂ ಎಲ್ಲ ಕಾಲಗಳಲ್ಲೂ ಅಲಕ್ಷ್ಯ. ನಾನು ಅಂತಃಕರಣದಿಂದ, ಭಾವನಾಪರವಶನಾಗಿ ಹೀಗೆ ಹೇಳುವೆನೆಂದು ಭಾವಿಸಲಾಗದು. ಒಮ್ಮೆ ಒಬ್ಬ ಮನುಷ್ಯನನ್ನು, ಒಂದು ವಸ್ತುವನ್ನು, ಒಂದು ಅಕ್ಷರವನ್ನು, ಒಂದು ಸ್ವರವನ್ನು--ನಾನು ಪಕ್ಷವಹಿಸಿ ವಾದಿಸಿ ಕಾಪಾಡಲು ಹೊರಡುವ ಮನಸ್ಸುಮಾಡಿದ ಮೇಲೆ, ಯಾರು ಏನೆಂದರೂ ಸ್ಥಿತಪ್ರಜ್ಞನಾಗಿ ಅಚಲನಾಗಿರಬಲ್ಲೆ.

ಅಕಾರಾರ್ಥೋ ವಿಷ್ಣುರ್ಜಗದುದಯ ರಕ್ಷಾಪ್ರಲಯಕೃತ್ ।
ಮಕಾರಾರ್ಥೋ ಜೀವಃ ತದುಪಕರಣಂ ವೈಷ್ಣವಮಿದಂ ॥
ಮಕಾರೋಽನನ್ಯಾರ್ಹಂ ನಿಯಮಯತಿ ಸಂಬಂಧಮನಯೋಃ
ತ್ರಯೀಸಾರಸ್ತ್ರ್ಯಾತ್ಮಾ ಪ್ರಣವ ಇಮಮರ್ಥಂ ಸಮದಿಶತ್ ॥
(ರಾಮಾನುಜ.)

'ಅ' ಶಬ್ದದಿಂದಲೇ ಋಗ್ವೇದವು ಆರಂಭವಾಗುತ್ತದೆಂದೂ—

'ಅ' ಶಬ್ದವೇ ನಾಲ್ಕು ವೇದಗಳ ಸಾರವಾಗಿದೆಯೆಂದೂ—ಓದಿದ ನೆನಪಿದೆ.

●

ಶಿರೋನಾಮೆಗೊಂದು ಅರ್ಥ ಬೇಕು—ಅದು ವಿಷಯವನ್ನು ತಿಳಿಸುವಂತಿರಬೇಕು ಎಂದು ನೀವಾರಾದರೂ ಮಾಮೂಲಿನ ಕೆಲವು ಟೀಕೋಕ್ತಿಗಳನ್ನು ಎದುರು ತರಬಹುದು ಆದರೆ, ಪ್ರಯೋಜನವಿಲ್ಲ. ಏಕೆ ಗೊತ್ತೇ? ವಕೀಲರು, ಮೊಕದ್ದಮೆಯಲ್ಲಿ ಕಲ್ಕತ್ತಾ, ಮುಂಬಯಿ, ಮದರಾಸು ಹೈಕೋರ್ಟುಗಳ ತೀರ್ಮಾನಗಳನ್ನು ಉದಹರಿಸುವಂತೆ, ಶಿರೋನಾಮೆಗಳ ವಿಷಯದಲ್ಲೂ ಆಯಾ ಊರುಗಳಿಂದ ಕೆಲವು ಉದಾಹರಣೆಗಳನ್ನು ಕೊಡಬಹುದು. ಹೆಸರಿನಂತೇ ಲೇಖನಗಳು ಇರಬೇಕೆನ್ನುವವರು ಹೆಸರಿನಂತೇ ಮನುಷ್ಯರು ಇರುವುದನ್ನು ತೋರಿಸಬಲ್ಲರೇ? ಉದಾಹರಣಾರ್ಥ:

ಗೋಪಾಲ: ಅವನ ಚಾಲತೀ ಜೀವನದಲ್ಲಿ ದನಗಳ ರಕ್ಷಣೆಮಾಡಿದವನಲ್ಲ. ಗೇಟಿನೊಳಗೆ ದನ ಬಂದಾಗ, ಕಲ್ಲುಹೊಡೆದು ಓಡಿಸಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಚಲ್ಲಣಹಾಕಿ ವಿಲಾಯತಿಗೆ ಹೋಗಿಬಂದರೆ, ದನತಿಂದು, ತಿನ್ನದವರನ್ನು ಕರುಣೆಯಿಂದ ನೋಡುತ್ತಾನೆ.

ಪುರುಷೋತ್ತಮ: ಈ ಹೆಸರಿನವರಲ್ಲಿ ಕೆಲವರು "ಇಸ್ಪೀಟ್ ಮಂಡದಲ್ಲಿ ರಾಜದೂತರಿಂದ ಶೋಧಿಸಲ್ಪಟ್ಟು ದೊಡ್ಡ ಕಮಾನುಗಳ ಕಟ್ಟಡದೊಳಗಿನ ಸರಳುಗಳಾಚೆ ಇರಿಸಲ್ಪಟ್ಟು. ಎರಡು ಕೈತುಂಬ ಸರಳು ಹಿಡಿದು ಜಮೀನುದಾರರನ್ನು ಪ್ರತೀಕ್ಷಿಸುತ್ತಿದ್ದ ವಾರ್ತೆ ಕೇಳಿದ್ದೇನೆ; ಒಬ್ಬನ ನನ್ನೊಡನೆ ಕಡ ಇಸಕೊಂಡ ಮೂವತ್ತುರೂಪಾಯಿಗಳಿಗೆ ಕಾನೂನು ಪ್ರಕಾರದ ವಾಯಿದೆ ದಾಟಿದ ಮರುದಿನ ಮುಂಜಾನೆ—ನನ್ನನ್ನು ಎದುರಿಸಿ, ಹಿಂದಿನ ಸಂಜೆ ತನಕ ಇದ್ದ ವಿನಯವನ್ನು ಚಟ್ಟನೆ ತೆಗೆದೊಗೆದು, "ಕೊಡುವುದಿಲ್ಲ!" ಎನ್ನುತ್ತ, ಶರ್ಟಿನ ಕೈಪಟ್ಟಿ ಮೇಲೆ ಸರಿಸಿದ್ದಾನೆ.

ಸತ್ಯೇಂದ್ರ: 'ಸತ್ಯ' ಎಂಬ ಶಬ್ದವೇ ಅವನ ನಿಘಂಟಿನಲ್ಲಿಲ್ಲ.

ಮಂಗಳೂರು: ಮೊದಲಿನ ಮೂರಕ್ಷರಗಳು ಅದರ ಗಡಿಯೊಳಗಿವೆ ಎಂದು ತೋರಿಸಿಕೊಟ್ಟವರು ಈ ಯುಗದಲ್ಲಿ ಸಂಸಾರವೆಂಬ ದೊಡ್ಡ ಒಗಟಿಗೆ ಪೂರ್ಣ ಸರಿಯಾದ ಉತ್ತರ ಕೊಟ್ಟು ಪ್ರಥಮ ಬಹುಮಾನಕ್ಕೆ ಅರ್ಹತೆ ಪಡೆವವರು.

●

ಮೂರು, ನಾಲ್ಕು, ಐದು, ಆರು ಅಕ್ಷರಗಳ ಹೆಸರುಗಳಿರುವ ಪತ್ರಿಕೆಗಳು ಅನೇಕ ಆಗಿವೆ. ಎರಡೇ ಅಕ್ಷರಗಳ ಪತ್ರಿಕೆಗಳೂ ಹೊರಟಿವೆ. ಒಂದಕ್ಷರದ ಪತ್ರಿಕೆಗಳು ಮಾತ್ರ ಇಲ್ಲ. ಇಂತಹ ಪತ್ರಿಕೆಯನ್ನು ನಾನೇ ಹೊರಡಿಸಬೇಕೆಂದಿದ್ದೇನೆ. ಅದರ ಹೆಸರು—"ಅ".

ನಿಖಿಲ ಕರ್ನಾಟಕದ 17ನೇ ಆಯುರ್ವೇದ ಸಮ್ಮೇಳನದಲ್ಲಿ ಸುವರ್ಣ ಪದಕಯುಕ್ತ ಪ್ರಥಮ ತರಗತಿಯ ಪ್ರಶಸ್ತಿಯನ್ನು ಪಡೆದ, **ಪಿ. ಎಲ್. ಮಂಜರ್, ಆಯುರ್ವೇದ ಪಂಡಿತ, ಪಾಂಡೇಶ್ವರ,** ಇವರ ಶಾಸ್ತ್ರೀಯ ತಯಾರಿಕೆಯು, ಕಠಿಣ ತರದ ವಾತರೋಗಗಳನ್ನೂ ಅತ್ಯಾಶ್ಚರ್ಯಕರ ರೀತಿಯಲ್ಲಿ ಗುಣಪಡಿಸುವ

"ಮಹಾ ಯೋಗರಾಜ ಗುಗ್ಗುಳ"

ಇದರ ಸೇವನೆಯಿಂದ ಎಲ್ಲಾ ತರದ ವಾತರೋಗಗಳೂ, ವಾತರಕ್ತ, ಆರ್ತವದೋಷ, ಶುಕ್ರದೋಷ, ವೃಷಣವೃದ್ಧಿ, ಭಗಂಧರ, ಉದರದ ವಿಷ, ಹೊಟ್ಟೆಶೂಲೆ, ಗುಲ್ಮ, ಪ್ರದರ, ಪ್ರಮೇಹ, ಕ್ಷಯ, ಕುಷ್ಟ, ಮೂಲವ್ಯಾಧಿ, ಅಪಸ್ಮಾರ, ಮೊದಲಾದ ಅನೇಕ ರೋಗಗಳನ್ನು ತಪ್ಪದೆ ಗುಣಪಡಿಸುತ್ತದೆ.

ಕ್ರಯ ತೊಲ 1ರ 6-0-0; 100 ಮಾತ್ರೆಗಳ ಕ್ರಯ 6-4-0

ಇದಲ್ಲದೆ ನಮ್ಮಲ್ಲಿ ಶಾಸ್ತ್ರೀಯ ರೀತಿಯಲ್ಲಿ ತಯಾರಿಸಿದ ಎಲ್ಲಾ ತರದ ಆಯುರ್ವೇದ ಔಷಧಗಳೂ ಯೋಗ್ಯಕ್ರಯಕ್ಕೆ ದೊರಕುತ್ತವೆ. ವೈದ್ಯರಿಗೆ ವಿಶೇಷ ರಿಯಾಯಿತಿ ಇದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಪಾಂಡವೇಶ್ವರ ಆಯುರ್ವೇದಿಕ್ ವರ್ಕ್ಸ್,

ಪೋಸ್ಟ್:—ಸಾಸ್ತಾನ (ದ. ಕನ್ನಡ.)

ನನಗೆ ಗೊತ್ತು,— ಈಗಿನ ದಿನಗಳು ಸ್ಪರ್ಧೆಯ ಮತ್ತು ಅನುಕರಣೆಯ ದಿನಗಳೆಂದು. "ಅ" ಪತ್ರಿಕೆ ಹೊರಟ ಮರು ದಿನವೇ "ಆ"—"ಇ"—"ಉ"—"ಔ"—"ಅಂ" ಪತ್ರಿಕೆಗಳೂ ಹೊರಡದಿರಲಾರವು. ಇರಲಿ. ಲೋಕಾಸ್ಸಮಸ್ತಾಃ ಸುಖಿನೋ ಭವಂತು.

'ಅ' ಪತ್ರಿಕೆಯ ವಿಷಯ ನಾಲ್ಕು ಮಾತು ಹೇಳೋಣ. ಅದರಲ್ಲಿ ಬರುವ ವಿಷಯಗಳೂ ಅಪಾರ:

"ಅಬ್ಬಬ್ಬ! ಅಧಿಕಾರ!"— ಈ ಶಿರೋನಾಮೆಯ ಕೆಳಗೆ ಸರಕಾರೀ ಅಧಿಕಾರಿಗಳನ್ನು, ಅವರು ತಪ್ಪುಮಾಡಿದರೂ ಮಾಡದಿದ್ದರೂ ಟೀಕಿಸಲಾಗುವುದು.

"ಅತ್ಯಾಚಾರ—ಅನ್ಯಾಯ!"— ಇದು, ಜಮೀನ್ದಾರರ ಬಗ್ಗೆ ಮೀಸಲಿಟ್ಟ ಶಿರೋನಾಮೆ.

" ಅಸುರೀ ಲೋಕ "— ಕಾಳಸಂತೆಯವರಿಗಲ್ಲದೆ ಮಿಕ್ಕವರಿಗೆ ಈ ಶಿರೋನಾಮೆ ಒಪ್ಪುವುದಿಲ್ಲ.

"ಅಯ್ಯಯ್ಯೋ"–ನಮ್ಮ ನಗರದ ರಸ್ತೆಗಳ ವರ್ಣನೆ. (ದಾರಿಗನು, ನಡೆಯುತ್ತಾ ಕಿರಚುವ ಧ್ವನಿ.)

"ಅಹಹಹಹ"— ಇದರಡಿ ಯಾವಾಗಲೂ ಸಿನೇಮಾ ಸುದ್ದಿಗಳು, ತಾರೆಗಳ ತೋಳುಗಳು, ಚಿತ್ರಗಳ ಚಟ್ಣಿ— (ನಮ್ಮ ಸ್ವಂತ ನೋಟಕರಿಂದ.)

"ಅನುಪಮಾ!"— ಮಹಿಳಾವಿಭಾಗ.

"ಅಪ್ಪಚ್ಚೊ"—ಮಕ್ಕಳ ಅಕ್ಕರೆಯ ಪುಟ.

"ಅದೃಷ್ಟ"—ಗೊತ್ತೇ ಇದೆ.— ವಾರದ ಭವಿಷ್ಯ.

'ವಾರದ ಭವಿಷ್ಯ' ಎಂದಕೂಡಲೇ ನಾನು ಇಲ್ಲೊಂದು ಟಿಪ್ಪಣಿ ಬರೆಯಲೇಬೇಕಾಗಿದೆ. ಇಲ್ಲದಿದ್ದರೆ 'ನ್ಯೂಸ್ ಏಜಂಟ'ನು ಕೋಪಿಸಬಹುದು. ಈ ಲೇಖನವೂ ಬಹುಮಟ್ಟಿಗೆ 'ನ್ಯೂಸ್ ಏಜಂಟ'ನಿಗೇ ಸಮರ್ಪಣವಾಗುವುದೆನ್ನಲೂ ಬಹುದು. ಟಿಪ್ಪಣಿಯ ವಿಷಯ ಇಷ್ಟು: ನೀವು ಒಂದು ಪತ್ರಿಕೆ ಹೊರಡಿಸಿದ ಕೂಡಲೇ ನ್ಯೂಸ್ ಏಜಂಟನು— ಅವನು ಯಾವ ಊರಿನವನೂ ಇರಲಿ, ಎಲ್ಲ ಕಡೆಗಳಲ್ಲೂ ಅವನ 'ಕ್ವಾಲಿಫಿಕೇಶನ್' ಯಾನೆ ಅರ್ಹತೆ ಒಂದೇ ತೆರ,— 'ವಾರದ ಭವಿಷ್ಯ ಕೊಡಿರಿ' ಎಂದು ಆಜ್ಞಾಪಿಸುತ್ತಾನೆ. ಕೂಡಲೇ ಪತ್ರಿಕಾಕರ್ತನು 'ಬಹುಮಂದಿ ಓದುಗರ ಅಪೇಕ್ಷೆ ಮೇರೆಗೆ ವಾರದ ಭವಿಷ್ಯವನ್ನಾರಂಭಿಸುತ್ತಾನೆ. ಪತ್ರಿಕೆಯನ್ನು ರೂಪಿಸುವವನು 'ನ್ಯೂಸ್ ಏಜಂಟ'ನು; ಅವನೇ 'ಬಹುಮಂದಿ'; ಅವನೇ 'ಮಹಾಜನ'.

●

'ಅ' ಹೆಸರಿನ ಪತ್ರಿಕೆಗೆ, ಇತರವುಗಳಿಗಿಲ್ಲದ ಒಂದು ವೈಶಿಷ್ಟ್ಯವಿದೆ. ಒಂದೇ ಅಕ್ಷರವಾದ ಕಾರಣ, 'ಪೊಟ್ಟ' (ಮೂಕ)ನೂ ತನ್ನ ಭಾಷೆಯಲ್ಲೆ, 'ನ್ಯೂಸ್ ಏಜಂಟ'ನ ಮುಂದೆ ನಿಂತು, ಹಣ ಇಟ್ಟು 'ಅ' ಎಂದರಾಯಿತು. ಕೊಂಡುಕೊಳ್ಳುವವನಿಗೂ ಕೊಡುವವನಿಗೂ— ಇಬ್ಬರಿಗೂ ಸುಲಭ.

ಆಹಾರದಲ್ಲ ಮಿತವ್ಯಯ ಸಾಧಿಸುವಂತೆ ಅಕ್ಷರಗಳಲ್ಲೂ ಪಾಲಿಸಬೇಕು ಅಂತ ನನ್ನ ಅಭಿಪ್ರಾಯ. ಏಕೆಂದರೆ,– —ಅಕ್ಷರಗಳಲ್ಲಿ ಮಿತವ್ಯಯ ಸಾಧಿಸುವುದರಿಂದ ಜಗತ್ತಿನ ಅರೆವಾಸಿ ಕಷ್ಟಗಳು ದೂರವಾಗುವುವು.

ಮಾತು ಕಡಮೆಯಾದರೆ ಜಗಳವೂ ಕಡಿಮೆ. ಮಕ್ಕಳಿಗೆ ಹೆಸರಿಡುವಾಗಲೂ ಇದೇ ರೀತಿ 'ರೇಶನ್' ಕ್ರಮ ಅನುಸರಿಸಬಹುದೆಂದು ತೋರುತ್ತದೆ. ಹೇಗೂ ರೇಶನ್ ಕಾಲದಲ್ಲಿ ಹುಟ್ಟಿದುವು. ಮೈಯಲ್ಲಿ ತ್ರಾಣವಿಲ್ಲ; ತಲೆಯಲ್ಲಿ ಮೇದಸ್ಸು ಇಲ್ಲ. ಸುಮ್ಮನೆ, ಗಜಾನನ, ರಾಮಚಂದ್ರ, ಮಾಧವ, ವೆಂಕಟ್ರಮಣ ಎಂದು ಹೆಸರಿಟ್ಟು,—ನಾಳೆ ಕೈಕಾಲು ಅಲ್ಲಾಡಿಸುವ ತಿಲಮಾತ್ರ ಶಕ್ತಿ ಬರುತ್ತಲೇ ರಸ್ತೆಗಳಲ್ಲಿ ಹೊಡೆದಾಡಿಕೊಂಡೇ ಮತ್ತೆಲ್ಲಿಯಾದರೂ 'ಪೋಲಿ'ಮಾಡಿಯೋ ಮೂರು—ನಾಲ್ಕು—ಐದು ಅಕ್ಷರಗಳ ಹೆಸರನ್ನು ಒನ್ನೆಗೇ ಅಳಿಸಿಕೊಳ್ಳುವ ಬದಲು, 'ಅ' ಎಂಬ ಹೆಸರಿಸುವುದು ಎಷ್ಟೋ ಉತ್ತಮ. ಹುಡುಗ 'ಪೋಲಿ'ಯಾದರೆ 'ಅ' ಎಂಬುದಕ್ಕೆ "ಅಧಮ"ನೆಂಬ ಅರ್ಥ ಸರೀ ಹೋಗುತ್ತದೆ. ದಡ್ಡನಾದರೆ 'ಅಲಸಿ' ಎಂಬುದು ನಿರ್ವಿವಾದ. ಶಾಲೆಯಲ್ಲಿ ನಾಪಾಸಾದರೆ 'ಅಯೋಗ್ಯ'ನೆಂದು ಸಿದ್ಧಾಂತವಾಯಿತು.

ಕೊನೆಗೊಂದು ವನ್ನ ವಿನಂತಿಯಿದೆ. ಈ 'ಅ' ಶಿರೋನಾಮೆಯ ಲೇಖನವನ್ನೋದಿ, ವಿಷಯವು ಅಲ್ಪ ಎನ್ನಬೇಡಿ. ಅ ಎಂಬುದು ಮೊದಲನೆಯದು. ಇಂತಹ ಶಿರೋನಾಮೆಯೂ, ಬಹುಶಃ ಜಗತ್ತಿನಲ್ಲಿ ಮೊದಲನೆಯದು. 'ಅ' ಎಂಬುದು ಅಮರ.

ಕುಡ್ಪಿ ವಾಸುದೇವ ಶೆಣೈ.

For Anything & Everything in the Line of

MEDICINE & SURGICAL GOODS

AND

HOSPITAL REQUISITES

Consult or call on

SITARAM & PAI BROTHERS

Distributors for:

ELI LILLY CO., OF INDIA INC.

Agents for:

THE BRITISH DRUG HOUSES (India) *LTD.*

BAYER ORIGINAL GERMAN REMEDIES.

Agents for Mysore State and Coorg for:

BENGAL CHEMICAL & PHARMACEUTICAL WORKS, LTD

DUMEX PRODUCTS.

BOOTS PRODUCTS

Telegrams: "SITPA"

Phone: 2468.

SITARAM & PAI BROTHERS

WHOLESALE & RETAIL CHEMISTS & DRUGGISTS,

Arcot Srinivasachar Street, BANGALORE CITY.

'SITARAM & PAI BROS' – FOR QUALITY, SERVICE & PROMPTNESS.

ಶತಮಾನ ಬಾಳೋಣ!

ಲೇಖಕರು: ಡಾ। ತ್ರಿವಿಕ್ರಮ ಪುರುಷೋತ್ತಮ ಭಟ್,

ಸಂಪಾದಕರು: ''ಶೋಭಾ''

ಇಂದು ಜನಿಸಿದ ಮಗುವಿನ ಸಾಧಾರಣ ಆಯುಸ್ಸು ಅರವತ್ತೆಂಟು ಆಗಬಲ್ಲದು! ಈ ಮಗುವಿನ ತಾಯ್ತಂದೆಯರು ಬರೇ ನಲುವತ್ತೆಂಟು ಪ್ರಾಯದ ವರೆಗೆ ಜೀವಿಸಬಹುದೆಂದು, ಐವತ್ತು ವರುಷಗಳ ಹಿಂದಿನ ಆಯುಃಪ್ರಮಾಣದ ಸಂಖ್ಯೆಗಳಿಂದ, ತಿಳಿದುಬರುತ್ತದೆ. ಕಳೆದ ಅರ್ಧ ಶತಮಾನದ ಪ್ರತಿ ದಶಕದಲ್ಲೂ ರೋಗಗಳ ಸ್ವಭಾವ, ಕಾರಣ ಮತ್ತು ಪ್ರತಿಬಂಧಕಗಳ ವಿಚಾರ ಅದೆಷ್ಟೋ ಆವಿಷ್ಕಾರಗಳು ನಡೆದಿವೆ, ನಡೆಯುತ್ತಲಿವೆ. ಇಂಥ ಆವಿಷ್ಕಾರಗಳಿಂದಲೇ ಇಂದಿನ ಮಕ್ಕಳು, ನಮ್ಮ ಮುಂದಿನ ಜನಾಂಗ, ಷಷ್ಟ್ಯಬ್ದಿ ಪೂರ್ತಿ ಮಾಡಿದ ಮೇಲೂ ಅಷ್ಟ ವರ್ಷಗಳಷ್ಟು ಆಯುಷ್ಮಂತವಾಗ ಬಲ್ಲದೆಂಬುದು ವೈಜ್ಞಾನಿಕರ ವಾದ. ಇಪ್ಪತ್ತನೆಯ ಶತಮಾನದ ಆದಿಯಲ್ಲಿ 'ಡಿಫ್ತೀರಿಯ'ವೆಂಬ ಗಂಟಲುರೋಗಕ್ಕೆ ಅದೆಷ್ಟೋ ಮಕ್ಕಳು ಬಲಿಯಾಗುತ್ತಿದ್ದುವು. ಈಗ ಆ ರೋಗಾಣುಗಳನ್ನು ಪ್ರತಿ ವಿಷ(Antitoxin)ದಿಂದ ಕ್ಷಿಪ್ರದಲ್ಲೇ ತಡೆಯಬಹುದು. ನೀರನ್ನು ಶುದ್ಧೀಕರಣದಿಂದಲೂ, ಹಾಲನ್ನು ಸುರಕ್ಷಿತವಾಗಿ ಜೋಪಾಸನೆಮಾಡುವ ವಿಧಾನ (Pasturisation)ದಿಂದಲೂ ಮತ್ತು ಶುಚಿತ್ವದ ಉತ್ತಮ ವ್ಯವಸ್ಥೆ (Sanitation)ಗಳಿಂದಲೂ ವಿಷಮಜ್ವರದ ಸೋಂಕನ್ನೂ ನಿವಾರಿಸಬಹುದು.

ಕ್ಷಯರೋಗಕ್ಕೆ ತುತ್ತಾಗಿ ಸಾಯುವವರು ೧೯೦೦ನೆಯ ಇಸವಿಯಲ್ಲಿ ಈ ಲೋಕದಲ್ಲಾಗುವ ಮರಣಗಳ ಸಂಖ್ಯೆಯ ಪ್ರಥಮ ಶ್ರೇಣಿಯಲ್ಲಿದ್ದರು. ಈಗ ಅತ್ಯಾಶ್ಚರ್ಯಕರ ಶೋಧಗಳಿಂದಾಗಿ ಕ್ಷಯದಿಂದ ಮಡಿಯುವವರು ಮೃತ್ಯುಸಂಖ್ಯೆಯನ್ನು ಹೆಚ್ಚಿಸುವದರಲ್ಲಿ ಏಳನೆಯ ಸ್ಥಾನದಲ್ಲಿರುವರು. ಮನುಷ್ಯನ ಆಯುಃಪ್ರಮಾಣವನ್ನು ಹೆಚ್ಚಿಸಿದುದರ ಕಾರಣಗಳಲ್ಲಿ ಕ್ಷಯರೋಗ ಚಿಕಿತ್ಸೆ ಮತ್ತು ನಿವಾರಣೆಗಳೂ ಬಹು ಮುಖ್ಯವಾಗಿವೆ.

ಇಷ್ಟೆಲ್ಲ ಪ್ರಗತಿಪರ ವ್ಯವಸ್ಥೆಗಳಿದ್ದರೂ ಈಗಿನ ವೈದ್ಯ ವಿಜ್ಞಾನವು ಅರವತ್ತು ವರುಷ ಪ್ರಾಯದೊಳಗೆ ಮುಪ್ಪನ್ನು ತಡೆಹಿಡಿಯಲಾರದೆ, ಹೃದ್ರೋಗ, ಕೆನ್ಸರ್ ಇತ್ಯಾದಿ ರೋಗಗಳಿಗೆ ಸಮರ್ಪಕ ಚಿಕಿತ್ಸೆಯಿಲ್ಲದೆ, ಈ ಮುಪ್ಪಿನ ರೋಗಗಳಿಗೆ ಬಲಿಯಾಗುವವರನ್ನು ಆರೋಗ್ಯವಂತರಾಗಿ ಬಾಳಲು ಸಹಾಯ ಮಾಡುವುದಿಲ್ಲವೆನ್ನುವ ಮಂದಿಯೂ ಇದ್ದಾರೆ. ಆದ ದರಿಂದ ನಿಜವಾಗಿ ಮನುಷ್ಯನು ಶತಾಯುವಾಗಬಲ್ಲನೇ ಎಂಬ ಪ್ರಶ್ನೆಯು ತಲೆದೋರುವುದು. ಇಪ್ಪತ್ತೈದನೆಯ ವಯಸ್ಸಿನಲ್ಲಿ ಮಾನವನು ಪ್ರಾಪ್ತವಯಸ್ಕನೆಂದು ತಿಳಿದರೆ, ಈ ಇಪ್ಪತ್ತೈದು ವರುಷಗಳ ಆರು ಯಾ ಎಂಟು ಪಾಲಷ್ಟು ದೀರ್ಘವಾದ ಆಯುಸ್ಸು (ಇತರ ಮೃಗಗಳು ವಯಸ್ಸಿಗೆ ಬಂದ ಮೇಲೆ ಬಾಳುವ ಹಾಗೆ) ಅವನ ಪೂರ್ಣಾಯುಷ್ಯವೆನ್ನುವ ಡಾಕ್ಟರರೂ ವಿಜ್ಞಾನಿಗಳೂ ಇದ್ದಾರೆ ಎಂದರೆ, ೧೫೦ರಿಂದ ೨೦೦ರ ವರೆಗೆ ಬಾಳುವುದು ಮನುಷ್ಯನಿಗೆ ಸಹಜ ಸಾಧ್ಯ! ಹಾಗಾದರೆ 'ಶತಮಾನ ಬಾಳೋಣ' ಎಂಬುವ ವೇದಕಾಲೀನ ಪ್ರಾರ್ಥನೆಯ ಆಯುಷ್ಯ ಏನು ಮಹಾ, ಎಂದು ನೀನೆನ್ನಬಹುದು.

ಒಬ್ಬ ವ್ಯಕ್ತಿಯು ಎಷ್ಟು ವರುಷ ಬಾಳಬಲ್ಲನೆಂದು ಇನ್ನೊಂದು ಸಾಧಾರಣ ರೀತಿಯಲ್ಲಿ ಲೆಕ್ಕಹಾಕಬಹುದು. ಆ ವ್ಯಕ್ತಿಯ ತಾಯ್ತಂದೆ ಮತ್ತು ಅಜ್ಜ-ಅಜ್ಜರ ಪ್ರಾಯಗಳನ್ನು ಸೇರಿಸಿ ಅದಕ್ಕೆ ನಾಲ್ಕರಿಂದ ಭಾಗಿಸಿದರೆ ಸಿಕ್ಕುವುದೇ ವ್ಯಕ್ತಿಯ ಆಯುಸ್ಸು. ಆನುವಂಶಿಕವಾಗಿ ದೀರ್ಘಾಯುಗಳಾಗಬಲ್ಲೆವೆಂಬ ನಂಬಿಕೆಯೇ ಈ ತೆರನಾದ ಕಲ್ಪನೆಗೆ ಆಧಾರ. ಆದರೆ, ತಾಯ್ತಂದೆಗಳ ಪ್ರಾಯ ಸಾಧಾರಣ ನಲವತ್ತೆಂಟು ಇದ್ದರೂ ಇಂದಿನ ಮಕ್ಕಳು ಅರವತ್ತೆಂಟರ ವರೆಗೆ ಹೇಗೆ ಈಚಿಗಿನ ಆರೋಗ್ಯಸೂತ್ರಗಳಿಂದಾಗಿ ಬಾಳಬಲ್ಲರೋ, ಹಾಗೆಯೇ ಮನೋದಾರ್ಢ್ಯ, ವೈಜ್ಞಾನಿಕ ಪ್ರಗತಿಗಳಿಂದ "ಶತಮಾನ ಬಾಳೋಣ"ವೆಂದು ಹಾರೈಸಿದರೆ ಪೂರ್ಣಾಯುಷಿಗಳಾಗೋಣವೆಂದಿಷ್ಟೆ ಹೇಳಿದಂತಾಗುವುದು. ಇಚ್ಛಾಮರಣಿಗಳ, ಅಮರ ಋಷಿ ಮುನಿಗಳ ಆಯುಷ್ಯವೇನೊ ಅನಂತವಿದೆ, ಆದರೆ ನಾವು ಸಹಜವಾಗಿ ಬಾಳೋಣ ಎಂದರೆ ಶತಮಾನ ಬಾಳೋಣ.

[ಆಧಾರದಿಂದ]



ಬಾಳಿನ ಸಿಹಿ-ಕಹಿ

(ಲೇಖಕರು ಡಾ| ವಿ. ಆರ್. ಭಟ್, ಎಮ್. ಬಿ. ಬಿ. ಎಸ್.

"ಇಂದಿನ ಕಾಫಿಗೆ ಸಕ್ಕರೆ ಹೆಚ್ಚು," ಎಂದು ಅದನ್ನು ಸವಿಯುತ್ತ ಹೇಳಿದರು, ಸದಾನಂದರಾಯರು.

"ಹುಡಿಯು ಕಡಿಮೆಯಾದ ತಪ್ಪಿಗೋ, ಏನೋ," ಎಂಬುದು ಡಾಕ್ಟರ್ ರಮಾನಂದರ ಅಭಿಪ್ರಾಯ.

"ಆದರೂ, ನೋಡಿ ಡಾಕ್ಟರರೇ, ಸಕ್ಕರೆ ಕಡಿಮೆಯಾದರೆ ಚಿಂತೆಯಿಲ್ಲ. ನಾವು ಬೇಕಾದರೆ ಕೂಡಿಸಬಹುದು; ಹೆಚ್ಚಾದರೆ ತೊಂದರೆಯೇ. ಡಿಕೊಕ್ಷನ್ ಇಲ್ಲಿಲ್ಲ. ನೀರು ಹಾಕಿ ರುಚಿಯನ್ನು ಇನ್ನೂ ಕೆಡಿಸಬೇಕು........ನಿಮ್ಮ ಇಷ್ಟು ಮದ್ದುಗಳಲ್ಲಿ ಸಕ್ಕರೆಯ ಸಿಹಿಯನ್ನು ಕಡಿಮೆಮಾಡುವ ಮದ್ದಿಲ್ಲವೇ?" ಎಂದು ಸದಾನಂದರು ನಗುತ್ತ ಕೇಳಿದರು.

ಡಾಕ್ಟರರು ಯೋಚನಾಪರರಾದರು. ಸದಾನಂದರು ಕಾಫಿ ಕುಡಿದು ಮುಗಿಸಿ ಕಪ್ಪನ್ನು ಕೆಳಗಿಟ್ಟರೂ, ಡಾಕ್ಟರರು ಯೋಚಿಸುತ್ತಲೇ ಇದ್ದರು. ಇದನ್ನು ನೋಡಿ ಸದಾನಂದರೆಂದರು: "ಸುಮ್ಮನೆ ಕೇಳಿದೆ, ಡಾಕ್ಟರರೇ, ತಮಾಷೆಗಾಗಿ! ಇದಕ್ಕೇಕೆ ಇಷ್ಟು ಯೋಚನೆ?"

ಡಾಕ್ಟರರು ನಿಧಾನವಾಗಿ ಹೇಳಿದರು: "ನೀವು ಕೇಳುವಂತಹ ಒಂದು ಮದ್ದು ನಿಜವಾಗಿಯೂ ಇದೆ, ಅದರ ವಿಷಯವೇ ಆಲೋಚಿಸುತ್ತಿದ್ದೆ."

"ಅದೆಂತಹ ಮದ್ದು?" ಎಂದು ಕೇಳಿದರು, ಸದಾನಂದರು.

"ಅದು ಒಂದು ಗಿಡ, ಅದರ ಎಲೆಯನ್ನು ಒಂದು ನಿಮಿಷ ಜಗಿದರೆ ಮತ್ತೆ ಕೆಲಹೊತ್ತು ಯಾವ ಸಿಹಿ ಪದಾರ್ಥದ ಸಿಹಿಯೂ ತಿಳಿಯುವುದಿಲ್ಲ," ಡಾಕ್ಟರರೆಂದರು.

"ತಮಾಷೆ ಮಾಡುತ್ತೀರಾ, ಡಾಕ್ಟರರೇ?" ಎಂದು ಸಂಶಯಪಡುತ್ತ ಪ್ರಶ್ನಿಸಿದರು.

"ಇಲ್ಲ, ಆ ಗಿಡದ ಎಲೆಯು ನನ್ನ ಹತ್ತಿರವೇ ಇದೆ. ಬೇಕಾದರೆ ನೋಡಿರಂತೆ," ಎಂದರು, ಡಾಕ್ಟರರು.

"ಈಗಲೇ ತೋರಿಸಿರಿ," ಎಂದು ಸದಾನಂದರು ಕುತೂಹಲದಿಂದ ಕೇಳಿದರು. ಡಾಕ್ಟರರು ತಮ್ಮ ಮುಂದಿರುವ ಮೇಜಿನ ಅನೇಕ ಡ್ರಾವರುಗಳಲ್ಲಿಯ ಒಂದರ ಬೀಗ ತೆಗೆದು ಅದರಿಂದ ಒಂದು ಪೆಟ್ಟಿಗೆಯನ್ನು ಹೊರ ತೆಗೆದರು. ಆ ಪೆಟ್ಟಿಗೆಯ ಬಾಗಿಲು ತೆರೆದು, ಅದರಿಂದ ಒಂದು ಲಕೋಟೆಯನ್ನು ತೆಗೆದರು. ಆ ಲಕೋಟೆಯನ್ನು ಬಿಡಿಸಿ ಒಣಗಿದ ಒಂದು ಸಣ್ಣ ಗಿಡವನ್ನು ತೆಗೆದರು. ಆ ಗಿಡದಲ್ಲಿ ಹತ್ತು-ಹನ್ನೆರಡು ಎಲೆಗಳಿದ್ದುವು. ಅದನ್ನು ಸದಾನಂದರಿಗೆ ತೋರಿಸಿ ಅದರಿಂದ ಒಂದು ಎಲೆಯ ಅರ್ಧವನ್ನು ತೆಗೆದು ಸದಾನಂದರಿಗೆ ಕೊಟ್ಟು, ಆ ಗಿಡವನ್ನು ಮೊದಲಿನಂತೆ ಲಕೋಟೆಯಲ್ಲಿ ಹಾಕಿ, ಆ ಲಕೋಟೆಯನ್ನು ಡ್ರಾವರಿನಲ್ಲಿಟ್ಟು, ಬೀಗ ಹಾಕಿ, ಭದ್ರಪಡಿಸಿದರು.

ಆ ಒಣಗಿದ ಗಿಡವನ್ನು ಈ ತೆರನಾಗಿ ಭದ್ರಪಡಿಸಿಟ್ಟುದನ್ನು ನೋಡಿ ಸದಾನಂದರು ಕೇಳಿದರು: "ಏನು, ಡಾಕ್ಟರರೇ, ಇದೇನು ಈ ಒಣಗಿಡಕ್ಕೆ ಇಷ್ಟು ಉಪಚಾರ? ಭೂಲೋಕದಲ್ಲಿ ಈ ಜಾತಿಯ ಇನ್ನೊಂದು ಗಿಡವಿಲ್ಲವೆಂಬಂತೆ ವರ್ತಿಸುತ್ತೀರಲ್ಲ?"

ಡಾಕ್ಟರರು ನಸುನಕ್ಕು ಹೇಳಿದರು: "ಹಾಗೇನೂ ಇಲ್ಲ; ಈ ಗಿಡವು ಬೊಂಬಾಯಿ ಪ್ರಾಂತ್ಯದಲ್ಲಿ ಅಧಿಕವಾಗಿ ಬೆಳೆಯುತ್ತದೆಯೆಂದು ಬಲ್ಲವರಿಂದ ಕೇಳಿರುತ್ತೇನೆ."

"ಹಾಗಾದರೆ ಇಂತಹ ಭದ್ರತೆ ಏಕೆ? ನಿಮ್ಮ ಮದ್ದಿನ ಬಾಟ್ಲಿಗಳ ಸಾಲುಗಳಲ್ಲಿ ಇದಕ್ಕೂ ಒಂದು ಬಾಟ್ಲಿಯಲ್ಲಿ ಸ್ಥಾನ ಸಿಗದೇ?" ಸದಾನಂದರ ಕುತೂಹಲಭರಿತ ಪ್ರಶ್ನೆ.

ಡಾಕ್ಟರರು ಅರೆನಿಮಿಷ ಯೋಚಿಸಿ, ಬಳಿಕ ಹೇಳಿದರು: "ಅದರ ವಿಷಯ ಒಂದು ಕತೆಯೇ ಇದೆ, ಸದಾನಂದರೇ. ನಿಮಗೆ ಕೇಳುವ ಇಷ್ಟವಿದ್ದರೆ ಹೇಳುತ್ತೇನೆ."

ಸದಾನಂದರು ಆತುರದಿಂದ ಹೇಳಿದರು; "ಇಷ್ಟವೇ, ಡಾಕ್ಟರರೇ, ನೀವು ಹೇಳುವ ಯಾವ ಕತೆಯೂ 'ಕತೆ'ಯಲ್ಲ; ನಿಜವಾಗಿಯೂ ನಡೆದುದು ಮತ್ತು ನಿಮ್ಮ ಸ್ವಂತ ತಿಳುವಳಿ

ಕೆಗೆ ಬಂದುದು ಎಂಬುದನ್ನು ಬಲ್ಲೆನಾದುದರಿಂದ, ಅದನ್ನು ಈಗಲೇ ಹೇಳಿರಿ. ನೀವು 'ಕತೆ'ಹೇಳದೆ ತುಂಬ ಶನಿವಾರಗಳಾದುವು."

ಸದಾನಂದರು ಒಂದು ಬ್ಯಾಂಕಿನ ಮೆನೇಜರರು. ಅವರೂ ಡಾಕ್ಟರ್ ರಮಾನಂದರಾಯರೂ ಅನೇಕ ವರ್ಷ ಒಂದೇ ಶಾಲೆಯಲ್ಲಿ ಸಹಪಾಠಿಗಳಾಗಿದ್ದರು ಮತ್ತು ಸ್ನೇಹಿತರೂ ಆಗಿದ್ದರು. ಇದರ ಫಲವಾಗಿ, ಸದಾನಂದರು,ಪ್ರತಿ ಶನಿವಾರ ಸಂಜೆ ಅವರಿಗೆ ಸಮಯಸಿಗುತ್ತಿದ್ದುದರಿಂದ,ತಪ್ಪದೆ ಡಾಕ್ಟರರ ಚಿಕಿತ್ಸಾಲಯಕ್ಕೆ ಬರುವುದು ರೂಢಿಯಾಗಿತ್ತು. ಡಾಕ್ಟರರಿಗೆ ಸಮಯವಿದ್ದರೆ ಕಾಫಿ ತರಿಸಿ ಕುಡಿದು, ಇಬ್ಬರೂ ಮಾತನಾಡುತ್ತ ಕಾಲಕಳೆಯುವರು. ಅಂತಹ ಸಂದರ್ಭಗಳಲ್ಲಿ ಒಂದೊಂದು 'ಕತೆ'ಯು ಹೊರಬೀಳುವುದೂ ಇತ್ತು.

ಡಾಕ್ಟರರು 'ಕತೆ'ಯನ್ನು ಪ್ರಾರಂಭಿಸಿದರು:—"ಈಗ ಐದು ವರುಷಗಳ ಹಿಂದಿನ ಮಾತು. ಜನವರಿ ತಿಂಗಳು. ಅದಾಗಲೇ ನಾನು ಎಂ. ಬಿ. ಬಿ. ಎಸ್. ಕೊನೆಯ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಮದ್ರಾಸಿನ ಜನರಲ್ ಆಸ್ಪತ್ರೆಯಲ್ಲಿ ಹೌಸ್ ಸರ್ಜನ್ ಆಗಿದ್ದೆನು. ಅಲ್ಲಿ ಕೆಲಸ ಪ್ರಾರಂಭಿಸಿ ಎಳೆಂಟು ದಿವಸಗಳಲ್ಲಿ ನನಗೆ ಅಲ್ಲಿಯ ಕ್ಷಯರೋಗಿಗಳ ವಾರ್ಡಿನಲ್ಲಿರುವ ಕೆಲವು ರೋಗಿಗಳನ್ನು ನೋಡುವ ಕೆಲಸವನ್ನು ಕೊಟ್ಟರು. ನಾನು ಮೊದಲನೆಯ ದಿನ ಹೋಗಿ ಎಲ್ಲ ರೋಗಿಗಳ 'ಕೇಸ್ ಶೀಟು'ಗಳನ್ನು ನೋಡಿ, ಆಯಾ ರೋಗಿಗಳೊಡನೆ ಮಾತನಾಡಿದೆ. ಒಂದು 'ಕೇಸ್ ಶೀಟ್'ನಲ್ಲಿ 'ಪೇಶಂಟ್'ರ ಹೆಸರು 'ಸಾಂತಪ್ಪ ಹೆಗ್ಡೆ' ಎಂದಿತ್ತು. ಇವರು ನಮ್ಮ ಕಡೆಯವರೆಂದೆಣಿಸಿ, ಅವರೊಡನೆ ಕನ್ನಡದಲ್ಲಿ, "ನಿಮ್ಮ ಊರು ಯಾವುದು?" ಎಂದು ಕೇಳಿದೆ. ನಾನು ನೋಡುತ್ತಿದ್ದಂತೆ ಅವರ ಮುಖವು ಸಂತೋಷಭಾವವನ್ನು ತಾಳಿತು. ಒರಗಿದ್ದಲ್ಲಿಂದ, ನಾನು, ಬೇಡವೆಂದು ಸೂಚಿಸಿದರೂ, ಮೆಲ್ಲನೆ ಎದ್ದು ಕೂತುಕೊಂಡು, ಕೈ ಜೋಡಿಸಿ ನನ್ನನ್ನು ವಂದಿಸಿ, ನುಡಿದರು: "ನಮಸ್ಕಾರ, ಡಾಕ್ಟರರೇ. ನನಗೆ ಕಡಿಮನ್ನೂರು—ಮಂಗಳೂರಿನಿಂದ ಗುರುಪುರಕ್ಕೆ ಹೋಗುವ ದಾರಿಯಲ್ಲಿ ಐದನೇ ಮೈಲಿಕಲ್ಲಿನ ಹತ್ತಿರ. ನಿಮಗೆ ಮಂಗಳೂರೇ?"

ನಾನು ಒಪ್ಪಲು ಅವರು, "ನಿಮ್ಮನ್ನು ನೋಡಿ ಬಹಳ ಸಂತೋಷವಾಗುತ್ತದೆ, ಡಾಕ್ಟರರೇ. ಇಲ್ಲಿ ನನಗೆ ದಾದಿಯವರೊಡನೆಯೂ, ಕೆಲಸದ ಆಳುಗಳೊಡನೆಯೂ ಮಾತನಾಡುವಂತಿಲ್ಲ. ನನಗೆ ಇಂಗ್ಲಿಷೂ ತಮಿಳೂ ತಿಳಿಯದು. ಇದರಿಂದ ಬಹಳ ತೊಂದರೆಪಡುತ್ತಿದ್ದೆನು. ಇನ್ನು ಮೇಲೆ ನನಗೆ ಹೆದರಿಕೆಯಿಲ್ಲ. ನನ್ನನ್ನು ನೋಡುವ ಡಾಕ್ಟರರಾದ ನೀವಾದರೂ ನಮ್ಮವರಲ್ಲವೇ?" ಎಂದರು.

ಅವರ 'ಕೇಸ್ ಶೀಟ'ನ್ನು ನೋಡಿ ಅವರ ಕಾಯಿಲೆಯ ಅನುಭವವನ್ನು ಪಡೆಕೊಂಡೆನು. ಏಳು ದಿನಗಳ ಹಿಂದೆ ಅವರು ಅಲ್ಲಿಗೆ ಬಂದಿದ್ದರು. ಬರುವಾಗ ರಕ್ತವನ್ನು ಕಾರುತ್ತಿದ್ದರು. ಒಂದು ದಿನದೊಳಗೆ ಅದು ನಿಂತಿತ್ತು. 'ಎಕ್ಸ್‌ರೇ' ಪಟ ಇತ್ಯಾದಿಗಳಿಂದ ತಿಳಿದುಬಂದುದೇನೆಂದರೆ, ಅವರಿಗೆ ಕ್ಷಯರೋಗ ಇತ್ತೆಂಬುದು ಮತ್ತು ಎರಡೂ ಶ್ವಾಸಕೋಶಗಳು ಹೆಚ್ಚಿನ ಮಟ್ಟಿಗೆ ವ್ಯಾಧಿಪೀಡಿತವಾಗಿದ್ದುದರಿಂದ ಅವರಿಗೆ ನಮ್ಮ ಚಿಕಿತ್ಸೆಯಿಂದ ಇನ್ನು ಹೆಚ್ಚಿನ ಲಾಭವೂ ಆಗದೆಂಬುದು. ನಾನು ಅವರನ್ನು ಪರೀಕ್ಷೆಮಾಡಿಯಾದ ಮೇಲೆ ಅವರೆಂದರು: "ಡಾಕ್ಟರರೇ, ನಾನು ನಮ್ಮ ಕುಟುಂಬ-ಮಿತ್ರರೊಡನೆ ತಿರುಪತಿಯಾತ್ರೆಗೆ ಹೋಗಿದ್ದೆನು. ಅಲ್ಲಿಂದ ಮರಳುವಾಗ ಮದರಾಸನ್ನು ನೋಡುವ ಆಸೆಯಾಯಿತು. ಇಲ್ಲಿಗೆ ಬಂದ ಮರುದಿನವೇ ಬೆಳಿಗ್ಗೆ ಎದ್ದೊಡನೆ ರಕ್ತವಾಂತಿಯಾಯಿತು. ಆಸ್ಪತ್ರೆಗೆ ಬಂದೆ; ಇಲ್ಲಿ ಕೆಲಸಮಯ ಇರಬೇಕೆಂದರು. ದೇವರ ದಯೆಯಿಂದ ರಕ್ತಹೋಗುವದು ಮರುದಿನದಿಂದಲೇ ನಿಂತುಹೋಯಿತು, ಈಗ ದೊಡ್ಡ ಡಾಕ್ಟರರು ತಿಳಿಸಿರುವರೇನೆಂದರೆ, ನನಗೆ ಕ್ಷಯರೋಗವಿದೆಯಂತೆ. ಮತ್ತು ಚಿಕಿತ್ಸೆಯಿಂದ ಹೆಚ್ಚಿನ ಗುಣವೂ ಆಗದಂತೆ, ಆದರೂ ನಾನು ಇನ್ನೂ ಒಂದು ವಾರ ಇಲ್ಲಿರುವುದು ಉತ್ತಮವೆನ್ನುತ್ತಾರೆ. ಇದರಂತೆ ಇನ್ನೊಂದು ವಾರ ಇಲ್ಲಿರುವೆನು. ಬಳಿಕ ಊರಿಗೆ ಮರಳುವೆನು. ದೇವರು ನಡೆಸಿದಂತಾಗಲಿ!"

ಸಾಂತಪ್ಪ ಹೆಗ್ಡೆಯವರು ಬಹಳ ಸಾಧು ಸ್ವಭಾವದ ಮನುಷ್ಯರಾಗಿದ್ದರು. ಇದರಿಂದಲೂ ಮತ್ತು ಅವರಿಗೆ ಭಾಷಾಕಷ್ಟದಿಂದ ಯಾರೊಡನೆಯೂ ಮಾತನಾಡಲಾಗದಿದ್ದುದರಿಂದಲೂ, ನಾನು ಪ್ರತಿದಿನವೂ ಸಮಯ ಸಿಕ್ಕಿದಾಗ ಒಂದೆರಡು ಗಳಿಗೆ ಅವರೊಡನೆ ಮಾತನಾಡುತಿದ್ದೆನು. ಅವರಿಗೆ ನಾನು ಮಾಡಿದ ಒಂದು ಉಪಕಾರವೆಂದರೆ ದಿವಸಕ್ಕೆ ಎರಡು ಸಲ ಎಲೆಅಡಿಕೆ ಜಗಿಯಲು ಸಮ್ಮತಿ ಕೊಟ್ಟುದು. ಆಸ್ಪತ್ರೆಯ ಕಾಯಿದೆ ಪ್ರಕಾರ ಇದು ಡಾಕ್ಟರರ ಅನುಮತಿ ಇಲ್ಲದೆ ಕೂಡದ್ದಾದುದರಿಂದ, ನನ್ನ ಸಮ್ಮತಿಯಿಂದ ಅವರಿಗೆ ಈ ವಿಷಯದಲ್ಲಿ ತುಂಬಾ ಹರ್ಷವಾಯಿತು. ನಾವು ಅನೇಕ ವಿಷಯಗಳ ಕುರಿತು ಮಾತನಾಡುತ್ತಿದ್ದೆವು. ಒಮ್ಮೆ ಮಾತು ವಿಚಿತ್ರ ಗಿಡಗಳ ಕಡೆಗೆ ಹೋಯಿತು. ಸಕ್ಕರೆಯ ಸವಿಯು ತಿಳಿಸದಂತೆ ಮಾಡುವ ಗಿಡದ ಕುರಿತು ಅವರೇ ನನಗೆ ಮೊದಲು ತಿಳಿಸಿದ್ದು. ನಾನು ನಂಬದಂತಿರುವುದನ್ನು ಕಂಡು ಅವರೆಂದರು: "ಡಾಕ್ಟರರೇ, ಬದುಕಿ ಉಳಿದರೆ ಇನ್ನೊಮ್ಮೆ ಮಳೆಗಾಲದಲ್ಲಿ ಈ ಗಿಡವನ್ನು ನಿಮಗೆ ಹೇಗಾದರೂ ಮಾಡಿ ಖಂಡಿತವಾಗಿಯೂ ಕೊಡುವೆನು. ಅದು ಮಳೆ ಬಂದೊಡನೆ ನಮ್ಮ ಹಿತ್ತಿಲ ಒಂದು ಮೂಲೆಯಲ್ಲಿ ಚಿಗುರುತ್ತದೆ. ಏಳು ವರ್ಷಗಳ ಹಿಂದೆ ಪೂಣೆಯಿಂದ ನಾನು ಇದನ್ನು ತಂದುದು."

ನಾನು ಈ ಮಾತುಗಳನ್ನು ಅಷ್ಟೊಂದು ಗಣ್ಯಮಾಡಲಿಲ್ಲ.

ಏಳು ದಿನಗಳಲ್ಲಿ ಅವರು ಊರಿಗೆ ಮರಳಿದರು. ನನ್ನನ್ನು ಬೀಳ್ಕೊಡುವಾಗ ಅವರಿಗೆ ಕಣ್ಣಿಂದ ಎರಡು ಬೊಟ್ಟು ನೀರು ಬರದಿರಲಿಲ್ಲ. ಮಂಗಳೂರಿಗೆ ನಾನು ಬಂದಾಗ ಅವರಲ್ಲಿಗೆ ಬರಬೇಕೆಂದು ಒತ್ತಾಯವನ್ನೂ ಪಡಿಸಿದರು.

ನಾನು ಅವರನ್ನು ತಿರುಗಿ ಕಂಡುದು ಎರಡೂ ಕಾಲು ವರ್ಷಗಳ ತರುವಾಯ; ಮಂಗಳೂರಿನಲ್ಲಿ, ಮಾರ್ಗದಲ್ಲಿ ನಾವು ಎದುರುಪದುರಾದೆವು. ಸಾಂತಪ್ಪ ಹೆಗ್ಡೆಯವರು, "ನಮಸ್ಕಾರ, ಡಾಕ್ಟರರೇ, ಹೇಗಿದ್ದೀರಿ? ಎಂದು ಬಂದಿರಿ, ಮಂಗಳೂರಿಗೆ? ನಮ್ಮ ಕಡೆಗೆ ಬರಲೇ ಇಲ್ಲವಲ್ಲಾ? ಈಗಲೂ ಮದರಾಸಿನಲ್ಲಿಯೇ ಇದ್ದೀರಾ? ಬನ್ನಿರಿ, ಕಾಫಿ ಕುಡಿಯುವಾ" ಎಂದರು. ಅವರ ಎಲ್ಲ ಪ್ರಶ್ನೆಗಳಿಗೆ ಉತ್ತರಕೊಟ್ಟು, ಕೊನೆಗೆ, "ನಾನು ಇಲ್ಲೇ 'ಪ್ರೆಕ್ಟಿಸ್' ಮಾಡಲಪೇಕ್ಷಿಸುತ್ತೇನೆ. ಇನ್ನು ಒಂದೆರಡು ತಿಂಗಳೊಳಗೆ ನನ್ನ ಚಿಕಿತ್ಸಾಲಯವು ಪ್ರಾರಂಭವಾಗುವುದು. ಎಂದು ಹೇಳಿ, ಅದರ ಸ್ಥಳವನ್ನೂ ಹೇಳಿದೆ. ಅವರ ಆರೋಗ್ಯದ ವಿಷಯ ವಿಚಾರಿಸಲು, ಅವರ ಕೆಮ್ಮು ಎದೆನೋವು ಇತ್ಯಾದಿ ಮೊದಲಿನಷ್ಟಿರದಿದ್ದರೂ ಆಗಾಗ ಕಫದಲ್ಲಿ ಸ್ವಲ್ಪ ರಕ್ತಕಾಣಿಸುವುದೆಂದರು. ನೋಡಲು ಅವರ ಶರೀರ ಪ್ರಕೃತಿಯಲ್ಲಿ ಮುಂಚಿಗಿಂತ ಹೆಚ್ಚಿನ ವ್ಯತ್ಯಾಸವು ಕಂಡುಬರಲಿಲ್ಲ. ಕಾಫಿ ಕುಡಿಯುವುದು ಬೇಡವೆಂದರೂ ಅವರ ಒತ್ತಾಯಕ್ಕೆ ಹತ್ತಿರದ ಒಂದು ಅಂಗಡಿಗೆ ಹೋಗಿ ಅವರು ತೆಗೆಸಿಕೊಟ್ಟ ಒಂದು ಸೀಯಾಳವನ್ನು ಕುಡಿದೆನು. ಕೊನೆಗೆ ತೆರಳುವಾಗ ಅವರೆಂದರು: "ಡಾಕ್ಟರರೇ, ಆ ಗಿಡದ ವಿಷಯ ನಾನು ಇನ್ನೂ ಮರೆಯಲಿಲ್ಲ. ಆದರೆ, ಹಿಂದಿನ. ಎರಡು ಮಳೆಗಾಲಗಳಲ್ಲಿಯೂ ಅದು ನನಗೆ ಕಾಣಸಿಗಲಿಲ್ಲ. ಈ ವರ್ಷ ಕಂಡರೆ ಖಂಡಿತವಾಗಿಯೂ ನಾನೇ ಅದನ್ನು ನಿಮ್ಮ ಚಿಕಿತ್ಸಾಲಯಕ್ಕೆ ತಂದು ಕೊಡುವೆನು."

ನಾನು," ಅದರ ವಿಷಯ ಚಿಂತಿಸದಿರಿ, ಹೆಗ್ಡೆಯವರೇ! ಮುಖ್ಯ, ನೀವು ಒಳ್ಳೆಯ ಆರೋಗ್ಯದಲ್ಲಿದ್ದರೆ ಅಷ್ಟೇ" ಎಂದು ಉಪಚರಿಸಿದೆನು.

ಮೂರೇ ತಿಂಗಳಲ್ಲಿ ನನ್ನ ಈ ಚಿಕಿತ್ಸಾಲಯವು ಪ್ರಾರಂಭವಾಯಿತು. ಇದಾದ ಒಂದು ವಾರದೊಳಗೆ, ಅಬ್ಬಾ, ಆ ದಿನವನ್ನು ಇನ್ನೂ ಮರೆಯಲಾರೆ! ಜೂನ್ ೨೭ ತಾರೀಕು, ಸಂಜೆ ಏಳೂಕಾಲು ಗಂಟೆಯಾಗಿರಬಹುದು. ಮಳೆಯ ರಭಸವು ಬಹಳ ಹೆಚ್ಚಿದುದರಿಂದ ನಾನು ಇಲ್ಲಿಯೇ ಕುಳಿತಿದ್ದೆ. ಕೆಲಸದ ಹುಡುಗನೂ, ಕಂಪೌಂಡರನೂ ಎಕ್ಸ್‌ರೇ ಟೆಕ್ನಿಸಿಯನನೂ ಆಗಲೇ ಹೋಗಿದ್ದರು. ಮುಂದಿನ ಬಾಗಿಲೊಂದು ಮಾತ್ರ ತೆರೆದಿತ್ತು. ಮಳೆಯು ಸ್ವಲ್ಪ ಕಡಿಮೆಯಾದುದನ್ನು ಕಂಡು ನಾನು ಹೋಗುವುದರಲ್ಲಿದ್ದೆ. ಎದ್ದು ಕೋಟನ್ನು ಹಾಕಿಕೊಳ್ಳುವಾಗ, "ನಮಸ್ಕಾರ ಡಾಕ್ಟರರೇ" ಎಂಬುದು ಕೇಳಿಸಿತು. ಹಿಂತಿರುಗಿ ನೋಡಿದರೆ ಸಾಂತಪ್ಪ ಹೆಗ್ಡೆಯವರು, ಸ್ಥಿರಪರಿಚಿತ ನಸುನಗುವನ್ನು ಮುಖದಲ್ಲಿ ಕಾಣಿಸಿ, ಹೊಸ್ತಿಲಿನ ಹತ್ತಿರ ಕೈಜೋಡಿಸಿ ನಿಂತಿದ್ದಾರೆ. "ನಮಸ್ಕಾರ, ಹೆಗ್ಡೆಯವರೇ ಬನ್ನಿ, ಬಹಳ ಮಳೆಯಲ್ಲಿ ಬಂದಿರಲ್ಲಾ!" ಎಂದು ಹೇಳಿ ನಾನು, ಕೋಟನ್ನು ತಿರಿಗಿ ತೆಗೆದಿಟ್ಟು, ಕುರ್ಚಿಯಲ್ಲಿ ಕುಳಿತೆ. ಹೆಗ್ಡೆಯವರು ಕಾಲುಗಳನ್ನು ನೆಲಕ್ಕೆ ಬಡಿದು ಅಂಟಿರುವ ಕೆಸರನ್ನು ಬೀಳಿಸಿ, ಕಾಲೊರಸುವ ಚಾಪೆಯ ಮೇಲೆ ಚೆನ್ನಾಗಿ ಕಾಲೊರಸಿ, ಒಳಗೆ ಬಂದರು. ದೀಪದ ಬೆಳಕಿನಲ್ಲಿ ಅವರನ್ನು ಸರಿಯಾಗಿ ಕಂಡೊಡನೆ ನನಗೆ ಆಶ್ಚರ್ಯವಾಯಿತು. ಅವರು ಉಟ್ಟ ಬಿಳಿ ಶರ್ಟಿನಲ್ಲಿ ಎದುರುಗಡೆ ಮಾಸಿದ ಕೆಂಪು ಬಣ್ಣದ ದೊಡ್ಡ ದೊಡ್ಡ ಕಲೆಗಳಿದ್ದುವು. ಅವರಿಗೆ ರಕ್ತವಾಂತಿಯಾಗಿತ್ತೆಂಬುದಕ್ಕೆ ಅದೇ ಸಾಕ್ಷಿಯೆಂಬುದು ನನಗೆ ತಿಳಿಯದಿರಲಿಲ್ಲ. ಆದುದರಿಂದ ನಾನು ಕೇಳಿದೆ: "ಹೆಗ್ಡೆಯವರೇ, ರಕ್ತವಾಂತಿಯಾಯಿತೇ? ಯಾವಾಗ?" "ಅದು ನಮ್ಮ ಮನೆಯಲ್ಲಿದ್ದಾಗ, ಡಾಕ್ಟರರೆ; ಸಂಜೆ ಐದು ಗಂಟೆಯಾಗಿರಬಹುದು. ಇಂದು ಬಹಳ ರಕ್ತಹೋಯಿತು. ಅಲ್ಲಿಂದ ಕಾಲ್ನಡೆಯಾಗಿ ಇಲ್ಲಿ ಬರಲು ನನಗೆ ಎರಡು ಗಂಟೆ ತಗಲಿತು," ಎಂದು ಶಾಂತವಾಗಿ ಹೇಳಿದರು.

ನಾನು ಇದನ್ನು ಕೇಳಿ ಗಾಬರಿ ಪಟ್ಟು ಹೇಳಿದೆ: "ಏನಿದು, ಹೆಗ್ಡೆಯವರೇ, ರಕ್ತ ಹೋದಮೇಲೂ ನೀವು ಹೀಗೆ ಬರುವುದು ಹುಚ್ಚುತನವಲ್ಲವೇ?"

ಹೆಗ್ಡೆಯವರು ನಕ್ಕರು: "ನಿಮ್ಮಲ್ಲಿ ಬರಲೆಂದು ಹೊರಬಿದ್ದೆ. ಆಗಲೇ ರಕ್ತವಾಂತಿಯಾಯಿತು, ಆದರೂ ಬಂದುಬಿಟ್ಟೆ."

"ಬರುವಾಗ ರಕ್ತ ಬಂತೇ?" ಎಂದು ನಾನು ಕೇಳಿದೆ.

"ಚೀ ಏನಿಲ್ಲ. ಮನೆಯಲ್ಲಿದ್ದಾಗ ಒಮ್ಮೆ ಮಾತ್ರ ಬಂದುದು," ಎಂದು ಹೇಳಿದರು, ಅವರು.

ನಾನು ನನ್ನೊಳಗೆ ವಿಚಾರಿಸಿದೆ: "ಇಷ್ಟು ರಕ್ತ ಹೋದ ಮೇಲೂ ಇವರು ನಡೆದು ಬಂದಿರುವರಲ್ಲ! ಇದು ಇವರ ಸಾಮರ್ಥ್ಯವೋ, ಹುಚ್ಚುತನವೋ? ಈಗ ಹಿಂತಿರುಗಿ ಹೋಗಲೇಕೂಡದು. ಇಷ್ಟು ದಣುವಿನಿಂದ ಈ ದಿನ ರಾತ್ರೆ ಇನ್ನೊಮ್ಮೆ ರಕ್ತಬಂದರೇನು ಗತಿ? ಹೇಗಾದರೂ ಮಾಡಿ ಇವರನ್ನು ಆಸ್ಪತ್ರೆಗೆ ಸಾಗಿಸಬೇಕು. ಆಸ್ಪತ್ರೆಯು ಎದುರಿಗೇ ಇದ್ದುದರಿಂದ ಇದು ಕಷ್ಟವಲ್ಲ. ಆದರೂ ಅವರು ಇರಿಸಿಕೊಳ್ಳುವರೋ ಇಲ್ಲವೋ, ಅದಕ್ಕೂ ಮೊದಲು ಇವರನ್ನೊಮ್ಮೆ 'ಸ್ಕ್ರೀನ್' ಮಾಡಿ ನೋಡಬೇಕು."

ಹೀಗೆ ಆಲೋಚಿಸಿ ಅವರೊಡನೆ ಹೇಳಿದೆ, "ಹೆಗ್ಡೆಯವರೇ, ನಿಮ್ಮನ್ನು 'ಸ್ಕ್ರೀನ್' ಮಾಡಲೇ?"

ಅವರು, "ಅಡ್ಡಿಯಿಲ್ಲ,ಡಾಕ್ಟರರೇ. ನಿಮ್ಮೊಡನೆಯೂ ಎಕ್ಸ್‌ರೇ ಮೆಶೀನು ಇದೆಯೆ?" ಎಂದರು.

ಅವರನ್ನು ಕರಕೊಂಡು ಎಕ್ಸ್‌ರೇ ಕೋಣೆಗೆ ಹೋದೆನು. ಅವರನ್ನು ಎಕ್ಸ್‌ರೇ 'ಸ್ಕ್ರೀನಿನ' ಹಿಂದೆ ನಿಲ್ಲಿಸಿ ಸ್ವಿಚ್ ಒನ್ ಮಾಡಿದೆನು. ಆದರೆ ಏನೂ ಕಂಡುಬರಲಿಲ್ಲ. ಎಕ್ಸ್‌ರೇ ಮೆಶೀನನ್ನು ಕೊಂಡು ಹೆಚ್ಚು ದಿವಸಗಳಾಗದಿದ್ದುದರಿಂದ ಅದನ್ನು ನಡಿಸುವುದರಲ್ಲಿ ನನಗೆ ಹೆಚ್ಚಿನ ಅನುಭವವಿರಲಿಲ್ಲ. ಆದುದರಿಂದ ನಾನು ಮಾಡಿದುದರಲ್ಲಿ ಎಲ್ಲಿಯೋ ತಪ್ಪಿರುವುದರಿಂದ ಈಗ ಸ್ಕ್ರೀನಿನ ಹಿಂದೆ ಏನೂ ಕಾಣುವುದಿಲ್ಲವೆಂದೆಣಿಸಿ ಹೆಗ್ಡೆಯವರೊಡನೆ ಹೇಳಿದೆ: "ಹೆಗ್ಡೆಯವರೇ ಮೆಶೀನಿನಲ್ಲಿ ಏನೋ ತಪ್ಪಾಗಿದೆ. ಅದರಿಂದ ಸ್ಕ್ರೀನ್ ಮಾಡಲು ಬರುವುದಿಲ್ಲ. ಒಂದು ಎಕ್ಸ್‌ರೇ ಫೋಟೋವನ್ನು ತೆಗೆಯಲೇ?" ಎಂದೆ. ಅವರು ಅದಕ್ಕೆ ಒಪ್ಪಲು, ಅವರನ್ನು ನಿಲ್ಲಿಸಿ ಎದುರಿಗೆ ಎಕ್ಸ್‌ರೇ ಫಿಲ್ಮ್ ಇಟ್ಟು ಒಂದು ಫೋಟೋ ತೆಗೆದೆ. ಅದನ್ನು ಆಗಲೇ ನೋಡಲಾಗದಿದ್ದುದರಿಂದ, ಹಾಗೆಯೇ ಇಟ್ಟು ಹೆಗ್ಡೆಯವರಿಗೆ ಆ ರಾತ್ರಿಯ ಮಟ್ಟಿಗಾದರೂ ಅವರು ಆಸ್ಪತ್ರೆಯಲ್ಲಿರಬೇಕಾದುದರ ಅವಶ್ಯಕತೆಯನ್ನು ವಿವರಿಸಿದೆ. ಅವರು ಅದಕ್ಕೆ ಒಪ್ಪಿದರು. ನಾನು ಕೋಟು ಹಾಕಿಕೊಂಡು ದೀಪಗಳನ್ನೆಲ್ಲ ನಂದಿಸಿಯಾದ ಮೇಲೆ, ನಾವಿಬ್ಬರೂ ಹೊರಬಂದೆವು.

ಹೊರಗೆ ಬಂದು ಬಾಗಿಲಿಗೆ ಬೀಗ ಹಾಕುವಾಗ ಹೆಗ್ಡೆಯವರು ಮೆಲ್ಲಗೆ ಜಗಲಿಯತ್ತ ಹೋಗುತ್ತಿದ್ದರು. ನಾನು ಬೀಗ ಹಾಕಿ ಇತ್ತ ಬಂದು ಜಗಲಿಯ ಮೆಟ್ಟಲುಗಳನ್ನು ಇಳಿಯುವಾಗ ನೋಡಿದರೆ ಹೆಗ್ಡೆಯವರು ಅಲ್ಲಿರಲಿಲ್ಲ. ನಾನು 'ಟೋರ್ಚ್ ಲ್ಯಾಂಪಿ'ನ ಪ್ರಕಾಶವನ್ನು ಸುತ್ತಲೂ ಬೀಸಿ ನೋಡಿದರೂ ಅವರ ಪತ್ತೆಯಿಲ್ಲ. ಅವರು ಆಚೀಚೆ ಹೋಗಿರಬಹುದೆಂದೆಣಿಸಿ ಹತ್ತು ನಿಮಿಷ ಅಲ್ಲಿ ನಿಂತರೂ ಅವರು ಕಾಣೆ. ಅವರು ಎದುರಿನ ಆಸ್ಪತ್ರೆಗೆ ಹೋಗಿರಬಹುದೆಂದೆಣಿಸಿ ಅಲ್ಲಿ ಹೋಗಿ ವಿಚಾರಿಸಿದರೆ ಅವರು ಅಲ್ಲಿಗೆ ಬಂದೇ ಇರಲಿಲ್ಲ. ಕೊನೆಗೆ ನಿರಾಶನಾಗಿ ಅವರ ವಿಷಯ ಚಿಂತಿಸುತ್ತ ಮನೆಯ ದಾರಿ ಹಿಡಿದೆ.

ಮರುದಿನ 'ಎಕ್ಸ್‌ರೇ ಟೆಕ್ನಿಸಿಯನ'ನು ನಾನು ಮುಂಚಿನ ದಿನ ಉಪಯೋಗಿಸಿದ ಫಿಲ್ಮನ್ನು ತಂದು ತೋರಿಸಿದನು. ಅದು ಬರಿದಾಗಿತ್ತು--ಖಾಲಿ! ಅದರಲ್ಲಿ ಪಟವೇ ಇರಲಿಲ್ಲ. ಅದರ ಕಾರಣವನ್ನು ಕೇಳಲು ಟೆಕ್ನಿಶಿಯನನು ನಕ್ಕು, "ನೀವು ತೆಗೆದದ್ದು ಸರಿಯಾಗಿರಲಿಕ್ಕಿಲ್ಲ," ಎಂದನು. ಕೂಡಲೇ ನಾವಿಬ್ಬರೂ ಹೋಗಿ 'ಮೆಶೀನ'ನ್ನು ನೋಡಿದೆವು. ಎಲ್ಲವೂ ಸರಿಯಾಗಿತ್ತು.

ಮತ್ತೊಬ್ಬ ರೋಗಿಯು ಬಂದೊಡನೆ ನಾನು ಮುಂಚಿನ ದಿನ ತೆಗೆದ ಹಾಗೆಯೇ ಅಂದೂ ಪಟ ತೆಗೆದೆನು. ಡೆವೆಲಪ್ ಮಾಡಿ ನೋಡಲು ಅದು ಸರಿಯಾಗಿತ್ತು. ಸ್ಕ್ರೀನಿಂಗ್ ಮಾಡಿ ನೋಡಲು ಅದೂ ಸರಿಯಾಗಿತ್ತು. ಇದರಿಂದ ಸಾಂತಪ್ಪ ಹೆಗ್ಡೆಯವರ ಎಕ್ಸ್‌ರೇ ಫೋಟೋ ತೆಗೆಯಲಾಗದಿದ್ದುದಕ್ಕೆ ನನಗೆ ಅತ್ಯಾಶ್ಚರ್ಯವಾಯಿತು. ಅವರು ಹಾಗೆ ಹೇಳದೆ ಕೇಳದೆ ಪರಾರಿಯಾದುದಕ್ಕಾಗಿ ಆಶ್ಚರ್ಯವೂ ಅಲ್ಲದೆ ವ್ಯಸನವೂ ಆಯಿತು.

ಆ ದಿನ ಸಂಜೆ ಸುಮಾರು ಐದು ಗಂಟೆ ಸಮಯಕ್ಕೆ, ಒಬ್ಬರು ಇಲ್ಲಿಗೆ ಬಂದರು. "ನಮಸ್ಕಾರ,ಡಾಕ್ಟರರೇ! ತಾವೇ ಅಲ್ಲವೇ ಡಾಕ್ಟರ್ ರಮಾನಂದರು? ನನ್ನ ಹೆಸರು ಐತಪ್ಪ ಹೆಗ್ಡೆ; ನಾನು ಕಡಿಮನ್ನೂರು ಸಾಂತಪ್ಪ ಹೆಗ್ಡೆಯವರ ತಮ್ಮ," ಎಂದರು. ಅವರ ಮುಖವನ್ನು ಕಂಡು ಸಾಂತಪ್ಪ ಹೆಗ್ಡೆಯವರ ಸಂಬಂಧಿಯಾಗಿರಬೇಕೆಂದು ಊಹಿಸಿದ ನನಗೆ ಇದು ಆಶ್ಚರ್ಯವೆಂದು ಕಾಣಲಿಲ್ಲ.

ನಾನು ಕುತೂಹಲದಿಂದ ಕೇಳಿದೆ: "ಸಾಂತಪ್ಪ ಹೆಗ್ಡೆಯವರು ಹೇಗಿದ್ದಾರೆ? ಊರಿಗೆ ಮರಳಿದ್ದಾರೆಯೇ?"

ಬಂದವರಿಗೆ ಕಣ್ಣೀರು ಬಂತು. ಅದನ್ನು ಅಂಗವಸ್ತ್ರದ ತುದಿಯಿಂದ ಒರಸುತ್ತ ಅವರೆಂದರು: "ಅವರು ಯಾವಾಗಲೂ ನಿಮ್ಮ ವಿಷಯ ಮಾತನಾಡುತ್ತಿದ್ದರು. ಡಾಕ್ಟರರೇ, ನಿಮ್ಮನ್ನು ಎಷ್ಟೋ ಹೊಗಳುತ್ತಿದ್ದರು. ನಿನ್ನೆ ಸಂಜೆ ಐದು ಗಂಟೆಗೆ ಅವರು ತೀರಿಹೋದರು."

ಇದನ್ನು ಕೇಳಿ ನಾನು ಆಶ್ಚರ್ಯದಿಂದ ಕಕ್ಕಾಬಿಕ್ಕಿಯಾದೆ. ಕರ್ಕಶವಾಗಿ ಕೇಳಿದೆ: "ಏನು, ಅವರು **ನಿನ್ನೆ ಸಂಜೆ ಐದು ಗಂಟೆಗೆ ತೀರಿಹೋದರೇ? ಎಲ್ಲಿ?"**

"ನಮ್ಮ ಮನೆಯಂಗಳದಲ್ಲೇ--ಕಡಿಮನ್ನೂರಲ್ಲಿ. ನಿಮ್ಮಲ್ಲಿಗೆ ಬರಬೇಕೆಂದು ಅಂಗಿಯನ್ನೆಲ್ಲ ಹಾಕಿ ಹೊರಟಿದ್ದರು. ಯಾವುದೋ ಒಂದು ಗಿಡವನ್ನು ನಿಮಗೆ ಕೊಡಬೇಕೆನ್ನುತ್ತಿದ್ದರು. ಅದನ್ನು ಹಿಡಿದುಕೊಂಡು ಮನೆಯಿಂದ ಅಂಗಳಕ್ಕೆ ಕಾಲಿಟ್ಟೊಡನೆಯೇ ರಕ್ತವಾಂತಿಯು ಧಾರಾಳವಾಗಿ ಆಯಿತು. ಅಲ್ಲಿಯೆ ಕವಚಿ ಬಿದ್ದರು. ಅವರ ಇಹಲೀಲೆಯು ಅಲ್ಲಿಗೇ ಮುಗಿಯಿತು........ಇಂದು ಬೆಳಿಗ್ಗೆ ಶವಸಂಸ್ಕಾರವಾಯಿತು. ಅವರು ಸಾಯುವಾಗ ಕೊನೆಯ ಮಾತೇ ನಿಮ್ಮ ಹೆಸರು. ಅವರು ನಿಮಗೆ ಕೊಡಲಿಕ್ಕೆಂದು ತೆಗೆದ ಆ ಗಿಡ ಮಾತ್ರ ಎಲ್ಲಿ ಹುಡುಕಿದರೂ ಸಿಗಲಿಲ್ಲ," ಎಂದು ಹೇಳಿ ಅವರು ಇನ್ನೊಮ್ಮೆ ಕಣ್ಣೊರಸಿಕೊಂಡರು.

ನಾನು ಆಶ್ಚರ್ಯದಿಂದ ಮಾತನ್ನೇ ಆಡಲು ಕೂಡದೆ ಹೋದೆ. ಎರಡು ನಿಮಿಷ ಹೇಗೆಯೋ ಯೋಚಿಸಿ ಮುಂಚಿನ

ರಾತ್ರಿ ನಡೆದ ಘಟನೆಯನ್ನು ಅವರೊಡನೆ ಹೇಳಿಯೂ ಪ್ರಯೋಜನವಿಲ್ಲ; ಅದರಿಂದ ಅವರಿಗೆ ದುಃಖವೂ ಆದೀತೆಂದೆಣಿಸಿ ಮಾತನಾಡದೆ ಸುಮ್ಮನಾದೆ. ಅವರು, "ನಿಮ್ಮನ್ನು ಕಂಡು ನಮ್ಮ ಅಣ್ಣನವರ ಕೊನೆಯ ವಂದನೆಗಳನ್ನು ಸಲ್ಲಿಸಲು ಬಂದೆ, ಡಾಕ್ಟರರೇ. ಇನ್ನು ಹೋಗುವೆನು," ಎಂದು ಬೀಳ್ಕೊಂಡರು.


ಡಾಕ್ಟರರು ತಮ್ಮ ಕತೆಯನ್ನು ಮುಗಿಸಿದುದನ್ನು ಕಂಡು ಸದಾನಂದರು ಕೇಳಿದರು: "ಡಾಕ್ಟರರೇ, ಖಂಡಿತವಾಗಿಯೂ ಸಾಂತಪ್ಪ ಹೆಗ್ಡೆಯವರು ಜೂನ್ ೨೭ನೇ ತಾರೀಕಿಗೆ ತೀರಿಹೋದರೇ?"

ಡಾಕ್ಟರರು ಉತ್ತರ ಕೊಟ್ಟರು: "ಮರುದಿನವೇ ನಾನು ಕಡಿಮನ್ನೂರಿಗೆ ಹೋಗಿ ಅಲ್ಲಿಯ ಬೇರೆಯವರನ್ನು, ಅವರಿಗೆ ಸಂಶಯವಾಗದಂತೆ ವಿಚಾರಿಸಿದೆನು. ಮತ್ತು ನಾನು ಸಾಂತಪ್ಪ ಹೆಗ್ಡೆಯವರ ಮನೆಗೂ ಹೋದೆನು. ಐತಪ್ಪ ಹೆಗ್ಡೆಯವರು ಮೊದಲೇ ತಿಳಿಸಿದ್ದಂತೆ ನಿಜವಾಗಿಯೂ ಸಾಂತಪ್ಪ ಹೆಗ್ಡೆಯವರು ಜೂನ್ ೨೭ನೇ ತಾರೀಕಿನ ದಿನ ಸಂಜೆ ಐದು ಗಂಟೆಗೆ ಅವರ ಮನೆಯ ಅಂಗಳದಲ್ಲಿ ತೀರಿಕೊಂಡರು."

ಸದಾನಂದರು ಕೆಲಹೊತ್ತು ಯೋಚನಾಮಗ್ನರಾದರು, ಬಳಿಕ ಒಂದು ಅಭಿಪ್ರಾಯವು ಅವರಿಗೆ ಹೊಳೆಯಲು ಚೇತರಿಸಿ ಎದ್ದವರಂತೆ ಫಕ್ಕನೆ ಹೇಳಿದರು: "ಆಹಾ! ತಿಳಿಯಿತು, ಡಾಕ್ಟರರೇ. ಈ ಘಟನೆಯು ಹೇಗೆ ನಡೆಯಿತೆಂದು ಈಗ ನನಗೆ ಹೊಳೆಯಿತು. ನಿಮ್ಮ ಅಂತರಾತ್ಮವು ಜೂನ್ ೨೭ನೇ ತಾರೀಕಿನ ದಿನ ಸಂಜೆ ಏಳು ಗಂಟೆಯ ಹೊತ್ತಿಗೆ ಸಾಂತಪ್ಪ ಹೆಗ್ಡೆಯವರ ವಿಷಯ ಯೋಚಿಸುತ್ತ ಇದ್ದಿರಬೇಕು. ಹಾಗಾಗಿ ನಿಮಗೆ ಕುಳಿತಲ್ಲೇ ಕಣ್ಣು ಕೂರಿದಾಗ ನೀವು ಇದನ್ನೆಲ್ಲ ಸ್ವಪ್ನದಲ್ಲಿ ಕಂಡಿರಬೇಕು. ನೀವು ಎಕ್ಸ್‌ರೇ ಮೆಶೀನನ್ನು ಸ್ವಪ್ನವಶರಾಗಿರುವಾಗಲೇ ಉಪಯೋಗಿಸಿದ್ದಿರಬೇಕು. ಸ್ವಪ್ನದಲ್ಲಿಯೋ ಅಥವಾ ನಿದ್ರೆಯಲ್ಲಿಯೋ ಇರುವಾಗ ನಡೆಯುವವರು ಅನೇಕರಿರುವರೆಂಬುದು ನೀವೂ ಅಲ್ಲಗಳೆಯದ ಸಂಗತಿ. ನಿಮ್ಮ ಈ ನಡತೆಯು ಅದಕ್ಕಿಂತ ಒಂದೇ ಹೆಜ್ಜೆ ಮುಂದೆ. ಸಾಂತಪ್ಪ ಹೆಗ್ಡೆಯವರು ಅದೇ ದಿವಸ ರಕ್ತಕಾರಿ ತೀರಿಹೋದುದು ತೀರ ಒಂದು ಸಂಯೋಗ! ನೀವೇನೆನ್ನುವಿರಿ, ಡಾಕ್ಟರರೇ?"

ಡಾಕ್ಟರರು ನಸುನಕ್ಕು ಹೇಳಿದರು: "ನಾನೂ ಮೊದಲು ಅದೆಲ್ಲ ನನ್ನ ಮನಸ್ಸಿನ ಭ್ರಮೆಯೆಂದೆಣಿಸಿದೆ. ಆದರೆ, ಸದಾನಂದರೇ, ಇದರೊಡನೆ ನಡೆದ ಒಂದು ಸಂಗತಿಯನ್ನು ಮಾತ್ರ ನಾನು ನಿಮಗೆ ಹೇಳಲಿಲ್ಲ. ಅದೇನೆಂದರೆ, ಸಾಂತಪ್ಪ ಹೆಗ್ಗಡೆಯವರು ಆ ದಿನ ಸಂಜೆ ಇಲ್ಲಿಗೆ ಕಾಣಿಸಿಕೊಂಡು ಬಾಗಿಲಿನಲ್ಲಿ ನಿಂತು, ನನಗೆ ಕೈಜೋಡಿಸಿ, "ನಮಸ್ಕಾರ ಡಾಕ್ಟರರೇ!" ಎನ್ನುವಾಗ ಅವರ ಎರಡು ಕೈಗಳ ನಡುವೆ ಇದ್ದುದೇ ನಾನು ಇಷ್ಟು ಭದ್ರವಾಗಿ ಇಟ್ಟುಕೊಂಡ ಈ ಗಿಡ! ಅವರು ಇಲ್ಲಿಗೆ ಬರಲು ಕಾರಣವೇ ಆ ಗಿಡವನ್ನು ನನಗೆ ಕೊಡಬೇಕೆಂದು ಅವರಿಗಿದ್ದ ಹಂಬಲವೆಂದು ಅವರು ಆಗಲೇ ನನಗೆ ತಿಳಿಸಿದ್ದರು. ಆ ದಾಖಲೆಯು ಈಗಲೂ ನನ್ನ ಕಣ್ಣ ಮುಂದೆ ಇರದೆ ಇದ್ದರೆ ನಾನು ನಿಮ್ಮಂತೆಯೆ, ನಾನು ಕಂಡುದು ಬರೇ ಸ್ವಪ್ನವೆಂದೆಣಿಸುತ್ತಿದ್ದೆ. ಮರೆತಿರಾ; ಐತಪ್ಪ ಹೆಗ್ಡೆಯವರ ಮಾತು? ಸಾಂತಪ್ಪ ಹೆಗ್ಡೆಯವರು ಆ ದಿನ ಹೊರಟುದೇ ಈ ಗಿಡವನ್ನು ನನಗೆ ಒಪ್ಪಿಸಲಿಕ್ಕಾಗಿ, ಮತ್ತು ಅವರು ಮೃತಪಟ್ಟ ಬಳಿಕ ಐತಪ್ಪ ಹೆಗ್ಡೆಯವರು ಆ ಗಿಡವನ್ನು ಎಲ್ಲಿಯೂ ಕಾಣದಾದರು. ಮಾತ್ರವಲ್ಲ, ಕೂಡಲೆ ನಾನು ಈ ಗಿಡದ ಎಲೆಯನ್ನು ಜಗಿದು ಅವರ ವಿಚಿತ್ರ ಶಕ್ತಿಯ ಸತ್ಯತೆಯನ್ನು ಕಂಡು ಕೊಂಡೆ. ಈಗೇನೆನ್ನುವಿರಿ, ಸದಾನಂದರೇ?"

ಸದಾನಂದರು ಆಶ್ಚರ್ಯ ಸೂಚಿಸುವ ದೃಷ್ಟಿಯಿಂದ ಕೈಯಲ್ಲಿದ್ದ ಆ ಒಣ ಎಲೆಯ ಅರ್ಧ ತುಂಡನ್ನೇ ನೋಡುತ್ತಲಿದ್ದು ಮಾತನ್ನೇ ಆಡದಿರುವುದನ್ನು ಕಂಡು ಡಾಕ್ಟರರು ಸದಾನಂದರಿಗೆ, "ಅದನ್ನೆಲ್ಲ ಮರೆತು ಬಿಡಿ, ಸದಾನಂದರೇ. ಈ ಘಟನೆಯು ಎಷ್ಟು ವಿಚಿತ್ರವೆಂದರೆ, ಅದನ್ನು ಯಾರೂ ನಂಬಲಿಕ್ಕಿಲ್ಲವೆಂದು ಇಷ್ಟರವರೆಗೆ ಈ ವಿಷಯ ನಾನು ಯಾರಿಗೂ ತಿಳಿಸಲಿಲ್ಲ," ಎಂದು ಹೇಳಿ, ಆ ಎಲೆಯ ಗುಣವನ್ನು ಪ್ರದರ್ಶಿಸುವ ಉದ್ದೇಶದಿಂದ ಕಂಪೌಂಡರನನ್ನು ಕರೆದು ಸಿರಪ್ ಬಾಟ್ಲಿಯನ್ನೂ ಒಂದು ಚಮ್ಚವನ್ನೂ ತರ ಹೇಳಿದರು.



ಸಿಗರೇಟು



ಲೇಖಕರು:
ರಾ. ನೊ. ವಿಶ್ವಾಮಿತ್ರ.

ಸಿಗರೇಟು ಎಂದರೆ ಅರಿಯದ ಮಂದಿಯಿಲ್ಲವಾದರೂ ಅದನ್ನು ಸರಿಯಾಗಿ ವಿಚಾರಿಸಿಕೊಂಡವರಿಲ್ಲ. ಕವಿಗಳು ಕಾಣದ್ದನ್ನು ತೋರಿಸುವರು; ಇಲ್ಲದ ಸುಖವುಣ್ಣಿಸುವರು. ಕಲ್ಲಲ್ಲಿ ನಾರೆತ್ತುವರು. ಕಪಿಗಳು ಸೇತುವೆ ಕಟ್ಟಿದರೂ ಕಟ್ಟದಿದ್ದರೂ ಕವಿಗಳು ಕಟ್ಟಿಬಿಡುವರು. ಹೀಗೆಲ್ಲಾ ಸರ್ವಶಕ್ತರಾದ ಕವಿಗಳಿರುವಾಗ ಸಿಗರೇಟಿನ ವಿಚಾರವಾಗಿ ಯಾರೂ ಕೂಡ ಏಕೆ ಮಹಾಕಾವ್ಯವೊಂದನ್ನು ಬರೆಯಬಾರದೆಂದು ಸಿಗರೇಟು ಪ್ರಶ್ನೆಯೆತ್ತುತ್ತಿದೆ.

"ಸಿಗರೇಟ್ ಮಯಂ ಜಗತ್" ಎನ್ನುವಷ್ಟು ಪ್ರಭಾವ, ಸ್ಥಾನ, ಮನ್ನಣೆ ಜಗತ್ತಿನಲ್ಲಿ ಅದಕ್ಕಿರುವ ಹೊತ್ತಿನಲ್ಲಿ ಮಕ್ಕಳಿಗೆ ಅದರದೊಂದು ಪಾಠವನ್ನು ಈಗಿನ ಪಠ್ಯಪುಸ್ತಕಗಳಲ್ಲಿ ಏಕೆ ಸೇರಿಸಲಿಲ್ಲ? ಎಂದು ನನಗೂ ಅನ್ನಿಸಿದ್ದುಂಟು. ಹಿಂದಿನ ಕಾಲದಲ್ಲಿ ರಾಮಾಯಣ ಭಾರತ ಕತೆಗಳೇ ಬಾಯಲ್ಲಿ ನಲಿಯುತಿದ್ದುವು ಎಂದರೆ ಈಗಿನ ಕಾಲದಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬರ ಬಾಯಲ್ಲೂ ಸಿಗರೇಟ್ ಶೋಭಿಸಿ ಮೆರೆಯುತ್ತಿರುವುದರಿಂದ ಇದಕ್ಕೆ ನಿಜವಾಗಿಯೂ ರಾಮಾಯಣ ಮಹಾಭಾರತ, ವೇದ-ವೇದೇತರ ಶಾಸ್ತ್ರಗಳಿಂದಲೂ ಹೆಚ್ಚು ಮನ್ನಣೆ ಸಲ್ಲಲೇ ಬೇಕು.

ಸಿಗರೇಟ್ ಎಂಬುದು ವಿಶ್ವವನ್ನೇ ಆವರಿಸಿದ್ದರೂ ಈ ಶಬ್ದದ ಅರ್ಥವನ್ನು ಮಾಡಿಕೊಳ್ಳದಿದ್ದರೆ ಹೇಗೆಂದು ಅನಿಸಿತು. ಯೋಚಿಸಿದಷ್ಟೂ ಏಕೆ ಈ ಹೆಸರು ಬಂತೆಂದು ಹೇಳುವುದು ಕಷ್ಟವೇ ಆಯಿತು. ವಿಮರ್ಶಕ ವಿಚಕ್ಷಣ ಬುದ್ಧಿಗೆ ಅದು ಹೊಳೆಯಲೇ ಇಲ್ಲವೆಂದರೆ ನಗುವಿಗೂ ಎಡೆಯಾದೀತು. ಸಿಗರೇಟನ್ನು ಉರಿಸಿ "ವಿಶ್ವ ಸರ್ವಾಂತರ್ಯಾಮಿ ಮಾನವ ಮಾನದಂಡ ಸಿಗರೇಟ್ ಕಥಯ ಕಥಯ ಮಹಾಶಕ್ತೇ" ಎಂದುಕೊಂಡೆ. ಸಿಗರೇಟು ಸೇದಿದವನೇ ನಾಗರಿಕನೆಂದು ಯಾರೂ ಹೇಳಬಹುದು. ಹಾಗಿರುವಲ್ಲಿ ಮನುಷ್ಯನ ಯೋಗ್ಯತೆಯ ಮಾನದಂಡ ಸಿಗರೇಟೆಂದರೆ ಒಪ್ಪಲೇ ಬೇಕು. ರಾಮಾಯಣ ಭಾರತವನ್ನು ಓದಿದರೆ ಮನುಷ್ಯನ ಬುದ್ಧಿ ವಿಕಾಸಗೊಳ್ಳುವಂತೆ ಇದರಿಂದ ವಿಕಾಸಗೊಂಡು ಭಾವನಾಲಿ ಹರಿಹರಿಯುವುದು. ಒಂದು ಸಿಗರೇಟು ಸೇದಿದರೆ ಅದರ ಮಿತಿಗೆ ತಕ್ಕಂತೆ ಪುಣ್ಯಸಿಕ್ಕೀತು. ಯಾರು ವಿಪರೀತವಾಗಿ ದಿನದಿನಕ್ಕೂ ಡಬ್ಬಿ ಡಬ್ಬಿ ಸಿಗರೇಟನ್ನು ಸೇದುತ್ತಾ ಬರುವನೋ ಅವನೇ ಪುಣ್ಯಸ್ವರೂಪಿಯೆನಿಸಿ ಪುಣ್ಯಸಂಚಯ ನಿಮಿತ್ತದಿಂದ ಸ್ವರ್ಗಲೋಕವನ್ನು ಸೇರುವನು. ನನ್ನ ಯೋಚನೆ ಬಗೆಹರಿಯದುಳಿಯಲಿಲ್ಲ. ಸಿಗರೇಟೊಂದು ಸೇದಿದಾಗ ವ್ಯುತ್ಪತ್ತಿಯೂ ಅದರ ಗೂಢಾರ್ಥವೂ ಆಯಿತು.

ಭೂತಾಯಿಯೆಂದರೆ ತಪ್ಪೋ ಸರಿಯೋ ಎಂದು ಪಂಡಿತರ ಚರ್ಚೆ. ಅದನ್ನು ಅರಿಸಮಾಸವೆಂದೂ ಕರೆಯುತ್ತಾರೆ. ಸಂಸ್ಕೃತ ಮತ್ತು ಕನ್ನಡ ಸೇರಿದರೆ ಪರಮಾರಿಸಮಾಸವಾಗಲೂ ಬಹುದು. ಆ ಚರ್ಚೆ ನಮಗೇಕೆ? ಸಿಗದರೇಟು ಎಂದು ವಿಗ್ರಹವಾಕ್ಯವನ್ನು ನಾನು ಮಾಡಿಕೊಂಡೆ. ಎಂದಿಗೂ ಸಿಗದ ಧಾರಣೆ, ಎಂದೂ ಇಲ್ಲದ ನಾವೀನ್ಯತೆ, ಅಥವಾ ಬೆಲೆ ಕಟ್ಟಲಸಾಧ್ಯವಾದ ವಸ್ತು ಎಂದು ಊಹಿಸಿಕೊಳ್ಳಬಹುದು. ಸಿಗರೇಟು ಎಂಬ ರೂಪ ಕೆಲವು ಕಡೆ ಕಂಡುಬರುವುದಾದರೂ ಪಾಠಾಂತರದಲ್ಲಿ (ಕೆಲವರ ಬಾಯಲ್ಲಿ) "ಸೀಗ್ರೇಟ್" ಎಂಬ ರೂಪವು ಕಂಡುಬರುತ್ತಿದೆ. ಈ ರೂಪವನ್ನು ಪರಾಮರ್ಶಿಸಿ ನೋಡಿದಾಗ ಪರಮಾರಿಸಮಾಸಾದಿ ದೋಷಗಳು ಕಂಡುಬಾರದೆ ಮೈತ್ರೀ ಸಮಾಸವಾಗಿ ಕಂಡುಬರುವುದು. ಸೀ+ಗ್ರೇಟು ದೊಡ್ಡದು+ನೋಡು. ಅಂದರೆ ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು. ಪ್ರಪಂಚವನ್ನೇ ಇದು ಆವರಿಸಬಲ್ಲುದು. ಹೆಚ್ಚೇಕೆ, ಹೊಗೆಯಾಗಿ ಆಕಾಶವನ್ನೂ ಆವರಿಸಿ ದೇವಲೋಕಕ್ಕೂ ಮುಟ್ಟಬಹುದೆಂಬ ಯೋಚನೆಯಿಂದಲೇ ಈ ನಾಮಕರಣವಾಗಿರಬಹುದೆಂದು ಹೇಳಲೂ ಬಹುದು.

ಈ ರೀತಿ ಭಿನ್ನಭಿನ್ನಾಭಿಪ್ರಾಯ ತೋರಬಹುದಾದರೂ ಸಿಗರೇಟು ಎಂಬ ವಾದವೇ ಯೋಗ್ಯವೆಂದು ನಾವು ಸಾಧಿಸ ಬಹುದು. ಯಾರು ಸಿಗರೇಟು ಸೇದುವುದಿಲ್ಲವೊ ಅವನಿಗೆ ಈ ಪ್ರಪಂಚದಲ್ಲಿ ರೇಟು ಸಿಗದು (ಬೆಲೆಯಿಲ್ಲ) ಎಂದರೆ ಚನ್ನಾಗಿ ಒಪ್ಪುತ್ತದಾದ್ದರಿಂದ ಈ ಪ್ರಯೋಗವೇ ಶುದ್ಧವೆಂದೂ ಸಾಧುವೆಂದೂ ತೀರ್ಮಾನಿಸಬಹುದು. ಈ ಸಿಗರೇಟನ್ನು ಸೇದದವನು ಮನುಷ್ಯನಾದರೂ ಜನ್ಮತಾಳಿಯೂ ಘನತೆ ಗೊಳ್ಳದವನೆಂದರೂ ಸಾಮಾನ್ಯವಾಗಿ ಒಪ್ಪಲೇ ಬೇಕು. ಮದುವೆ ಮುಂಜಿ ಮೊದಲಾದ ಸಂದರ್ಭಗಳಲ್ಲಿ ಮರ್ಯಾದೆ ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಈ ಸಿಗರೇಟೇ ಸಾಧನವಾಗಿದೆ. ನಾಗರಿಕನೆಂದು ಪ್ರಪಂಚಕ್ಕೆ ತೋರಿಸಲೂ ನಾಗರಿಕನೆಂದು ತಿಳಿದುಕೊಳ್ಳಲೂ ಮುಖ್ಯವಾಗಿ ಮೆರೆವ ದಿವ್ಯ ಸಾಧನವಿದು.


ನೊನ್ನೆತಾನೆ ವಿಲ್ಪಿರಿಗೆ ಹೋಗಿಬಂದ ಓಬಯ ಸಿಗ ರೇಟು ಸೇದಿ ನೆಟ್ಟಗೆ ನಡೆಯುತ್ತಾನೆ. ಅವನನ್ನು ಕಂಡು ಎಲ್ಲರೂ ಬೆರಗುತ್ತಾರೆ. ಅವನ ತಂದೆ ತನ್ನ ಮಗನಿಗೆ ಐರಾವತ ದಷ್ಟು ದೊಡ್ಡ ಹುದ್ದೆ ಸಿಕ್ಕಿದೆ, ಭಾರೀ ಕಲಿತಿದ್ದಾನೆ ಎನ್ನು ತ್ತಾನೆ, ಎಲ್ಲರೂ ಹಸಿದು ನರಳುತ್ತಿದ್ದರೂ ಬಾಯಿಂದ ಹೊಗೆ ಬಿಟ್ಟು ಉಲ್ಲಾಸ ಸುಖಗೊಂಡು ಬಾಳುತ್ತಿದ್ದೇನೆಂದು ಅವನು ಆಕಾಶಕ್ಕೆ ಮೇಲ್ಮೊಗಮಾಡಿ ಪ್ರಪಂಚಕ್ಕೇ ಸಾರುತ್ತಿದ್ದಾನೆ. ಈ ಎಲ್ಲಾ ಕಾರಣಗಳಿಂದ ಸಿಗರೇಟು ಮನುಷ್ಯನ ಬೆಲೆಯ ನ್ನೇರಿಸಿದೆ ಎಂದರೆ ತಪ್ಪಲ್ಲ.

ಸಿಗರೇಟು ಸೇದದವ ಹುಟ್ಟಿಯೂ ಫಲವಿಲ್ಲ.
ಬುಗಬುಗನೆ ಹೊಗೆಯಿಹುದು ಮನುಜನುಗಿ ಬಂಡಿಯಲ್ಲ
ನಾಗರಿಕರೆಂದೆನಿಸೆ ಸೇದದಿರೆ ಫಲವಿಲ್ಲ
ಸಾಗುತಿದೆ ಯಂತ್ರಯುಗ ನವಶಕ್ತಿ ಕೊಡಬಲ್ಲ
ಸಿಗರೇಟೆ ಬೇಕಲ್ಲ ಎಲ್ಲದಕು ಬೇಕಲ್ಲ
ತಲೆ ಗಟ್ಟಿಯಾಗುತಿದೆ ಹೊಗೆಯಲೆಯು ಏರುತಿದೆ
ಹೊಸ ಯುಗದ ಧರ್ಮವದೊ ಸಗ್ಗವನ್ನೇರುತಿದೆ
ತಾರುಣ್ಯ ಮೆರೆಯುವೊಡೆ ಪ್ರೇಮಸುಧೆ ಹರಿಯುವೊಡೆ
ಸಿಗರೇಟೆ ಬೇಕಲ್ಲ ನಾಗರಿಕ ತತ್ವಕ್ಕೆ
ಜಗದ ಈ ಮಟ್ಟಕ್ಕೆ ಸಿಗರೇಟೆ ಬೇಕಲ್ಲ.

(ಸಿಗರೇಟು ಕಾವ್ಯ)

ಈ ಕಾವ್ಯವು ಜನಜೀವನದ ಪ್ರತಿಬಿಂಬವಾಗಿ ಇದ್ದು ದನ್ನೇ ಸಾರುವಾಗ ಒಪ್ಪಿ ನಾವು ತಲೆದೂಗಲೇ ಬೇಕು. ಇನ್ನೂ ವಿಚಾರಿಸುತ್ತಾ ಹೋದರೆ ಮಕ್ಕಳಿಗೆ ಪಾಠ ಕಲಿಸುವು ದಕ್ಕೆ ಇದು ಒಂದು ಸುಲಭೋಪಕರಣವೆಂದು ಸಾರುತ್ತಾನಂತೆ.

ಬೆಂಕಿಯು ಸುಲಭದಲ್ಲಿ ಉರಿಯಬಹುದಾದ ಸಾಧನ ವಿರುವುದಾದರೆ ಬೇಗನೇ ಸಂಪರ್ಕ ಬೆಳೆಸಿ ವರ್ಧಿಸಿಕೊಳ್ಳು



ವುದು. ಗಾಳಿಯೂ ಸೇರಿದರೆ ಮತ್ತಷ್ಟೂ ವರ್ಧಿಸುವುದೆಂಬು ದನ್ನು 'ಸಾಯನ್ಸಿ'ನಲ್ಲಿ ವಿಪಕರಣದ ಕಷ್ಟವಿಲ್ಲದೆ ಸರ್ವತ್ರ ಸಿಗುವುದಾದ್ದರಿಂದ ಸುಲಭದಲ್ಲಿ ಬೋಧಿಸಬಹುದಂತೆ. ತಾರ್ಕಿಕರಾಗುವ ಮನಸ್ಸಿದ್ದರೆ ತಾರ್ಕಿಕರ "ಎಲ್ಲಿ ಹೊಗೆಯಿದೆ ಯೋ ಅಲ್ಲಿ ಅಗ್ನಿಯಿದೆ" ಎಂಬ ತತ್ವ ಪಾಠವನ್ನು ಜಗತ್ತಿಗೆ ತೋರಿಸುವುದಕ್ಕೆ ಸಿಗರೇಟಿರುವುದಾದರೆ ಮತ್ತಾವುದೂ ಬೇಡ. ಎಲ್ಲಾ ಕೆಲಸಗಳನ್ನೂ ವಿದ್ಯುದ್ಯಂತ್ರಗಳೇ ಪೂರೈ ಸುತ್ತಾ ಬಂದು ಬೆಂಕಿಯ ಉಪಯೋಗವೇ ಇಲ್ಲದಾದರೂ ಈಗಿನ ಪೆಟ್ರಮೇಕ್ಸ ಮೊದಲಾದುವುಗಳಲ್ಲಿ ಬೆಂಕಿಯಿದ್ದರೂ ಹೊಗೆ ಕಾಣುವುದಕ್ಕೆ ಕಷ್ಟವಾದರೂ ಈ ಬಿಂದು ಸಾಧನ ವಿರುವುದರಿಂದ ತಾರ್ಕಿಕರು ಹೆದರುವ ಅಗತ್ಯವೇ ಇಲ್ಲ.

ಯಂತ್ರಯುಗದಲ್ಲಿ ಮನುಷ್ಯನಿಗಿಲ್ಲದ ಗೌರವ ಇದಕ್ಕಿ ರುವುದರಿಂದ ಅದು ಮನುಷ್ಯರಿಂದಲೂ ಮೇಲೆನಿಸಿ ಪೂಜಾರ್ಹ ವೆನಿಸುವುದು. ಚಳಿಗಾಳಿಗೆ ಮನುಷ್ಯರನ್ನಡಗಿಸುವುದಕ್ಕಿಂತ ಹೆಚ್ಚು ಇದನ್ನೇ ಅಡಗಿಸಿ ಜೋಪಾನವಾಗಿರಿಸಬೇಕಾಗಿದೆ. ಮನಶ್ಶಾಸ್ತ್ರ ದೃಷ್ಟಿಯಿಂದ ನೋಡಿದರೆ ಈ ಕುಟುಂಬದಲ್ಲಿ ಹುಟ್ಟಿದವರೆಲ್ಲರೂ ಮನುಷ್ಯರ ಮುಖಕಮಲವನ್ನೇರುವಷ್ಟು ಯೋಗ್ಯತೆ ಉಳ್ಳವರಾದ್ದರಿಂದ ಬಹಳ ಉತ್ತಮ ವರ್ಗದವ ರೆಂದು ಹೇಳಬೇಕಾಗುತ್ತಿದೆ.

ಬಸ್ಸಿನಲ್ಲಿಯೂ ಸಿನಿಮಾ ಥಿಯೇಟರಿನಲ್ಲಿಯೂ "Smoking is strictly prohibitcd'' ಎಂದು ಜ್ಯಾರಿಯಲ್ಲಿರಿಸಿದುದನ್ನು ಸಿಗರೇಟ್ ಮಹಾಶಯನ ಕುಟುಂಬ ಘನತೆಯ ದೃಷ್ಟಿಯಿಂದ ನೋಡಿದರೆ ತೀರಾ ತಪ್ಪೆನಿಸುತ್ತಿದೆ. ಭಾರತದ ಮಂತ್ರಿಮಂಡಲವು ಈ ಕಾನೂನನ್ನು ಕೂಡಲೇ ರದ್ದುಪಡಿಸುವಂತೆ ಮಹಾಶಯನ ಅಥವಾ ಸಿಗರೇಟಿನ ಒತ್ತಾಸೆಯ ವಿನಂತಿಯಿದೆ. ಜಗತ್ತಿನಲ್ಲಿ ತರುಣತರುಣಿಯರಿಗೆ ಪ್ರೇಮವಿವಾಹವೇ ಯೋಗ್ಯವೆಂದು ಸಿದ್ಧಾಂತವಾಗಿರುವಾಗ ತರುಣನ ಪ್ರೇಮರೂಪಗೊಳ್ಳಲು ಇದೇ ಮುಖ್ಯ ಸಾಧನವೆಂದು ಕಂಡುಬಂದಿದೆ. ಬಸ್ಸು ರೈಲುಗಳಲ್ಲೂ ಸಿನಿಮಾಮಂದಿರಗಳಲ್ಲೂ ಪ್ರೇಮವರ್ಧನೆಯಾಗುವುದರಿಂದ ಇದು ನಾಗರಿಕರ ವರ್ತನೆಗೆ ಮೀರಿದ್ದೆಂದೂ ಅಭಿಪ್ರಾಯವಿದೆ.

ಸಿಗರೇಟು ಎಂಬುದು ಅನ್ವರ್ಥನಾಮವೆಂದೂ ಸಿಗದ ಗೌರವ ಸ್ಥಾನ ಇದರಿಂದ ಸಿಗುವುದೆಂದೂ ಪ್ರಪಂಚದ ಸಾಮಾನ್ಯ ಅನುಭವ ದೃಷ್ಟಾಂತಗಳಿಂದ ಖಚಿತವಾಗುವುದು. ನನ್ನೊಬ್ಬ ಅಕ್ಕ ರೈಲಿನಲ್ಲಿ ಪ್ರಯಾಣ ಬೆಳೆಸಿ ಸಿಗರೇಟಿನ ಪ್ರಭಾವದಿಂದ ಕಾರಿನಲ್ಲೇ ಓಡಾಡುವ ಘನ ಗೌರವ ಸ್ಥಾನವನ್ನೇರಿದರೆಂದರೆ ಸಿಗರೇಟ್ ಮಹಾತ್ಮೆಗೆ ಇದು ಭೂಷಣವೂ ಆಗುವುದು. ಆರೋ ಸೇದಿ ಎಸೆದ ಸಿಗರೇಟಿನ ತುಂಡು ಕಿಟಕಿಯ ಮೂಲಕ ನಿದ್ರಿಸುತ್ತಿರಲು ರೈಲಿನಲ್ಲಿ ಉರಿದು ಕಾಲು ಸುಟ್ಟು ಒಂದೂವರೆ ತಿಂಗಳು ಘನತೆಗೊಂಡು ಹಾಸಿಗೆಯಿಂದೇಳದೆ ಕಾರಿನ ಹೊರತು ಸಂಚಾರವಿರದೆ ಗೌರವದ ಏರ್ಪಟ್ಟದಲ್ಲಿ ಕಾಲಕಳೆದರು. ಎಷ್ಟೋ ಮಂದಿ ಅಣ್ಣ ತಮ್ಮಂದಿರೂ ಅಕ್ಕತಂಗಿಯರೂ ಈ ಸಿಗರೇಟನ್ನು ಸೇದುತ್ತಿರುವ ಮಹಾನುಭಾವರೆದುರು ಕಣ್ಣೀರಿಳಿಸಿ ದೈನ್ಯ ತೋರಿಸಬೇಕಾಗುತ್ತಿದೆ. ಆದ್ದರಿಂದ ಸಿಗದ ರೇಟು ಅನ್ವರ್ಥ ನಾಮವೆಂದು ಸರ್ವರನ್ನೂ ಸೋಲಿಸಿ ಮೆರೆವ ಮಹಾಶಕ್ತಿಯುಳ್ಳುದೆಂದೂ ಸಾರುವುದಕ್ಕೆ ಏನೇನೂ ಅಡ್ಡಿ ಕಂಡುಬರಲಾರದು.

ಇನ್ನು ಶಾಲಾ ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯುದ ವಿದ್ಯೆಗಳನ್ನು ಪೂರ್ತಿಗೊಳಿಸಿ ಅರುವತ್ತನಾಲ್ಕು ವಿದ್ಯೆಗಳನ್ನೂ ಕಲಿತ ಘನ ವಿದ್ವಾಂಸರೆನಿಸುವುದಕ್ಕೂ ಇದು ಮಹೋಪಕಾರಿಯಾಗಿದೆ. ಮೃಚ್ಛಕಟಿಕದಲ್ಲಿ ಕಂಡುಬರುವ ಶರ್ವಿಲಕನು ತೋರುವ ಚೋರವಿದ್ಯೆಗೆ ಇದು ಪ್ರಥಮ ಸೋಪಾನವಂತೆ.

ಬೊಂಬೈಯ ಸರಕಾರವು ಈ ಮಹಾಶಯನ ವಿಷಯದಲ್ಲಿ ಏನೋ ಮಕ್ಕಳಿಗೆ ನಿಷೇಧವೆಂಬ ಕಾನೂನು ಪ್ರಕಟ ಮಾಡಿದೆಯಂತೆ. ಇದರಿಂದ ನಿಜವಾಗಿಯೂ ಹಾನಿಯಾಗುವುದೆಂದೂ ನಾಗರಿಕರಿಗೆ ಧಕ್ಕೆಯಾದೀತೆಂದೂ ಊಹಿಸಲಾಗಿದೆ. ಮದ್ಯಪಾನ ನಿಷೇಧದಿಂದ ಹಣವಂತ ಕುಡುಕರೇ ಜಾಸ್ತಿಯಾದಂತೆ ಕಾರು ಲೋರಿಗಳ ಅವಘಡ ಅಪಮೃತ್ಯು ಹೆಚ್ಚಾದಂತೆ ದುರದೃಷ್ಟವೇ ಸಂಭವಿಸಬಹುದೋ ಎಂಬ ಹೆದರಿಕೆಯೂ ಇದೆ.

ಮಕ್ಕಳ ಮನೋವಿಜ್ಞಾನಕ್ಕೆ ಅನುಕೂಲವಾಗಿ ಈ ಪ್ರಯೋಗವು ಸುಲಭ ಸಾಧ್ಯವಾದ್ದರಿಂದ ಕೆಳಮಟ್ಟಕ್ಕಿಳಿದ ಪುಸ್ತಕಗಳನ್ನು ಮೇಲ್ಮಟ್ಟಕ್ಕೇರಿಸುವುದಕ್ಕಾಗಿ ಈ ಅಭ್ಯಾಸ ಸೇರಿಸಬೇಕೆಂದು ಯಾರಾದರೂ ಹೇಳಬಹುದು. ಅಂತೂ ಸಿಗರೇಟಿಗೆ+ಮಂಗಳವಾಗಲಿ; ಸಿಗರೇಟಿಗಮಂಗಳ(ಲೋಪ)ವಾಗಲಿ ಎಂದು ಸಮಾಪ್ತಿಗೊಳಿಸುವುದು ಒಂದು ರೂಢಿಯಾಗಬಹುದು.

For all your Jewellery Requirements

Visit **THE IDEAL JEWELLERY HOUSE**

Hampankatta, — MANGALORE.

A LONG STANDING RENOWNED AND RELIABLE FIRM OF WIDE REPUTATION

UP—TO—DATE FASHIONABLE JEWELLERY—Flawless Amsterdam Diamonds and precious stones and guaranteed Silverware Always Stocked.

PAY US A VISIT AND BE SATISFIED

REPUTATION OF DECADES!

NEARLY A QUARTEROF A CENTURY'S PROGRESS SPEAKS ELOQUENTLY OF **MANGALORE SUVASINI BEEDIES.** They are prepared justas the millions of smokers want them to be. Every year thousands join the discriminating smokers of "SUVASINI" and they stay on because "SUVASINI" never fails to satisfy. If you have not yet tried them, we invite you to start today. Suvasini Beedi stockists will always keep up the supply—without break.



Registered No. 575 2 R

Registered Trade Mark

WARNING: Imitators will be prosecuted.

ಸುಮಾರು ಕಾಲು ಶತಮಾನದ ಪ್ರಗತಿಯು "ಮಂಗಳೂರು ಸುವಾಸಿನಿ ಬೀಡಿ"ಗಳ ಉತ್ಕೃಷ್ಟತೆಯನ್ನು ಸಾರುತ್ತಿದೆ. ಲಕ್ಷೋಪಲಕ್ಷ ಜನರು ಅವುಗಳನ್ನು ಯಾವ ರೀತಿ ಅಪೇಕ್ಷಿಸುವರೋ ಅದೇ ತೆರ ಅವು ತಯಾರಿಸಲ್ಪಟ್ಟು, ಅವರಿಗಾನಂದ ಕೊಡುತ್ತಿವೆ. ಪ್ರತಿ ವರ್ಷ ಸಾವಿರಾರು ಮಂದಿ, "ಸುವಾಸಿನಿ" ಬೀಡಿ ಸೇದುವವರನ್ನು ಸೇರುವರು—ಮತ್ತು "ಸುವಾಸಿನಿ"ಯನ್ನೇ ಕೊಂಡುಕೊಳ್ಳುವರು. ಅವು ನಿಮಗೆ ತೃಪ್ತಿಯೀಯುವಲ್ಲಿ ತಪ್ಪಲಾರವು. "ಸುವಾಸಿನಿ" ಬೀಡಿ ಸ್ಟಾಕಿಸ್ಟರು ಯಾವಾಗಲೂ ನಿಮಗೆ—ಅವು ದೊರೆಯುವಂತೆ ಸರಬರಾಯಿಯನ್ನಿರಿಸುವರು.

ಎಚ್ಚರಿಕೆ: ನಕಲಿ ತಯಾರಕರ ಮೇಲೆ ತಕ್ಕ ಕ್ರಮ ಕೈಕೊಳ್ಳಲಾದೀತು.

SUVASINI BEEDI WORKS

Kadri Road, MANGALORE.

Prop: U. RAMA NAYAK.



ಕಾಂಚೀಪುರದ ಬಳಿಯ ತಿರುಕ್ಕಳಿಕುಂದ್ರಮ್ ಕ್ಷೇತ್ರ.

ಅಪರಾಧ ಮತ್ತು ಅಪರಾಧಿ

ಲೇಖಕಿ: ಶ್ರೀಮತಿ ಪಾರಿಜಾದೇವಿ, ಸಂಪಾದಕಿ, "ಸುವಾಸಿನಿ"



ಕಲಿಂಗವನ್ನು ಜಯಿಸಿದ ನಂತರ ಮಹಾರಾಜಾ ಅಶೋಕನ ಹೃದಯವು ಹಿಂಸೆಯಿಂದ ಬೇಸರಿಸಿ ಅವನು ತನ್ನ ರಾಜ್ಯದಲ್ಲಿ ಪಶುವಧೆಯನ್ನೂ ಪ್ರಾಣದಂಡವನ್ನೂ ನಿಲ್ಲಿಸಿದನೆಂದು ಇತಿಹಾಸಜ್ಞರು ಹೇಳುತ್ತಾರೆ. ಭಾರತವು ಮಾನವತೆಯ ಚರಮ ಸೀಮೆಯನ್ನು ಮುಟ್ಟಿದಾಗ, ಇತರ ದೇಶಗಳಲ್ಲಿ ಭಯಂಕರ ಹಿಂಸೆಯು ನಡೆಯುತ್ತಿತ್ತು. ಇತಿಹಾಸಜ್ಞರ ದೃಷ್ಟಿಯಲ್ಲಿ ಇದು ಜಗತ್ತಿನ ಇತಿಹಾಸದಲ್ಲಿ ಎಲ್ಲಕ್ಕಿಂತಲೂ ಮೊದಲಿನ ಉದಾಹರಣೆಯಾಗಿದೆ. ಇದಕ್ಕಿಂತ ಪೂರ್ವದ ಇತಿಹಾಸವು ಸ್ಪಷ್ಟವಾಗಿಲ್ಲ. ಅಥವಾ ಧಾರ್ಮಿಕ ಭಾವನೆಗಳ ಭಾವುಕತೆಯಲ್ಲಿ ಲಿಪ್ತವಾಗಿರಬಹುದು. ಆದ್ದರಿಂದ ಅಶೋಕನ ಪೂರ್ವದಲ್ಲಿಯೂ ಈ ದೇಶದಲ್ಲಿ ಇಂಥ ವ್ಯವಸ್ಥೆ ಇದ್ದಿದ್ದರೆ ಏನೂ ಆಶ್ಚರ್ಯವಿಲ್ಲ.

ಇಂದಿನ ಈ ಸಂಕ್ರಾಂತಿ ಕಾಲದಲ್ಲಿ ಇದರ ಇನ್ನೊಂದು ಉದಾಹರಣೆಯನ್ನು ಸೋವಿಯಟ್ ರಷ್ಯವು ಇಟ್ಟುಕೊಂಡಿರುವುದು. ೧೯೪೭ನೇ ಜುಲಾಯಿ ೨೭ರಿಂದ ಅಲ್ಲಿ ಪ್ರಾಣದಂಡ ರಾಜ್ಯ ವಿಧಾನದಿಂದ ತೆಗೆದು ಹಾಕಲ್ಪಟ್ಟಿದೆ. ಇದು ವರ್ತಮಾನ ಯುಗದ ಮಾನವನಿಗೆ ಆಶ್ಚರ್ಯದ ವಿಷಯ ಮತ್ತು ಗರ್ವದ ಆಧಾರವೂ ಆಹುದು. ಈ ಮಾನವೀಯ ಅಭಿಶಾಪದ ಅಂತ್ಯದಿಂದ ಅಲ್ಲಿಯ ಶಾಸನ ವ್ಯವಸ್ಥೆ ಮತ್ತು ಪ್ರಜಾ-ಸಂತುಷ್ಟಿಯು ಸ್ಪಷ್ಟ ಕಂಡುಬರುತ್ತದೆ.

ಪ್ರಾಣದಂಡವನ್ನು ಅಂತ್ಯಗೊಳಿಸುವ ಅಭಿಪ್ರಾಯವೇನೆಂದರೆ ವ್ಯಕ್ತಿಗೆ ಇಂಥ ಸ್ಥಿತಿಯು ಉತ್ಪನ್ನಗೊಳಿಸುವದು ಇದರಲ್ಲಿ ಸಮಾಜದಿಂದ ಅಡಗಿಕೊಂಡು ಯಾವ ಅಪರಾಧವನ್ನೂ ಮಾಡದೆ ಇರುವದು ಮತ್ತು ವಿಶೇಷವಾಗಿ ಇಂಥ ಅಪರಾಧಕ್ಕೆ ಪ್ರಾಣದಂಡ ಅನುಭವಿಸಬೇಕಾಗುವದು ಯಾವ ರಾಷ್ಟ್ರವೂ ಸೋವಿಯಟ್ ರಷ್ಯದ ಶಾಸನ ಪ್ರಣಾಲಿಯನ್ನು ಒಪ್ಪದಿರಬಹುದು. ಆದರೆ, ಮಾನವತೆಗಾಗಿ ಈ ಕಡೆ ಮುಂದೆ ಹಜ್ಜೆ ಇಡುವದು ನಿಜವಾಗಿಯೂ ಪ್ರಶಂಸೆಯ ಮಾತಾಗಿದೆ. ಜಾಗೃತಿಯ ಈ ಕಾಲದಲ್ಲಿ ಮಾನವೀಯ ಆದರ್ಶಗಳ ಕಡೆಗೆ ಅನ್ಯ ರಾಷ್ಟ್ರಗಳು ಕಣ್ಣು ಮುಚ್ಚದೆ ಇರುವುದು ಕರ್ತವ್ಯವಾಗಿದೆ.

ಯಾವ ಮಾನವನು, ಈಶ್ವರನ ಎಲ್ಲ ಸೃಷ್ಟಿಯಲ್ಲಿ ಅಮೂಲ್ಯ ಮತ್ತು ಸುಂದರ ಕೃತಿಯೆಂದು ಹೇಳಲ್ಪಡುತ್ತಾನೋ, ಅವನಿಗೆ ತನ್ನವರ ಕೈಯಿಂದಲೇ ಇಂಥ ದಂಡನೆಗಳನ್ನು ಭೋಗಿಸಬೇಕಾಗುವುದು ಎಂಬುದು ವಿಚಾರಣೀಯ ವಿಷಯವಾಗಿದೆ. ಈ ವಿಷಯದಲ್ಲಿ ವಿಚಾರ ಮಾಡಲು ನಾವು ಮಾನವನ ಪ್ರಾರಂಭಿಕ ಇತಿಹಾಸದ ಮೇಲೆ ದೃಷ್ಟಿ ಬೀರುವುದು ಅಗತ್ಯವಾಗಿದೆ.

ಮಾನವನು ತನ್ನ ರಕ್ಷಣೆ ಮತ್ತು ವಿಕಾಸಕ್ಕಾಗಿ ಸಮಾಜವನ್ನು ನಿರ್ಮಿಸಿದನು. ಮತ್ತು ಸಮಾಜವನ್ನು ಅಧಿಕ ಸುಶೃಂಖಲ ಹಾಗು ಶಕ್ತಿಶಾಲಿಯಾಗಿ ಮಾಡುವುದಕ್ಕಾಗಿ ಅನೇಕ ನಿಯಮಗಳನ್ನು ನಿರ್ಧರಿಸಿದನು; ಈ ನಿಯಮಗಳನ್ನು ಧರ್ಮದ ಸೂತ್ರಗಳಲ್ಲಿ ಪೋಣಿಸಿ ಸಮಾಜದ ಕುತ್ತಿಗೆಯಲ್ಲಿ ಕಟ್ಟಿದನು. ಈ ಪ್ರಕಾರವಾಗಿ ವ್ಯಕ್ತಿ ಮತ್ತು ಸಮಾಜ ಪರಸ್ಪರ ಸಹಯೋಗ ಕೊಟ್ಟು ಮಾನವೀಯ ಪರಂಪರೆಯನ್ನು ಅಧಿಕ ವಿಕಸಿತ ರೂಪದಲ್ಲಿ ನಡೆಸಿದರು. ಮಾನವನ ಇತಿಹಾಸದ ಮೇಲೆ ದೃಷ್ಟಿ ಬೀರಿದರೆ ಇಷ್ಟರ ಮೇಲೂ ವ್ಯಕ್ತಿಯು ಮತ್ತು ಸಮಾಜದಲ್ಲಿ ಪರಸ್ಪರ ಭಾವನೆ ಅಥವಾ ವಿಚಾರಗಳ ಸಂಘರ್ಷ ಅಬಾಧಿತ ಗತಿಯಿಂದ ನಡೆಯುತ್ತದೆಂದು ತಿಳಿದುಬರುತ್ತದೆ. ಅಹುದು, ಇಷ್ಟು ಅವಶ್ಯವಾಗಿದೆ— ಏನೆಂದರೆ ಪರಿಸ್ಥಿತಿಗಳ ಆಧಾರ ಮತ್ತು ಇವರ ರೂಪದಲ್ಲಿ ಪರಿವರ್ತನವಾಗುತ್ತಿರುವದು. ಈಗ ಈ ಪರಸ್ಪರ ಸಂಘರ್ಷಗಳು ಉತ್ಕರ್ಷಕ್ಕೆ ಮುಟ್ಟಿವೆ. ಆದರೆ, ಹಿಂದಿನ ಸಂಘರ್ಷಗಳು ಮತ್ತು ಈ ಸಂಘರ್ಷಗಳಲ್ಲಿ ಅಂತರ

ವಿದೆ. ಹಿಂದಿನ ಸಂಘರ್ಷಗಳು ಧರ್ಮಪ್ರಧಾನವಾಗಿದ್ದುವು ಮತ್ತು ಇಂದಿನ ಸಂಘರ್ಷ ಆರ್ಥಿಕ ಅಥವಾ ರಾಜನೈತಿಕ ವಾಗಿದೆ. ಇದು ಕೇವಲ ಪರಿಸ್ಥಿತಿಯ ಅಂತರ ಮಾತ್ರ ವಾಗಿದೆ. ಆ ಸಮಯದಲ್ಲಿ ವ್ಯಕ್ತಿ ಭಾವನೆಯು ಮುಖ್ಯ ವಾಗಿತ್ತು ಮತ್ತು ಇಂದು ಅದು ಬುದ್ಧಿವಾದಿಯಾಗಿದೆ.

ಈಗ ಈ ಸಂಘರ್ಷದ ವಾಸ್ತವಿಕ ಕಾರಣವೇನೆಂದು ನೋಡುವ. ಸ್ವಲ್ಪ ಆಳವಾಗಿ ಯೋಚಿಸಿದರೆ ನಿಮಗೆ ಇದರ ಎರಡು ಕಾರಣಗಳು ಕಂಡುಬರುವವು. ಒಂದು ವ್ಯಕ್ತಿಯು ಸಮಾಜದ ಪ್ರವಾಹಿತ ಧಾರೆಯನ್ನು ರೂಢಿಗ್ರಸ್ತವೆಂದು ತಿಳಿದು, ಅದನ್ನು ಸಮಯಕ್ಕೆ ತಕ್ಕಂತೆ ಯಾವದಾದರೂ ಹೊಸ ರೂಪದಲ್ಲಿ ಹಾಕಿ ಹೊಸ ಪ್ರವಾಹದಲ್ಲಿ ಬದಲಿಸಿದರೆ ಆ ಸಮಯದಲ್ಲಿ ವ್ಯಕ್ತಿ ಮತ್ತು ಸಮಾಜದ ಸಂಘರ್ಷವು ಅನಿವಾರ್ಯವಾಗುತ್ತದೆಂಬುದು ಮೊದಲನೆಯದಾಗಿದೆ. ಸಮಾಜ ಸೂತ್ರದಲ್ಲಿ ಕಟ್ಟಲ್ಪಟ್ಟ ಸಾಧಾರಣ ಜನತೆಗೆ ಯಾವಾಗಲೂ ತನ್ನ ಅತೀತದ ಮೇಲೆ ಗರ್ವಪಟ್ಟು ಕೂತುಕೊಳ್ಳುವ ಅಭ್ಯಾಸವಾಗುತ್ತದೆ. ಸಮಯದೊಂದಿಗೆ ಬದಲಿಸುವದು ಅವನಿಗೆ ಕಷ್ಟಪೂರ್ಣವಾಗುತ್ತದೆ. ಈ ಪ್ರಾರಂಭಿಕ ಪ್ರಸವ ಪೀಡೆಯು ವಿಕಾಸ ಶಿಶುವಿನ ಆಗಮನ ಸೂಚಕವೆಂದು ಅವನಿಗೆ ತಿಳಿಯುವದಿಲ್ಲ! ಇದೇ ಸಮಯದಲ್ಲಿ ಯಾವನಾದರೂ ವ್ಯಕ್ತಿಯು ಈ ಅವಸ್ಥೆಯನ್ನು ಅನುಭವಿಸುತ್ತಾನೆ ಮತ್ತು ಪರಿವರ್ತನದ ಹೊಸ ಸಿದ್ಧಾಂತಗಳನ್ನು ಜನತೆಯ ಮುಂದೆ ಇಡುತ್ತಾನೆ. ಪ್ರಾರಂಭದಲ್ಲಿ ಅವನು ಪ್ರಬಲವಾಗಿ ವಿರೋಧಿಸುತ್ತಾನೆ. ಆದರೆ, ತನ್ನ ಪ್ರತಿಭಾಶಕ್ತಿಯಿಂದ ತನ್ನ ಸಿದ್ಧಾಂತಗಳ ಔಚಿತ್ಯವನ್ನು ಸಿದ್ಧಗೊಳಿಸಿ ಮಹಾನ್ ಸುಧಾರಕ ಯಾ ಕ್ರಾಂತಿಕಾರಿಯ ಪದವಿಯಿಂದ ವಿಭೂಷಿತನಾಗುತ್ತಾನೆ! ಮಹಾತ್ಮಾ ಬುದ್ಧ, ಶಂಕರಾಚಾರ್ಯ, ಮನ್ಸೂರ್, ಯೇಸು ದಯಾನಂದ ಮುಂತಾದವರು ಮತ್ತು ಆಧುನಿಕ ಯುಗದಲ್ಲಿ ಮಾರ್ಕ್ಸ್, ಗಾಂಧಿ ಮತ್ತು ಲೆನಿನ ಮುಂತಾದವರು ಇದೇ ಕೋಟಿಯ ಮಹಾಪುರುಷರಾಗಿರುವರು. ಇವರು ರೂಢಿಗ್ರಸ್ತ ಮಾನವ ಸಮಾಜಕ್ಕೆ ಸಮಯದ ಕರೆಯ ಕಡೆಗೆ ಮುಂದರಿಸಿದರು. ಈ ಮಹಾ ವಿಭೂತಿಗಳಲ್ಲಿ ಕೆಲವರು ತಮ್ಮ ಜೀವನದಲ್ಲಿ ತಮ್ಮ ಸಿದ್ಧಾಂತಗಳ ಪ್ರಚಲನವನ್ನು ನೋಡಲಾರದಾದರು. ಇದರಿಂದ ಸಾಧಾರಣ ಜನತೆಯು ಅವರ ಮಾರ್ಗವನ್ನು ಆಕ್ರಮಿಸಲಾರದೆ ಹೋದರು. ಇದರ ಫಲವಾಗಿ ಅವರಿಗೆ ಪ್ರಾಣದಂಡ ಕೊಡಲಾಯಿತು. ಮನ್ಸೂರ, ಯೇಸು ಮತ್ತು ದಯಾನಂದರು ಇದಕ್ಕೆ ಪ್ರಮಾಣ ವಾಗಿದ್ದಾರೆ.

ಸಂಘರ್ಷದ ಎರಡನೇ ಸ್ಥಿತಿ ಯಾವುದೆಂದರೆ ಯಾವಾಗ ವ್ಯಕ್ತಿಯು ಉಚ್ಛೃಂಖಲನಾಗಿ ಕೇವಲ ತನ್ನ ವ್ಯಕ್ತಿಗತ

Kanara Jewellery Works

Dadoba Jagannath Trust Building, Gamdevi, BOMBAY.

★

SOME IMPORTANT FACTS WHICH HAVE MADE US POPULAR:

- **Honesty**
- **Prompt Delivery**
- **Artistic Work**
- **Moderate Charges**
- **Courteous Service.**

DIAMOND SETTING A SPECIALITY!

TRIAL ORDER SOLICITED

Prop: **P. V. BHATKAL.**

ಸ್ವಾರ್ಥದ ಪೂರ್ಣತೆಗಾಗಿ ಸಮಾಜದ ಸ್ಥಿತಿಯನ್ನು ವಿಕೃತ ಗೊಳಿಸುತ್ತಾನೆ. ಈ ವ್ಯಕ್ತಿಗತ ಸ್ವಾರ್ಥಸಾಧನೆಯಲ್ಲಿ ಸಮಾಜದ ಉಪೇಕ್ಷೆಯು ಮಾಡುವುದರಿಂದ ಸಮಾಜದಲ್ಲಿ ಅಸಂತೋಷವು ಉತ್ಪನ್ನವಾಗುತ್ತದೆ ಮತ್ತು ಈ ಅಸಂತೋಷವನ್ನು ದೂರಗೊಳಿಸಲು ಆ ವ್ಯಕ್ತಿಯು ಅವನ ಅಪರಾಧಕ್ಕೆ ತಕ್ಕಂತೆ ಪ್ರಾಣ-ದಂಡ ತಥಾ ಕಾರಾವಾಸ ಮುಂತಾದ ದಂಡನೆಗಳು ಲಭಿಸುತ್ತವೆ. ಮುಗಲರ ಕಾಲದಲ್ಲಿ ಕೈ ಕಾಲು ಮುಂತಾದ ಅವಯವಗಳನ್ನು ಕತ್ತರಿಸುತ್ತಿದ್ದರು.

ಈ ಎರಡು ಕಾರಣಗಳಿಂದಾಗಿ ವ್ಯಕ್ತಿ ಮತ್ತು ಸಮಾಜದ ಸಂಘರ್ಷ ಉಂಟಾಗುತ್ತದೆ. ಇದರಿಂದ ಎಲ್ಲಿಯ ವರೆಗೆ ವ್ಯಕ್ತಿಯು ಸಮಾಜದ ಪ್ರತಿಯಾಗಿ ಮತ್ತು ಸಮಾಜವು ವ್ಯಕ್ತಿಯ ಪ್ರತಿಯಾಗಿ ಪೂರ್ಣ ಉತ್ತರದಾಯಿತ್ವಪೂರ್ಣ ಮತ್ತು ಚತುರತೆಯಿಂದ ವ್ಯವಹರಿಸದಿದ್ದರೆ ಅಲ್ಲಿಯ ವರೆಗೆ ಈ ಪಾರಸ್ಪರಿಕ ಸಂಘರ್ಷವು ಅನವರತವೂ ನಡೆಯುವದೆಂದು ಇವರಿಂದ ನಿಷ್ಕರ್ಷೆಯಾಗುತ್ತದೆ. ಫಲಪುಷ್ಪಸ್ವರೂಪವಾಗಿ ಇಡೀ ಜಗತ್ತು ವಿಗ್ರಹ, ಅಶಾಂತಿ ಅವಿಶ್ವಾಸ ಮತ್ತು ಕೊನೆಗೆ ಯುದ್ಧದ ಜ್ವಾಲೆಯಲ್ಲಿ ಉರಿಯುವದು.

ಇದು ಹಣದ ಯುಗವಾಗಿದೆ. ಅರ್ಥಾತ್ ಯಾರ ಕೈಯಲ್ಲಿ ಹಣವಿದೆಯೋ ಅವರಲ್ಲೆ ಶಕ್ತಿಯಿದೆ ಮತ್ತು ಶಕ್ತಿವಂತರೇ ಸಮಾಜದ ಅಧಿಷ್ಠಾತರೂ ಜನತೆಯ ಮಾರ್ಗನಿರ್ದೇಶಕರೂ ಆಗುವರು. ಈ ಹಣವಿದ್ದ ವರ್ಗವು ಜಗತ್ತಿನಲ್ಲಿ ಕೇವಲ ನೂರಕ್ಕೆ ಐದರಂತಿರುವರು. ಆದರೆ, ಜಗತ್ತಿನ ಸಾಧಾರಣ ಎಲ್ಲಾ ರಾಷ್ಟ್ರಗಳ ಸೂತ್ರವು ಸಾಮಾಜಿಕ, ರಾಜನೈತಿಕ, ಆರ್ಥಿಕ ತಥಾ ಧಾರ್ಮಿಕ ರೂಪದಿಂದ ಇವರ ಕೈಗಳಲ್ಲೆ ಇದೆ. ಒಂದು ಕಡೆ ಈ ಶಕ್ತಿಶಾಲಿ ವರ್ಗವಿರುವುದಾದರೆ ಇನ್ನೊಂದು ಕಡೆ ಈ ಹಣವನ್ನು ಉತ್ಪನ್ನಗೊಳಿಸುವ ವರ್ಗವಿರುವುದು. ಇದು ಶಕ್ತಿಹೀನವಾದ್ದರಿಂದ ಹಣದ ಶಕ್ತಿಯ ಮೂಲಕ ನಿರ್ಮಿತವಾದ ಆದರ್ಶಗಳು ಮತ್ತು ನಿಯಮಗಳ ಕಡೆಗೆ ನೋಡಬೇಕಾಗುವದು. ಈ ನೂರಕ್ಕೆ ೯೫ರಂತೆ ಜನತೆಯು ವರ್ತಮಾನ ಸಮಾಜದ ವ್ಯವಸ್ಥೆಯಿಂದ ಅಸಂತುಷ್ಟವಾಗಿರುವದೆಂಬುದು ನಿಜ. ಆದರೆ, ಈ ಸೂತ್ರವನ್ನು ಕಡಿಯಲು ಅಸಮರ್ಥವೂ ಆಗಿರುವದು. ಇದೇ ಜನತೆಯಲ್ಲಿ ಕೆಲವರು ಐದು ಬರಹ ಕಲಿತು ಅಥವಾ ಅಧ್ಯಯನ ತಥಾ ವ್ಯಕ್ತಿಗತ ಅನುಭವದಿಂದಾಗಿ ಈ ಸೂತ್ರಗಳ ಸಮಸ್ಯೆಯನ್ನು ತಿಳಿಯುತ್ತಾರೆ. ಅವರು ಸಾಮೂಹಿಕ ರೂಪದಲ್ಲಿ ಕ್ರಾಂತಿ ಮಾಡಲೂ ಪ್ರಯತ್ನಿಸುತ್ತಾರೆ. ಆದರೆ, ಇವರ ಸ್ವಪ್ನವು ಜೈಲಿನೊಳಗೇ ಸೀಮಿತವಾಗಿರುತ್ತದೆ. ಜನತೆಯ ಶ್ರದ್ಧೆಗೆ ಪಾತ್ರರಾಗುವ ಕಾರಣ ಈ ಜನರಿಗೆ ರಾಜನೈತಿಕ ಕೈದಿಗಳ ಉಪಾಧಿ ಕೊಡಲಾಗುತ್ತದೆ. ಇದರಿಂದ ಅವರಿಗೆ ಜೈಲಿನಲ್ಲಿ ಸ್ವಲ್ಪ ಶಾಂತಿಯ ಅನುಭವವಾಗುತ್ತದೆ.

ಇನ್ನೊಂದು ಕಡೆ ಬೇರೆಯೇ ಒಬ್ಬ ವ್ಯಕ್ತಿಯಿರುವನು. ಇವನು ಸಮಾಜದ ವರ್ತಮಾನ ಸ್ಥಿತಿಯಲ್ಲಿ ಅಸಂತುಷ್ಟನಾಗಿರುತ್ತಾನೆ. ಆದರೆ, ಆವನು ಈ ಅಸಂತುಷ್ಟಿಯನ್ನು ಸಾರ್ವಜನಿಕ ರೂಪದಲ್ಲಿ ನೋಡಲು ಅಸಮರ್ಥನಾಗುತ್ತಾನೆ. ಅವನು ಕೇವಲ ತನ್ನ ವಿಷಯದಲ್ಲೇ ಅಸಂತುಷ್ಟಿಯನ್ನು ಪಡೆಯುತ್ತಾನೆ; ಅವನಿಗೆ ಈ ಅಸಂತುಷ್ಟಿಯ ವಾಸ್ತವಿಕ ಕಾರಣವೂ ತಿಳಿಯುವುದಿಲ್ಲ. ಅವನಿಗೆ ಕಾರಣ ತಿಳಿದರೂ ಅದು ಅವನ ವ್ಯಕ್ತಿತ್ವದ ವರೆಗೆ ಮಾತ್ರ ಸೀಮಿತವಾಗಿರುತ್ತದೆ. ಆದ್ದರಿಂದ ಅವನೆದುರು ತನ್ನ ಅಸಂತುಷ್ಟಿಯೇ ಮಹತ್ವಪೂರ್ಣವಾಗಿದೆ. ಇಂಥ ಸ್ಥಿತಿಯಲ್ಲಿ ಕಳ್ಳತನ, ಲುಟಾಯಿಸುವದು ಮತ್ತು ಕಿಸೆ ಕತ್ತರಿಸುವದು ಅಥವಾ ಯಾವದಾದರೂ ಅನ್ಯ ಗೈರಕಾನೂನಿನ ಕಾರ್ಯಮಾಡಲು ಅವನು ಬಾಧ್ಯನಾಗುತ್ತಾನೆ. ಇದೆಲ್ಲವನ್ನು ಅವನು ಸಮಾಜದಿಂದ ಅಡಗಿಕೊಂಡು ಮಾಡುತ್ತಾನೆ. ಆದ್ದರಿಂದಲೇ ಅವನು ದೋಷಿಯಾಗುತ್ತಾನೆ ಮತು ಫಲಸ್ವರೂಪವಾಗಿ ಹಿಡಿಯಲ್ಪಟ್ಟ ನಂತರ ಜೈಲು, ಫಾಶಿ ಅಥವಾ ಕರಿನೀರು ಮುಂತಾದ ಶಿಕ್ಷೆಗಳನ್ನು ಅನುಭವಿಸುತ್ತಾನೆ.

ಈಗ ಎರಡೂ ಸ್ಥಿತಿಗಳು ನಮ್ಮ ಮುಂದೆ ಇವೆ. ಇಬ್ಬರು ವ್ಯಕ್ತಿಗಳೂ ಇಂದಿನ ವ್ಯವಸ್ಥೆ ತಥಾ ವಿಧಾನದ ದೃಷ್ಟಿಯಿಂದ ದೋಷಿಯಾಗಿರುತ್ತಾರೆ. ಆದರೆ, ಮೊದಲಿನ ವ್ಯಕ್ತಿಯೊಂದಿಗೆ ಸಮಾಜದ ಒಂದು ಸಮೂಹವು ಇರುವುದರಿಂದ ಅವನನ್ನು ರಾಜನೈತಿಕ ಕೈದಿಯೆಂದು ಹೇಳುತ್ತಾರೆ ಮತ್ತು ಇತರ ಕೈದಿಗಳಿಗಿಂತ ಸಾಧಾರಣ ಸ್ಥಿತಿಯಲ್ಲಿ ಅವನೊಡನೆ ಸ್ವಲ್ಪ ನಮ್ರತೆಯ ವ್ಯವಹಾರ ನಡೆಯುತ್ತದೆ. ಆದರೆ, ಇನ್ನೊಬ್ಬ ವ್ಯಕ್ತಿಯು ಒಬ್ಬನೇ ಆಗಿರುತ್ತಾನೆ. ಅವನಿಗೆ ಬೇರಾರ ಸಹಯೋಗವೂ ಇಲ್ಲ. ಆದ್ದರಿಂದ ಸಾಧಾರಣ ಸ್ಥಿತಿಯಲ್ಲಿ ಕೂಡ ಕಠೋರ ಯಾತನೆಗಳಿಗೆ ಗುರಿಯಾಗಬೇಕಾಗುತ್ತದೆ. ಅಸಾಧಾರಣ ಸ್ಥಿತಿಗತಿಗಳಲ್ಲಿ ಅಮಾನುಷಿಕತೆಯ ವ್ಯವಹಾರವೂ ಪ್ರಯೋಜನವಾಗುವದಿಲ್ಲ.


ಯಾವುದಾದರೂ ವ್ಯಕ್ತಿಗೆ ದಂಡಕೊಡುವ ಅಭಿಪ್ರಾಯವೇನು, ಎಂದು ಈಗ ನೋಡಬೇಕಾಗಿದೆ. ಯಾರಾದರೂ ನನ್ನ ಸಾಮಾನನ್ನು ಕಳುವುಮಾಡಿದ್ದಾರೆಂದು ಯೋಚಿಸೋಣ. ಪರಿವರ್ತನದಲ್ಲಿ ನಾನು ಅವನಿಗೆ ಹೊಡೆಯಬೇಕು, ಬೈಯಬೇಕು ಅಥವಾ ಬಿಟ್ಟುಬಿಡಬೇಕು. ಇದು ನನ್ನ ಸ್ವಂತದ ದೃಷ್ಟಿಕೋಣವಾಗಿದೆ. ಹಾಗಾದರೆ ಸರಕಾರವು ಏಕೆ ಇದಕ್ಕಾಗಿ ಚಿಂತಿಸಬೇಕು? ಇದು ಸ್ಪಷ್ಟವಾಗಿದೆ. ಸಮಾಜದ ವ್ಯವಸ್ಥೆಯನ್ನು ಸರಿಯಾಗಿಡಲಿಕ್ಕಾಗಿಯೇ ಸರಕಾರವು ಅವರನ್ನು ದಂಡಿಸುತ್ತದೆ. ಇವರಿಂದ ಮುಂದೆ ಭವಿಷ್ಯದಲ್ಲಿ ಅವನೂ ಯಾವ ಪ್ರಕಾರದ ಅಪರಾಧವನ್ನು ಮಾಡದಂತೆಯೂ ಮತ್ತು ಇತರರೂ ಇಂಥ ಕಾರ್ಯಗಳಲ್ಲಿ ಕೈಹಾಕಲು ಹೆದರಲಿ ಎಂದು.

ಅವರೆ, ಇಲ್ಲಿಯು ಸಂಗತಿಯು ಮಾತ್ರ ಅಡಿ ಮೇಲಾಗುತ್ತದೆ. ಯಾವ ವ್ಯಕ್ತಿಯು ಒಂದು ಸಲ ಜೈಲಿಗೆ ಹೋಗಿ ಬರುತ್ತಾನೋ ಅವನು ಮೊದಲಿಗಿಂತಲೂ ಭಯಂಕರ ರೂಪದಲ್ಲಿ ಅದೇ ಅಪರಾಧಕ್ಕೆ ತಿರುಗಿ ತಿರುಗಿ ಕೈ ಹಾಕುತ್ತಾನೆಂದು ಪ್ರಾಯಶಃ ಕಂಡುಬಂದಿದೆ.

ಪುನಃ ಪುನಃ ಅವನಿಗೆ ದಂಡನೆಯಾಗುತ್ತದೆ ಮತ್ತು ಪ್ರತಿ ಸಲ ಅವನು ಮೊದಲಿಗಿಂತ ಅಧಿಕವಾಗಿ ಅಪರಾಧ ಮಾಡುವ ಶಕ್ತಿಯನ್ನು ಒಟ್ಟುಗೂಡಿಸಿ ಮರಳುತ್ತಾನೆ. ಎಲ್ಲಿಯ ವರೆಗೆ ಇತರರ ಸಂಬಂಧವಿದೆಯೋ ಅವರು ಪ್ರತಿ ದಿನ ಹೆಚ್ಚುತ್ತಿರುವ ಸಂಖ್ಯೆಯನ್ನು ನೋಡಿ ತಿಳಕೊಳ್ಳಬಹುದು. ಪ್ರತಿ ವರ್ಷ ಅಪರಾಧಿಗಳ ಸಂಖ್ಯೆ ಮೊದಲಿಗಿಂತ ಹೆಚ್ಚಾಗಿಯೇ ಸಿಗುವವು. ಕೊನೆಗೆ ಈ ಪ್ರತಿಕ್ರಿಯೆಯ ಕಾರಣ ವೇನು? ವ್ಯಕ್ತಿಯು ಇಷ್ಟು ಭಯಂಕರ ಕಷ್ಟಗಳನ್ನು ಅನುಭವಿಸಿಯೂ ಅಪರಾಧ ಮಾಡಿ ಜೈಲಿಗೆ ಹೋಗುವುದನ್ನು ಏಕೆ ಮೆಚ್ಚುತ್ತಾನೆ! ಈ ಸಮಸ್ಯೆಯನ್ನು ಬಿಡಿಸಲು ನೀವು ಜೈಲಿಗೆ ಹೋದವರ ಸಂಪರ್ಕ ಮಾಡಬೇಕಾಗುವದು. ಅವರು ಅಪರಾಧಗಳಿಗಾಗಿ ದಂಡಿಸುವ ಕರ್ಮಚಾರಿಗಳು. ಸ್ವತಃ ಎಷ್ಟು ದೊಡ್ಡ ಅತ್ಯಾಚಾರಿಗಳಾಗಿರುವರೆಂದು ಹೇಳುವರು. ಇಂಥವರಲ್ಲಿ ಮಾನವತೆಯು ಲೇಶಮಾತ್ರವೂ ಮುಟ್ಟಲಾರದು. ಇಡೀ ದಿನ ಪರಿಶ್ರಮಿಸಿದ ನಂತರವೂ ಯಾವ ವ್ಯಕ್ತಿಗೆ ಹೊಟ್ಟೆ ತುಂಬ ರೊಟ್ಟಿಯೂ ಸಿಗುವದಿಲ್ಲ, ಕೆಟ್ಟ, ಕೊಳಕು ಬೈಗಳು ಯಾವನನ್ನು ಭಯಂಕರ ಅಟ್ಟಹಾಸಕ್ಕಾಗಿ ಬಾಧ್ಯಗೊಳಿಸುತ್ತದೆ, ಮಲಗುವ ಪ್ರಯತ್ನ ಮಾಡಿದ ಮೇಲೆ ನಿಶಾಚರ ಸೊಳ್ಳೆಗಳು ಯಾವನ ರಕ್ತವನ್ನು ಹೀರಲು ಬಂದು ಬಿಡುತ್ತವೆ, ಕೊಳಕಾದ ಕೊಟ್ಟಡಿಗಳು ಯಾವನ ಪ್ರಾರಂಭಿಕ ಇಚ್ಛೆಗಳ ಪೂರ್ತಿಯ ನಡುವೆ ಭಯಂಕರ ದೈತ್ಯರಂತೆ ನಿಂತಿವೆ. ಇಂಥ ವ್ಯಕ್ತಿಗಳ ಹೃದಯದಲ್ಲಿ ಸಮಾಜಕ್ಕಾಗಿ ಪ್ರತಿಹಿಂಸೆಯ ಭಾವನೆಯು ಉತ್ತೇಜಿಸುವದು ಅಸಂಭವವೇ? ತಾನು ಜೈಲಿಗೆ ಹೋದ ಕಲಂಕವನ್ನು ತೊಳೆಯಲು ಸಮಾಜದ ಕಡೆಯಿಂದ ಅವನಿಗೆ ಸಹಾನುಭೂತಿ ದೊರಕುತ್ತದೆಯೇ? ಉತ್ತರವು ನಕಾರಾತ್ಮಕವಲ್ಲದೆ ಬೇರೇನೂ ಸಿಗಲಿಕ್ಕಿಲ್ಲ!

ಮಾನವರಾದುದರಿಂದ ನಾವು ಈ ಕಡೆ ಹೆಚ್ಚು ಗಮನ ಕೊಡುವುದು ಅಗತ್ಯವಾಗಿದೆ. ಪ್ರತಿ ಒಬ್ಬನ ಜವಾಬುದಾರಿಕೆ ರಾಷ್ಟ್ರದ ಮೇಲೆ ಹೊಂದಿಕೊಂಡಿದೆ. ಆದ್ದರಿಂದ ಈ ಕಡೆಯಲ್ಲೂ ದೃಷ್ಟಿ ಹಾಕುವದು ನಮ್ಮ ಸರಕಾರದ ಅನಿವಾರ್ಯ ಕರ್ತವ್ಯವಾಗುತ್ತದೆ. ಜೊತೆಗೆ ಅವರು ಈ ವ್ಯವಸ್ಥೆಯನ್ನು ಸರಿಯಾಗಿಟ್ಟುಕೊಳ್ಳುವದು ಮತ್ತು ಅಪರಾಧಗಳಿಗೆ ಶಿಕ್ಷಿಸುವದನ್ನು ಗಮನಿಸಬೇಕಾಗುವದು. ಪರಿಸ್ಥಿತಿಯ ಬೇಟೆಯನ್ನು ವ್ಯಕ್ತಿ ಅಥವಾ ಯಾವದಾದರೂ ಅಪರಾಧ ಮಾಡಿ

DISTINGUISHED!



AMIN'S TAILORING HOUSE IS FAMOUS FOR DISTINGUISHED TAILORING! ASK THE SMART MEN WHO KNOW. CALL ON US ANY DAY!

R. B. AMIN

GENTS' TAILOR & OUTFITTER

Dadobha Jagannath Trust Building

Gamdevi, BOMBAY, 7.


ದರೂ ಅವನೊಡನೆ ಅವನ ಪರಿವಾರವೂ ನಾಶವಾಗಬೇಕೆಂದು ಇಂದು ಕಂಡುಬರುವಂತೆ—ಅದರ ಅಭಿಪ್ರಾಯ ಎಂದೂ ಅಲ್ಲ. ಸರಕಾರದ ಕಡೆಯಿಂದ ಅವನ ಪರಿವಾರದ ಯೋಗ್ಯ ಪ್ರಬಂಧವಾಗುವದು ತೀರ ಅವಶ್ಯಕವಾಗಿದೆ. ಇಲ್ಲವಾದರೆ ಆ ಪರಿವಾರವು ಸ್ವಲ್ಪ ಕಾಲದ ನಂತರ ರಾಷ್ಟ್ರದ ಶತ್ರುವಾಗುವದು. ಇದಲ್ಲದೆ ಶಿಕ್ಷಿಸುವಾಗ ಅಪರಾಧಿಯು ಯಾವ ಸ್ಥಿತಿಯಲ್ಲಿ, ಅಪರಾಧ ಮಾಡಿದ್ದಾನೆ ಎಂಬುದನ್ನು ಗಮನಿಸುವದೂ ಅಗತ್ಯವಾಗಿದೆ. ಶಿಕ್ಷಿಸಲೇಬೇಕಾದ್ದಲ್ಲಿ ದಂಡಸ್ಥಾನ್ ಅಂದರೆ ಜೈಲಿನ ವಾತಾವರಣ ಸುಧಾರಿಸುವ ಅವಶ್ಯಕತೆ ಬಹಳ ಇದೆ. ಜೈಲಿನಲ್ಲಿ ಸಾಧಾರಣ ಕರ್ಮಚಾರಿಯಿಂದ ಹಿಡಿದು ವಿಶೇಷ ಅಧಿಕಾರಿಗಳ ವರೆಗಿನ ವ್ಯವಹಾರವು ಕೈದಿಗಳಿಗಿಂತ ಬಹಳ ನಿಕೃಷ್ಟವಾಗಿರುತ್ತದೆ. ಇದರಿಂದ ಕೈದಿಯು ಇನ್ನೂ ಹೆಚ್ಚಾಗಿ ಹಿಂಸಕನಾಗುವ ಪ್ರೋತ್ಸಾಹ ಸಿಗುತ್ತದೆ. ಪರಿಣಾಮವಾಗಿ ಅವನು ಸುಧಾರಿಸುವ ಬದಲು ಇನ್ನೂ ಮೊದಲಿಗಿಂತ ಅಧಿಕವಾಗಿ ವಿಕೃತನಾಗುತ್ತಾನೆ! ಜೈಲಿನೊಳಗೆ ಕೈದಿಗಳೊಡನೆ ಮನೆಯಲ್ಲಿರುವಂತೆ ವ್ಯವಹರಿಸಿದರೆ ಮತ್ತು ಅವರಿಗೆ ಮನೋವೈಜ್ಞಾನಿಕ ರೀತಿಯಲ್ಲಿ ನಡೆಸಿದರೆ ನಿಜವಾಗಿ ನಮ್ಮ ರಾಷ್ಟ್ರದಲ್ಲಿ ಅಪರಾಧಗಳು ಮತ್ತು ಅಪರಾಧಿಗಳ ಸಂಖ್ಯೆ ಕಡಿಮೆಯಾಗುವದು. ಮತ್ತು ಇಂದಿನ ಕೋಟಿಗಟ್ಟಲೆ ರೂಪಾಯಿಯ ಬಜೆಟು ಸಾಕಷ್ಟು ಉಳಿಯುವದು. ಇದರಿಂದ ಸಮಾಜ, ವ್ಯಕ್ತಿ ಮತ್ತು ರಾಷ್ಟ್ರ—ಮೂರಕ್ಕೂ ಬಹಳ ಒಳ್ಳೆಯದಾಗುವದು. 'ಜೈಲು' ಶಬ್ದವೇ ಕೇವಲ ದಂಡದ ಪ್ರತೀಕವಾಗುವದು. ಜೈಲುಗಳ ಕಠಿಣ ಯಾತನೆಗಳ ಪ್ರತೀಕವಾಗುವದು ರಾಷ್ಟ್ರದಲ್ಲಿ ಹೊಸ ಹೊಸ ಅಪರಾಧಗಳಿಗೆ ಜನ್ಮ ಕೊಡುವುದಾಗಿದೆ!

ಇದಕ್ಕಾಗಿ ನಮ್ಮ ಸರಕಾರವು ಎರಡು ಕೆಲಸಗಳನ್ನು ಮಾಡಬೇಕಾಗುವದು! ಮೊದಲಾಗಿ ದೇಶದಲ್ಲಿ ಶೀಘ್ರಾತಿಶೀಘ್ರ ಸಮಾಜವಾದಿ ವ್ಯವಸ್ಥೆಯನ್ನು ನಡೆಸುವದು. ಇದರಿಂದ ಸಮಾಜದಲ್ಲಿ ಶೋಷಕ ವರ್ಗವು ಸಮಾಪ್ತವಾಗುವದರಿಂದ ಪ್ರತಿ ಒಬ್ಬ ವ್ಯಕ್ತಿಯು ರಾಷ್ಟ್ರದ ಪ್ರತಿಯಾಗಿ ತನ್ನ ಉತ್ತರದಾಯಿತ್ವವನ್ನು ತಿಳಿಯುವನು. ಇದಲ್ಲದೆ ಸಮಾಜವಾದಿ ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿಗೆ ತನ್ನ ಪೂರ್ಣ ವಿಕಾಸ ಮಾಡಿಕೊಳ್ಳುವ ಸಮಯ ಸಿಗುವುದರಿಂದ ಸಮಾಜದಲ್ಲಿ ವ್ಯಸ್ತತೆಯು ಕಂಡುಬರುವದು ಮತ್ತು ವ್ಯರ್ಥವಾದ ಮೋಜುಗಳು ಅಪರಾಧಗಳನ್ನು ಮಾಡಲಾರವು. ಮತ್ತು ಎಲ್ಲಕ್ಕಿಂತ ಮುಖ್ಯವಾದ ಸಂಗತಿಯೆಂದರೆ ಪ್ರಾರಂಭಿಕ ಆವಶ್ಯಕತೆಗಳು ಮುಗಿದ ನಂತರ ವ್ಯಕ್ತಿಯಲ್ಲಿ ಸಂತುಷ್ಟತೆಯು ಹೆಚ್ಚುವದು, ಇದರಿಂದ ಅವನಲ್ಲಿ ಸಮಾಜವು ವರ್ಜಿಸಿದ ಕಾರ್ಯವನ್ನು ಕೈಕೊಳ್ಳುವ ಭಾವನೆಯು ಉತ್ಪನ್ನವಾಗುವುದೇ ಅತಿ ಕಠಿಣವಾಗುವದು.


ಎರಡನೆಯದು ಸರಕಾರವು ಜೈಲುಗಳ ವ್ಯವಸ್ಥೆಯನ್ನು ಸುಧಾರಿಸುವ ಕಡೆಗೂ ಲಕ್ಷ್ಯಕೊಡುವದು. ಜೈಲುಗಳು ಇಂದು ಅಪರಾಧಿಗಳನ್ನು ತಯಾರಿಸುವ ಸಂಸ್ಥೆಗಳಾಗಿವೆಯೆಂದು ನಿಶ್ಚಯ ಪೂರ್ವಕವಾಗಿ ಹೇಳಬಹುದು. ವಾಸ್ತವವಾಗಿ ಇವುಗಳನ್ನು ಶಿಕ್ಷಣಾಲಯಗಳನ್ನಾಗಿ ಮಾಡುವ ಅವಶ್ಯಕತೆಯಿದೆ. ಇದಕ್ಕಾಗಿ ಒಳ್ಳೆಯ ಮನೋವಿಜ್ಞಾನದ ಪಂಡಿತರನ್ನು ಅಧಿಕಾರಿಗಳನ್ನಾಗಿ ಆರಿಸುವದು ಅನಿವಾರ್ಯವಾಗಿದೆ. ಇವರು ಮನಃಪೂರ್ವಕವಾಗಿ ಕೈದಿಗಳ ಮನಸ್ಸನ್ನು ಪರಿವರ್ತಿಸಬೇಕು. ಜೈಲು ಪರೀಕ್ಷಕ ಕಮಿಟಿಗಳಲ್ಲಿ ನಿಷ್ಪಕ್ಷಪಾತಿ ಜನರಿರಬೇಕು. ಇವರು ಕೈದಿಗಳ ಅಥವಾ ಜೈಲಿನ ಕರ್ಮಚಾರಿಗಳ ದೂರುಗಳನ್ನು ದೂರ ಮಾಡುವ ಪ್ರಯತ್ನ ಮಾಡಬೇಕು ಮತ್ತು ಈ ಎರಡು ವರ್ಗಗಳೂ ಪಾರಸ್ಪರಿಕ ವಿರೋಧಾತ್ಮಕ ನೀತಿಯನ್ನು ಬಿಟ್ಟು ಸಹಯೋಗಾತ್ಮಕ ನೀತಿಯನ್ನು ವ್ಯವಹಾರದಲ್ಲಿ ತರುವ ಪ್ರಬಂಧ ಮಾಡಲಿ.

ಈ ಎರಡೂ ವ್ಯವಸ್ಥೆಗಳಾದ ಬಳಿಕ ನಮ್ಮ ದೇಶವು ಅನ್ಯ ಐಶ್ವರ್ಯವಂತ ರಾಷ್ಟ್ರಗಳಂತೆ ಅಪರಾಧಿಗಳ ಕೇಂದ್ರವಾಗದೆ ತನ್ನ ಪ್ರಾಚೀನ ಪರಂಪರೆಯನ್ನು ರಕ್ಷಿಸುತ್ತ ಜಗತ್ತಿಗೆ ಪಥ- ಪ್ರದರ್ಶಕವಾಗುವದೆಂದು ನಮಗೆ ವಿಶ್ವಾಸವಿದೆ!

[ಶ್ರೀ ಜವಾಹರ ಚೌಧುರಿಯವರ ಒಂದು ಲೇಖವನ್ನನುಸರಿಸಿ.



ಭಾರತದ ಪ್ರಾಚೀನ ಅಂಗರಾಗ



ಅಲಂಕಾರದ ಒಡವೆಗಳಲ್ಲಿ, ಇಂದು, ಗಾಜಿಗೂ ಪ್ರಾಮುಖ್ಯತೆ ಬಂದಿದೆ. ಈ ಚಿತ್ರದಲ್ಲಿ ತೋರಿಸಿರುವುದು, ಇತ್ತೀಚಿಗಿನ ಹೊಸತರದ ಒಂದು ಕೈಬಳೆ. ಇದರ ತಲವು ಪಿಂಗಾಣಿಯಿಂದ ತಯಾರಿಸಲ್ಪಟ್ಟು, ಅದರಲ್ಲಿ ಸ್ವರ್ಣವರ್ಣದ ರೇಖೆಗಳಿವೆ. ಮೇಲ್ಗಡೆ ಗಾಜಿನ ಹೊದಿಕೆ ಇದೆ. ಮುಖಮಲ್ ಅಥವಾ ಸಾಟೀನಿನ ಪಟ್ಟಿಯಿಂದ ಇದನ್ನು ಕೈಗೆ ಕಟ್ಟಿಕೊಳ್ಳುವರು. ಬ್ರಿಟೈನಿನ ಗಾಜಿನ ಕಾರ್ಖಾನೆಯೊಂದು ತಯಾರಿಸಿದ ನೂತನ ಬಳೆಯಿದು.

ಹಿಂದುಸ್ಥಾನದ ನಾಗರಿಕರು ಅಂಗರಾಗ ಉಪಯೋಗವನ್ನು ಸಾವಿರ ವರ್ಷಗಳ ಪೂರ್ವದಿಂದಲೇ ಮಾಡುತ್ತ ಬಂದಿರುತ್ತಾರೆ. ಅಂಗರಾಗದ ಉಪಯೋಗವು ಇಲ್ಲಿ ಪಶ್ಚಿಮ ಸಭ್ಯತೆಯಿಂದಲೇ ಪ್ರಾರಂಭವಾಯಿತೆಂದು ಕೆಲವರ ಅಭಿಪ್ರಾಯವಿದೆ, ಆದರೆ, ಇದು ನಿಜವಲ್ಲ. ಏಕೆಂದರೆ ಸಂಸ್ಕೃತ ಪ್ರಾಚೀನ ಪುಸ್ತಕಗಳಲ್ಲಿ ಅಂಗರಾಗ ಮತ್ತು ಸುಗಂಧಿತ ಪದಾರ್ಥಗಳ ವರ್ಣನೆಯು ಅಲ್ಲಲ್ಲಿ ಸಿಗುತ್ತವೆ. ಈ ಗ್ರಂಥಗಳನ್ನೋದಿದರೆ ತಿಳಿಯುವುದೇನೆಂದರೆ, ಪ್ರಾಚೀನ ಕಾಲದಲ್ಲಿ ಅಂಗರಾಗದ ಮಹತ್ವವು, ಇಂದಿಗಿಂತ ಹೆಚ್ಚಿತ್ತು. ಇದರ ಅತಿರಿಕ್ತವಾಗಿ ಪ್ರಾಚೀನ ಅಂಗರಾಗ ಮತ್ತು ಸುಗಂಧಿತ ಪದಾರ್ಥಗಳ ಉಪಯೋಗವು ಕೇವಲ ಭಾರತದಲ್ಲೇ ಅಲ್ಲ, ವಿದೇಶಗಳಲ್ಲೂ ಮೌಲ್ಯ ಪಡೆದಿತ್ತು· ಮತ್ತು ನಮ್ಮ ಅಂಗರಾಗ ಮತ್ತು ಸುಗಂಧವನ್ನು ಉತ್ತಮವೆಂದು ತಿಳಕೊಳ್ಳುತಿದ್ದರು. ಈರಾನ್ ಗ್ರೀಸ್ ಮತ್ತು ರೋಮ್ ಸಾಮ್ರಾಜ್ಯ ಮುಂತಾದ ಕಡೆಗಳಲ್ಲಿ ಐತಿಹಾಸಿಕ ಪುಸ್ತಕಗಳಲ್ಲಿ ಈ ವಿಷಯುಗಳ ಪ್ರಮಾಣವು ಸಿಗುತ್ತವೆ. ಪೂಜೆ ಸಮಯ ಹಿಂದುಗಳು ದೇವಾಲಯುಗಳಲ್ಲಿ ಪುಷ್ಪ ಮತ್ತು ಸುಗಂಧಿತ ಪದಾರ್ಥಗಳನ್ನು ಅರ್ಪಿಸುತ್ತಾರೆ.

ಪ್ರಾಚೀನ ಭಾರತ ವರ್ಷದ ಅಂಗರಾಗದ ವರ್ಣನೆಯು ಹೆಚ್ಚಾಗಿ ವಾತ್ಸ್ಯಾಯನರ 'ಕಾಮ ಸೂತ್ರ' ಮತ್ತು 'ನಾಗರ ಸರ್ವಸ್ವಮ' ಗ್ರಂಥಗಳಲ್ಲಿ ಸಿಗುತ್ತದೆ. ಆದರೆ, ಇದೇ ವಿಷಯದಲ್ಲಿ ಅನೇಕ ಪುಸ್ತಕಗಳು ಪ್ರಸಿದ್ಧವಾಗಿವೆ.

ಶಾರ್ಙ್ಗಧರನ 'ಗಂಧ ದೀಪಕ' ಈಶ್ವರನ 'ಗಂಧಾಯುವತಿ' ಮತ್ತು ವರಾಹಮಿಹಿರನ 'ಬೃಹತ್ಸಂಹಿತಾ' ಈ ಗ್ರಂಥಗಳಲ್ಲಿ ಕೂದಲುಗಳಿಗೆ ಎಣ್ಣೆ ಹಾಕುವ, ಶರೀರದ ದುರ್ಗಂಧಿಯನ್ನು ದೂರ ಪಡಿಸುವ ಮತ್ತು ಮನೆಯನ್ನು ಸುಗಂಧಮಯವಾಗಿ ಇಡುವ ವಿಧಾನಗಳು ಹೇಳಲ್ಪಟ್ಟವೆ. ಸಂಸ್ಕೃತ ಮತ್ತು ಪ್ರಾಕೃತ ನಾಟಕ, ಉಪನ್ಯಾಸ ಮತ್ತು ಕಾವ್ಯಗಳಲ್ಲಿ ಅಂಗರಾಗದ ಉಪಯೋಗದ ವರ್ಣನೆಯು ವಿಸ್ತಾರವಾಗಿ ಬರುತ್ತದೆ. ನಟ ಮತ್ತು ನಟಿಯರು ಅಭಿ

ನಯು ಮಾಡುವ ಮೊದಲು ತಮ್ಮ ಪ್ರತಿಯೊಂದು ಅಂಗ ಅಲಂಕಾರವನ್ನು ಉತ್ತಮ ರೀತಿಯಲ್ಲಿ ಮಾಡುತಿದ್ದರು. ಅವರು ಅಂಗರಾಗದ ಕಲೆಯಲ್ಲಿ ಪ್ರವೀಣರೆಂಬಂತೆ, ಸ್ತ್ರೀಯರು ತಮ್ಮ ಪ್ರಿಯತಮನನ್ನು ಸ್ವಾಗತಮಾಡುವ ಮೊದಲು ಕಣ್ಣುಗಳಿಗೆ ಕಾಡಿಗೆ, ಗಲ್ಲಕ್ಕೆ ಅಂಜನ, ತಲೆಯ ಮೇಲೆ ಸೌಭಾಗ್ಯ ಬಿಂದು ಹಾಕಿಕೊಂಡು ಸುಂದರ ಮತ್ತು ಪರಿಮಳ ದ್ರವ್ಯಗಳಿಂದ ಅಲಂಕೃತರಾಗುತಿದ್ದರು. ಈ ಪ್ರಮಾಣಗಳಿಂದ ತಿಳಿಯುವುದೇನೆಂದರೆ, ಪ್ರಾಚೀನ ಕಾಲದಲ್ಲಿ ಅಂಗರಾಗ ಮಹತ್ವವು ಹೆಚ್ಚಿತ್ತು ಮತ್ತು ಪ್ರತಿಯೊಬ್ಬ ಸ್ತ್ರೀ-ಪುರುಷರು ಈ ಕಲೆಯಲ್ಲಿ ಪ್ರವೀಣರಾಗುವುದು, ಗ್ರಹಸ್ಥ ಧರ್ಮದಲ್ಲಿ ಪ್ರವೇಶ ಮಾಡುವ ಮೊದಲು, ಅತ್ಯಗತ್ಯವೆಂದು ತಿಳಿಯುತಿದ್ದರು. 'ನಾಗರ ಸರ್ವಸ್ವಮ' ಲೇಖಕರು ಪುರುಷರಿಗೆ ಕೆಳಗೆ ಬರೆದ ಸಮ್ಮತಿ ಕೊಟ್ಟಿರುತ್ತಾರೆ:—

"ಪ್ರವೀಣ ಪುರುಷರು ತಮ್ಮ ಶರೀರದಲ್ಲಿ ಸುಂದರ ವಸ್ತ್ರವನ್ನು ಧರಿಸಿಕೊಳ್ಳಲಿ. ವಸ್ತ್ರಗಳ ಮೇಲೆ ಋತು ಮತ್ತು ಸಮಯಕ್ಕೆ ಅನುಕೂಲವಾಗಿ ಸುಗಂಧವನ್ನು ಹಾಕಿಕೊಳ್ಳಲಿ, ಬೆಲೆ ಬಾಳುವ ರತ್ನ ಜಟಿತ ಆಭೂಷಣ ಮತ್ತು ಹೂವಿನ ಮಾಲೆಯನ್ನು ಕೊರಳಿಗೆ ಧರಿಸಿ, ಮುಖವನ್ನು ಸುವಾಸಿತ ಮಾಡಿ, ಅಂಗರಾಗದಿಂದ ಶರೀರದ ಪ್ರತಿಯೊಂದು ಅಂಗವನ್ನು ವಿಭೂಷಿತ ಮಾಡಲಿ!!

ಭಾರತದಲ್ಲಿ, ಪ್ರಾಚೀನ ಕಾಲದಲ್ಲಿ ವೈಜ್ಞಾನಿಕ ಯಂತ್ರ ಮತ್ತು ಸಾಧನ ಇಲ್ಲದ ಕಾರಣ ಜನರು ಅಂಗರಾಗವನ್ನು ತಮ್ಮ ಕೈಯಿಂದಲೇ ಸುಗಂಧಿತ ವನಸ್ಪತಿ, ಭಸ್ಮ ಮತ್ತು ಕಸ್ತೂರಿ ಮುಂತಾದ ಜಾಂತವೀಯ ಪದಾರ್ಥಗಳಿಂದ ಮಾಡಿಕೊಳ್ಳುತಿದ್ದರು.

ಕಾಮಸೂತ್ರದಲ್ಲಿ ಗೃಹಸ್ಥನ ದಿನಚರ್ಯದ ಉಲ್ಲೇಖವು ಈ ರೀತಿಯಾಗಿದೆ; "ಪ್ರಾತಃಕಾಲ ಎದ್ದು ಮನುಷ್ಯನು ಹಲ್ಲು ಸ್ವಚ್ಛಮಾಡಲಿ, ಸ್ನಾನ, ಶರೀರ ಮತ್ತು ವಸ್ತ್ರಗಳ ಮೇಲೆ ಸುಗಂಧಿತ ದ್ರವ್ಯಗಳನ್ನು ಹಾಕಿಕೊಳ್ಳಲಿ, ತುಟಿಗಳನ್ನು ಕೆಂಪಾಗಿ ಮಾಡಿ, ಕೊರಳಿಗೆ ಹೂಮಾಲೆ ಧರಿಸಿ, ಬಾಯಿಯಲ್ಲಿ ಸುಗಂಧಿತ ವಸ್ತುವನ್ನು ಜಗಿಯುವುದು, ಮೂರು ದಿನಗಳಿಗೊಮ್ಮೆ ಕ್ಷೌರಮಾಡಿಸಿಕೊಳ್ಳುವುದು, ದೇಹವನ್ನು ತಿಕ್ಕಿಕೊಳ್ಳುವುದು.

ದಶನಾಂಗ ರಾಗ—ಹಿಂದುಗಳು ಪ್ರಾಚೀನ ಕಾಲದಿಂದಲೇ ಸುಗಂಧಿತ ವೃಕ್ಷಗಳ ಹಸನಾದ ಗೆಲ್ಲುಗಳಿಂದ ಹಲ್ಲುಗಳನ್ನು ಸ್ವಚ್ಛಮಾಡುತ್ತ ಬಂದಿರುತ್ತಾರೆ. ವರ್ತಮಾನ ಕಾಲದಲ್ಲಿ ವೈದ್ಯವೈಜ್ಞಾನಿಕರು ಕೂಡ ಪ್ರಾಚೀನ ಕಾಲದ ಈ ದಂತಪಾವನ ಕ್ರಮವನ್ನು ಬಹಳವಾಗಿ ಪ್ರಶಂಸಿಸುತ್ತಾರೆ. ಮೌಲಸಿರಿಯ ಗೆಲ್ಲುಗಳು ಈ ಕೆಲಸಕ್ಕೆ ಬಹಳ ಉತ್ತಮವಾಗಿವೆ. ಇದು ಹೆಚ್ಚಾಗಿ ಗಂಗೆಯ ಉತ್ತರ ಪಶ್ಚಿಮಿಯ



ಲೇಖಕಿ: **ಶ್ರೀಮತಿ ಬಿ. ಮೋಹಿನಿ ದೇವಿ,**
ಸಂಪಾದಕಿ: "ಸುವಾಸಿನಿ"

ಮೈದಾನುಗಳಲ್ಲಿ ಮತ್ತು ಕುಲೂ ಪರ್ವತಗಳಲ್ಲಿ ಸಿಗುತ್ತವೆ.

ಪ್ರಾಚೀನ ಕಾಲದಲ್ಲಿ ಸುಗಂಧಿತ ವೃಕ್ಷದ ಗೆಲ್ಲುಗಳನ್ನು ಗೋಮೂತ್ರದಲ್ಲಿ ಮುಳುಗಿಸಿ, ದಾಲಚೀನಿ, ಜೇನುತುಪ್ಪ, ಮತ್ತು ಒಳ್ಳೇಮೆಣಸಿನಿಂದ ಸುಗಂಧಿತ ಮಾಡಿದ ನೀರಿನಲ್ಲಿ ಹಾಕಿ ಹಲ್ಲುಗಳನ್ನು ತೊಳೆಯುತಿದ್ದರು. ಪ್ರಾಚೀನ ಕಾಲದ ವೈಜ್ಞಾನಿಕರು ಅಂಗರಾಗದ ಕಲೆಯಲ್ಲಿ ನಿಪುಣರು. ಗೋಮೂತ್ರಕ್ಕೆ ಮಹತ್ವಕೊಡುತ್ತಿದ್ದರು. ಅಲ್ಲದೆ ಅದು ಅನೇಕ ಕೀಟಾಣುಗಳನ್ನು ನಾಶಪಡಿಸುತ್ತದೆಂದು ಸಿದ್ಧಮಾಡಿದ್ದಾರೆ. ಇದಕ್ಕೆ ರೋಗ ಜಂತುಘ್ನ ಮತ್ತು ರಕ್ತಘ್ನ ಎಂದು ಹೇಳುತ್ತಾರೆ.

ಹಿಂದೂ-ರತಿ-ಶಾಸ್ತ್ರದಲ್ಲಿ 'ಸ್ನಾನೀಯ ವಾಸ' ಮತ್ತು ವಸನಾಂಗರಾಗದ ವರ್ಣನೆಯು ಸಿಗುತ್ತದೆ. ಶರೀರವನ್ನು 'ಮಾಲೀಶು' ಮಾಡಲು ಕ್ಷಾರವು ಒಳ್ಳೇದು. ಈ ವಸ್ತು ರೋಮ ಕೂಪಗಳನ್ನು ಸ್ವಚ್ಛಪಡಿಸಿ, ಪ್ರಕಾಶ ತರುವುದು. ಸ್ನಾನದ ನೀರು ದಾಲಚೀನಿ, ಕಸ್ತೂರಿ ಮತ್ತು "ಅಗರ"ದ ಸುಗಂಧದಿಂದ ಸುಗಂಧಿತ ಮಾಡಲ್ಪಡುತ್ತದೆ. ಹಿಂದುಸ್ಥಾನವು ಉಷ್ಣಪ್ರದೇಶವಾಗಿದೆ. ಆದ್ದರಿಂದ ಇಲ್ಲಿ ಬೆವರು ಹೆಚ್ಚು ಸುರಿಯುತ್ತದೆ, ಅದರಿಂದ ವಾಸನೆಯು ಹೊರಡುತ್ತದೆ. ಈ ವಾಸನೆಯನ್ನು ದೂರಪಡಿಸಲು ಕಸ್ತೂರಿ, ಕರ್ಪೂರ, ಚಂದನ, ನಾಗಪುಷ್ಪ ಮತ್ತು ಅಗರವನ್ನು ಒಟ್ಟು ಮಾಡಿ ದೇಹಕ್ಕೆ ಲೇಪವನ್ನು ಹಾಕಿಕೊಳ್ಳುತ್ತಿದ್ದರು. ಬೆವರನ್ನು ತಡೆಯಲು ಲೋಧ್ರ, ಚಂದನ, ನಾನಾ ತರದ ಸುಗಂಧ ಪುಷ್ಪಗಳು, ತಾವರೆ ಹೂವಿನ ಬೇರು, ಮತ್ತು



ಭಾರತೀಯ ನಾರಿಯೋರ್ವಳು ಆಧುನಿಕ ಸೀರೆಯೊಂದನ್ನುಟ್ಟು ಪ್ರದರ್ಶಿಸುತ್ತಿರುವಳು. ಸೀರೆಯ ಸೆರಗು ಮತ್ತು ಅಂಚು—ಇವುಗಳ ಹೊಸತನದಲ್ಲಿ, ಸೀರೆ ತಯಾರಿಸುವವರೆಲ್ಲರೂ ನಾ ಮುಂದೆ—ತಾ ಮುಂದೆ ಎಂದು ಸ್ಪರ್ಧಿಸುತ್ತಾರೆ.



ಅಂಗರಾಗದಲ್ಲಿ ಇಂದು ವಿದೇಶೀ ಮಹಿಳೆಯರು ಮುಂದೆ. ಅವರಲ್ಲಿಯೂ ಫ್ರೆಂಚ್ ರಾಜಧಾನಿಯಾದ ಪೆರಿಸ್ ನಗರದಲ್ಲಿ ಅಂಗರಾಗ ವಿಜ್ಞಾನವು ಬಹುಕಾಲದಿಂದ ಜಗತ್ಪ್ರಸಿದ್ಧವಾಗಿದೆ. ಫ್ರೆಂಚ್ ಸಭ್ಯತೆಯು ಹೆಸರುವಾಸಿಯಾಗಿರುವಂತೆ, ಸುಗಂಧ ದ್ರವ್ಯಗಳೂ ಹೆಸರಾಗಿವೆ. ಈ ಚಿತ್ರದಲ್ಲಿ ಕಾಣಿಸಿರುವುದು—ಕೃತಕ ವಜ್ರಗಳ ಆಭರಣಗಳು, ಬಹು ಮೌಲ್ಯದ ಆಭರಣಗಳಂತೇ ಇವು ತಯಾರಾಗಿ, ಮಧ್ಯಮವರ್ಗದವರಿಗೂ ಉಪಯೋಗಿಸಲು ಸುಲಭವಾಗಿವೆ.


ದಾಳಿಂಬೆ ಹಣ್ಣಿನ ಸಿಪ್ಪೆಯ ಚೂರ್ಣಮಾಡಿ ಮೈಗೆ ಹಚ್ಚಿಕೊಳ್ಳುತ್ತಿದ್ದರು.

ಹಿಂದುಸ್ಥಾನದಲ್ಲಿ ಅನೇಕ ರಾಜವಂಶಗಳಲ್ಲಿ ಬಹಳ ಪರಿವರ್ತನೆಯಾಗಿದೆ; ಆದರೆ ಸುಗಂಧ ದ್ರವ್ಯದ ವ್ಯವಸಾಯದ ಪ್ರಸಿದ್ಧಿ ಹಾಗೇ ಇದೆ. ಪ್ರಥಮ ಮೊಗಲ ಬಾದಶಾಹ, ಜಹಾಂಗೀರನ ಪತ್ನಿ ನೂರಜೆಹಾನಗಳಿಂದ ಗುಲಾಬಿ ಇತ್ರದ ಆವಿಷ್ಕಾರವಾಯಿತು. ರಾಣಿಯ ಸ್ನಾನದ ನೀರು ಗುಲಾಬಿ ಹೂಗಳಿಂದ ಸುಗಂಧಿತ ಮಾಡಲ್ಪಡುತ್ತಿತ್ತು. ಒಂದು ದಿನ ಅವಳು ಸ್ನಾನ ಮಾಡುತ್ತಿರುವಾಗ, ನೀರಿನ ಮೇಲೆ ಎಣ್ಣೆ ಬಿಂದುಗಳು ತೇಲಾಡುವುದನ್ನು ನೋಡಿದಳು; ರಾಣಿಯು ಅದನ್ನು ಒಟ್ಟುಮಾಡಿದಳು. ಚೆನ್ನಾಗಿ ಪರೀಕ್ಷಿಸಿದನಂತರ ತಿಳಿಯಿತೇನೆಂದರೆ ಆ ಎಣ್ಣೆಯ ಪರಿಮಳವು, ಗುಲಾಬಿ ಹೂವಂತಿದೆ. ನಂತರ ಗುಲಾಬಿ ಇತ್ರವನ್ನು ಶೋಧಿಸಿದಳು.

ಪ್ರಾಚೀನ ಕಾಲದಲ್ಲಿ ಜನರು ಸಾಬೂನು ಬದಲು "ಫೇನಕ"ವನ್ನು ಉಪಯೋಗಿಸುತ್ತಿದ್ದರು. ಇದರಲ್ಲಿ ಇತ್ರ ಮತ್ತು ಸುಗಂಧಿ ಸೇರುತಿತ್ತು. ಇದು ಶರೀರವನ್ನು ಕೋಮಲ ಮತ್ತು ಸ್ವಚ್ಛವಿಡುತಿತ್ತು.

ಹಿಂದುಸ್ಥಾನದಲ್ಲಿ ಸ್ತ್ರೀಯ ಸೌಂದರ್ಯವು ಉದ್ದವಾದ, ಮತ್ತು ಕಪ್ಪಾದ ಕೂದಲುಗಳಿಂದಲೇ ಉಂಟಾಗುತ್ತದೆ. ಕೂದಲು ದಟ್ಟವಾಗಿದ್ದರೆ ಇನ್ನೂ ಅಲಂಕಾರ. ಕೂದಲುಗಳನ್ನು ಬೆಳೆಯಿಸಲು ಅನೇಕ ತೈಲಗಳನ್ನು ಉಪಯೋಗಿಸುತಿದ್ದರು.

ಇಂದು ಯುರೋಪು ಖಂಡದಲ್ಲಿ ತೈಲಗಳನ್ನು ತಯಾರಿಸಲು ಪುಷ್ಪ ವಾಸನಾ-ವಿಧಿ ಬಹಳ ಪ್ರಚಲಿತವಾಗಿದೆ. ಈ ವಿಧಿಯು ಭಾರತ ವರ್ಷದಲ್ಲಿ ಸಾವಿರಾರು ವರ್ಷಗಳಿಂದ ನಡೆದುಬಂದಿದೆ. ಪ್ರಾಚಿನ ಕಾಲದಲ್ಲಿ ಸ್ತ್ರೀಯರು ಕಣ್ಣುಗಳಿಗೆ ಕಾಡಿಗೆ ಉಪಯೋಗಿಸುತಿದ್ದರು. ಕೈಕಾಲುಗಳಿಗೆ ಮದ್ದರಂಗಿಯನ್ನು ಹಾಕಿಕೊಳ್ಳುತ್ತಿದ್ದರು. ಅವರು ಹೆಚ್ಚಾಗಿ ಶರೀರಕ್ಕೆ ಕೇದಕಿ ಮತ್ತು ಲೋಧ್ರ ಚೂರ್ಣವನ್ನು ಉಪಯೋಗಿಸುತ್ತಿದ್ದರು. ಶರೀರವನ್ನು ಸುಗಂಧಿತವಾಗಿಡಲು ಚಂದನದ ಲೇಪವನ್ನು ಮತ್ತು ಬಟ್ಟೆಯನ್ನು ಸುಗಂಧಿತವಾಗಿಡಲು ಧೂಪವನ್ನು ಹಾಕಿಕೊಳ್ಳುತಿದ್ದರು. ಪ್ರಾಚೀನ ಕಾಲದ ಜನರು ಉಗುರುಗಳನ್ನು ಬಹಳ ಧ್ಯಾನದಲ್ಲಿಡುತಿದ್ದರು. ವಾತ್ಸಾಯನನು ಬರೆದಿದ್ದಾನೇನೆಂದರೆ, ಉಗುರುಗಳನ್ನು ನಾಲ್ಕು ದಿನಕ್ಕೊಮ್ಮೆ ತೆಗೆಯಬೇಕು. ಪ್ರಾಚೀನ ಪುಸ್ತಕಗಳನ್ನು ಓದುವುದರಿಂದ ನಮಗೆ ತಿಳಿಯುವುದೇನೆಂದರೆ, ಆ ಕಾಲದಲ್ಲಿ ಪ್ರತಿಯೊಂದು ರೀತಿಯಲ್ಲಿ ಅಂಗರಾಗ ಪ್ರಚಲಿತವಾಗಿತ್ತು. ಆದರೆ ವರ್ತಮಾನ ಕಾಲದಲ್ಲಿ ವಿದೇಶಿ, ಅಗ್ಗ ಮತ್ತು ಹೆಚ್ಚಾಗಿ ಆಕರ್ಷಣವಾದ ಅಂಗರಾಗವು ಬಂದಕಾರಣ, ಅದರ ಮಹತ್ವವು ಕಡಿಮೆಯಾಗಿದೆ. ಹೊಸ ವೈಜ್ಞಾನಿಕದಿಂದ ಯಂತ್ರಗಳಿಂದ ವಿವಿಧ ಅಂಗರಾಗವು ಶೀಘ್ರದಲ್ಲೇ ತಯಾರಾಗುವುದು. ನಮ್ಮ ಪ್ರಾಚೀನ ಅಂಗರಾಗಗಳ ಪೂರ್ಣ ಅಧ್ಯಯನವು ಇಂದಿನ ಈ ವೈಜ್ಞಾನಿಕ ಯುಗದಲ್ಲಾಗಲಿ, ಮತ್ತು ಅವರಲ್ಲಿ ಉಚಿತ ಪರಿವರ್ತನ ಸಮಯದ ದೃಷ್ಟಿಯಿಂದ ಮಾಡಲ್ಪಡಲಿ, ಅದರಿಂದ ಹಿಂದುಸ್ಥಾನದ ಶತವರ್ಷದ ಈ ಹಳೇ ಕಲೆಯು ಪುನರುಜ್ಜೀವಿತಗೊಳ್ಳಲಿ!



ಸದಾನಂದ ಭವನ

ವಿಠ್ಠಲಭಾಯಿ ಪಟೇಲ ರೋಡ್,
ಮುಂಬಯಿ, ೪.

ಮುಂಬಯಿ ಕೊಂಗ್ರೆಸ್ ಹೌಸ್ ಬಳಿ, ಕೇಂದ್ರ ಸ್ಥಳದಲ್ಲಿ!

ರುಚಿಕರ-ಶುಚಿಕರ ತಿಂಡಿಗಳು
ಮಿಠಾಯಿಗಳು.
ಮಂಗಳೂರು ಮಾದರಿಯ ತಿಂಡಿ
ತಿನಸುಗಳು, ಕಾಫಿ, ಟೀ ಇತ್ಯಾದಿ



ನಿಮ್ಮ ಸ್ನೇಹಿತರೊಂದಿಗೆ
ಸಂದರ್ಶಿಸಿ, ತೃಪ್ತಿಹೊಂದಿರಿ

ಪ್ರೊಪ್ರೈಟರ್: ಡಿ. ಎನ್. ಶೆಟ್ಟಿ.

ಶ್ರೀ

ತುಳಸೀ ವಿವಾಹ

ಲೇಖಿಕಾ: ಶ್ರೀಮತಿ ವಸಂತಾದೇವಿ ಜಂತಲಿ,

ಭಿಷಕ್, ಆರ್. ಎಂ. ಪಿ., ಹುಬ್ಬಳ್ಳಿ.



ದೀಪಾವಳಿ ಹಬ್ಬ ಮುಗಿದ ಬಳಿಕ ಕಾರ್ತೀಕ ಶುದ್ಧ ದ್ವಾದಶಿಯ ದಿನ ಪ್ರತಿ ವರುಷವೂ ತುಳಸೀದೇವಿಯ ವಿವಾಹ ವನ್ನು ಹಿಂದುಗಳೆಲ್ಲರೂ ಸಾಮಾನ್ಯವಾಗಿ ಎಲ್ಲ ಪ್ರಾಂತಗಳ ಲ್ಲಿ ಆಚರಿಸುವರು. ಇವಕ್ಕೆ ಉತ್ಥಾನ ದ್ವಾದಶಿ ಎಂತಲೂ ಹೆಸರಿದೆ. ಇದರ ವಿಚಾರದಲ್ಲಿ ಒಂದು ದಂತಕಥೆಯು ಈ ಬಗೆಯಾಗಿದೆ ಪೂರ್ವಕಾಲದಲ್ಲಿ ಬಹು ಪ್ರತಾಪಶಾಲಿಯೂ ಶೂರನೂ ಆದ ಜಾಲಂಧರನೆಂಬ ರಾಕ್ಷಸ ರಾಜನಿದ್ದನು. ಅವನು ದೇವತೆಗಳನ್ನು ಗೆದ್ದು ತನ್ನ ನೆಂಟರಿಷ್ಟರಾದ ದೈತ್ಯ ರನ್ನು ಸುಖವಾಗಿಟ್ಟಿದ್ದನು. ಅವನ ಪತ್ನಿ ವೃಂದಾ ಎಂಬವಳು ಮಹಾ ಪತಿವ್ರತೆಯಾಗಿದ್ದಳು. ಅವಳ ಪುಣ್ಯಬಲದಿಂದ ಜಾಲಂಧರನನ್ನು ತ್ರಿಭುವನಗಳಲ್ಲಿ ಗೆಲ್ಲುವವರೇ ಇಲ್ಲದಂತಾ ಯಿತು. ದೇವತೆಗಳೆಲ್ಲ ಸೇರಿ ವಿಷ್ಣುವಿನ ಬಳಿಗೆ ಹೋಗಿ ಕೇಳಲು, ವಿಷ್ಣುವು ನೀವು ಹೋಗಿ ಆತನೊಂದಿಗೆ ಯುದ್ಧ ಮಾಡುತ್ತಿರಿ. ನಾನು ಮುಂದಿನ ಕಾರ್ಯವನ್ನು ನೋಡಿ ಕೊಳ್ಳುತ್ತೇನೆ ಎಂದನು. ದೇವತೆಗಳಿಗೂ ರಾಕ್ಷಸರಿಗೂ ಯುದ್ಧವಾರಂಭಿಸಿತು. ಅದರಲ್ಲಿ ದೈತ್ಯರೆಲ್ಲಾ ದಿಕ್ಕೆಟ್ಟು ಓಡುವಂತಾಯಿತು. ಆಗ ಜಾಲಂಧರನ ಪತ್ನಿಯ ಪಾತಿವ್ರತ್ಯ ಮಹಿಮೆಯಿಂದ ಅವನಿಗೆ ಅತುಲ ಬಲವು ಬಂದಿರುವುದನ್ನ ರಿತು, ವಿಷ್ಣುವು ಒಂದು ಕಪಟ ಯೋಜನೆಯನ್ನು ಹೂಡಿ, ಜಾಲಂಧರನಂತಿದ್ದ ಒಂದು ಶಿರವನ್ನೂ, ಅದರ ಮುಂಡ ವನ್ನೂ ಎರಡು ಕಪಿಗಳು ವೃಂದೆಯ ಮುಂದೆ ಇಡುವಂತೆ ಮಾಡಿದನು. ಅದನ್ನು ನೋಡಿ ಯುದ್ಧಕ್ಕೆ ಹೋಗಿದ್ದ ತನ್ನ ಪತಿಯು ಮೃತನಾದನೆಂದು ತಿಳಿದು ವೃಂದೆಯು ಶೋಕಿಸ ಲಾರಂಭಿಸಿದಳು. ಅಷ್ಟರಲ್ಲಿ ಅಲ್ಲಿಗೆ ಒಬ್ಬ ಕಪಟ ವೇಷಧಾರಿ ಯಾದ ಸಾಧುವು ಬಂದು ಸಂಜೀವನಿ ಮಂತ್ರದಿಂದ ಆ ಕಪಟ ಜಾಲಂಧರನು ಸಚೇತನನಾಗುವಂತೆ ಮಾಡಿ, ಆ ಶರೀರದಲ್ಲಿ ವಿಷ್ಣುವು ಹೊಕ್ಕಿಕೊಂಡನು. ಆಗ ಮೃತನಾಗಿದ್ದ ತನ್ನ ಪತಿಯು ಸಜೀವನಾದನೆಂಬ ಸಂತೋಷಾತಿಶಯದಿಂದ ವೃಂ ದೆಯು ಅವನನ್ನು ಆಲಂಗಿಸಿಕೊಂಡಳು. ಮುಂದೆ ವಿಷ್ಣುವು ವೇಷಧಾರಿಯಾಗಿ ಅವಳ ಮನೆಯಲ್ಲಿಯೇ ವಾಸಿಸಲಾರಂಭಿಸಿ ದನು. ಅಜ್ಞಾನದಿಂದಲೇ ಆದರೂ ವೃಂದೆಯ ಪಾತಿವ್ರತ್ಯ ಮಹಿಮೆಯು ಕುಗ್ಗುತ್ತ ಬಂದುದರಿಂದ, ರಣರಂಗದಲ್ಲಿದ್ದ ಜಾಲಂಧರನ ಬಲವು ಕುಗ್ಗುತ್ತ ಬಂದು ಅವನು ಮಡಿದನು. ಕ್ರಮೇಣ ಈ ಸಂಗತಿಯು ವೃಂದೆಗೆ ತಿಳಿದಾಗ, ಅವಳು ಸಂತಾಪಗೊಂಡು, "ನಿನಗೂ ಪತ್ನಿವಿಯೋಗವಾಗಿ, ನೀನು ಎರಡು ಕಪಿಗಳ ಸಹಾಯ ಪಡೆಯುವಂತಾಗಲಿ" ಎಂದು ಶಪಿಸಿದಳು. ರಾಮಾವತಾರದಲ್ಲಿ ಆ ಶಾಪವು ನಿಜವಾಯಿತು. ಪತಿಯ ಮರಣವಾರ್ತೆಯನ್ನರಿತ ವೃಂದೆಯು ಅಗ್ನಿ ಚಿತೆ ಯನ್ನು ರಚಿಸಿ, ಅದರಲ್ಲಿ ಪ್ರವೇಶಮಾಡಿದಳು. ಕಪಟಾ ಚರಣೆಯಿಂದ ತಾನು ಸಾಧ್ವಿಯ ಜೀವಹರಣ ಮಾಡಿದು ದಕ್ಕಾಗಿ ವಿಷ್ಣುವು ಶೋಕಿಸುತ್ತ, ಹುಚ್ಚನಂತೆ ಅವಳ ರಕ್ಷೆಯ ಬಳಿ ಕುಳಿತುಬಿಟ್ಟನು. ಆ ಹುಚ್ಚನ್ನು ಬಿಡಿಸುವುದಕ್ಕಾಗಿ ಪಾರ್ವತಿಯು ಆ ರಕ್ಷೆಯಿದ್ದ ಸ್ಥಳದಲ್ಲಿ ತುಳಸಿ, ಧಾತ್ರಿ (ನೆಲ್ಲಿ) ಮತ್ತು ಮಾಲತಿ ಬೀಜಗಳನ್ನು ಬಿತ್ತಿ ಅವುಗಳ ಗಿಡಗಳನ್ನು ಬೆಳೆಯುವಂತೆ ಮಾಡಿದಳು. ಅವುಗಳಲ್ಲಿ ತುಳಸಿಯೇ ಸರ್ವ ಗುಣಸಂಪನ್ನೆಯಾದ ವೃಂದೆಯಂತಿರುವುದೆಂದು ವಿಷ್ಣುವಿಗೆ ಪ್ರಿಯವಾಯಿತು. ಮುಂದೆ ವೃಂದೆಯೇ ರುಕ್ಮಿಣಿಯಾಗಿ ಹುಟ್ಟಿ ವಿಷ್ಣುವಿನ ಅವತಾರವೆನಿಸಿದ ಶ್ರೀಕೃಷ್ಣನನ್ನು ಕಾರ್ತೀಕ ಶುದ್ಧ ದ್ವಾದಶಿಯ ದಿನ ವರಿಸಿದಳು. ಆ ರುಕ್ಮಿಣಿ ಕೃಷ್ಣರ ವಿವಾಹವನ್ನು ಪ್ರತಿವರುಷವೂ ಹಿಂದುಗಳೆಲ್ಲರೂ ಆಚರಿ ಸುವರು.

ಶಾಸ್ತ್ರೋಕ್ತ ವಿಧಿ ಮತ್ತು ರೂಢಿ

ಆ ದಿನ ಹಿಂದುಗಳೆಲ್ಲರೂ ತಮ್ಮ ಮನೆಯ ಮುಂದಿರುವ ತುಳಸಿಕಟ್ಟೆಗಳಿಗೆ ವೃಂದಾವನ ಕಟ್ಟಿ, ಹಳಿಗೆ ಸುಣ್ಣ ಬಳಿದು, ಮುಂದೆ ಸಾರಿಸಿ, ರಂಗವಲ್ಲಿಯಿಂದ ಅಲಂಕರಿಸುವರು. ಕಬ್ಬಿನ ಜಲ್ಲೆಗಳಿಂದ ಕಟ್ಟೆಯ ಸುತ್ತಲೂ ಮಂಟಪವನ್ನು ಕಟ್ಟಿ, ತಳಿರುತೋರಣಗಳಿಂದ ಅಲಂಕರಿಸುವರು. ಮಂಟಪದ ಮುಂದೆ ದೀಪಾರಾಧನೆಯನ್ನು ಮಾಡಿ, ವಿವಾಹ ಕಾರ್ಯ ವಿಧಿಯನ್ನಾಚರಿಸಿ, ಸುಮಂಗಲಿಯರು ತುಳಸಿಗೆ ಆರತಿಯನ್ನು ಬೆಳಗುವರು. ಚಾತುರ್ಮಾಸಗಳಲ್ಲಿ ಹಿಂದುಗಳು ಲಗ್ನಕಾರ್ಯಗಳನ್ನು ಮಾಡುವುದಿಲ್ಲ. ತುಳಸಿ ವಿವಾಹವಾದಂದಿನಿಂದ ಮುಂದೆ ಶುಭಮುಹೂರ್ತಗಳಲ್ಲಿ ಲಗ್ನಕಾರ್ಯಗಳಿಗಾರಂಭವಾಗುವುದು. ಹೆಣ್ಣು ಮಕ್ಕಳಿಲ್ಲದ ಧನಿಕರನೇಕರು ಈ ತುಳಸೀ ವಿವಾಹವನ್ನೇ ಅತ್ಯಂತ ವಿಜೃಂಭಣೆಯಿಂದ ನಡೆಸುವರು.

ತುಳಸಿಯ ಮಹಾತ್ಮೆ

ಹಿಂದುಗಳಲ್ಲಿ ಮಹಂನಿಂದ ಹಿಡಿದು ಬ್ರಾಹ್ಮಣವರ್ಣದ ವರೆಗೆ ಎಲ್ಲರಿಗೂ ತುಳಸಿಪೂಜೆಯು ಹಿಂದೂ ಧರ್ಮದ ಲಕ್ಷಣಗಳಲ್ಲೊಂದು ವಿಶಿಷ್ಟ ಲಕ್ಷಣವಾಗಿರುವುದು ಎಂದರೆ ಅತ್ಯುಕ್ತಿಯಾಗದು. ಸ್ತ್ರೀಯರಂತೂ ತುಳಸಿಯು ಸೌಭಾಗ್ಯದಾಯಿನಿಯಾದ ಮಹಾ ಪತಿವ್ರತೆಯೆಂದು ಭಾವಿಸುವರು. ತುಳಸಿ ಗಿಡದ ಸಂಬಂಧವಾಗಿ ಹಿಂದೂಗಳ ಅಂತಃಕರಣಗಳಲ್ಲಿ ಪೂಜ್ಯಭಾವವಿರುವುದಂತೂ ಸಹಜ. ಆದರೆ ಇತರ ಧರ್ಮೀಯರು ಕೂಡ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಗ್ರೀಸ್, ಇಟಲಿ ದೇಶಗಳಲ್ಲಿ ಕೂಡ ತುಳಸಿಗೆ ಆದರ ಗೌರವಗಳನ್ನೀಯುವರು. ಇಂಗ್ಲಿಷ್ ನಿಘಂಟಿನಲ್ಲಿ ಇದು ಪವಿತ್ರ ಸಸ್ಯವೆಂದು ಹೇಳಲಾಗಿದೆ. ಇಟಲಿ ಮತ್ತು ಗ್ರೀಸ್ ದೇಶಗಳಲ್ಲಿ* ತುಳಸಿ ದಳಗಳ ಮೇಲೆ ಪಕ್ವಾನ್ನದ ತಟ್ಟೆಗಳನ್ನು ತಂದಿಟ್ಟ ಬಳಿಕ ಅವನ್ನು ಸ್ತ್ರೀಯರಾರೂ ಮುಟ್ಟುತ್ತಿರಲಿಲ್ಲ! ವರ್ಷಾರಂಭದಲ್ಲಿ ಅಲ್ಲಿ ಸ್ತ್ರೀಯರು ಪ್ರಾರ್ಥನಾಮಂದಿರಗಳಿಗೆ ಹೋಗುವಾಗ ತುಳಸೀ ದಳಗಳನ್ನು ತೆಗೆದುಕೊಂಡು ಹೋಗಿ, ಹಿಂತಿರುಗಿ ಬಂದ ಬಳಿಕ ಅದನ್ನು ಮನೆಯ ಎಲ್ಲ ಭಾಗಗಳಲ್ಲಿ ಚೆಲ್ಲುತಿದ್ದರು. ಅದರಿಂದ ಬರುವ ವರುಷವು ಯಾವ ರೋಗರುಜಿನವೂ ಇಲ್ಲದೆ ಸುಖದಾಯಕವಾಗಿ ಕಳೆಯುವುದೆಂದು ಅವರ ನಂಬಿಕೆಯಾಗಿತ್ತು. ಏಸುಕ್ರಿಸ್ತನ ಗೋರಿಯ ಮೇಲೂ ತುಳಸಿ ಗಿಡವನ್ನು ಬೆಳೆಸಲಾಗಿತ್ತಂತೆ. ಈಗಲೂ ಅನೇಕ ಸಂನ್ಯಾಸಿಗಳ ಸಮಾಧಿಗಳ ಮೇಲೂ ವೃಂದಾವನ ಕಟ್ಟೆಗಳನ್ನು ಕಟ್ಟಿಸಿ ತುಳಸೀ ಗಿಡಗಳನ್ನು ಬೆಳೆಸುವುದಿಲ್ಲವೆ? ಅದಕ್ಕೆ ಈ ಪವಿತ್ರತೆ ದೊರಕಿರುವುದು ಅದರಲ್ಲಿರುವ ಸುರಭಿ, ಉತ್ತೇಜಕ, ಕಫಹರ, ಜ್ವರಘ್ನ ಗುಣಗಳಿಂದಲೊ ಅಗೋಚರವಾದ ಬೇರೆ ಸುಗುಣಗಳಿಂದಲೊ ಇರಬಹುದು. ಆಯುರ್ವೇದ ಗ್ರಂಥಗಳಲ್ಲಿ ಅದರ ಗುಣಗಳನ್ನು ಹೀಗೆ ಔಷಧೀಯವಾಗಿ ವರ್ಣಿಸಲಾಗಿದೆ:-

> ತುಲಸೀ ತು ವರಾ ತಿಕ್ತಾ ತೀಕ್ಷ್ಣೋಷ್ಣಾ ಕಟುಪಾಕಿನೀ!
> ರುಷಾ ಹೃದ್ಯಾ ಲಘುಃ ಕಟ್ವೀ ದಾಹಪಿತ್ತಾಗ್ನಿವರ್ಧಿನೀ ॥
> ಜಯೇದ್ವಾತಕಫಶ್ವಾಸಕಾಸಹಿಧ್ಮಾವಮಿಕೃಮೀನ್ ॥
> ದೌರ್ಗಂಧ್ಯ ಪಾರ್ಶ್ವರುಕ್ ಕುಷ್ಠ ವಿಷಕೃಚ್ಛ್ರಾಸ್ರ-
> ದೃಗ್ಗದಾನ್ ॥—ಕೈ. ನಿಘಂಟು.

ದಾನವನ್ನು ಕೊಡುವಾಗ ಕೂಡ ಹಿಂದುಗಳು ತುಳಸಿದಳವನ್ನುಪಯೋಗಿಸುವಷ್ಟರ ಮಟ್ಟಿಗೆ ಅದಕ್ಕೆ ಪಾವಿತ್ರ್ಯ ಬಂದಿದೆ.

ಈ ವ್ರತಾಚರಣೆಯ ಉದ್ದೇಶ

ಪ್ರಾಚೀನ ಋಷಿಗಳು ಮಾನವ ಸಮಾಜದ ಹಿತಕ್ಕಾಗಿ, ಮಾನವ ಜೀವನಯಾತ್ರೆ ಸುಗಮವಾಗಿ ಸಾಗಲು ಒಂದೊಂದು ವ್ರತದಲ್ಲೂ ಒಂದೊಂದು ಧ್ಯೇಯ ಸಾಧನೆಯ ಮಾರ್ಗವನ್ನು ತೋರಿರುವರು. ನಾವು ಅದರ ಮೂಲ ಉದ್ದೇಶ ಧ್ಯೇಯಗಳನ್ನು ಮರೆತು ಕೇವಲ ತಿಂಡಿತೀರ್ಥಗಳ ಭಾಗಕ್ಕಷ್ಟೇ ಅಂಟಿಕೊಂಡು ಈ ವ್ರತಗಳನ್ನಾಚರಿಸುವುದು ತಪ್ಪಾಗದಿರದು. ವಟ, ತುಳಸಿ, ಅಶ್ವತ್ಥ, ಔದುಂಬರಾದಿ ಗಿಡಗಳ ಪೂಜೆ ಪ್ರದಕ್ಷಿಣೆಗಳಿಂದ ಪುಣ್ಯಬರುವುದೆಂದು ಹೇಳಿದರೆ, ಈಗಿನ ಕಾಲದವರಾರೂ ನಂಬುವುದಿಲ್ಲ. ನಾವು ಈಗಿನ ದೃಷ್ಟಿಯನ್ನು ಬಿಟ್ಟು, ಮೇಲೆ ಹೇಳಿದ ಹಳೆಯ ಕಥೆಯ ದೃಷ್ಟಿಯಿಂದಲೇ ವಿಚಾರಮಾಡುವುದೇ ಯೋಗ್ಯ. ವೃಂದೆಯ ಪಾತಿವ್ರತ್ಯದಿಂದ ಜಾಲಂಧರನ ಬಲವು ಹೆಚ್ಚುತು ಅಥವಾ ಅವನಿಗೆ ಬಲಬಂದಿತು ಎಂಬುದರಿಂದ ಸಹಧರ್ಮಿಣಿಯು, ಪತಿಪರಾಯಣೆಯಾಗಿರುವುದರಿಂದ ಪ್ರತಿಯೊಂದು ಕಾರ್ಯದಲ್ಲೂ ಅವಳ ಸಲಹೆ ಮತ್ತು ಬೆಂಬಲಗಳು ಅವನ ಕಾರ್ಯಸಿದ್ಧಿಗೆ ಉಪಯೋಗವಾಗುತ್ತ ಅವನಿಗೆ ವಿಜಯ ಪ್ರಾಪ್ತಿಯಾಗುತ್ತಿತ್ತು. ಆದರೆ ವಿಷ್ಣುವಿನ ಕಪಟಾಚರಣೆಯಿಂದ ಅವನಿಗೆ ಅವಳ ಸಹಕಾರವು ದೊರೆಯದಂತಾಗಿ, ಜಾಲಂಧರನು ಪತನಹೊಂದಿದನು" ಎಂದು ಅರ್ಥವಾಗುವುದು ಕಷ್ಟವಲ್ಲ. ಪ್ರಾಪಂಚಿಕ ಕಾರ್ಯದಲ್ಲಿ, ರಾಜಕಾರಣಗಳಲ್ಲಿ ಪ್ರಾಚೀನಕಾಲದ ಸ್ತ್ರೀಯರು ತಮ್ಮ ಪತಿಗೆ ಸಹಾಯಮಾಡುತ್ತಿದ್ದರು. ಕೈಕಯಿಯೂ ಮತ್ತು ಸತ್ಯಭಾಮೆಯರು ತಂತಮ್ಮ ಪತಿಯೊಂದಿಗೆ ರಣಾಂಗಣಕ್ಕೆ ಹೋಗಿದ್ದ ಸಂಗತಿಯು ಇತಿಹಾಸದಿಂದ ವ್ಯಕ್ತವಾಗುವುದು. ರಾಣಿ ಚಂದ್ರಾವತಿಯು ತನ್ನ ಪತಿ ರಾಣಾ ಜಯಸಂತಸಿಂಹನು ಸೋತು ಹಿಂತಿರುಗಿ ಬಂದಾಗ, ಅವನನ್ನು ಕೋಟೆಯೊಳಕ್ಕೆ ಸೇರಿಸದೆ, ಅವನನ್ನು ಮತ್ತೆ ಯುದ್ಧಕ್ಕೆ ಕಳುಹಿಸಿ, ತನ್ನ ಕುಲ ಮತ್ತು ದೇಶಕ್ಕೆ ಭೂಷಣಳಾದಳು. ಈಗಿನ

* ಪಾಶ್ಚಾತ್ಯ ದೇಶಗಳಲ್ಲಿ ತುಳಸಿಗೆ ದೊರೆತಿರುವ ಗೌರವಾದರಗಳನ್ನು ಮಿ। ಕೆಂಕೇಡ್ ಅವರ 'ಟೇಲ್ ಆಫ್ ದಿ ತುಳಸೀ ಪ್ಲಾಂಟ್' ಎಂಬ ಪುಸ್ತಕದಲ್ಲಿ ಓದಬಹುದು.

ಧಾತ್ರೀಪೂಜನ—ಭೋಜನ

ಲೇಖಿಕಾ: ಶ್ರೀಮತಿ ಕೆ. ಎಸ್. ಶಾಂತಾದೇವಿ, ಭಿಷಕ್,
ಆರ್. ಎಮ್. ಪಿ. ಬೆಂಗಳೂರು.



ವಂಗ ದೇಶದಲ್ಲಿ ಕಾರ್ತಿಕ ಮಾಸದಲ್ಲಿ "ಜಗದ್ಧಾತ್ರಿ ಪೂಜೆ" ಎಂಬ ದೊಡ್ಡ ಉತ್ಸವವನ್ನು ಮಾಡುವರು. ಭಾರತ ದೇಶದ ಬೇರೆ ಭಾಗಗಳಲ್ಲಿ ಅದರ ಆಚರಣೆ ಇಲ್ಲ. ಆದಾಗ್ಯೂ ಕಾರ್ತಿಕ ಶುಕ್ಲ ದಶಮಿಯಿಂದ ಪೌರ್ಣಮಿಯ ವರೆಗೆ ದಕ್ಷಿಣ ಭಾರತದಲ್ಲಿ–ಅದರಲ್ಲಿಯೂ ಮೈಸೂರು ಕರ್ಣಾಟಕದಲ್ಲಿ– ನೆಲ್ಲಿ (ಧಾತ್ರಿ) ಗಿಡಗಳಿರುವ ವನಕ್ಕೆ ಹೋಗಿ, ಅಲ್ಲಿ ಧಾತ್ರಿ ವೃಕ್ಷವನ್ನು ಪೂಜಿಸಿ, ವಿಶೇಷ ವಿಜೃಂಭಣೆಯಿಂದ ನೆಂಟರಿಷ್ಟರೊಂದಿಗೆ ವನಭೋಜನ ಮಾಡುವ ಪದ್ಧತಿ ರೂಢಿಯಲ್ಲಿತ್ತು. ಕಳೆದ ಯುದ್ಧದ ದೆಸೆಯಿಂದುಂಟಾಗಿರುವ ಪಡಿತರ (ರೇಷನ್) ಗಲಾಟೆಯಿಂದ ಈ ರೂಢಿಯು ಅನೇಕರಿಗೆ ಮರೆಯುತ್ತ ಬಂದಿದ್ದರೂ ಆಶ್ಚರ್ಯವಿಲ್ಲ. ಇದಕ್ಕೆ "ಧಾತ್ರೀ ಭೋಜನ" ಎಂದು ಹೆಸರು. ಮಹಾರಾಷ್ಟ್ರದಲ್ಲಿ ಇದಕ್ಕೆ 'ಆವಳೀ ಭೋಜನ' ಎಂದು ಹೆಸರು. ಆವಳೀ ಎಂದರೆ ನೆಲ್ಲಿಕಾಯಿ ಗಿಡಕ್ಕೆ ಹೆಸರು. ಗೋಮಾಂತಕ, ಮಹಾರಾಷ್ಟ್ರ, ಮಲಬಾರ, ಕರ್ಣಾಟಕ ಮೊದಲಾದ ಪ್ರಾಂತಗಳ ಗ್ರಾಮ ಪ್ರದೇಶಗಳಲ್ಲಿ ಗ್ರಾಮದೇವತೆಯನ್ನು ಧಾತ್ರಿ ವನಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಅದನ್ನು ಧಾತ್ರಿ ವೃಕ್ಷದ ಬಳಿ ಸ್ಥಾಪಿಸಿ, ವನಭೋಜನವಾದ ದಿನ ಸಾಯಂಕಾಲ ಅದನ್ನು ಮೆರವಣಿಗೆಯಿಂದ ಮತ್ತೆ ಗ್ರಾಮಕ್ಕೆ ತಂದು, ಎಲ್ಲರೂ ತಂತಮ್ಮ ಮನೆಗೆ ಹೋಗುವ ರೂಢಿ. ಈಗ ಎರಡು ತಲೆಮಾರ ಹಿಂದೆ ಮೈಸೂರು ಅರಸು ಮನೆತನದವರೆ ಈ ಧಾತ್ರಿ ವನಭೋಜನವನ್ನು ಏರ್ಪಡಿಸುತ್ತಿದ್ದರು. ಈ ಪೂಜೆಯಿಂದ ಧಾತ್ರಿ ದೇವಿಯು ಸಂತುಷ್ಟಳಾಗಿ, ತನ್ನ ಬಳಿ ಊಟ ಮಾಡಿದವರ ಪಾಪಗಳನ್ನು ತೊಳೆಯುವಳು ಎಂಬ ಭಾವನೆ ಇತ್ತು. ಪಾಶ್ಚಾತ್ಯ ದೇಶಗಳಲ್ಲಿ ಕೂಡ, ನಗರವಾಸಿ ಜನಗಳು ಗವಿಯಂತಿರುವ ತಂತಮ್ಮ ಮನೆಗಳಿಂದ ಆಗಾಗ್ಗೆ ವಿಶಾಲವಾದ ಲಾಲ್‌ಭಾಗ್ ಮೊದಲಾದಂತಹ ವನೋದ್ಯಾನ ಪ್ರದೇಶಗಳಿಗೆ ಹೋಗಿ ಅಲ್ಲಿ 'ಪಿಕ್‌ನಿಕ್' (ವನಭೋಜನ) ಪಾರ್ಟಿ ಮಾಡುವ ರೂಢಿ ಇಟ್ಟುಕೊಂಡಿರುವರು. ಬೆಂಗಳೂರಂತಹ ನಗರವಾಸಿಗಳಿಗೂ ಈ ಬಗೆಯ ವನಭೋಜನ ಮತ್ತು ಎರಡು ದಿನಗಳ ಮಟ್ಟಿಗಾದರೂ ವನವಾಸವು ಆರೋಗ್ಯ ದೃಷ್ಟಿಯಿಂದ ಹಿತಕರವಾಗದಿರದು.

ಇದೇ ಕಾರ್ತಿಕ ಶುದ್ಧ ದ್ವಾದಶಿಯ ದಿನ ತುಳಸೀ ವಿವಾಹ ಮಾಡುವಾಗ ತುಳಸೀ ಸಸಿಯೊಂದಿಗೆ ಧಾತ್ರಿ (ನೆಲ್ಲಿ) ಕೊಂಬೆಯನ್ನು ನೆಡುವುದು ಮತ್ತು ತುಳಸಿಗೆ ನೆಲ್ಲಿಕಾಯಿ

ನಮ್ಮ ಸಾಮಾಜಿಕ ಸ್ಥಿತಿಯನ್ನು ನೋಡಿದರೆ ನಮ್ಮವರು ಸ್ತ್ರೀಯರಲ್ಲಿ ಸಹಕಾರಿತ್ವದ ಯೋಗ್ಯತೆಯನ್ನಿಡದೆ, ಕೇವಲ ಪಾಕಶಾಲೆ ಮತ್ತು ಪ್ರಸೂತಿ ಗೃಹಗಳ ಕಾರ್ಯಗಳನ್ನಷ್ಟೆ ಅವರ ಕಡೆ ವಹಿಸಿ, ಗಂಡಸಿಗೇ ಮೆದುಳಿರುವುದು, ಹೆಂಗಸಿಗೆ ಇಲ್ಲ ಎಂಬಂತೆ ವ್ಯವಹರಿಸುತ್ತ ಸ್ತ್ರೀಯರ ಮೇಲೆ ಪುರುಷರು ಅಧಿಕಾರ ನಡೆಸುತ್ತಿರುವರು. ಹೀಗಿರುವಂಥ ಅಹಮನ್ಯತೆಯ ಅಂಧಕಾರದಲ್ಲಿರುವ ಪುರುಷರಿಗೆ ಯಾವ ಪತಿವ್ರತಾ ಸ್ತ್ರೀಯಾದರೂ ಏನು ಸಲಹೆ ಕೊಟ್ಟಾಳು, ಏನು ಸಹಾಯ ಮಾಡಿಯಾಳು? ಜಾಲಂಧರ ಪತ್ನಿ ವೃಂದೆಯಿಂದ ಹುಟ್ಟಿದ ಕೋಮಲ ತುಳಸಿ ಸಸಿಯು ಪುರುಷರು ಸ್ತ್ರೀಯರ ಯೋಗ್ಯತೆಯನ್ನು ಬೆಳೆಸಬೇಕು. ಸ್ತ್ರೀಯರಲ್ಲಿ ಜ್ಞಾನಾರ್ಜನೆಯಿಂದ ಉಂಟಾದ ಲಾಭದ ಪ್ರಯೋಜನವನ್ನು ಪುರುಷರು ಪಡೆಯಬೇಕು ಎಂಬ ಪಾಠವನ್ನೂ ಬೋಧಿಸುವುದು. ಆದ್ದರಿಂದ ಪ್ರತಿದಿನ ಪ್ರಾತಃಕಾಲದಲ್ಲಿ ತುಳಸಿ ದರ್ಶನವನ್ನು ಪಡೆವಾಗ ಪ್ರತಿಯೊಬ್ಬ ಸ್ತ್ರೀ ಪುರುಷರು ತಮ್ಮ ಕರ್ತವ್ಯಜ್ಞಾನವು ಅಂತಃಕರಣದಲ್ಲಿ ಉದಯಿಸುವಂತಹ ರೀತಿಯಲ್ಲಿ ತುಳಸಿಯ ರೂಪಾಂತರ ಹೊಂದಿದ ವೃಂದೆಯ ದೊಡ್ಡತನವನ್ನೂ ಧ್ಯಾನದಲ್ಲಿ ತಂದುಕೊಳ್ಳಬೇಕಾಗಿ ಪ್ರಾರ್ಥನೆ.

ಮೇಲೆ ಹೂ ಬತ್ತಿಗಳನ್ನಿಟ್ಟು ಆರತಿ ಮಾಡುವುದು ರೂಢಿ, ಎಂದರೆ ಕಾರ್ತಿಕ ಶುದ್ಧ ಪೌರ್ಣಿಮೆಯಿಂದ ಶರದ್ ಋತುವು ಅಂತ್ಯವಾಗುತ್ತ ಬರುವುದು. ಹಿಮಾಂತ ಋತುವಿನ ಆರಂಭ ಕಾಲ, ಈ ಋತು ಬದಲಾವಣೆಯ ಕಾಲದಲ್ಲಿ ನೆಲ್ಲಿಕಾಯಿ ಗಿಡದ ಪೂಜೆ, ನೆಲ್ಲಿಕಾಯಿ ಸೇವನೆಯನ್ನು ವಿಧಿಸಿರುವರು. ಆಶ್ವೀಜ ಮಾಸದಲ್ಲಿ ಇದರ ಹೂವಿನ ಕಾಲ. ಕಾರ್ತಿಕ ಮಾಸದಲ್ಲಿ ಇದರ ಕಾಯಿಯಲ್ಲಿ ರಸದ ಸ್ವಾದವು ಸ್ಪಷ್ಟವಾಗಿ ತಿಳಿಯಲಾರಂಭಿಸುವುದು. ಚೈತ್ರ ಮಾಸದ ಹೊತ್ತಿಗೆ ಫಲವು ಪಕ್ವವಾಗಿ, ಔಷಧಿಯ ಉಪಯೋಗಕ್ಕೆ ಅನುವಾಗಿರುವುದು. ವಾರ್ಧಿಕ್ಯದಿಂದ ಅಂಗವು ಗಲಿತವಾಗಿ, ಮುಂಡವು ಫಲಿತವಾಗಿದ್ದ ಚ್ಯವನ ಋಷಿಗೆ ಅಶ್ವಿನಿ ಕುಮಾರರು ಔಷಧಿ ಕೊಟ್ಟು ಋಷಿಗೆ ಯೌವನ ಪ್ರಾಪ್ತವಾಗುವಂತೆ ಮಾಡಿದ ಚ್ಯವನಪ್ರಾಶ ಲೇಹದಲ್ಲಿ ಧಾತ್ರಿ ಫಲವು ಪ್ರಧಾನ ವಸ್ತುಗಳಲ್ಲೊಂದಾಗಿದೆ. ಇದರ ಗುಣದ ವಿಷಯವಾಗಿ ಭಾವ ಪ್ರಕಾಶದಲ್ಲಿ ಹೀಗೆ ಬರೆಯಲಾಗಿದೆ:—

ಹರೀತಕೀ ಸಮಂ ಧಾತ್ರೀ ಫಲಂ ಕಿನ್ತು ವಿಶೇಷತಃ ।
ರಕ್ತಪಿತ್ತ ಪ್ರಮೇಹಘ್ನಂ ಪರಂ ವೃಷ್ಯಂ ರಸಾಯನಮ್ ॥
ಹಸ್ತಿವಾತಂ ತದಮ್ಲತ್ವಾತ್ ಪಿತ್ತಂ ಮಾಧುರ್ಯ್ಯ ಶೈತ್ಯತಃ ।
ಕಫಂ ರೂಕ್ಷಕಷಾಯತ್ವಾತ್ಫಲಂ ಧಾತ್ರ್ಯಾ ತ್ರಿದೋಷಜಿತ್ ॥

ಇದನ್ನೇ ಇಂಗ್ಲಿಷಿನಲ್ಲಿ Emblic Myro balan ಎಂತಲೂ, ಲ್ಯಾಟಿನ್‌ನಲ್ಲಿ Phyllanthus Emblica, ಸಂಸ್ಕೃತದಲ್ಲಿ ಆಮಲಕ, ಕನ್ನಡದಲ್ಲಿ ನೆಲ್ಲಿ ಎಂತಲೂ ಹೆಸರಿದೆ. ಕೈಯದೇವ ನಿಘಂಟುಕಾರನು ಇದರ ಗುಣದ ವಿಷಯವಾಗಿ ಹೀಗೆ ವಿವರಿಸಿರುವನು:—

ತದ್ವದ್ಧಾತ್ರೀ ಸ್ವೇದಮೇದೊಹರಾಽಮ್ಲಾ ಶುಕ್ರಲಾ ಹಿಮಾ ।
ಭಗ್ನಸಂಧಾನಕೃತ್ಕೇಶ್ಯಾ ಪಿಪಾಸಾ ಕಫಪಿತ್ತಹೃತ್ ॥
ತನ್ಮಜ್ಜಾ ತು ವರಃ ಸ್ವಾದುಸ್ತೃಟ್ ಛರ್ದ್ಯನಿಲಪಿತ್ತಹಾ ॥

ಎಂದರೆ ತದ್ವತ್ (ಹರೀತಕಿ-ಅಳಲೆಕಾಯಿಯಂತೆ) ಆಮಲಕ (ನೆಲ್ಲಿ)ವು ಬೆವರು ಮತ್ತು ಮೇದಸ್ಸು (ಚರಬಿಯನ್ನು) ನಾಶಗೊಳಿಸುವುದು. ಇದು ವೀರ್ಯವರ್ಧಕ ಮತ್ತು ಶೀತ, ಭಗ್ನವಾದ ಎಲುಬನ್ನು ಸೇರಿಸುವುದು, ಕೂದಲಿಗೆ ಹಿತಕರ. ಬಾಯಾರಿಕೆ ಮತ್ತು ಕಫಪಿತ್ತಗಳನ್ನು ಶಾಂತಗೊಳಿಸುವುದು ಅದರ ಮಜ್ಜೆಯು (ತಿರುಳು) ಒಗರು ಮತ್ತು ಸಿಹಿಯಾಗಿರುವುದು. ವಮನ, ಬಾಯಾರಿಕೆ ವಾತಪಿತ್ತಗಳನ್ನು ಹರಿಸುವುದು, ಇದರಲ್ಲಿರುವ ಹುಳಿಯ ಗುಣದಿಂದ ಇದು ವಾತವನ್ನೂ, ಮಧುರ ಮತ್ತು ಶೀತ ಗುಣದಿಂದ ಪಿತ್ತವನ್ನೂ, ಒಗರು (ಚೊಗರು) ಗುಣದಿಂದ ಕಫವನ್ನೂ ಹರಿಸುವುದಾಗಿ, ತ್ರಿದೋಷಗಳನ್ನು ಜಯಿಸುವುದು. ಫಲಗಳಲ್ಲೆಲ್ಲ ಇದು ಸರ್ವೋತ್ತಮವಾದುದೆನಿಸಿದೆ—ಎಂದು ಹೇಳಿದೆ. ಇಂತಹ ಗುಣವುಳ್ಳ ಫಲಗಳನ್ನು ಬಿಡುವ ಧಾತ್ರಿವೃಕ್ಷವು ಪೂಜ್ಯವೆನಿಸಿ ಪ್ರಾಚೀನ ಋಷಿಗಳು ಇದರ ಫಲಸೇವನೆಯ ಮೂಲಕ ಊರಿನವರೆಲ್ಲ ಪರಸ್ಪರ ಪರಿಚಯ, ವಿಚಾರ ವಿನಿಮಯಗಳನ್ನೂ ಮಾಡಿಕೊಳ್ಳಲೆಂದು ಧಾತ್ರೀ ಭೋಜನವನ್ನು ವಿಧಿಸಿರಬಹುದು. ಪಕ್ಕದ ಮನೆಯಲ್ಲಿ ಯಾರು ವಾಸಿಸುತ್ತಿರುವರು ಎಂಬುದನ್ನರಿಯದ ನಗರವಾಸಿಗಳಿಗೆ ಇಂತಹ ಭೋಜನ ಕೂಟಗಳಿಂದ ಪ್ರಯೋಜನವಾಗುವುದಲ್ಲದೆ, ವನದ ವಾತಾವರಣದಿಂದ ನೆಲ್ಲಿಯ ಸೇವನೆಯಿಂದ ಆರೋಗ್ಯಲಾಭ ಉಂಟಾಗಬೇಕೆಂಬುದೆ ಇದರ ಉದ್ದೇಶವೆಂಬುದು ಸ್ಪಷ್ಟವಾಗುವುದು.

ಈಗಲೂ ಹಳೆಯ ಸಂಪ್ರದಾಯದ ವೃದ್ಧರು ಏಕಾದಶಿ ಉಪವಾಸ ಮಾಡಿದ ಮಾರನೆಯ ದ್ವಾದಶಿದಿನ ಭೋಜನ ಕಾಲದಲ್ಲಿ ಮೊದಲು ನೆಲ್ಲಿಚಟ್ನಿನ್ನು ಕಲಸಿ ಎರಡು ಮೂರು ತುತ್ತು ಅನ್ನವನ್ನು ಸೇವಿಸುವರು. ಈ ಬಗೆಯ ಋತು ಕಾಲ ಭೇದಗಳಿಗನುಸಾರವಾಗಿ ಷಡ್ರಸ ಭೋಜನದಲ್ಲಿ ಮಾರ್ಪಾಡು ಮಾಡಿಕೊಂಡು, ಈಗಿನವರೂ ಔಷಧಿ ಸೇವನೆಯಿಂದ ಲಭಿಸುವ ಕೃತ್ರಿಮ ಆರೋಗ್ಯಕ್ಕೆ ಬದಲು, ನೈಸರ್ಗಿಕವಾದ ಆರೋಗ್ಯವನ್ನು ಪಡೆದು ಪೂರ್ವಿಕರಂತೆ, ದೀರ್ಘಾಯುಸ್ಸುಳ್ಳವರಾಗಿ ಪರೋಪಕಾರಿಗಳಾಗಿ ಬಾಳಲಿ.

ಧಾತ್ರೀದೇವಿಯು, ಧಾತ್ರೀ ಫಲವು ಲೋಕಕ್ಕೆಲ್ಲ ಆರೋಗ್ಯ ಸುಖ, ಶಾಂತಿಗಳನ್ನೀಯಲಿ.



ವರ್ಷ ಭವಿಷ್ಯ

1950ನೇ ದಶಂಬರದಿಂದ.... ....1951ನೇ ನವಂಬರದ ವರೆಗೆ.

[ಶ್ರೀ। ಎಮ್. ಸುಬ್ರಾಯನ್, ವಿದ್ವಾನ್. ಸಾಹಿತ್ಯ ಮತ್ತು ಜೋತಿಷ್ಯ ಶಿರೋಮಣಿ.]

ಮೇಷ:—

(ಚೂ, ಚೇ, ಚೋ, ಲಾ, ಲಿ, ಲು, ಲೇ, ಲೊ, ಅ)

"ಸತ್ಯ, ನ್ಯಾಯರಹಿತವಾದ ವರ್ತನೆಗಳು ಜೀವನದಲ್ಲಿ ಸುಖವನ್ನುಂಟುಮಾಡಲಾರವು" ಎಂಬುದನ್ನು ನೀವು ತಿಳಿದವರಿದ್ದು ಮಾತಿನಲ್ಲಿ ನಡೆಯಲ್ಲಿ ಇವನ್ನೇ ಅನುಸರಿಸುತ್ತಿರುವುದರಿಂದ ಏಳಿಗೆಯನ್ನು ಹೊಂದುವಿರಿ. ನಿಮ್ಮ ವರ್ಚಸ್ಸನ್ನು ಎಲ್ಲೆಡೆಯೂ ತೋರುವಿರಿ. ಆರನೆ ಮನೆಯನ್ನು ಸೇರಿರುವ ಶನಿಯು ಏಕಾದಶಪತಿಯಾಗಿರುವುದರಿಂದ, ಹಿರಿಯ ಸಹೋದರರ ಮೂಲಕ ಅಶಾಂತಿಯು ಕಂಡುಬರಬಹುದು. ಕಷ್ಟ ನಿವೃತ್ತಿಯನ್ನು ಏಕಾದಶಕ್ಕೆ ಕುಜನು ಬಂದನಂತರ ಹೊಂದಲಿರುವಿರಿ. ಉದ್ಯೋಗದಲ್ಲಿ ಪ್ರಗತಿ ಸಿದ್ಧಿಸುವುದು. ದೇಹಾರೋಗ್ಯ ವಿಷಯದಲ್ಲಿ ಮಾನಗತ ಗುರು ಮತ್ತು ಜನ್ಮಪಂಚಮಗತನಾಗಲಿರುವ ರವಿಚಾರಕಾಲದಲ್ಲಿ ಜಾಗರೂಕರಾಗಿರಬೇಕು. ವಿದ್ಯಾರ್ಥಿಜೀವನದವರು ಅಭಿವೃದ್ಧಿಯನ್ನು ಹೊಂದಲಿರುತ್ತಾರೆ. ದೂರ ಪ್ರಯಾಣಗಳನ್ನು ಮಾಡಲಿರುವಿರಿ. ಕುಟುಂಬದಲ್ಲಿ ಶುಭ ಕೆಲಸಗಳು ನಡೆಯಲಿರುತ್ತವೆ. ವಾಸಸ್ಥಾನದ ಬದಲಾವಣೆಗಿರುವ ಸಂಘಟನೆಗಳು ಈ ವರ್ಷದ ಮಧ್ಯ ಭಾಗಕಾಲದಲ್ಲಿ ತೋರುವವು. ನೌಕರರಿಗೆ ಮಾರ್ಚಿಯನಂತರ ಉನ್ನತಿಯುಂಟಾಗಲಿದೆ. ವಕೀಲ ಮತ್ತು ವೈದ್ಯಕೀಯ ವೃತ್ತಿಯವರು ಅಭಿವೃದ್ಧಿಯನ್ನೂ ಒಳ್ಳೆಯ ಯಶಸ್ಸನ್ನೂ ಪಡೆಯಲಿರುತ್ತಾರೆ. ಲೇಖನ ವ್ಯವಹಾರದವರಿಗೆ ವಿರಾಮ ಕಡಮೆ. ಲೇಖನದ ಮೂಲಕ ಉತ್ತಮ ಸ್ಥಾನಮಾನಗಳು ವರ್ಷಾಂತ್ಯಕಾಲದಲ್ಲಿ ದೊರೆಯಲಿರುತ್ತವೆ. ವಿಮಾವ್ಯವಸಾಯದವರಿಗೆ ವರ್ಷಾಂತ್ಯಭಾಗವು ಪ್ರಗತಿಕರ. ವ್ಯಾಪಾರಿಗಳಿಗೆ ಆದಿಭಾಗವು ಆಶಾದಾಯಕವಾಗಿ ಕಾಣುವುದಿಲ್ಲ. ಮಧ್ಯ ಮತ್ತು ಅಂತ್ಯಭಾಗಕಾಲದಲ್ಲಿ ಅಭಿವೃದ್ಧಿಯು ಇರುತ್ತದೆ. ಪತ್ರವ್ಯವಹಾರಗಳು ಅಧಿಕ. ಮಹಿಳೆಯರೇ, ನಿಮಗೆ ಅನುಕೂಲ ದಾಂಪತ್ಯಜೀವನವು ಇರುವುದಾದರೂ ಕುಟುಂಬೀಯರ ಮೂಲಕ ಅಶಾಂತಿಯ ಪರಿಸ್ಥಿತಿಯುಂಟಾಗಲಿದೆ. ತರುಣರು ನವೀನ ಉದ್ಯೋಗವನ್ನು ಜುಲಾಯಿ, ದಶಂಬರ ಮಾರ್ಚಿ ತಿಂಗಳುಗಳಲ್ಲಿ ಸಾಧಿಸಬಹುದಾಗಿದೆ. ಕನ್ನಿಕೆಯರಿಗೆ ಮಾಂಗಲ್ಯ ಕರ್ಮವು ಷಷ್ಠದ ಶನಿಮಹಾಶಯನಿಂದ ಉಂಟಾಗಲಿರುತ್ತದೆ.

ಸಂತಾನ ವೃದ್ಧಿಯು ದಾಂಪತ್ಯ ಜೀವನದವರಿಗೆ ಉಂಟಾಗುವುದು. ಅಶ್ವನಿ ನಕ್ಷತ್ರದವರಿಗೆ ಈ ವರ್ಷದ ಆದಿಯ ಭಾಗವು ಉತ್ತಮವಾಗಿ ಕಂಡುಬಂದಂತೆ ಅಂತ್ಯಭಾಗವು ಕಾಣಲಾರದು. ದೇಹಾರೋಗ್ಯವು ಹಾಳಾಗದಂತೆ ಜಾಗರೂಕರಾಗಿರಬೇಕು. ಪತನಾದಿಗಳುಂಟಾಗದಂತೆ ಕೃತ್ತಿಕಾ ನಕ್ಷತ್ರದವರು ಚೆನ್ನಾಗಿ ಜಾಗ್ರತೆ, ತೆಕ್ಕೊಳ್ಳಬೇಕಾಗಿದೆ. ವಾಹನ ಸುಖಕ್ಕಾಗಿ ಧನವ್ಯಯವು ಉಂಟಾಗಲಿರುವುದು. ಜೂನ್, ದಶಂಬರ, ಜುಲಾಯಿ, ಸಪ್ಟಂಬರಗಳು ಮಾನಸಿಕ-ಅಶಾಂತಿಯದ್ದಾಗಿವೆ. ಪತ್ರಿಕಾವ್ಯವಸಾಯಗಾರರು ಪ್ರಗತಿಯನ್ನೇ ಹೊಂದಲಿರುತ್ತಾರೆ. ಭರಣಿ ನಕ್ಷತ್ರದವರು ಕೌಟುಂಬಿಕ ಮತ್ತು ಆರ್ಥಿಕ ಸಂಘಟನೆಯ ಕೆಲಸಗಳಿಂದ ಕೂಡಿದವರಾಗಿ ಕಾಣುವರು. ರಿಕಾರ್ಡು ಲೆಕ್ಕಪತ್ರವ್ಯವಹಾರಗಳು ಅಧಿಕವಾಗಿರುತ್ತವೆ. ಮಿತ್ರರಿಗಾಗಿ ಧನವ್ಯಯವು ಉಂಟಾಗಲಿರುತ್ತದೆ. ಗೃಹ ಮತ್ತು ಭೂಸಂಬಂಧಕ್ಕಾಗಿ ಧನವ್ಯಯವು ಆದಿ ಅಂತ್ಯಭಾಗಗಳಲ್ಲಿ ಅಧಿಕ. ಪುಣ್ಯತೀರ್ಥಸಂದರ್ಶನೆಯು ಮಾರ್ಚಿ ಎಪ್ರೀಲು ತಿಂಗಳುಗಳಲ್ಲಿ ನಡೆಯಲಿರುತ್ತವೆ. ನವೀನ ಕರ್ಮಶಾಲೆಯ ಅಧಿಕಾರ ಸಂಘಸ್ಥಾಪನಾಯೋಗವು ಹನ್ನೆರಡನೆ ಮನೆಯ ಗುರುಚಾರಕಾಲದಲ್ಲಿ ಕಾಣಬರುತ್ತಿದ್ದು ಅಧಿಕಾರ ವರ್ಚಸ್ಸು ಮಾರ್ಚಿಯನಂತರ ಉದ್ಯೋಗಕುಶಲರಿಗೆ ಕಾಣುವುದು. ಭೂಮ್ಯಾಲಿಕರು ಭೂಸಂಪತ್ತಿನಿಂದ ಅಭಿವೃದ್ಧಿಯನ್ನೂ ಹೊಂದುವರು. ಹಿರಿಯರಿಗೆ ಕಿರಿಯರಿಂದ ಶಾಂತಿಭಂಗ, ಉದ್ಯೋಗ ಕರ್ಮಗಳಲ್ಲಿ ವಿಘ್ನ, ಭಯಾವಕಾಶವಿದೆಯಾದರೂ ವರ್ಷಾಂತ್ಯ ಸುಖದಾಯಕವಿದೆ.

ವೃಷಭ:—

(ಈ, ಉ, ಎ, ಓ, ವ, ವೀ, ವೂ, ವೇ, ವೋ)

ಈ ವರ್ಷ ಕಳೆದ ವರ್ಷದಂತಹುದಲ್ಲ. ಮನಸ್ಸಿನಲ್ಲಿ ಅಶಾಂತಿ, ದೇಹತಾಪ, ಆರೋಗ್ಯ ಹಾನಿಯಿಂದ ನೀವು ತೊಂ

ದರೆಗೆ ಒಳಗಾದವರು, ಅಂತಹ ಪ್ರಸಂಗಗಳು ಈ ವರ್ಷ ಕಡಮೆ. ಆರ್ಥಿಕಸ್ಥಿತಿಯು ಸುಧಾರಣೆಯ ಸಮಸ್ಯೆಯು ಅಧಿಕವಾಗಿರದು, ಕುಟುಂಬೀಯರ ವಿರೋಧವೂ ಕೋರ್ಟು ಸಂಬಂಧ ವ್ಯವಹಾರಗಳೂ ಕಂಡುಬರಲಿರುತ್ತವೆ. ಈ ವರ್ಷದ ಪ್ರಥಮ ಭಾಗವು ಉತ್ತರಾರ್ಧದಷ್ಟು ಉತ್ತಮವಲ್ಲ. ಆದಿಯ ಭಾಗದಲ್ಲಿ ಅನೇಕ ರೀತಿಯ ಕಷ್ಟಗಳನ್ನು ಎದುರಿಸಿ ತಮ್ಮ ವರ್ಚಸ್ಸನ್ನು ತೋರುವಿರಿ. ಪಂಚಮದ ಶನಿಯು ಮನಸ್ತಾಪವನ್ನೇ ಕೊಡುವನಲ್ಲದೆ ದೇಹಾರೋಗ್ಯದಲ್ಲಿ ದೋಷವನ್ನೂ ಕೊಡಲಾಪನು. ಭೂಮಾಲಿಕರು ಗೃಹಭೂಸಂಪತ್ತಿಗಾಗಿ ಧನವ್ಯಯಮಾಡಲಿರುತ್ತಾರೆ. ದೊಡ್ಡ ದೊಡ್ಡ ಪ್ರಯಾಣವನ್ನು ಮಾಡಲಿರುವ ಕುತೂಹಲವು ಹೆಚ್ಚುವುದು. ಮಹಾಜನರ ಭೇಟಿಯು ಅಧಿಕವಾಗಿ ಉಂಟಾಗುತ್ತದೆ. ಕೀರ್ತಿಯ ದಾರಿಯಲ್ಲಿ ಬಹಳವಾಗಿ ನಡೆಯುವಿರಿ. ಗೃಹ ಕಲಹವು ವರ್ಷಾಂತ್ಯದಲ್ಲಿ ಶಮನಹೊಂದುವುದು. ಆಕಸ್ಮಿಕ ಘಟನೆಗಳೇ ಜೂನಿನನಂತರ ಕಂಡುಬರುತ್ತವೆ. ವ್ಯಾಪಾರ, ಉದ್ಯೋಗಗಳಲ್ಲಿ ಉದಾಸೀನತೆಯು ಆದಿಭಾಗದಲ್ಲಿರುತ್ತದೆ. ದಶಂಬರ, ಜನವರಿ ತಿಂಗಳುಗಳು ಕುಟುಂಬದ ವ್ಯವಹಾರದವು. ಫೆಬ್ರವರಿ, ಮಾರ್ಚಿ ತಿಂಗಳುಗಳಲ್ಲಿ ನವೀನ ಉದ್ಯೋಗಾಸಕ್ತಿ ಕಂಡುಬರುತ್ತದೆ. ಧರ್ಮಕಾರ್ಯ, ಮಂಗಳಕಾರ್ಯಗಳು, ಕುಟುಂಬದಲ್ಲಿ ನೆರವೇರಲಿರುತ್ತವೆ. ಸಾಧು ಸಜ್ಜನರ ಭೇಟಿಯು ಸಂಭವಿಸಿ, ಅವರಿಂದ ಆಶೀರ್ವಚನವನ್ನು ಹೊಂದುವ ಸನ್ನಿವೇಶಗಳೊದಗುತ್ತವೆ.

ಮಹಿಳೆಯರೇ, ನಿಮಗೀವರ್ಷವು ಉನ್ನತಿದಾಯಕವಾಗಿದೆ. ಸಂತಾನಾಭಿವೃದ್ಧಿಯು ಕಂಡುಬರುವುದಾಗಿದೆ. ಇಷ್ಟಾರ್ಥವು ಎಲ್ಲಾ ಕೆಲಸಗಳಲ್ಲಿಯೂ ಸಿದ್ಧಿಸಲಿದೆ. ನೌಕರರು ಅಭಿವೃದ್ಧಿಯಿಂದ ಕೂಡಿದವರಾಗುತ್ತಾರೆ. ಲೇಖಕ--ಲೇಖಕಿಯರು ಒಳ್ಳೇ ಯಶಸ್ಸನ್ನು ಹೊಂದಲಿರುತ್ತಾರೆ. ಪೋಷಾಕಿಗಾಗಿ ತರುಣ-ತರುಣಿಯರು ಧನವ್ಯಯವನ್ನು ಬಹಳವಾಗಿ ಮಾಡಲಿರುತ್ತಾರೆ. ವಿವಾಹ ಸಂಬಂಧ ಘಟನೆಯು ಕೃತ್ತಿಕಾ ಮೃಗಶಿರಾ ನಕ್ಷತ್ರದವರಿಗೆ ಸಂಭವಿಸಲಿರುವುದು. ನೌಕರರಿಗೆ ಪ್ರಥಮ ಭಾಗದಲ್ಲಿ ನೌಕರಿಯ ತ್ರಾಸದಾಯಕವಾಗಿ ಕಾಣುವುದು. ಅಧಿಕಾರಿಗಳ ಉನ್ಮತ್ತತೆಯ ಮೂಲಕ ಮನಸ್ಸು ಖೇದದಿಂದ ಕೂಡಿದ್ದಾಗಿರುತ್ತದೆ. ವಾಸಸ್ಥಾನದ ಬದಲಾವಣೆಯ ಕುರಿತು ಶ್ರದ್ಧಾಳುಗಳಾಗಿ ಕಂಡುಬರುವಿರಿ.

ವೈದ್ಯಕೀಯ ವೃತ್ತಿಯವರು ಅಭಿವೃದ್ಧಿಯುಳ್ಳವರಾಗುತ್ತಾರೆ. ಸಟ್ಟೆ ಲಾಟ್ರಿಗಳಿಂದ ವಿಶೇಷ ಲಾಭವು ಉಂಟಾಗಲಾರದು. ನೌಕರಿಯಿಂದಲೆ ಪ್ರಗತಿಯು ಸಿದ್ಧಿಸುವುದಾಗಿದೆ. ವಕೀಲವೃತ್ತಿಯವರಿಗೆ ಫೆಬ್ರವರಿ, ಮಾರ್ಚಿ, ಜುಲಾಯಿ, ಸಪ್ಟಂಬರ, ನವಂಬರಗಳು ಪ್ರಗತಿದಾಯಕಗಳಾಗಿರುತ್ತವೆ. ರೋಹಿಣಿ ನಕ್ಷತ್ರದವರು ಅಭಿವೃದ್ಧಿಗಿರುವ ನವೀನ ಉದ್ಯೋಗವನ್ನು ಹಿಡಿಯಲಿರುತ್ತಾರೆ. ವಿವಾಹವ್ಯವಸಾಯಿಗಳಿಗೆ ಆದಿಭಾಗವು ಅನುಕೂಲ; ಅಂತೆಯೇ ಅಂತ್ಯಭಾಗವೂ ಕರ್ಮಾಭಿವೃದ್ಧಿಯನ್ನು ತೋರುವುದಾಗಿರುತ್ತದೆ. ಆದರೆ ಈ ವರ್ಷ ನಿಮ್ಮ ವಿಷಯವಾಗಿ ನಿಮ್ಮ ಗೆಳೆಯರು ಸುಳ್ಳು ಸಮಾಚಾರವನ್ನು ಹಬ್ಬಿಸಲಿರುತ್ತಾರೆ. ಶತ್ರುಗಳನ್ನು ಕರ್ಮ ಮತ್ತು ಏಕಾದಶದ ಗುರುವು ಅಡಗಿಸಲಿರುತ್ತಾನೆ. ಉಪಾಧ್ಯಾಯರು ತಮ್ಮ ಕೆಲಸದ ಮೂಲಕ ವರ್ಚಸ್ಸನ್ನು ಬೀರಿ ಜನರ ಪ್ರೀತಿಯನ್ನು ಸಂಪಾದಿಸುತ್ತಾರೆ. ಕೀರ್ತಿ ಪ್ರತಿಷ್ಠೆಗಳನ್ನು ಪಡೆದುಕೊಳ್ಳುತ್ತಾರೆ. ದಾಂಪತ್ಯಜೀವನದವರು ಆಭರಣವೇ ಮೊದಲಾದ ಭೂಷಣ ಸಾಮಗ್ರಿಯನ್ನು ಮಾರ್ಚಿಯನಂತರ ಹೆಚ್ಚಿಸಲಿರುತ್ತಾರೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ಕರ್ತವ್ಯಗಳಲ್ಲಿ ಚೆನ್ನಾಗಿ ಅವಧಾನವನ್ನು ಇರಿಸಿ ಕೆಲಸಗೊಂಡರೆ ಮಾತ್ರ ಉತ್ತೀರ್ಣರಾಗಲು ಸಾಧ್ಯವಿದೆತ್ತದೆ. ಏಜಂಟ ವೃತ್ತಿಯವರಿಗೆ ತುಂಬಾ ಅಭಿವೃದ್ಧಿಯು ಇರುತ್ತದೆ. ಮುದ್ರಣಾಲಯಗಾರರೂ ಕಾರಖಾನೆಯ ಮಾಲಿಕರೂ ಕೆಲಸಗಾರರ ಕಷ್ಟ ಪರಿಸ್ಥಿತಿಯನ್ನು ಹೊಂದಲಿರುತ್ತಾರೆ.

ಮಿಥುನ:—

(ಓ, ಕಾ, ಕೀ, ಕೂ, ಕೇ, ಕೋ, ಘು, ಛ, ಹಾ)

ಹಲವಾರು ವಿಚಾರಗಳು ನಿಮ್ಮನ್ನು ಮುಸುಕಿರುವವು. ಅವುವೂ ಪೂರ್ಣತೆಗೊಳ್ಳುವುದಿಲ್ಲ. ಜಮಾಖರ್ಚು ಸರಿಹೋಗಲಿರುವುದು. ಹಿರಿಯರ ಸುಖವು ಕಡಮೆ. ಒಂಭತ್ತನೆ ಮನೆಯಲ್ಲಿ ಸಂಭವಿಸುತ್ತಿರುವ ರಾಹು ಬೃಹಸ್ಪತಿಯುತಿಯು ಹಿರಿಯರ ಮತ್ತು ಮಕ್ಕಳ ಆರೋಗ್ಯಸುಖ ದೃಷ್ಟಿಯಿಂದ ಚೆನ್ನಾಗಿರುವುದಿಲ್ಲ, ಗೃಹಿಣಿಯ ಸುಖಕ್ಕೆ ತೊಡಕು ತೋರುವುದಾಗಿದೆ. ಈ ವರ್ಷದ ಆದಿಯ ಅರ್ಧಭಾಗದಲ್ಲಿ ಮಹಾಜನರ ಭೇಟಿ ಸಹಾಯಗಳೊದಗಲಿರುತ್ತವೆ. ನೌಕರಿಯ ದೃಷ್ಟಿಯಿಂದ ಕಳೆದ ವರುಷದಷ್ಟು ತ್ರಾಸವು ಸಂಭವಿಸಲಾರದು. ವಾತ ವಿಕಾರ ನೇತ್ರಪೀಡೆ, ಪಾದಗಳಿಗೆ ಅಭಿಘಾತ ಉಷ್ಣಪೀಡೆಗಳು ಸಂಭವಿಸಲು ಅವಕಾಶವಿರುತ್ತದೆ. ಹೊಸ ಹೊಸ ಖರ್ಚಿನ ಪ್ರಮೇಯಗಳು ಆದಿಭಾಗಕ್ಕಿಂತ ಅಂತ್ಯಭಾಗದಲ್ಲಿ ಅಧಿಕವೆನಿಸುತ್ತವೆ. ಪ್ರಯಾಣದಲ್ಲಿ ವಿಘ್ನಬಾಧೆಯು ಕಂಡುಬರುವುದಾಗಿದೆ. ವ್ಯಾಪಾರಿಗಳು ಜನವರಿಯನಂತರ ಅನುಕೂಲ ಪರಿಸ್ಥಿತಿಯನ್ನು ಹೊಂದಲು ಶಕ್ತರಾಗುತ್ತಾರೆ. ಸ್ತ್ರೀಸಂಬಂಧವಾದ ಕಲಹಗಳು ಪುನರ್ವಸು ನಕ್ಷತ್ರದವರಿಗೆ ಉಂಟಾಗುವಂತಿದೆ. ಕೋರ್ಟುಕಾರ್ಯಗಳು ಮುಂದರಿಯುತ್ತವೆ. ಸಂತಾನಾರ್ಥಿಗಳು ದಶಮದ ಗುರುವಿನ ಕಾಲದಲ್ಲಿ ಸಂತಾನ ಚಿಹ್ನೆಯನ್ನು ಹೊಂದುವವರಾಗಲಿರುವರು. ಕೆಳಗಿನ ತರಗತಿಯ ನೌಕರರ ಮೂಲಕ ಉಚ್ಚಸ್ಥಾನದ ನೌಕರರಿಗೆ ತೊಂದರೆಯಾಗುವುದುಂಟು.

ಧಾರ್ಮಿಕ ಕರ್ಮ ಪರೋಪಕಾರ, ಮಂಗಲ ಕಾರ್ಯಗಳಿಗಿರವ ಅವಕಾಶವು ದಶಮದ ಗುರುವಿನಿಂದ ಉಂಟಾಗಲಿರುತ್ತದೆ. ಈ ರಾಶಿಯ ತರುಣ ತರುಣಿಯರು ಪ್ರೇಮ ವಿಷಯ ವ್ಯವಹಾರಗಳಿಗೆ ತಲೆ ಹಾಕುವರು.

ಲೇಖಕ ಲೇಖಕಿಯರಿಗೆ ನಟರಿಗೆ ತಮ್ಮ ಉದ್ಯೋಗದಲ್ಲಿ ಕೀರ್ತಿಯನ್ನು ಗಳಿಸಬಹುದಾಗಿದೆ. ಮಧ್ಯಭಾಗದಲ್ಲಿ ಅಲ್ಪ ವಿಘ್ನ ಬಾಧೆಯು ಸಂಭವಿಸುವುದಾಗಿದೆ. ಇಷ್ಟಮಿತ್ರರೂ ಬಂಧುಬಾಂಧವರೂ ಈ ವರ್ಷ ಸರಿಯಾಗಿ ನಿಮ್ಮ ವಿಷಯದಲ್ಲಿ ವರ್ತಿಸಲಾರರು, ಬಂಧುಗಳಿಗೆ ತಮ್ಮ ಉಪದೇಶಗಳು ವಿಷಪ್ರಾಯವೆನಿಸುತ್ತವೆ. ಮೀನದ ರವಿಚಾರಕಾಲವು ಕೌಟುಂಬಿಕ ವಿಷಯದಲ್ಲಿ ಹಿತವಲ್ಲ. ಭೂಮಾಲಿಕರು ಕೃಷಿಸಂಪತ್ತನ್ನು ಹೆಚ್ಚಿಸುತ್ತಾರೆ. ಕುಟುಂಬದ ಕಲಹಗಳು ಮಾರ್ಚಿಯ ನಂತರ ತಲೆದೋರಲಿರುತ್ತವೆ. ಸ್ತ್ರೀಯರ ಆರೋಗ್ಯವು ಚೆನ್ನಾಗಿರುವುದಿಲ್ಲ. ವೈದ್ಯಕೀಯ ಮತ್ತು ವಕೀಲ ವೃತ್ತಿಯವರು ತುಂಬಾ ಅಭಿವೃದ್ಧಿಯನ್ನು ಹೊಂದುವರು. ಸಾಮುದಾಯಿಕ ರಾಜಕೀಯ ವಿಷಯಕ ಕಾರ್ಯರಂಗದಲ್ಲಿ ದಶಮದ ಗುರುವು ಒಳ್ಳೇ ಅಭಿರುಚಿಯನ್ನು ಮೇಧಾವಿಗಳಿಗೆ ಕೊಟ್ಟು ಜೀವನದಲ್ಲಿ ಉತ್ತಮ ಕೀರ್ತಿ ಪ್ರತಿಷ್ಠೆಗಿರುವ ಅವಕಾಶವನ್ನುಂಟುಮಾಡುವನು. ದಾಂಪತ್ಯಜೀವನದಲ್ಲಿ ಗುರುಶನಿಗಳ ಪರಸ್ಪರ ವೀಕ್ಷಣೆಯ ಮೂಲಕ ಕಠಿಣ ಪರಿಸ್ಥಿತಿ ಇದ್ದಿಯಾದರೂ ದೋಷವಾಗಲಾರದು.

ಕರ್ಕಾಟಕ: —

(ಡಾ, ಡೀ, ಡೂ, ಡೇ, ಡೋ, ಹಿ, ಹೂ, ಹೆ, ಹೊ)

ಎಂಟನೆ ಮನೆಯ ಗುರುವೆಂದು ನಿರಾಶೆಯುಳ್ಳವರಾಗಬೇಡಿರಿ. ನಿಮಗೆ ಸುಖಸಂತೋಷಗಳ ಪರಿಸ್ಥಿತಿಗಿರುವ ಅವಕಾಶವು ಮಾರ್ಚಿಯಿಂದ ಕಂಡುಬರುತ್ತಿರುವುದು. ದಿನೇ ದಿನೇ ಭಾಗ್ಯೋದಯವು ಸಂಭವಿಸುತ್ತಾ ಜೀವನದಲ್ಲಿ ಉತ್ತಮ ಸ್ಥಿತಿಯನ್ನು ಹೊಂದಲಿರುವ ಅನುಕೂಲ ಘಟನೆಗಳು ತೋರಿಬರುವವು. ಸಹೋದರರಿಂದ ಶಾಂತಿಯುಂಟಾಗಲಾರದು. ನವೀನ ಉದ್ಯಮಕ್ಕಿರುವ ಅವಕಾಶವು ಒಂಭತ್ತನೆ ಮನೆಯ ಗುರುಚಾರಕಾಲದಲ್ಲಿ ಉಂಟಾಗಲಿರುತ್ತದೆ. ಸಾಮುದಾಯಿಕ ನೆಲೆಯಿಂದ ಅಭಿವೃದ್ಧಿಯನ್ನು ಹೊಂದಲಿರುವ ಅವಕಾಶವು ಪುನರ್ವಸು ನಕ್ಷತ್ರದವರಿಗಿದೆ. ವಾಸಸ್ಥಾನದ ಬದಲಾವಣೆಗಿರುವ ಸಂಘಟನೆಯು ಕಂಡುಬರುವುದಾಗಿದೆ. ವಿದ್ಯಾರ್ಥಿ ಜೀವನದವರು ಪ್ರಗತಿಯನ್ನು ಹೊಂದಲಿರುತ್ತಾರೆ. ಕುಟುಂಬ ವಿಷಯದಲ್ಲಿ ತುಂಬಾ ಖರ್ಚಿನ ಪರಿಸ್ಥಿತಿಯು ಕಂಡುಬರುವುದಾಗಿದೆ. ನೌಕರರು ತಮ್ಮ ಕೆಲಸದಲ್ಲಿ ಸ್ಥಿರತೆಯನ್ನು

ಎಲ್ಲಾ ಕನ್ನಡಿಗರೂ ಓದಬೇಕಾದ ಪುಸ್ತಕಗಳು

ಟಿ. ಪಿ. ಕೈಲಾಸಂರವರ

ಬಂಡ್ವಾಳ್ವಿಲ್ಲದ ಬಡಾಯಿ	0	12	0
ತಾಳೀಕಟ್ಟೋಕ್ಕೂಲೀನೇ	1	4	0
ನಮ್ ಕಂಪೆನಿ	0	12	0
ನಮ್ ಬ್ರಾಹ್ಮಣ್ಕೆ	0	12	0
ನಮ್ ಕ್ಲಬ್ಬು	0	6	0
ವೈದ್ಯನ ವ್ಯಾಧಿ	0	6	0
ಗಂಡಸ್ಕತ್ರಿ	0	6	0
ತಾವರೆ ಕೆರೆ	0	8	0
ಸೀಕರ್ಣೆ ಸಾವಿತ್ರಿ	0	3	0
ಸತ್ತವನ ಸಂತಾಪ	0	12	0
ಅಮ್ಮಾವ್ರಗಂಡ	1	4	0
ಟೊಳ್ಳುಗಟ್ಟಿ	0	9	0
ಹೋಂ ರೂಲು	0	12	0
ಅನುಕೂಲಕ್ಕೊಬ್ಬಣ್ಣ	0	12	0
ಪೋಲೀಕಿಟ್ಟಿ	1	12	0
ಹುತ್ತದಲ್ಲಿ ಹುತ್ತ	2	0	0
ಸೂಳೆ	1	8	0
KARNA	1	12	0

ಅ. ನ. ಕೃಷ್ಣರಾಯರ

ಹೊಸಲುದಾಟಿದ ಹೆಣ್ಣು	2	15	0
ತಾಯಿಯ ಕರುಳು	4	12	0
ಮುಯ್ಯಿಗೆ ಮುಯ್ಯಿ	2	4	0
ಅಮರ ಅಗಸ್ಟ	2	0	0
ಸಾಹಿತ್ಯ ರತ್ನ	4	0	0
ಜೀವನ ಯಾತ್ರೆ	1	8	0
ಮಿಂಚು	1	8	0
ಕಿಡಿ	1	4	0
ಶಿಲ್ಪಿ	1	4	0
ಸ್ವರ್ಣ ಮೂರ್ತಿ	0	12	0
ಹಿರಣ್ಯಕಶಿಪು	0	12	0
ಗೋಮುಖವ್ಯಾಘ್ರ	0	8	0
ರಜಪೂತ ಲಕ್ಷ್ಮಿ	1	12	0
ಮದುವೆಯೋ ಮನೆ ಹಾಳೋ	1	8	0
ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ	1	8	0

ಚಿ. ಸದಾಶಿವಯ್ಯನವರ

ಸೌಭಾಗ್ಯ	(ನಾಟಕ)	0	12	0
ಮಕ್ಕಳೇ ದೇವರು	,,	0	4	0
ಸೊಂಪಿನ ಸಾಗರ	,,	0	8	0
ಭೀಮಸೇನ ಬೇಬಿ	,,	0	5	0
ಶಿವಾಜಿಯ ಬಾಲ್ಯ	,,	0	6	0
ಶಿವ ಮಂಗಳ	,,	0	8	0
ಜಯಶ್ರೀ	,,	1	4	0
ಶಾಂತಿ	,,	1	4	0
ರಹಸ್ಯ	,,	0	12	0
ಸಿಂಹ	,,	0	8	0

ದೇವುಡುರವರ

ಮಯೂರ	(ನಾಟಕ)	1	4	0
ಅಂತರಂಗ	(ಕಾದಂಬರಿ)	2	4	0
ಕಳ್ಳರ ಕೂಟ	,,	0	13	0
ಸೋಲೋ ಗೆಲವೋ		1	8	0

ಆನಂದ್ ಬ್ರದರ್ಸ್ ಪಬ್ಲಿಷರ್ಸ್, ಕೆಂಪೇಗೌಡ ರಸ್ತೆ, ಬೆಂಗಳೂರು ೨.

ಹೊಂದುತ್ತಾರೆ. ಉದ್ಯೋಗ ದೃಷ್ಟಿಯಿಂದ ಈ ವರುಷದ ಗ್ರಹಮಾನ ದೋಷದಾಯಕವಾಗಿರುವುದಿಲ್ಲ. ಅಧಿಕಾರಿಗಳು ಉಚ್ಚಸ್ಥಾನವನ್ನು ಹೊಂದಲು ಶಕ್ತರಾಗುತ್ತಾರೆ.

ಕಾರಖಾನೆಯ ಮಾಲಿಕರು ಉದ್ಯೋಗ ಸಂಸ್ಥೆಯವರು ಅಭಿವೃದ್ಧಿಯಿಂದ ಕೂಡಿದವರಾಗುತ್ತಾರೆ. ಜುಲಾಯಿ, ಅಗೋಸ್ಟ ತಿಂಗಳುಗಳಲ್ಲಿ ಖರ್ಚು ಅಧಿಕವಾಗಿ ಕಾಣಬರುವುದಾಗಿದೆ, ಪುಣ್ಯಕೆಲಸಗಳು ನಡೆಯಲಿರುತ್ತವೆ. ನಿಮಗೆ ಸಾಂಪತ್ತಿಕ ವಿಷಯದಿಂದ ಮಾರ್ಚಿಯ ನಂತರ ಉನ್ನತಿಯು ಕಾಣುವುದಾಗಿದೆ.

ಲೇಖಕರೂ ಕವಿಗಳೂ ಕವಯಿತ್ರಿಗಳೂ ಶೋಧನಾತ್ಮಕ ಹಾಗೂ ಉತ್ತಮ ಬರೆಹವನ್ನು ಹೊರಪಡಿಸುವರು. ಆರೋಗ್ಯ ವಿಷಯದಲ್ಲಿ ಜೂನ್ ತಿಂಗಳು ದೋಷದಾಯಕವಾಗಿರುತ್ತದೆ. ಹೊರಊರಿನ ವ್ಯಾಪಾರ ವಹಿವಾಟುಗಳಿಂದ ಅಭಿವೃದ್ಧಿಯು ಆಶ್ಲೇಷಾ ನಕ್ಷತ್ರದವರಿಗಿರುತ್ತದೆ. ವಿವಾಹ ವ್ಯವಹಾರಗಳಿಗೆ ದಶಂಬರ, ಜುಲಾಯಿ ತಿಂಗಳುಗಳು ಪ್ರಗತಿಯವುಗಳು. ಮಿತ್ರರಿಗಾಗಿ ತುಂಬಾ ಖರ್ಚನ್ನು ಮಾಡುವ ಪರಿಸ್ಥಿತಿಯು ಪುಷ್ಯಾ ನಕ್ಷತ್ರದವರಿಗೆ ಜೂನ್ ಜುಲಾಯಿ ತಿಂಗಳ ವರೆಗೆ ಮನಶ್ಶಾಂತಿಯು ಉಂಟಾಗಲಾರದು. ಮುದ್ರಣಾಲಯದ ವ್ಯವಹಾರಿಗಳಿಗೆ ಅಂತ್ಯಭಾಗವು ಲಾಭ ಮತ್ತು ಯಶೋದಾಯಕವಾಗಿರುತ್ತದೆ. ಮಹಿಳೆಯರೇ ನೀವು ಸುಖ ಸೌಭಾಗ್ಯಾಭಿವೃದ್ಧಿಯ ಸಂಪತ್ತನ್ನು ಪಡೆಯುವಿರಿ. ರಿಕಾರ್ಡು ಸಂಬಂಧ ವ್ಯವಹಾರಗಳು ಶುಭಪರಿಣಾಮವನ್ನುಂಟುಮಾಡುತ್ತವೆ. ಕನ್ನಿಕೆಯರಿಂದ ದಾಂಪತ್ಯಜೀವನಕ್ಕಿರುವ ಅವಕಾಶ ನವಮದ ಗುರುಚಾರಕಾಲದಲ್ಲಿ ಸಂಭವಿಸುವುದಾಗಿದೆ. ಶತ್ರುಗಳು ನಿಮ್ಮನ್ನು ವಿರೋಧಿಸತೊಡಗಿ ವರ್ಷಾಂತ್ಯದಲ್ಲಿ ಕಠಿಣ ಪರಿಸ್ಥಿತಿಯನ್ನು ಹೊಂದಲಿರುತ್ತಾರೆ. ವಾಗ್ವಾದಗಳು ಹೆಚ್ಚಾಗದಂತೆ ಜನವರಿ ಫೆಬ್ರುವರಿಗಳಲ್ಲಿ ಜಾಗ್ರತೆಬೇಕು. ದಾಂಪತ್ಯ ಜೀವನದವರಿಗೆ ಶನಿ ಗುರುಗಳ ಪರಸ್ಪರ ವೀಕ್ಷಣೆಯು ಆರೋಗ್ಯ ವಿಷಯದಲ್ಲಿ ಚೆನ್ನಾಗಿರುವುದಿಲ್ಲ. ಪತ್ರವ್ಯವಹಾರದಿಂದ ಎಲ್ಲಾ ಕೆಲಸಗಳೂ ಸಭಗೊಳ್ಳುತ್ತವೆ. ಮದ್ದಿನ ವ್ಯಾಪಾರಿಗಳು ತುಂಬಾ ಪ್ರಗತಿಯನ್ನು ವರ್ಷಾಂತ್ಯದಲ್ಲಿ ಹೊಂದಲಿರುತ್ತಾರೆ. ಈ ವರ್ಷ ಅಂತ್ಯಕಾಲವು ನವೀನ ಘಟನೆಯದಿದ್ದು ಜೀವನದಲ್ಲಿ ಸುಖಾನಂದಗಳಿಗಿರುವ ಶುಭಲಕ್ಷಣಗಳಿಂದ ಕೂಡಿದ್ದಾಗುವುದು.

ಸಿಂಹ:—

(ಮ, ಮಾ, ಮಿ, ಮೇ, ಮೊ, ಟ, ಟಾ, ಟೆ, ಡೆ)

ನಿಮ್ಮ ಜೀವನದಲ್ಲಿ ಈ ವರ್ಷವು ಹೊಸ ಬಗೆಯ ಅನೇಕ ತರಹದ ವ್ಯವಹಾರಗಳಿಂದ ಕೂಡಿದ್ದಾಗಿದ್ದು ವಿರೋಧಿಗಳ ಜೊತೆಯಲ್ಲಿ ಧೈರ್ಯದಿಂದ ಎದೆಗೊಟ್ಟು ಜೀವನದ ಸುಗಮ ಮಾರ್ಗವನ್ನು ಶೋಧಿಸಬೇಕಾದುದು. ಕುಟುಂಬಿಯರೇ ವಿರೋಧಿಗಳಾಗಿ ಕಾಣಬರುವರು. ಹಿರಿಯರಿಂದ ಸುಖವು ಕಡಮೆಯಾಗಿರುವುದು. ಸಿಂಹವು ನಿಮ್ಮ ರಾಶಿಯಾಗಿದ್ದು ಸಿಂಹದ ವರ್ತನೆಯೇ ನಿಮ್ಮಲ್ಲಿ ತೋರಲಿದೆ. ಸ್ವಪರಾಕ್ರಮದಿಂದಲೇ ಮುಂದರಿದು ಶತ್ರುಗಳನ್ನು ಅಂಕೆಗೊಳಪಡಿಸಲಿರುವಿರಿ. ಅಂತಹ ಕಾಲವು ಸಪ್ಟಂಬರದ ನಂತರದ್ದಾಗಿರುವುದು. ಅಷ್ಟಮದ ಗುರು ಚಾರಕಾಲದಲ್ಲಿ ರಿಕಾರ್ಡು ವ್ಯವಹಾರಗಳೇ ಕಾಣಬರುವವು. ರಿಕಾರ್ಡು ವಿಷಯಗಳಲ್ಲಿ ನಿಮಗೆ ಆದಿಭಾಗವು ನೆಮ್ಮದಿಯಿಂದ ಕೂಡಿದ್ದಾಗಿರುವುದಿಲ್ಲ. ಆರ್ಥಿಕ ವಿಷಯದಲ್ಲಿ ತುಂಬಾ ಕಠಿಣ ಪ್ರಸಂಗಗಳು ತೋರಿಬರುತ್ತಲಿದ್ದು ಅವರಿಂದ ಪಾರಾಗಲಿರುವಿರಿ. ಮಾರ್ಚಿಯ ವರೆಗಣ ಕಾಲವು ಸಂಪತ್ತಿನ ವಿಷಯದಲ್ಲಿ ಸಮಾಧಾನಕರವಲ್ಲ. ವಾಸಸ್ಥಾನದ ಬದಲಾವಣೆಗಿರುವ ಆಸಕ್ತಿಯು ತೋರುವುದಾಗಿದೆ. ಆರೋಗ್ಯವಿಷಯದಲ್ಲಿ ಎಪ್ರೀಲ್ ಮೇ ತಿಂಗಳುಗಳು ಮತ್ತು ಜನವರಿಯೂ ಸಮಾಧಾನಕರವಲ್ಲ. ಹೀಗಿದ್ದರೂ ಅವುಗಳಿಂದ ಆಕಸ್ಮಿಕ ರೀತಿಯಿಂದ ಪಾರಾಗಲಿರುವಿರಿ. ಮಾರ್ಚ, ಫೆಬ್ರವರಿ ಅಕ್ಟೋಬರ, ನವಂಬರ ತಿಂಗಳುಗಳು ವ್ಯಾಪಾರ ಉದ್ಯೋಗ ವಿಷಯಗಳಲ್ಲಿ ಪ್ರಗತಿಕರವಾಗಿರುವುದು.

ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ವರುಷ ಪ್ರಗತಿಯು ಎಲ್ಲಾ ಬಗೆಯಿಂದಲೂ ಸಿದ್ಧಿಸುವುದಾಗಿದೆ. ಎರಡನೆ ಮನೆಯ ಶನಿಯು ವಿವಾಹ ಸಂಪರ್ಕವನ್ನು ತರುಣ ತರುಣಿಯರಿಗುಂಟುಮಾಡಲು ಶಕ್ತನಾಗಿರುತ್ತಾನೆ. ವರ್ಷಾಂತ್ಯಕಾಲವು ಸಂತಾನ ಸುಖವನ್ನುಂಟುಮಾಡುವುದಾಗಿರುತ್ತದೆ. ಏಳೂವರೆ ಶನಿರಾಯನ ಕಾಟದಿಂದ ಹುಬ್ಬಾ ಮತ್ತು ಉತ್ತರಾ ನಕ್ಷತ್ರದವರಿಗೆ ಕೌಟುಂಬಿಕ ಸುಖ ದೋಷವು ಕಾಣುವುದಾದರೂ ವರ್ಷಾಂತ್ಯದಲ್ಲಿ ಎಲ್ಲಾ ರೀತಿಯಿಂದಲೂ ಅಭ್ಯುದಯಕ್ಕಿರುವ ಅವಕಾಶವು ಕಾಣವುದು. ವೈದ್ಯಕೀಯ ವೃತ್ತಿಯವರಿಗೆ ಈ ವರ್ಷವು ತಮ್ಮ ವೃತ್ತಿಯಲ್ಲಿ ಉತ್ತಮ ಪ್ರಗತಿಯನ್ನು ಕೊಡುವುದಾಗಿದೆ. ಸರಕಾರೀ ನೌಕರರು ಹುದ್ದೆಯಲ್ಲಿ ಉನ್ನತಿಯು ಅಧಿಕಾರದ ಸ್ಥಾನ ಮಾನಗಳನ್ನು ಹೊಂದಲಿರುತ್ತಾರೆ. ವಕೀಲಿ ವೃತ್ತಿಯವರು ಅಭಿವೃದ್ಧಿಯೋಗದಿಂದ ಕೂಡಿದವರಾಗಿ ಕಂಡುಬರುತ್ತಿರುವರು. ಸಹೋದರ ಸಹೋದರಿಯರಿಗೆ ಉತ್ತಮ ಭಾಗ್ಯೋದಯ ಕಾಲವಾಗಿರುವುದು. ರಾಜ್ಯದ ಸೇವಕರು ಉತ್ತಮ ಯಶಸ್ಸನ್ನು ವರ್ಷಾಂತ್ಯದಲ್ಲಿ ಗಳಿಸುವವರಾಗುತ್ತಾರೆ. ಜುಲಾಯಿಯ ನಂತರ ಮಹತ್ತರ ಸುಖ ಸಂಪತ್ತಿನ ಉತ್ತಮ ಸ್ಥಿತಿ ಘಟನೆಯ ಯೋಗವು ಕಾಣಬರುವುದು. ಜನಾಪವಾದವು ನಿಷ್ಕಾರಣವಾಗಿ ಉಂಟಾಗುತ್ತಿದೆ. ಮಿತ್ರರೂ ಕೂಡ ತಪ್ಪು ತಿಳುವಳಿಕೆಯಿಂದ ಕೂಡಿದವರಾಗುತ್ತಾರೆ. ೧೯೬೯ರ ಫೆಬ್ರವರಿಯ

ನಂತರ ನಿಮಗೆ ಎಲ್ಲಾ ಬಗೆಯಿಂದಲೂ ಶಾಂತಿಯುಂಟಾಗುವು ದಾಗಿರುತ್ತದೆ. ಲೇಖನಗಾರರು ಮತ್ತು ಅಧ್ಯಾಪಕ ವೃತ್ತಿ ಯವರು ಉತ್ತಮ ಸ್ಥಿತಿಯನ್ನು ಪಡೆಯಲಿರುವರು. ಮಹಿಳೆ ಯರಿಗೆ ದಾಂಪತ್ಯಜೀವನದಲ್ಲಿ ಅನುಕೂಲತೆಯೂ ಗೃಹ ಸಂಪತ್ತಿನ ಅಧಿಕರಿಸುವಿಕೆಯೂ ಕುಟುಂಬದಲ್ಲಿ ಶುಭಕಾರ್ಯ ಗಳೂ ಸಂಭವಿಸಿ ಈ ವರ್ಷ ಕಲ್ಯಾಣಮಯವಾಗಿಯೇ ಕಂಡು ಬರುವುದಾಗಿದೆ. ಗೃಹ ಬದಲಾವಣೆಯನ್ನು ಮಾಡಲಿರು ವಿರಿ. ನಿವೃತ್ತಿಯವರಿಗೆ ದಶಂಬರ, ಜನವರಿ, ಸಪ್ಟಂಬರ ಆಗೋಸ್ಟು ತಿಂಗಳುಗಳು ಸುಖಕರಗಳು.

ಕನ್ಯಾ—

(ಪ, ಪಾ, ಪಿ, ಪೂ, ಪೆ, ಪೊ, ಷ, ಟೌ, ಠ)

ಮಾನಸಿಕ ದುರ್ಬಲತೆ, ನಿರರ್ಥಕ ಭಯ, ಅಪವಾದ ಗಳು ನಿಮ್ಮನ್ನು ಆವರಿಸಿಕೊಂಡಿರುತ್ತವೆ. ಇದರಿಂದಾಗಿ ಪದೇ ಪದೇ ತೊಳಲುತ್ತಿರುವಿರಿ. ಕೆಲಸಗಳೆಲ್ಲಾ ನಿಮ್ಮ ಮನ ಸ್ಸಿನಂತೆಯೇ ನಡೆಯುತ್ತಿರುವವು. ಆದರೆ ಷಷ್ಠ ಗುರು ಚಾರ ಕಾಲದಲ್ಲಿ ನಿಮಗೆ ಅಶಾಂತಿ ತಪ್ಪಿದುದಲ್ಲ. ಮುಂದೆ ನೀವು ಎಲ್ಲಾ ಬಗೆಯ ಸುಧಾರಣೆಯ ವ್ಯವಹಾರಯುಕ್ತರಾಗುವಿರಿ. ಕುಟುಂಬ ಸಂಬಂಧವಾದ ವಿಚಾರಗಳೇ ನಿಮ್ಮ ತಲೆಯನ್ನು ಕೆಡಿಸುವವು. ಬಗೆಹರಿಯದ ಕಷ್ಟ ಸಮಸ್ಯೆಗಳು ಕಂಡು ಬರುವವಾದರೂ ಆಕಸ್ಮಿಕ ರೀತಿಯಿಂದ ಅವುಗಳೆಲ್ಲಾ ಬಗೆ ಹರಿಯುತ್ತಿವೆ. ಆರ್ಥಿಕ ಸಂಪತ್ತಿನಿಂದ ಅಭಿವೃದ್ಧಿಯು ಜನವರಿಯ ನಂತರ ಕಂಡುಬರುವುದಾಗಿದೆ. ಆರೋಗ್ಯದ ನೆಲೆಯಿಂದ ಅಭಿವೃದ್ಧಿಯು ಫೆಬ್ರವರಿಯ ನಂತರ ಕಾಣುವು ದಾಗಿದೆ. ತುಂಬಾ ಶ್ರಮವು ನಿತ್ಯಜೀವನದಲ್ಲಿ ಕಾಣಬರುತಿ ದ್ದರೂ ಅಭಿವೃದ್ಧಿಯ ಪರಿಸ್ಥಿತಿಯು ನಿಮಗೊದಗಲಿರುವುದು. ನಿಮ್ಮ ಕರ್ಮಸ್ಥಾನವು ಶುದ್ಧವಾಗಿರುತ್ತಿರುವುದರಿಂದ ನಿಷ್ಕಲ್ಮಶ ವ್ಯವಹಾರಗಳೇ ನಡೆಯುವವು. ೧೯೫೦-ದಶಂಬರದಿಂದ ೧೯೫೧ನೇ ಜೂನ್ ವರೆಗಣ ಕಾಲವು ಸಮಾಧಾನಕರ ವಾಗಿಲ್ಲ. ಅಧಿಕಾರ ಸತ್ತೆಯಲ್ಲಿ ತಾಕಲಾಟ ವಿಘ್ನ ಭಯ ಗಳುಂಟಾಗುತ್ತಿವೆಯಾದರೂ ಯಾವ ತರಹದ ಅನಿಷ್ಟಪ್ರಾಪ್ತಿ ಯೂ ಉಂಟಾಗಲಾರದು. ಉಗ್ರತರಹದ ಸ್ಪರ್ಧೆ ಪಂದ್ಯಾಟ ಗಳಲ್ಲಿ ಭಾಗವನ್ನು ವಹಿಸಬೇಕಾಗುತ್ತದೆ. ಪ್ರತಿಸ್ಪರ್ಧಿಗಳನ್ನು ಗೆಲ್ಲುವ ಶಕ್ತಿಯೇ ನಿಮ್ಮಲ್ಲಿರುತ್ತದೆ. ಕೋರ್ಟು ಕಾರ್ಯ ಗಳಲ್ಲಿ ಜಯಲಾಭವೇ ಉಂಟಾಗಲಿರುತ್ತದೆ. ಮಹಿಳೆಯರ ಆರೋಗ್ಯವು ಉತ್ತಮವಾಗಿರುವುದಿಲ್ಲ. ಉದರ ಸಂಬಂಧ ವಾದ ದೋಷಗಳುಂಟಾಗದಂತೆ ಜಾಗರೂಕರಾಗಿರಬೇಕು. ಕರ್ಮಶಾಲೆಯ ಅಧಿಕಾರಿಗಳು ಅಭಿವೃದ್ಧಿಯಿಂದ ಕೂಡಿದವ ರಾಗುತ್ತಾರೆ. ವಾಣಿಜ್ಯ ವ್ಯವಹಾರಿಗಳು ವರ್ಷಾಂತ್ಯದಲ್ಲಿ ಉನ್ನತಿಯನ್ನು ಹೊಂದಲಿರುತ್ತಾರೆ. ವ್ರಣವಿಕಾರಗಳುಂ ಟಾಗದಂತೆ ಜಾಗರೂಕರಾಗಿರಬೇಕು. ಪತ್ರಿಕಾ ವ್ಯವಹಾರ ದವರು ಆದಿಭಾಗದಲ್ಲಿ ಶಾಂತಿಯಿಂದ ಕೂಡಿದವರಾಗುವುದಿಲ್ಲ. ಲೇಖಕ ಲೇಖಕಿಯರಿಗೆ ಶಾಂತಿಯು ತಪ್ಪಿರುತ್ತದೆ. ಸಪ್ತ ಮದ ಗುರುರಾಯನು ಮಾರ್ಚಿಯ ನಂತರ ಕಲ್ಪನಾಶಕ್ತಿ ಹುರುಪುಗಳನ್ನು ನೀಡುವನು. ಧಾರ್ಮಿಕ ವ್ಯವಹಾರ, ಪುಣ್ಯಕರ್ಮಾಸಕ್ತಿಗಳು ಉತ್ತರಾ ನಕ್ಷತ್ರದವರಿಗೆ ಉಂಟಾಗ ಲಿರುತ್ತವೆ. ವಿವಾಹಾದಿಗಳು ಕುಟುಂಬದಲ್ಲಿ ನಡೆಯಲಿರು ತ್ತವೆ. ಹಸ್ತಾ ನಕ್ಷತ್ರದ ಡಾಕ್ಟರರು ಉತ್ತಮವಾದ ಪ್ರಗತಿ ಯನ್ನು ಸಾಧಿಸಲಿರುತ್ತಾರೆ. ಪ್ರಯಾಣವು ತುಂಬಾ ಕಾಣು ವುದು. ಗೃಹಸುಖ ವಾಹನ ಸುಖಗಳಿಗಾಗಿ ಧನವ್ಯಯವು ಉಂಟಾಗಲಿರುತ್ತದೆ. ಅಧಿಕಾರಿಗಳಿಗೆ ಕೈಕೆಳಗಿನ ನೌಕರ ರಿಂದ ಕಷ್ಟ ಪರಿಸ್ಥಿತಿಯು ಬರಲಿರುತ್ತದೆ. ನೀಚ ಸಂಸರ್ಗದ ಮೂಲಕ ಹಿರಿಯ ಸಹೋದರರಿಂದ ಅಶಾಂತಿಯುಂಟಾಗು ತ್ತಿದೆ. ಹಲವಾರು ಕಷ್ಟ ಪರಿಸ್ಥಿತಿಗಳು ಜನಿಸಿರುವವು. ವಿವಾಹ ವ್ಯವಹಾರದ ಉತ್ತರಾನಕ್ಷತ್ರದವರು ಅಭಿವೃದ್ಧಿ ಯಿಂದ ಕೂಡಿದವರಾಗುವರು. ತರುಣ ತರುಣಿಯರು ನೂತನ ಉದ್ಯೋಗವನ್ನು ಸಾಧಿಸುವ ಬಗ್ಗೆ ಮತ್ತು ನವೀನ ಕರ್ಮಾರಂಭವನ್ನು ಸಾಧಿಸುವ ವಿಚಾರದಲ್ಲಿ ಷಷ್ಠದ ಗುರು ವೇ ಸಹಾಯಕನಾಗುವನು. ಜಮೀನುದಾರರಿಗೆ ಈ ವರ್ಷಾಂ ತ್ಯವು ಭೂಸಂಪತ್ತಿನ ಅಭಿವೃದ್ಧಿಯನ್ನು ವರ್ಷಾಂತ್ಯದಲ್ಲಿ ಕೊಡುವುದರಲ್ಲಿ ಸಂಶಯವಿಲ್ಲ.

ತುಲಾ:—

(ರಾ, ರಿ, ರೂ, ರೇ, ರೊ, ತ, ತಿ, ತೂ, ತೇ)

ಎಷ್ಟೋ ವಿಪತ್ತುಗಳೂ ಕಷ್ಟ ಪರಂಪರೆಗಳೂ ಉಂಟಾ ಗುತ್ತಿವೆಯಾದರೂ ಉತ್ತಮ ಕರ್ಮಾಸಕ್ತಿ ವಿವೇಚನಾಶಕ್ತಿ ಸಹನೆಯ ಮೂಲಕ ಎಲ್ಲವನ್ನೂ ತಡೆಯಿಕ್ಕುವ ಎದೆಗಾರಿಕೆ ನಿಮ್ಮಲ್ಲಿರುವುದರಿಂದ ಎಲ್ಲಾ ಕೆಲಸಗಳೂ ಜಯಕಾರಿಗಳಾ ಗಿಯೇ ಪರಿಣಮಿಸುವವು. ಈ ವರ್ಷದ ಆರಂಭ ಭಾಗದಲ್ಲಿ ತುಂಬಾ ಧನವ್ಯಯವು ಮಂಗಳಕಾರ್ಯಗಳಿಗಾಗಿ ಸಂಭವಿಸು ತಿದ್ದು ಕುಟುಂಬ ಮತ್ತು ಕರ್ಮಸ್ಥಾನವು ಯಜ್ಞಶಾಲೆಯಂತೆ ಕಾಣಬರುವುದು. ಗೃಹನಿವಾಸ ಸಂಬಂಧವಾಗಿ ಧನವ್ಯಯ ವನ್ನು ಮಾಡಲಿರುವಿರಿ. ವ್ಯಾಪಾರ, ಉದ್ಯೋಗವೇ ಮೊದ ಲಾದ ಧಂದೆಗಳಲ್ಲಿ ಹಿಂದೆಯೇ ಕುಸಿದವರಿದ್ದು ಅವುಗಳನ್ನು ಪ್ರಗತಿಗೆ ತರಲಿರುವ ಕರ್ಮಶ್ರದ್ಧೆಯಿಂದ ಕೂಡಿದವರಾಗು ವಿರಿ. ಉತ್ತಮ ಜನರ ಸಂಸರ್ಗವೂ ಪುಣ್ಯಕಾರ್ಯಗಳೂ ನೆರವೇರಲಿರುತ್ತವೆ. ಪಾಲುಗಾರರೊಳಗೆ ಕಚ್ಚಾಟವೂ ವಿರೋಧ ಪರಿಸ್ಥಿತಿಯೂ ಉಂಟಾಗಲಿರುವುದು. ದಶಂಬರ, ಜನವರಿ ತಿಂಗಳುಗಳಲ್ಲಿ ಶುಭ ಕೆಲಸ, ನೂತನ ವಾಸಸ್ಥಾನ, ನವೀನ ಕರ್ಮ ಸಾಧನೆಗಳಿಗಿರುವ ಅವಕಾಶವು ಕಂಡು ಬರು

ತ್ತದೆ. ಮಾರ್ಚ, ಎಪ್ರೀಲ್ ತಿಂಗಳುಗಳಲ್ಲಿ ಕಲ್ಯಾಣ ಕಾರ್ಯಗಳು ತರುಣ ತರುಣಿಯರಿಗೆ ಏರ್ಪಡುತ್ತವೆ. ಈ ವರ್ಷದ ಆದಿಯ ಅರ್ಧಭಾಗದಲ್ಲಿ ಉಡುಗೆ ತೊಡಿಗೆ, ರತ್ನ, ಚಿನ್ನಾಭರಣಗಳಿಗಾಗಿ ಧನವ್ಯಯಾವಕಾಶವು ಸಿದ್ಧಿಸುತ್ತದೆ. ಸ್ವಾತಿ ನಕ್ಷತ್ರದವರ ಜೀವನದಲ್ಲಿ ಇದೊಂದು ನವಯುಗ ಕಾಲವಾಗಿರುತ್ತಿದ್ದು ಜೀವನದಲ್ಲಿ ಪ್ರಭಾತೋದಯವನ್ನು ಕಾಣುವರು. ಆರ್ಥಿಕದೃಷ್ಟಿಯಿಂದ ಅಂತ್ಯಭಾಗದಲ್ಲಿ ಅಭಿವೃದ್ಧಿಯು ಕಂಡುಬರುವುದಾಗಿದೆ. ನೌಕರರ ಸುಖವು ಕಡಮೆ. ಅವರಿಗಾಗಿ ಧನವ್ಯಯ ಪ್ರಸಂಗಗಳೇ ಅಧಿಕ. ಇಷ್ಟಮಿತ್ರರ ಸಂಸರ್ಗವು ಉಂಟಾಗಲಿರುತ್ತದೆ. ಏಳೂವರೆ ಶನಿರಾಯನೆಂದು ಉದ್ವಿಗ್ನಾವಸ್ಥೆಯು ನಿಮಗೆ ಬೇಡ. ಈ ಏಳೂವರೆ ಶನಿ ಕಾಲವು ನಿಮ್ಮ ಇಷ್ಟಸಿದ್ಧಿಯದಾಗಿರುವುದು. ಚಿತ್ರಾ, ಸ್ವಾತಿ ನಕ್ಷತ್ರದವರಿಗೆ ಮಾಂಗಲ್ಯ ಕರ್ಮ ಘಟನೆಯೇ ಆದೀಗಣ ಶನಿಚಾರದಲ್ಲಿ ಕಾಣುವುದಾಗಿದೆ.

ಸ್ತ್ರೀಯರಿಗೆ ಐದನೆ ಮನೆಯ ಗುರುವು ಸಂತಾನಸುಖವನ್ನು ಹೆಚ್ಚಿಸುತ್ತಾನೆ. ದೇಹ ಸುಖ ವಿಷಯದಲ್ಲಿ ಜಾಗರೂಕತೆಯನ್ನು ವಹಿಸಿದವರಾಗಿರುವುದು ಮುಖ್ಯ. ಉಷ್ಣ ಮತ್ತು ವಾತವಿಕಾರಗಳು ಅಲ್ಪ ಸ್ವಲ್ಪವಾಗಿ ಕಾಣಬರುತ್ತವೆ. ಕಾರಖಾನೆ, ವಿಮಾ ಸಂಸ್ಥೆಯವರು ನವೀನತೆಯನ್ನೂ ಅಭಿವೃದ್ಧಿಯನ್ನೂ ಸಾಧಿಸಲಿರುವರು. ವ್ಯಾಪಾರ ವಹಿವಾಟುಗಾರರು ಸಾಲಗಾರಿಕೆಯ ವಿಷಯದಲ್ಲಿ ಜಾಗರೂಕರೂಕತೆಯಿಂದ ಕೂಡಿದವರಾಗಿದ್ದಷ್ಟು ಸಾಕೆನಿಸುವುದಿಲ್ಲ. ಸಾದ್ದು ವಿದೇಶೀಯ ವಸ್ತುಸಂಬಂಧ ವಹಿವಾಟುಗಳ ಮೂಲಕ ಧನಾಭಿವೃದ್ಧಿಯೇ ಉಂಟಾಗಲಿರುತ್ತದೆ. ಲೇಖಕ ಲೇಖಕಿಯರಿಗೆ ವರ್ಷಾಂತ್ಯ ಭಾಗವು ಉನ್ನತಿಯನ್ನು ಕೊಡುವುದಾಗಿರುತ್ತದೆ. ಕೋರ್ಟುಸಂಬಂಧ ವಹಿವಾಟುಗಳಲ್ಲಿ ಜಯಲಾಭವೇ ಸಿದ್ಧಿಸುವುದು. ಮೇ, ಜೂನ್ ತಿಂಗಳುಗಳು ವಿಶೇಷ ಘಟನೆಯವುಗಳಾಗಿರುತ್ತವೆ. ತರುಣರಿಗೆ ಮಾರ್ಚಿಯ ನಂತರ ಉದ್ಯೋಗ ವಿಷಯದಲ್ಲಿ ಉತ್ತಮವು. ಈ ವರ್ಷವು ತುಂಬಾ ಜವಾಬ್ದಾರಿಕೆಯುಳ್ಳದಾಗಿರುತ್ತಿದ್ದು ವರ್ಷಾದಿ ಭಾಗದಲ್ಲಿ ಕಷ್ಟವೆಂದು ತೋರಿಬರುತ್ತಿರುವ ಕೆಲಸಗಳೆಲ್ಲಾ ಷಷ್ಠದ ಗುರುಚಾರ ಕಾಲದಲ್ಲಿ ಸುಖವಾಗಿ ಸುಗಮವೆನಿಸಿ ಇಷ್ಟ ಕಲ್ಯಾಣ ಸಂಪತ್ತಿಯನ್ನು ಹೊಂದುವವರಾಗುವಿರಿ.

ವೃಶ್ಚಿಕ:—

(ನು, ನೂ, ನಿ, ನೇ, ನೋ, ತೋ, ಯ, ಯಿ, ಯು)

ಮೋಸ, ಅವಿಶ್ವಾಸ, ವಿಶ್ವಾಸಘಾತ, ಸೇಡು, ಪರನಿಂದೆ, ಪ್ರತಿಸ್ಪರ್ಧೆಗಳ ವಿಷಯದಲ್ಲೇ ಮಗ್ನರಾಗಿರುತ್ತಿದ್ದು ಈ ವರ್ಷ ಇದರಿಂದಲೇ ಕಾಲಹರಣ ಗೈಯುವ ಸಂಭವವಿರುತ್ತದೆ. ನಿಮ್ಮ ಪರಿಸ್ಥಿತಿ ವಿಚಿತ್ರಮಯವಾಗಿ ಕಾಣಬರುವುದೆಂಬುದರಲ್ಲಿ ಸಂದೇಹವಿಲ್ಲ. ನೀವು ಯಾರೊಡನೆ ವಿಶ್ವಾಸ ಮೈತ್ರಿಗಳನ್ನು ಸಾಧಿಸಿರುವಿರೋ ಅವರೇ ನಿಮಗೆ ಕೈಗೊಡುವರು. "ಬೇಲಿಯೇ ಎದ್ದು ಹೊಲ ಮೇದಂತೆ" ಎಂಬ ಪರಿಸ್ಥಿತಿಯು ನಿಮ್ಮದು. ಸತ್ಯ-ಧರ್ಮ-ನ್ಯಾಯನಿಷ್ಠೆಗಳಿಂದಲೇ ನಿಮಗೆ ಜಯವೆಂಬುದು ಸಿದ್ಧ. ಈ ಕಾರಣದಿಂದ ಸತ್ಯ-ನ್ಯಾಯ ಮಾರ್ಗವನ್ನು ಬಿಡಬೇಡಿರಿ. ಆರ್ಥಿಕ ವಿಷಯದಲ್ಲಿ ತುಂಬಾ ಸ್ಥಿತ್ಯಂತರಗಳು ಕಾಣಬರುವ ನೆಲೆ ನಿಮ್ಮದು. ಪಂಚಮದ ಗುರುವಿಗೆ ಶನಿಯು ಕೇಂದ್ರಯೋಗವು ಸಂಭವಿಸುತ್ತಿರುವುದರಿಂದ ಮಾನಸಿಕ ಶಾಂತಿಗೆ ಅವಕಾಶ ಕಡಮೆ. ಪ್ರಿಯ ಜನರ ಅಗಲುವಿಕೆಯಿಂದ ಮನಸ್ಸು ವ್ಯಾಕುಲವಾಗಿರುವುದು. ಗೃಹ ಪರಿವರ್ತನೆಯನ್ನು ಮಾಡಲಿರುವ ವಿಚಾರಾಸಕ್ತಿಯಿಂದ ಕೂಡಿರುವಿರಿ. ಭೂಸಂಪತ್ತುಗಳಿಗಾಗಿ ಧನವ್ಯಯವು ಕಂಡುಬರುವುದು. ಪುಣ್ಯಕಾರ್ಯ, ಧರ್ಮಶ್ರದ್ಧೆ, ದಾನಕಾರ್ಯಗಳು, ಅನುರಾಧಾ ನಕ್ಷತ್ರದವರಿಗೆ ಅಧಿಕವಾಗಿರುತ್ತವೆ. ಕುಟುಂಬಾಭಿವೃದ್ಧಿಯೇ ಚತುರ್ಥ ಪಂಚಮ ಗುರುಚಾರಕಾಲದಲ್ಲಿ ಕಾಣಬರುವುದು. ಏಕಾದಶದ ಕುಜನು ಸಹೋದರರ ಉನ್ನತಿಗೆ ಸಹಾಯಕನಾಗುತ್ತಾನೆ. ಗೃಹಿಣಿಯ ಆರೋಗ್ಯಸುಖವು ವಿಶಾಖಾನಕ್ಷತ್ರದವರಿಗೆ ಅಲ್ಪ. ಹಿರಿಯರ ಅಗಲುವಿಕೆಯು ಕಂಡುಬರುವದಾಗಿದೆ. ವಿವಾಹಾದಿ ಶುಭ ಕಾರ್ಯಗಳು ಜ್ಯೇಷ್ಠಾನಕ್ಷತ್ರದವರಿಂದ ಕುಟುಂಬದಲ್ಲುಂಟಾಗಲಿರುತ್ತವೆ. ವಾಹನ ಸುಖ ಕಡಮೆ. ವಾಹನಸುಖಕ್ಕಾಗಿ ಧನವ್ಯಯವನ್ನು ವರ್ಷಾಂತ್ಯದಲ್ಲಿ ಮಾಡಬೇಕಾಗುತ್ತದೆ. ಕೋರ್ಟು ಕಾರ್ಯಗಳಲ್ಲಿ ಪರಾಭವ ಸಂಭವವು ಇರುವುದರಿಂದ ಆ ಕಡೆ ಗಮನಿಸದಿರಿ.

ವಿದ್ಯಾರ್ಥಿ ವಿದ್ಯಾರ್ಥಿನಿಯರು ಮಾರ್ಚಿಯ ನಂತರ ಅನುಕೂಲ ವಾತಾವರಣವನ್ನು ಹೊಂದುತ್ತಾರೆ. ವ್ಯಾಪಾರಿಗಳಿಗೆ ಜನವರಿ, ಮಾರ್ಚ, ಎಪ್ರೀಲ್, ಅಗೋಸ್ಟ್, ಸಪ್ಟಂಬರ, ನವಂಬರ ತಿಂಗಳು ವ್ಯಾಪಾರದೃಷ್ಟಿಯಿಂದ ದೋಷಕರವಲ್ಲ. ಚತುಷ್ಪಾದಭಯ, ಅಗ್ನಿಭಯಗಳು ಕುಜನ ಮೂಲಕ ಉಂಟಾಗುವ ಸಂಭವವಿರುತ್ತದೆ. ಮಹಿಳೆಯರೇ ನಿಮ್ಮ ಪಾಲಿಗೆ ಈ ವರುಷ ಕೆಡುಕಲ್ಲ. ಆದರೆ ಕೌಟುಂಬಿಕ ಹೊರೆ ನಿಮ್ಮಲ್ಲಿ ತುಂಬಿರುತ್ತಿದ್ದು ಸಾಕು ಬೇಕೆನಿಸುವುದು. ವಾಸಸ್ಥಾನವನ್ನು ಬದಲಾಯಿಸಲಿರುವ ಪರಿಸ್ಥಿತಿಯು ಮೇ ತಿಂಗಳ ನಂತರ ಕಾಣಬರುತ್ತಿದೆ. ಉದ್ಯೋಗಜೀವನದವರು ವರಿಷ್ಠರ ಪ್ರೀತಿಯನ್ನು ಸಂಪಾದಿಸುತ್ತಾರೆ. ಲೇಖಕ ಲೇಖಕಿಯರು ತಮ್ಮ ಬರೆಹದ ಮೂಲಕ ಧನವನ್ನು ಗಳಿಸುವ ಶಕ್ತಿವಂತರಾಗುತ್ತಾರೆ. ಪತ್ರವ್ಯವಹಾರವನ್ನು ಮಾಡುವಾಗ ಜಾಗರೂಕತೆಯಿಂದ ಕೂಡಿದವರಾಗಬೇಕು. ವಿಮಾ ಮತ್ತು ಬೇಂಕಿನ ವ್ಯವಹಾರದವರು ಪ್ರಗತಿಯನ್ನು ಫೆಬ್ರವರಿಯ ನಂತರ ಹೊಂದಲಿರುತ್ತಾರೆ. ಪತನಭಯವು ಸಂಭವಿಸದಂತೆ

ವಾದ ವಿವಾದಗಳು ಹೆಚ್ಚದಂತೆ ಈ ರಾಶಿಯವರು ಮುಖ್ಯವಾಗಿ ಜಾಗರೂಕತೆಯನ್ನು ವಹಿಸುವುದರಿಂದ ಅನಿಷ್ಟಪ್ರಾಪ್ತಿಯುಂಟಾಗಲಾರದು.

ಧನು:—

(ಯಾ, ಯೋ, ಬಾ, ಬಿ, ಬು, ಬೇ, ಭಾ, ಧಾ, ಫ)

ಹಿಂದು ಮುಂದು ವಿಚಾರಗೊಳ್ಳದೆ ಕೆಲಸಕ್ಕೆ ಇಳಿಯುವುದರಿಂದ ಸುಖವಾಗಿ ಬಗೆಹರಿಯತಕ್ಕ ಕೆಲಸಗಳು ತ್ರಾಸದಾಯಕವಾಗುತ್ತವೆ. ಇದನ್ನು ನೀವು ಅರಿತವರಿದ್ದೀರಾದರೂ ನಿಮ್ಮ ಜೀವನದಲ್ಲಿ ಇದೇ ಮುಖ್ಯವಾಗಿರಬೇಕಾಗಿದೆ. ವಿರೋಧಿಗಳು ಸಂಧಾನಕ್ಕೆ ಸಿದ್ಧರಾಗಿದ್ದರೂ ಸಂಧಾನವನ್ನು ಮುರಿವ ಯತ್ನಯುಕ್ತರಾಗಿ ಅಪರಾಧವನ್ನು ಅವರಲ್ಲಿ ಹೊರಿಸಿ ಕಷ್ಟದಿಂದ ಮುಕ್ತರಾಗಲಿರುವಿರಿ. ಕೋರ್ಟು ಕಾರ್ಯಗಳಲ್ಲಿ ದಶಮದ ಶನಿಯು ಜಯಲಾಭವನ್ನೇ ಉಂಟುಮಾತ್ತಿರುವನು. ಹೊಸ ಉದ್ಯಮಗಳಿಗಾಗಿ ಧನವ್ಯಯವು ಉಂಟಾಗಲಿರುತ್ತದೆ. ತರುಣರು ನೌಕರಿಯನ್ನು ಹೊಂದುವರಾದರೂ ಅವುಗಳಲ್ಲಿ ಶಾಂತಿಯಿಂದ ಕೂಡಿರದೆ ವರ್ಷಾಂತ್ಯದಲ್ಲಿ ಪ್ರಗತಿಯನ್ನು ಕಾಣಲಿರುವರು. ಆಪ್ತೇಷ್ಟರ ವಿಯೋಗವನ್ನು ಹೊಂದಲಿರುವಿರಿ.

ಜೂನ್, ಜುಲಾಯಿ, ದಶಂಬರ ತಿಂಗಳುಗಳಲ್ಲಿ ಕುಟುಂಬದಲ್ಲಿ ರೋಗಶಯ್ಯೆಗಳು ಕಾಣಬರುತ್ತಿದ್ದು ಡಾಕ್ಟರರನ್ನು ಆಶ್ರಯಿಸಬೇಕಾಗುತ್ತದೆ. ಗೃಹಿಣಿಯ ಆರೋಗ್ಯವು ಚೆನ್ನಾಗಿರುವುದಿಲ್ಲ. ಶೀತವಿಕಾರ, ಉಷ್ಣವಾತ ಸಂಬಂಧ ದೋಷಗಳು ಕಾಣುವವು. ಜುಲಾಯಿ ತಿಂಗಳ ನಂತರ ಋಣ ಮುಕ್ತಿಯ ಮಾರ್ಗವನ್ನು ಹೊಂದಲಿರುವಿರಿ. ಉಪಾಧ್ಯಾಯ, ಡಾಕ್ಟರ, ಇಂಜಿನಿಯರ, ಕಂಟ್ರಾಕ್ಟರ್, ಪೋಲೀಸ್ ಇಲಾಖಾ ಕೆಲಸದವರಿಗೆ ಈ ವರ್ಷಕಾಲವು ಯಶಸ್ಸನ್ನೇ ಉಂಟುಮಾಡುವುದಾಗಿದೆ. ಗೃಹಿಣಿಯರು ಸಂತಾನ ಸೌಭಾಗ್ಯ ಮಂಗಲಕಾರ್ಯ, ದಾನ-ಧರ್ಮ, ಪುಣ್ಯಕಾರ್ಯಗಳನ್ನು ನಡೆಯಿಸಿ ಶಾಂತಿಯಿಂದಲೂ ಸುಖಾನಂದದಿಂದಲೂ ಬಾಳುವರು. ಈ ವರ್ಷದ ಆದಿಭಾಗವು ಮಾತ್ರ ಆರ್ಥಿಕ ದೃಷ್ಟಿಯಿಂದ ಚೆನ್ನಾಗಿರಲಾರದು. ಅಂತ್ಯಭಾಗವು ಆರ್ಥಿಕ, ಮಾನಸಿಕ ದೃಷ್ಟಿಯಿಂದ ಉತ್ತಮವಿರುವುದಾಗಿದೆ. ವಿಪುಲ ವಸ್ತ್ರಾಲಂಕರಣಾದಿಗಳಿಗಾಗಿ ಧನವ್ಯಯವು ಇರುತ್ತದೆ. ತೀರ್ಥಕ್ಷೇತ್ರ, ಸಾಧು ದರ್ಶನ, ಶುಭಾಶೀರ್ವಾದಗಳನ್ನು ಹೊಂದಿ ಮನೋಲ್ಲಾಸವನ್ನು ಹೊಂದುವ ಯೋಗವು ನಿಮಗೆ ಇದ್ದೇ ಇದೆ. ಸಂತಾನಾರ್ಥಿಗಳು ಸಂತಾನಸುಖವನ್ನು ಹೊಂದುತ್ತಾರೆ. ಪೂರ್ವಾಷಾಢ ನಕ್ಷತ್ರದವರು ತುಂಬಾ ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮದಿಂದ ಕೂಡಿದವರಾಗುವುದಿಲ್ಲ. ಹಿರಿಯರ ಸುಖವು ಎಪ್ರೀಲ್, ದಶಂಬರ ತಿಂಗಳುಗಳಲ್ಲಿ ಕೆಡುವುದಾಗಿರುತ್ತದೆ. ವಿದ್ಯಾರ್ಥಿಗಳು ಶ್ರಮದಿಂದ ತಮ್ಮ ಕರ್ತವ್ಯದಲ್ಲಿ ಜಯವನ್ನು ಪಡೆಯುವವರಾಗುವರು. ರಾಜಕೀಯ ಸಾಮಾಜಿಕ ವಾತಾವರಣದಲ್ಲಿ ಭಾಗವನ್ನು ವಹಿಸಲಿರುವ ಶ್ರದ್ಧೆಯು ಉತ್ತರಾಷಾಢಾ ನಕ್ಷತ್ರದವರಿಗೆ ಕಾಣುತ್ತಿದ್ದು ತುಂಬಾ ಯಶಸ್ಸನ್ನು ಜುಲಾಯಿಯ ನಂತರ ಸಾಧಿಸಲಿರುವ ಯೋಗವು ಕಂಡುಬರುತ್ತದೆ. ಶತ್ರುಗಳೂ ಹಿತಶತ್ರುಗಳೂ ಕ್ಷಮೆಯನ್ನು ಕೇಳಬರಲಿರುವ ಪ್ರಸಂಗವು ಸಪ್ಟಂಬರದ ನಂತರವಿದೆ. ಕೋರ್ಟು ಕಾರ್ಯಗಳಲ್ಲಿ ಅಪಜಯವು ಸಿದ್ಧಿಸುವಂತಿಲ್ಲ. ಆಕರ್ಷಕ ವಸ್ತ್ರ, ಸುಗಂಧ ದ್ರವ್ಯ, ಪ್ರಕಾಶಕ ವಸ್ತುಗಳು, ಕಾಫಿ, ಏಲಕ್ಕಿಗಳ ವಹಿವಾಟಿನವರು ಆಕಸ್ಮಿಕ ರೀತಿಯಿಂದ ಅಭಿವೃದ್ಧಿಯನ್ನು ಹೊಂದಲಿರುವರು. ಲೇಖಕರು ತಮ್ಮ ಲೇಖನಿಯಿಂದ ಉತ್ತಮವಾದ ಬರೆಹವನ್ನು ಹೊರಪಡಿಸಿ ತಮ್ಮ ಬುದ್ಧಿಶಕ್ತಿಯನ್ನೂ ಕೀರ್ತಿಯನ್ನೂ ಸಾಧಿಸಲು ಅನುಕೂಲವಾದ ವರ್ಷವಿದು. ಚತುರ್ಥದ ಗುರುಚಾರಕಾಲದಲ್ಲಿ ಗೃಹಸುಖವು ಕಡಮೆಯಾಗಿದ್ದರೂ ಅಶುಭ ಪರಿಣಾಮವಾಗಲಾರದು. ಈ ವರ್ಷವು ಎಲ್ಲಾ ಬಗೆಯಿಂದಲೂ ಹೊಸ ಹುರುಪನ್ನುಂಟುಮಾಡುವುದಾಗಿದ್ದು ದಾನ ಧರ್ಮ ಪರೋಪಕಾರ ಕಾರ್ಯಗಳು ಸುಗಮವಾಗಿ ನೆರವೇರುತ್ತವೆ.

ಮಕರ:—

(ಜ, ಜಿ, ಜೂ, ಜೇ, ಜೋ, ಖ, ಗಾ, ಗಿ, ಜಾ)

ಕುಟುಂಬ ಪರಿಸ್ಥಿತಿಯು 'ತಾನೊಂದು ಬಗೆದರೆ ದೈವವಿನ್ನೊಂದು ಬಗೆಯಿತು' ಎಂಬ ಅನುಭವಕ್ಕೆ ಎಡೆಗೊಡುತ್ತಿದೆ. ಯೋಚಿಸಿದ ಕರ್ಮಗಳೆಲ್ಲಾ ಸಾವಕಾಶವಾಗಿ ನೆರವೇರುತ್ತವೆ. ಉದ್ಯೋಗ ಸಂಸ್ಥೆಗಳಲ್ಲಿ ಭಂಗವು ಆದಿಭಾಗದಲ್ಲಿರುತಿದ್ದು ಮಾರ್ಚಿಯ ನಂತರ ಅವುಗಳಲ್ಲಿ ಶಾಂತಿ ಸುಖಪ್ರಾಪ್ತಿಯುಂಟಾಗುವ ಸಂಭವವು ಕಂಡುಬರುತ್ತದೆ. ಆರ್ಥಿಕದ ಮುಗ್ಗಟ್ಟು ಆದಿ ಭಾಗಕ್ಕಿಂತ ಅಂತ್ಯ ಭಾಗದಲ್ಲಿ ಕಡಮೆಯಾಗಿರುತ್ತದೆ. ಪ್ರೀತಿವಿರಹಿತವಾದ ಬಾಳಿನಿಂದ ಉಂಟಾದ ದೋಷಗಳು ನಿಮ್ಮನ್ನು ತಲ್ಲಣಿಸುವವು. ದುಃಖ ಸುಖದ ಜಂಜಡಗಳು ಪ್ರೀತಿವಿರಹಿತ ಜೀವನದ ಮೂಲಕವೇ ಉಂಟಾಗುತ್ತಿವೆಯೆಂಬುದನ್ನು ನೀವು ಮನಸಾ ತಿಳಿದವರಾಗಿ ಬಾಳಿನಲ್ಲಿ ಅದನ್ನು ಸಾಧಿಸುವರೆ ಯತ್ನಯುಕ್ತರಾಗಬೇಕು. ಇದರಿಂದಲೇ ನಿಮ್ಮ ಕಷ್ಟಗಳೆಲ್ಲಾ ಬಗೆಹರಿಯುತ್ತವೆ. ಕರ್ಮಸ್ಥಾನದಲ್ಲಿ ನೌಕರರಿಂದ ಶಾಂತಿಭಂಗವು ಸಿದ್ಧಿಸುವ ಯೋಗವಿರುತ್ತದಾದರೂ ಅವುಗಳಿಂದ ತಪ್ಪುವಿರಿ. ಮೇಷ, ಮಿಥುನ ರವಿಚಾರ ಕಾಲಗಳಲ್ಲಿ ಇಂತಹ ವಾತಾವರಣವು ಕಾಣುವುದಾಗಿದೆ.


SRI RAMA VIJAYA HINDU HOTEL

Harischandra Goregoanker Road,

Gamdevi, Bombay 7.

ಅವಶ್ಯವಾಗಿ ಬನ್ನಿ! ಅವಶ್ಯವಾಗಿ ಬರಲು ಮರೆಯಬೇಡಿ!!

ಹೊಸ ವರ್ಷವು ನಮ್ಮ
ಗ್ರಾಹಕರಿಗೆ ಸುಖಕರ
ವಾಗಲಿ. ಸ್ವಾತಂತ್ರ್ಯದ
ಮೂರನೇ ದೀಪಾವಳಿಯು
ಸಂತೋಷಕರವಾಗಲಿ.



ಉತ್ತಮವಾದ ಫಲಾ
ಹಾರದ ತಿಂಡಿಗಳು
ಕಾಫಿ, ಚಾ ಮತ್ತು
ಉತ್ತಮ ತರದ ಊಟ
ಮುಂತಾದುವುಗಳು.

ಪ್ರೊಪ್ರೈಟರ್: **ನರಸಿಂಹ ರಾಮಕೃಷ್ಣ ನಾಯಕ.**

ದೀಪಾವಳಿಯ ಬೆಳಕಿನ ಬೆಡಗನ್ನು ನೋಡಲು ನೀವು ಮುಂಬಾಯಿಗೆ ಬಂದರೆ

ಶ್ರೀ ರಾಮ ವಿಜಯ ಹಿಂದೂ ಹೊಟೇಲನ್ನು

ಅವಶ್ಯವಾಗಿ ಸಂದರ್ಶಿಸಿರಿ. ಕಾರಣ, ತಾವು ನಮ್ಮ ದೇಶಬಂಧುಗಳಾಗಿರುವಿರಿ ಎಂದೇ ತಮಗೆ ನಾನು ಸೂಚಿಸುತ್ತೇನೆ. ತಮಗೆ ತಮ್ಮ ರಿವಾಜಿನಂತೆ ಎಲ್ಲಾ ತರದ ತಿಂಡಿ ತಿನಸುಗಳು ತಮಗಾಗಿ ತಯಾರಿವೆ, ನಮ್ಮ

ಶ್ರೀ ರಾಮ ವಿಜಯ ಹಿಂದೂ ಹೋಟೇಲಿನಲ್ಲಿ.

ವಿಶೇಷ ಸೂಚನೆ:—ಕಾಫಿ ಮತ್ತು ಊಟವು ತಮ್ಮ ಅಭಿರುಚಿಗೊಪ್ಪುವಂತೇ ದೊರೆಯುವುದು. ಆದ್ದರಿಂದ ತಾವೆಲ್ಲರೂ ಇದರ ಲಾಭವನ್ನು ಪಡೆಯಬೇಕು.

ಶ್ರೀ ರಾಮ ವಿಜಯ ಹಿಂದೂ ಹೊಟೇಲ್

ಗಾಂವದೇವಿ, ಮುಂಬಾಯಿ ನಂಬ್ರ 7.

ನಿರಾಶೆಯು ನಿಮ್ಮ ಜೀವನದಲ್ಲಿ ಆದಿಭಾಗದಲ್ಲಿ ತಾಂಡವ ಮಾಡುತಿದ್ದು ದುರ್ದೈವಿಗಳಾಗಿ ತಮ್ಮನ್ನೇ ಶಪಿಸಿಕೊಳ್ಳುವ ಪ್ರಸಂಗವಿರುತ್ತಿರುವುದಾದರೂ ಎಪ್ರೀಲಿನ ಮುಂದಿನಗಳು ಅಂತಹವುಗಳಾಗಿರುವುದಿಲ್ಲ. ಫೆಬ್ರವರಿಯ ಲಾಗಾಯಿತು ಇಷ್ಟಸಿದ್ಧಿಯ ಕುರುಹುಗಳು ಕಂಡುಬರುತ್ತವೆ. ವ್ಯಾಪಾರಿಗಳಿಗೆ ಆರ್ಥಿಕ ವಿಷಯದ ಮುಗ್ಗಟ್ಟು ಬಹಳವಾಗಿ ಪೂರ್ವಭಾಗದಲ್ಲಿರುತ್ತಿದ್ದು ಅವುಗಳಿಂದ ಬಗೆಹರಿಯುವ ಸಮಸ್ಯೆಯೇ ಹಿರಿದೆನಿಸಿ ತೋರುವುದಾದರೂ ಆಕಸ್ಮಿಕ ರೀತಿಯಿಂದ ಸುಧಾರಿಸಿ ಅಭಿವೃದ್ಧಿಯ ಸಂಪರ್ಕವೇ ಕಂಡುಬರುವುದಾಗಿದೆ. ಶ್ರವಣಾ ನಕ್ಷತ್ರದವರು ಭೂಗೃಹ ಸಂಬಂಧವಾಗಿ ಧನವನ್ನು ವ್ಯಯಿಸಲಿರುತ್ತಾರೆ. ಭೂಸಂಪತ್ತಿನ ಅಭಿವೃದ್ಧಿಯು ಕಾಣುವುದಾಗಿದೆ.

ಉತ್ತರಾಷಾಢಾ ನಕ್ಷತ್ರದವರು ಗತವರ್ಷದ ದುರ್ದೈವವನ್ನು ಮನಸ್ಸಿನಲ್ಲಿ ತಂದುಕೊಳ್ಳದೆ ಮುಂದುವರಿದು ಶ್ರೇಯಸ್ಸನ್ನು ಸಾಧಿಸುವುದು ಯುಕ್ತವಾಗಿದೆ. ದ್ವಿತೀಯದಿಂದ ಗುರು ಪಾರಾಗುತ್ತಲೇ ಎಲ್ಲಾ ಕಷ್ಟನಿವಾರಣೆಯು ತನ್ನಿಂದ ತಾನೇ ಉಂಟಾಗುವಂತಿದೆ. ರಾಜಕೀಯ ಮತ್ತು ಸಾಮಾಜಿಕ ಕಾರ್ಯರಂಗದಲ್ಲಿ ಸ್ಪರ್ಧೆಯನ್ನು ವಹಿಸುವ ಯೋಗವಿರುತಿದ್ದು ಅವುಗಳಿಂದ ಕೀರ್ತಿ ಮತ್ತು ಪ್ರತಿಷ್ಠೆಯನ್ನು ಸಾಧಿಸಲಿರುವಿರಿ. ಶಾಲಾ ಗುರು, ಕಾಯಿದೆಯ ವ್ಯವಹಾರದವರು, ಸಿನೆಮಾನಟ, ಪತ್ರಿಕಾಪ್ರಪಂಚದವರೇ ಮೊದಲಾದ ಬುದ್ಧಿವಿಚಕ್ಷಣ ಹಾಗೂ ಕಲಾಗಾರಿಕೆಯ ಸಂಬಂಧ ವ್ಯವಹಾರಿಗಳು ಅಭಿವೃದ್ಧಿಯನ್ನು ಮಾರ್ಚಿಯ ನಂತರ ಹೊಂದುವವರಾಗಿರುತ್ತಿದ್ದು ಜನತೆಯ ಪ್ರೀತಿಗೆ ಆಸ್ಪದರಾಗಲಿರುವರು. ವಿದ್ಯಾರ್ಥಿಗಳಿಗೆ ೧೯೫೧ನೆ ಇಸವಿಯ ಅಂತ್ಯಭಾಗವು ಯಶಸ್ಸನ್ನು ಕೊಡುವುದಾಗಿರುತ್ತದೆ. ಪ್ರವಾಸಕ್ಕೆ ಉತ್ತರಾರ್ಧವು ಅನುಕೂಲವಾಗಿ ಕಾಣಬರುವುದು. ವಕೀಲಿಯುವರಿಗೆ ಜನವರಿ, ಫೆಬ್ರವರಿ, ಎಪ್ರೀಲ್, ಜುಲಾಯಿ, ಅಗೋಸ್ಟ್, ನವಂಬರ ತಿಂಗಳುಗಳು ಪ್ರಗತಿದಾಯಕಗಳಾಗಿರುತ್ತವೆ. ಶೋಧಕರ ಜೀವನದಲ್ಲಿ ಅದ್ಭುತವಾದ ಶೋಧನೆಗಳಿಗೆ ಅವಕಾಶವಿರುತಿದ್ದು ಉತ್ತಮ ಯಶಸ್ಸಿನ ಸ್ಥಾನವನ್ನು ಗಳಿಸಲು ಶಕ್ಯವಿರುತ್ತದೆ. ಸರಕಾರದ ಉದ್ಯೋಗಸ್ಥರು ಲಂಚಗುಳಿತನವನ್ನು ಮಾಡುತಿದ್ದಾಗ ಜಾಗರೂಕರಾಗಿರಬೇಕು. ಈ ವೃತ್ತಿಯೇ ತಮ್ಮ ಉದ್ಯೋಗಕ್ಕೆ ಧಕ್ಕೆಯನ್ನು ತರಲು ಶಕ್ಯವಾಗುವ ಸಂಭವವು ವರ್ಷಾಂತ್ಯದಲ್ಲಿ ಕಂಡುಬರುವುದಾಗಿದೆ. ಏಜಂಟರ ವೃತ್ತಿಯವರು ಈ ವರ್ಷದ ಮಧ್ಯಭಾಗದಲ್ಲಿ ತುಂಬಾ ಅಭಿವೃದ್ಧಿಗಿರುವ ನೆಲೆಯನ್ನು ಹೊಂದುತ್ತಾರೆ. ತುಂಬಾ ಪ್ರಯಾಣಗಳಿರುತ್ತವೆ.

ಕುಂಭ:—


(ಹೂ, ಹೆ, ಗೂ, ಸಾ, ಸಿ, ಸು, ಸೆ, ಜೊ, ಸೊ)

ಬಿರುಗಾಳಿಯಲ್ಲಿ ನೆಲಸಿರುವ ನಾವೆಯಂತೆ ನಿಮ್ಮ ಜೀವನ ಸಮಸ್ಯೆಯು ಕಠಿಣವಾಗಿ ಗೃಹವಾತಾವರಣಗಳಿಂದ ಕಂಡುಬರುತಿದ್ದು ಶಾಂತತೆಯ ಅವಕಾಶವು ಆದಿಭಾಗದಲ್ಲಿ ಈ ವರ್ಷ ಕಡಮೆಯಾಗಿಯೇ ಇರುವುದಾದರೂ ತನ್ನಿಂದ ತಾನೇ ಅವುಗಳೆಲ್ಲಾ ಬಗೆಹರಿಯುತ್ತವೆ. ಕುಟುಂಬೀಯ ವಿರೋಧವು ಬಹಳವಾಗಿ ಮೊತ್ತಮೊದಲುಂಟಾಗಿ ಆ ಮೇಲೆ ಅದರ ನಿವೃತ್ತಿ ಮಾರ್ಗವನ್ನು ಹೊಂದಲಿರುವಿರಿ. ವಾಸಸ್ಥಾನದ ಬದಲಾವಣೆಯ ವಿಷಯದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಲಿರುವಿರಿ. ತಮ್ಮ ಜೀವನನೌಕೆಯು ಅರ್ಧದಲ್ಲೇ ಮುಳುಗುವುದೋ ಎಂಬ ಸಂಶಯವು ಶತಭಿಷಾ ನಕ್ಷತ್ರದವರಿಗೆ ಉಂಟಾಗುತ್ತಿರುವುದಾದರೂ ಆಕಸ್ಮಿಕ ರೀತಿಯಿಂದ ಸುಖಶಾಂತಿಯನ್ನು ಪಡೆಯುವಿರಿ. ಹಿರಿಯರಲ್ಲಿ ಜನನೀ ಜನಕರ ಆರೋಗ್ಯ ನೆಲೆ ಹಾಳಾಗುವುದು. ದಾಂಪತ್ಯ ಜೀವನದಲ್ಲಿ ಎಪ್ರೀಲ್ ವರೇಗಣ ಕಾಲವು ಅಗಲಕೆಯೇ ಕಂಡುಬರುತ್ತಿರುವುದು. ಡಾಕ್ಟರರ ಜೇಬನ್ನು ತುಂಬಲಿರುವ ಅವಕಾಶವೇ ಅಧಿಕವಾಗಿ ಅಷ್ಟಮದ ಶನಿರಾಯನಿಂದ ಕಾಣುತ್ತಿರುವುದಾದರೂ ದುಃಖಜನಕ ಪರಿಸ್ಥಿತಿಯೊದಗಲಾರದು. ನೌಕರಿಯಲ್ಲಿ ಅನಪೇಕ್ಷಿತ ಸ್ಥಳಕ್ಕೆ ವರ್ಗ; ವ್ಯಾಪಾರದಲ್ಲಿ ಮೊತ್ತಮೊದಲು ಗೊಂದಲ ಚಂಚಲತೆಗಳು ಸಂಭವಿಸುತ್ತವೆ. ಸ್ತ್ರೀಯರು ಸಂತಾನ ಸುಖವನ್ನು ಹೊಂದಲಿರುತ್ತಾರೆ. ಜೂನ್, ಜುಲಾಯಿ ತಿಂಗಳುಗಳು ವ್ಯಾಪಾರ ದೃಷ್ಟಿಯಿಂದ ಸಾಮಾನ್ಯ. ಈ ವರ್ಷದ ಪೂರ್ವಾರ್ಧದ ದುರ್ಧರ ಪ್ರಸಂಗಗಳು ಉತ್ತರಾರ್ಧದಲ್ಲಿ ಆಶ್ಚರ್ಯಕರವಾಗಿ ಮಾಯವಾಗಿ ಸಾಂಪತ್ತಿಕ ಸ್ಥಿತಿಯು ಉತ್ತಮಗೊಳ್ಳಲಿರುವುದು. ಮನೆಯ ವಾತಾವರಣವೆಲ್ಲಾ ಶಾಂತವಾಗುವುದು. ವಿದ್ಯಾರ್ಥಿ ಜೀವನದವರು ಅಭಿವೃದ್ಧಿಯನ್ನು ಮಾರ್ಚಿಯ ನಂತರ ಹೊಂದಲಿರುತ್ತಾರೆ. ಭೂಸಂಪತ್ತಿನ ವಿಷಯವಾಗಿ ಗೃಹಧನಗಳ ಕುರಿತಾಗಿ ಕುಟುಂಬದಲ್ಲಿ ತಾಕಲಾಟ ಕೋರ್ಟುಕಛೇರಿಗಳ ವ್ಯವಹಾರಗಳು ನಡೆದು ವರ್ಷಾಂತ್ಯದಲ್ಲಿ ಕಠಿಣ ಸಮಸ್ಯೆಯಿಂದ ತಪ್ಪಲಿರುವ ಯೋಗವಿರುತ್ತದೆ.

ಲೇಖಕ ಲೇಖಕಿಯರಿಂದ ವಾಙ್ಮಯ ಸೇವೆಯು ಉತ್ತಮವಾಗಿ ಜರಗಿ ಸಮಾಜದ ಮನ್ನಣೆಗೆ ಪಾತ್ರರಾಗುವರು. ಸ್ವತಂತ್ರ ಉದ್ಯೋಗಸ್ಥರು ವ್ಯಾಪಾರಿಗಳು ತಮ್ಮ ಸಾಲವನ್ನು ನಿವಾರಣೆಮಾಡುವ ಶಕ್ತಿಯುಳ್ಳವರಾಗಲಿರುತ್ತಾರೆ. ಭಕ್ತಿ ವೇದಾಂತ ಮಾರ್ಗಗಳಲ್ಲಿ ಹಲವರು ತಮ್ಮ ಮನಸ್ಸನ್ನು ಹರಿಯಗೊಟ್ಟು ಬೋಧನಾಮಾರ್ಗಕ್ಕೆ ಹೊರಡುವ ಸಂಭವವಿರುತ್ತದೆ. ತರುಣರೂ ತರುಣಿಯರೂ ವಿವಾಹಸಂಪರ್ಕವನ್ನು ಹೊಂದಿ ಗೃಹಜೀವನದ ಹೊಸ್ತಿಲಿಗೆ

Mangalore Ganesh Beedies

KNOWN ALL OVER MYSORE STATE



MILLIONS ENJOY THEM DAILY

AND THOUSANDS ARE JOINING

THESE HAPPY PEOPLE EVERY YEAR!

Please examine our **Trade Mark** *before you buy*

Mangalore Ganesh Beedi Works,

Sreerampet, MYSORE.

ಕಾಲಿರಿಸಲಿರುವರು. ಪೂರ್ವಾಭಾದ್ರಾ ನಕ್ಷತ್ರದವರು ಪ್ರಯಾಣವನ್ನು ತುಂಬಾ ಮಾಡಲಿರುತ್ತಾರೆ. ವಿಮಾ ವ್ಯವಸಾಯಿಗಳೂ, ಡಾಕ್ಟರ ವೃತ್ತಿಯವರೂ, ಕಾಯ್ದೆ ಪಂಡಿತರೂ, ತುಂಬಾ ವರ್ಚಸ್ವಿಗಳಾಗಿ ಮಾರ್ಚಿಯ ನಂತರ ಕೆಲಸವನ್ನು ಮಾಡುತಿದ್ದು ಉದ್ಯೋಗದಲ್ಲಿ ತುಂಬಾ ಹೆಸರನ್ನು ಗಳಿಸಲಿರುತ್ತಾರೆ. ಸ್ತ್ರೀಯರು ಉಡಿಗೆತೊಡಿಗೆ ಉತ್ತಮಾಭರಣ ಸಂಪತ್ತು, ಗೃಹಸಂಪತ್ತುಗಳನ್ನು ವರ್ಷಾಂತ್ಯದಲ್ಲಿ ಹೆಚ್ಚಿಸಲಿರುತ್ತಾರೆ. ಸಾಧುಸಜ್ಜನರ ಭೇಟಿ, ತೀರ್ಥ ಯಾತ್ರಾಸ್ಥಳ ದರ್ಶನಗಳಾಗಲಿರುತ್ತವೆ.

ಮೀನ:—

(ಚಾ, ಚಿ, ದಿ, ದೂ, ಶಂ, ಝಾ, ಥ, ದೇ, ದೋ)

ಮಾನಸಿಕ ತಾಪಕ್ಕೆ ಅದಾವ ಔಷಧವೆಂಬುದನ್ನು ನೀವು ಮುಖ್ಯವಾಗಿ ಅನ್ವೇಷಿಸಿದರೆ ಈ ವರ್ಷ ಶಾಂತಿಮಯವಾಗುವುದು. ಕೌಟುಂಬಿಕ ಜೀವನ ಸಮಸ್ಯೆಯು ಆದಿಭಾಗದಲ್ಲಿ ಅಲ್ಲೋಲಕಲ್ಲೋಲವಾಗಿ ಆದಿಭಾಗದಲ್ಲಿ ಕಾಣಬರುತಿದ್ದು ಮಧ್ಯಕಾಲಾನಂತರ ಶಾಂತಿ ಪ್ರಸಂಗವು ಕಂಡುಬರುವುದಾಗಿದೆ. ಹಿರಿಯರ ಆರೋಗ್ಯ ಸುಖಗಳು ಕಡಮೆಯಾಗಿರುತ್ತವೆ. ದೂರಗತ ಬಂಧುಜನರ ಸುಖವಾರ್ತೆಯನ್ನೂ ಸಮಾಗಮ ಸೌಕರ್ಯವನ್ನೂ ಹೊಂದಲಿರುವಿರಿ. ರಿಕಾರ್ಡು ವ್ಯವಹಾರಗಳು ಕುಟುಂಬದಲ್ಲಿ ನಡೆಯುಲಿರುತ್ತವೆ. ಅನ್ಯರ ಚಾಡಿ ಮಾತುಗಳ ಮೂಲಕ ವಿಷಮತೆಯು ನೌಕರರಿಗೆ ಪದೇ ಪದೇ ಉಂಟಾಗುತಿದ್ದು ದೂಷಣೆಗಾರರ ಮಾನಭಂಗವು ಉಂಟಾಗುವ ಸಂಭವವೊದಗುತ್ತದೆ. ಸ್ಥಾನಾಂತರಾಸಕ್ತಿಯು ನೌಕರರಿಗೆ ಕಂಡುಬರುವುದಾಗಿದೆ. ಕವಿಗಳಿಗೆ ಲೇಖಕರಿಗೆ ಫೆಬ್ರವರಿಯ ನಂತರದ ಕಾಲವು ಚೆನ್ನಾಗಿರುತ್ತದೆ. ಗುರು ಶನಿಗಳ ನಿರೀಕ್ಷಣೆಯು ಕೌಟುಂಬಿಕ ವಿಷಯದಲ್ಲಿ ಕೆಡುಕಾಗಿರುವುದರಿಂದ, ಮೀನ, ಮಿಥುನ, ಕನ್ಯಾ, ತುಲಾ, ರವಿಚಾರ ಕಾಲದಲ್ಲಿ ತುಂಬಾ ಜಾಗರೂಕತೆಯನ್ನು ವಹಿಸಬೇಕಿವೆ. ವ್ರಣವಿಕಾರಗಳುಂಟಾಗದಂತೆ ಅಂತ್ಯಭಾಗದಲ್ಲಿ ಜಾಗರೂಕತೆಯನ್ನು ವಹಿಸಬೇಕು. ವಾಹನ ಸುಖಸಂಪತ್ತಿಗಾಗಿ ಧನವ್ಯಯವು ಜನವರಿ, ಮಾರ್ಚಿ, ಜುಲಾಯಿ, ಸಪ್ಟಂಬರ ತಿಂಗಳುಗಳಲ್ಲಿ ಉಂಟಾಗುವ ಸಂಭವವಿರುತ್ತದೆ. ವ್ಯಾಪಾರಿಗಳಿಗೆ ಆರ್ಥಿಕ ಸಮಸ್ಯೆಯು ಕಠಿಣವಾಗಿ ಸಪ್ಟಂಬರದ ವರೆಗೆ ಇದ್ದು ಅವುಗಳಿಂದ ಅಪಮಾನಜನಕ ಸಮಸ್ಯೆಯು ಉಂಟಾಗಬಾರದು. ಶತ್ರುಗಳೊಡನೆ ಸಂಧಿ ಶರ್ತಗಳನ್ನು ಸಾಧಿಸಬೇಕಾಗುತ್ತದೆ. ನಾಟಕಕಾರರು, ಕಾದಂಬರಿಗಾರರು, ಕೀರ್ತನೆಗಾರರು, ಗಮಕಿಗಳು, ಸಾಹಿತ್ಯಪ್ರಿಯರು ದ್ವಿತೀಯದ ಗುರುಚಾರದಿಂದ ಅಭೀಷ್ಟ ಸಿದ್ಧಿಯನ್ನು ಸಾಧಿಸಲಾಪರು.

ಪತ್ರಿಕಾಕರ್ತರೂ, ಉದ್ಯೋಗ ಸಂಸ್ಥೆಗಳ ಮಾಲಿಕರೂ ಅಲ್ಪ ಸ್ವಲ್ಪ ಕೆಲಸಗಾರರ ಮೂಲಕ ವಿಘ್ನವಿಡ್ಡೂರಗಳನ್ನು ಹೊಂದುತ್ತಿರುವರಾದರೂ ಆರ್ಥಿಕ ವಿಷಯದಲ್ಲಿ ತುಂಬಾ ಪ್ರಗತಿಯನ್ನು ಸಾಧಿಸಲಿರುತ್ತಾರೆ. ನೌಕರರಿಗೆ ತಮ್ಮ ನೌಕರಿಯು ಬೇಡವೆನಿಸುವ ಪ್ರಸಂಗಗಳೊದಗುತ್ತವೆ. ವಾಗ್ವಾದಗಳುಂಟಾಗದಂತೆ ಜಾಗರೂಕರಾಗಿರಬೇಕು. ಆಟಗಾರರು ತುಂಬಾ ಯಶಸ್ವಿಗಳಾಗಲಿರುತ್ತಾರೆ. ಮಹಿಳೆಯರೇ ನಿಮ್ಮ ಗೃಹಜೀವನದಲ್ಲಿ ಇದೊಂದು ಕಠಿಣ ಸಮಸ್ಯೆಯ ವರ್ಷವೆಂದು ತಿಳಿಯಿರಿ. ದಾಂಪತ್ಯ ಜೀವನದಲ್ಲಿ ಆಗಾಗ ಒಡಕುಗಳು ಕಂಡುಬರುವಂತಿವೆ. ವಾಸಸ್ಥಾನದ ಬದಲಾವಣೆಯನ್ನು ಮಾಡಲಿರುವ ಅವಕಾಶವಿರುತ್ತದೆ. ತರುಣರು ತರುಣಿಯರೂ ದಾಂಪತ್ಯ ಬಂಧನವನ್ನು ಸಾಧಿಸುವರು. ಆದರೆ ಮಾಂಗಲ್ಯ ಕರ್ಮಗಳ ಹೊತ್ತು ವಿಘ್ನಸಂಭವವು ಉಂಟಾಗುವಂತಿದೆ. ಅದರಿಂದ ಶಂಕಾಗ್ರಸ್ತರಾಗಬೇಡಿರಿ. ಒಟ್ಟಿಯ ವ್ಯಾಪಾರಿಗಳಿಗೆ, ತೈಲ ವ್ಯವಹಾರಿಗಳಿಗೆ, ಲೋಹ ವಸ್ತುಗಳ ವಹಿವಾಟುದಾರರಿಗೆ ಧನಾಗಮವು ಬಹಳವಿರುತ್ತದೆ. ಉದ್ಯೋಗ ಸಂಸ್ಥೆಯ ನಿರ್ಮಾಣಾಭಿಲಾಷೆಯು ಪೂರ್ವಾಭಾದ್ರ ಮತ್ತು ರೇವತಿ ನಕ್ಷತ್ರದವರಲ್ಲಿ ಉಂಟಾಗಿ ಉದ್ಯಮದಲ್ಲಿ ಯಶಸ್ವಿಗಳಾಗಲಿರುವರು. ಲೆಕ್ಕಪತ್ರ ವ್ಯವಹಾರಗಳ ವಿಷಯದಲ್ಲಿ ಆದಿಭಾಗದಲ್ಲಿ ಜಾಗರೂಕತೆಯನ್ನು ವಹಿಸುವುದರಿಂದ ನೆಮ್ಮದಿಯೊದಗಲಿರುತ್ತದೆ. ಸಹೋದರರೊಳಗೆ ವೈಮನಸ್ಯವು ಅಲ್ಪಾಲ್ಪವಾಗಿ ತೋರುವುದಾಗಿದೆ. ಕೋರ್ಟು ಕಾರ್ಯಗಳಲ್ಲಿ ಜಯವು ವರ್ಷಾಂತ್ಯದಲ್ಲಿ ಉಂಟಾಗುವಂತಿದೆ. ಮಹಿಳೆಯರು ರತ್ನಾಲಂಕಾರಗಳಿಗಾಗಿ ಧನವ್ಯಯವನ್ನು ಮೀನ ಗುರುಚಾರ ಕಾಲದಲ್ಲಿ ಮಾಡಲಿರುತ್ತಾರೆ. ಪತ್ರವ್ಯವಹಾರಗಳನ್ನು ಮಾಡುವಾಗ ಜಾಗರೂಕತೆಯು ಉತ್ತರಾಭಾದ್ರಾ ನಕ್ಷತ್ರದವರಿಗೆ ಬೇಕಿದೆ. ಈ ವರ್ಷ ಮಾನಸಿಕ ವಿಚಿತ್ರ ಪರಿಸ್ಥಿತಿಯೊಂದನ್ನು ಬಿಟ್ಟು ಉಳಿದ ಎಲ್ಲಾ ದೃಷ್ಟಿಯಿಂದಲೂ ಉತ್ತಮವಿರುವುದು. ಪ್ರವಾಸ ಮಂಗಲಕಾರ್ಯಗಳು ನಡೆದು ಶುಭ ವಿಷಯದಲ್ಲಿ ಧನವ್ಯಯ ಹೆಚ್ಚಿರುತ್ತದೆ. ಉಂಡ ಮನೆಗೆ ಎರಡು ಬಗೆವ ಕಲ್ಪನೆಯ ಪ್ರಕರಣಗಳು ಹಲವಿದ್ದು ಅವುಗಳಿಂದ ಕೆಡದಂತೆ ಲಕ್ಷಿಸಿರಿ. ಮಿತ್ರರ ಭೇಟಿಯು ಬಹಳವಾಗಿ ಉಂಟಾಗಲಿರುತ್ತದೆ.



ಶ್ರೀ। ಕುಡ್ವಿ ಶ್ರೀನಿವಾಸ ಶೆಣೈಯವರು.

ಧನವ್ಯವಸ್ಥೆ—

ವಿಮೆ ಮೌಲ್ಯದಲ್ಲಿ ಸಂತತವಾಗಿ
ಬೆಳೆಯುವ ಧನವ್ಯವಸ್ಥೆ

★

"ಜೀವ ವಿಮೆ ಪ್ರಪಂಚದ ಭವ್ಯವೂ ಭದ್ರವೂ ಆದ ಬಂಡವಾಳ. ಶಾಂತಿಕಾಲದಲ್ಲಿ ಅಥವಾ ಯುದ್ಧ ಕಾಲದಲ್ಲಿ ಯಾವಾಗಲೂ ಮೂಲಧನಕ್ಕೆ ಅಲ್ಲಿ ಭದ್ರತೆ ಉಂಟು."

ಮೂಲಧನ ಲಾಭಸಹಿತ ಸುರಕ್ಷಿತವಾಗಿ ನಿಮ್ಮ ಕೈ ಸೇರುತ್ತದೆ. ಆದ್ದರಿಂದ ನೀವು ನಿಶ್ಚಿಂತರಾಗಿ ದೀರ್ಘಾಯುಗಳಾಗಿ ಜೀವಿಸಬಹುದು.

ಜೀವಿತದಲ್ಲಿ ಬಯಸಿದಷ್ಟು ವೆಚ್ಚ ಮಾಡಿ ಅಪೇಕ್ಷಿಸಿದಷ್ಟು ಆಸ್ತಿಯನ್ನು ಸಂಪಾದಿಸಿಡಲು ಅವಕಾಶಮಾಡಿಕೊಡುತ್ತದೆ.

★

ನಾಳೆ ಎನಬೇಡಿ! **ಇಂದೇ ವಿಮೆ ಮಾಡಿ!!**

ವಿವರಣೆಗೆ

ಕಾರ್ಯದರ್ಶಿ, ಮೈಸೂರು ಸರ್ಕಾರದ ವಿಮಾ ಇಲಾಖೆ, ಬೆಂಗಳೂರು

ಅಥವಾ

ನಿಮ್ಮ ಹತ್ತಿರವಿರುವ ಪ್ರತಿನಿಧಿ



ತಾಜಮಹಾಲ್ ಹಿಂದೂರೆಸ್ಟೊರೆಂಟ್, 1926.



ನಿಯೋ ತಾಜಮಹಾಲ್, 1933.




ಬ್ರಾಂಚ್ ತಾಜಮಹಾಲ್, 1933.

ತಾಜಮ
ರಜ

[1926

ರಜತೋತ್ಸವವನ್ನಾಚರಿಸುವ ಭಾಗ್ಯವು, ಕೆಲವೇ ಸಂಸ್ಥೆಗಳ ಪಾಲಿನದಾಗಿದೆ. ಸತತ ಯತ್ನ, ಛಲ, ಧೃತಿ, ಸೇವೆ, ವಿಚಕ್ಷಣತೆ ಇವುಗಳಿಂದಲೇ ಒಂದು ಸಂಸ್ಥೆಯು ಸಂಸ್ಥೆಯೆನಿಸುವುದು; ಮತ್ತು ಜನಪ್ರೀತಿಯನ್ನು ಸಂಪಾದಿಸಿ, ಮುಂದುವರಿಯುವುದು. ಸಂಸ್ಥೆ ಎಂಬುದರ ಅರ್ಥವೂ ಸ್ಪಷ್ಟವಿದೆ. ಕೇವಲ ವ್ಯಾಪಾರ ಮತ್ತು ಲಾಭದ ಮಾನದಿಂದ ಒಂದನ್ನು 'ಸಂಸ್ಥೆ'ಯೆನ್ನಲಾಗದು. ವ್ಯಾಪಾರದೊಂದಿಗೆ ಸೇವೆಯೂ ಜತೆಗೂಡಿದ್ದು, ಜನತೆಯ ಆವಶ್ಯಕತೆಗಳಿಗೆ ಅನುಕೂಲವಾಗಿ ಒದಗಿಸಿ, ನ್ಯಾಯಪಥದಲ್ಲಿದ್ದರೆನೇ ಒಂದು ಸಂಸ್ಥೆಯು ನಿಜಕ್ಕೂ ಸಂಸ್ಥೆಯೆನಿಸುವದು. ನಮ್ಮ ಜಿಲ್ಲೆಯ ಸಂಸ್ಥೆಗಳಲ್ಲಿ 'ತಾಜಮಹಾಲು' ಸಹ ಆ ಅರ್ಹತೆಯನ್ನು ಪಡೆದಿದೆ.

ತಾಜಮಹಾಲು, ಈ ವರ್ಷ ರಜತೋತ್ಸವವನ್ನಾಚರಿಸುವುದು. ದಕ್ಷಿಣ ಭಾರತದಲ್ಲಿ ಒಂದು ಉಪಾಹಾರಗೃಹವು ರಜತೋತ್ಸವವನ್ನಾಚರಿಸುವುದು ಬಹುಶಃ ಇದೇ ಮೊದಲನೆಯದೆನ್ನಬಹುದು.



ನ್ಯೂ ತಾಜಮಹಾಲ್ ಕೆಫೆ, 1944.

ಇಪ್ಪತ್ತೈದು ವರ್ಷಗಳ ಕೆಳಗೆ, ೧೯೨೬ರಲ್ಲಿ (ಜೂನ್) ಶ್ರೀ। ಕುಡ್ಪಿ ಗೋಪಾಲಕೃಷ್ಣ ಶ್ಯಾನಭಾಗರು, ತಮ್ಮ ಹಿರೀ ಶ್ರೀ। ಕೆ. ಪದ್ಮನಾಭ ಶೆಣೈಯವರೊಂದಿಗೆ 'ತಾಜಮಹಾಲ್ ಹಿಂದೂರೆಸ್ಟೊರೆಂಟ್' ಎಂಬ ಹೆಸರಿನಲ್ಲಿ ಮೈದಾನು ರಸ್ತೆಯಲ್ಲಿ ಈ ಉಪಾಹಾರ ಗೃಹವನ್ನು ತೆರೆವಾಗ ಮಂಗಳೂರಲ್ಲಿ ಆಗಿನ ಪರಿಸ್ಥಿತಿಗೊಪ್ಪುವಂತೆ ಸಾಕಷ್ಟು ಉಪಾಹಾರ ಗೃಹಗಳಿದ್ದರೂ ಅಚ್ಚುಕಟ್ಟಾದ ರೀತಿಯಲ್ಲಿ ಆಧುನಿಕ ಸೌಕರ್ಯಗಳೊಂದಿಗೆ ಇರುವ ಉಪಾಹಾರಗೃಹಗಳು ಕಾಣಿಸುತ್ತಿರಲಿಲ್ಲ. 'ತಾಜಮಹಾಲು', ಜನಮನವನ್ನು ಸೆಳೆವ ನವೀನತೆಯಿಂದ, ಅದೊಂದು ಹೊಸತನದಿಂದ ತೆರೆಯಲ್ಪಟ್ಟಿತು. ಸಭ್ಯ, ಆದರಶೀಲರಾದ ಕೆಲಸಗಾರರು ಕ್ಷುಧಾಶಾಂತಿಗೆ ಬರುವ ಜನರನ್ನು ನಗುಮೊಗದಿಂದ ಸ್ವಾಗತೀಕರಿಸುವ, ಗಿರಾಕಿಗಳ ಅಪೇಕ್ಷೆಯಂತೆ ಶುಚಿಕರ-ರೀತಿಯಲ್ಲಿ ವಿಲಂಬವಿಲ್ಲದೆ ಬಳಸುವ—ಅನುಭವವು, "ಹೊಟೇಲೆಂದರೆ ನಯ-ವಿನಯಗಳಿಲ್ಲದೆ ಸದಾ ಗದ್ದಲವಾಗುವ ಒಂದು ಸ್ಥಳ" ಎಂಬ ಭಾವನೆಯನ್ನು ತಿದ್ದಿದುವು. ತಿಂಡಿ ತಿನಿಸುಗಳಲ್ಲಿ ಉಲ್ಲಾಸಕರ ಮಾರ್ಪಾಟುಗಳಾದುವು. ಸ್ಥಳ ಸೌಕರ್ಯವು ಸುಧಾರಿಸಲ್ಪಟ್ಟಿತು. "ಸೌಕರ್ಯ ಸೌಲಭ್ಯಗಳಿಗೆ ತಾಜಮಹಾಲು" ಎಂಬುದೇ ಎಲ್ಲರ ಅನುಭವವಾಗತೊಡಗಿತು.



ತಾಜಮಹಾಲ್, 1934.



ಕೋಮಲವಿಲಾಸ, 1939.



ಸೆಂಟ್ರಲ್ ಕೊಫಿ ಹೌಸ್, 1948.


ಹಾಲಿನ ಹೋತ್ಸವ

-1950]

ಮಂಗಳೂರಲ್ಲಿ, ಪ್ರಥಮ ಬಾರಿ, ವಿವಾಹಾದಿ ಸಮಾರಂಭಗಳಲ್ಲೂ, ಸಂಘ-ಸಭೆ-ಔತಣಗಳಲ್ಲೂ ಅಚ್ಚುಕಟ್ಟಾದ ರೀತಿಯಲ್ಲಿ ತಿಂಡಿ-ಪಾನೀಯಗಳನ್ನೊದಗಿಸಿಕೊಡುವ ಏರ್ಪಾಡನ್ನೂ ತಾಜಮಹಾಲು ಆರಂಭಿಸಿ, ವಿಶೇಷ ಸಮಾರಂಭಗಳನ್ನೇರ್ಪಡಿಸುವವರಿಗೆ ಆ ವರೆಗೆ ಶ್ರಮಪೂರ್ವಕ ಕಾರ್ಯಭಾರವೆಂದಿದ್ದ ಆ ಸಮಸ್ಯೆಯನ್ನೂ ಪರಿಹರಿಸಿದಂತಾಯಿತು. ಈ ತಿಂಡಿ-ತೀರ್ಥ ಒದಗಿಸುವ ವ್ಯವಸ್ಥೆಯ ಸೌಕರ್ಯವನ್ನು, ಹಳ್ಳಿ-ಪಳ್ಳಿಯವರೂ ಪಡೆಯಲಾರಂಭಿಸಿದರು.

೧೯೨೭ರಲ್ಲಿ ತಾಜಮಹಾಲ್ ಹಿಂದೂ ರೆಸ್ಟೋರೆಂಟ್ ಆರಂಭಿಸಲ್ಪಡುವಾಗ, ಕೇವಲ ಇಪ್ಪತ್ತು ನೌಕರರು ಅದರಲ್ಲಿ ಇದ್ದರು. ೧೯೩೨ರಲ್ಲಿ, 'ನಿಯೋ ತಾಜಮಹಾಲ್' ಎಂಬ ಹೆಸರಿನಿಂದ, ಮೈದಾನಿನ ದಕ್ಷಿಣದಲ್ಲಿ (ಕೆಂಟ್ ರಸ್ತೆ) ಇನ್ನೊಂದು ಉಪಾಹಾರಗೃಹವು ಆರಂಭಿಸಲ್ಪಟ್ಟಿತು. ೧೯೩೩ರಲ್ಲಿ, ಮೈದಾನು ರಸ್ತೆಯಲ್ಲಿನ ಮುಖ್ಯ ಉಪಾಹಾರಗೃಹದೊಳಗಿನ ಸ್ಥಳ ಸಂಕೋಚದಿಂದ, ಸೌಕರ್ಯದ ದೃಷ್ಟಿಯಲ್ಲಿ, ಅದೇ ರಸ್ತೆಯಲ್ಲಿ, 'ಬ್ರಾಂಚ್ ತಾಜಮಹಾಲ್' ಎಂಬ ಹೆಸರಿನಿಂದ ಮತ್ತೊಂದು ಶಾಖೆಯು ತೆರೆಯಲ್ಪಟ್ಟಿತು; ೧೯೩೪ರಲ್ಲಿ, ರಥಬೀದಿಯಲ್ಲಿ 'ತಾಜಮಹಾಲ್' ಹೆಸರಿನಿಂದಲೇ ಮೂರನೇ ಶಾಖೆಯೊಂದು ಆರಂಭವಾಯಿತು; ೧೯೩೯ರಲ್ಲಿ ಅದು ವರೆಗೆ ಪಾಲುಗಾರಿಕೆಯಿಂದ ನಡೆಯುತ್ತಿದ್ದ "ಕೋಮಲವಿಲಾಸ"ವೂ 'ತಾಜಮಹಾಲಿ'ನ ಸಮರ್ಥ ಆಡಳಿತದೊಳಗೆ ಬಂತು. ಆ ಮೇಲೆ ೧೯೪೪ರಲ್ಲಿ ರಥಬೀದಿಯಲ್ಲಿ, 'ನ್ಯೂ ತಾಜಮಹಾಲ್ ಕೆಫೆ' ಎಂಬ ಹೆಸರಿನಿಂದ, ಈ ಮೊದಲಿನ ವ್ಯವಸ್ಥೆಗಳಿಗಿಂತಲೂ ಹಿರಿದಾದ ರೀತಿಯಲ್ಲಿ ಇನ್ನೊಂದು ಉಪಾಹಾರಗೃಹವು ಆರಂಭಿಸಲ್ಪಟ್ಟಿತು; ೧೯೪೮ರಲ್ಲಿ, ಮೈದಾನು ಕ್ರೊಸ್ ರೋಡಿನಲ್ಲಿರುವ "ಸೆಂಟ್ರಲ್ ಕೊಫಿ ಹೌಸ್" ಉಪಾಹಾರಗೃಹವನ್ನು "ತಾಜಮಹಾಲು" ತನ್ನ ಕೂಟದೊಳಗೆ ಸೇರಿಸಿಕೊಳ್ಳಲು ಒಪ್ಪಿ, ಅದರ ಸ್ವಾಮಿತ್ವವನ್ನು ಪಡೆಯಿತು. ಆ ಮೇಲೆ, ೧೯೪೯ನೇ ಜನವರಿಯಲ್ಲಿ ಮೇಲಿನ ಏಳೂ ಉಪಹಾರಗೃಹಗಳು, "ನ್ಯೂ ತಾಜಮಹಾಲ್ ಕೆಫೆ, ಲಿಮಿಟೆಡ್" ಎಂಬೀ ಲಿಮಿಟೆಡ್ ಸಂಸ್ಥೆಯ ಸ್ಥಾಪನೆಯಿಂದ, ಅದರ ಆಡಳಿತಕ್ಕೆ ಬಂದುವು. ೧೯೨೭ರಲ್ಲಿ ಸುಮಾರು ಇಪ್ಪತ್ತು ನೌಕರರಿಂದಾರಂಭವಾದ 'ತಾಜಮಹಾಲ್ ಹಿಂದೂ ರೆಸ್ಟೋರೆಂಟ್' ಉಪಾಹಾರಗೃಹದಲ್ಲಿ, ಇಂದು ಸುಮಾರು ನೂರುಮಂದಿ ನೌಕರರು ಇರುವರು; ತಾಜಮಹಾಲ್ ಹೊಟೇಲ್ ಕೂಟದೊಳಗೆ ಸುಮಾರು ೪೦೦ರ ವರೆಗೆ ನೌಕರರು ಇರುವರು. ದಕ್ಷಿಣ ಭಾರತದಲ್ಲಿ, ಪ್ರಾಯಶಃ ಭಾರತದಲ್ಲಿ, ಇಷ್ಟು ದೊಡ್ಡ ಸಿಬಂಧಿಯಿರುವ ಉಪಾಹಾರಗೃಹಗಳು ಮತ್ತಾವುವೂ ಇಲ್ಲ.

ಶ್ರೀಯುತ ಕುಡ್ವಿ ಗೋಪಾಲ ಶೆಣೈಯವರು, ೧೯೨೭ರಲ್ಲಿ, ತಮ್ಮ ಹಿರೀ ಮಗನೊಂದಿಗೆ ತಾಜಮಹಾಲನ್ನು ಆರಂಭಿಸುವಾಗ, ಅವರ ದ್ವಿತೀಯ ಮತ್ತು ತೃತೀಯ ಪುತ್ರರಾದ ಶ್ರೀ ವಾಸುದೇವ ಶೆಣೈ ಮತ್ತು ಕುಡ್ವಿ ಶ್ರೀನಿವಾಸ ಶೆಣೈ, ಅವರು



ಸೌಂದರ್ಯದ ಹಿನ್ನೆಲೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತಂ

ದಿವ್ಯ ಹೊಂಬಣ್ಣದ ಸಂಜೆಯ ಸೂರ್ಯ, ತಂಪಾದ ಸಮುದ್ರದ ಗಾಳಿ, ಸುಂದರವಾದ ದೋಣಿಗಳು ಸಾಗುತ್ತಲಿರುವ ನೋಟದ ಸಮುದ್ರತೀರ, ಮತ್ತು ಆ ಸಂತೋಷದಲ್ಲಿ ಭಾಗಿಗಳಾಗಿರಲು ಬಳಿಯಲ್ಲಿ ಮಮತೆಯ ಬಂಧು ಬಳಗ—ಇದರಿಂದ ಮಾನವನಲ್ಲಿ ಮಹದಾನಂದವು ಉಕ್ಕೇರುವುದು ನಿಶ್ಚಯ. ಆದರೆ, ಆ ಆನಂದಾನುಭವಕ್ಕೆ ಮುಂದಾಗಿ ಅವಶ್ಯವಾಗಿ ಒಳ್ಳೆಯ ಆರೋಗ್ಯವು ಬೇಕೇ ಬೇಕು. ಅರ್ಧ ಶತಮಾನಕ್ಕಿಂತಲೂ ಪೂರ್ವದಿಂದ ಪ್ರಖ್ಯಾತಿಹೊಂದಿರುವ "ಜೀವಾಮೃತಂ" ಆಶ್ಚರ್ಯಕರವಾದ ಶಕ್ತಿಯನ್ನುಂಟುಮಾಡಿ, ಶೋಭಾಪೂರ್ಣ ಆರೋಗ್ಯವನ್ನಿತ್ತು ಆ ಪರಮೋಲ್ಲಾಸವನ್ನುಂಟುಮಾಡುವುದು.



ಆಯುರ್ವೇದಾಶ್ರಮಂ, ಲಿಮಿಟೆಡ್

ಮದ್ರಾಸ್ 17.

ಆಡಳಿತ ವಿಭಾಗದಲ್ಲಿದ್ದರು. ಹಿರಿಯ ಪುತ್ರ ಶ್ರೀ| ಕೆ. ಪದ್ಮನಾಭ ಶೆಣೈಯವರು, ಕೆಲಕಾಲದಲ್ಲಿ ತಮ್ಮ ಸಂಬಂಧವನ್ನು ಬಿಟ್ಟರು. ಶ್ರೀ| ವಾಸುದೇವ ಶೆಣೈಯವರು, ತಾಜಮಹಾಲನ್ನು ಜನಪ್ರಿಯವಾಗಿ ಮಾಡುವ ಸತತ ಪ್ರಯತ್ನದಲ್ಲಿ ತೊಡಗಿದರು. ಶ್ರೀ| ಶ್ರೀನಿವಾಸ ಶೆಣೈಯವರು, ಆಡಳಿತ ವಿಭಾಗದಲ್ಲಿ ಶ್ರಮಿಸುವವರಾದರು.

ತಾಜಮಹಾಲನ್ನು ಜನಪ್ರಿಯವಾಗಿ ಮಾಡುವ ಕಾರ್ಯದಲ್ಲಿ ಯಾರ ಶ್ರಮವು ಹಿರಿದು ಎಂಬುದನ್ನು ನಾವು ಅಳೆಯಲು ಹೋಗುವುದಿಲ್ಲ. ಶ್ರೀ| ಗೋಪಾಲಕೃಷ್ಣ ಶೆಣೈಯವರ ವರ್ಚಸ್ಸು, ಶ್ರೀ| ವಾಸುದೇವ ಶೆಣೈಯವರ ನಗುಮೊಗ, ಶ್ರೀ| ಶ್ರೀನಿವಾಸ ಶೆಣೈಯವರ ವಿಚಕ್ಷಣ ಕಾರ್ಯಕ್ಷಮತೆ- ಇವು ಮೂರೂ ಸೇರಿ, ತಾಜಮಹಾಲು ಪ್ರಗತಿಯಿಂದ ಪ್ರಗತಿಗೆ ಮುಂದರಿದಿದೆ. ಶ್ರೀ| ಗೋಪಾಲ ಶೆಣೈಯವರು ತಮ್ಮ ೭೨ನೇ ವಯಸ್ಸಿನಲ್ಲಿ, (೧೯೫೫ ದಶಂಬರ) ಹೃದ್ರೋಗದಿಂದ ಕಾಲವಾದರು; ಅದಾದ ಒಂಬು ತಿಂಗಳಲ್ಲಿ, ಶ್ರೀ| ವಾಸುದೇವ ಶೆಣೈಯವರನ್ನೂ, ವಿಧಿಯು (೧೯೫೭ನೇ ಜನವರಿ) ಒಯ್ದಿತು. ಇವರಿಬ್ಬರ ನಿಧನಕ್ಕಾಗಿ, ತಾಜಮಹಾಲಿನ ಸಿಬಂಧಿಯಲ್ಲದೆ ಅವರ ಸಾವಿರಾರು ಬಂಧು ಬಾಂಧವರೂ ಮಿತ್ರರೂ ಪರಿತಪಿಸಿರುವರು; ಇಂದಿಗೂ ತಾಜಮಹಾಲಿನ ಅನೇಕ ಕೆಲಸಗಾರರು, ಅವರನ್ನು ಪ್ರೀತ್ಯಾದರಗಳಿಂದ ಸ್ಮರಿಸುತ್ತಿರುವರು; ಅವರ ಔದಾರ್ಯ, ಕ್ಷಮಾಶೀಲತೆಗಳನ್ನು ಕೊಂಡಾಡುತ್ತಿರುವರು.

ಹಿರಿಯರಿಬ್ಬರ ನಿಧನದಿಂದ—ಶ್ರೀ| ಕುಡ್ವಿ ಶ್ರೀನಿವಾಸ ಶೆಣೈಯವರು ಅಧೀರರಾಗದೆ, ಕರ್ತವ್ಯಚ್ಯುತಿ ತೋರದೆ, ಸಮಸ್ತ ಆಡಳಿತದ ಭಾರವನ್ನು ತಾವೊಬ್ಬರೇ ವಹಿಸಿದರು. ಅವರಿಬ್ಬರ ವಿಶಿಷ್ಟವಾದ, ಪ್ರತ್ಯೇಕವಾದ ಗುಣಗಳಾವುವು ಇದ್ದುವೋ ಅವು ಇವರಲ್ಲೂ ಒಡೆದು ಕಾಣಿಸಿಕೊಂಡು, ಆ ಆಡಳಿತದ ಮಹಾಭಾರವನ್ನೆಲ್ಲ ಇವರೊಬ್ಬರೇ ನಡೆಸುವ ಅಸಾಮಾನ್ಯ ಸಾಮರ್ಥ್ಯವು ತೋರಿತು.

ಹೊಟೇಲು ಕೆಲಸಗಾರರಿಗೆ "ಪ್ರೊವಿಡೆಂಟ್ ಫಂಡ"ನ್ನು, (ದಕ್ಷಿಣ ಭಾರತದಲ್ಲಿ ಪ್ರಾಯಶಃ ಇಂದಿಗೂ ಈ ಫಂಡ್ ಇತರ ಹೊಟೇಲುಗಳಲ್ಲಿಲ್ಲ) ತಾಜಮಹಾಲು ಆರಂಭಿಸಿತು. ಹೊಟೇಲು ಕೆಲಸಗಾರರಿಗೆ, ಕಾಲಕಾಲದ ಸ್ಥಿತಿಗತಿಗಳನ್ನನುಸರಿಸಿ ಕೊಡಲ್ಪಡುವ ತಲಬು, ಭಡತಿ ಮತ್ತು ಇತರ ಸೌಕರ್ಯಗಳಲ್ಲೂ ತಾಜಮಹಾಲು, ಉದಾರಶೀಲವನ್ನು ತೋರಿದೆ.

ಮೈದಾನು ಕ್ರೊಸ್ ರೋಡಿನಲ್ಲಿ ದಿ| ಕುಡ್ವಿ ಗೋಪಾಲಕೃಷ್ಣ ಶೆಣೈಯವರ ಸ್ಮಾರಕವಾಗಿ ಎರಡು ಮಹಡಿಗಳ ದೊಡ್ಡ ಕಟ್ಟಡವು ರಾರಾಜಿಸುತ್ತಿದೆ; ಬಡ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಮತ್ತು ಇತರ ದಾನಧರ್ಮಾದಿಗಳಿಗಾಗಿ ಪ್ರತ್ಯೇಕ 'ಟ್ರಸ್ಟ್' ಒಂದು ಇದೆ. ಶ್ರೀ| ಕುಡ್ವಿ ಗೋಪಾಲಕೃಷ್ಣ ಶೆಣೈಯವರೂ ಶ್ರೀ| ವಾಸುದೇವ ಶೆಣೈಯವರೂ ಕೊಡುಗೈಯವರಾಗಿದ್ದರು ಎಂಬುದನ್ನು ಜಿಲ್ಲೆಯ ಅನೇಕ ವ್ಯಾಪಾರಿಗಳೂ ಇತರರೂಬಲ್ಲರು. ಇಂದು ಶ್ರೀ| ಶ್ರೀನಿವಾಸ ಶೆಣೈಯವರು ಆ ದಾನ-ಧರ್ಮಗಳ ಪುಣ್ಯಕಾರ್ಯವನ್ನು ಇತ್ಯೋಪತಿಶಯವಾಗಿ ನಡೆಸುತಿದ್ದಾರೆ. ಅವರು ಶಿಕ್ಷಣ ಹೊಂದಿದ ಶಾಲೆಗೆ ಮಾತ್ರವಲ್ಲ—ಇತರ ನೂರಾರು ವಿದ್ಯಾಲಯಗಳಿಗೆ, ದೇವಾಲಯಗಳಿಗೆ, ಇತರ ಧರ್ಮ ಸಂಸ್ಥೆಗಳಿಗೆ ಅವರ ಸೇವೆ ಸಂದಿದೆ, ಸಲ್ಲುತ್ತಿದೆ. ಶ್ರೀ| ಶ್ರೀನಿವಾಸ ಶೆಣೈಯವರಿಂದ ಸಹಾಯ ಪಡೆದು ವ್ಯಾಪಾರ ಧಂಧೆಗಳಲ್ಲಿ ಪ್ರಗತಿ ಹೊಂದಿದವರೂ ಇದ್ದಾರೆ. ವಿವಾಹಾದಿ ಕಾರ್ಯಗಳಿಗೆ, ಶಿಕ್ಷಣಕ್ಕೆ—ಸಹಾಯಧನ ಪಡೆದು ಉಪಯೋಗ ಹೊಂದಿದವರಿದ್ದಾರೆ. ಈ ಸಂಖ್ಯೆಯು ದೊಡ್ಡದಿದೆ. ಇದೆಲ್ಲ ಪುಣ್ಯಕಾರ್ಯವನ್ನು ಶ್ರೀ| ಶ್ರೀನಿವಾಸ ಶೆಣೈಯವರು, ಗುಲ್ಲು ಇಲ್ಲದೆ, ಪ್ರಶಂಸೆಯಿಲ್ಲದೆ, ಮೌನವಾಗಿ ನಡೆಸಿರುವರು.

ಹೆಸರಾದ ಸಂಸ್ಥೆಯಿಂದ ಮನುಷ್ಯನು ಬೆಳಗುವುದೂ ಉಂಟು; ಆದರೆ, ಮನುಷ್ಯನ ಯೋಗ್ಯತೆಯಿಂದಲೂ ಸಂಸ್ಥೆ ಬೆಳಗಬೇಕು; ಬೆಳಗುವುದುಂಟು. ಸಮರ್ಥ ಆಡಳಿತದಿಂದಲೇ ಸಂಸ್ಥೆಯ ಕೀರ್ತಿ ಹಬ್ಬುವುದು. ಶ್ರೀ| ಶ್ರೀನಿವಾಸ ಶೆಣೈಯವರು 'ತಾಜಮಹಾಲು' ಸಂಸ್ಥೆಯಿಂದ ಬೆಳಗಿದವರಲ್ಲ, ಅವರಿಂದ ತಾಜಮಹಾಲು ಶೋಭಿಸಿದೆ.

ಹಣವನ್ನು ಕೂಡಹಾಕುವುದೊಂದು ಕಲೆ. ಆದರೆ, ಕೂಡಿಕೆಯಾದ ಹಣದ ಸದ್ವಿನಿಯೋಗ ಮಾಡುವುದು, ಅದಕ್ಕಿಂತಲೂ ದೊಡ್ಡ ಕಲೆಯೆನಿಸುವುದು. ಕೂಡಹಾಕುವಲ್ಲಿ, ಯಶಸ್ಸು ನೊರೆಯಲಿ ದೊರೆಯದಿರಲಿ—ಎಲ್ಲರೂ ಯತ್ನ ಮಾಡುವವರೇ; ಆದರೆ, ವ್ಯಯಿಸುವುದರಲ್ಲಿ ಯಾರ ಯತ್ನವಿದೆ? ಹಲವು ಧನಿಕರು ವ್ಯಯಿಸದ ಕಾರಣವೇ ಧನಿಕರಾದರು; ದಣಿಯದೆ ವ್ಯಯಿಸಿಯೂ ಪ್ರಗತಿಯಿಂದ ಪ್ರಗತಿಗೆ ಮುನ್ನಡೆವವರು ವಿರಲ.

ಧನಸಂಗ್ರಹದ ಗುಣಕ್ಕಿಂತ ಹಿರಿದಾದ ಗುಣವು ವಿಶಾಲಹೃದಯವೆ. ಒಬ್ಬನ ಜೀವಿತವು ಸಾರ್ಥಕವಾಗಬೇಕಾದರೆ, ಅವನಿಂದ ಪ್ರಭಾವಿತರಾಗಿ, ಅಥವಾ ಅವನ ಸಹಾಯದಿಂದ ಮೇಲ್ಮೆ ಹೊಂದಿದವರು ಕಾಣಿಸಬೇಕು. ತನ್ನೊಂದಿಗೆ ಇತರರೂ ಜೀವನದಲ್ಲಿ ಯಶಸ್ವಿಯಾಗುವಂತೆ, ಬದುಕಿಕೊಳ್ಳಲು ಚೇತನ ಹೊಂದುವಂತೆ, ಸಮರ್ಥನು, ಹಣವಂತನು, ಸಹಾಯಮಾಡಬೇಕು; ಯತ್ನಿಸಬೇಕು. ಇದೇ ಜೀವನದ ಉದ್ದೇಶವೂ ಆಗಿದೆ—

—ಶ್ರೀ| ಕುಡ್ವಿ ಶ್ರೀನಿವಾಸ ಶೆಣೈಯವರಲ್ಲಿ ನಾವು ಆ ಉದಾರ ಹೃದಯವನ್ನು ಕಾಣುತಿದ್ದೇವೆ. ತಾಜಮಹಾಲಿನ ರಜತೋತ್ಸವವು ಅವರ ವಿಶಾಲ ಬುದ್ಧಿಯ ಹೆಗ್ಗುರುತು. ಅದಕ್ಕೆ ನಾವು ಸ್ವರ್ಣೋತ್ಸವ--ವಜ್ರೋತ್ಸವ--ಶತಮಾನೋತ್ಸವಗಳನ್ನು ಬಯಸುವೆವು.

Hindusthan Co-Operative Insurance Society Ltd.,

H. O. CALCUTTA : : : Estd: 1907.

....

"SPEAKS IN CRORES"

Extract from the Balance Sheet for the year 1949

Tolal Business on the books as on 31-12-1949	Rs. 69,73,23,218
NEW BUSINESS COMPLETED DURING THE YEAR 1949	,, 13,36,06,243
Total Assets of the Society as on 31st December, 1949	,, 15,88,07,289
Total Life Assurance Fund as on 31--12--1949	,, 14,15,25,386

To represent or insure contact:

K. S. RAMIAH.

Branch Manager,

Kempegowda Road, Bangalore, 2.

✻ ಬೇಲಾ ✻



ಶ್ರೀ। ಬಿ. ವಿ. ಬಾಳಿಗ, ಮಂಗಳೂರು.

ಅವಳೋರ್ವ ಸಿನೇಮಾ ನಟಿ. ಬೇಲಾ ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಳು. ಮೌನ ಚಿತ್ರಗಳ ಯುಗದಲ್ಲಿ ತುಂಬಾ ಹೆಸರು ಗಳಿಸಿದವಳು.

ಎಷ್ಟು ಸುಂದರಿಯೋ ಅಷ್ಟೇ ಧೀರಳೂ ಆಗಿದ್ದಳು. ಹರೆಯ ಮೂವತ್ತು ದಾಟಿದರೂ ತಾರುಣ್ಯ ಅವಳನ್ನು ಬಿಟ್ಟಿರಲಿಲ್ಲ. ಪ್ರಾಯ ಹೆಚ್ಚಿದಷ್ಟಕ್ಕೆ ಅವಳ ಲಾವಣ್ಯವೂ ಹೆಚ್ಚುತಿತ್ತು. ಅವಳನ್ನು ಒಮ್ಮೆ ನೋಡುವುದೆಂದರೆ ಅವಳ ಮೋಹಗಳಿಸಿದಷ್ಟೇ ಅನುಭವ ಪ್ರಾಪ್ತವಾಗುತಿತ್ತು. ಚಲಚ್ಚಿತ್ರ ನಿರ್ಮಾತರು, ದಿಗ್ದರ್ಶಕರು, ನಟರು ಎಲ್ಲರೂ ಬೇಲಳಿಗಾಗಿ ಕಣ್ಣು ಬಾಯಿ ಬಿಡುತ್ತಿದ್ದರು.

ಆದರೆ ಬೇಲಾ ವಿಚಿತ್ರ ಸ್ತ್ರೀ. ಆಕೆಗೆ ಗಂಡಸರನ್ನು ಕಾಣುವುದು ಒಗ್ಗುತ್ತಿರಲಿಲ್ಲ. ದುಷ್ಟ ಹಾವನ್ನು ದ್ವೇಷಿಸುವಷ್ಟು ಅಸೂಯೆಯಿಂದ ಪುರುಷರನ್ನು ಕಾಣುತ್ತಿದ್ದಳು. ಪುರುಷ ಜಾತಿಯ ಮೇಲಿನ ಅವಳ ಈ ದ್ವೇಷಕ್ಕೆ ಬಾಲ್ಯಪ್ರಾಯದ ಒಂದು ಅಸಹನೀಯ ಅನುಭವವೇ ಕಾರಣವಾಗಿತ್ತು. ಬೇಲಳ ತಂದೆ ಕ್ರೂರನೂ ಪಾಷಾಣ ಹೃದಯಿಯೂ ಆಗಿದ್ದನು. ಬೇಲಳ ತಾಯಿಯನ್ನು ಪರಿಪರಿಯಾಗಿ ಪೀಡಿಸುತ್ತಿದ್ದನು. ಅದೊಂದು ದಿನ ಸಿಟ್ಟಿನ ಭರದಲ್ಲಿ ಹೊಡೆದ ಏಟಿನಿಂದಲೇ ಬೇಲಳ ತಾಯಿಯ ಅವಸಾನವಾಗಿತ್ತು. ತಾಯಿಯನ್ನು ಹಿಂಸಿಸುವ ಕ್ರೂರ ತಂದೆಯನ್ನು ಎದುರಿಸಲು ಹೋಗಿ ಬೇಲಳೇ ಎಷ್ಟೋ ಬಾರಿ ಏಟುಗಳನ್ನು ಸಹಿಸಿದ್ದಳು. ತಂದೆಯೊಟ್ಟಿಗೆ ಬಾಳು ನೀರಸವೆಂದು ಕಂಡು ಬಂದು ತನ್ನ ಹದಿನೇಳನೆ ವಯಸ್ಸಿನಲ್ಲಿ ಆಕೆ ಮನೆಯಿಂದ ಓಡಿ, ಮುಂಬಾಯಿಗೆ ಬಂದು ಚಲಚ್ಚಿತ್ರಗಳಿಗೆ ಸೇರಿದ್ದಳು. ಆರಂಭದಲ್ಲಿ ಚಿಕ್ಕ ಪುಟ್ಟ ಪಾತ್ರಗಳನ್ನು ಅಭಿನಯಿಸಿ, ಕೊನೆಗೆ ಸ್ವಯೋಗ್ಯತೆಯಿಂದ ಹೆಮ್ಮೆಯ ಸ್ಥಾನವನ್ನು ಗಳಿಸಿದ್ದಳು.

ಪುರುಷರ ಆಕರ್ಷಣೆಯನ್ನು ಗೆಲುವಷ್ಟು ಸಮರ್ಥಳು ತಾನಾದೆನೆಂದು ಎಂದಿನಿಂದ ಖಚಿತವಾಯಿತೋ ಅಂದಿನಿಂದಲೇ ಪುರುಷ ಜಾತಿಯ ಮೇಲೆ ಸೇಡು ತೀರಿಸುವ ಪ್ರತಿಜ್ಞೆಯನ್ನೂ ಆಕೆ ಮನಸ್ಸಿನಲ್ಲೇ ಕೈಕೊಂಡಿದ್ದಳು. ಅವರ ಹೃದಯಗಳನ್ನು ಪೂರ್ಣ ಸೂರೆಗೊಂಡು, ಯಾರೊಬ್ಬನಿಗೂ ಪ್ರತಿಪ್ರೇಮದ ಭಿಕ್ಷೆ ನೀಡದೆ ಎಷ್ಟೋ ಮಂದಿಯ ಎದೆ ಒಡೆದಿದ್ದಳು. ಇದೀಗ ಮೂವತ್ತೈದು ವರ್ಷ ಪ್ರಾಯದ ತರುಣಿಯಾದ ಬೇಲಳ ಪ್ರೇಮ ಯಾಚನೆಯಲ್ಲಿ ಭಗ್ನ ಮನೋರಥರಾಗಿ, 'ಈ ಕನಸಿನ ರಾಣಿಯ ಮನ ಒಲಿಸಿಕೊಳ್ಳಲು ಸಾಧ್ಯವಾಗದೆ ಹೋಯಿತಲ್ಲ' ಎಂಬ ನಿರಾಸೆಯಿಂದ ಜೀವನದಲ್ಲಿ ಅಂಧಕಾರವನ್ನು ಕಂಡವರು ಹಲವರಿದ್ದರು.

ಯಾವುದೇ ಚಲಚ್ಚಿತ್ರ ಕಂಪೆನಿಯೊಡನೆ ಕರಾರಿಗೆ ಸಹಿಮಾಡುವಾಗ ಬೇಲಾ ಈ ಒಂದು ಶರ್ತವನ್ನು ತಪ್ಪದೆ ಮುಂದಿಡುತ್ತಿದ್ದಳು: 'ತನಗೆ ಯೋಗ್ಯವೆಂದು ಕಂಡು ಬಂದ ಪಾತ್ರವನ್ನು ಮಾತ್ರ ತಾನು ಆರಿಸುವೆನು, ನಾಯಕನನ್ನು ಮೋಹಿಸುವ ಯಾವುದೇ ದೃಶ್ಯವಿದ್ದರೆ ಅದನ್ನು ಮನ್ನಾಮಾಡಲು ತನಗೆ ಸ್ವಾತಂತ್ರ್ಯವಿರಬೇಕು'. ಬೇಲಳು ಚಿತ್ರದಲ್ಲಿ ಅಭಿನಯಿಸಬೇಕೆಂಬ ಉತ್ಕಟೇಚ್ಛೆಯಿದ್ದ ಚಲಚ್ಚಿತ್ರ ನಿರ್ಮಾಪಕರು ಈ ಶರ್ತವನ್ನು ಅಂಗೀಕರಿಸುತಿದ್ದರು.

ಪ್ರೇಮದಲ್ಲಿ ಪುರುಷರನ್ನು ನಿರಾಶರನ್ನಾಗಿ ಮಾಡಿ ಜೀವಂತ ಕೊಲ್ಲುವ ನಿರ್ದಯ ಪ್ರೇಯಸಿಯ ಪಾತ್ರಗಳು ಬೇಲಳಿಗೆ ಚೆನ್ನಾಗಿ ಮೆಚ್ಚಿಕೆಯಾಗುತ್ತಿದ್ದುವು. ಪ್ರೇಮಕ್ಕಾಗಿ ಮನೆಮಾರು ಕಳಕೊಂಡು ಸರ್ವನಾಶ ತಂದೊಡ್ಡಿದ ಪುರುಷರ ಕಥೆಗಳಿದ್ದರೆ ಅಂತಹ ಚಿತ್ರಗಳಲ್ಲಿ, ಬೇಲಳ ಅಸಾಧಾರಣ ಅಭಿನಯ ಕಾಣಬಹುದಾಗಿತ್ತು.

ನಟನಾ ಪ್ರಪಂಚದಲ್ಲಿ ಅಪ್ರತಿಮ ಖ್ಯಾತಿಗಳಿಸಿದಂತೆ ವಾಕ್ಚಾತುರ್ಯದಲ್ಲೂ ಹೆಸರು ಹೋದವಳು ಬೇಲಾ. ಯಾವುದೇ ಭಾಷಣ ಕೂಟಗಳಲ್ಲಿ ! ಇಲ್ಲವೆ ಚರ್ಚಾ ಕೂಟಗಳಲ್ಲಿ ಬೇಲಳ ಭಾಷಣವಿದೆಯೆಂದರೆ ಶ್ರೋತೃವೃಂದವು ಆನಂದದಿಂದ ಸೇರುತಿತ್ತು. ಎಳೇ ಪ್ರಾಯದ, ಉನ್ನತ ಆಕಾಂಕ್ಷೆಗಳನ್ನು ಕಟ್ಟಿಕೊಂಡ ಹುಡುಗಿಯರಿಗೆ ಆಗಾಗ ಹಿತವಾದಗಳನ್ನು ಕೊಡುತ್ತಿದ್ದಳು.

ರಾಮತೀರ್ಥ ಬ್ರಾಹ್ಮಿ ತೈಲ



(ಸ್ಪೆಶಲ್ ನಂ. ೧) (ಮೆಡಿಕೇಟೆಡ್)

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0 ಸಣ್ಣ ಬಾಟ್ಲಿಗೆ ರೂ. 2—0—0.

ಕ್ರಯ: ದೊಡ್ಡ ಬಾಟ್ಲಿಗೆ ರೂ. 5-5-0 ಮತ್ತು ಸಣ್ಣ ಬಾಟ್ಲಿಗೆ ರೂ. 3-7-0 (ಪೋಸ್ಟೇಜು ಪ್ಯಾಕಿಂಗ್ ಸಹಿತ)

ಮನಿ ಆರ್ಡರ್ ಮಾಡಿರಿ. ವಿ. ಪಿ. ಕಳಿಸಲಾಗುವುದಿಲ್ಲ.

ಶ್ರೀ ರಾಮತೀರ್ಥ ಯೋಗಾಶ್ರಮ

"ಉಮೇಶಧಾಮ್", 27, ವಿನ್ಸೆಂಟ್ ಸ್ಕ್ವೆರ್ ಸ್ಟ್ರೀಟ್ ನಂಬ್ರ 2, ದಾದರ್ (ಜಿ. ಐ. ಪಿ.) ಮುಂಬಯಿ ೧೪.



ವಾಸುದೇವಾಶ್ರಮ

(ಮುಂಬಾಯಿಯ ಜನಾದರಣೀಯ ಉಪಾಹಾರಗೃಹ ಮತ್ತು ಭೋಜನಗೃಹ)

ಹರಿಶ್ಚಂದ್ರ ಗೋರೆಗಾಂವಕರ ರೋಡ್,

ಗಾಂವದೇವಿ, ಮುಂಬಾಯಿ ೭.

ರುಚಿ-ಶುಚಿಗಳಿಗೆ—ವಿವಿಧ ತಿಂಡಿ ತಿನಸುಗಳಿಗೆ-ಚಹಾ, ಕಾಫಿ ಮೊದಲಾದ ಪಾನೀಯಗಳಿಗೆ— ಮುಂಬಾಯಿಯಲ್ಲಿ ವಾಸಿಸಿರುವ ಸಕಲ ದಕ್ಷಿಣ ಕನ್ನಡಿಗರಿಗೆ

ಮಂಗಳೂರು ಮಾದರಿಯ ಹೋಟೆಲು.

ನಿಮ್ಮ ಸೇಹಿತರೊಂದಿಗೆ ಸಂದರ್ಶಿಸಿ, ಆನಂದಪಡೆಯಿರಿ.

(ಮಂಗಳೂರು ಮಾದರಿಯ ಊಟಗಳು ದೊರೆವುವು)

ಪ್ರೊಪ್ರೈಟರ್: **ಕೆ. ವಿ. ಎನ್. ಶೆಣ್ಯೆ.**



ದಿ| ಕುಡ್ಪಿ ಗೋಪಾಲ ಶೆಣೈಯವರು.



ದಿ| ಕುಡ್ಪಿ ವಾಸುದೇವ ಶೆಣೈಯವರು.



ಶ್ರೀ ಆರ್. ಎಮ್. ಕಿಣಿಯವರು.
ಮಂಗಳೂರು ಸಿಟಿಬೇಂಕ್, (ರಿಜಿಸ್ಟರ್ಡ್) ಮಂಗಳೂರು.
ಇದರ ಸ್ಥಾಪಕರು.



ಶ್ರೀ ಯು. ವಾಸುದೇವ ಪ್ರಭುಗಳವರು.
ಉಡಿಪಿ ಬೇಂಕ್ ಲಿಮಿಟೆಡ್, ಇದರ ಮೆನೇಜರರು.

“ಮಹಿಳೆಯರು ಇಂದಿನ ತಮ್ಮ ಶೋಚನೀಯಾವಸ್ಥೆಯಿಂದ ಉದ್ಧಾರ ಹೊಂದಿ, ಚೇತನಮಯವಾದ ನವಸೃಷ್ಟಿಯನ್ನು ಸ್ಥಾಪಿಸಬೇಕು. ಮಹಿಳೆಯರ ಜೀವನದಲ್ಲಿ ಸುಧಾರಣೆಯಾಗಬೇಕು; ಕ್ರಾಂತಿಯಾಗಬೇಕು. ಸ್ತ್ರೀಯರನ್ನು ಅಂಕೆಯಲ್ಲಿಟ್ಟುಕೊಂಡು ಅವರ ಮೇಲೆ ಅಧಿಕಾರ ಚಲಾಯಿಸುವ ಪುರುಷರಿಗೆ ತಕ್ಕ ಶಾಸ್ತಿಯಾಗಬೇಕು” ಎಂದೆಲ್ಲಾ ಉದ್ರೇಕಿಸುವ ವಾಗ್ಬಾಣಗಳೂ ಬೇಲಳ ಭಾಷಣದ ಬತ್ತಳಿಕೆಯಲ್ಲಿ ಕಡಿಮೆಯಾಗುತ್ತಿರಲಿಲ್ಲ. ‘ಪುರುಷ ದ್ವೇಷಿಗಳ ಕೂಟ’ ಎಂಬ ಒಂದು ಗುಪ್ತ ಸಂಸ್ಥೆಯನ್ನೂ ಆಕೆ ಆರಂಭಿಸಿ ಅದರ ಸಂಚಾಲಿಕೆಯಾಗಿದ್ದಳು. ಪುರುಷ ಜಾತಿಯಿಂದ ತಿರಸ್ಕೃತರಾಗಿ ಗೋಳಿನ ಬಾಳು ನಡೆಸುತ್ತಿರುವ ಹಲಮಂದಿ ವಿಧವೆಯರು, ಅವಿವಾಹಿತ ಕನ್ಯೆಯರು, ಹುರುಪಿನ ನವತರುಣಿಯರು, ಮತ್ತು ಸುಧಾರಿತ ಮಹಿಳೆಯರು ಈ ಸಂಘದ ಸದಸ್ಯೆಯರಾಗಿದ್ದರು.

ಬೇಲಳ ಖಾಸಗಿ ಜೀವನವು ಬೇಲಳ ಕಾರ್ಯದರ್ಶಿನಿ ಮಾಲಾಳಿಗಲ್ಲದೆ ಇತರ ಯಾರಿಗೂ ತಿಳಿದಿರಲಿಲ್ಲ. ಮಾಲಳೊಡನೆ ಮಾತ್ರ ತನ್ನ ಪ್ರತಿಯೊಂದು ಅಂತರಂಗದ ಭಾವನೆಯನ್ನು ಬೇಲಾ ಮನಬಿಚ್ಚಿ ಹೇಳುತ್ತಿದ್ದಳು.

ಮಾಲಳನ್ನು ಮುಂಬಾಯಿಯ ಪತ್ರಿಕೋದ್ಯೋಗಿಯೊಬ್ಬನು ಪ್ರೀತಿಸುತ್ತಿದ್ದನು. ಬೇಲಳ ಮೋಹಕ್ಕಾಗಿ ಹಂಬಲಿಸಿ ನಿರಾಶರಾದವರಲ್ಲಿ ಈ ಪತ್ರಿಕೋದ್ಯೋಗಿಯೊಬ್ಬನು. ಪ್ರೇಮದಾಹದಿಂದ ಕಂಗೆಟ್ಟು ಒಣಗಿ ಹೋದ ಅವನ ಶುಷ್ಕಹೃದಯದಲ್ಲಿ ಮಾಲಾ ತಿಳಿನೀರಿನ ಆಸರೆಯಾದಳು. ಮಾಲಳಿಂದ ಬೇಲಳ ಖಾಸಗಿ ಜೀವನದ ವಿಚಾರ ಅರಿತುಕೊಳ್ಳಬೇಕೆಂದು ಜೀವನ್ (ಅದು ಪತ್ರಿಕೋದ್ಯೋಗಿಯ ಹೆಸರು) ಅಹೋರಾತ್ರ ಹಂಬಲಿಸುತ್ತಿದ್ದನು. ಆದರೆ ಅದು ಅವಳ ಜೀವನದ ಮರ್ಮ, ಯಾವ ಬೆಲೆ ತೆತ್ತರೂ ಅದನ್ನು ಅವಳು ತೆರಲಾರಳು ಎಂಬುದು ಜೀವನನಿಗೆ ಚೆನ್ನಾಗಿ ಗೊತ್ತು. ಸಮಯ ಸಾಧಿಸಿ ಈ ರಹಸ್ಯವನ್ನು ಅರಿತುಕೊಳ್ಳಬೇಕೆಂದು ಅವನು ಕಾಯುತ್ತಿದ್ದನು.

ಜೀವನನನ್ನು ಮಾಲಾ ಜೀವಕ್ಕಿಂತ ಅತಿಯಾಗಿ ಪ್ರೀತಿಸತೊಡಗಿದಳು. ಅವರ ಪರಸ್ಪರ ಅನುರಾಗ ಬೆಳೆಯಿತು. ಅಗಲಲು ಬಾರದ ಜೊತೆವಕ್ಕಿಗಳಂತೆ ಪ್ರಣಯವು ಸಾಗತೊಡಗಿತು. ಬೇಲಳು ತನ್ನಲ್ಲಿ ಗಳಿಸಿದಂತಹ ಅಖಂಡ ವಿಶ್ವಾಸವನ್ನೇ ಮಾಲಾ ಜೀವನನಲ್ಲಿ ತಾಳಿದಳು. ತನ್ನ ಮನೋಕಾಂಕ್ಷೆ ಫಲಿಸುವ ಗಳಿಗೆ ಉದಯಿಸಿತೆಂಬುದನ್ನು ಜೀವನ ಅರಿತುಕೊಂಡನು. ಅದೊಂದು ದಿನ ಮನಬಿಚ್ಚಿ ತನ್ನ ಪ್ರೇಯಸಿಯೊಡನೆ ತನ್ನ ಮನಸ್ಸಿನ ಉಮ್ಮಳವನ್ನು ನಿವೇದಿಸಿಕೊಂಡನು. ಮಾಲಾ ಒಪ್ಪಿದಳು. ಅಂದು ರಾತ್ರಿ ಹನ್ನೆರಡು ಗಂಟೆಗೆ ತಾನಿದ್ದಲ್ಲಿಗೆ ಬಂದರೆ ಎಲ್ಲವನ್ನೂ ಪ್ರತ್ಯಕ್ಷ ಕಾಣಬಹುದೆಂದು ಹೇಳಿದಳು.

ಮನೆ ಸೇರಿದ ಜೀವನ ಮಧ್ಯರಾತ್ರಿ ಎಂದು ಮೂಡುವು

ದೆಂದು ಧ್ಯಾನಾಸಕ್ತನಾಗಿದ್ದನು. ಸಮಯ ಕಳೆಯಲು
ಟಾಗೋರರ "ಡುಬೀ ನೌಕಾ" ಪುಸ್ತಕ ಓದತೊಡಗಿದ.
ಗಡಿಯಾರವು ಹತ್ತು ಬಡೆಯಿತು. ಪುಸ್ತಕವನ್ನು ಕೆಳಗಿಟ್ಟು
ಬೇಲಳ ಮನೆಗೆ ಹೊರಡುವ ಸಿದ್ಧತೆಗಾರಂಭಿಸಿದನು. ಎಲ್ಲಾ
ಸಿದ್ಧತೆ ಮುಗಿಯುವ ಹೊತ್ತಿಗೆ ಮನೆಯ ಗಡಿಯಾರ
ಹನ್ನೊಂದು ಬಡೆಯಿತು. ಜೀವನನ ಮನೆಯಿಂದ ಬೇಲಳ
ಬಂಗ್ಲೆಗೆ ಸುಮಾರು ಒಂದು ಮೈಲಿನ ಅಂತರವಿತ್ತು. ಬಂಗ್ಲೆಗೆ
ನೂರು ಗಜ ದೂರವಿದೆಯೆನ್ನುವಾಗ ಮಾಲಳ ಕೋಣೆಯಲ್ಲಿ
ದೀಪ ಉರಿಯುವುದು ಕಾಣುತ್ತಿತ್ತು. ಮಾಲಾ ಮೋಸ
ಮಾಡಲಿಲ್ಲ, ತನ್ನ ಆಗಮನವನ್ನೇ ಹಾರೈಸಿ ಎಚ್ಚರದಿಂದಿ
ದ್ದಾಳೆ ಎಂದು ತಿಳಿದ ಜೀವನನಿಗೆ ಆನಂದವಾಯಿತು.

ಜೀವನನು ಬಂಗ್ಲೆ ಸೇರಿಯಾಯಿತು. ಹಿಂದಿನ ಬಾಗಿಲಿ
ನಿಂದ ಮಾಲಾ ಅವನನ್ನು ಒಳಗೆ ಬರಮಾಡಿದಳು. ಕಾಲಿನ
ಸಪ್ಪಳದ ಸದ್ದಾಗದಂತೆ ಬೂಟ್ಸುಗಳನ್ನು ಕಳಚಿಟ್ಟಾಯಿತು.
ಕತ್ತಲೆ ತುಂಬಿದ ಒಂದು ಚಿಕ್ಕ ಒಳ ಜಗಲಿಯನ್ನು ದಾಟಿದರೆ
ಅಲ್ಲಿಯೇ ಬೇಲಳ ಶಯ್ಯಾಗೃಹವಿತ್ತು. ಮಾಲಾ ಜೀವನ
ನನ್ನು ಅಲ್ಲಿಗೆ ಕರೆದೊಯ್ದಳು. ಮೊಣಕಾಲೂರಿ ಬಾಗಿಲಿನ
ಬೀಗದ ತೂತಿನಿಂದ ಜೀವನ ಬೇಲಳ ಕೋಣೆಯೊಳಗೆ ಇಣು
ಕಿದ. ಒಳಗೆ ಮಂದ ಪ್ರಕಾಶದ ಒಂದು ದೀಪ ಉರಿಯು
ತ್ತಿತ್ತು. ಆದರೆ ಒಳಗಿರುವ ಪ್ರತಿಯೊಂದು
ವಸ್ತು ಸ್ಪಷ್ಟವಾಗಿ ಕಾಣುವಷ್ಟು ಬೆಳಕು
ಅಲ್ಲಿ ಹರಡಿಕೊಂಡಿತ್ತು. ಪ್ರಮಾದ
ವಶಾತ್ ಅಜಾಗ್ರತೆಯಾಗಬಹುದೆಂದು
ಬೆದರಿ ಮಾಲಾ ಮುಂಜಾಗ್ರತೆಗಾಗಿ
ಜೀವನನ ಬಾಯಿಗೆ ಅವಳ ಕರವಸ್ತ್ರ
ಕಟ್ಟಿದ್ದಳು. ಹಾಗಾಗಿ ಅಪ್ಪಿತಪ್ಪಿ ಜೀವ
ನನ ಬಾಯಿಂದ ಪಿಸುಮಾತಿಗೂ ಅವ
ಕಾಶವಿರಲಿಲ್ಲ.

ಅಲ್ಲಿ ಎಂದೂ ಮರೆಯದ ದೃಶ್ಯ
ವೊಂದು ಜೀವನನನ್ನು ಸ್ತಂಭೀಭೂತನ
ನ್ನಾಗಿ ಮಾಡಿತು. ಮಲಗುವ ಪೋಷಾ
ಕಿನಲ್ಲಿ ಬೇಲಾ ಇನ್ನಷ್ಟು ಲಾವಣ್ಯಮ
ಯಿಯಾಗಿ ತೋರುತ್ತಿದ್ದಳು. ಅದೊಂ
ದು ಸೋಫಾದಲ್ಲಿ ಅಡ್ಡ ಒರಗಿ, ಸುಮಾ
ರು ಎರಡು ವರ್ಷ ಪ್ರಾಯದ ಮಗುವಿ
ನಂತೆ ತೋರುವ ಒಂದು ವಸ್ತುವನ್ನು
ಮೇಲಿಂದ ಮೇಲೆ ಮುದ್ದಿಡುತ್ತಿದ್ದಳು.
ಆಗಾಗ ನಿಟ್ಟುಸಿರಿಡುತ್ತಿದ್ದ ಅವಳ
ಗಲ್ಲಗಳ ಮೇಲಿಂದ ಕಂಬನಿಯ ಧಾರೆ
ಗಳು ಇಳಿಯುತ್ತಿದ್ದುವು. ತನ್ನ ಉದ
ರದಲ್ಲಿ ಕಂಡನನ್ನು ಹೊತ್ತು ಹೆರುವ ಭಾಗ್ಯವಿಲ್ಲದ ಜೇಲಾ,
ಮಾತೃಪ್ರೇಮದಿಂದ ತುಂಬಿ, ಗೊಂಬೆಯೊಂದಿಗೆ ಸಂತಣಿಸಿ
ಕೊಳ್ಳುತ್ತಿದ್ದಳು.

ಬೀಗದ ತೂತಿನಿಂದ ಈ ದೃಶ್ಯವನ್ನು ನೋಡುತ್ತಿದ್ದ
ಜೀವನನ ಅವಯವಗಳು ಸ್ವಾಧೀನತೆ ತಪ್ಪಿದುವು. ಬೇಲ
ಳನ್ನು ಈ ಸ್ಥಿತಿಯಿಂದ ಚೇತರಿಸಲೇ ಬೇಕೆನ್ನುವ ಸ್ಫೂರ್ತಿ
ಯುಂಟಾಗಿ ಬಾಗಿಲು ದೂಡಲು ಮುಂದಾದನು. ಆದರೆ
ಬಳಿಯಲ್ಲೇ ಪಹರೆಯ ಪೋಲೀಸನಂತೆ ನಿಂತಿದ್ದ ಮಾಲಾ
ಅವನನ್ನು ಎಚ್ಚರಿಸಿದಳು. 'ಸಮಯ ಮೀರಿತು. ಇನ್ನು
ಅರೆಕ್ಷಣವೂ ಇಲ್ಲಿರಬಾರದು' ಎನ್ನುತ್ತ ಅವನನ್ನು ತನ್ನ ಕೋ
ಣೆಗೆ ಎಳೆದೊಯ್ದಳು.

ಜೀವನ ಮಾಲಾ ತನ್ನ ಮೇಲಿಟ್ಟಿದ್ದ ವಿಶ್ವಾಸಕ್ಕೆ ಎರಡು
ಬಗೆಯಲಿಲ್ಲ. ತಾನು ಕಂಡ ರಹಸ್ಯ ಮನಸ್ಸಿನಲ್ಲೇ ಗೋಪ್ಯ
ವಾಗಿಟ್ಟಿದ್ದನು. ಎರಡು ತಿಂಗಳ ಹಿಂದೆ ಜೇಲಾ ತೀರಿಕೊಂ
ಡಳು. ಪುರುಷ ದ್ವೇಷಿಯಾದ ಈ 'ಮಾರಿ' ಹೋದುದು
ಒಳಿತಾಯಿತೆಂದು ಕೆಲವರಾಡಿಕೊಂಡರು. ಇಂತಹದೇ ಪಿಸು
ಮಾತು ಜೀವನನ ಕಿವಿಗೂ ಬೀಳದಿರಲಿಲ್ಲ. ಪುರುಷದ್ವೇಷಿ
ಯೆಂದು ಬಾಹ್ಯದೃಷ್ಟಿಗೆ ಕಂಡುಬಂದ ಈ ಕಲ್ಲೆದೆಯ ನಾರಿ
ಯಲ್ಲಿ ಮಾತೆಯ ಮಮತೆಯು ಅಂತರ್ಗತವಾಗಿತ್ತು ಎಂಬು



ಸಿಂಡಿಕೇಟಿನ
ಇಪ್ಪತ್ತೈದು ವರ್ಷಗಳ ಪ್ರಗತಿ

[ಡಾ| ಟಿ. ಮಾಧವ ಪೈ, ಚೆಯರ್ಮನ್: ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ]



ಶಾಶ್ವತ ಸಂಸ್ಥೆಯಾಗಿ ಮೆರೆಯಬೇಕೆಂಬ ಉತ್ಕಟೇಚ್ಛೆ ಇಟ್ಟುಕೊಂಡಿರುವ ಬೇಂಕಿನ ಇತಿಹಾಸದಲ್ಲಿ ಕಾಲು ಶತಮಾನದ ಅವಧಿಯೆಂದರೆ ನಿಜವಾಗಿಯೂ ಅತ್ಯಲ್ಪ ಕಾಲ. ಆದರೆ ಮೊದಲಿನ ಕಾಲು ಶತಮಾನವೆಂದರೆ ಅದು ಮಹತ್ವಪೂರ್ಣವಾದುದೇ. ಜನನಾವಸ್ಥೆಯ ಸಂಕಷ್ಟಗಳು, ಅಸ್ತಿತ್ವಕ್ಕಾಗಿ ಹೋರಾಟ, ಬಿಗಿಯಾದ ಸ್ಪರ್ಧೆಯನ್ನು ಎದುರಿಸಬೇಕಾದ ಆವಶ್ಯಕತೆ, ಸಾರ್ವಜನಿಕರಲ್ಲಿ ನಿಕಟ ಪ್ರೀತಿ ವಿಶ್ವಾಸಗಳನ್ನು ಗಳಿಸುವುದು ಇವೆಲ್ಲವುಗಳನ್ನು ಯಶಸ್ವಿಯಾಗಿ ಹಾಯ್ದುಕೊಂಡು ಮುಂದುವರಿಯುವ ಕಾಲ ಮೊದಲ ಇಪ್ಪತ್ತೈದು ವರ್ಷಗಳಲ್ಲಿ ಬರುತ್ತದೆ.

ಯಾವುದಾದರೂ ಒಂದು ಮಹತ್ವಪೂರ್ಣವಾದ ಯೋಜನೆಯ ಬೀಜಗಳನ್ನು ಅವ್ಯವಸ್ಥಿತವಾಗಿ ಬಿತ್ತುವುದಲ್ಲ ಎಂಬ ಮಾತು ಸತ್ಯವಾದುದು. ಸರಿಯಾದ ಕಾಲದಲ್ಲಿ ಯೋಗ್ಯ ಸ್ಥಳದಲ್ಲಿ ಆ ಬೀಜ ಬಿದ್ದು, ಕಾರ್ಯಚತುರರೂ ಕುಶಾಗ್ರಬುದ್ಧಿಯವರೂ ಆದ ವ್ಯಕ್ತಿಗಳಿಂದ ಪೋಷಿಸಲ್ಪಟ್ಟರೇನೆ ಅದು ಯೋಗ್ಯ ವೃಕ್ಷವಾಗಿ ಬೆಳೆದು ಸುಫಲವನ್ನು ಕೊಟ್ಟೀತು. ಇಪ್ಪತ್ತೈದು ವರ್ಷಗಳ ಹಿಂದೆ ಅಕ್ಟೋಬರ್ ೨೦ರಂದು ಶ್ರೀ ಉಪೇಂದ್ರ ಅನಂತ ಪೈಯವರು ತಮ್ಮ ಕೆಲವುಂದಿ ಮಿತ್ರರ ಸಹಾಯ ಪಡೆದು ಈ ಬೇಂಕನ್ನು ಸ್ಥಾಪಿಸಿದರು. ಬೇಂಕಿನ ವ್ಯಾಪಾರ ವಹಿವಾಟುಗಳು ಆರಂಭವಾದುದು ನವೆಂಬರ್ ತಾ. ೧೦ರ ಲಾಗ್ಯಾತು. ಇಂದಿನ ದರ್ಜೆಯೊಡನೆ ಪರಿಶೀಲಿಸುವಾಗ ಅಂದಿನದು ಬಹಳ ಚಿಕ್ಕ ರೀತಿಯ ಆರಂಭ.

ಮೊದಲನೇ ವರ್ಷದ ಅಂತ್ಯದಲ್ಲಿ ಬೇಂಕಿನ ತೆತ್ತುಬಂದ ಮೂಲಧನ ಬರೇ ೮,೦೦೦ ರೂಪಾಯಿಗಳಷ್ಟಿತ್ತು. ಸ್ಥಾಪನಾಕಾಲದ ಡೈರೆಕ್ಟರರಾದ ಶ್ರೀಗಳಾದ ಉಪೇಂದ್ರ ಅನಂತ ಪೈ, ವಿ.ಎಸ್. ಕುಡ್ವಾ ಮತ್ತು ಡಾ| ಟಿ. ಎಮ್. ಎ. ಪೈ ಇವರ ಕಾರ್ಯಸಾಹಸ ಬಲದಿಂದ ಈ ಸಂಸ್ಥೆಯು ಅಭಿವೃದ್ಧಿಯ ಸೋಪಾನಗಳನ್ನೇರಿತು. ಆರಂಭದಿಂದಲೇ ಜಾತ್ಯಾತೀತ ತಳಹದಿಯ ಘಟನೆಯನ್ನು ಕಟ್ಟಿಕೊಂಡಿತ್ತು. ಈ ಸಂಸ್ಥೆಯನ್ನು ಆರಂಭಿಸಿದುದರ ಮುಖ್ಯ ಉದ್ದೇಶ ಈಗಿನಂತೆ ಬರೇ ಬೇಂಕಿಂಗ್ ವಹಿವಾಟುಗಳನ್ನು ಮಾತ್ರ ನಡೆಸುವುದಲ್ಲ; ಉಡುಪಿಯ ನೇಯ್ಗೆಗಾರರಿಗೆ ನೇಯ್ಗೆಯ ಉಪಕರಣಗಳು ಇತ್ಯಾದಿಗಳನ್ನು ಒದಗಿಸಿಕೊಡುವ ಬಗ್ಗೆ ಆರ್ಥಿಕ ಸಹಾಯ ನೀಡುವ ಉದ್ದೇಶವನ್ನೂ ನೇಯ್ಗೆಗಾರರೊಡನೆ ನಿಕಟ ಸಂಪರ್ಕವಿರಿಸಿಕೊಂಡ ಸ್ಥಾಪಕ ಶ್ರೀ ಉಪೇಂದ್ರ ಅನಂತ ಪೈಯವರು ಇಟ್ಟುಕೊಂಡಿದ್ದರು. ಆರಂಭದ ಬೇಂಕಿನ ಪಾಲುಗಾರರಲ್ಲಿ ಕೆಲಮಂದಿ ನೇಯ್ಗೆಗಾರರೂ ಸೇರಿದ್ದರು. ಬೇಂಕಿನ ಮೊದಲ ಮೆಮೊರೆಂಡಮ್ ಆಫ್ ಎಸೋಸಿಯೇಶನ್‌ದಲ್ಲಿ ನಮೂದಿಸಲ್ಪಟ್ಟ ಬೇಂಕಿನ ಉದ್ದೇಶಗಳಲ್ಲಿ, "ನೇಯುವುದು, ನೂಲುವುದು ಮೊದಲಾದ ಗುಡಿ ಕೈಗಾರಿಕೆಗಳಿಗೆ ನೂಲು ಮತ್ತು ಹತ್ತಿಯನ್ನು ಸಾಧಾರಣ ಬೆಲೆಗೆ ಒದಗಿಸಿಕೊಡುವುದು; ಯಾವುದೇ ಕಾಲದಲ್ಲಿ ಮಾರಾಟವಾಗತಕ್ಕ ಈ ಕೈಗಾರಿಕೆಗಳಿಗೆ ಸಂಬಂಧಪಟ್ಟ ಸಲಕರಣಗಳನ್ನು ವಿಕ್ರಯಕ್ಕಿಡುವುದು" ಎಂಬ ಉದ್ದೇಶವೂ ಸೇರಿಕೊಂಡಿತ್ತು. ನಿರುದ್ಯೋಗವನ್ನು ಸಾಧ್ಯವಾದಷ್ಟು ಮಟ್ಟಿಗೆ ಪರಿಹರಿಸುವ ಘನವಾದ ಉದ್ದೇಶವನ್ನೂ ಸ್ಥಾಪಕರು ಇಟ್ಟುಕೊಂಡಿದ್ದರು.

ಸ್ಥಾಪನೆಹೊಂದುವ ಕಾಲಕ್ಕೆ ಬೇಂಕಿನ ಅಧಿಕೃತ ಮತ್ತು ವಂತಿಗೆಹಾಕಿದ ಮೂಲಧನ ೧೦೦ ರೂಪಾಯಿ ೧೦೦೦ ಸಾಮಾನ್ಯ ಶೇರುಗಳಾಗಿ ವಿಭಜಿಸಲ್ಪಟ್ಟ ೧,೦೦,೦೦೦ ರೂಪಾ

ದನ್ನು ಜಗತ್ತಿಗೆ ಸಾರಿ ಬೇಲಳ ಮೇಲಣ ದೋಷಾರೋಪಣೆಯನ್ನು ದೂರೀಕರಿಸಬೇಕೆಂಬ ದೃಢ ಸಂಕಲ್ಪದಿಂದ ತನ್ನ ಪ್ರೇಯಸಿ ಮಾಲಾಳ ಅನುಮತಿ ಪಡಕೊಂಡು ಬೇಲಳ ನೈಜ ಜೀವನದ ಸಂಕ್ಷಿಪ್ತ ಪರಿಚಯವನ್ನು ಮುಂಬಾಯಿಯ ಪತ್ರಿಕೆಯೊಂದರಲ್ಲಿ ಅವನು ಪ್ರಕಟಿಸಿದನು. ಬೇಲಳ ನಿಷ್ಕಲ್ಮಷ ಜೀವನಕ್ಕೆ ಅದು ಸಾಕ್ಷಿಯಾಯಿತು.

A RECORD OF SERVICE!

"SOVEREIGN TILES" have served the country in war and are serving the nation in peace-time. Their record of service is unique.

"SOVEREIGN TILES" never vary in quality. Their supremacy is maintained by ceaseless efforts of Several hundred skilled workers and expert technicians.

SOVEREIGN 

TILES

"SOVEREIGN"

MEANS

BETTER TILES.

TO SELL OR TO BUILD – BUY "SOVEREIGN".

THE SOVEREIGN TILE WORKS, LIMITED.

Tel: "SOVEREIGN" P. O. KODIALBAIL. Phone: 86.

Boloor, Mangalore. [S. India]

Makers of Tiles, Ridges, Terracotta, Water-Coolers Etc.

ಯುಗಳಷ್ಟಿತ್ತು; ಆ ಪೈಕಿ ಪ್ರತಿ ಶೇರಿನ ಮೇಲೆ ೨೦ ರೂಪಾಯಿಗಳನ್ನು ಕರೆಯಲಾಗಿತ್ತು. ಮೊದಲ ಹದಿನೈದು ತಿಂಗಳುಗಳಲ್ಲಿ ೪೮೪ ಶೇರುಗಳು ಮಾತ್ರ ಸಂಗ್ರಹಿಸಲ್ಪಟ್ಟಿದ್ದುವು. ೧೯೩೦ರಲ್ಲಿ ೧೦೦೦ ಶೇರುಗಳಲ್ಲಿ ಎಲ್ಲವೂ ಮಾರಿಹೋದುವು. ೧೯೩೩ರಲ್ಲಿ ಮೂಲಧನವನ್ನು ರೂ. ೫,೦೦,೦೦೦ಕ್ಕೆ ಏರಿಸಲಾಯಿತು. ಪ್ರತೀ ಶೇರಿನ ರೂ. ೧೦೦ ಮೌಲ್ಯದ, ಇನ್‌ಕಮ್ ಟೇಕ್ಸ್ ವಿನಾಯತಿಹೊಂದಿದ ಶೇಕಡಾ ೬ರ ಸಲೆಯ ಕ್ಯುಮುಲೇಟಿವ್ ಡಿವಿಡೆಂಡ್ ಪ್ರತಿಫಲ ಸಿಗುವ ೪೦೦೦ ಪೂರ್ಣ ಪಾವತಿಯ ಪ್ರಿಫರೆನ್ಸ್ ಶೇರುಗಳು ಹೊರಡಿಸಿ ಮೂಲಧನವನ್ನು ಹೆಚ್ಚಿಸಲಾಯಿತು. ೧೯೩೭ರಲ್ಲಿ ಮೂಲಧನವನ್ನು ೧೦ ಲಕ್ಷಕ್ಕೆ ಏರಿಸಲಾಯಿತು. ಪ್ರತಿ ಶೇರಿಗೆ ರೂ. ೨೫ರಿಂದ ೩೬ರ ವರೆಗೆ ಪ್ರೀಮಿಯಮ್ ಹೊರಿಸಿದ ಪ್ರತೀ ಶೇರಿನ ೧೦೦ ರೂಪಾಯಿ ಮೌಲ್ಯದ ೫೦೦೦ ಸಾಮಾನ್ಯ ಶೇರುಗಳು ಹೊರಡಿಸಲ್ಪಟ್ಟು ಪ್ರತೀ ಶೇರಿಗೆ ರೂ. ೩೦ನ್ನು ಮಾತ್ರ ಕರೆಯಲಾಯಿತು. ಕೊನೆಗೆ ೧೯೩೯ರಲ್ಲಿ ಅಧಿಕೃತ ಮೂಲಧನವನ್ನು ರೂ. ೫೬,೦೦,೦೦೦ಕ್ಕೆ ಏರಿಸಲಾಯಿತು. ಶೇಕಡಾ ೫ರ ಸಲೆಯ ಕ್ಯುಮ್ಯುಲೇಟಿವ್ ಪ್ರಿಫರೆನ್ಸ್ ಶೇರುಗಳು ಹೊಸತಾಗಿ ಹೊರಡಿಸಲ್ಪಟ್ಟವು. ತಾ. ೩೧-೧೨-೪೯ರಲ್ಲಿ ಇದ್ದಂತೆ ಬೇಂಕಿನ ಮೂಲಧನ ಈ ಕೆಳಗಿನಂತಿದೆ:

ಅಧಿಕೃತ	....	ರೂ. ೫೬,೦೦,೦೦೦
ವಂತಿಗೆಯಾದುದು	....	ರೂ. ೩೨,೧೦,೯೮೭
ತೆತ್ತುಬಂದುದು	....	ರೂ. ೨೨,೮೦,೯೬೮
ಕ್ಷೇಮನಿಧಿ	....	ರೂ. ೧೦,೦೦,೦೦೦

ಈ ಮೇಲೆ ಸೂಚಿಸಿದಂತೆ ಮೂಲಧನವು ವಿಕಾಸ ಹೊಂದಿದಂತೆ ಸಿಂಡಿಕೇಟನ್ನು ೧೯೩೭ನೇ ಜೂನ್ ತಾ. ೧೮ರಂದು ರಿಸರ್ವ್ ಬೇಂಕ್ ಆಫ್ ಇಂಡಿಯಾ ಆಕ್ಟಿನ ಎರಡನೆಯ ಶೆಡ್ಯೂಲ್‌ನಲ್ಲಿ ಸೇರಿಸಲಾಯಿತು. ೧೯೩೭ನೇ ವರ್ಷವು ಬೇಂಕಿನ ಇತಿಹಾಸದಲ್ಲಿ ಘಟನಾಮಯ ವರ್ಷವೆನ್ನಬಹುದು. ಆ ವರ್ಷದಲ್ಲೇ ಬೇಂಕಿನ ಮುಂಬಾಯಿ ಶಾಖೆ ತೆರೆಯಲ್ಪಟ್ಟಿತು ಮತ್ತು ಅದೇ ವರ್ಷ ಬೇಂಕು ಕ್ಲಿಯರಿಂಗ್ ಹೌಸಿನ ಸದಸ್ಯತನ ಪಡೆಯಿತು. ಈಗ ಬೇಂಕು ೩೦ ಶಾಖೆಗಳಿಂದೊಡಗೂಡಿದೆ.

ಬೇಂಕಿನ ಆಶ್ರಯದಲ್ಲೇ ೧೯೩೨ರಲ್ಲಿ ಆಸ್ತಿಪಾಸ್ತಿಗಳ ವಹಿವಾಟು ನಡೆಸುವ ಕೆನರಾ ಲೆಂಡ್ ಇನ್‌ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಎಂಬ ಸಂಸ್ಥೆಯೂ ೧೯೩೫ರಲ್ಲಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್ ಎಂಬ ವಿಮಾ ಸಂಸ್ಥೆಯೂ ರಚನೆಯಾದುವು. ಇವುಗಳಲ್ಲಿ ಎರಡನೆಯದು ೧೯೩೮ರಲ್ಲಿ ಇಂಡಿಯನ್ ಕಂಪೆನಿಸ್ ಆಕ್ಟ್ ಮತ್ತು ಇನ್ಶ್ಯೂರೆನ್ಸ್ ಆಕ್ಟ್‌ಗಳಲ್ಲಿ ಆದ ಬದಲಾವಣೆಗಳಿಗನುಸಾರ ಸಿಂಡಿಕೇಟಿನಿಂದ ಸಂಪರ್ಕ ತೊರೆದು ಪ್ರತ್ಯೇಕವಾಗಬೇಕಾಯಿತು.

೧೯೩೯ನೇ ಜನವರಿಯಲ್ಲಿ ಬೇಂಕಿನ ಮೆನೇಜಿಂಗ್ ಏಜಂಟ್ಸರಾಗಿದ್ದ ಮೆಸರ್ಸ್ ಪಿ. ಎ. ಪೈ ಸಹೋದರರು ನಿವೃತ್ತರಾಗಿ, ಡಾ| ಟಿ. ಎಮ್. ಎ. ಪೈಯವರು ಬೇಂಕಿನ ಮೆನೇಜಿಂಗ್ ಡೈರೆಕ್ಟರರಾಗಿ ನೇಮಕಹೊಂದಿದರು. ಡಾ| ಪೈಯವರು ಸ್ಥಾಪಕ ಡೈರೆಕ್ಟರರಾಗಿದ್ದುದಲ್ಲದೆ ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಡೈರೆಕ್ಟರ್ ಮಂಡಳಿಯ ಚೆಯರ್ಮ್ಯಾನರಾಗಿ ಸೇವೆ ಸಲ್ಲಿಸುತ್ತಿರುವುದು, ಡೈರೆಕ್ಟರ್ ಮಂಡಳಿಯಲ್ಲಿ ಅವರು ಪಡೆದ ಮನ್ನಣೆ, ಡೈರೆಕ್ಟರರಿಗೆ ಅವರಲ್ಲಿರುವ ಅಚಲ ವಿಶ್ವಾಸವನ್ನು ಪ್ರತಿಬಿಂಬಸುತ್ತಿವೆ.

೧೯೪೧ರ ನಂತರ ಬೇಂಕಿನ ಬೆಳವಣಿಗೆಯು ಮಿಂಚಿನೋಪಾದಿಯಲ್ಲಿ ಸಾಗಿಹೋಗಿದೆ. ಈಗಿನ ಬೇಂಕಿನ ಜನರಲ್ ಮೆನೇಜರರಾಗಿರುವ ಶ್ರೀ ಟಿ. ಎ. ಪೈಯವರು ಮೊದಲು ೧೯೪೩ರಲ್ಲಿ ಡೆಪ್ಯೂಟಿ ಮೆನೇಜರರಾಗಿ ನೇಮಕಹೊಂದಿದರು. ಹೊಸ ಹುರುಪಿನ ತರುಣರ ಕೈಗೆ ಆಡಳ್ತ ಸೂತ್ರವು ಬಂದುದು ಸಂಸ್ಥೆಯ ಬೆಳವಣಿಗೆಗೆ ಇನ್ನಷ್ಟು ಸ್ಫೂರ್ತಿ ಚೇತನಗಳನ್ನು ಕೊಟ್ಟಿತೆಂದರೆ ಹೆಚ್ಚಾಗಲಾರದು. ಬೇಂಕಿನ ಬೆಳವಣಿಗೆಯ ಕಡೆ ಅವರು ಸಲ್ಲಿಸಿದ ಅವಿಶ್ರಾಂತ ಸೇವೆ, ಅವರ ಅಸಾಮಾನ್ಯ ಕಾರ್ಯ ದುರಂಧರತೆ, ಅಚಲ ಧ್ಯೇಯ ಹೊಗಳತಕ್ಕವುಗಳಾಗಿವೆ.

ಸ್ಥಳೀಕ ಉತ್ಸಾಹ, ಸ್ಥಳೀಕ ಭಂಡವಾಳ, ಸ್ಥಳೀಕ ಡೈರೆಕ್ಟರ್ ಮಂಡಳಿ ಇದರಿಂದ ವ್ಯಾಪಾರ ವಹಿವಾಟುಗಳು ಕ್ಷಿಪ್ರ ಅಭಿವೃದ್ಧಿ ಹೊಂದಲು ಸಹಾಯವಾಗಬಹುದಾಗಿದೆ, ಎಂದು ಒಮ್ಮೆ ಮನಗಂಡ ಸಿಂಡಿಕೇಟಿನ ಡೈರೆಕ್ಟರರು ೧೯೪೨ರಲ್ಲಿ ಸದರ್ನ್ ಇಂಡಿಯಾ ಏಪೆಕ್ಸ್ ಬೆಂಕ್ ಲಿಮಿಟೆಡ್ ಎಂಬ ಸಂಸ್ಥೆಯನ್ನೂ ೧೯೪೩ರಲ್ಲಿ ಮಹಾರಾಷ್ಟ್ರ ಏಪೆಕ್ಸ್ ಬೆಂಕ್ ಎಂಬ ಸಂಸ್ಥೆಯನ್ನೂ ತೆರೆದು ೧೯೪೫ರ ವರೆಗೆ ಅದನ್ನು ನಡೆಸಿಕೊಂಡು ಬಂದರು. ಆ ಮೇಲೆ ಆ ಸಂಸ್ಥೆಗಳು ಸಿಂಡಿಕೇಟಿನಿಂದ ಬೇರ್ಪಟ್ಟರೂ ಈಗಲೂ ತಮ್ಮ ಕೈಲಾದ ಸಹಾಯ ಸಹಕಾರಗಳನ್ನು ಸಿಂಡಿಕೇಟಿಗೆ ನೀಡುತ್ತಾ ಇವೆ.

ಇತರ ಚಿಕ್ಕ ಮತ್ತು ದೊಡ್ಡ ಬೆಂಕುಗಳೊಡನೆ ಬೆಂಕು ನಿಕಟ ಮೈತ್ರಿ ಮತ್ತು ಸೌಹಾರ್ದವನ್ನಿಟ್ಟುಕೊಂಡಿರುವುದು ನಾವು ಹೆಮ್ಮೆಪಡತಕ್ಕ ವಿಚಾರ. ನಮ್ಮ ಡೈರೆಕ್ಟರ್ ಮಂಡಳಿಯಲ್ಲಿ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಮಹನೀಯರುಗಳು ಉತ್ಸಾಹೀ ಸೇವೆ ಸಲಿಸಿಕೊಂಡಿದ್ದು ಬೆಂಕಿನ ಸರ್ವತೋಮುಖ ಏಳ್ಗೆಯ ಕಡೆಗೆ ಶ್ರಮಿಸುತ್ತಿದ್ದಾರೆ.

ಸಿಂಡಿಕೇಟು ಕೈಕೊಂಡ ಮತ್ತೊಂದು ಮಹತ್ವಪೂರ್ಣ ಪ್ರಯೋಗವೆಂದರೆ ತನ್ನ ಚಟುವಟಿಕೆಯ ಕ್ಷೇತ್ರವನ್ನು ೧೯೪೬ರಲ್ಲಿ ದಕ್ಷಿಣ ಕನ್ನಡದ ಚಿಕ್ಕ ಹಳ್ಳಿಪಳ್ಳಿಗಳಿಗೆ ತನ್ನ ೨೭ ಗ್ರಾಮಾಂತರ ಶಾಖೆಗಳ ಮೂಲಕ ಹರಡಿದುದು. ಈ ೨೭ ಶಾಖೆಗಳ ಮೂಲಕ ತಾ. ೩೧—೧೨—೧೯೪೯ಕ್ಕೆ ಅಂತ್ಯ

THE HOME FOR YOUR FORD



SALES AND SERVICE

P. V. PAI & CO.,

AUTHORISED Ford SUB-DEALERS

FOR SOUTH KANARA & COORG

MANGALORE : : MERCARA : : VIRAJPET

ನಾಗುವ ವರ್ಷದೊಳಗೆ ೧೧,೫೪೮ ಠೇವಣಾತಿ ಖಾತೆಗಳನ್ನು ಮತ್ತು ೧೦,೯೭೪ ಸಾಲ ಪಡಕೊಳ್ಳುವ ಖಾತೆಗಳನ್ನು ಶೇಖರಿಸಲು ಬೆಂಕು ಸಮರ್ಥವಾಗಿದೆ.

ಬೆಂಕಿನ ಅಭಿವೃದ್ಧಿಯ ವೇಗವನ್ನು ಈ ಕೆಳಗೆ ಕಾಣಿಸಿದ ಅಂಕೆ ಸಂಖ್ಯೆಗಳಿಂದ ಪರಿಶೀಲಿಸಬಹುದಾಗಿದೆ.

	೩೧—೧೨—'೨೬	೩೧—೧೨—'೪೯
ಅಧಿಕೃತ ಮೂಲಧನ	೧,೦೦,೦೦೦	೫೬,೦೦,೦೦೦
ಹೊರಡಿಸಿದ ಮೂಲಧನ	೧,೦೦,೦೦೦	೫೬,೦೦,೦೦೦
ವಂತಿಗೆಯಾದ ಮೂಲಧನ	೪೮,೪೦೦	೩೨,೧೦,೯೮೭
ತೆತ್ತು ಬಂದ ಮೂಲಧನ	೮,೨೫೦	೨೨,೮೦,೯೬೮
ಕ್ಷೇಮ ನಿಧಿ	—	೧೦,೦೦,೦೦೦
ಠೇವಣಾತಿಗಳು	೫,೭೫೮	೩,೩೯,೦೯,೯೭೫
ಐನ್ ಲಾಭ	೯೭೮	೪,೦೭,೭೪೭
ಸರಕಾರೀ ಪ್ರೊಮಿಸರಿ ನೋಟುಗಳಲ್ಲಿ ಹಾಕಲ್ಪಟ್ಟ ಸೊತ್ತು	—	೧,೪೭,೫೧,೦೧೪
ಇತರ ಸೊತ್ತುಗಳು	—	೩,೮೮,೭೫೪
ಒಟ್ಟು ಮುಂಗಡ ತೆತ್ತ ಹಣ	೧೧,೧೪೨	೧,೯೬,೧೨,೪೭೭
ಕೈಯಲ್ಲಿ ಮತ್ತು ಬೆಂಕುಗಳೊಡನೆ ಇರುವ ಶಿಲ್ಕು	೧೫೩	೮೫,೨೬,೫೭೬
ಕೂಡಿಸಲಿರುವ ಬಿಲ್ಲುಗಳು	—	೩೬,೦೯,೯೩೦
ಒಟ್ಟು ಆದಾಯ	೨,೨೫೪	೨೧,೯೭,೬೧೦
ಒಟ್ಟು ಖರ್ಚು	೧,೨೭೬	೧೭,೮೯,೮೬೩

ಅಭಿವೃದ್ಧಿಯಿಂದ ಅಭಿವೃದ್ಧಿಗೇರುತ್ತ ಬೆಂಕು ತನ್ನ ತೆತ್ತು ಬಂದ ಮೂಲಧನವನ್ನು ರೂ. ೨೩ ಲಕ್ಷಕ್ಕೆ, ಮತ್ತು ಕ್ಷೇಮ ನಿಧಿಯನ್ನು ರೂ. ೧೦ ಲಕ್ಷಕ್ಕೆ ಏರಿಸಲು ಸಮರ್ಥವಾಗಿದೆ. ಮಾತ್ರವಲ್ಲ, ಅದರ ಇಂದಿನ ಸಂಪತ್ತು ೫ ಕೋಟಿ ರೂಪಾಯಿಗೆ ಮಿಕ್ಕಿದೆ. ಮುಂಬಾಯಿ, ಮದ್ರಾಸು, ಮೈಸೂರು, ತಿರುವಾಂಕೂರು ಮತ್ತು ಕೊಚ್ಚಿ ಯೂನಿಯನ್, ಹೈದರಾಬಾದ್ ಸಂಸ್ಥಾನಗಳಿಗೆ ತನ್ನ ಕಾರ್ಯಕ್ಷೇತ್ರವನ್ನು ಅದು ವಿಸ್ತರಿಸಿಕೊಂಡಿದೆ. ಪ್ರಾಯಶಃ ಪಶ್ಚಿಮ ಕರಾವಳಿಯಲ್ಲಿ ಸಿಂಡಿಕೇಟಿಗಿರುವಷ್ಟು ಶಾಖೆಗಳು ಬೇರಾವ ಬೆಂಕಿಗೂ ಇರುವುದಿಲ್ಲ.

ಸಾಲಕೊಡುವ ಸಂಸ್ಥೆಗಳನ್ನು ಪೂರ್ಣ ಅಲಕ್ಷಿಸುವಷ್ಟು ನಮ್ಮ ದೇಶ ಸಂಪತ್ಸಮೃದ್ಧವಾಗಿಲ್ಲ. ಎಲ್ಲಾ ರೀತಿಯ ಚಿಕ್ಕ ಮತ್ತು ದೊಡ್ಡ ಸಂಸ್ಥೆಗಳಿಗೆ ಆಶ್ರಯಕೊಡುವಷ್ಟು ಅದು ವಿಸ್ತಾರವಾಗಿದ್ದು, ಎಲ್ಲಾ ಸಂಸ್ಥೆಗಳಿಗೆ ಅಭಿವೃದ್ಧಿಹೊಂದಲು ಪೂರ್ಣ ಅವಕಾಶವು ದೊರೆಯಲೇ ಬೇಕು

ಮಹನೀಯರೆ, ಮಹಿಳೆಯರೇ, ಮುಂಬರುವ ವರ್ಷಗಳಲ್ಲಿ ನಿಮ್ಮ ಇತ್ಯೋಪತಿಯ ಸಹಾನುಭೂತಿ, ಸಹಕಾರ ಮತ್ತು ಪ್ರೋತ್ಸಾಹಗಳನ್ನು ನಾವು ಹಾರೈಸುತ್ತಿದ್ದೇವೆ. ಅದನ್ನು ಹೊಂದುವ ಅರ್ಹತೆ ಪಡೆಯಲೂ ಬದ್ಧಕಂಕಣರಾಗುವೆವು. ದೇಶದ ಆರ್ಥಿಕ ಭವಿತವ್ಯವನ್ನು ರೂಪಿಸುವುದರ ಕಡೆಗೆ ಪರಿಣಾಮಕಾರೀ ಸೇವೆ ಸಲ್ಲಿಸಬೇಕೆಂಬ ಸ್ಥಾಪಕರ ಘನವಾದ ಉದ್ದೇಶವನ್ನು ಪೂರೈಸಲು ಭಗೀರಥ ಯತ್ನ ನಡೆಸುವೆವು

|| ಜೈ ಹಿಂದ್ ||

[ಸಿಂಡಿಕೇಟಿನ ರಜತೋತ್ಸವ ಸಮಾರಂಭದಲ್ಲಿ ಚೆಯರ್ಮನರಾದ ಡಾ| ಟಿ. ಮಾಧವ ಪೈಗಳವರು ಮಾಡಿದ ಸ್ವಾಗತ ಭಾಷಣದಿಂದಾಯ್ದುದು.]

ಬಾಲಸಾಹಿತ್ಯ ಮಂಡಲ, ಲಿಮಿಟೆಡ್

ಸ್ಥಾಪಿತ: ೧೯೨೪.

ಸಾಹಿತ್ಯ ಪುಸ್ತಕ ಪ್ರಕಾಶನ ಮತ್ತು ಮಾರಾಟ.

ಕೊಡಿಯಾಲ ಬೈಲು ಪೋಸ್ಟು, ಮಂಗಳೂರು.

Estd: 1920 Telegrams: "DIAMBRIGHT"

N. S. KHAMBADKONE

Diamond Merchant & Manufacturing Jeweller

BOMBAY

Direct Importer
Best Quality
Blue Jaggars
Fine Cut
Diamonds

Proprieter
Mangalore
Jewellery
Mart,
Gamdevi Road
BOMBAY 7

ಅತ್ಯಾಧುನಿಕ ರೀತಿಯಲ್ಲಿ ಪವನು ಬಂಗಾರದ, ಮಂಗಳೂರು ಪೆಟರ್ನ್ ಆಭರಣಗಳು, ಆರ್ಡರುಗಳಿಗೆ ಸರಿಯಾಗಿ ನುರಿತ ಕೆಲಸಗಾರರಿಂದ ತಯಾರಾಗುತ್ತವೆ.

ಎನ್. ಎಸ್. ಖಂಬದಕೋಣೆ

ಮಂಗಳೂರು ಜ್ಯುವೆಲರಿ ಮಾರ್ಟ್,

ಗಾಂವ್‌ದೇವಿ ರೋಡ್, ಬೊಂಬ್ಯಾ 7.

WESTERN PLAYING CARD COMPANY INDIA
BOMBAY No. 4

MAHATMA GANDHI
PANDIT JAWAHARLAL
SUBHASCHANDRA BOSE

SHIVAJI MAHARAJ • RANA PRATAP


And other Pictures

PLAYING CARDS • INK PACKETS • HOLDERS

WRITE TO:

MODERN PICTURE PUBLISHERS OF INDIA

BOMBAY, No. 4.



For efficient and Smooth Work........

KUSAK

CZECHOSLOVAKIAN

PAPER CUTTING MACHINES

SIZES 22", 26" & 30"

★

Sole Agents:

S. N. Gaitonde & Co., LTD.,

JAN MANSION, SIR P. M. ROAD,

BOMBAY 1.

Tel: "STRAITEX" Phone: 27341.



ಭಾರತದ ಉಪಪ್ರಧಾನ ಮಂತ್ರಿ ಸರದಾರ ವಲ್ಲಭಭಾಯಿ ಪಟೇಲರು.

ಸೇವಾಭಾವನೆಯಿಂದ

ಬೇಂಕುಗಳು ಮುಂದೆ ಸಾಗಬೇಕು

[ಶ್ರೀ। ಸಿ. ಆರ್. ಶ್ರೀನಿವಾಸನ್, ಮದರಾಸು.]

ಇಂದು ನಮ್ಮನ್ನು ಆವರಿಸಿಕೊಂಡಿರುವ ಹಲವು ಸಂಕಷ್ಟಗಳ ಮೂಲವು ದೂರದರ್ಶಿತ್ವ ಮತ್ತು ಸೌಕರ್ಯಗಳ ಅಭಾವ. ಈ ಎಲ್ಲಾ ಕಷ್ಟ ಪರಂಪರೆಗಳಿಗೆ ಮೂಲಕಾರಣ ಹಣ; ಹಣದ ಅಭಾವ ಎಂದರೆ ಇನ್ನಷ್ಟು ಒಪ್ಪಿತು ಆ ಮಾತು. ಮಜೂರಿ, ಉತ್ಪತ್ತಿ ಇವೆಲ್ಲವುಗಳನ್ನು ಅಳೆಯುವ ಸಾಧನವೇ ಹಣವಾಗಿ ಬಿಟ್ಟಿದೆ. ಪ್ರತಿಯೊಬ್ಬ ಮನುಷ್ಯನು ತನಗೊದಗಿದ ಸಂದರ್ಭಗಳ ಮತ್ತು ತನ್ನಲ್ಲಿರುವ ಸೌಲಭ್ಯಗಳ ಸದುಪಯೋಗ ಮಾಡಿದನೆಂದರೆ ಆತ ಹಣಗಳಿಸಲು ಸಮರ್ಥನಾಗಲೇಬೇಕು. ಜೀವನದ ಮಟ್ಟ ಸುಧಾರಿಸುವ ಕಡೆ ಅವನಿಗೆ ಯಶಸ್ಸು ದೊರೆಯಲೇಬೇಕು. ಅಖಂಡವಾದ ಮಿತವ್ಯಯದ ಪಾಠವನ್ನು ಅನುಷ್ಠಾನಕ್ಕೆ ತರುವುದು ಇಂದಿನ ಸಮಾಜಕ್ಕೆ ಅತ್ಯಗತ್ಯವಿದೆ. ದೇಶದ ಮೂಲೆ ಮೂಲೆಗಳಿಗೆ ಇದು ಹರಡುವಂತಾಗಬೇಕು. ಈ ಕಡೆ ಸ್ತುತ್ಯಾರ್ಹ ಶ್ರಮ ವಹಿಸಿದವರೆಂದರೆ ಈ ಬೇಂಕಿನ ದಕ್ಷ ಅಡಳ್ತಗಾರರಾದ ಡಾ। ಮಾಧವ ಪೈಯವರು. ಬೀಜವೊಂದು ಗಿಡವಾಗಿ, ಗಿಡವು ಮರವಾಗಿ ಬಲಿತು ದಾರಿ ನಡೆದು ಬಳಲಿದ ಪ್ರಯಾಣಿಕರಿಗೆ ನೆಳಲಿನ ಆಶ್ರಯ ಕೊಡುವ ವರೆಗಿನ ವಿದ್ಯಮಾನಗಳನ್ನೆಲ್ಲಾ ಪರಿಪೂರ್ಣ ಕಾಣುವ ಭಾಗ್ಯ ಕೆಲವರಿಗೆ ಮಾತ್ರ ದೊರೆಯುವುದು. ಅಂತಹ ಅನುಪಮ ಭಾಗ್ಯವಂತರು ಡಾ। ಮಾಧವ ಪೈಯವರು. ಅವರು ಸ್ಥಾಪಿಸಿ, ಉತ್ತಮ ಸ್ಥಿತಿಗೆ ತಂದ ಸಂಸ್ಥೆಯ ಭವಿಷ್ಯವೂ ಸುಭದ್ರವಾಗಿದೆ ಎಂಬುದನ್ನು ಕೇಳುವಾಗ ಅವರು ಎಷ್ಟು ಆನಂದಗೊಳ್ಳಲಿಕ್ಕಿಲ್ಲ!

ಬೇಂಕಿನ ಜನರಲ್ ಮೆನೇಜರರಾದ ಶ್ರೀ. ಟಿ. ಎ. ಪೈಯವರು ಅಸಾಮಾನ್ಯ ಕಾರ್ಯದುರಂಧರರಿರುತ್ತಾರೆ. ಹಳೆ ಮರ್ಜಿಯವರ ಜಾಗ್ರತೆ ಮತ್ತು ಮುಂದಾಲೋಚನೆಯ ಜೊತೆಗೆ ಈಗಿನವರ ಸ್ಫೂರ್ತಿ ಮತ್ತು ಉತ್ಸಾಹಗಳೂ ಅವರಲ್ಲಿ ಜೊತೆಗೂಡಿದ್ದು ಬೇಂಕಿನ ಚಾಲನ ಸೂತ್ರಗಳನ್ನು ವಹಿಸಲು ಅವರು ತಕ್ಕವರಿರುತ್ತಾರೆ.

ಹಣವನ್ನು ಸಾಲವಾಗಿ ಕೊಡುವುದು ಈ ಜಗತ್ತಿನ ಅತ್ಯಂತ ಹಳೆಯ ವೃತ್ತಿಗಳಲ್ಲಿ ಒಂದಾಗಿದೆ. ಸಾಮಾನ್ಯರ ಎಣಿಕೆಯಲ್ಲಿ ಈ ವೃತ್ತಿಯು ಕ್ರೂರ ಮತ್ತು ದಯಾದಾಕ್ಷಿಣ್ಯಗಳಿಲ್ಲದ ಸ್ವಭಾವದ್ದೆಂಬ ಅಲಕ್ಷ್ಯ ಭಾವನೆಯಿದೆ. ಆದರೆ ಯಾವುದೇ ವ್ಯವಸ್ಥಿತ ಸಮಾಜದಲ್ಲೂ ಅದು ಅವಶ್ಯಕ ಸೇವೆ ಸಲ್ಲಿಸಲು ಬಯಸುತ್ತಿದೆ ಎಂಬುದನ್ನು ತಿಳಿದವರು ಅತಿ ವಿರಳ.

ಬೇಂಕುಗಳು ತಮ್ಮ ಮೂಲಧನದಿಂದ ವ್ಯಾಪಾರ ವಹಿವಾಟು ನಡೆಸುವುದಲ್ಲ. ಠೇವಣಾತಿದಾರರು ತೆತ್ತ ಹಣದಿಂದ ಶೇಖರಿಸಲ್ಪಟ್ಟ ನಿಧಿಯನ್ನು ಅದಕ್ಕಾಗಿ ಉಪಯೋಗಿಸುತ್ತಿವೆ. ಠೇವಣಾತಿಗಳೆಂದರೆ ಜನರ ಉಳಿತಾಯ ಪ್ರತಿನಿಧೀಕರಿಸುತ್ತಿವೆ ಎನ್ನುವಾಗ ಅಂತಹ ಹಣ ಉಪಯೋಗಕ್ಕಿಳಿಸುವಾಗ ಅದರ ಭದ್ರತೆಯ ಕಡೆಗೂ ಗಮನಕೊಡಬೇಕಾದುದು ಅತ್ಯವಶ್ಯ. ವ್ಯಾಪಾರ ವಹಿವಾಟುಗಳಲ್ಲಿ ಹಣ ಚೆಲ್ಲುವುದೆಂದರೆ ಅಪಾಯವನ್ನೆದುರಿಸುವ ಪರಿಸ್ಥಿತಿ ಬಂದೇ ತೀರುತ್ತದೆ. ಅಂತಹ ಅಪಾಯಗಳನ್ನು ಎದುರಿಸುವ ಹೊಣೆಗಾರಿಕೆಯನ್ನು ಬೇಂಕಿನ ಮೂಲಧನವು ಹೊತ್ತುಕೊಂಡಿರಬೇಕಾಗುತ್ತದೆ. ಜನರ ಉಳಿತಾಯ ಹಣದ ಭದ್ರತೆಗಾಗಿ ತಕ್ಕ ವ್ಯವಸ್ಥೆ ನಡೆಸುವುದು ಅತ್ಯವಶ್ಯವೆಂದು ಕಂಡು ಬಂದು, ಈ ಕಡೆ ಮೊದಲನೆ ಹೆಜ್ಜೆಯಾಗಿ ಬೇರೆ ಬೇರೆ ಬೇಂಕುಗಳ ಮೇಲೆ ನಿಯಂತ್ರಣ ಇಟ್ಟುಕೊಳ್ಳುವ ಅಧಿಕಾರಪೀಠವಾಗಿ ರಿಸರ್ವ ಬೇಂಕ್ ಆಫ್ ಇಂಡಿಯಾ ಇದರ ನಿರ್ಮಾಣವಾಯಿತು. ಈ ಸಂಸ್ಥೆ ಹತ್ತು ಹಲವು ಹೊಣೆಗಾರಿಕೆಗಳನ್ನು ಹೊತ್ತುಕೊಂಡಿದೆ. ಈ ಸಂಬಂಧ ಮಂಜೂರಾದ ಸರಕಾರೀ ಮಸೂದೆಯು ಈಗ ಮೆಲ್ಲನೆ ಕಾರ್ಯರೂಪಕ್ಕೆ ಬರುತ್ತಿದೆ. ಕ್ರಮೇಣ ಅದು ದೇಶದಾದ್ಯಂತ ಬೇಂಕಿಂಗ್ ಮಟ್ಟವನ್ನು ಊರ್ಜಿತಗೊಳಿಸಲು ಸಹಕಾರಿಯಾಗದಿರಲಾರದು.

ದೇಶದ ವಿಭಜನೆಯಿಂದ ಹಿಂದೂದೇಶದ ಅರ್ಥಿಕತೆಯ ಮೇಲೆ ಬಲವಾದ ಧಕ್ಕೆಯುಂಟಾಗಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಅವಶ್ಯಕ ವಸ್ತುಗಳ ತುಟ್ಟಿ, ಆಹಾರ ಸಮಸ್ಯೆ, ಬೆಲೆಗಳ ಉಲ್ಬಣ, ಕ್ಷಾಮ ಬಮರಗಳು ಇವೆಲ್ಲಾ ಯುದ್ಧದ ಬೆನ್ನು ಹತ್ತಿ ಬಂದಿವೆ. ಜನರಿಗೆ ಜೀವನದಲ್ಲೇ ಒಂದು ರೀತಿಯ ಜಿಗುಪ್ಸೆ ತಲೆದೋರಿ, ಸರಕಾರದ ಮೇಲೆ ಅವಿಶ್ವಾಸ ಉಂಟಾಗಿದೆ. ತಿರಿಗಿ ಜನರಲ್ಲಿ ವಿಶ್ವಾಸ ಮೂಡಿಸಲು ಬೇಕಾಗಿ ಸರಕಾರವು ಶತಪ್ರಯತ್ನ ನಡೆಸುತ್ತಿದೆ. ಪರಿಮಿತ ಆದಾಯದ ವೃತ್ತದೊಳಗಿದ್ದು ಉಳಿತಾಯ ಸರೋವರದ ನೀರಿನ ಆಸರೆಯಂತಿದ್ದ ವರ್ಗದವರೇ ಇಂದು ಏರಿದ ಧಾರಣೆ ಮತ್ತು ಏರಿದ ತೆರಿಗೆಗಳ ಹೊಯ್ದಾಟಗಳ ನಡುವೆ ನುಚ್ಚುನೂರಾಗುತ್ತಿ

"BAMBOO BRAND"

- QUALITY PAPERS
- B.WINSTON'S PRINTING INKS
- STATIONERY — BOARDS
- SCHOOL REQUISITES
- PRINTERS' REQUISITES
- TYPE-WRITERS, RIBBONS,
- CARBONS, DUPLICATORS Etc.

Srinivas Brothers

Paper Merchants & Stationers,

CONTRACTORS TO THE DISTRICT BOARD, S K.

Car Street, Mangalore.

Post Box No. 130. Tel: "ACTIVE"

(Branch: **Mattanchery, Cochin**)

ಲಕ್ಷ್ಮಿ ನಿವಾಸ ಹಿಂದೂ ಹೊಟೇಲ್

SOUTH INDIAN LODGE

(Estd: 1926)

314, ವಿಠ್ಠಲಭಾಯಿ ಪಟೇಲ್ ರೋಡ್,

ಬೊಂಬಾಯಿ **4**.

ಕಳೆದ ಕಾಲು ಶತಮಾನದಿಂದ ಮುಂಬಯಿ ನಗರದಲ್ಲಿ ಜನಾದರಣೀಯವಾಗಿ, ಮಧುರ ಊಟ, ರುಚಿಕರ ಮತ್ತು ಪರಿಶುದ್ಧ ಪಕ್ವಾನ್ನ, ತಿಂಡಿತೀರ್ಥಗಳಿಗೆ ಹೆಸರುವಾಸಿಯಾದ ಭೋಜನ ಮತ್ತು ಫಲಾಹಾರ ಮಂದಿರ.

ಕನ್ನಡಿಗರು ಮುಂಬಯಿಗೆ ಬಂದಾಗ, ಮರೆಯದೆ ಸಂದರ್ಶಿಸಿರಿ.

Lakshmi Nivas Hindu Hotel

314, Vithalbhai Patel Road,

BOMBAY 4.

SRI SUDARSHAN MILLS

Ansari Road, Bunder, MANGALORE.

I & II CLASS COCOANUT OILS, GINGELLY OIL, OIL CAKES ETC.

Copra & Gingelly Crushing Undertaken.

ಶ್ರೀ ಸುದರ್ಶನ ಮಿಲ್ಸ್, ಬಂದರ್, ಮಂಗಳೂರು.

ಶುದ್ಧ, I ಕ್ಲಾಸ್ ಮತ್ತು II ಕ್ಲಾಸ್ ತೆಂಗಿನೆಣ್ಣೆ, ಎಳ್ಳೆಣ್ಣೆ ಮತ್ತು ಹಿಂಡಿ ಮೊದಲಾದುವುಗಳು ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆವುವು.

THE CANARA MUTUAL ASSURANCE COMPANY, LTD.

Head Office: **UDIPI, S. India.** Estd: **1935.**

Canara Mutual occupies a unique position of distinction amongst the sound Life Offices in India. Constituted as a Mutual Company, the entire profits are shared by the participating policyholders alone, there being no shareholders. It has paid bonus since inception and in all the Valuations conducted on progressively stringent basis it has shown a surplus. The Company has maintained its reputation by fair treatment. For more details about this Progressive Mutual Life Office, write to-day to its Head Office.

ದ್ವಾರೆ. ಆದರೆ ಇಂದು ಭಾರತದ ಜೀವಾಳದಂತಿರುವ ಹಳ್ಳಿಗಳಲ್ಲಿ ಉಳಿತಾಯದ ಜಾಗ್ರತಿಯ ಸದುಪಯೋಗಿತೆಯನ್ನು ಪಡೆದು ಹಳ್ಳಿಗಳಲ್ಲಿ ಉಳಿತಾಯ ಯೋಜನೆಗಳನ್ನು ಸುಲಭ ಮತ್ತು ಅನುಕೂಲ ರೀತಿಯಲ್ಲಿ ಕಾರ್ಯರೂಪಕ್ಕೆ ತರಲು ಈ ಬೇಂಕು ತುಂಬಾ ಶ್ರಮಿಸಿದೆ. 'ಪಿಗ್ಮಿ' ಠೇವಣಾತಿ ಎಂಬ ಹೆಸರಲ್ಲಿ ಈ ಬೇಂಕು ನಡೆಸುತ್ತಿರುವ ಬೇಂಕಿಂಗ್ ಸೇವೆ ಸ್ತುತ್ಯಾರ್ಹವಾದುದು. ಮತ್ತೊಂದು ಬೇಂಕು ಚಲಿಸುವ ಬೇಂಕಿಂಗ್ ಪದ್ಧತಿಯನ್ನು ಅನುಷ್ಠಾನಕ್ಕೆ ತರುವುದರ ಕಡೆಗೆ ಪ್ರಯೋಗಗಳನ್ನು ನಡೆಸುತ್ತಿದೆ. ಈ ಪ್ರಯೋಗಗಳ ಫಲವನ್ನು ಆತುರದಿಂದ ನಿರೀಕ್ಷಿಸಲಾಗಿದೆ.

ಬೇಂಕಿಂಗ್ ಪ್ರಗತಿ ಇಂತಹದೇ ಮಾದರಿಯಲ್ಲಿ ಸಾಗಬೇಕೆಂಬ ಕಟ್ಟುನಿಟ್ಟಾದ ನಿರ್ಬಂಧವಿಲ್ಲ. ಸಾಮಾನ್ಯವಾಗಿರಬೇಕಾದುದು ಸೇವಾ ಭಾವನೆ. ಅದನ್ನು ಅನ್ವಯಿಸುವುದರ ಕಡೆ ಕಲ್ಪನಾಶಕ್ತಿ ಮತ್ತು ವಿವೇಚನಾ ಶಕ್ತಿಗಳ ಅಗತ್ಯವಿದೆ. ಈ ಸೇವಾ ಭಾವನೆಯೇ ನನ್ನನ್ನು ಬೇಂಕಿಂಗ್ ಕ್ಷೇತ್ರದ ಕಡೆಗೆ ಆಕರ್ಷಿಸಿದುದಾಗಿದೆ. ಆರಂಭದಲ್ಲಿ ನಿಮಗೆಲ್ಲರಿಗೆ ತಿಳಿದಿರುವಂತೆ ನಾನು ಪತ್ರಿಕೋದ್ಯೋಗಿಯಾಗಿದ್ದೆ. ಪತ್ರಿಕೋದ್ಯೋಗವು ಈ ಸೇವಾಭಾವನೆಯನ್ನು ಪ್ರತಿ ಹಂತದಲ್ಲಿ ಮತ್ತು ಎಲ್ಲಾ ಕಾಲಗಳಲ್ಲಿ ಪಾಲಿಸುತ್ತದೆ. ಈ ಸಂದರ್ಭದಲ್ಲಿ ಒಂದು ಸ್ವಾರಸ್ಯಪೂರ್ಣ ಘಟನೆ ನನ್ನ ನೆನಪಿಗೆ ಬರುತ್ತದೆ. ಭಾರತ ಸರಕಾರದ ಆರ್ಥಿಕ ಕಾರ್ಯದರ್ಶಿಗಳಾಗಿದ್ದ ಸರ್ ಜೆರಮಿ ರೈಮನ್‌ರವರು ರಿಸರ್ವ್ ಬೇಂಕ್ ಆಫ್ ಇಂಡಿಯಾ ಇದರ ಸೆಂಟ್ರಲ್ ಬೋರ್ಡಿನಲ್ಲಿ ಹಲವು ವರ್ಷಕಾಲ ನನ್ನ ಸಹಪಾಠಿಗಳಾಗಿದ್ದರು. ಭಾರತ ಸರಕಾರದ ಆರ್ಥಿಕ ಸದಸ್ಯರಾದ ಮೇಲೆ, ಒಮ್ಮೆ ಢಿಲಿಯಲ್ಲಿ ನಡೆದ ಒಂದು ಪತ್ರಿಕಾ ಕರ್ತರ ಸಮ್ಮೇಲನದಲ್ಲಿ ಅವರನ್ನು ಭೇಟಿಯಾಗುವ ಸಂದರ್ಭ ನನಗೆ ಒದಗಿತು. 'ಈ ಜನಸ್ತೋಮದ ನಡುವೆ ನೀವು ಏನು ಮಾಡುತ್ತಿದ್ದೀರಿ?' ಎಂದು ರೈಮನರು ನನ್ನೊಡನೆ ಕೇಳಿದಾಗ, 'ನನ್ನ ವೃತ್ತಿ ಪತ್ರಿಕಾ ವ್ಯವಸಾಯ' ಎಂದು ಉತ್ತರ ಕೊಟ್ಟೆ. 'ಬೇಂಕಿಂಗ್ ಮತ್ತು ಪತ್ರಿಕಾ ವ್ಯವಸಾಯಗಳೊಳಗೆ ಪರಸ್ಪರ ಸಾಮಾನ್ಯ ಸಂಬಂಧವೇನು?' ಎಂದು ರೈಮನರು ಚತುರ ಪ್ರಶ್ನೆ ಕೇಳಿದರು. "ಎರಡೂ ವ್ಯವಸಾಯಗಳಲ್ಲಿ ಕಾಗದದ ಮೇಲೆ ವಿಶ್ವಾಸ ಸ್ಥಾಪಿಸಲು ನಾವು ಪ್ರಯತ್ನಪಡುವುದಲ್ಲವೇ? ಎಂದು ನಾನು ಲಘುವೆನಿಸುವಂತೆ ಉತ್ತರ ಕೊಟ್ಟೆ. ಆಗ ಸ್ಟರ್ಲಿಂಗ್ ಪಾವತಿಗಳಿಗೆ ಅವಕಾಶಮಾಡಿ ಕೊಡಲು ನಮ್ಮ ಕರೆನ್ಸಿ ತೀವ್ರ ವಿಕಾಸಹೊಂದುತ್ತಿರುವ ಕಾಲವಾಗಿತ್ತದು. ರೈಮನರಿಗೆ ನಾನು ಕೊಟ್ಟ ಉತ್ತರದ ಅರ್ಥ ನಿಮಿಷದಲ್ಲಿ ಹೊಳೆಯದಿರಲಿಲ್ಲ.

ಬೇಂಕಿಂಗ್ ವ್ಯವಸಾಯ ನಡೆಸುವವರೆಲ್ಲರೂ ಈ ಸೇವಾ ಭಾವನೆಯನ್ನು ಧ್ಯಾನದಲ್ಲಿಟ್ಟುಕೊಂಡು, ಸ್ವಾರ್ಥರಹಿತ ಭಾವನೆಯಲ್ಲಿ ಅದನ್ನು ಅನುಷ್ಠಾನಕ್ಕೆ ತರಲು ಯತ್ನಿಸಬೇಕೆಂದು ನಾನು ಬಯಸುತ್ತೇನೆ. ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಳ್ಳಲು ಸಮರ್ಥವಾದರೆ ತಾನೆ ಈ ಸೇವೆ ಸಾಧ್ಯವಾದೀತು. ಆದುದರಿಂದ ಪ್ರತಿಯೊಂದು ಬೇಂಕಿಂಗ್ ಸಂಸ್ಥೆ ತನಗುಚಿತ ಕಂಡ ರೀತಿಯಲ್ಲಿ ಜನರ ವಿಶ್ವಾಸ ಗಳಿಸುವಂತಹ ಸ್ಥಿತಿಯನ್ನುಂಟುಮಾಡಲು ಪ್ರಯತ್ನಪಟ್ಟು, ಎಲ್ಲರ ಆವಶ್ಯಕತೆಗಳನ್ನು ಪೂರೈಸುವಷ್ಟು ಬೇಂಕಿಂಗ್ ವ್ಯವಸಾಯ ವಿಕಾಸ ಹೊಂದುವಂತೆ ಸಾಧಿಸಬೇಕು. ಈ ಬೇಂಕು ಇಂತಹ ಹಲವು ಉತ್ಸವಗಳನ್ನು ನೆರವೇರಿಸಿ ಬೇಂಕಿಂಗ್ ವ್ಯವಸಾಯದಲ್ಲಿ ಅಗ್ರಗಣ್ಯಸ್ಥಾನ ಸಂಪಾದಿಸಲೆಂದು ಹಾರೈಸುತ್ತೇನೆ.

[ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್ ಇದರ ರಜತೋತ್ಸವ ಸಮಾರಂಭದಲ್ಲಿ, ರಿಸರ್ವ್ ಬೇಂಕ್ ಆಫ್ ಇಂಡಿಯಾ ಇದರ ಮದರಾಸು ಶಾಖಾ ಡೈರೆಕ್ಟರ್ ಮಂಡಲಿಯ ಅಧ್ಯಕ್ಷರಾದ ಶ್ರೀ. ಸಿ. ಆರ್. ಶ್ರೀನಿವಾಸನ್‌ರವರು ಮಾಡಿದ ಭಾಷಣದ ಸಾರಾಂಶ]

SCHOOL BOOK COMPANY

Booksellers—Stationers—Wholesale Paper Merchants


Distributors: **The Mysore Paper Mills Limited, Bhadravati**
(Manufacturers of famous 'BISON BRAND' Papers)

Agents: **The Ganges Printing Ink Factory Ltd., Howrah.**
(Manufacturers of the reputed G \NGES Printing Inks)

Send your inquiries to— Post Box No. 93, MANGALORE.

ಪ್ರತಿಯೊಬ್ಬನಿಗೂ ಬೇಂಕಿಂಗ್ ಖಾತೆ

(ಲೇಖಕರು: ಶ್ರೀ. ಟಿ. ಎ. ಪೈ, B. com, (Bom.), A I. I. B., F. R. C. S. (Lond.) ಜನರಲ್ ಮೆನೇಜರ್: ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.)



ಮಾನವಕೋಟಿಯ ವಿಕಾಸದಲ್ಲಿ, ಪ್ರಗತಿಯ ಹಂತಿಯಲ್ಲ, "ಬೇಂಕಿಂಗ್" ವ್ಯವಹಾರವು, ಜನಸಾಮಾನ್ಯಕ್ಕೆ ರುಚಿಸದ ಗಂಭೀರ ವಿಷಯವೆಂದು ಕೆಲವರ ಅಂಬೋಣವಿದ್ದರೂ, ಆ ವ್ಯವಹಾರವನ್ನು ಒಮ್ಮೆ ಒಂದಿಷ್ಟಾದರೂ ತಿಳಿದ ಕ್ಷಣದಿಂದ ಅದು ಅತ್ಯಂತ ಕುತೂಹಲಪೂರ್ಣವಾದ, ರಸವತ್ತಾದ ವಿಷಯವೆನಿಸಲ್ಪಡುವುದು. ಸ್ವರ್ಣ, ರತ್ನಾದಿಗಳು ಕಂಡಾಕ್ಷಣವೇ ಮನುಷ್ಯನಿಗೆ ಅರ್ಥವಾಗುತ್ತವೆ; ಆದುದರಿಂದ, ಅತಿ ಪ್ರಾಚೀನ ಕಾಲದಿಂದ ಅವು ಮನುಷ್ಯನನ್ನು ಆಕರ್ಷಿಸಿವೆ. ಕಳೆದ ಒಂದು ಶತಮಾನ ಅಥವಾ ಹೆಚ್ಚು ಕಾಲದಿಂದ ಇಲ್ಲಿ 'ಕರೆನ್ಸಿ ನೋಟು'ಗಳೂ 'ಹಣ'ವೆನಿಸಲ್ಪಟ್ಟು, ಅದನ್ನು ತಿಳಿದವರನ್ನೆಲ್ಲ ಆಕರ್ಷಿಸುತ್ತವೆ. ಆದರೆ, ಹಣಕಾಸಿನ ಸಂಸ್ಥೆಯಾದ ಬೇಂಕು ಮಾತ್ರ ಇನ್ನೂ ಜನಕೋಟಿಗೆ ಆಗಬೇಕಾದಷ್ಟು ವಿಶದವಾಗಿ ಪರಿಚಿತವಾಗಿಲ್ಲ. ಅಂದರೆ, ನಮ್ಮ ದೇಶದಲ್ಲಿ ಬಹುಶಃ ಶೇಕಡಾ ೧೦ಕ್ಕಿಂತ ಹೆಚ್ಚು ಮಂದಿ ಇದನ್ನರಿತಿಲ್ಲ. ಇದಕ್ಕೆ ಕಾರಣವೇನು?

ಬೇಂಕುಗಳು ಗ್ರಾಮಾಂತರಗಳಿಗೆ ಹರಡುವುದಕ್ಕಿಂತ ಹೆಚ್ಚಾಗಿ ದೊಡ್ಡ ನಗರಗಳಲ್ಲೇ ತಮ್ಮ ವ್ಯವಹಾರವನ್ನು ನಡೆಸುತ್ತಿವೆ. ಸಂಸ್ಥೆಯನ್ನು ಲಾಭಕರವಾಗಿ ನಡೆಸುವ ಯತ್ನದಲ್ಲಿ ಹೀಗಾಗಿ ಹೋಗಿದೆ. "ಬೇಂಕಿಂಗ್" ಕುರಿತು ತಕ್ಕ ಮಾಹಿತಿ ಕೊಟ್ಟು, ಜನತೆಯಲ್ಲಿ ತಿಳಿವಳಿಕೆ ಹರಡುವ ಯತ್ನಗಳು ಆಗಬೇಕಾದಷ್ಟು ಆಗಿಲ್ಲ. ಬಹು ಹಿಂದೆ, ಮನುಷ್ಯರು, ಸರಕುಗಳಿಗೆ ಬದಲಾಗಿ ಸರಕುಗಳನ್ನು ಕೊಟ್ಟು ವ್ಯಾಪಾರ ನಡೆಸುತ್ತಿದ್ದರೆಂದೂ, ಕ್ರಮೇಣ, ಕಲ್ಲಿನ ನಾಣ್ಯಗಳು ಬಂದುವೆಂದೂ, ಆ ಮೇಲೆ ಲೋಹಗಳು ಬಳಕೆಗೆ ಬಂದುವೆಂದೂ, ಪ್ರಗತಿ ಹೊಂದಿದಂತೆ, ಸರಕುಗಳಿಗೆ ಸರಕುಗಳನ್ನು ಕೊಟ್ಟು ಕೊಳ್ಳುವ ಪದ್ಧತಿಯು ನಾಗರಿಕದೇಶಗಳಲ್ಲಿ ನಿಂತುಹೋಗಿ,ನಾಣ್ಯಗಳ ಚಲಾವಣೆಯಾರಂಭವಾಯಿತೆಂದೂ ನಾವು ಓದುತ್ತೇವೆ.

ಮುಂದೆ, ಹಣವಂತರು, ಬಡ್ಡಿಗೆ ಹಣಕೊಡುವ ಪದ್ಧತಿಯು ಬಂತು; ಈಗಲೂ ಈ ಪದ್ಧತಿಯು ಧಾರಾಳವಾಗಿ ನಡೆಯುತ್ತಿದೆ. ಆದರೆ, "ಬೇಂಕಿಂಗ್" ಎಂಬ ವ್ಯವಸ್ಥಿತ ಕ್ರಮದ ಹಣಕಾಸಿನ ವ್ಯವಹಾರವು ಕ್ರಿ. ಶ. ೧೬೦೯ರಲ್ಲಿ, ಅಮ್ಸ್ಟರ್ಡಮಿನಲ್ಲಿ ಆರಂಭವಾಯಿತೆನ್ನಬಹುದು. ಸ್ವೀಡನಿನಲ್ಲಿ ಅದು ಹದಿನೇಳನೇ ಶತಮಾನದಲ್ಲಿ ಇನ್ನೂ ಪ್ರಗತಿ ಹೊಂದಿತು. ಬೇಂಕುಗಳೇ 'ನೋಟು'ಗಳನ್ನು ಹೊರಡಿಸುವ ಪದ್ಧತಿಯು, ೧೬೫೬ರಲ್ಲಿ "ಬೇಂಕ್ ಒಫ್ ಸ್ವೀಡನಿ"ನಿಂದ ಆರಂಭವಾಯಿತೆಂದೂ, ಕೆಲಕಾಲದಲ್ಲೇ ಇಂಗ್ಲೆಂಡು ಮತ್ತು ಸ್ಕೊಟ್ಲೆಂಡೂ, ಯುರೋಪಿನ ಇತರ ದೇಶಗಳೂ ಅದನ್ನನುಸರಿಸಿದುವೆಂದೂ ನಾವು ತಿಳಿಯುತ್ತೇವೆ. ಇಂಗ್ಲೆಂಡಿನಲ್ಲಿ, IIನೇ ಚಾರ್ಲ್ಸನು ಅರಸನಾಗಿದ್ದಾಗ, ಲಂಡನಿನ ಸರಾಫರು ಅ ತನಕ ನಡೆಸುತಿದ್ದ ಹಣಕಾಸಿನ ವಹಿವಾಟಿನಲ್ಲಿ ತನ್ನ ಅಪಹಾರದ ಕೈಯನ್ನಿಕ್ಕಿ, ಅವರು ಚಳವಳವೆಬ್ಬಿಸಲು ಕಾರಣನಾಗಿ, ಅರಸನು ಕೂಡ ಸ್ಪರ್ಶಿಸಲಾಗದಂತೆ ಹಣಕಾಸುಗಳು ಭದ್ರವಾಗಿಡಲ್ಪಡುವ ಸಂಸ್ಥೆಯ (ಬೇಂಕಿನ) ಸುವ್ಯವಸ್ಥೆಗೆ ದಾರಿಯಾಯಿತೆಂದೂ ಇತಿಹಾಸವು ಹೇಳುತ್ತಿದೆ.

ನೋಟುಗಳನ್ನು ಹೊರಡಿಸಿದವರಲ್ಲಿ, ಜಗತ್ತಿನಲ್ಲೇ ಮೊದಲಿಗರು ಚೀನೀಯರು. ಕ್ರಿ. ಪೂ. ೨೮೦೦ರಲ್ಲಿ (ಅಂದರೆ, ೪೭೫೦ ವರ್ಷಗಳ ಪೂರ್ವದಲ್ಲಿ!) ಚೀನದಲ್ಲಿ ನೋಟುಗಳು ಚಲಾವಣೆಯಲ್ಲಿದ್ದುವಂತೆ. ಆ ಕಾಲದಲ್ಲಿ, ಯುರೋಪಿನ ಬಹುಭಾಗವು ಕೇವಲ ಕಾಡುಸ್ಥಿತಿಯಲ್ಲಿತ್ತು. ಇಂದು, ಬೇಂಕಿಂಗ್ ವ್ಯವಹಾರದಲ್ಲಿ ಅದ್ಭುತಕರ ಮಾರ್ಪಾಟಗಳಾಗಿವೆ. ಒಬ್ಬನು ಚೆನ್ನಾಗಿ ಆರ್ಥಿಕ ವಿಷಯವನ್ನು ಅಭ್ಯಾಸಿಸದಿದ್ದರೆ, ಇಂದಿನ "ಬೇಂಕಿಂಗ್" ವ್ಯವಹಾರದ ಪೂರ್ಣ ಸ್ವಾರಸ್ಯವನ್ನರಿಯಲಾರನು.

ಆದರೆ, ಬೇಂಕಿಂಗ್ ವ್ಯವಹಾರದಲ್ಲಿ ತಕ್ಕಷ್ಟು ಭಾಗಿಯಾಗಲು, ಸಾಮಾನ್ಯ ಮನುಷ್ಯನು, ವಿಶೇಷ ವಿದ್ಯಾವಂತನಾಗಲೇ ಬೇಕಾಗಿಲ್ಲ. ಇಂದಿನ ಬೇಂಕಿಂಗ್ ನಿಯಮಗಳು, ಭದ್ರತೆಯು, ಶಾಸನಗಳು, ಅವನ ಹಣದ ರಕ್ಷಣೆ ಮಾಡುತ್ತಿವೆ. ಕಾಲಕಾಲಕ್ಕೆ ಮಾಡಲ್ಪಟ್ಟ ಸೌಲಭ್ಯಗಳು ಸಾಮಾನ್ಯನಿಗೂ ಸಹಾಯಕವಾಗಿವೆ. ನಾಣ್ಯಗಳೆಂದರೇನು, ನೋಟುಗಳೆಂದರೇನು ಎಂದಿಷ್ಟು ತಿಳಿವವನು ಕೂಡ ಇಂದು ಬೇಂಕಿ

ನಲ್ಲಿ ತನ್ನ ಖಾತೆ ತೆರೆಯಬಲ್ಲನು. ಬೇಂಕುಗಳಲ್ಲಿ ಅವನಿಗೊಪ್ಪುವ ತರದ ಖಾತೆಗಳಿವೆ.

ಬೇಂಕಿಂಗ್ ವ್ಯವಹಾರದಿಂದ ಜನಸಾಮಾನ್ಯರು ಇನ್ನೂ ದೂರವಿರಲು ಒಂದು ಮುಖ್ಯ ಕಾರಣವೆಂದರೆ,—ನಿರಕ್ಷರತೆ; ಇನ್ನೊಂದು ಕಾರಣವೆಂದರೆ, 'ಗಂಭೀರ'ವೆನಿಸಲ್ಪಡುವ ಈ (ಬೇಂಕಿಂಗ್) ವಿಷಯವು ಸುಲಭವಾಗಿ ಜನರಿಗೆ ವಿವರಿಸಲ್ಪಡದೆ ಉಳಿದುದು,—ಎನ್ನಬೇಕಾಗಿದೆ. 'ಕರೆಂಟ್ ಎಕೌಂಟ್'—'ಸೇವಿಂಗ್ಸ್ ಎಕೌಂಟ್' ಮುಂತಾದ ಶಬ್ದಗಳು ಇತ್ತೀಚೆಗೆ ಅನೇಕ ಕಡೆಗಳಲ್ಲಿ ಪ್ರಚುರವಾಗಿವೆಯಾದರೂ, ಸಾರ್ವತ್ರಿಕವಾಗಿ ಅವುಗಳು ತಿಳಿದಿಲ್ಲ. ಪ್ರತಿಯೊಬ್ಬನೂ ಬೇಂಕಿನಲ್ಲಿ ತನ್ನ ಖಾತೆಯನ್ನು ತೆರೆಯಬಲ್ಲನಾದರೂ—ನಾವು ಸೇಕಡಾ ಹತ್ತು ಮಂದಿಯಷ್ಟಾದರೂ ಹಾಗೆ ಮಾಡುತ್ತಿರುವ ಸಂಖ್ಯೆಗಳನ್ನೋದುತ್ತಿಲ್ಲ. ಬೇಂಕಿನಲ್ಲಿ ಖಾತೆ ತೆರೆವುದೆಂದರೆ ಅದೇನೋ ಅಸಾಮಾನ್ಯ ವಿಷಯವೆಂದೇ ಹಲವರು ತಿಳಕೊಂಡಂತಿವೆ. ಶಾಲೆಗಳಲ್ಲಿ, ಬೇಂಕಿಂಗ್ ಕುರಿತಾದ ಪಾಠಗಳಿರಬೇಕಾದುದೂ, ಸುಲಭವಾಗಿ, ವಿದ್ಯಾರ್ಥಿದಸೆಯಲ್ಲೆ ಅದನ್ನು ತಿಳಿಸಬೇಕಾದುದೂ ಶಿಕ್ಷಕರ ಕರ್ತವ್ಯವಿದೆ. ಬೇಂಕಿನಲ್ಲಿ ತನ್ನ ಸಂಬಂಧವನ್ನಿಟ್ಟುಕೊಂಡವನು, ಕ್ರಮವಾಗಿ ಸಂಪಾದನೆಮಾಡಲು, ಹಣವನ್ನು ಕೂಡಿಸಲು ಯತ್ನಿಸುತ್ತಾನೆ. ಅವನ ಜೀವನದಲ್ಲಿ ಅಕ್ರಮಗಳು ಕಡಿಮೆಯಾಗುತ್ತವೆ.

ಕೇಂದ್ರ ಬೇಂಕುಗಳು—

—ಹುಂಡಿ ವಟಾಯಿಸುವ ದರವನ್ನು ಆಗಾಗ್ಗೆ ನಿರ್ಣಯಿಸುವುವು. ಸಾಮಾನ್ಯವಾಗಿ ಈ ದರದ ಮೇಲೆ ಹೆಚ್ಚಿಗೆಯಾಗಿ ಸೇಕಡಾ ಒಂದೆರಡರಷ್ಟು ದರವನ್ನು ಆ ಬೇಂಕುಗಳು, ಬಡ್ಡಿಯಾಗಿ ವಿಧಿಸುವುವು. ಇತರ ಬೇಂಕುಗಳು ಈ ಕ್ರಮವನ್ನು ಅನುಸರಿಸುವುವು. ಬೇಂಕ್ ದರವು, ದೇಶದ ಬಂಗಾರದ 'ರಿಸರ್ವಿ'ನಿಂದ ನಿರ್ಣಯಿಸಲ್ಪಡುತ್ತದೆ. ಬಂಗಾರದ 'ರಿಸರ್ವ್' ಕಡಿಮೆಯಾದಾಗ ಬೇಂಕ್ ದರವು ಹೆಚ್ಚುತ್ತದೆ; ಮತ್ತು ಆ ಹಣವು ಪ್ರಿಯವಾಗುತ್ತಲೇ ದೇಶದೊಳಗೆ ಬಂಗಾರವು ಆಕರ್ಷಿಸಲ್ಪಡಲು ಕಾರಣವಾಗುತ್ತದೆ,—ಇಂತಹ ವಿಷಯಗಳನ್ನು, ತಕ್ಕಷ್ಟು ಶಿಕ್ಷಣವಿರುವ ಒಬ್ಬನು ತಿಳಿದರೆ—ಮುಂದೆ ಅವನು ಬೇಂಕಿಂಗ್ ವ್ಯವಹಾರದ ಸ್ವಾರಸ್ಯವನ್ನು ಅರಿಯಲು ವಿಲಂಬವಿಲ್ಲ.

ಪ್ರತಿಯೊಬ್ಬನೂ, ತನ್ನ ಜೀವನಕ್ಕಾಗಿ ದುಡಿಯಬೇಕಾಗುವುದು. ಪ್ರತಿಯೊಬ್ಬನೂ, ಪ್ರಯತ್ನಪೂರ್ವಕವಾಗಿ, ಆಪದ್ಧನವನ್ನು ಕೂಡಿಡಬೇಕಾಗುವುದು. ಬೇಂಕಿನಲ್ಲಿ ಒಂದು ಖಾತೆ ತೆರೆಯುವುದರಿಂದ ಅವನ ಯತ್ನಕ್ಕೆ ಹೆಚ್ಚು ಕಳೆಯೇರುವದು. ಇಂದು, ಇಂಗ್ಲೆಂಡು, ಅಮೇರಿಕ ಮೊದಲಾದ ಕಡೆಗಳಲ್ಲಿ, ಚಿಕ್ಕ ಮಕ್ಕಳ ಹೆಸರಲ್ಲೂ ಬೇಂಕಿನಲ್ಲಿ ಖಾತೆ ತೆರೆಯುವ ಪರಿಪಾಠವು ಸಾರ್ವತ್ರಿಕ ಪಸರಿಸಿದೆ. ಮಕ್ಕಳಿಗೆ, ಪ್ರಾಯಪ್ರಬುದ್ಧರಾಗುವುದರೊಳಗೇ ಮಿತವ್ಯಯ, ತನ್ನ ಹಣ

SPARKLING - AMSTERDOM

DIAMONDS

From those whom you know
Since Decades

K. R. K. SHET DIAMOND MART

ESTD: 1919.

DIAMOND MART
Opp: Govt. COLLEGE
MANGALORE.

DIAMONDS

For all! Diamonds of Quality - From this House of Reliability!! And Jewellery - Presentation Articles, are Always ready for Sale. Personal visit and trial order will convince you.

Special attention is given to Mofussil orders

K. K. R. SHET, *Proprietor*

N. B. Rates are moderate and reasonable. Prompt Delivery.



ಭಾರತದ ಸರದಾರ
ವಲ್ಲಭಭಾಯಿ ಪಟೇಲರು

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸರದಾರನಾಗಿ, ಸ್ವಾತಂತ್ರ್ಯಾನಂತರ ಜನಾಂಗದ ಸಂಘಟನಾ ಧುರೀಣನಾಗಿ, ದಣಿಯದೆ ದುಡಿದ ಸರದಾರ—

ಆಪತ್ತಿನಲ್ಲಿಯೂ ಅಚಲನಾಗಿದ್ದು, ಗುಲ್ಲು ಇಲ್ಲದೆ ತನ್ನ ಕಾರ್ಯವನ್ನು ಮುಂದೊತ್ತಿ, ಭಾರತದ ಉಕ್ಕಿನ ಮನುಷ್ಯ ಎನಿಸಿದ ಸರದಾರ,—

ವಿಭಜನಾನಂತರ ವಿಸ್ಮಯಕರವೆನಿಸುವಂತೆ ದೇಶೀ ಸಂಸ್ಥಾನಗಳ ಒಕ್ಕೂಟವನ್ನು ಸಾಧಿಸಿ ಭಾರತದ ಬಲವನು ವರ್ಧಿಸಿದ ಸರದಾರ,--

ತಾ. ೧೫—೧೨—೧೯೫೦ನೇ ಶುಕ್ರವಾರ, ಮಹಾತ್ಮರು ದೇಹವನ್ನಿಟ್ಟ ವಾರ, ತನ್ನ ದೇಹವನ್ನೂ ಇಟ್ಟರು.

ಜೀವನ ಚರಿತ್ರ

ಸರದಾರ ವಲ್ಲಭಭಾಯಿ ಪಟೇಲರು, ಗುಜರಾಥದ ನಡಿಯಾದ ಬಳಿಯಿರುವ ಕರಮಸಾರ ಎಂಬಲ್ಲಿ, ೧೮೭೫ನೇ ಅಕ್ಟೋಬರ ತಾ. ೩೧ರಲ್ಲಿ ಜನಿಸಿದರು. ಅವರ ತಂದೆ ಝವೇರಿಭಾಯಿಯವರು, ೧೮೫೭ರ ಸಿಪಾಯಿ ದಂಗೆಯಲ್ಲಿ ಭಾಗವಹಿಸಿದ್ದ ಅಂದಿನ ಸ್ವಾತಂತ್ರ್ಯಯೋದ್ಧರಲ್ಲಿ ಒಬ್ಬರು; ನಲ್ವತ್ತೈದನೇ ವಯಸ್ಸಿನ ಅನಂತರ ದೇವಭಕ್ತರಾಗಿ, ತಮ್ಮ ಹೆಚ್ಚಿನ ಸಮಯವನ್ನು ಒಂದು ದೇವಸ್ಥಾನದಲ್ಲಿ ಕಳೆಯುತ್ತ, ದಿನಕ್ಕೊಮ್ಮೆ ಮಾತ್ರ ಭೋಜನಕ್ಕಾಗಿ ಮನೆಗೆ ಬರುತ್ತಿದ್ದರು. ವಲ್ಲಭಭಾಯಿಯವರು, ತಮ್ಮ ತಂದೆಯ ಬಳಿ, ಗದ್ದೆಗಳಲ್ಲಿ ಮೊದಲ ಪಾಠಗಳನ್ನು ಕಲಿತರು. ಅವರ ಪ್ರಾಥಮಿಕ ಶಿಕ್ಷಣವು, ಕರಮಸಾದ ಹಳ್ಳಿಯಿಂದ ಮೂರು ಮೈಲು ದೂರವಿರುವ ಪೆಟ್ಲಾಡವೆಂಬಲ್ಲಿ ನಡೆಯಿತು. ಒಂದು ವಾರಕ್ಕೆ ಬೇಕಾಗುವ ಜೀನಸುಗಳನ್ನು ಹೊತ್ತುಕೊಂಡು ಹೋಗಿ, ವಲ್ಲಭಭಾಯಿಯವರು, ಪೆಟ್ಲಾಡದಲ್ಲಿ ತಮ್ಮ ಊಟವನ್ನು ತಾವೇ ತಯಾರಿಸಿಕೊಳ್ಳುತಿದ್ದರು. ವಲ್ಲಭಭಾಯಿಯವರಿಗೆ ನಾಲ್ಕು ಮಂದಿ ಸಹೋದರರೂ ಒಬ್ಬಳು ಸಹೋದರಿಯೂ ಇದ್ದರು. ಹಿರಿಯವರು, ಮುಂದೆ ಭಾರತ ಎಸೆಂಬ್ಲಿಯ ಪ್ರಥಮ ಭಾರತೀಯ ಅಧ್ಯಕ್ಷರಾಗಿ ಕೀರ್ತಿವಂತರಾದ ವಿಠ್ಠಲಭಾಯಿ ಪಟೇಲರವರು.

ಚಿಕ್ಕಂದಿನಿಂದಲೂ ವಲ್ಲಭಭಾಯಿಯವರು ಸ್ವಾತಂತ್ರ್ಯಪ್ರಿಯರಾಗಿದ್ದರು; ಛಲ ಸಾಧಿಸುವುದರಲ್ಲಿ ಅಗ್ರಗಣ್ಯರಿದ್ದರು; ಹುಡುಗರ ಮುಂದಾಳಾಗಿರುತಿದ್ದರು.

ಪ್ರಾಥಮಿಕ ಶಿಕ್ಷಣದ ನಂತರ ನಡಿಯಾದದ ಹೈಸ್ಕೂಲಿನಲ್ಲಿ ಮೆಟ್ರಿಕ್ಯುಲೇಶನ್ ಮುಗಿಸಿ, ೧೯೧೦ರಲ್ಲಿ, ಪ್ಲೀಡರ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು; ಬೊರ್ಸಾದದಲ್ಲಿ, ತಮ್ಮ ಸಹೋದರ ವಿಠ್ಠಲಭಾಯಿಯವರೊಂದಿಗೆ ವಕಾಲತು ಆರಂಭಿಸಿದರು. ಕ್ರಿಮಿನಲ್ ವ್ಯವಹರಣೆಗಳಲ್ಲಿ ಬೇಗನೆ ಹೆಸರುವಾಸಿಯೂ ಆದರು. ವಿದ್ಯಾರ್ಥಿಯಾಗಿದ್ದಾಗ ಅಧ್ಯಾಪಕನೂ ಗೌರವವಿರಿಸುವಷ್ಟು ತೇಜಸ್ವಿಯಾಗಿದ್ದಂತೆ, ಕೋರ್ಟಿನಲ್ಲಿ ಜಡ್ಜರ ಮೇಲೂ ಇವರ ವರ್ಚಸ್ಸು ಇತ್ತು. ವಲ್ಲಭಭಾಯಿಯವರನ್ನು ತಪ್ಪಿಸುವುದಕ್ಕಾಗಿ ರೆಸಿಡೆನ್ಸಿ ಮೆಜಿಸ್ಟ್ರೇಟರು ತಮ್ಮ ಕೋರ್ಟನ್ನು ಬೊರ್ಸಾದದಿಂದ ಆನಂದ ಎಂಬಲ್ಲಿಗೆ ವರ್ಗಾಯಿಸಿದರು; ವಲ್ಲಭಭಾಯಿಯವರು ಅಲ್ಲಿಗೂ ಬರಲು, ಪುನಃ ಕೋರ್ಟನ್ನು ಬೊರ್ಸಾದಕ್ಕೆ ತರಲಾಯಿತು.

ದೃಢತೆ

ವಲ್ಲಭಭಾಯಿಯವರು "ಉಕ್ಕಿನ ಮನುಷ್ಯ"ನೆಂದು ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗುರುತಿಸಲ್ಪಟ್ಟರೂ, ಅವರ ಧೀರ ಚಿತ್ತದ ವಿಷಯವಾಗಿ, ಎಷ್ಟೋ ವರುಷಗಳ ಮೊದಲು ನಡೆದುದೊಂದು ಘಟನೆಯು ಉತ್ತಮ ಉದಾಹರಣೆಯಾಗಿದೆ: "ಒಮ್ಮೆ ಕೋರ್ಟಿನಲ್ಲಿ ಒಂದು ವ್ಯವಹರಣೆಯಲ್ಲಿ ತೊಡಗಿದಾಗ, ಅವರ ಪತ್ನಿಯು ತೀರಿಕೊಂಡಳೆಂಬ ತಂತಿಯು ಅವರ ಕೈಗೆ ಕೊಡಲ್ಪಟ್ಟಿತಂತೆ. ವಲ್ಲಭಭಾಯಿಯವರು, ಲಕ್ಕೋಟೆಯೊಡೆದು ತಂತಿ ಓದಿ, ಮಡಚಿ, ಕಿಸೆಯೊಳಗಿಟ್ಟು, ತಿಲಮಾತ್ರವಾದರೂ ಚಿತ್ತಕ್ಷೋಭೆ ತೋರದೆ, ತನ್ನ ವಾದವನ್ನು ಮುಂದುವರಿಸಿದರು"--ಹೀಗೆ, ಮಹಾದೇವ ದೇಸಾಯಿಯವರು ವಲ್ಲಭಭಾಯಿಯವರ ಕುರಿತಾಗಿ ಒಮ್ಮೆ ಹೇಳಿದ್ದರು.

ಕಾಸಿನ ಸಂಗ್ರಹದ ಆನಂದ, ತಾನು ವ್ಯವಸ್ಥಿತ ರೀತಿಯಲ್ಲಿ ಕ್ರಮವಾಗಿ ಹಣವನ್ನು ಕೂಡಿಸುತ್ತಿರುವೆನು ಎಂಬ ತೃಪ್ತಿ,—ಇವು ಉಂಟಾಗಲು, ಈ ಕ್ರಮವು ಕಾರಣವಾಗುತ್ತಿದೆ. ಇಂದಿನ ದಿನಗಳಲ್ಲಿ, ಪಟ್ಟಣದ ದೊಡ್ಡ ವ್ಯಾಪಾರಿಗೆ ಬೇಂಕ್ ಖಾತೆಯು ಎಷ್ಟು ಆವಶ್ಯವಿದೆಯೋ ಅಷ್ಟೆ ಹಳ್ಳಿಯ ರೈತನಿಗೂ ಇದೆ.

ಪ್ರತಿಯೊಬ್ಬನೂ ಬೇಂಕಿನಲ್ಲಿ ತನ್ನ ಹಣವನ್ನು ಠೇವಣೆಯಿರಿಸುವಂತಾದರೆ, ದೇಶದ ಸಂಪತ್ತು ಸರ್ವತೋಮುಖವಾಗಿ ಅಭಿವೃದ್ಧಿಯಾಗುವುದು.

ಬೆರಿಸ್ಟರನಾಗಿ

ಕೆಲ ವರ್ಷಗಳ ನಂತರ ವಲ್ಲಭಭಾಯಿಯವರು ಇಂಗ್ಲೆಂಡಿಗೆ ಹೋಗಿ ಬೆರಿಸ್ಟರ ಪರೀಕ್ಷೆ ಕೊಟ್ಟು, ಮೊದಲನೇ ತರಗತಿಯಲ್ಲಿ ತೇರ್ಗಡೆಹೊಂದಿದರು; ಬಹುಮಾನವನ್ನೂ ಪಡೆದರು. ಭಾರತಕ್ಕೆ ಮರಳಿ ಬಂದು, ಅಹಮದಾಬಾದಿನಲ್ಲಿ ವಕಾಲತು ಆರಂಭಿಸಿದರು.

ಸಾರ್ವಜನಿಕ ಸೇವೆ

ವಲ್ಲಭಭಾಯಿಯವರು ಅಹಮದಾಬಾದ ಮುನಿಸಿಪಾಲಿಟಿಗೆ ಆರಿಸಿ ಬಂದು, ಅದರ ಅಧ್ಯಕ್ಷನಾಗಿ (೧೯೨೪ರಿಂದ ೧೯೨೮ರ ವರೆಗೆ) ಅಸಾಮಾನ್ಯ ಧುರೀಣತ್ವದ ಸಾಮರ್ಥ್ಯ ತೋರಿದರು. ಆ ನಗರದ ಸ್ವಚ್ಛತೆಯಲ್ಲಿ ವಿಶೇಷ ಶ್ರದ್ಧೆ ತೋರಿದರು.

ವಲ್ಲಭಭಾಯಿಯವರು ಮೊದಲು ಗಾಂಧಿಜಿಯವರ ಸತ್ಯಾಗ್ರಹ ತತ್ವವನ್ನು ಅಲಕ್ಷ್ಯಭಾವದಿಂದ ಕಂಡಿದ್ದರು. ೧೯೧೭ರಲ್ಲಿ ವಲ್ಲಭಭಾಯಿಯವರು ಗಾಂಧಿಜಿಯವರ ಸಂಪರ್ಕ ಮಾಡಿಕೊಂಡಿದ್ದರೆನ್ನಬಹುದು. ೧೯೧೮ರಲ್ಲಿ ನಡೆದ ಜಲಿಯನ್‌ವಾಲಾಬಾಗ ಹತ್ಯಾಕಾಂಡದಿಂದ ವಲ್ಲಭಭಾಯಿಯವರು ಸತ್ಯಾಗ್ರಹದ ಆವಶ್ಯಕತೆಯ ಕುರಿತು ಚೆನ್ನಾಗಿ ಆಲೋಚಿಸಹತ್ತಿದರು.

ಬಾರ್ಡೋಲಿ ಸತ್ಯಾಗ್ರಹ

೧೯೧೯ರಲ್ಲಿ ಖೈರಾ ಸತ್ಯಾಗ್ರಹವನ್ನು ಗಾಂಧಿಜಿಯವರು ಆರಂಭಿಸಿದಾಗ, ವಲ್ಲಭಭಾಯಿಯವರು ಸಹಾಯಕರಾಗಿ ಬಂದರು. ೧೯೨೦ರಲ್ಲಿ, ತಮ್ಮ ವಕೀಲವೃತ್ತಿಯನ್ನು ಬಿಟ್ಟು, ದೇಶಸೇವೆಗೆ ಹೊರಟರು. ನಾಗಪುರದಲ್ಲಿ ಧ್ವಜ ಸತ್ಯಾಗ್ರಹವನ್ನೂ, ೧೯೨೨ರ ಬೊರ್ಸಾದದಲ್ಲಿ ಕರನಿರಾಕರಣ ಸತ್ಯಾಗ್ರಹವನ್ನೂ ಯಶಸ್ವಿಯಾಗಿ ನಡೆಸಿದರು.

"ಸರದಾರ"

೧೯೨೮ರಲ್ಲಿ ವಲ್ಲಭಭಾಯಿಯವರು ಬಾರ್ಡೋಲಿ ಸತ್ಯಾಗ್ರಹದ ಸೇನಾನಿಯಾದರು. ಬಾರ್ಡೋಲಿ ಸಂಗ್ರಾಮವು ದೇಶ-ವಿದೇಶಗಳ ಲಕ್ಷ್ಯವನ್ನು ಸೆಳೆಯಿತು. ಜನಾಂಗದೊಳಗೆ ಹೊಸ ಚೇತನವೇ ಹರಿಸಲ್ಪಟ್ಟಂತಾಯಿತು. ವಲ್ಲಭಭಾಯಿಯವರ ವಿಚಕ್ಷಣತೆಯನ್ನು ಕಂಡು ಗಾಂಧಿಜಿಯವರು ಅವರನ್ನು "ಸರದಾರ"ರೆಂದು ಸಂಬೋಧಿಸಿದರು. ವಲ್ಲಭಭಾಯಿಯವರು "ಸರದಾರ ವಲ್ಲಭಭಾಯಿ"ಯವರೆನಿಸಿದರು.

ಸರದಾರರು, ೧೯೩೦ರಲ್ಲಿ ಪ್ರಥಮತಃ ದಸ್ತಗಿರಿ ಮಾಡಲ್ಪಟ್ಟು, ಮೂರು ತಿಂಗಳ ಕಾರಾಗ್ರಹವಾಸವನ್ನನುಭವಿಸಿದರು. ಅದೇ ವರುಷ, ಹನ್ನೊಂದು ತಿಂಗಳೊಳಗೆ ಮೂರು ಬಾರಿ ಕಾರಾಗ್ರಹವಾಸವನ್ನನುಭವಿಸಬೇಕಾಯಿತು.

ಕೊಂಗ್ರೆಸ್ ಅಧ್ಯಕ್ಷರು

೧೯೩೧ರಲ್ಲಿ, ಕರಾಚಿಯಲ್ಲಿ ನಡೆದ ಕೊಂಗ್ರೆಸ್ಸಿಗೆ ವಲ್ಲಭಭಾಯಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಆ ಅಧಿವೇಶನದಲ್ಲೆ ಕೊಂಗ್ರೆಸ್ಸು, ಜನತೆಯ ಮೂಲಭೂತ ಹಕ್ಕುಗಳ

IMPERIAL FURNITURE CO.,

Gajanan Building, Opp: Railway Station

Khar, Bombay, 21.

★

Suppliers of Modern furniture in latest designs and styles.

Patronised by Bombay Government, General Motors, (India) Ltd., &c. &c.

SHOW ROOMS AT KHAR.

Prop: **V. V. SHENOY.**

ಕುರಿತು ಠರಾವು ಮಾಡಿದುದು. ಸರದಾರರು ಅಲ್ಲೆ ಮುಗಿಸುವವರಲ್ಲ; ಸ್ವಾತಂತ್ರ್ಯದ ಪ್ರಶ್ನೆಯನ್ನು ಆಗಲೇ ಎತ್ತಿದರು. ಪುನಃ ಸತ್ಯಾಗ್ರಹವು ಆರಂಭಿಸಲ್ಪಟ್ಟಿತು; ಸರದಾರರು ಗಾಂಧಿಜಿಯವರೊಡನೆ ಯೆರವಾಡಾ ಕಾರಾಗ್ರಹವನ್ನು ಸೇರಿದರು. ೧೯೩೪ರಲ್ಲಿ, ಆರೋಗ್ಯದ ದೃಷ್ಟಿಯಿಂದ ಸರದಾರರ ಬಿಡುಗಡೆಯಾಯಿತು.

ಪಾರ್ಲಿಮೆಂಟರಿ ಬೋರ್ಡಿನ ಚೆಯರ್ಮೆನರಾಗಿ

೧೯೩೫ರಲ್ಲಿ ಬ್ರಿಟಿಷರಿತ್ತ 'ಸುಧಾರಣೆ'ಗಳನ್ನು ಭೇದಿಸಲು ಕೊಂಗ್ರೆಸ್ಸು ಕೌನ್ಸಿಲುಗಳನ್ನು ಸೇರಿದಾಗ, ಪಾರ್ಲಿಮೆಂಟರಿ ಬೋರ್ಡಿನ ಚೆಯರ್ಮೆನರಾಗಿ ವಲ್ಲಭಭಾಯಿಯವರು, ಅಖಿಲ ಭಾರತ ಧುರೀಣತ್ವದ ಯೋಗ್ಯತೆಯನ್ನು ಸುಸ್ಪಷ್ಟಗೊಳಿಸಿದರು. ಶಿಸ್ತಿನ ಪಾಲನೆಯಲ್ಲಿ ಕಾಠಿನ್ಯ ತೋರಿ, ವಲ್ಲಭಭಾಯಿಯವರು ನರಿಮೇನ್, ಖಾರೆಯವರು ಮಾತ್ರವಲ್ಲ, ಸುಭಾಷಚಂದ್ರ ಬೋಸರೂ ಕೊಂಗ್ರೆಸ್ಸಿನಿಂದ ಹೊರಡುವಷ್ಟಕ್ಕೆ ತಮ್ಮ ಶಿಸ್ತಿನ ಉಗ್ರತೆ ಪ್ರದರ್ಶಿಸಿದ್ದರು.

೧೯೩೭ರಿಂದ '೩೯ರ ವರೆಗೆ ಕೊಂಗ್ರೆಸ್ಸು ಅಧಿಕಾರ ಸ್ವೀಕಾರ ಮಾಡಿದಾಗ ಸರದಾರರು ಅಸಾಮಾನ್ಯ ಯೋಗ್ಯತೆಯನ್ನು ತೋರಿದ್ದರು. ನೆಹರು—ಸುಭಾಷರಂತೆ ಸಾರ್ವತ್ರಿಕ ಜನತಾ ಪ್ರೇಮವನ್ನು ಗಳಿಸಿದವರು ಅವರಲ್ಲ; ಅವರು, ಜನತಾ ಪ್ರೇಮವನ್ನು ಗಳಿಸುವಂತಹ ವ್ಯಕ್ತಿತ್ವದವರೂ ಅಲ್ಲ. ಅವರು ಧೀರ ಚಿತ್ತದ, ಕಠಿನ ಮನಸ್ಸಿನ, ಉಗ್ರ ಶಿಸ್ತು ಪ್ರೀತಿಸುವ, ಸರದಾರರು; ತಾನು ನಿರ್ದೇಶಿಸಿದ ಕಾರ್ಯಗಳು ಚ್ಯುತಿಯಿಲ್ಲದೆ ನಡೆದರಾಯಿತೆಂದು ತೃಪ್ತಿಪಡೆವ ಧುರೀಣರು.

೧೯೪೦ರಲ್ಲಿ (ವೈಯುಕ್ತಿಕ ಸತ್ಯಾಗ್ರಹ) ಸರದಾರರು ಪುನಃ ದಸ್ತಗಿರಿ ಮಾಡಲ್ಪಟ್ಟರು; ೧೯೪೧ರಲ್ಲಿ ಬಿಡುಗಡೆ ಹೊಂದಿದರು.

೧೯೪೨ರಲ್ಲಿ "ಭಾರತದಿಂದ ತೊಲಗಿರಿ" ಎಂಬ ಕೂಗು ಎದ್ದಿತು; ಈ 'ಕ್ವಿಟ್ ಇಂಡಿಯಾ' ಚಳವಳದಲ್ಲಿ ಮುಖಂಡರಲ್ಲದೆ ಇತರ ಸಾವಿರಾರು ಜನರು ಕಾರಾಗ್ರಹ ಸೇರಿದರು. ಮಹಾತ್ಮಾಜಿ ಮೊದಲಾದವರಂತೆ ಸರದಾರರೂ ದಸ್ತಗಿರಿ ಮಾಡಲ್ಪಟ್ಟು, ಅಹಮ್ಮದಾಬಾದ ಜೈಲಿನಲ್ಲಿರಿಸಲ್ಪಟ್ಟರು. ೧೯೪೫ನೇ ಜೂನ್ ತಾ. ೧೫ರಲ್ಲಿ ಸರದಾರರು ಬಂಧವಿಮೋಚನೆ ಹೊಂದಿದರು.

ಲಂಡನಿನಲ್ಲಿ ಸರಕಾರವು ಬದಲಾದಾಗ ಭಾರತದ ವಿಷಯಕವಾದ ಅವರ ಧೋರಣೆಯೂ ಬದಲಾಯಿತು. ಮಧ್ಯವರ್ತಿ ಸರಕಾರವು ಸ್ಥಾಪಿಸಲ್ಪಟ್ಟಿತು. ಲೀಗ್ ಮತ್ತು ಕೊಂಗ್ರೆಸ್ಸು ಸೇರಿ ಸರಕಾರ ನಡೆಸಿದುವು. ಸರದಾರರು ಈ ಸರಕಾರದಲ್ಲಿ ಗೃಹ ಮಂತ್ರಿಗಳಾದರು. ಆದರೆ, ಲೀಗಿನ ಅಸಹಕಾರ ಬುದ್ಧಿಯಿಂದ, ದೇಶದ ವಿಭಜನೆಯಾಗುವಂತಾಯಿತು. ಹೊಸದಾಗಿ ಸ್ಥಾಪಿತವಾದ ಭಾರತ ಸರಕಾರದಲ್ಲಿ, ಸರದಾರರು ಉಪ ಪ್ರಧಾನರಾದರು.

ಸ್ವಾತಂತ್ರ್ಯ ದೊರೆತ ಕೂಡಲೇ ಸರದಾರರು, ದೇಶೀ ಸಂಸ್ಥಾನಗಳನ್ನು ಒಂದುಗೂಡಿಸುವ ಅಸಾಮಾನ್ಯ ಕಾರ್ಯಭಾರವನ್ನು ವಹಿಸಿದ್ದರು. ಜಗತ್ತೇ ಬೆರಗುಗೊಳ್ಳುವಂತೆ, ಈ "ಉಕ್ಕಿನ ಮನುಷ್ಯ", ಸಂಸ್ಥಾನಾಧೀಶರಲ್ಲಿ ಒಗ್ಗಟ್ಟಿನ ಕುರಿತು ಸದ್ವಿಚಾರ ತುಂಬಿ, ಸಂಸ್ಥಾನಗಳ ಮಿಲನವನ್ನು ಸಾಧಿಸಿ, ಗೆದ್ದರು.

೧. ೧೯·೧೫೮ ಮಿಲಿಯ ಜನಸಂಖ್ಯೆಯ ೧೦೮,೭೩೯ ಚದರಮೈಲು ವಿಸ್ತೀರ್ಣದ ೨೧೬ ಸಂಸ್ಥಾನಗಳು, ಪ್ರಾಂತಗಳೊಡನೆ ಮಿಲನವಾದುವು.

೨. ೬·೯೨೫ ಮಿಲಿಯ ಜನಸಂಖ್ಯೆಯಿರುವ, ೬೩,೭೦೪ ಚದರಮೈಲು ವಿಸ್ತೀರ್ಣದ ೬೧ ಸಂಸ್ಥಾನಗಳು ಕೇಂದ್ರದ ಆಡಳಿತನೊಳಗೆ ಬಂದುವು.

೩. ಮತ್ತೆ ೨೭೫ ಸಂಸ್ಥಾನಗಳು (೨೧೫,೪೫೦ ಚದರ ಮೈಲು ವಿಸ್ತೀರ್ಣ, ೩೪·೭ ಮಿಲಿಯ ಜನಸಂಖ್ಯೆ), ಸೌರಾಷ್ಟ್ರ, ರಾಜಸ್ಥಾನ, ಮಧ್ಯಭಾರತ, ಪಾಟಿಯಾಲಾ, ಪೂರ್ವ ಪಂಜಾಬ ಹಾಗೂ ತಿರುವಾಂಕೂರು—ಕೊಚ್ಚಿ ಎಂಬೀ ಸಂಸ್ಥಾನ ಒಕ್ಕೂಟಗಳಾಗಿ ಮಾರ್ಪಟ್ಟುವು. (ಮೇಲಿನ ಎಲ್ಲ ಸಂಸ್ಥಾನಗಳು ಕೂಡಿ ೫೫೨; ಅವುಗಳ ಜುಮ್ಲಾ ಜನಸಂಖ್ಯೆ ೬೦·೭೮೩ ಮಿಲಿಯ; ಅವುಗಳ ವಿಸ್ತೀರ್ಣ ೩೮೭,೮೯೩ ಚದರ ಮೈಲುಗಳು.)

ಮೈಸೂರು ಮತ್ತು ಕಾಶ್ಮೀರ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರವು ಸ್ಥಾಪಿಸಲ್ಪಟ್ಟಿದೆ; ಹೈದರಾಬಾದದಲ್ಲಿ ಜವಾಬ್ದಾರಿ ಸರಕಾರವು ಸದ್ಯದಲ್ಲೆ ಸ್ಥಾಪಿಸಲ್ಪಡಲಿದೆ.

ಕರ್ತೃತ್ವಶಕ್ತಿಯಲ್ಲಿ ಸರದಾರರನ್ನು ಮಿಗಿಸಿದವರಾರೂ ಇಲ್ಲ. ಅವರಿವರನ್ನು ರಂಜಿಸುವುದು, ಮನವೊಲಿಸುವುದು, ಸ್ತುತಿಯಿಂದ ಪ್ರಸನ್ನನಾಗುವುದು—ಅವರಿಗೆ ಎಂದೂ ಸಲ್ಲದ ಗುಣಗಳು. ಮಾತಾಡುವಂಥದ್ದನ್ನು ಸ್ಪಷ್ಟವಾಗಿ, ಕಠಿನವಾಗಿ, ಒಂದೇಟಿಗೆ ಎರಡು ತುಂಡೆಂಬಂತೆ—ಆಡಿಬಿಡುತಿದ್ದರು. ಜಿನ್ನರ ಕೆಲವು ಪ್ರಕಟಣೆಗಳಿಗೆ ಸರದಾರರು ಕೊಟ್ಟ ಉತ್ತರಗಳು, ಸಾಹಿತ್ಯದೊಡನೆ ಸೇರಿಹೋಗುವಷ್ಟು ಚಲೋದಿವೆ.

ಗಾಂಧಿಜಿಯವರ ಸಮೀಪವೇ ಇದ್ದು, ಅವರ ವಿಶ್ವಾಸಕ್ಕೆ ಪಾತ್ರರಾದೀ ಸರದಾರರು, ಗಾಂಧಿಜಿಯವರೊಡನೆ, ಅನೇಕ ಬಾರಿ ತೀಕ್ಷ್ಣವಾಗಿ ಚರ್ಚಿಸಿ, ಹೋರಾಡಿದ್ದರು.

ಗಾಂಧಿಜಿಯವರು ಬಿಟ್ಟ ಅಪೂರ್ಣ ಕಾರ್ಯವನ್ನು ಸರದಾರ ವಲ್ಲಭಭಾಯಿಯವರು ಸಮರ್ಥವಾಗಿ ಮುಂದೊತ್ತಿ ತಂದಿದ್ದರು. ಅದನ್ನಿನ್ನು ಪೂರ್ಣಗೊಳಿಸಲು ನೆಹರುಗಳವರ ಪಾಲಿಗೆ ಬಿಟ್ಟಂತಾಯಿತು.

ಸರದಾರರ ನಿಧನದಿಂದ ಭಾರತವು ತುಂಬಲಾರದ ನಷ್ಟವನ್ನು ಹೊಂದಿದೆ.

ಸಂಪೂರ್ಣ

Printed at the Prabhat Printers, Limited, Mangalore,
and Edited & Published at Prabhat Office, Car Street, Mangalore by K. V. Shenoy.



Washing Soap

Hydrogenated Groundnut Oil
(VANASPATI)

Double Refined Edible Oil

Manufactured by:


THE EAST ASIATIC CO. (INDIA) LTD., MADRAS

DR. V. R. BHAT,
M.B., B.S., T.D.D.
BANGALORE.

THE HOUSE OF

FAMOUS READY-MADE GARMENTS

OF EVERY DESCRIPTION IN STYLE & SIZE.



TO WEAR SAMSONS IS A PRIDE

BECAUSE:

- They aid and add beauty & Comfort.
- They are more durable.
- They are manufactured carefully under foreign-trained experts.

The fact that we have served the needs of lakhs of people in Ready-made Garments to their entire satisfaction over a quarter of a century and more is a valid and proud proof.

The Bangalore Dress Mfg. Co.,

Props:- K. H. SHAMA RAO & SONS

Post Box No 66 — 12-Lalbagh Road, — BANGALORE-2.

ಸುವಾಸಿನಿ

ಸ್ತ್ರೀಯರಿಗಾಗಿ ಸ್ತ್ರೀಯರಿಂದ ಸಂಪಾದಿಸಲ್ಪಡುವ
ಕರ್ನಾಟಕದ ಪ್ರಥಮ

ಮಹಿಳಾ ಸಾಪ್ತಾಹಿಕ.

★

ಪ್ರತಿ ಸಂಚಿಕೆಯಲ್ಲಿ ಸಾಮಾಜಿಕ–ಧಾರ್ಮಿಕ–ಲೇಖನಗಳು; ಹೊಸ ಹೊಸ ಎಂಬ್ರಾಯ್ಡರಿ ಡಿಸಾಯ್ನ್‌ಗಳು; ಬೇರೆ ಬೇರೆ ದೇಶಗಳಲ್ಲಿನ ನಾರೀ ಜೀವನದ ಕುರಿತು ವಿಶೇಷ ಲೇಖನಗಳು; ಪ್ರವೇಶ ಧನವಿಲ್ಲದೆ ಬಹುಮಾನಗಳಿರುವ ಚಕ್ರಬಂಧ ಒಗಟುಗಳು, ಇತ್ಯಾದಿ.

ಇನ್ನೂ ನೂರಾರು ವಿಷಯಗಳು

★

ಬಿಡಿ ಸಂಚಿಕೆ: ಎರಡಾಣೆ.

ವಾರ್ಷಿಕ ಚಂದಾ: ಅಂಚೆವೆಚ್ಚ ಸೇರಿ ರೂ. 6—12—0.

Suvasini Publications, Ltd.,

B. E. M. High School Road,

MANGALORE.

ಪ್ರಭಾತ

ಸ್ಥಾಪಿತ: 1935.

ಕಳೆದ ಹದಿನಾರು ವರ್ಷಗಳಿಂದ ಮಂಗಳೂರಿಂದ
ಹೊರಡುವ

ಕನ್ನಡ ವಾರ ಪತ್ರಿಕೆ.

●

ಸಂಪಾದಕರು: **ಕುಡ್ವಿ ವಾಸುದೇವ ಶೆಣೈ.**

ಬಿಡಿ ಪ್ರತಿ: ಎರಡಾಣೆ.

ವಾರ್ಷಿಕ ಚಂದಾ: ಅಂಚೆವೆಚ್ಚ ಸೇರಿ ರೂ. 6–0–0.

**ಏಜಂಟರಿಲ್ಲದ ಕಡೆಗಳಿಂದ ಏಜನ್ಸಿ ಬಗ್ಗೆ
ಅರ್ಜಿಗಳು ಅಂಗೀಕರಿಸಲ್ಪಡುವುವು.**

●

ಪ್ರಭಾತ ಆಫೀಸು,

ರಥಬೀದಿ, ಮಂಗಳೂರು.

ಕುಡ್ವಿ ವಾಸುದೇವ ಶೆಣೈಯವರ

ವಿನೋದ ಲೇಖನಗಳ ೩ ಪ್ರಕಟಣೆಗಳು

- **ಕಸದ ಡಬ್ಬಿಗಳು**
  (ಇಪ್ಪತ್ತನಾಲ್ಕು ವಿನೋದ ಚಿತ್ರಗಳು, ೧೧೨ ಪುಟಗಳು)
- **ಮೀರೆ ಮತ್ತು ನಾನು**
  (ಹದಿನೈದು ವಿನೋದ ಕಥೆಗಳು, ೧೧೦ ಪುಟಗಳು)
- **ಜಪಾನ್ ಬೆಳಕು**
  (ಹದಿನೇಳು ಸಣ್ಣ ಕತೆಗಳು, ೧೨೨ ಪುಟಗಳು)

ಎಲ್ಲ ಪುಸ್ತಕ ವ್ಯಾಪಾರಿಗಳಲ್ಲಿ ದೊರೆವುವು.

— ಅಥವಾ —

ಪ್ರಭಾತ ಆಫೀಸು, ರಥಬೀದಿ, ಮಂಗಳೂರು. [ದ. ಕ.]

REGD. NO. M. 3347.

1926 TAJ MAHAL 1950

SILVER JUBILEE

TWENTY-FIVE YEARS

of

DISTINGUISHED SERVICE

TAJ

TAJMAHAL HINDU RESTAURANT,	Maidan Rd.,	Mangalore.
BRANCH TAJMAHAL	,,	,,
CENTRAL COFFEE HOUSE	Maidan Cross Rd.	,,
NEO TAJ MAHAL	Kent Road,	,,
TAJ MAHAL	Car Street,	,,
KOMAL VILAS	,,	,,
NEW TAJ MAHAL CAFE, LTD.,	,,	,,

New Taj Mahal Cafe, Ltd.,

CAR STREET, MANGALORE.

★

KUDPI SRINIVAS SHENOY.

MANAGING DIRECTOR.